C.No-4231

ಶ್ರೀ ಶಂಭುಲಿಂಗಾಯ ನಮಃ

ಶ್ರೀಮನ್ನಿಜಗುಣಶಿವಯೋಗಿ ವಿರಚಿತ

ಪರಮಾರ್ಥ ಗೀತೆ

R68
33J2

ಶ್ರೀ ಶಿವಪುತ್ರ ಸ್ವಾಮಿಗಳಿಂದ
ಟೀಕಾ - ತಾತ್ಪರ್ಯದೊಡನೆ ಬರೆಯಲ್ಪಟ್ಟಿದೆ.

ಇಸವಿ ೧೯೫೨ ಬೆಲೆ ೩-೮-೦

CC-0. Jangamwadi Math Collection. Digitized by eGangotri

R68 4231
33J2
Shri Shivaputra Swami
Parmartha gitā

CC-0. Jangamwadi Math Collection. Digitized by eGangotri

4231

A 88

R68 ಶಾಂತ ಕುಮಾರ ಹಿರೇಮಠ
33J2
4231

SHRI JAGADGURU VISHWARADHYA JNANAMANDIR
(LIBRARY)
JANGAMAWADIMATH, VARANASI

Please return this volume on or before the date last stamped
Overdue volume will be charged 1/- per day.

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

ಶ್ರೀ ಶಂಭುಲಿಂಗಾಯ ನಮಃ

ಶ್ರೀಮನ್ನಿಜಗುಣಶಿವಯೋಗಿ ವಿರಚಿತ

ಪರಮಾರ್ಥ ಗೀತೆ

ಹುಬ್ಬಳ್ಳಿ ಶ್ರೀ ಸಿದ್ಧಾರೂಢ ಸ್ವಾಮಿಗಳ
ಶಿಷ್ಯರಾದ

ಶ್ರೀ ಶಿವಪುತ್ರ ಸ್ವಾಮಿಗಳಿಂದ

ಟೀಕಾ - ತಾತ್ಪರ್ಯದೊಡನೆ ಬರೆಯಲ್ಪಟ್ಟಿದೆ.

ಈ ಗ್ರಂಥದ ಎಲ್ಲ ಹಕ್ಕು ಕಾಯ್ದಿಡಲಾಗಿದೆ.

ಇಸವಿ ೧೯೫೭

ಬೆಲೆ ೩-೮-೦

CC-0. Jangamwadi Math Collection. Digitized by eGangotri

SRI JAGADGURU ... ARADHYA
JNANA SIMHASAN JNANAMANDIR
LIBRARY
Jangamawadi Math, Varanasi
Acc. No. ......4231......
R68
33J2

ಮಂಗಳಾರತಿ

ಜಯ ಮಂಗಲಂ ಪ್ರಬೋಧ ಸಿದ್ಧರೂಢ ಸ್ವಾಮಿಗೆ ।
ಭಯದಿಂದ ಬಂದ ಭಕ್ತರಂ ಸದೈವ ಕಾಯ್ವಗೆ ॥ ಪಲ್ಲ ॥
ಮೂರುದೇಹ ಮೂರುಜೀವ ಜಾಗ್ರದಾದಿ ಸಾಕ್ಷಿಗೆ ।
ಮೂರು ವೃತ್ತಿ ಮೀರಿ ತುರ್ಯರೂಪನಾಗಿ ತೋರ್ಪಗೆ ॥ ೧ ॥
ಸತ್ತು ಚಿತ್ತು ಸೌಖ್ಯ ನಿತ್ಯ ಪೂರ್ಣರೂಪನಾದಗೆ ।
ಮತ್ತೆ ಸರ್ವನಾಮ ರೂಪದಲ್ಲಿ ತುಂಬಿ ಯಿರ್ಪಗೆ ॥ ೨ ॥
ನಾನು ನೀನು ಭೇದವೇನು ತೋರದೊಂದೆಯಾದಗೆ ।
ತಾನು ತಾನೆ ಭಾನುಕೋಟಿ ತೇಜಿಯಾದ ಮೂರ್ತಿಗೆ ॥ ೩ ॥

ಮುದ್ರಕರು :
ಎಸ್. ಎಸ್. ಕಾರಂತ
ಆದರ್ಶ ಮುದ್ರಣ, ಮ. ನಂ. ೩೮೧೧೪, ಕಿಲ್ಲೆ, ಹುಬ್ಬಳ್ಳಿ

ಪ್ರಕಾಶಕರು :
ಶ್ರೀ ಗುರುಪಾದಯ್ಯನವರು
ಶಾಂತಾಶ್ರಮ, ಸಿದ್ಧಾಶ್ರಮದ ಹತ್ತಿರ, ಹುಬ್ಬಳ್ಳಿ
(ಈ ಮೇಲಿನ ಪತ್ತೆಯಲ್ಲಿ ಪ್ರತಿಗಳು ದೊರೆಯುತ್ತವೆ)

CC-0. Jangamwadi Math Collection. Digitized by eGangotri

ಗ್ರಂಥ ಮತ್ತು ಗ್ರಂಥಕರ್ತರ ಸ್ತುತಿ ಪಂಚಕವು.

(ಶ್ರೀ ಶಂಭುಲಿಂಗನೇ ನಿಜಗುಣರು)

ಶ್ರೀಗುರು ಶಂಭುನೇ ನಿಜಗುಣ ।
ನಾಗಿಯೆ ವೇದದ ಸುಸಾರವೆಲ್ಲವ ಪೇರ್ದು ॥
ಬೇಗದಿ ಕನ್ನಡ ನುಡಿಯಲಿ ।
ತೂಗುತಲೊರೆದಂ ಮುಮುಕ್ಷು ಜನಕೀಗ್ರಂಥಂ ॥ ೧ ॥

(ಶ್ರೀಮನ್ನಿಜಗುಣರು ದಯಾಸಾಗರರು)

ಶ್ರೀಮನ್ನಿಜಗುಣ ಯೋಗಿಯು ।
ತಾಮಸ ಜನರಂ ದಯಾವಲೋಕನಮಾಡೀ ॥
ಭೂಮಾಬ್ರಹ್ಮದ ಸುಖಮಂ ।
ನೇಮದಿ ಕೊಡುವ ಪರಮಾರ್ಥ ಗೀತೆಯ ನುಡಿದಂ ॥ ೨ ॥

(ಈ ಗ್ರಂಥದಲ್ಲಿ ಹೇಳುವ ವಿಷಯಗಳು)

ಮನಸಿನ ವಾಸನೆ ಕೆಡಿಸುತ ।
ಚಿನುಮಯ ಶಿವನಂ ನಿಜಾತ್ಮ ತತ್ತ್ವಂತಿಳಿಸುತ ॥
ನೆನಸಿನ ಜಗವಿದು ಕನಸೆಂ ।
ದನುನಯದಿಂದಲಿ ವೊರೆಯುತ ಪೊರೆವುದು ಗ್ರಂಥಂ॥ ೩ ॥

(ಈ ಗ್ರಂಥದಿಂದಾಗುವ ಪ್ರಯೋಜನವು).

ರಾಗದಿ ನೋಡುತ ಕೇಳುತ ।
ಬೇಗದೊಳರ್ಥವ ತಿಳಿಯಲು ಮುಕ್ತನು ಸತ್ಯಂ ॥
ನೀಗುತ ವಿಸ್ಮೃತಿ ದುಃಖಂ ।
ಸಾಗುವನಾಭವ ಸಮುದ್ರ ತೀರವ ದಾಂಟೀ ॥ ೪ ॥

(ಈ ಗ್ರಂಥವು ನಿಧಿಧ್ಯಾಸನ ಪರವಾಗಿದೆ.)

ಇದರೊಳ್ಶ್ರುತಿ ಪದದರ್ಥವು ।
ಸದಾತ್ಮಸ್ಮೃತಿಯಂಕೊಡುತ್ತಲಿರ್ಪುದರಿಂದಂ ॥
ನಿಧಿಧ್ಯಾಸನಪರವಹುದೆಂ ।
ದಿದನುರೆ ಪೇಳ್ವರ್ಬುಧಜನರೊಲವಿಂದಿಳೆಯೋಳ್ ॥ ೫ ॥

CC-0. Jangamwadi Math Collection. Digitized by eGangotri

ಗೀ ತೆ.

ಶ್ರೀಗುರು ಸಿದ್ಧಾರೂಢರು ಬೋಧಿಸಿ ।
ದಾಗಮ ಸಾರವ ನೆಲ್ಲವ ಶೋಧಿಸಿ ॥

ರಾಗದಿ ಬರೆದೆನು ಗ್ರಂಥಕೆ ಯರ್ಥವ ।
ಬೇಗದಿ ಸುಜ್ಞರು ಗ್ರಹಿಸುತಲರ್ಥವ ॥

ಮೋದವ ಪಡೆಯಲಿ ನಿಜದೊಳು ಸಂತತ ।
ಸಾಧಕ ವೃಂದಕೆ ಗ್ರಂಥವ ತಿಳಿಸುತ ॥

ಭವ ಕಳೆಯುವ ಪರಮಾರ್ಥವು ಬೇಕು ।
ಭವರೋಗದಿ ತಾಂಬಳಲುದು ಸಾಕು ॥

ಅದರಿಂ ಪರಮಾರ್ಥದ ಗೀತೆಯನು ।
ಸದ್ಗುರು ಮುಖದಿಂ ಕೇಳುತಲಿರ್ಪನು ॥

ತನ್ನಂ ತಿಳಿಯಲು ಭವವೆಲ್ಲಿಹುದು ।
ತನ್ನಿಂ ತಾನೇ ಬಳಿಕುಳಿದಿಹುದು ॥ ೧ ॥

ಪರಮಾರ್ಥ ಗೀತೆಯು ಸದಾ ।
ನರರಿಗೆ ಪರಮ ಪುರುಷಾರ್ಥವ ನೀಯುದರಿಂದ ॥

ಸರಿ ಪೆಸರಿರ್ಪುದು ಗ್ರಂಥಕೆ ।
ಪರತರ ಸುಖದಾತ್ಮ ಲಾಭಕಿನ್ನೇನುಂಟೈ ॥

ಬಹಳ ಬಲ ವೇದಾಂತ ಕೇಸರಿ ।
ಬಹಳ ಗರ್ಜನೆ ಕೇಳುತನಕಾ ।
ಬಹಳ ಕೂಗುತಲಿರ್ಪವೀ ಶಾಸ್ತ್ರೆಂಬುವ ನರಿಗಳು ॥

ಬಹಳ ಶಕ್ತಿಯ ಸಿಂಹ ಗರ್ಜನೆ ।
ಬಹಳ ಕೇಳಿದ ಬಳಿಕ ಕೂಗವು ॥
ಬಹಳ ಕೇಳಲು ಬೇಕು ವೇದಾಂತೆಂಬ ಶಾಸ್ತ್ರವನು ॥

CC-0. Jangamwadi Math Collection. Digitized by eGangotri

ಈ ಗ್ರಂಥದ ಟೀಕಾ ತಾತ್ಪರ್ಯಕಾರರು



ಶ್ರೀ ಶಿವಪುತ್ರ ಸ್ವಾಮಿ

ಶಾಂತಾಶ್ರಮ, ಹುಬ್ಬಳ್ಳಿ

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

ಮುನ್ನುಡಿಯು

ಪ್ರತಿಯೊಬ್ಬರು ದುಃಖದನಿವೃತ್ತಿ ಸುಖದಪ್ರಾಪ್ತಿಯಸಲುವಾಗಿ ಪ್ರತಿಯೊಂದು ಪ್ರಯತ್ನದಲ್ಲಿ ತೊಡಗಿರುವರು. ಅದರಿಂದ ಕಿಂಚಿತ್ ಸುಖವು ಕ್ಷಣಕಾಲದಲ್ಲಿ ತೋರಿ ಅಡಗಿಹೋಗುತ್ತದೆ. ಮತ್ತು ದುಃಖದಿಂದೊಡಗೂಡಿದ ಮನಸ್ಸುಳ್ಳವನು ಆಗುತ್ತಾನೆ. ಪರಂತು ಜನನ ಮರಣಾದಿ ರೂಪ ದುಃಖದ ಅತ್ಯಂತ ದುಃಖದ ನಿವೃತ್ತಿ ಪರಮಾನಂದ ಪ್ರಾಪ್ತಿಯು ಆಗುವದಿಲ್ಲ. ಇದಕ್ಕೆ ಪರಮಪುರುಷಾರ್ಥ ವೆಂದು ಹೇಳುವರು. ಇದು ತನ್ನನ್ನು ತಾನು ಯಾರೆಂದು ತಿಳಿಯೋಣದರಿಂದ ಆಗುತ್ತದೆ. ಅನ್ಯೋಪಾಯುಗಳಿಂದ ಆಗುವದಿಲ್ಲ. "ಬೇರೆ ಬೇರೆ ಭಾವಿಸಿ ಬ್ರಹ್ಮಜ್ಞಾನವೊಂದಿಲ್ಲದವಗೆ ತೊರದಯ್ಯಾ ಸುಖ" ಎಂದು ಕೈವಲ್ಯ ಪದ್ಧತಿ ಯಲ್ಲಿ ಈ ಮಾತನ್ನು ಹೇಳಿದೆ. 'ಯೋವೈ ಭೂಮಾತತ್ಸುಖಂ ನಾಲ್ಪೇ ಸುಖಮಸ್ತಿ, ಯಾವದು ಎಲ್ಲಕ್ಕೂ ದೊಡ್ಡದಾಗಿರುವದೋ ಅದೇ ಸುಖವು ಆಗಿರುತ್ತದೆ. ಪರಿಚ್ಛಿನ್ನವಾದ ಅಲ್ಪದರಲ್ಲಿ ಸುಖವಿಲ್ಲ. ಹೀಗೆಂದು ಛಾಂದೋಗ್ಯ ಶ್ರುತಿಯೂ ಹೇಳುತ್ತದೆ. ದೇಶ, ಕಾಲ, ವಸ್ತು ಪರಿಚ್ಛೇದತ್ರಯಗಳಿಂದ ರಹಿತ ವಾಗಿ ದೊಡ್ಡದಾಗಿರುವದು ಬ್ರಹ್ಮವು. ಅದೇ ಸುಖರೂಪವಾಗಿರುವದು; ಅಂಥಾ ಬ್ರಹ್ಮದ ಜ್ಞಾನವಾದರೆ ತನಗೆ ಸುಖವಾಗುವದು. ಅಂಥಾ ಬ್ರಹ್ಮದ ಜ್ಞಾನವು ಆಗಬೇಕಾದರೆ ತನ್ನನ್ನು ತಾನು ತಿಳಿಯೋಣದರಿಂದ ಆಗುತ್ತದೆ. ತಾನು ಯಾರೆಂಬ ಜ್ಞಾನವು ಆಗದೆ ಬ್ರಹ್ಮಜ್ಞಾನವಾಗದು. ಯಾಕಂದರೆ 'ಬೊಮ್ಮ ವನರಿವೆನೆಂದು ಸುಮ್ಮನೆ ಬಳಲುವರು ತಮ್ಮನೆ ನೇತಿಗಳೆದು ಅನ್ಯವನೆ ನೋಡಿ ಮನುಜರು' ತನ್ನನ್ನು ತಾನು ತಿಳಿಯದೆ ಬ್ರಹ್ಮವು ತಿಳಿಯಲಾರದು. ಬ್ರಹ್ಮವನ್ನು ಅರಿಯುವವನು ಮೊದಲು ತನ್ನನ್ನು ತಿಳಿಯಲಿಕ್ಕೇಬೇಕು. 'ತನ್ನಂ ಮೊದಲರಿವುದು' ಎಂದು ಇದೇ ಗ್ರಂಥದಲ್ಲಿಯೂ ಹೇಳಿದೆ.

ಮತ್ತು "ಆತ್ಮಲಾಭಾತ್ಪರಂ ಲಾಭೋನವಿದ್ಯತೆ" ತನ್ನನ್ನು ತಾನು ಅರಿಯುವ ಆತ್ಮ ಲಾಭಕ್ಕೆ ಮಿಗಿಲಾದ ಲಾಭವು ಜಗತ್ತಿನಲ್ಲಿ ಬೇರೊಂದಿಲ್ಲವೆಂದು ಹೇಳುವ ವಚನವೂ ಉಂಟು. ಯಾಕಂದರೆ, 'ಅಯಮಾತ್ಮಾಬ್ರಹ್ಮ' ಎಂಬ ಮಹಾ ವಾಕ್ಯವುಂಟು. ಇದು ಈ ದೇಹದಲ್ಲಿ ಅಪರೋಕ್ಷನಾಗಿ ಅಹಂ ಶಬ್ದಕ್ಕೆ ಅರ್ಥರೂಪ ತಾನೇ ಬ್ರಹ್ಮವೆಂದು ಹೇಳುತ್ತದೆ. ಅಪರೋಕ್ಷರೂಪ ಆತ್ಮನನ್ನು ತಿಳಿಯದೆ ಪರೋಕ್ಷವಾದ ಬ್ರಹ್ಮಜ್ಞಾನವಾಗದು. ಪಂಚಕೋಶ ವಿಲಕ್ಷಣ ಸಾಕ್ಷಿ ರೂಪ ಸಚ್ಚಿದಾನಂದಾತ್ಮನನ್ನು ತಿಳಿದರೆ ತಾನೇ ಬ್ರಹ್ಮನಾಗಿರುವನು. ಇಂಥಾ ಬ್ರಹ್ಮಾಪರೋಕ್ಷ ಜ್ಞಾನದಿಂದ ಅತ್ಯಂತ ದುಃಖ ನಿವೃತ್ತಿ ಪರಮಾನಂದ ಪ್ರಾಪ್ತಿ ರೂಪ ಪುರುಷಾರ್ಥವು ಪ್ರಾಪ್ತಿಯಾಗುತ್ತದೆ. ಅಂಥಾ ತನ್ನ ಜ್ಞಾನವನ್ನುಂಟು ಮಾಡಿ ಪರಮ ಪುರುಷಾರ್ಥವನ್ನು ಕೊಡುವದರಿಂದ, ಈಗ್ರಂಥಕ್ಕೆ ಪರಮಾರ್ಥ ಗೀತೆಯೆಂಬ ಅನ್ವರ್ಥಕ ಹೆಸರನ್ನು ಕೊಟ್ಟಿರುತ್ತಾರೆ. ಅರ್ಥಾತ್, ಈ ಗ್ರಂಥ

CC-0. Jangamwadi Math Collection. Digitized by eGangotri

ದಿಂದೇನು ಪ್ರಯೋಜನವೆಂಬುದನ್ನು ಈಗ್ರಂಥದ ಹೆಸರೇ ಹೇಳುತ್ತದೆ. ಆದ್ದರಿಂದ ಈ ಗ್ರಂಥವು ಮಹತ್ವ ಯೋಜನವುಳ್ಳದ್ದಾಗಿದೆ.

"ಕೇಳಿಲೆ ವಾಸಿಷ್ಠಾದಿಗಳಲ್ಲಿ"ಎಂದು ಹೇಳಿದಂತೆ ತತ್ತ್ವಜ್ಞಾನ, ಮನೋನಾಶ, ವಾಸನಾಕ್ಷಯಗಳೆಂಬ ಈ ಮೂರು ಮಾತನ್ನು ಯೋಗವಾಸಿಷ್ಠ ಗ್ರಂಥದಲ್ಲಿ ಹೇಳಿದೆ. ಗ್ರಂಥಕರ್ತರು ಈ ಅಭಿಪ್ರಾಯವನ್ನು ತಮ್ಮ ಹೃದಯದಲ್ಲಿ ತಕ್ಕೊಂಡು ಆ ಗ್ರಂಥದ ಸಾರಕ್ಕೆ ಅನುಗುಣಗಳಾದ ನವೀನತರಗಳಾದ ಯುಕ್ತಿ, ದೃಷ್ಟಾಂತ, ಅನುಭವಗಳನ್ನು ಹೇಳುತ್ತಾ ಗ್ರಂಥವನ್ನು ಸಮಾಪ್ತಿಮಾಡುತ್ತಾರೆ. ಆದ್ದರಿಂದ ಮುಮುಕ್ಷು ಜನರಿಂದ ಈ ಗ್ರಂಥವು ಗ್ರಹಿಸಲಿಕ್ಕೆ ಯೋಗ್ಯವಾಗಿದೆ.

ಮತ್ತು "ತನ್ನ ನಿಜಸ್ಥಿತಿ ತಾನೇನೆಂದು" ತನ್ನ ನಿಜಸ್ವರೂಪವು ಯಾವದು? ಈ ಸೃಷ್ಟಿಯು ಹೇಗಾಯಿತು? ಈ ಜನನ ಮರಣರೂಪ ಸಂಸಾರದ ನಿವೃತ್ತಿಗೆ ಉಪಾಯವೇನು? ಹೀಗೆ ಮೂರು ಪ್ರಶ್ನೆಗಳಿರುತ್ತವೆ. ಆರನೇ ಗತಿ ಮುಗಿಯುವ ವರೆಗೆ ಪ್ರತಿ ಪದಕ್ಕೂ ಸದಾದಿ ಬ್ರಹ್ಮಸ್ವರೂಪನಾದ ನೀನೆ ಇರುವಿ. ಎಂದು ಎಚ್ಚರಪಡಿಸುತ್ತಾ ಸೃಷ್ಟಿ ಉತ್ಪತ್ತಿಯನ್ನು ಹೇಳುತ್ತಾ ಹೋಗುತ್ತಾರೆ. ಮುಂದೆ ಏಳನೇ ಗತಿಯಿಂದ ಹತ್ತನೇ ಗತಿಯ ವರೆಗೆ ಸಂಸಾರ ನಿವೃತ್ತಿಗೆ ಸಪ್ತ ಭೂಮಿಕೆಗಳ ಉಪಾಯವನ್ನು ತೋರಿಸಿದ್ದಾರೆ. ಹನ್ನೊಂದನೇ ಗತಿಯಲ್ಲಿ ಜೀವನ್ಮುಕ್ತನ ಚಾರಿತ್ರವನ್ನು ಹೇಳಿ ಗ್ರಂಥ ಸಮಾಪ್ತಿ ಮಾಡಿರುವರು.

ಶ್ರೀಮನ್ನಿಜಗುಣ ಶಿವಯೋಗಿಗಳಿಂದ ವಿರಚಿತಗಳಾದ ಗ್ರಂಥಗಳಲ್ಲಿ; ಪರಮಾನುಭವ ಬೋಧೆಯು ಸುಗಮವಾಗಿ ಸ್ವರೂಪವನ್ನು ಬೋಧಿಸುವದರಿಂದ ಶ್ರವಣಗ್ರಂಥವಾಗಿದೆ. ಅನುಭವಸಾರವು ಯುಕ್ತಿಪ್ರಾಧಾನ್ಯ ಮೂಲಕ ಭೋಧಿಸುವದರಿಂದ ಮನನ.ಗ್ರಂಥವಾಗಿದೆ. ಈ ಪರಮಾರ್ಥಗೀತೆಯು ಪ್ರತಿಪದಕ್ಕೂ ಅನಾತ್ಮಾಕಾರವನ್ನು ತೆಗೆದುಹಾಕಿ ಆತ್ಮಾಕಾರ ಸ್ವರೂಪ ವೃತ್ತಿಯನ್ನುಂಟು ಮಾಡುವದರಿಂದ ನಿಧಿಧ್ಯಾಸನಪರವಾಗಿದೆ. ಆದ್ದರಿಂದ ಸಾಧಕರಾದ ಮುಮುಕ್ಷು ಜನರಿಗೆ ಈ ಗ್ರಂಥಾವಲೋಕನವು ಅತ್ಯಾವಶ್ಯಕವಾಗಿದೆ ಎಂಬುದನ್ನು ಬೇರೆ ಏನು ಹೇಳುವದದೆ?

ಈ ಪರಮಾರ್ಥಗೀತೆಯನ್ನು ಮೊದಲು ಮಾಸಿಕ ರೂಪದಿಂದ ಪ್ರಕಟನೆ ಮಾಡಿತ್ತು. ಆ ಪ್ರತಿಗಳು ಮುಗಿದುಹೋದವು. ಈಗ ಬೇಡಿಕೆ ಹೆಚ್ಚಾದ್ದರಿಂದ ಇದನ್ನು ಎರಡನೇ ಆವೃತ್ತಿಯಾಗಿ ಪ್ರಿಂಟು ಮಾಡುವದಾಗಿದೆ. ಮತ್ತು ಆದರ್ಶ ಮುದ್ರಣ ಪ್ರೆಸ್ಸಿನ ಮ್ಯಾನೇಜರರಾದ ರಾ|| ರಾ|| ಎಸ್. ಎಸ್. ಕಾರಂತರು, ಬಹುಪ್ರೇಮದಿಂದ ಅಚ್ಚುಕಟ್ಟಾಗಿಪ್ರಿಂಟು ಮಾಡಿಕೊಟ್ಟದ್ದರಿಂದ ಅವರ ಉಪಕಾರ ಸ್ಮರಣೆಯನ್ನು ಸ್ಮರಿಸದೆ ಇರಲಾರೆವು.

ಇತಿ

ಶ್ರೀ. ಶಿವಪುತ್ರಸ್ವಾಮಿ

ಶಾಂತಾಶ್ರಮ

ಸಿದ್ಧಾರೂಢಮದ ಹತ್ತರ ಹುಬ್ಬಳ್ಳಿ.

CC-0. Jangamwadi Math Collection. Digitized by eGangotri

ಶುದ್ಧಾ ಶುದ್ಧ ಪತ್ರಿಕೆಯು

ಪುಟ	ಪಂಕ್ತಿ	ಅಶುದ್ಧ	ಶುದ್ಧ
೪	೩೦	ಕಡಾ	ಕೂಡಾ
೨೬	೧೨	ದಿಲ್ಲಿ	ದಿಲ್ಲ
೩೦	೩೦	ಹೇಳಿ	ಹೇಳಿಸಿ
೩೮	೧೫	ಶಕ್ಯಾದಿ	ಶಕ್ತ್ಯಾದಿ
೪೦	೧೩	ಮನಿ	ಮೆನಿ
೪೦	೨೯	ಅನುಭಿವ	ಅನುಭವ
೫೦	೨೮	ಭಾಗ್ನಂಶ	ಭಾಗ್ನ ಂೃಶ
೫೧	೯	ತತ್ವ	ಸತ್ವ
೬೦	೧೭	ಸಮನಿಪ	ಸಮನಿಸ
೬೫	೨೫	ವಸ್ತ	ವಸ್ತು
೯೦	೩೦	ಪುಣ	ಪುಣ್ಯ
೧೧೧	೧೮	ನಿತ್ಯ	ಅನಿತ್ಯ
೧೧೯	೮	ಅನಲಂಗೆ	ಅನಿಲಂಗೆ
೧೨೨	೧೫–೨೯	ಆದ್ಯಾಸ	ಅಧ್ಯಾಸ
೧೩೧	೧೩	ನಂದನ	ನಂದ
೧೩೪	೬	ಪ್ರಯತ್ನಗಂದ	ಪ್ರಯತ್ನದಿಂದ
೧೩೮	೧೭	ಸಂಸ್ಕೃತಿ	ಸಂಸ್ಕೃತಿ
೧೪೦	೫	सानिभम्	संनिभम्
,,	೬	यिंद्दु	येन्द्दु
,,	೧೧	सकृत्पात्	संकृत्पात्
,,	೨೪	ಆಧಿಕ್ಯದಾಗಿ	ಆಧಿಕ್ಯವಾಗಿ
೧೪೪	೩೨	ಪರಿಭವವು	ಪರಿಭವವಾ
೧೪೫	೧೬	ಂದ	ದಿಂದ
೧೫೩	೩೧	ಕೇಳುಲು	ಕೇಳಲು
೧೫೯	೧೦	ವ್ಯವಹುತಿ	ವ್ಯವಹೃತಿ
೧೬೦	೯	ಜವಾದ	ಜಡವಾದ
೧೬೧	೨೯	ನೈದು	ನೈದುವ
೧೬೬	೪	ಪ್ರಶ್ನವನ್ನು	ಪ್ರಶ್ನೆಯನ್ನು
೧೬೯	೧೩	ನಿಷಿದ್ಧವೆ	ನಿಷಿದ್ಧವ
೧೭೧	೨೪	ತೋರು	ತೀರು
೧೭೨	೬	ಇಲ್ಲ(ಇದನ್ನು ಸೇರಿಸಬೇಕು)	ಇಲ್ಲಿಮುಗುಳೆ ಜೀವತ್ವವನ್ನೈದಿ
೧೭೫	೨೦	ಕೂಡಿದ	ಕೂಡದ
೧೮೦	೨೩	ವಿಷಯ	ವಿಷ
೧೮೨	೨೨	ಪರಯಾ	ವರಾಯಾ

CC-0. Jangamwadi Math Collection. Digitized by eGangotri

ದಿಂದೇನು ಪ್ರಯೋಜನವೆಂಬುದನ್ನು ಈಗ್ರಂಥದ ಹೆಸರೇ ಹೇಳುತ್ತದೆ. ಆದ್ದರಿಂದ ಈ ಗ್ರಂಥವು ಮಹತ್ವ ಯೋಜನವುಳ್ಳದ್ದಾಗಿದೆ.

"ಕೇಳಿಲೆ ವಾಸಿಷ್ಠಾದಿಗಳಲ್ಲಿ"ಎಂದು ಹೇಳಿದಂತೆ ತತ್ತ್ವಜ್ಞಾನ, ಮನೋನಾಶ, ವಾಸನಾಕ್ಷಯಗಳೆಂಬ ಈ ಮೂರು ಮಾತನ್ನು ಯೋಗವಾಸಿಷ್ಠ ಗ್ರಂಥದಲ್ಲಿ ಹೇಳಿದೆ. ಗ್ರಂಥಕರ್ತರು ಈ ಅಭಿಪ್ರಾಯವನ್ನು ತಮ್ಮ ಹೃದಯದಲ್ಲಿ ತಕ್ಕೊಂಡು ಆ ಗ್ರಂಥದ ಸಾರಕ್ಕೆ ಅನುಗುಣಗಳಾದ ನವೀನತರಗಳಾದ ಯುಕ್ತಿ, ದೃಷ್ಟಾಂತ, ಅನುಭವಗಳನ್ನು ಹೇಳುತ್ತಾ ಗ್ರಂಥವನ್ನು ಸಮಾಪ್ತಿ ಮಾಡುತ್ತಾರೆ. ಆದ್ದರಿಂದ ಮುಮುಕ್ಷು ಜನರಿಂದ ಈ ಗ್ರಂಥವು ಗ್ರಹಿಸಲಿಕ್ಕೆ ಯೋಗ್ಯವಾಗಿದೆ.

ಮತ್ತು "ತನ್ನ ನಿಜಸ್ಥಿತಿ ತಾನೇನೆಂದು" ತನ್ನ ನಿಜಸ್ವರೂಪವು ಯಾವದು? ಈ ಸೃಷ್ಟಿಯು ಹೇಗಾಯಿತು ? ಈ ಜನನ ಮರಣರೂಪ ಸಂಸಾರದ ನಿವೃತ್ತಿಗೆ ಉಪಾಯವೇನು ? ಹೀಗೆ ಮೂರು ಪ್ರಶ್ನೆಗಳಿರುತ್ತವೆ. ಆರನೇ ಗತಿ ಮುಗಿಯುವ ವರೆಗೆ ಪ್ರತಿ ಪದಕ್ಕೂ ಸದಾದಿ ಬ್ರಹ್ಮಸ್ವರೂಪನಾದ ನೀನೆ ಇರುವಿ. ಎಂದು ಎಚ್ಚರಪಡಿಸುತ್ತಾ ಸೃಷ್ಟಿ ಉತ್ಪತ್ತಿಯನ್ನು ಹೇಳುತ್ತಾ ಹೋಗುತ್ತಾರೆ. ಮುಂದೆ ಏಳನೇ ಗತಿಯಿಂದ ಹತ್ತನೇ ಗತಿಯ ವರೆಗೆ ಸಂಸಾರ ನಿವೃತ್ತಿಗೆ ಸಪ್ತ ಭೂಮಿಕೆಗಳ ಉಪಾಯವನ್ನು ತೋರಿಸಿದ್ದಾರೆ. ಹನ್ನೊಂದನೇ ಗತಿಯಲ್ಲಿ ಜೀವನ್ಮುಕ್ತನ ಚಾರಿತ್ರವನ್ನು ಹೇಳಿ ಗ್ರಂಥ ಸಮಾಪ್ತಿ ಮಾಡಿರುವರು.

ಶ್ರೀಮನ್ನಿಜಗುಣ ಶಿವಯೋಗಿಗಳಿಂದ ವಿರಚಿತಗಳಾದ ಗ್ರಂಥಗಳಲ್ಲಿ; ಪರಮಾನುಭವ ಬೋಧೆಯು ಸುಗಮವಾಗಿ ಸ್ವರೂಪವನ್ನು ಬೋಧಿಸುವದರಿಂದ ಶ್ರವಣಗ್ರಂಥವಾಗಿದೆ. ಅನುಭವಸಾರವು ಯುಕ್ತಿಪ್ರಾಧಾನ್ಯ ಮೂಲಕ ಭೋಧಿಸುವದರಿಂದ ಮನನ ಗ್ರಂಥವಾಗಿದೆ. ಈ ಪರಮಾರ್ಥಗೀತೆಯು ಪ್ರತಿಪದಕ್ಕೂ ಅನಾತ್ಮಾಕಾರವನ್ನು ತೆಗೆದುಹಾಕಿ ಆತ್ಮಾಕಾರ ಸ್ವರೂಪ ವೃತ್ತಿಯನ್ನುಂಟು ಮಾಡುವದರಿಂದ ನಿಧಿಧ್ಯಾಸನಪರವಾಗಿದೆ. ಆದ್ದರಿಂದ ಸಾಧಕರಾದ ಮುಮುಕ್ಷು ಜನರಿಗೆ ಈ ಗ್ರಂಥಾವಲೋಕನವು ಅತ್ಯಾವಶ್ಯಕವಾಗಿದೆ ಎಂಬುದನ್ನು ಬೇರೆ ಏನು ಹೇಳುವದದೆ?

ಈ ಪರಮಾರ್ಥಗೀತೆಯನ್ನು ಮೊದಲು ಮಾಸಿಕ ರೂಪದಿಂದ ಪ್ರಕಟನೆ ಮಾಡಿತ್ತು. ಆ ಪ್ರತಿಗಳು ಮುಗಿದುಹೋದವು. ಈಗ ಬೇಡಿಕೆ ಹೆಚ್ಚಾದ್ದರಿಂದ ಇದನ್ನು ಎರಡನೇ ಆವೃತ್ತಿಯಾಗಿ ಪ್ರಿಂಟು ಮಾಡುವದಾಗಿದೆ. ಮತ್ತು ಆದರ್ಶ ಮುದ್ರಣ ಪ್ರೆಸ್ಸಿನ ಮ್ಯಾನೇಜರರಾದ ರಾ|| ರಾ|| ಎಸ್. ಎಸ್. ಕಾರಂತರು, ಬಹುಪ್ರೇಮದಿಂದ ಅಚ್ಚುಕಟ್ಟಾಗಿಪ್ರಿಂಟು ಮಾಡಿಕೊಟ್ಟದ್ದರಿಂದ ಅವರ ಉಪಕಾರ ಸ್ಮರಣೆಯನ್ನು ಸ್ಮರಿಸದೆ ಇರಲಾರೆವು.

ಇತಿ

ಶ್ರೀ. ಶಿವಪುತ್ರಸ್ವಾಮಿ

ಶಾಂತಾಶ್ರಮ

ಸಿದ್ಧಾಶ್ರಮದ ಹತ್ತರ ಹುಬ್ಬಳ್ಳಿ.

CC-0. Jangamwadi Math Collection. Digitized by eGangotri

ಶುದ್ಧಾ ಶುದ್ಧ ಪತ್ರಿಕೆಯು

ಪುಟ	ಪಂಕ್ತಿ	ಅಶುದ್ಧ	ಶುದ್ಧ
೪	೩೦	ಕಡಾ	ಕೂಡಾ
೨೬	೧೨	ದಿಲ್ಲಿ	ದಿಲ್ಲ
೩೦	೩೦	ಹೇಳಿ	ಹೇಳಿಸಿ
೩೮	೧೫	ಶಕ್ಯಾದಿ	ಶಕ್ತ್ಯಾದಿ
೪೦	೧೩	ಮನಿ	ಮೆನಿ
೪೦	೨೯	ಅನುಭಿವ	ಅನುಭವ
೫೦	೨೮	ತಾಗ್ನಂಶ	ತಾಗ್ನ ಂ್ಯಶ
೫೧	೯	ತತ್ವ	ಸತ್ವ
೬೦	೧೭	ಸಮನಿಪ	ಸಮನಿಸ
೬೫	೨೫	ವಸ್ತ	ವಸ್ತು
೯೦	೩೦	ಪುಣ	ಪುಣ್ಯ
೧೧೧	೧೮	ನಿತ್ಯ	ಅನಿತ್ಯ
೧೧೯	೮	ಅನಲಂಗೆ	ಅನಿಲಂಗೆ
೧೨೨	೧೫–೨೯	ಆದ್ಯಾಸ	ಅಧ್ಯಾಸ
೧೩೧	೧೩	ನಂದನ	ನಂದ
೧೩೪	೬	ಪ್ರಯತ್ನಗಂದ	ಪ್ರಯತ್ನದಿಂದ
೧೩೮	೧೭	ಸಂಸ್ಕೃತಿ	ಸಂಸ್ಕೃತಿ
೧೪೦	೫	सानिभम्	संनिभम्
,,	೬	यिंदु	येन्दु
,,	೧೧	सकत्पात्	संकत्पात्
,,	೨೪	ಆಧಿಕ್ಯದಾಗಿ	ಆಧಿಕ್ಯವಾಗಿ
೧೪೪	೩೨	ಪರಿಭವವು	ಪರಿಭವವಾ
೧೪೫	೧೬	ಂದ	ದಿಂದ
೧೫೩	೩೧	ಕೇಳುಲು	ಕೇಳಲು
೧೫೯	೧೦	ವ್ಯವಹುತಿ	ವ್ಯವಹೃತಿ
೧೬೦	೯	ಜವಾದ	ಜಡವಾದ
೧೬೧	೨೯	ನೈದು	ನೈದುವ
೧೬೬	೪	ಪ್ರಶ್ನವನ್ನು	ಪ್ರಶ್ನೆಯನ್ನು
೧೬೯	೧೩	ನಿಷಿದ್ಧವೆ	ನಿಷಿದ್ಧವ
೧೭೧	೨೪	ತೋರು	ತೀರು
೧೭೨	೬	ಇಲ್ಲ(ಇದನ್ನು ಸೇರಿಸಬೇಕು)	ಇಲ್ಲಿಮುಗುಳೆ ಜೀವತ್ವವನ್ನೈದಿ
೧೭೫	೨೦	ಕೂಡಿದ	ಕೂಡದ
೧೮೦	೨೩	ವಿಷಯ	ವಿಷ
೧೮೨	೨೨	ವರಯಾ	ವರಾಯಾ

CC-0. Jangamwadi Math Collection. Digitized by eGangotri

೧೮೪	೬	ವಾಲ್ಕ್ಯರ	ವಲ್ಕ್ಯರು
೧೮೬	೧೯	ದೇದು	ದೇನು
,,	೨೩	ದೇದು	ದೇನು
೧೮೭	೧೯	ನಿಷಿದ್ಧನು	ನಿಷಿದ್ಧವನು
೧೮೯	೧೦	ತ್ಯಜಿಸಿದವರಗೂ	ತ್ಯಜಿಸದವರೆಗೂ
೧೯೦	೧೨	ಪ್ರತ್ಯಗಾಯ್ಮವನ್ನು	ಪ್ರತ್ಯಗಾತ್ಮನನ್ನು
೧೯೫	೯	ಗತಿಯನ್ನು	ಗತಿಯಲ್ಲಿ
೨೦೪	೧	ತದ್ಧಾನ	ತದ್ಧ್ಯಾನ
೨೧೩	೫	ತತ್ವ	ತತ್ತ್ವ
೨೧೮	೧೨	ಕೇಳ	ಕೇಳು,
೨೨೬	೫	ಬಗತ	ಬರಿಗತ
೨೨೬	೨೦	ಗೆದೆ	ಗೆಡದೆ
೨೨೮	೩	ಚಿದ್ರೂಪಗಿ-ಜ್ಞಾನ	ಚಿದ್ರೂಪಾಗಿ-ಜ್ಞಾನ
೨೨೯	೧೪	ಯಾಗುತ	ಯಾಗುತ್ತ
೨೩೦	೨೬	ರ್ಮಗಳನ್ನಾ	ಕರ್ಮಗಳನ್ನು
೨೩೦	೮	ಗಾದದು	ಗಾದುದು
೨೩೨	೨೮	ಸಂವಾದಸಾರ	ವಾದಸಂಸಾರ
೨೩೪	೬	ತಾತೇ	ತಾನೇ
೨೪೨	೧೭	ನ್ಮಿತ್ಯ	ನ್ಮಿಥ್ಯಾ
೨೪೨	೨೩	ಸಾಗರದಂ	ಸಾಗರದಂತೆ
೨೪೬	೧೨	ಲ್ಪಡುತ್ತವೆಂದು	ಲ್ಪಟ್ಟವು ಎಂದು
೨೪೮	೧	ಸಾಂದ್ರ	ಸಾಂದ್ರ=
,,	೮	ದಿಚ್ಛಿಯು	ದಿಚ್ಛೆಯು
,,	೨೮	ತ್ಮಾರೂಪ	ತ್ಮಾಪರೂಪ
೨೫೧	೧೮	ಮಂತ	ಮಂತರ
೨೫೨	೨೪	ಅಗಣ್ಯ	ಗಣ್ಯ
೨೫೪	೧೬	ಆತನನ್ನು	ಆತ್ಮವನ್ನು
೨೫೫	೧೭	ಮುಕ್ತ	ಮುಕ್ತಂಗೋರ್ವರು
೨೫೬	೨೬	ಕಾಮ್ಯರ್ಂ	ಕಾಮ್ಯಂ
೨೭೨	೨೬	ಅಪಿದ್ಯಾ	ಅವಿದ್ಯಾ
೨೭೬	೨೮	ನದಂ	ನಂದ
೨೭೭	೧೫	ಪೊರತು	ಹೊರತು
೨೮೩	೧೧	ದೀನ	ನೀನ
,,	೨೪	ಐಕ	ಏಕ
೨೮೭	೨	ದೇಶಿ	ದೇಶಿ
,,	೧೩	ಸ್ಪರೂವ	ಸ್ವರೂಪ

CC-0. Jangamwadi Math Collection. Digitized by eGangotri

೧ನೇ ಗತಿಯು, ವಸ್ತುಶಕ್ತಿ ಕಥನ

ಗತಿಗಳು	ವಿಷಯಗಳು	ಪದ್ಯ	ಪುಟ ಸಂಖ್ಯೆ
೧)	ಗುರುಗಳು ಶಿಷ್ಯನಿಗೆ ಮೋಕ್ಷಮಾರ್ಗ ಕಥನ	೧	೧
	ಅಧಿಕಾರಿ ಕಥನ	೨	೪
	ಪ್ರತಿಪಾದ್ಯ ಪ್ರತಿಪಾದಕಭಾವ ಸಂಬಂಧ	೩—೪	೭
	ಪ್ರಯೋಜನ ಕಥನ	೫—೬	೧೦
	ಗ್ರಂಥವಿಷಯ ಕಥನ	೭—೯	೧೭
	ಗುರು ಶಿಷ್ಯರ ಪ್ರಶ್ನೋತ್ತರ ಕಥನ	೧	೧೯
	ತನ್ನ ಸ್ವರೂಪು ಮನವಾಣಿಗಳಿಗೆ ಅವಿಷಯವಾದರೂ ದೃಶ್ಯ ವಿಲಕ್ಷಣದಿಂದ ತಿಳಿಯಲಿಕ್ಕೆ ಬರುತ್ತದೆ.	೨	೨೨
	ನಿನ್ನ ಶಕ್ತಿ ನಿನ್ನನ್ನಾಶ್ರಯಿಸಿ ಮುಚ್ಚಿ ಅನಿರ್ವಚನೀಯವಾಗಿದೆ	೩	೨೪
	ನಿರ್ಲಕ್ಷಣ ನಿರ್ಗುಣನಾದ ನೀನು ಮಾಯಾ ಶಕ್ತಿಯಿಂದ ನಾನಾ ಗುಣಮಯನಾಗಿ ಮಹೇಶ್ವರನಾಗಿರುವಿ	೪	೨೭
	ಮಹೇಶ್ವರನಾದ ನಿನ್ನ ಚಿಚ್ಛಕ್ತಿಗಳೇ ಪಂಚಭೂತ, ಬ್ರಹ್ಮಾಂಡ, ಚರಾಚರರೂಪ ಜಗತ್ತು ಆಗಿರುತ್ತವೆ. ಆ ಚಿಚ್ಛಕ್ತಿ ಮೂಲಕ ಸರ್ವಜಗತ್ತು ನೀನೇ ಆಗಿರುವಿ	೫	೨೯
	ಅಖಂಡಸ್ವರೂಪನಾದ ನಿನ್ನ ಚಿಚ್ಛಕ್ತಿಗಳೇ ಕೆಲವು ಜೀವರಾದವು. ಕೆಲವು ದೇವರಾದವು. ಉಪಾಸ್ಯೋಪಾಸಕರೆಂಬ ಭೇದವು ತೋರಿತು. ಇದಕ್ಕೆಲ್ಲಾ ನೀನೇ ಆಶ್ರಯನಾಗಿರುವಿ	೬	೩೦
	ನೀನೆ ಬ್ರಹ್ಮಾ, ವಿಷ್ಣು, ರುದ್ರ, ಈಶ್ವರ, ಸದಾಶಿವನಾಗಿರುವಿ	೭	೩೨
	ನಿನ್ನ ಚಿಚ್ಛಕ್ತಿಯೇ ವಾಣಿ, ಗಿರಿಜೆ, ಲಕ್ಷ್ಮಿ, ಅಂಬಿಕೆ, ಮನೋನ್ಮನಿ, ಕುಂಡಲಿ ನಾಮಂಗಳಿಂದ ಕರಿಸಿಕೊಂಡು ಭುವನೇಶ್ವರಿಯಾಗಿಹುದು	೮	೩೩
	ನಿನ್ನ ಜ್ಞಾನಶಕ್ತಿಯೇ ಒಂಭತ್ತು ಪ್ರಕಾರದ ಭಕ್ತಿಯ ರೂಪದಿಂದ ಯಾವತ್ತು ಭಕ್ತರಲ್ಲಿ ಇರುತ್ತದೆ	೯	೩೫
	ಉಕ್ತಭಕ್ತಿಯ ಮೂಲಕ ಈಶ್ವರನು ಭಕ್ತರಿಗೆ ಅಣಿಮಾದ್ಯಷ್ಟೈಶ್ವರ್ಯ, ಆರುಗುಣ, ಆರು ಅಂಗಗಳು ಇವುಗಳನ್ನು ಕೊಡುತ್ತಾನೆ	೧೦	೩೮
	ನಿನ್ನ ಚಿಚ್ಛಕ್ತಿಯೇ ಜೀವವಾಯಿತ್ತು. ಮತ್ತು ಪ್ರಮಾತೃ, ಪ್ರಮಾಣ, ಪ್ರಮೇಯಗಳೆಂಬ ತ್ರಿಪುಟಿ		

CC-0. Jangamwadi Math Collection. Digitized by eGangotri

ಯಾಗಿ, ಪ್ರತ್ಯಕ್ಷ, ಅನುಮಾನ, ಆಗಮಗಳೆಂಬ
ಮೂರು ಪ್ರಮಾಣಗಳಾದವು ಜೀವತ್ವ ಒಂದನ್ನುಳಿ
ದರೆ ನೀನೊಬ್ಬನೇ ಬಾಕಿ ಉಳಿಯುವಿ ೧೧ ೪೦
ವಸ್ತುಶಕ್ತಿ ಕಥನ ಉಪಸಂಹಾರ ಕಂದ ೪೩

೨ನೇ ಗತಿಯು, ಪಂಚೀಕರಣ ವಿಚಾರ

೨) ಹಿಂದಿನಗತಿಯ ಅನುವಾದಪೂರ್ವಕ ಮುಂದಿನ
ವಿಷಯ ಸೂಚನೆ ಕಂದ ೪೩
ಸರ್ವಜ್ಞನಾದ ಈಶ್ವರರೂಪ ನಿನ್ನ ಇಚ್ಛೆ
ಯಿಂದಲೇ ಆಕಾಶಾದಿ ಪಂಚಭೂತಗಳು
ಉತ್ಪನ್ನಗಳಾದವು ೧ ೪೪
ಪ್ರತಿಯೊಂದು ಭೂತಗಳು ಐದೈದು ಭಾಗಗಳಾಗಿ
ಇಪ್ಪತ್ತೈದು ಭಾಗಗಳಾದವು ೨ ೪೫
ಜ್ಞಾತೃತ್ವಾದಿ ಆಕಾಶ ಪಂಚೀಕರಣ ೩ ೪೭
ವ್ಯಾನಾದಿ ವಾಯು ಪಂಚೀಕರಣ ೪ ೪೯
ನೇತ್ರಾದಿ ಅಗ್ನಿ ಪಂಚೀಕರಣ ೫ ೫೧
ರಸಾದಿ ಜಲದ ಪಂಚೀಕರಣ ೬ ೫೨
ಗುದಾದಿ ಧರಣಿಯ ಪಂಚೀಕರಣ ೭ ೫೪
ಪೃಥ್ವ್ಯಾದಿ ಭೂತಾಂಶಗಳಿಂದ ಉತ್ಪನ್ನಗಳಾದ
ತತ್ವಗಳನ್ನೂ ಮುಖ್ಯಾಂಶಗಳನ್ನೂ ಹೇಳುತ್ತಾರೆ ೮ ೫೬
ಅವಸ್ಥಾತ್ರಯ ಜೀವತ್ರಯ ಕಥನ ೯ ೫೮
ಮೂರು ಅವಸ್ಥೆಗಳಲ್ಲಿದ್ದು ಅರಿಯುವದರಿಂದ
ಸಚ್ಚಿತ್ಸುಖ ಸ್ವಯಂಪ್ರಕಾಶನಿರುವಿ ೧೦ ೬೦
ಪ್ರಣವಸ್ವರೂಪನಾದ ನಿನ್ನಿಂದ ಚರಾಚರ ಸೃಷ್ಟಿಕಥನ ೧೧ ೬೨
ಸ್ವಪ್ನದಂತೆ ಜಗತ್ತು ಮಿಥ್ಯೆಯಾಗಿದೆ ,, ೬೫
ಪಂಚೀಕರಣ ಉಪಸಂಹಾರ ಕಂದ

೩ನೇ ಗತಿಯು. ಮಹದಾದಿಸೃಷ್ಟಿಕ್ರಮ

೩) ಮಹದಾದಿ ಸೃಷ್ಟಿಕ್ರಮ ಕಥನ ಪ್ರತಿಜ್ಞಾ ಕಂದ ೬೫
ನಿನ್ನಿಚ್ಛಾರೂಪ ಶಕ್ತಿಯೇ ಕಾಲವಾಗಿ ಪ್ರಕೃತಿಗೆ
ಪ್ರೇರಿಸಲು ನಾದತ್ರಯ, ಗುಣತ್ರಯಗಳಾದವು
ಆ ಪ್ರಕೃತಿಗಾಶ್ರಯನು ನೀನು ೧ ೬೬
ಪ್ರಕೃತಿಯೇ ಮಹತತ್ವವೆನಿಸಿಕೊಂಡು ಅದರಿಂದ
ಘೋರಾದಿ ವೃತ್ತಿತ್ರಯಾತ್ಮಕ ಸತ್ವಾದಿ ಮೂರು
ಗುಣಗಳಾಗಿ, ವೈಕಾರಿಕಾದಿ ಮೂರು ಅಹಂಕಾರ
ಗಳು ಆದವು, ಮಹತ್ತಿಗೆ ಆವೃತ್ತಗಳಾಗಿವೆ ೨ ೬೮

CC-0. Jangamwadi Math Collection. Digitized by eGangotri

ಸಾತ್ವಿಕ ರಾಜಸ ಹಮ್ಮಿನಕಾರ್ಯವು ಮನಸ್ಸಾಗಿ
ರುವದು. ಹನ್ನೊಂದು ಅಭಿಮಾನಿ ದೇವತೆಗಳು
ಸಾತ್ವಿಕ ಹಮ್ಮಿನ ಕಾರ್ಯಗಳಾಗಿವೆ. ಇವು ನಿನಗಿಲ್ಲ ೩ ೬೯
ವೈಕಾರಿಕ ಅಹಂಕಾರದಿಂದ ಜ್ಞಾನೇಂದ್ರಿಯ ಪಂಚ
ಕವೂ ತೈಜಸ ಅಹಂಕಾರದಿಂದ ಕರ್ಮೇಂದ್ರಿಯ
ಪಂಚಕವೂ ಜನಿಸಿದವು. ಅವುಗಳಿಗೆಲ್ಲಕ್ಕೂ ನೀನೇ
ಆಶ್ರಯನಾಗಿರುವಿ ೪ ೭೧
ಮೂಢಾತ್ಮಕ ಭೂತಾದಿ ಅಹಂಕಾರದಿಂದ ಶಬ್ದಾದಿ
ತನ್ಮಾತ್ರೆಗಳು; ಅವುಗಳಿಂದ ಪಂಚಭೂತಗಳು
ಜನಿಸಿದವು. ಪಂಚಭೂತಗಳಿಂದ ಭೌತಿಕ ಶರೀರ
ವಾಯಿತು. ಭೂತಾದಿ ಅಹಂಕಾರ, ಪಂಚಭೂತ
ಗಳು; ದೇಹ, ಇವೇ ಸಪ್ತ ಆವರಣಗಳೆಂದು ೫ } ೭೩
ಹೇಳಿಸಿಕೊಳ್ಳುವವು ೬ }
ಕಾರಣದೊಳಗಿದ್ದ ಗುಣವು ಕಾರ್ಯಕ್ಕೆ ಬಂದಿರುತ್ತದೆ ೭ ೭೪
ಕಾರ್ಯಗಳಾದ ಪಂಚಜ್ಞಾನೇಂದ್ರಿಯಗಳಲ್ಲಿ ಪಂಚ
ಭೂತಗಳು ಇರುತ್ತವೆ. ಇವೆಲ್ಲವು ನಿನ್ನ ನಿಜವನ್ನು
ಹೊಂದಿಕೊಂಡಿವೆ. ನೀನೇ ಮನೋಸಹಿತ ಇಂದ್ರಿಯ
ಗಳ ದ್ವಾರಾ ಸರ್ವವನ್ನು ಅರಿಯುವಿ ೮ ೭೬
ಒಂದು ಮೂಲಪ್ರಕೃತಿ, ಏಳು ಪ್ರಕೃತಿ ವಿಕೃತಿಗಳು
ಹದಿನಾರು ವಿಕೃತಿಗಳು ಇವು ಜಗದಾಕಾರಗಳಾಗಿವೆ ೯ ೭೭
ಮಾಯೆಯೇ ಮಹತ್ತಾಯಿತು. ಅದರಿಂದ ಹಮ್ಮು
ಆಯಿತು. ಆ ಹಮ್ಮೇ ಮನಸ್ಸಾಯಿತು. ಆ
ಮನೋರೂಪ ಬ್ರಹ್ಮನಿಂದ ಅನೇಕ ಬ್ರಹ್ಮಾಂಡ
ರೂಪ ಜಗತ್ತಾಯಿತು. ಇದು ಯುಗಪತ್ಸೃಷ್ಟಿಯು ೧೦ ೭೯
ಅಚಲಾತ್ಮಕನಾದ ನಿನ್ನಲ್ಲಿ ಚಲನಾತ್ಮಕ ಮನಸ್ಸೆಂಬ
ಅತ್ತೀಮರವು ಬ್ರಹಾಂಡಗಳೆಂಬ ಹಣ್ಣುಗಳಿಂದ
ಕೂಡಿರುವದು. ಇದು ಸೋಜಿಗನಲ್ಲವೆ ? ೧೧ ೮೧
ಮುಂದಿನ ಸಂಧಿಯು ನಾಲ್ಕು ವಿಧ ಭೂತಗಳ ಶರೀರೋ
ತ್ಪತ್ತಿಯನ್ನು ಸೂಚನೆ ಮಾಡುತ್ತಾರೆ ೨ ಪದ } ೮೨
ಗುಣಭೇದ ಸೃಷ್ಟಿ ಉಪಸಂಹಾರ ಕಂದ }

೪ನೆಯ ಗತಿಯು, ತಾತ್ವಿಕ ವಿಚಾರ

೪) ತತ್ವಸಂಬಂಧಿ ತಾತ್ವಿಕ ಭೇದವನ್ನು ಹೇಳುತ್ತೇವೆಂದು
ಪ್ರತಿಜ್ಞಾ ಕಂದ ೮೩

CC-0. Jangamwadi Math Collection. Digitized by eGangotri

ಉದ್ಭಿಜ, ಸ್ವೇದಜ, ಜಾತಿಶರೀರಗಳ ಉತ್ಪತ್ತಿ ಕಥನ ೧ ೮೪
ಅಂಡಜ, ಪಿಂಡಜ, ಜಾತಿಶರೀರಗಳ ಉತ್ಪತ್ತಿ ಕಥನ ೨ ೮೬
ದೇಹವು ಮಲಮಯವಾಗಿರುವದೆಂದೂ ಹೆಣ್ಣು,ಗಂಡು
ಪೂರ್ಣಾಂಗ ನ್ಯೂನಾಂಗ ಮೊದಲಾದವುಗಳ ಕಥನ ೩ ೮೭
ತಾಯಿ ತಂದೆಗಳ ರೇತೋರಕ್ತಗಳ ಪರಿಣಾಮಾತ್ಮಕ,
ಆರು ಕೋಶಗಳ ರೂಪಾಗಿಯೂ, ಸಪ್ತಧಾತುಗಳ
ರೂಪಾಗಿಯೂ, ದೇಹವಿರುತ್ತದೆ. ಇದರಿಂದ ಜೀವ
ನಿಗೆ ಸಂಸಾರವಾಗಿದೆ ೪ ೯೦
ನವಮಾಸ ಪರ್ಯಂತರ ಗರ್ಭವೃದ್ಧಿ ಜನಿಕ್ರಮ
ನಿರೂಪಣೆ ೫ ೯೧
ಪಂಚಭೂತಗಳ ಗುಣಗಳಿಂದ ಕೂಡಿದ್ದರಿಂದ
ದೇಹವು ಭೌತಿಕವಾಗಿರುತ್ತದೆ ೬ ೯೪
ಶರೀರವು ಜನಿ ಮೊದಲಾದ ಆರು ವಿಕಾರಗಳಿಂದ ಕೂಡಿದೆ ೭ ೯೬
ಶರೀರವು ತೊಂಭತ್ತಾರಂಗುಲ ಉದ್ದವಾಗಿದೆ.
ಮೂಲಾಧಾರ ನಾಭಿ, ಆದರ ಮೇಲೆ ಹೃದಯವು
ಇದು ಜೀವನಿರುವ ಸ್ಥಳ ೮ ೯೮
ಮೂಲಾಧಾರಾದಿ ನವಚಕ್ರ, ದಳ ಮೊದಲಾದವುಗಳ
ಕಥನ ೯ ೧೦೦
ಪಂಚಕೋಶಗಳನ್ನು ತಿಳಿಸುತ್ತಾ ನೀನು ಅವುಗಳಿಗೆ
ವಿಲಕ್ಷಣನೆಂದು ಹೇಳುತ್ತಾರೆ ೧೦ ೧೦೬
ಅವಿದ್ಯಾದಿ ಪಂಚಕ್ಲೇಶಗಳ ವರ್ಣನೆ ೧೧ ೧೧೦
ದಾದಿಯ ಕಥೆಯಂತೆ ಹೇಳಿದ್ದೆಲ್ಲ ಮಿಥ್ಯೆಯಾಗಿದೆ
ಪಿಂಡೋತ್ಪತ್ತಿ ಉಪಸಂಹಾರ ಕಂದ ೧೧೫

ಬನೇ ಗತಿಯು, ಭೂತವಿಕಾರ ಕಥನ

೫) ಭೂತವಿಕಾರ ಕಥನ ಪ್ರತಿಜ್ಞಾ ಕಂದ ೧೧೫
ಭೂಮಿ, ಜಲ, ಅಗ್ನಿ ಈ ಮೂರು ಭೂತಗಳ
ಧರ್ಮ ವರ್ಣನೆ ೧ ೧೧೬
ವಾಯು, ಆಕಾಶ, ಭೂತಗಳ ಧರ್ಮಕಥನ ೨ ೧೧೭
ಪೃಥ್ವಿ ಮೊದಲು ಆಕಾಶ ಮನಸ್ಸುಗಳು ಒಂದರಿಂದ
ಒಂದು ನಾನತ್ವವಾದಂತೆ, ನೀನು ಒಬ್ಬನಿದ್ದರೂ
ಅನೇಕನಾಗಿ ತೋರುವಿ ೩ ೧೧೯
ಸ್ಥೂಲ ಸೂಕ್ಷ್ಮ ಶರೀರಗಳ ಅಧ್ಯಾಸದಿಂದ ನಾನತ್ವ
ಭ್ರಮವಾಗಿದೆ. ನೀನು ನಿಷ್ಕಲ ಸಾಕ್ಷಿಯಾಗಿ ಏಕ
ರೂಪನಾಗಿರುವಿ ೪ ೧೨೦

CC-0. Jangamwadi Math Collection. Digitized by eGangotri

ಅವಿದ್ಯೆಯೇ ಅಂತಃಕರಣ ಚತುಷ್ಟಯ, ಬಿಂದು ನಾದ
ರೂಪಾಗಿ ಮುಂದೆ ನಾಲ್ಕು ವಾಣಿಗಳ ರೂಪಾಗಿರುತ್ತದೆ ೫ ೧೨೩
ಪರಾ, ಪಶ್ಯಂತಿ, ಮಧ್ಯಮಾ, ವೈಖರೀ, ಎಂಬ ನಾಲ್ಕು
ವಾಕ್ಯಗಳು ಇವೇ ಸಂಸಾರಕ್ಕೆ ಕಾರಣಗಳಾಗಿರುತ್ತವೆ. ೬ ೧೨೫
ಸತ್ಯಾಧ್ಯಾಸಾದಿ ನಾಲ್ಕು ಅಧ್ಯಾಸಗಳಿಂದ ಕೂಡಿ
ಜೀವನೆನಿಸಿರುವಿ ೭ ೧೨೬
ಕನಸಿನಂತೆ ಜಗತ್ತೆಲ್ಲವೂ ಮನೋಮಯವಾಗಿದೆ. ೮ ೧೨೯
ಆಯಾ ಜೀವರ ದೃಷ್ಟಿ ಭೇದದಿಂದ ಸೃಷ್ಟಿಯಾದರೂ
ಅನೇಕ ವಿಧವಾಗಿ ತೋರುತ್ತದೆ. ಇದಕ್ಕೆಲ್ಲಾ ಮನವೇ
ಕಾರಣವಾಗಿದೆ. ೯ ೧೩೦
ಗಗನಜವಿಪ್ರನ ಕಥೆಯಂತೆ ಜಗತ್ತು ತನ್ನಲ್ಲಿದ್ದರೂ
ಬಾಧಿಸದು ಎಂದು ಅನೇಕ ದೃಷ್ಟಾಂತಗಳನ್ನು
ಉದಾಹರಿಸುತ್ತಾರೆ. ೧೦ ೧೩೨
ವಿಚಾರಿಸಲು ಮನಸ್ಸು ಸದ್ರೂಪ ಬ್ರಹ್ಮವೇ ಆಗಿರು
ವದು. ಅದು ಆಯಾ ಪದಾರ್ಥಗಳ ಕಲ್ಪನೆಯನ್ನು
ಮಾಡುವದರಿಂದ ಮನಸ್ಸು ಎಂದು ಹೇಳಿಸಿಕೊಳ್ಳು
ತ್ತಿರುವದು ೧೧ ೧೩೮
ಮನಸ್ಸಿನ ಪರ್ಯಾಯ ನಾಮಗಳನ್ನು ಹೇಳುತ್ತಾರೆ ,, ,,
ಇಲ್ಲಿ ವಿಶ್ವರಚನಾ ಭೇದವು ಹೇಳಲ್ಪಟ್ಟಿತು.
ಉಪಸಂಹಾರ ಕಂದ ೧೪೦

೬ನೇ ಗತಿಯು, ಸಂಸಾರದ ರೀತಿಕಥನ

೬) ಈತನೇ ಜೀವನಾದ ಬಳಿಕ ಸಂಸಾರವು ಹೇಗೆ ಬಂತು?
ಎಂದು ಪ್ರಶ್ನೆ ಮಾಡಲು. ವರವಿಪ್ರನಿಗೆ ಶೂದ್ರತ್ವ
ಬಂದಂತೆ, ಈಶನಿಗೆ ಜೀವತ್ವ ಬಂದಿರುವದು ೧ ೧೪೧
ಮೊದಲಿನ ಸೃಷ್ಟಿಯು ಬ್ರಹ್ಮನಿಂದಾಯಿತು. ಬಳಿಕಿನ
ಸೃಷ್ಟಿಯು ಕರ್ಮದಿಂದಾಯಿತು. ಕರ್ಮಕಾರಣ
ಸೃಷ್ಟಿಯು ಕಾರ್ಯವಾಗಿ ಕಾರ್ಯಕಾರಣ ಭಾವದಿಂದ
ಲೋಕವು ದುಃಖಮಯವಾಗಿರುತ್ತದೆ ೨ ೧೪೩
ಮೊದಲು ಬ್ರಹ್ಮನಿಂದ ದೇಹವಾಯಿತು, ಅದರಲ್ಲಿ
ಅಹಂಕಾರ ತೋರಿತು. ಅದರಲ್ಲಿ ಚಿತ್ಪ್ರತಿ ಬಿಂಬಿ
ಸಲು ಜೀವವಾಯಿತು. ಅವನಲ್ಲಿ ಅಹಂ ಇದಂ
ಭಾವನೆ ತೋರಿತು. ಅದೇ ಪೌರುಷವೆನಿಸಿತು.
ಅದರಿಂದ ಕರ್ಮವಾಯಿತು. ಆ ಕರ್ಮವೇ .

CC-0. Jangamwadi Math Collection. Digitized by eGangotri

ಸಂಸಾರಕ್ಕೆ ಕಾರಣವಾಯಿತು ೩ ೧೪೪

ದೇಹದಲ್ಲಿ ನಾನೆನ್ನುವದು ಹೊರಗಿನ ವಿಷಯಗಳಲ್ಲಿ ಇದವೆನ್ನುವದು ತೋರಿತು. ಅದರಿಂದ ಇಷ್ಟಾನಿಷ್ಟ ಗಳು ತೋರಿದವು. ಅವುಗಳಿಂದ ರಾಗದ್ವೇಷಾದಿ ಗಳು ಆದವು. ಅವುಗಳಿಂದ ಗ್ರಹಣ ತ್ಯಾಗಗಳು ಆದವು. ಅವುಗಳಿಂದ ಸಂಸಾರವಾಯಿತು. ಇದನ್ನು
ಬಿಟ್ಟರೆ ನೀನೇ ಈಶನಾಗಿರುವಿ ೪ ೧೪೬

ಇಂದ್ರಿಯಗಳು ವಿಷಯಗಳನ್ನು ಬೆಳಗುತ್ತವೆ. ಮನಸ್ಸು ಅವುಗಳ ಬೆನ್ನುಹತ್ತುವದು. ಅನಂತರ ಇದು ಬೇಕು, ಇದು ಬೇಡ ಎಂದು ಸಂಕಲ್ಪಿಸಿ, ನಾನು ಸುಖೀ, ನಾನು ದುಃಖೀ ಎಂದು ಅಧ್ಯಾಸ ವುಳ್ಳವನಾಗುವನು. ಇದೇ ಭೋಕ್ತೃತ್ವವೆನಿಸು
ವದು. ಇದು ಮಿಥ್ಯೆಯಾಗಿದೆ ೫ ೧೪೮

ಸುಖಿ ದುಃಖಿಯಾಗಿ ಕಾಮಕ್ರೋಧಾದಿಗಳಿಂದ ಕೂಡಿದ ಅಶುದ್ಧ ಮನಸ್ಸನ್ನು, ಶುದ್ಧವಿವೇಕ ಯುಕ್ತ ಮನಸ್ಸಿನಿಂದ, ಕಬ್ಬಿಣದ ಬೇಡಿಯನ್ನು ಕಬ್ಬಿಣದ ಉಳಿಯಿಂದ ಕಡಿವಂತೆ, ತೆಗೆದುಹಾಕಲು;
ನೀನು ಮೊದಲಿದ್ದಂತೆ ಇರುವಿ ಎಂದು ಹೇಳುತ್ತಾರೆ ೬ ೧೫೦

ಭೋಗಾಯತನರೂಪ ಸ್ಥೂಲ ಶರೀರವನ್ನೂ ವಾಸನಾಮಯವಾದ ಸೂಕ್ಷ್ಮ ಶರೀರವನ್ನೂ ಬಿಟ್ಟು ಇವೆರಡಕ್ಕೆ ಸಾಕ್ಷಿಯಾದ ಚಿದ್ರೂಪಪರ ಶರೀರವೇ
ನಾನೆಂದು ತಿಳಿ ೭ ೧೫೨

ಆ ಚಿನ್ಮಾತ್ರ ಸ್ವರೂಪನಾದ ನಿನ್ನನ್ನು ಕಂಡು ಕೆಲವರು ಬ್ರಹ್ಮ, ಪರಶಿವ, ನಿಜಲಿಂಗ, ನಾರಾಯಣ ಪುರುಷ, ಈಶ್ವರ, ಶೂನ್ಯ, ವಿಜ್ಞಾನ, ಸ್ವರೂಪ ವಾಗಿದೆಯೆಂದು ತಿಳಿದ ಹಾಗೆ ಕಲ್ಪನೆಯನ್ನು ಮಾಡು ವರು. ಅವರ ಸಂಕಲ್ಪಕ್ಕೆ ಮೀರಿ ನೀನು
ಚಿನ್ಮಾತ್ರನಿರುವಿ ೮ ೧೫೫

ಆ ನಿನ್ನ ನಿಜವು ಉತ್ಪತ್ತಿ ನಾಶಗಳಿಲ್ಲದೆ. ನಿರ್ಗುಣಾದಿ ನಿರ್ದ್ವಂದ್ವವಾಗಿರುವದು. ಅದರಲ್ಲಿ ಮನಸ್ಸಿಲ್ಲದ್ದರಿಂದ ನೆನಸ ಕನಸುಗಳಿಲ್ಲ. ಮೌಢ್ಯವಿಲ್ಲದ್ದರಿಂದ ಸುಷುಪ್ತಿಯೂ
ಅದಲ್ಲ. ಕಿಂತು, ತುರ್ಯರೂಪಾಗಿದೆ ೯ ೧೫೭

ಸದ್ರೂಪ ಚಿದ್ರೂಪಾತ್ಮನೇ ತಾನೆಂದು ತಿಳಿಯಲು ವಾಸನೆಗಳು ಮೃಗಜಲದಂತೆ ನಾಶವಾಗುವವು. ಹೃದಯಗ್ರಂಥಿಗಳು, ಸಂಶಯಗಳು, ಕರ್ಮರಾಶಿಯು

CC-0. Jangamwadi Math Collection. Digitized by eGangotri

ನಾಶವಾಗುವವು. ಅನಂತರ ನಾನು ಹುಟ್ಟುವೆನೆಂಬ
ಭ್ರಮ ಬುದ್ಧಿರಹಿತನಾಗಿ, ಪ್ರಾರಬ್ಧವಿರುವಪರ್ಯಂತರ
ಜೀವಿಸುತ್ತಾ ಇರುವನು. ಜೀವನ್ಮುಕ್ತನೆನಿಸುವನು ೧೦ ೧೫೯

ಗುರುಗಳು ಶಿಷ್ಯನನ್ನು ಕುರಿತು ಸುಖೇಚ್ಛಾ ವೊದ
ಲಾದ ಎಳು ಭೂಮಿಕೆಗಳು ಇರುತ್ತವೆ. ಅವು ಮುಕ್ತಿಗೆ
ಸೋಪಾನ ಪ್ರಾಯಗಳಾಗಿವೆ. ಅವುಗಳನ್ನು ಅರಿ ೧೧ ೧೬೨

ಆ ಭೂಮಿಕೆಗಳಿಗೆ ಅಧಿಕಾರಿ ಯಾರು? ಅವುಗಳ
ಅಭ್ಯಾಸ ಹೇಗೆ ಮಾಡಬೇಕು? ಎಂಬದಾಗಿ ಶಿಷ್ಯನ
ಪ್ರಶ್ನೆಗಳು ,,
ಬಂಧಮೋಕ್ಷಗಳೆರಡು ಇಲ್ಲಿ ಹೇಳಲ್ಪಟ್ಟವೆ ಕಂದ } ೧೬೪

೭ನೇ ಗತಿಯು, ಸಾಧಕರಸ್ಥಿತಿಕಥನ

೭) ಸಾಧಕರ ಸ್ವರೂಪ, ಸಾಧನಗಳ ಕಥನ ಪ್ರತಿಜ್ಞಾ ಕಂದ ೧೬೫

ಮುಕ್ತಿಯಿಂದ ಪ್ರಯೋಜನವಿಲ್ಲ. ಸಂಸಾರದಲ್ಲಿ
ಸುಖವುಂಟು. ಇಹಪರ ಭೋಗಸುಖಕ್ಕೆ ಸಾಧನ
ವಾದ ಕರ್ಮವೊಂದೇ ಸಾಕು ಎಂಬವನು ರಾಗಿ;
ಇದೆಲ್ಲ ಅನಿತ್ಯವೆಂದು ನಿತ್ಯವಾದ ಮೋಕ್ಷವನ್ನು
ಬಯಸುವವನು ವಿರಾಗಿ; ಹೀಗೆ ರಾಗಿ ವಿರಾಗಿ
ಗಳೆಂದು ಇಬ್ಬರು ಇರುವರು ೧ ೧೬೬

ವಿಧಿ, ಕಾಮ್ಯ, ನಿಷಿದ್ಧ, ನಿತ್ಯ, ನೈಮಿತ್ತಿಕ,
ಪ್ರಾಯಶ್ಚಿತ್ತಗಳೆಂದು ಕರ್ಮವು ಆರು ಪ್ರಕಾರ
ವಾಗಿದೆ. ಅವುಗಳಲ್ಲಿ ಜನ್ಮಾಂತರಕ್ಕೆ ಕಾರಣ
ಗಳಾದ ಕಾಮ್ಯ ನಿಷಿದ್ಧಗಳನ್ನು ಬಿಟ್ಟು, ಉಳಿದ
ಕರ್ಮಗಳನ್ನು ಮುಮುಕ್ಷು ಮಾಡತಕ್ಕದ್ದು.
ಆದರಿಂದ ಚಿತ್ತಶುದ್ಧಿಯಾಗುತ್ತದೆ ೨ ೧೬೯

ಕಾಮ್ಯಕರ್ಮಫಲವಾದ ಸ್ವರ್ಗಸುಖವು, ಸಾತಿಶಯ,
ಕ್ಷಯ, ಪತನಗಳೆಂಬ ತಾಪತ್ರಯ ದುಃಖದಿಂದ
ಕೂಡಿಕೊಂಡಿದೆ. ಆದರಿಂದ ಇಲ್ಲಿ ಹುಟ್ಟಬರುತ್ತಾನೆ,
ಆದ್ದರಿಂದ ಪರದಲ್ಲಿ ಸುಖವಿಲ್ಲ. ೩ ೧೭೨

ಯಾವನೋ ಒಬ್ಬ ಸುಕೃತಿಯು ದುಃಖಚಿರಪದ
ಸುಖವನ್ನು ಪಡೆಯುವದಕ್ಕಾಗಿ ಯತ್ನ ಮಾಡುವನು;
ಈ ಸತಿ ಪುತ್ರಾದಿಗಳಲ್ಲಿ ಸುಖವಿಲ್ಲ; ಪಡೆಯುವ
ಕಾಲಕ್ಕೂ ಉಪಭೋಗ ನಂತರ ದುಃಖಮಯಗಳಾ
ಗಿವೆ. ಮಧ್ಯಕಾಲದಲ್ಲಿ ಮಾತ್ರ ಸುಖದಂತೆ ಭಾಸ
ವಾಗಿ ತೋರುತ್ತವೆ. ಆದ್ದರಿಂದ ಇಹದಲ್ಲಿಯೂ
ಸುಖವಿಲ್ಲ ೪ ೧೭೫

CC-0. Jangamwadi Math Collection. Digitized by eGangotri

ಇಹಲೋಕ ಭೋಗಸುಖಗಳು ತೋರಿ ಅಡಗುತ್ತ
ವೆಂಬ ಬಗ್ಗೆ ಅನೇಕ ದೃಷ್ಟಾಂತಗಳನ್ನು
ಉದಾಹರಿಸುತ್ತಾರೆ ೫ ೧೭೭

ಇಹಪರಭೋಗಗಳಲ್ಲಿ ದೋಷಗಳನ್ನು ಕಂಡು,
ನಾಯಿ ಎಲಬು ಕಚ್ಚಿದಂತೆ ಅವುಗಳಲ್ಲಿ ಸುಖವಿಲ್ಲ
ಎಂದು ತಿಳಕೊಂಡು; ಅತ್ತ ಹೋಗುವ ಮನಸ್ಸನ್ನು
ನಿಗ್ರಹಿಸುತ್ತಾ, ಮೋಕ್ಷವನ್ನು ಬಯಸುವವನೇ
ವಿರಾಗಿ; ಇವನೇ ಭೂಮಿಕೆಗಳಿಗೆ ಅಧಿಕಾರಿ ೬ ೧೭೯

ವಿಷಯಗಳಲ್ಲಿ ದೋಷ ಕಾಣುವದೇ ಬೀಜವು. ಒಂದು
ನಿಮಿತ್ತದಿಂದ ಅವನ್ನು ಬಿಡುವದೇ ರೂಪು, ಬಿಟ್ಟ
ವಿಷಯಗಳನ್ನು ಹಠದಿಂದ ಹಿಡಿಯದಿರುವದೇ
ಕಾರ್ಯ. ಈ ಮೂರು ಬೀಜ, ರೂಪು, ಕಾರ್ಯಗಳಿಂದ
ಕೂಡಿದ ವಿರತಿಯುಳ್ಳಾತನೇ ವಿರಾಗಿಯೆಂದು
ಹೇಳಿಸಿಕೊಳ್ಳುವನು ೭ ೧೮೨

ಈ ವಿಷಯಗಳು ಹಿಂದಕ್ಕೆ ಭೋಗಿಸಿದವೇ ಆಗಿವೆ.
ಪಿಷ್ಟಪಿಷೇಷಣ ವಿಧಿಯಂತೆ ಎಂದು ತಿಳದವನೇ
ವಿರತಿಯಿಂದ ಕೂಡಿದವನು ೮ ೧೮೫

ನಿಜಸುಖವಿಲ್ಲದ ಇಹಪರಭೋಗವೇ ಮೊದಲು
ಗೊಂಡು ಅಜ, ಹರಿ, ಸುರ ಪದವಿಗಳನ್ನು ಪಡೆದರೂ
ಪ್ರಯೋಜನವಿಲ್ಲ ಎಂದು ತಿಳಿದು, ಕಾಮ್ಯನಿಷಿದ್ಧ
ವನು ಬಿಟ್ಟವನೇ ಅಧಿಕಾರಿಯು ೯ ೧೮೭

ವೈರಾಗ್ಯ, ವಿವೇಕ, ಶ್ರವಣ, ಮನನ, ನಿಧಿಧ್ಯಾಸನಾದಿ
ಗಳಿಂದ ದೃಢಾಪರೋಕ್ಷ ಜ್ಞಾನವಾಗುವತನಕ ತನಗೆ
ಸುಖವಿಲ್ಲೆಂದು ತಿಳಿದವನೇ, ಪರಿಪಕ್ವವಾದ ವಿರತಿ
ಯುಳ್ಳವನು ೧೦ ೧೮೯

ಪಾಪಕರ್ಮ ಬಿಡುತ್ತಾ, ನಿಷ್ಕಾಮದಿಂದ ಪುಣ್ಯ
ಕರ್ಮ ಮಾಡುತ್ತಾ ಮೋಹ, ಮತ್ಸರ, ಪರಪೀಡೆ
ಯಿಲ್ಲದೆ, ಒಂದೆರಡು ಸವಿಮಾತುಗಳನ್ನಾಡುತ್ತಾ,
ಇರುವವನೇ ಸುಖೇಚ್ಛು ಭೂಮಿಕಾಭ್ಯಾಸಿಯು ೧೧ ೧೯೧
ಜೀವೇಶ್ವರರನ್ನರಿದು, ಅಭೇದವನ್ನು ತಿಳಿದು ದುಃಖ
ಕೆಡಿಸಿ ನಿತ್ಯಾನಂದವನ್ನು ಪಡೆಯುವನೇ ಯೋಗಿ
ಎನಿಸುವನು ,, ೧೯೩
ಇಲ್ಲಿ ಸಾಧಕನ ಸ್ಥಿತಿಯು ನಿರೂಪಿಸಲ್ಪಟ್ಟಿತು ಕಂದ ೧೯೪

CC-0. Jangamwadi Math Collection. Digitized by eGangotri

೮ನೇ ಗತಿಯು, ಯೋಗರೀತಿ ಕಥನ

೮) ಯೋಗಕ್ರಮ ಕಥನ ಪ್ರತಿಜ್ಞಾ ಕಂದ ೧೯೪

ಯೋಗಕ್ಕೆ ಬೀಜ, ರೂಪು, ಕಾರ್ಯಗಳೆಂದು ಮೂರುಂಟು ೧ ೧೯೬

ಯಮಾದ್ಯಷ್ಟಾಂಗಗಳನ್ನೂ ಅವುಗಳ ಭೇದವನ್ನೂ ಹೇಳುತ್ತಾರೆ ೨ ೧೯೮

ನಿರ್ಗುಣಾಷ್ಟಾಂಗಗಳನ್ನು ನಿರೂಪಿಸುತ್ತಾರೆ ೩ ೨೦೩

ಶ್ರೋತ್ರಿಯು ಬ್ರಹ್ಮನಿಷ್ಠ ಸದ್ಗುರುವನ್ನು ಸೇರಿ, ತನ್ನ ಸ್ವರೂಪ ವಿಚಾರವನ್ನು ಮಾಡುವಂಥವನು, ಎರಡನೇ ಭೂಮಿಕೆಯಲ್ಲಿದ್ದವನು ೪ ೨೦೬

ಜೀವಾತ್ಮ ಪರಮಾತ್ಮರ ಲಕ್ಷಣವನ್ನು ವಿಚಾರಿಸುತ್ತಾ, ಅಭೇದ ಸ್ವರೂಪವೆಂದು ನಿಶ್ಚಯವಾಗಿ ತಿಳಿಯುವದು ವಿಚಾರಣೆಯು ೫ ೨೦೮

ವಿಚಾರ ಕಾಲಕ್ಕೆ ಬಂದ ವಿಘ್ನಗಳನ್ನು ದೂರೀಕರಿಸಿ ಮಹಾವಾಕ್ಯ ವಿಚಾರಪರನಾಗುತ್ತಾನೆ ೬ ೨೧೦

ಭಾಗತ್ಯಾಗ ಲಕ್ಷಣದಿಂದ ತತ್ವಮಸಿ ಮಹಾವಾಕ್ಯದ ವಿಚಾರ ಮಾಡುವದು ೭ ೨೧೨

ಸೋಽಯಂ ದೇವದತ್ತ ಎಂಬ ದೃಷ್ಟಾಂತವನ್ನು ದಾರ್ಷ್ಟಾಂತದಲ್ಲಿ ಕೂಡಿಸಿ ತಿಳಿಯುವದು ೮ ೨೧೫

ಜೀವೇಶ್ವರರೈಕ್ಯದಲ್ಲಿ ಅನೇಕ ದೃಷ್ಟಾಂತಗಳನ್ನು ಉದಾಹರಿಸುತ್ತಾರೆ ೯ ೨೧೭

ಯುಕ್ತಿವಿಚಾರಗಳಿಂದ ದೇಹಾದಿಗಳನ್ನರಿಯುವ ಅರುವೇ ತಾನೆಂದು ನಿಶ್ಚೈಸಿ, ಅಸಂಗ ಸ್ಥಿತಿಯಲ್ಲಿರುವನೆಂದು ಹೇಳುತ್ತಾರೆ ೧೦ ೨೧೯

ಜ್ಞಾನಕ್ಕೆ ಬೀಜ, ರೂಪ, ಕಾರ್ಯಗಳೆಂದು ಮೂರುಂಟು. ಇವುಗಳಿಂದ ಕೂಡಿದವನೇ ಅಸಂಗ ಸ್ಥಿತಿಯಲ್ಲಿರುವನು ೧೧ ೨೨೨

ಮೂರನೇ ಭೂಮಿಕೆಯು ಹೇಗೆ ಉಂಟು? ಎಂಬ ಪ್ರಶ್ನೆ ,, } ೨೨೪
ಅಸಂಗತ್ವ ಕಥನದ ಉಪಸಂಹಾರ ಕಂದ }

೯ನೇ ಗತಿಯು, ಅಸಂಗವು ಎರಡು ರೀತಿಯಾಗಿದೆ

೯) ಸಾಮಾನ್ಯ ವಿಶೇಷ ಅಸಂಗತ್ವ ಕಥನ ಪ್ರತಿಜ್ಞಾ ಕಂದ ೨೨೫

ವಿಚಾರಪರನಿಗೆ ತನ್ನ ಸ್ವರೂಪು ಬುದ್ಧಿಯಲ್ಲಿ

CC-0. Jangamwadi Math Collection. Digitized by eGangotri

ಕೈಯೊಳಗಿನ ರತ್ನದಂತೆ ಅಪರೋಕ್ಷವಾಗಿರುತ್ತ
ದೆಂದು ಹೇಳುತ್ತಾರೆ ೧ ೨೨೬

ತನ್ನ ನಿಜವು ಉತ್ಪಾದ್ಯಾದಿ ನಾಲ್ಕುವಿಧ ಕರ್ಮ
ಫಲಕ್ಕೆ ವಿಲಕ್ಷಣವಾಗಿರುತ್ತದೆಂದು ಸಾಧಕನು
ತಿಳಿಯುತ್ತಾನೆ ೨ ೨೨೭

ಆಭಾಸ ಚೈತನ್ಯಯುಕ್ತ ಅಹಂಕಾರವೇ ಕರ್ತಾ,
ಭೋಕ್ತಾ, ಸಂಸಾರಿಯಾಗಿರುವದಲ್ಲದೆ, ತಾನು
ಮಾತ್ರ ಅದಕ್ಕೆ ಅಧಿಷ್ಠಾನನಾಗಿ ಅಸಂಗನಾಗಿರುವೆ
ನೆಂದು ತಿಳಿಯುವನು ೩ ೨೩೦

ನಿರವಯವಾಕಾಶಕ್ಕೆ ಪಕ್ಷಿವರ್ಗದ ಸಂಸರ್ಗವು ಹೇಗೆ
ಇಲ್ಲವೋ, ಹಾಗೆ ಅಹಂಕಾರಾದಿಗಳ ಸಂಗವು ತನಗಿ
ಲ್ಲೆಂದು ತಿಳಿಯುವದೇ ಸಾಮಾನ್ಯವಾದ
ಅಸಂಗವಾಗಿದೆ ೪ ೨೩೧

ರಜ್ಜು ಸರ್ಪದಂತೆ ತೋರುವ ಜಗತ್ತಿಗೆ, ಜಗತ್ತು,
ಬ್ರಹ್ಮ, ಮಾಯಾ ಇವು ಕಾರಣಗಳು ಆಗಲಾರವು ೫ ೨೩೩
ಮಾಯೋಪಾಧಿಕ ಈಶ್ವರನೂ ಜಗತ್ತಿಗೆ ಕಾರಣನಲ್ಲ ೬ ೨೩೬
ಸಾಂಖ್ಯರಿಂದುಕ್ತ ತ್ರಿಗುಣಾತ್ಮಕ ಪ್ರಕೃತಿಯಾದರೂ
ಜಗತ್ತಿಗೆ ಕಾರಣವಾಗುವದಿಲ್ಲ ೭ ೨೩೭
ಜಗತ್ತು ಇಲ್ಲವೇ ಇಲ್ಲ. ಅವಿಚಾರ ಮೂಲಕ
ಮಾಯಾಮಯವಾಗಿ ಇದ್ದಂತೆ ತೋರುತ್ತಿರುವದು. ೮ ೨೩೯
ಕನಸಿನಂತೆ ಅವಿದ್ಯಾದೃಷ್ಟಿಯೇ ಸೃಷ್ಟಿಯಾಗಿ
ತೋರುತ್ತದೆ. ನಿಜವಲ್ಲ ಎಂದು ತಿಳಿದವನೇ ಸುಖಿ
ಯಾಗಿರುವನು. ಇದೇ ವಿಶೇಷಾಸಂಗವು ೯ ೨೪೧
ಆ ನಿಸ್ಸಂಗ ಸ್ಥಿತಿಯುಳ್ಳವನ ಇರವು ದೋಷರಹಿತ
ಮಾಗಿರುವದೆಂದು ಅನೇಕ ದೃಷ್ಟಾಂತಗಳನ್ನು
ಉದಾಹರಿಸುವರು ೧೦ ೨೪೨
ಮೂರು ಭೂಮಿಕೆಯಿಂದ ಕೂಡಿದವನು ಜಾಗ್ರ
ದವಸ್ಥೆಯುಳ್ಳವನೆಂದು ಹೇಳಿಸಿಕೊಳ್ಳುತ್ತಾನೆ ೧೧ ೨೪೪
ಭೂಮಿಕಾಭ್ಯಾಸಿಯು ಮಧ್ಯದಲ್ಲಿಯೇ ದೇಹವಳಿ
ದರೆ, ಏನಾಗುವನೆಂಬ ಪ್ರಶ್ನೆ
ಎರಡು ಪ್ರಕಾರದ ಅಸಂಗತ್ವವು ಹೇಳಲ್ಪಟ್ಟಿತು. ,, } ೨೪೬
ಉಪಸಂಹಾರ

CC-0. Jangamwadi Math Collection. Digitized by eGangotri

೧೦ನೇ ಗತಿಯು, ನಾಲ್ಕು ಭೂಮಿಕೆ ವಿಚಾರ

೧೦) ೪—೫—೬—೭ ಭೂಮಿಕೆಗಳ ವಿಚಾರವನ್ನು ಕೇಳು
ತ್ತೇನೆಂಬ ಪ್ರತಿಜ್ಞಾ ಕಂದ
ವಿವೇಕ, ವೈರಾಗ್ಯ, ಮುಮುಕ್ಷತ್ವಾದಿ ಸಾಧನಗಳಿಂದ ೨೪೭
ಕೂಡಿದ ಯೋಗಾಭ್ಯಾಸಿಯು ಪಾಪರಹಿತನಾಗಿ
ಪುಣ್ಯದಿಂದ ಪವಿತ್ರನಾಗಿರುವನು

ಯೋಗಾಭ್ಯಾಸಿಯು ಯೋಗಸಿದ್ಧಿಸದೆ ದೇಹವಳಿ
ಯಲು ಕೇವಲ ಪುಣ್ಯ ಪ್ರಭಾವದಿಂದ ಊರ್ಧ್ವ
ಲೋಕಗಳಿಗೆ ಹೋಗಿ, ಅಲ್ಲಿ ಕೆಲವು ಕಾಲ ಸುಖ
ವನ್ನು ಅನುಭವಿಸುತ್ತಾ ಇದ್ದು; ಪುಣ್ಯ ತೀರಲು
ಇಹಲೋಕಕ್ಕೆ ತಿರುಗಿ ಬರುತ್ತಾನೆ ೨ ೨೪೯

ಯೋಗಭ್ರಷ್ಟನು ಶ್ರೀಮಂತರ ಅಥವಾ ಯೋಗಿಗಳ
ಕುಲದಲ್ಲಿ ಜನ್ಮಿಸಿ, ತನ್ನ ಪೂರ್ವವಾಸನಾನುಸಾರ
ಗುರುಗಳನ್ನು ಹೊಂದಿ, ವಿಚಾರ ಮಾಡುತ್ತಾ
ಅಸಂಗ ಭೂಮಿಕೆಯನ್ನು ಹೊಂದುವನು ೩ ೨೫೦

ಆ ಅಸಂಗ ಭೂಮಿಕೆಗಳುಳ್ಳ ಯೋಗಿಯು ಮೊದಲು
ಸಾಧಕ ಸ್ಥಿತಿಯಲ್ಲಿದ್ದಂತೆ, ಜ್ಞಾನಸಿದ್ಧನಾದರೂ
ಸದಾಚಾರ, ಸದ್ಗುಣ, ಸದ್ಗೋಷ್ಟಿಗಳನ್ನು ಬಿಡುವ
ದಿಲ್ಲ. ಪುಣ್ಯಬೀಜವು ಒಂದನೇ ಭೂಮಿಕೆಯಲ್ಲಿ
ಮೊಳಿಕೆಯಾಗುವದು. ಎರಡನೇ ಭೂಮಿಕೆಯಲ್ಲಿ
ಎಲೆಗಳನ್ನು ಬಿಡುವದು. ಮೂರನೇ ಭೂಮಿಕೆಯುಲ್ಲಿ
ಫಲದ್ರೂಪವಾಗುವದು. ಇದು ಯೋಗಿಗೆ ಅನುಭವ
ವಾಗಿದೆ. ಮೂರನೇ ಭೂಮಿಕೆಯಲ್ಲಿದ್ದ ಯೋಗಿಯು ೪ ೨೫೧
ದೇಹತ್ಯಾಗವನ್ನು ಮಾಡಲು; ಗಂಧರ್ವಾದಿಗಳಿಂದ
ಮರ್ಯಾದೆಯನ್ನು ಹೊಂದಿ;ಬೇಕಾದಷ್ಟುದಿವಸವಿದ್ದು
ನಿಷ್ಕಾಮಿಯಾಗಿದ್ದರೆ, ಅಲ್ಲಿಂದ ಅತ್ತೇ ಮುಕ್ತಿಯನ್ನು
ಹೊಂದುವನು. ೫ ೨೫೪

ಜೀವಬ್ರಹ್ಮೈಕ್ಯಜ್ಞಾನದಿಂದ ಮುಕ್ತನಾದವನಿ ಗೆಅಣಿ
ಮಾದಿಗಳು ಪ್ರಾಪ್ತಿಯಾಗಿರುವದು ಎನೂ ಆಶ್ಚರ್ಯ
ವಲ್ಲ. ೬ ೨೫೫

ಜಗತ್ತು ಮಿಥ್ಯೆಯಾಗಿ ತೋರುವದರಿಂದ ವಾಸನೆಗಳು
ಲಯವನ್ನು ಹೊಂದುತ್ತವೆ. ಆದರಿಂದ ಇದು ವಾಸ
ನಾಕ್ಷಯುವೆನಿಸುವದು. ಈ ಭೂಮಿಕೆ ಸ್ವಪ್ನಾವಸ್ಥೆ
ಯೆನಿಸುವದು. ೭,೮ ೨೫೯

CC-0. Jangamwadi Math Collection. Digitized by eGangotri

ಯೋಗಿಯು ಅದ್ವೈತಾನಂದಸ್ವರೂಪವೇತಾನೆಂದು ನಿಶ್ಚಯಿಸಿದ್ದರಿಂದ ಸುಖಮಯನಾಗಿರುವನು. ಇದು ಆನಂದಿನಿಯೆಂಬ ಐದನೆ ಭೂಮಿಕೆಯು. ಇದು ಸುಪ್ತಿ ಅವಸ್ಥೆಯೆಂದು ಹೇಳಲ್ಪಡುತ್ತದೆ. ೯ ೨೬೦

ಆನಂದದಿಂದ ಎದ್ದ ವೃತ್ತಿಯು ಆನಂದ ಸ್ವರೂಪದಲ್ಲಿಯೇ ಮುಳುಗಲು; ಆನಂದರೂಪಬ್ರಹ್ಮವೇ ತಾನಾಗಿ ಚಿತ್ರದ ದೀಪದಂತಿರಲು ಆರನೇಯದಾದ ತುರ್ಯಾವಸ್ಥೆಯೆಂದು ಹೇಳಲ್ಪಡುತ್ತದೆ. ೧೦ ೨೬೨

ಜಲದಲ್ಲಿ ತೆರೆ ಸಂಚರಿಸಿದಂತೆ,ತಾನೆ ತನ್ನಲ್ಲಿ ವ್ಯವಹರಿಸುವನು; ಮತ್ತು ಸಂಪಿಗೆ ಉಂಡಳಿಯಂತೆ ಅವನ ಪ್ರಾರಬ್ಧವು ತೀರಲು, ವಾಕ್ಮನಸ್ಸುಗಳಿಗೆ ಅತೀತವಾದ ನಿಜವೇ ತಾನಾಗಿರುವನು. ಇದು ತುರ್ಯಾತೀತವಾದ ಏಳನೇ ಭೂಮಿಕೆಯೆನಿಸುತ್ತದೆ. ೧೧ ೨೬೪

ಪರಮಾತ್ಮನೊಡನೆ ಬೆರೆತವನು ಹೇಗಿರುವನೆಂಬ ಪ್ರಶ್ನೆಯು ಈಗತಿಯಲ್ಲಿ ನಾಲ್ಕರಿಂದ ಏಳರವರೆಗೆ ನಾಲ್ಕುಭೂಮಿಕೆ ಕಥನ ಸಮಾಪ್ತಿ ಕಂದ } ೨೬೮

೧೧ನೇ ಗತಿಯು, ಜೀವನ್ಮುಕ್ತನ ಚರಿತ್ರ

೧೧) ಬ್ರಹ್ಮನಿಷ್ಠನ ಚಾರಿತ್ರ ಕಥನ ಪ್ರತಿಜ್ಞಾ ಕಂದ ೨೬೯

ಕಾಲತ್ರಯ ಚಿಂತೆಯಿಲ್ಲದೆ ಸ್ವರೂಪಸುಖದಿಂದ ಯೋಗಿಯು; ಸ್ಫಟಿಕ ಮಣಿಯಂತೆ ಎಲ್ಲರಿಗೂ ಅವರ ೧,೨
ವರಂತೆ ತೋರುತ್ತಿರುವನೆಂದು ಹೇಳುತ್ತಾರೆ. ೩,೪,೫ ೨೭೫

ಮುಕ್ತನು ಮುಕ್ತಿಸ್ವರೂಪವಾದ ತುರ್ಯಾವಸ್ಥೆಯಲ್ಲಿರುವನು. ಆದರಿಂದ ಜನ್ಮಾಂತರ ಸುದ್ದಿಯನ್ನು ಹೇಳಬಹುದು. ೬,೭,೮,೨೮೦

ಶ್ರೀ ಗುರುಗಳಿಂದ ಉಪದೇಶವನ್ನು ಪಡೆದ ಶಿಷ್ಯನು "ಹೇ ಗುರುವೇ! ನೀನು ನನ್ನ ನಿಜವನ್ನು ಅರುಹಿದ್ದರಿಂದ ನಾನು ಜನನಮರಣರೂಪ ಭವಸಮುದ್ರವನ್ನು ದಾಟಿದೆನು. ಶಿವಸುಖವನ್ನು ಹೊಂದಿದೆನು. ನಿನ್ನ ಉಪಕಾರ ತೀರದು. ಇದಕ್ಕೆ ಬೇರೊಂದು ಪ್ರತ್ಯುಪಕಾರವಿಲ್ಲ", ಎಂದು ತನಗಾದ ಹರ್ಷವನ್ನು ನಿವೇದಿಸುತ್ತಾ ಸುಮ್ಮನಾದನು. ೯,೧೦,೧೧ ೨೮೫

CC-0. Jangamwadi Math Collection. Digitized by eGangotri

ಶ್ರೀ ಶಂಭುಲಿಂಗಾಯನಮಃ

ಶ್ರೀಮನ್ನಿಜಗುಣ ಶಿವಯೋಗಿಗಳಿಂದ ವಿರಚಿತವಾದ

ಪರಮಾರ್ಥ ಗೀತೆ

ಪ್ರಥಮ ಗತಿ

ಪ್ರತಿಜ್ಞಾದಿ ನವಕಂದ

ಶ್ರೀಮನ್ನಿಜಗುಣ ಶಿವಯೋಗಿಗಳು, ಈ ಕಂದದಲ್ಲಿ ತಮ್ಮಿಂದ ವಿರಚಿತ ವಾದ ಪರಮಾರ್ಥಗೀತೆಯಲ್ಲಿದ್ದ ವಿಷಯವು ಸ್ವಕಪೋಲಕಲ್ಪಿತವಲ್ಲವೆಂದೂ, ಇದು ಸಾಂಪ್ರದಾಯ ಸಿದ್ಧವಾದದ್ದೆಂದೂ ಮತ್ತು ಈ ಗ್ರಂಥ ಕರ್ತೃತ್ವದ ಅಭಿಮಾನವು ತಮಗಿಲ್ಲವೆಂದೂ, ಪ್ರತಿಪಾದನ ಮಾಡುತ್ತಾರೆ.

ಪ್ರತಿಜ್ಞಾ ಕಂದ

ಶ್ರೀಗುರು ನಿಜಶಿಷ್ಯಂಗನು|
ರಾಗಂ ಮಿಗೆ ಮುಕ್ತಿಮಾರ್ಗಮಂ ತಿಳುಪಿದನದ ||
ನೀಗಾ ನಿಂತೀ ಕನ್ನಡ |
ಮಾಗಿರೆ ಸಲೆ ಶಂಭುಲಿಂಗ ದೊಲವಿಂದುಸುರ್ವೆಂ ||೧||

ಟೀಕಾ:- ಶ್ರೀಗುರು=ಬ್ರಹ್ಮವಿದ್ಯೆಯುಳ್ಳ ಸದ್ಗುರುನಾಥನು, ನಿಜಶಿಷ್ಯಂಗೆ= ತನ್ನಲ್ಲಿ ಶ್ರದ್ಧಾಭಕ್ತಿಯುಕ್ತನಾದ ಶಿಷ್ಯನಿಗೆ, ಅನುರಾಗಂ=ಗುರುವಿನ ಪ್ರೀತಿಯು, ಮಿಗೆ=ಹೆಚ್ಚಾಗಲು, ಮುಕ್ತಿ ಮಾರ್ಗಮಂ=ಮೋಕ್ಷವನ್ನು ಹೊಂದುವ ದಾರಿ ಯನ್ನು, ತಿಳುಪಿದನು=ಹೇಳಿದನು, ಅದನು=ಆ ಮೋಕ್ಷ ಮಾರ್ಗದ ರೀತಿ

CC-0. Jangamwadi Math Collection. Digitized by eGangotri

ಯನ್ನು, ಈಗ=ಸದ್ಯತ್ಕಾಲದಲ್ಲಿ, ಆನು=ಶ್ರೀಮನ್ನಿಜಗುಣ ಶಿವಯೋಗಿಯಾದ ನಾನು, ಇಂತು=ಮುಂದೆ ಹೇಳುವ ಪ್ರಕಾರ, ಕನ್ನಡಂ=ಕರ್ನಾಟಕ ಭಾಷಾ ರೂಪವು, ಆಗಿರೆ=ಆಗಿರುವಹಾಗೆ, ಸಲೆ=ಚನ್ನಾಗಿ, ಶಂಭುಲಿಂಗದ=ನಮ್ಮೆಲ್ಲರಿಗೂ ಸೌಖ್ಯವನ್ನು ಕೊಡುವಂಥ ಪರಮಾತ್ಮನ, ಒಲವಿಂದ=ಕೃಪೆಯಿಂದ, ಉಸುರ್ವೆಂ=ಹೇಳುವೆನು.

ತಾತ್ಪರ್ಯ:- ಜ್ಞಾನ, ಐಶ್ವರ್ಯ, ಶಕ್ತಿ, ಬಲ, ವೀರ್ಯ ತೇಜಗಳೆಂಬ ಷಡ್ಗುಣೈಶ್ವರ್ಯಯುಕ್ತನಾಗಿಯೂ, ಶಾಂತಿ, ದಾಂತಿ, ನಿರಪೇಕ್ಷತ್ವ, ದಯಾ ಮೊದಲಾದ ಸದ್ಗುಣಶೀಲನೂ, ಆದವನೇ ಸದ್ಗುರುನಾಥನೆಂದು ಹೇಳಲ್ಪಡುವನು, ಮತ್ತು ಕೈ, ಕಾಲು, ಕಣ್ಣು, ಕಿವಿ, ಮೂಗು ಮೊದಲಾದ ಅವಯವಗಳಿರುವದರಿಂದಲೂ, ನಮ್ಮಂತೆ ಸ್ನಾನ, ಪಾನ, ಭೋಜನಾದಿ ವ್ಯವಹಾರಗಳನ್ನು ಮಾಡುವದರಿಂದಲೂ, ಗುರುನಾಥನನ್ನು ಮನುಷ್ಯನೆಂದು ತಿಳಿಯದೆ, ಆ ಗುರುವಿನಲ್ಲಿ 'ಭರ್ಗೋ ಸಾಕ್ಷಾತ್ ನರಾಕೃತಿ' ಪರಮಾತ್ಮನೇ ಮನುಷ್ಯಾಕಾರನಾಗಿ ಪ್ರತ್ಯಕ್ಷನಾಗಿದ್ದಾನೆಂದು ತಿಳಿದು, ಸದ್ಭಾವ ಭಕ್ತಿಯುಳ್ಳವನು ಯಾವನೋ, ಅವನೇ ನಿಜಶಿಷ್ಯನೆನಿಸುವನು. ಅಥವಾ ಗುರುಗಳು ಶಿಷ್ಯನನ್ನು ಎಷ್ಟು ಹೊಡೆದರೂ ಬೈದರೂ ಆ ಗುರುಗಳನ್ನು ಬಿಟ್ಟು ಹೋಗದೆ, ಗುರುಭಕ್ತ ಭಾಂಡಾರಿ, ಪೈಲ ಮೊದಲಾದವರಂತೆ ಹೊಂದಿಕೊಂಡಿದ್ದರೆ, ಅವನು ನಿಜಶಿಷ್ಯನೆಂದು ಹೇಳಲ್ಪಡುವನು. ಆದರೆ ಮಂಗವು ಮರಿಯನ್ನು ಬಿಟ್ಟರೂ, ಮರಿಯು ಮಂಗವನ್ನು ಬಿಡುವದಿಲ್ಲ, ಕಿಂತು, ಅದನ್ನು ಅಪ್ಪಿಕೊಂಡೇ ಇರುವಂತೆ, ಗುರುಗಳು ಶಿಷ್ಯನನ್ನು ಬಿಟ್ಟರೂ ಶಿಷ್ಯನು ಗುರುಗಳನ್ನು ಬಿಡುವದಿಲ್ಲ. ಇದು ಮಂಗ ಮರಿಯ ನ್ಯಾಯವೆಂದು ಹೇಳಲ್ಪಡುತ್ತದೆ. ಬೆಕ್ಕಿನ ಮರಿಯು ಬೆಕ್ಕನ್ನು ಬಿಟ್ಟು ಅತ್ತಿತ್ತ ಹೋಗಲು, ಬೆಕ್ಕು ಅದನ್ನು ಬಿಡದೆ ಬಾಯಿಂದ ಹಿಡಿದು ಅದನ್ನು ರಕ್ಷಣೆ ಮಾಡುವಂತೆ, ಶಿಷ್ಯನು ಗುರುಗಳನ್ನು ಬಿಟ್ಟರೂ, ಗುರುಗಳು ಶಿಷ್ಯನನ್ನು ಬಿಡುವದಿಲ್ಲ. ಇದು ಬೆಕ್ಕು ಮರಿಯ ನ್ಯಾಯವೆಂದು ಹೇಳಲ್ಪಡುತ್ತದೆ. ಹೇಗಿದ್ದರೂ ಇರಲಿ; ಅರ್ಥಾತ್ ಗುರುವಿನ ಪ್ರೀತಿಯನ್ನು ಸಂಪಾದಿಸಿಕೊಂಡವನೇ ನಿಜಶಿಷ್ಯನೆಂದು ಹೇಳಿಕೊಳ್ಳುವನು, ಇಂಥಾ ಶಿಷ್ಯನು ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕಗಳೆಂಬ ಮೂರು ತಾಪಗಳಿಂದ ಬೆಂದು, ಸದ್ಗುರುನಾಥನಿಗೆ ಶರಣಾಗತನಾಗಲು, ಕಿಚ್ಚಿನಲ್ಲಿ ಬಿದ್ದ ಕೂಸನ್ನು ತಾಯಿಯು ದಯೆಯಿಂದ ಹೇಗೆ ತೆಗೆಯುವಳೋ, ಹಾಗೆ ಗುರುಗಳು ಶಿಷ್ಯನನ್ನು ದುಃಖದಿಂದ ಪಾರುಮಾಡುತ್ತಾರೆ. ಅಥವಾ ಗುರುವಿನಿಂದ ಆತ್ಮ ಜ್ಞಾನವನ್ನು ಪಡಕೊಂಡು ಕೃತಾರ್ಥನಾಗಬೇಕೆಂಬ ಶಿಷ್ಯನ ಲವಲವಿಕೆಯನ್ನು ಕಂಡು, ಗುರುಗಳು ಮುಕ್ತಿಯ ದಾರಿಯನ್ನು ತೋರಿಸಿದರೆಂಬ ಅಭಿಪ್ರಾಯವು. ಹಾಗಾದರೆ, ಈ ಮೋಕ್ಷಮಾರ್ಗವನ್ನು ಯಾವ ಗುರುಗಳು ಯಾವ ಶಿಷ್ಯನಿಗೆ ತಿಳಿಸಿದರು? ಎಂದು ಯಾರಾದರೂ ಇಲ್ಲಿ ಪ್ರಶ್ನೆ

CC-0. Jangamwadi Math Collection. Digitized by eGangotri

ವನ್ನು ಮಾಡಿದರೆ, ಶ್ರೀ ವಸಿಷ್ಠ ಗುರುಗಳು ಯೋಗ್ಯಶಿಷ್ಯನಾದ ಶ್ರೀ ರಾಮಚಂದ್ರನಿಗೆ ಮೋಕ್ಷಮಾರ್ಗವನ್ನು ಉಪದೇಶಿಸಿದರೆಂದು ಹೇಳಬೇಕು. ಯಾಕೆಂದರೆ, ಇದೇ ಗ್ರಂಥದಲ್ಲಿ ಮುಂದೆ "ಕೇಳಿಲೆ ವಾಸಿಷ್ಠಾದಿಗಳಲ್ಲಿ। ಪೇಳಿದ ತತ್ವಾರ್ಥವನಿಂದಿಲ್ಲಿ॥" ಎಂದು ಹೀಗೆ ಹೇಳಿರುವದರಿಂದ ಭಗವಾನ್ ವಸಿಷ್ಠ ಶ್ರೀ ರಾಮಚಂದ್ರರನ್ನೇ ಗುರುಶಿಷ್ಯರನ್ನಾಗಿ ಗ್ರಹಣಮಾಡಬೇಕಾಗುತ್ತದೆ. ಯೋಗವಾಸಿಷ್ಠದಲ್ಲಿ ವಸಿಷ್ಠರು ಶ್ರೀ ರಾಮಚಂದ್ರನಿಗೆ ಸಂಸ್ಕೃತ ಭಾಷೆಯಿಂದ ಮೋಕ್ಷಮಾರ್ಗವನ್ನು ಉಪದೇಶ ಮಾಡಿದರು. ಆದರೆ, ವರ್ತಮಾನಕಾಲದಲ್ಲಿರುವ ಮುಮುಕ್ಷುಗಳು ಸಂಸ್ಕೃತಭಾಷಾ ರಹಿತರಾದುದರಿಂದ ಆ ಯೋಗವಾಸಿಷ್ಠ ಗ್ರಂಥವನ್ನು ಓದಿ, ಮೋಕ್ಷವನ್ನು ಹೊಂದುವದಕ್ಕೆ ಅಸಮರ್ಥರಾಗಿರುವದನ್ನು ಕಂಡು, ಶ್ರೀಮನ್ನಿಜಗುಣ ಶಿವಯೋಗಿಯಾದ ನಾನು, ಆ ಮೋಕ್ಷ ಮಾರ್ಗವನ್ನೇ ಮುಂದೆ ಗ್ರಂಥದಲ್ಲಿ ಹೇಳುವ ಪ್ರಕಾರ ಕರ್ನಾಟಕ ಭಾಷಾರೂಪವಾಗಿರುವ ಹಾಗೆ, ಅಂತರ್ಯಾಮಿಯಾದ ಶಂಭುಲಿಂಗೇಶ್ವರನ ಕೃಪೆಯಿಂದ ಚನ್ನಾಗಿ ಪ್ರತಿಪಾದನ ಮಾಡುತ್ತೇನೆ.

ಎಂದು ಹೀಗೆ ಇಲ್ಲಿ ಶ್ರೀಮನ್ನಿಜಗುಣ ಶಿವಯೋಗಿಗಳು ಗ್ರಂಥಾರಂಭದಲ್ಲಿ ಪ್ರತಿಜ್ಞೆಯನ್ನು ಮಾಡಿದ್ದರಿಂದ ಏನು ಹೇಳಿದಂತಾಯಿತು? ಅಂದರೆ, ನಿಜಗುಣರು ತಮ್ಮ ಸ್ವಕಪೋಲಕಲ್ಪನೆಯಿಂದ ಪರಮಾರ್ಥಗೀತೆಯನ್ನು ರಚನೆ ಮಾಡಿರುತ್ತಾರೆ. ಅದನ್ನು ನಾವು ಏಕೆ ನೋಡಬೇಕು? ಎಂದು ಯಾರಾದರೂ ಅನ್ನಬಹುದು. ಆದರೆ, ವಾಸಿಷ್ಠ ಗ್ರಂಥದ ತಾತ್ಪರ್ಯವನ್ನೇ ಇಲ್ಲಿ ನಾನು ಹೇಳುತ್ತೇನೆ ಎಂದು ಬರೆದಿರುವದರಿಂದ, ಈ ಗ್ರಂಥವು ಸ್ವಕಪೋಲಕಲ್ಪಿತವಲ್ಲ. ಕಿಂತು, ವಸಿಷ್ಠಾದಿ ಮಹರ್ಷಿಗಳ ಸಾಂಪ್ರದಾಯ ಸಿದ್ಧವಾದದ್ದೆಂದು ಹೇಳಿದಂತಾಯಿತು. ಮತ್ತು 'ಶಂಭುಲಿಂಗದೊಲವಿಂದುಸುರ್ವೆಂ' ಎಂದು ಅನ್ನೋಣದರಿಂದ, ಗ್ರಂಥಕರ್ತರಾದ ಶ್ರೀಮನ್ನಿಜಗುಣ ಶಿವಯೋಗಿಗಳಿಗೆ ಗ್ರಂಥಕರ್ತೃತ್ವದ ಅಭಿಮಾನವು ಇದ್ದಿಲ್ಲೆಂದು ಹೇಳಿದಂತಾಯಿತು. ಮತ್ತು ತಮ್ಮ ಇಷ್ಟದೇವತೆಯಾದ 'ಶಂಭುಲಿಂಗ' ಎಂಬ ನಾಮವನ್ನು ಪ್ರಯೋಗಮಾಡಿದ್ದರಿಂದ, ವಸ್ತುನಿರ್ದೇಶರೂಪ ಮಂಗಲವನ್ನೂ ಮಾಡಿದಂತಾಯಿತು. ಇದರಿಂದ ಮಂಗಲತ್ರಯ ಫಲವನ್ನು ಪ್ರತಿಪಾದನ ಮಾಡಿದ್ದಲ್ಲದೆ, ನಿಜಗುಣರು ನಾಸ್ತಿಕರು ಗ್ರಂಥಾರಂಭದಲ್ಲಿ ಮಂಗಲವನ್ನೇ ಮಾಡಿಲ್ಲ. ಆದ್ದರಿಂದ ಅವರ ಗ್ರಂಥದಲ್ಲಿ ನಾವೇಕೆ ಪ್ರವೃತ್ತರಾಗಬೇಕು? ಎಂದು ಅನ್ನುವಂಥಾ ಆಸ್ತಿಕರ ಸಂಶಯವನ್ನೂ ಕಳೆದಂತಾಯಿತು.

ಅಧಿಕಾರಿ ಲಕ್ಷಣ

ಬಳಿಕ ಮಲವಿಕ್ಷೇಪ ದೋಷಗಳನ್ನು ಕಳಕೊಂಡು ನಿರ್ಮಲಾಂತಃಕರಣವುಳ್ಳವನಾಗಿ, ಶಮದಮಾದಿ ಸದ್ಗುಣಗಳಿಂದ ಕೂಡಿದವನೇ ಈ ಗ್ರಂಥಕ್ಕೆ ಅಧಿಕಾರಿಯೆಂದು ಪ್ರತಿಪಾದನಮಾಡುತ್ತಾರೆ.

CC-0. Jangamwadi Math Collection. Digitized by eGangotri

ಮುನ್ನವೆ ಭಕ್ತಿ ಕ್ರಿಯೆಯಿಂ ।
ದನ್ನೆರೆ ಪರಿಶುದ್ಧವಾದ ಬುದ್ಧಿಯನುಳ್ಳ ಸ ।
ಮುನ್ನತ ಸದ್ಗುಣಗಣ ಸಂ ।
ಪನ್ನರ್ಗೆ ನಿಜಸ್ವರೂಪ ಮಿದರೊಳ್ಸಾಧ್ಯಂ । ॥೨॥

ಟೀ:— ಮುನ್ನವೆ=ಗುರುಶಾಸ್ತ್ರಗಳಿಗೆ ಶರಣುಹೋಗುವದಕ್ಕಿಂತ ಪೂರ್ವದಲ್ಲಿ, ಭಕ್ತಿಕ್ರಿಯೆಯಿಂದಂ=ಕರ್ಮೋಪಾಸನೆಗಳಿಂದ, ನೆರೆ=ಚನ್ನಾಗಿ, ಪರಿಶುದ್ಧಮಾದ=ಅತ್ಯಂತನಿರ್ಮಲವಾದ, ಬುದ್ಧಿಯನುಳ್ಳ=ಅಂತಃಕರುಣವುಳ್ಳಂಥಾ, ಸಮುನ್ನತ=ಬಹಳ ಸರ್ವೋತ್ಕೃಷ್ಟಗಳಾದ, ಸದ್ಗುಣಗಣ=ಶಮದಮಾದಿ ಗುಣಗಳ ರಾಶಿಯಿಂದ, ಸಂಪನ್ನರ್ಗೆ=ಯುಕ್ತರಾದವರಿಗೆ, ನಿಜಸ್ವರೂಪಂ=ತಮ್ಮ ಸಚ್ಚಿದಾನಂದ ಸ್ವರೂಪವು, ಇದರೊಳ್=ಈ ಪರಮಾರ್ಥಗೀತೆಯಲ್ಲಿ, ಸಾಧ್ಯಂ=ಪ್ರಾಪ್ತಿಯಾಗುವದು.

ತಾತ್ಪರ್ಯ:— ಈ ಗ್ರಂಥದಲ್ಲಿ ಮುಖ್ಯವಾಗಿ ಆತ್ಮಜ್ಞಾನವೇ ಪ್ರತಿಪಾದನ ಮಾಡಲ್ಪಡುತ್ತದೆ. ಆದ್ದರಿಂದ ಸರ್ವರೂ ಈ ಗ್ರಂಥಕ್ಕೆ ಅಧಿಕಾರಿಗಳಾಗಲಾರರು. ಹಾಗಾದರೆ, ಈ ಗ್ರಂಥಕ್ಕೆ ಅಧಿಕಾರಿಗಳು ಯಾರು ? ಅಂದರೆ, ಮಲಿನ ಜಲದಲ್ಲಿ ಸೂರ್ಯನ ಪ್ರತಿಬಿಂಬವು ಬೀಳುವದಿಲ್ಲ. ಚಂಚಲವಾದ ಜಲದಲ್ಲಿ ಬಿದ್ದರೂ, ಅದು ಸ್ಪಷ್ಟವಾಗಿ ಕಾಣಿಸುವದಿಲ್ಲ. ಕಿಂತು ಸ್ವಚ್ಛ ಮತ್ತು ಚಲನವಲನವಿಲ್ಲದ ಜಲದಲ್ಲಿ ಬಿದ್ದ ಸೂರ್ಯನ ಪ್ರತಿಬಿಂಬವು ಚನ್ನಾಗಿ ಹೊಳೆಯುತ್ತದೆ. ಈ ದೃಷ್ಟಾಂತದಂತೆ, ಈ ಶಾಸ್ತ್ರಕ್ಕೂ ಈ ಶಾಸ್ತ್ರವನ್ನು ಪದೇಶಿಸುವ ಗುರುವಿಗೂ ಶರಣಾಗತನಾಗುವದಕ್ಕಿಂತ ಮೊದಲೇ ಕರ್ಮಕಾಂಡದಿಂದ ಹೇಳಲ್ಪಟ್ಟ ಪ್ರಕಾರ ನಿಷ್ಕಾಮ ಪುಣ್ಯಕರ್ಮಗಳನ್ನು ಮಾಡಿ ಅಂತಃಕರಣದಲ್ಲಿದ್ದ ಮಾಲಿನ್ಯದೋಷವನ್ನೂ, ಆಮೇಲೆ ಉಪಾಸನಾಕಾಂಡದಿಂದ ಹೇಳಲ್ಪಟ್ಟ ಪ್ರಕಾರ ಪರಮಾತ್ಮದಲ್ಲಿ ಅನನ್ಯಪ್ರೇಮರೂಪ ಭಕ್ತಿರಸದಿಂದ ಮನಸ್ಸಿನ ಚಾಂಚಲ್ಯ ದೋಷವನ್ನೂ ಕಳಕೊಂಡು ಸ್ವಚ್ಛ ಮನಸ್ಸುಳ್ಳವರೇ ಈ ಗ್ರಂಥಕ್ಕೆ ಅಧಿಕಾರಿಗಳಾಗುತ್ತಾರೆ. ಆದರೆ 'ನೆರೆ ಪರಿಶುದ್ಧ ಬುದ್ಧಿಯನುಳ್ಳ' ಇಲ್ಲಿ ಸ್ವಚ್ಛಾಂತಃಕರಣಕ್ಕೆ 'ನೆರೆ' ಚನ್ನಾಗಿ ಎಂಬ ಅರ್ಥವುಳ್ಳ ವಿಶೇಷವನ್ನು ಯಾಕೆ ಕೊಟ್ಟರು ? ಅಂದರೆ ಗಿಡವನ್ನು ಕಡಿದು ಬೇರನ್ನಿಟ್ಟರೆ ಅದು ಮತ್ತೆ ಬೆಳೆದು ವೃಕ್ಷವಾಗುತ್ತದೆ. ಬೇರನ್ನು ಕಿತ್ತೊಗೆದರೆ ಅದು ಎಂದೂ ಬೆಳೆಯುವದಿಲ್ಲ ಹೇಗೋ, ಹಾಗೇ ಕರ್ಮೋಪಾಸನೆಗಳಿಂದ ಮಲವಿಕ್ಷೇಪಗಳನ್ನು ಕಳೆದು ಅವುಗಳ ಸಂಸ್ಕಾರ ಮಾತ್ರ ಉಳಿದರೆ, ಅದು ಮತ್ತೆ ಬೆಳೆದು ಅಂತಃಕರಣವನ್ನು ದೋಷಯುಕ್ತವಾಗಿ ಮಾಡುತ್ತದೆ. ಆದ್ದರಿಂದ ಆ ಮಲವಿಕ್ಷೇಪಗಳ ಸಂಸ್ಕಾರವೂ ಕೂಡಾಉಳಿಯದಂತೆ ನಾಶ

CC-0. Jangamwadi Math Collection. Digitized by eGangotri

ಮಾಡಬೇಕೆಂಬ ಅಭಿಪ್ರಾಯವು. ಮತ್ತು ನಿರ್ಮಲವಾದ ಸ್ಥಾನದಲ್ಲಿ ಬ್ರಹ್ಮ ಚಾರಿಯು ವಾಸಮಾಡುವಂತೆ, ಚನ್ನಾಗಿ ಸ್ವಚ್ಛವಾದ ಅಂತಃಕರಣದಲ್ಲಿಯೇ ಸದ್ಗುಣಗಳು ವಾಸಮಾಡುತ್ತವೆ. ಅವು ಯಾವವು? ಅಂದರೆ ಯಮನಿಯಮಾದಿ ಗಳಲ್ಲಿ ಹೇಳಲ್ಪಟ್ಟ ಇಪ್ಪತ್ತು ಗುಣಗಳು, ಶಮಾದಿಷಟ್‌ಸಂಪತ್ತಿ, ಮುಮುಕ್ಷತ್ವ, ವಿವೇಕ, ವೈರಾಗ್ಯಾದಿ ಗುಣಗಳು. ಈ ಗುಣಗಳಿಂದ ಕೂಡಿಕೊಂಡಿರುವ ಸಜ್ಜನ ರಿಗೆ ಸರ್ವೋಪಾಧಿಗಳಿಂದ ಬಿಡಲ್ಪಟ್ಟ ಸಚ್ಚಿದಾನಂದವಾದ ತಮ್ಮ ಸ್ವರೂಪವು, ಈ ಪರಮಾರ್ಥ ಗೀತೆಯನ್ನು ಗುರುಮುಖದಿಂದ ಶ್ರವಣಮಾಡೋಣದರಿಂದ ಪ್ರಾಪ್ತವಾಗುತ್ತದೆ. ಅಂದರೆ, ಅಪ್ರಾಪ್ತವಾದ ಸ್ವರ್ಗದ ಪ್ರಾಪ್ತಿಯಂತೆ ಅಲ್ಲ. ಹಾಗಾದರೆ, ತನ್ನ ಸ್ವರೂಪವು ಸ್ವರ್ಗಫಲದಂತೆ ಅನಿತ್ಯವೆನ್ನಬೇಕಾಯಿತು. ಇದಕ್ಕೊಡಂಬಟ್ಟರೆ, ಆತ್ಮನು ನಿತ್ಯನೆಂಬ ಶ್ರುತಿಗೆ ವಿರೋಧವಾಗುತ್ತದೆ. ಆದ್ದ ರಿಂದ, ಒಬ್ಬ ಸ್ತ್ರೀಯಳು ಸ್ನಾನಮಾಡುತ್ತಿರುವಾಗ ತನ್ನ ಮೂಗಿನೊಳಗಿರುವ ನತ್ತನ್ನು ತೆಗೆದು ಕೊರಳೊಳಗಿರುವ ಸರಿಗೆಯಲ್ಲಿ ಸಿಗಿಸಿ, ಸ್ನಾನ ಭೋಜನಾದಿ ಗಳನ್ನು ಮಾಡುವಷ್ಟರಲ್ಲಿ ನತ್ತನ್ನು ಮರತಳು. ಅತ್ತಿತ್ತ ಎಷ್ಟು ಹುಡುಕಿದರೂ ಆ ನತ್ತು ಸಿಗಲಿಲ್ಲ. ಆಗ ಆವಳು ಒಬ್ಬ ಜೋತಿಷ್ಯನ ಬಳಿಗೆ ಹೋಗಿ ನಾಲ್ಕು ಆಣೆ ದಕ್ಷಿಣೆಯನ್ನಿಟ್ಟು,–"ನನ್ನ ನತ್ತನ್ನು ಯಾರು ಕದ್ದಿರುವರು?" ಎಂದು ಪ್ರಶ್ನೆಮಾಡಿ ದಳು. ಜೋತಿಷ್ಯನು ಆಕೆಯ ಕೊರಳಲ್ಲಿ ಜೋತಾಡುತ್ತಿರುವ ನತ್ತನ್ನು ಕಂಡು, ಸ್ವಲ್ಪ ಹೊತ್ತು ಹೊತ್ತಿಗೆಯನ್ನು ಅತ್ತಿತ್ತ ತೆಗೆದು ಗಣಿತಹಾಕಿದಂತೆ ಮಾಡಿ ಮುಂದೆ ಕ್ಷಣಹೊತ್ತಿನಮೇಲೆ ಆ ಸ್ತ್ರೀಯಳೆದುರಿಗೆ ಒಂದು ದೊಡ್ಡ ಕನ್ನಡಿಯನ್ನು ಹಿಡಿದನು. ಅದರಲ್ಲಿ ತನ್ನ ಪ್ರತಿಬಿಂಬವನ್ನು ನೋಡುವಷ್ಟರಲ್ಲಿ ಕೊರಳೊಳಗೆ ಜೋತಾಡುವ ನತ್ತನ್ನು ಕಂಡು, ಹಾ ನನ್ನ ನತ್ತು ಸಿಕ್ಕಿತು, ಎಂದು ಬಹಳೇ ಸಂತೋಷಪಟ್ಟಳು. ಆದರೆ ಆ ನತ್ತು ಇದ್ದದ್ದೇ ಸಿಕ್ಕಿತು ಹೊರತು ಹೊಸದಾಗಿ ಸಿಗಲಿಲ್ಲ. ಈ ದೃಷ್ಟಾಂತದಂತೆ, ಶಿಷ್ಯನು ತನ್ನ ಸ್ವರೂಪವನ್ನು ಮರೆತು ಸದ್ಗುರುವೆಂಬ ಜೋತಿಷ್ಯನ ಬಳಿಗೆ ಹೋಗಿ, ಸಾಧನ ಚತುಷ್ಟಯವೆಂಬ ದಕ್ಷಿಣೆಯನ್ನಿಟ್ಟು ಕೇಳಲು, ಸದ್ಗುರುನಾಥನು ಸಚ್ಛಾಸ್ತ್ರೋಪದೇಶವನ್ನು ಮಾಡಿ, ವಿಸ್ಮೃತಿಹೊಂದಿದ ನಮ್ಮ ಸ್ವರೂಪವನ್ನೇ ಸ್ಮರಣಕ್ಕೆ ತಂದುಕೊಡುತ್ತಾನೆ, ಹೊರತು ಹೊಸದಾಗಿ ಪ್ರಾಪ್ತಮಾಡಿಕೊಡುವದಿಲ್ಲ, ಎಂಬ ತಾತ್ಪರ್ಯವು.

ಪ್ರತಿಪಾದ್ಯ ಪ್ರತಿಪಾದಕ ಭಾವಸಂಬಂಧವು

ಬಳಿಕ; ಈ ಶಾಸ್ತ್ರವು ಪ್ರತಿಪಾದಕವೆಂದೂ, ಬ್ರಹ್ಮವು ಪ್ರತಿಪಾದ್ಯವೆಂದೂ ತೋರಿಸುತ್ತಾ, ಛಂದಶ್ಶಾಸ್ತ್ರೋಕ್ತ ಲಕ್ಷಣಗಳು ಈ ಗ್ರಂಥದಲ್ಲಿ ಇಲ್ಲದಿದ್ದಾಗ್ಯೂ, ಪುರುಷಾರ್ಥವನ್ನೀಯುವದರಿಂದ ಈ ಗ್ರಂಥವು ಸಕಲರಿಂದ ಸ್ವೀಕರಿಸುವದಕ್ಕೆ ಯೋಗ್ಯವಾಗಿರುತ್ತದೆಂದು ಹೇಳುತ್ತಾರೆ.

CC-0. Jangamwadi Math Collection. Digitized by eGangotri

ಪದ ಲಕ್ಷಣಮಿಲ್ಲದೊಡಿಂ ।
ತಿದು ಸೇವ್ಯಂ ಧರೆಯೊಳರ್ಥಮುಳ್ಳದರಿಂದಂ ॥
ವಿದಿತಂ ಪೊನ್ನುಳ್ಳಂ ಗುಣ ।
ದೊದವಾವುದುಮಿಲ್ಲದಿರ್ದೊಡವಂ ಗುಣಿಯಲ್ತೆ ॥ ೩ ॥

ಪದಲಕ್ಷಣಂ=ಛಂದಶ್ಶಾಸ್ತ್ರದಲ್ಲಿ ಹೇಳಲ್ಪಟ್ಟ ಪದ್ಯಲಕ್ಷಣವು, ಇಲ್ಲದೊಡೆ=ಇಲ್ಲದಿದ್ದರೂ, ಇಂತು=ಮುಂದೆ ಹೇಳುವ ಪ್ರಕಾರ, ಇದು=ಈ ಪರಮಾರ್ಥ ಗೀತೆಯು, ಅರ್ಥಮುಳ್ಳದರಿಂದಂ=ಪುರುಷಾರ್ಥವುಳ್ಳದ್ದರಿಂದ, ಸೇವ್ಯಂ=ಸರ್ವರಿಂದಲೂ ಗ್ರಹಿಸಲಿಕ್ಕೆ ಯೋಗ್ಯವಾದದ್ದು, ವಿದಿತಂ=ಪ್ರಸಿದ್ಧವಾಗಿ, ಪೊನ್ನುಳ್ಳಂ=ಭಂಗಾರವುಳ್ಳ ಧನಿಕನು, ಗುಣದ=ಬ್ರಹ್ಮಚರ್ಯ ಕ್ಷಮೆ ಪರೋಪಕಾರಾದಿ ಗುಣಗಳ, ಒದವು=ಪ್ರಾಪ್ತಿಯು, ಇಲ್ಲದೊಡೆ=ಇಲ್ಲದಿದ್ದಾಗ್ಯೂ, ಅವಂ=ಆ ದುರ್ಗುಣಿಯಾದ ಧನಿಕನು, ಗುಣಿಯಲ್ತೆ=ಸದ್ಗುಣಿಯೆಂದು ಹೊಗಳಿಸಿಕೊಳ್ಳುವದಿಲ್ಲ ಏನು?

ತಾತ್ಪರ್ಯ:- ಶ್ರೀಮನ್ನಿಜಗುಣ ಶಿವಯೋಗಿಗಳಿಂದ ವಿರಚಿತಮಾದ ಈ ಪರಮಾರ್ಥ ಗೀತೆಯಲ್ಲಿ ಛಂದಶ್ಶಾಸ್ತ್ರದಲ್ಲಿ ಹೇಳಲ್ಪಟ್ಟ ಗಣ, ಪ್ರಾಸು, ಯತಿ ಮೊದಲಾದ ಲಕ್ಷಣಗಳು ಇಲ್ಲದ್ದರಿಂದ,ಈ ಗ್ರಂಥವನ್ನು ಯಾರೂ ನೋಡಬಾರದು ಎಂದು ಯಾರಾದರೂ ಶಂಕಾ ಮಾಡಬಹುದು. ಆದರೆ ಇದು ಯೋಗ್ಯವಲ್ಲ. ಯಾಕಂದರೆ, ಛಂದಸ್ಸಿನ ಲಕ್ಷಣಗಳು ಇಲ್ಲದಿದ್ದಾಗ್ಯೂ ಸರ್ವರಿಗೂ ಬೇಕಾದ ಅತ್ಯಂತ ದುಃಖ ನಿವೃತ್ತಿ ಪರಮಾನಂದ ಪ್ರಾಪ್ತಿಯೆಂಬ ಪುರುಷಾರ್ಥವುಳ್ಳದ್ದರಿಂದ, ಈ ಪರಮಾರ್ಥಗೀತೆಯು ಸರ್ವರಿಂದಲೂ ಗ್ರಹಿಸುವದಕ್ಕೆ ಈ ಜಗತ್ತಿನಲ್ಲ ಯೋಗ್ಯವಾಗಿರುತ್ತದೆ. ಹೇಗಂದರೆ, ಲೋಕದಲ್ಲಿ ಧನಿಕನು ಅಹಿಂಸೆ, ಸತ್ಯ ಶಾಂತಿ ಪರೋಪಕಾರ ಮೊದಲಾದ ಸದ್ಗುಣಗಳಿಲ್ಲದವನಾದರೂ, ಅವನಲ್ಲಿ ಸಕಲರಿಗೆ ಬೇಕಾದ ದ್ರವ್ಯಮಾತ್ರವಿರುವದರಿಂದ, ಸರ್ವರು ಅವನನ್ನು ಕುರಿತು, ಒಳ್ಳೇ ಸದ್ಗುಣಿಯು, ಕುಲವಂತನು, ಪಂಡಿತನು, ವೇದಬಲ್ಲವನು, ಸಭೆಯಲ್ಲಿ ಮಾತಾಡುವವನು, ಸುಂದರರೂಪವುಳ್ಳವನು ಎಂದು ಕೊಂಡಾಡುತ್ತಾರೆ. ಯಾಕಂದರೆ ಈ ಎಲ್ಲಾ ಗುಣಗಳು ಭಂಗಾರವನ್ನು ಹೊಂದಿಕೊಂಡಿರುತ್ತವೆ. ಆದ್ದರಿಂದ ದ್ರವ್ಯವಿದ್ದ ಕಾಲಕ್ಕೆ ಲಕ್ಷಾಧಿಪತಿಯೆಂದು ಕರಿಸಿಕೊಂಡವನು ದ್ರವ್ಯ ತೀರಿದ ಮರುದಿವಸವೇ 'ಲೆಕ್ಯಾ' ಎಂದು ಜನರಿಂದ ಕರಿಸಿಕೊಳ್ಳುವನು. ಆದ್ದರಿಂದ ದುರ್ಗುಣಿಯಾದರೂ ಧನವುಳ್ಳವನಾದ್ದರಿಂದ ಹೇಗೆ ಸದ್ಗುಣಿಯೆಂದು ಜನರಿಂದ ಹೊಗಳಿಸಿಕೊಳ್ಳುವನೋ, ಹಾಗೇ ಈ ಪರಮಾರ್ಥ ಗೀತೆಯು ಛಂದಸ್ಸಿನ ಲಕ್ಷಣಗಳಿಂದ ರಹಿತವಾದರೂ, ಪರಮ ಪುರುಷಾರ್ಥವುಳ್ಳದ್ದರಿಂದ ಸರ್ವರಿಂದ ಗ್ರಹಿಸಲಿಕ್ಕೆ ಯೋಗ್ಯವಾಗಿರುತ್ತದೆ, ಎಂಬ ತಾತ್ಪರ್ಯವು.

CC-0. Jangamwadi Math Collection. Digitized by eGangotri

ಈ ವಿಷಯದಲ್ಲಿ ಒಂದು ಹಾಸ್ಯರಸವಾದ ಕಥೆಯುಂಟು. ಆದಾದರೂ ಈ ದ್ರಾಷ್ಟಾಂತಾರ್ಥಕ್ಕೆ ಯೋಗ್ಯವಾಗಿರುತ್ತದೆ. ಯಾವದು? ಅಂದರೆ:—

ಒಬ್ಬ ವೇಶ್ಯಾಸ್ತ್ರೀಯಳು ತನ್ನ ಮಗಳಿಗೆ ಹೇಳಿದ್ದೇನಂದರೆ, "ನಮ್ಮ ಮನೆಗೆ, ಬೇಕಾದ ಜಾತಿಯ ಪುರುಷರು ಬರಲಿ, ಅವರಿಗೆ ಬೇಡ ಅನ್ನಬೇಡ. ಯಾಕಂದರೆ, ನಾವು ವೇಶ್ಯಾಸ್ತ್ರೀಯರಾದ ಮೇಲೆ, ನಮ್ಮ ಮನೆಗೆ ಬಂದ ಪುರುಷರಜಾತಿ, ಕುಲ, ಗೋತ್ರ, ಗುಣ, ದುರ್ಗುಣ ಯಾವದೊಂದೂ ನೋಡದೆ, ಅವನಲ್ಲಿದ್ದ ದ್ರವ್ಯವನ್ನು ಮಾತ್ರ ಗ್ರಹಣಮಾಡತಕ್ಕದ್ದು, ಕಂಡ್ಯಾ" ಎಂದು ಉಪದೇಶಮಾಡಿದಳು.ಮತ್ತು "ನಾವೇ ಗುಣ ಬಿಟ್ಟು ದ್ರವ್ಯವನ್ನು ಗ್ರಹಣಮಾಡುತ್ತೇವಂತಲ್ಲ. ಮತ್ತೇನಂದರೆ, ಗೌತುಮನಾದರೂ ತನ್ನ ನ್ಯಾಯಶಾಸ್ತ್ರದಲ್ಲಿ ಮೊದಲು ಗುಣಗಳನ್ನು ಗ್ರಹಣಮಾಡದೆ ದ್ರವ್ಯವನ್ನೇ ಗ್ರಹಣಮಾಡಿರುತ್ತಾನೆ," ಎಂದು ಹೇಳಿದಳು.

ಇಲ್ಲಿ ಮುಖ್ಯತಾತ್ಪರ್ಯವೇನಂದರೆ, ಈ ದೃಷ್ಟಾಂತದಂತೆ,ಮುಮುಕ್ಷುಗಳು ಯತಿ, ಗಣ, ಪ್ರಾಸಾದಿಗಳಕಡೆಗೆ ಲಕ್ಷ್ಯವನ್ನು ಕೊಡದೆ, ಕೇವಲ ತಮ್ಮ ಸ್ವರೂಪವನ್ನು ಬೋಧಿಸುವ ಅರ್ಥದ ಕಡೆಗೆ ಲಕ್ಷ್ಯವನ್ನು ಕೊಡಬೇಕೆಂಬ ತಾತ್ಪರ್ಯವು.

ಬಳಿಕ ಮುಮುಕ್ಷುಗಳು ಅನ್ಯ ಗ್ರಂಥಗಳನ್ನು ಗ್ರಹಣಮಾಡುವದರಿಂದ, ಈ ಗ್ರಂಥವು ನಿಷ್ಫಲವೆಂದು ಶಂಕೆ ಮಾಡಲು, ರತ್ನದೃಷ್ಟಾಂತದಂತೆ, ಇದು ಸಫಲವಾಗುತ್ತದೆಂದು ಪ್ರತಿಪಾದನ ಮಾಡುತ್ತಾರೆ.

ಒಂದೊಂದನರ್ಘ್ಯ ಚಯರ ।
ತ್ನಂ ದೊರಕೊಳಲೊಲ್ಲದವರೊಳೊಂದಂ ಗ್ರಹಿಸುವ ॥
ನಂದದಿ ನಿಜಮತದಿಂಬೇ ।
ರೊಂದನುಮಾನಿಸದಿದಂ ವಿಚಾರಿಸೆ ಜಗದೋಳ್ ॥ ೪ ॥

ಟೀಕಾ:— ಒಂದೊಂದು=ಪ್ರತಿ ಒಂದು ರತ್ನವು, ಅನರ್ಘ್ಯ=ಬೆಲೆಯಿಲ್ಲದಂಥವು, ಚಯರತ್ನಂ=ಇಂಥಾ ರತ್ನಗಳ ರಾಶಿಯನ್ನು, ದೊರಕೊಳ್ಳಲು=ತಕ್ಕೊಳ್ಳುವದಕ್ಕೆ, ಒಲ್ಲದವ=ಇಚ್ಛೆಇಲ್ಲದವನು, ಅವರೊಳ್=ಆ ರತ್ನ ರಾಶಿಯ ಮಧ್ಯದಲ್ಲಿ, ಒಂದಂ=ತನಗೆಬೇಕಾದ ಒಂದು ರತ್ನವನ್ನು, ಗ್ರಹಿಸುವನಂದದಿ=ತೆಗೆದುಕೊಳ್ಳುವಹಾಗೆ, ನಿಜಮತದಿಂದ=ತನ್ನ ಸಂಮತದಿಂದ, ಬೇರೊಂದನು=ಈ ಪರಮಾರ್ಥಗೀತೆಯ ಹೊರತು ಎರಡನೆಯ ಗ್ರಂಥವನ್ನು, ಅನುಮಾನಿಸದೆ=ನಾನು ಗ್ರಹಣಮಾಡಲೋ ಅಥವಾ ಬೇಡೋಎಂಬ ಸಂದೇಹವಿಲ್ಲದಲೆ,ಜಗದೋಳ್=ಈ ಲೋಕದಲ್ಲಿ, ಇದಂ=ಈ ಪರಮಾರ್ಥಗೀತೆಯನ್ನು, ವಿಚಾರಿಸೆ=ಗುರುಮುಖದಿಂದ ವಿಚಾರಮಾಡಬೇಕು.

CC-0. Jangamwadi Math Collection. Digitized by eGangotri

ತಾತ್ಪರ್ಯ:—ಈ ಜಗತ್ತಿನಲ್ಲಿ ಪುರುಷಾರ್ಥವನ್ನು ಪ್ರತಿಪಾದನಮಾಡುವ ಗ್ರಂಥಗಳು ಅನೇಕಉಂಟು. ಅವುಗಳನ್ನೇ ಮುಮುಕ್ಷುಗಳು ನೋಡುತ್ತಾರೆ ಹೊರತು ನಿಮ್ಮಿಂದ ವಿರಚಿತವಾದ ಈ ಪರಮಾರ್ಥ ಗೀತೆಯನ್ನು ಯಾರೂ ನೋಡುವದಿಲ್ಲ. ಆದ್ದರಿಂದ ಈ ಗ್ರಂಥವು ನಿಷ್ಪ್ರಯೋಜನ ಎಂದು ಯಾರಾದರೂಶಂಕೆ ಮಾಡಿದರೆ, ಅದು ಯೋಗ್ಯವಲ್ಲ. ಯಾಕಂದರೆ? ಒಬ್ಬಾನೊಬ್ಬ ಚಿನಿವಾಲನು ಪೇಟಯಲ್ಲಿ ರತ್ನದ ಅಂಗಡಿಯನ್ನು ಇಟ್ಟಿರುತ್ತಾನೆ. ಅವನಲ್ಲಿರುವ ಒಂದೊಂದೇ ರತ್ನಗಳು ಯಾರಿಂದಲೂ ಕಿಮ್ಮತ್ತುಮಾಡಲಿಕ್ಕೆ ಬರುವಂತೆಯೇ ಇಲ್ಲ. ಅಂದರೆ ಬಹಳ ಬೆಲೆಯುಳ್ಳ ರತ್ನಗಳು ಎಂಬ ತಾತ್ಪರ್ಯವು. ಆ ಚಿನಿವಾಲನಲ್ಲಿರುವಂಥಾ ಎಲ್ಲ ರತ್ನಗಳನ್ನು ಒಮ್ಮೆಲೆ ಯಾವನಾದರು ಎಂದೂ ತಕ್ಕೊಳ್ಳಲಾರನು. ಆದರೆ ಪ್ರತಿಯೊಬ್ಬ ಪುರುಷನು ತನ್ನ ಹತ್ತರಿರುವ ದ್ರವ್ಯದ ಅನುಕೂಲತೆಯನ್ನು ನೋಡಿಕೊಂಡು, ತನ್ನ ಸಾಮರ್ಥ್ಯಕ್ಕೆ ಸರಿಯಾಗಿ ಆ ರತ್ನ ರಾಶಿಯಲ್ಲಿರುವ ಯಾವದಾದರೂಂದು ರತ್ನವನ್ನು ಕ್ರಯಕ್ಕೆ ಹೇಗೆ ತಕ್ಕೊಳ್ಳುತ್ತಾನೋ ಹಾಗೇ ಜಗತ್ತಿನಲ್ಲಿ ಪುರುಷಾರ್ಥವನ್ನು ಪ್ರತಿಪಾದನ ಮಾಡುವ ಅದ್ವೈತ ಗ್ರಂಥಗಳು ಬಹಳವಿದ್ದರೂ ಇರಲಿ; ಅವುಗಳ ಮಧ್ಯದಲ್ಲಿ ನಾನು ಮಾಡಿದ್ದೊಂದು ಗ್ರಂಥವೂ ಕೂಡಿಕೊಂಡಿರುತ್ತದೆ. ಈ ಗ್ರಂಥಗಳನ್ನೆಲ್ಲಾ ಒಬ್ಬನೇ ಗ್ರಹಣ ಮಾಡದಿದ್ದರೂ, ತನ್ನ ಅಧಿಕಾರಕ್ಕನುಗುಣವಾಗಿ ಸುಲಭರೀತಿಯಿಂದ ಮೋಕ್ಷಮಾರ್ಗವನ್ನು ಪದೇಶಿಸುವ ಈ ಗ್ರಂಥವನ್ನು ತಕ್ಕೊಂಡು, ಶ್ರೀ ಗುರುಮುಖದಿಂದ ಶ್ರವಣಮಾಡುತ್ತಾ, ಮನನ ನಿಧಿಧ್ಯಾಸನಗಳಿಂದ ಆತ್ಮಸಾಕ್ಷಾತ್ಕಾರಮಾಡಿಕೊಳ್ಳುತ್ತಾನೆ. ಇಲ್ಲಿ ರತ್ನವ್ಯವಹಾರದ ಉಪಲಕ್ಷಣದಿಂದ ಅರಿವೆ, ಮಿಠಾಯಿ, ಕಾಯಿಪಲ್ಲೆ, ಮೊಲಾದ ವ್ಯವಹಾರಗಳನ್ನೂ ಗ್ರಹಿಸಬೇಕು. ಹೇಗಂದರೆ? ಜವಳಿ ಅಂಗಡಿಯಲ್ಲಿ ಅನೇಕತರದ ಅರಿವೆಗಳಿದ್ದರೂ, ಅವುಗಳಲ್ಲಿ ತನಗೆ ಬೇಕಾದ್ದೊಂದನ್ನು ಪುರುಷನು ತಕ್ಕೊಳ್ಳುತ್ತಾನೆ. ಇದರಂತೆ, ಅನ್ಯ ವ್ಯವಹಾರಗಳಲ್ಲಿಯೂ ವಿಚಾರಮಾಡಿಕೊಳ್ಳತಕ್ಕದ್ದು. ಆದ್ದರಿಂದ ಯಾವನಾದರೊಬ್ಬ ಅಧಿಕಾರಿಯು ನಾನು ಮಾಡಿದ ಈ ಗ್ರಂಥವನ್ನು ನಿಶ್ಚಯವಾಗಿ ಗ್ರಹಣವನ್ನೇ ಮಾಡುತ್ತಾನೆ. ಅಂದಮೇಲೆ, ನನ್ನಿಂದ ವಿರಚಿತವಾದ ಈ ಗ್ರಂಥವು ನಿಷ್ಫಲವಾಗಲಿಲ್ಲ. ಕಿಂತು ಸಫಲವೇ ಆಗುತ್ತದೆಂಬ ತಾತ್ಪರ್ಯವು.

ಪ್ರಯೋಜನ

ಬಳಿಕ ಮೋಕ್ಷಾಪೇಕ್ಷಿಯು ಈ ಗ್ರಂಥವನ್ನು ನಿಶ್ಚಯವಾಗಿ ಗ್ರಹಣಮಾಡುತ್ತಾನೆ. ಯಾಕಂದರೆ ಮುಕ್ತಿಪ್ರಯೋಜನವುಳ್ಳದ್ದರಿಂದ ಎಂದು ಪ್ರತಿಪಾದನ ಮಾಡುತ್ತಾರೆ.

> ಅದುಕಾರಣದಿಂ ತನಗಾ ।
> ವುದು ಭವದುಃಖವನೆ ಕೆಡಿಸಿ ನಿತ್ಯಚಿದಾನಂ ॥
> ದದ ಘನಪದಮಂ ಕಾಣಿಪು ।
> ದದುವೇ ಗುರುಮತವು ತಿಳಿಯಲ ಸುಶ್ರಾವ್ಯಂ ॥ ೫

CC-0. Jangamwadi Math Collection. Digitized by eGangotri

ಟೀಕಾ:— ಅದು ಕಾರಣದಿಂ=ಗುರು ಮುಖದಿಂದ ಗ್ರಂಥವನ್ನು ವಿಚಾರ ಮಾಡುವದರಿಂದ, ತನಗೆ=ಸಾಧನ ಚತುಷ್ಟಯ ಸಂಪನ್ನನಾದ ತನಗೆ, ಆವುದು= ಯಾವ ಗ್ರಂಥವು, ಭವದುಃಖವನೆ=ಜನನಮರಣಾದಿ ರೂಪ ದುಃಖವನ್ನು, ಕೆಡಿಸಿ=ನಾಶಮಾಡಿ, ನಿತ್ಯ=ಯಾವಾಗಲೂ, ಚಿದಾನಂದದ=ಸತ್ತು ಚಿತ್ತಾನಂದ ಸ್ವರೂಪವಾದ ಬ್ರಹ್ಮದ, ಘನಪದಮಂ=ದೊಡ್ಡ ಮೋಕ್ಷವನ್ನು; ಕಾಣಿಪುದು= ತೋರಿಸುನದು, ಅದುವೇ=ಆ ಗ್ರಂಥವೇ, ಗುರುಮತವು=ಸಾಂಪ್ರದಾಯ ಸಿದ್ಧ ವಾದದ್ದು, ತಿಳಿಯಲ್= ವಿಚಾರಮಾಡಿ ನೋಡಲಾಗಿ, ಅದೇ=ಆ ಗ್ರಂಥವೇ, ಸುಶ್ರಾವ್ಯಂ=ಶ್ರವಣಮಾಡಲಿಕ್ಕೆ ಯೋಗ್ಯವಾದದ್ದು.

ತಾತ್ಪರ್ಯ:— ರತ್ನ ಅಥವಾ ಅರಿವೆ ರಾಶಿಗಳ ಮಧ್ಯದಲ್ಲಿ ಗಿರಾಕಿಯು ಇದೇ ರತ್ನವನ್ನು ಇದೇ ಅರಿವೆಯನ್ನು ತೆಗೆದುಕೊಳ್ಳುತ್ತಾನೆಂದು ಹೇಗೆ ನಿಶ್ಚಯ ವಾಗಿ ಹೇಳಲಿಕ್ಕೆ ಬರುವದಿಲ್ಲವೋ, ಹಾಗೇ ಅನೇಕ ಅದ್ವೈತಗ್ರಂಥಗಳ ಮಧ್ಯ ನಿಮ್ಮಿಂದ ವಿರಚಿತವಾದ ಈ ಪರಮಾರ್ಥ ಗೀತೆಯನ್ನೇ ಅಧಿಕಾರಿಯುತಕ್ಕೊಳ್ಳು ತ್ತಾನೆಂದು, ನಿಶ್ಚಯವಾಗಿ ಹೇಳಲಿಕ್ಕೆ ಬರುವದಿಲ್ಲ. ಆದ್ದರಿಂದ ನೀವು ಮಾಡಿದ ಈ ಗ್ರಂಥವು ವ್ಯರ್ಥವಾಗಿರುತ್ತದೆ. ಎಂದು ಯಾರಾದರೊ ಶಂಕಾ ಮಾಡಿದರೆ ಇದಕ್ಕೆ ಉತ್ತರವನ್ನು ಹೇಳುತ್ತಾರೆ. ಏನೆಂದರೆ ಸರ್ವರೂ ನಮ್ಮ ಗ್ರಂಥವನ್ನೇ ಗ್ರಹಣಮಾಡಿರಿ. ಪೂರ್ವ ಮೀಮಾಂಸ,ನ್ಯಾಯ,ವೈಷೇಶಿಕ,ಸಾಂಖ್ಯ,ಪಾತಂಜಲಿ, ಶೈವ, ವೈಷ್ಣವ ಮೊದಲಾದ ಮತಗಳ ಗ್ರಂಥಗಳನ್ನು ನೋಡಬೇಡಿರಿ ಎಂದು ನಾವು ಹೇಳುವುದಿಲ್ಲ. ಮತ್ತೇನೆಂದರೆ, ಯಾವಗ್ರಂಥವು ಗುರುಮುಖದಿಂದ ಶ್ರವಣ ಮಾಡುತ್ತಿರಲಿಕ್ಕೆ, ಅತ್ಯಂತ ದುಃಖ ನಿವೃತ್ತಿಪೂರ್ವಕ ಪರಮಾನಂದ ಪ್ರಾಪ್ತಿ ಯನ್ನುಂಟುಮಾಡಿಕೊಡುವದೋ ಅದೇಗ್ರಂಥವನ್ನು ಗ್ರಹಣ ಮಾಡಿರಿ. ಈ ಪ್ರಯೋಜನವುಳ್ಳ ಗ್ರಂಥವೇ ಅನಾದಿ ಸಾಂಪ್ರದಾಯ ಗುರುಪರಂಪರೆಗೆ ಸಮ್ಮತ ವಾದದ್ದು.ಆದ್ದರಿಂದ ಸಕಲ ಮುಮುಕ್ಷುಗಳಿಂದ ಇಂಥಾ ಗ್ರಂಥವೇ ಶ್ರವಣಮಾಡ ಲಿಕ್ಕೆ ಯೋಗ್ಯವಿರುತ್ತದೆ. ಬೇರೆಗ್ರಂಥವನ್ನು ನೋಡಬೇಡಿರಿ.

ಆದರೆ ಉಕ್ತ ಪ್ರಯೋಜನವುಳ್ಳದ್ದೂ ಸಾಂಪ್ರದಾಯ ಸಿದ್ಧವಾದದ್ದೂ ನಿಮ್ಮ ಅಧಿಕಾರಕ್ಕನುಗುಣವಾದದ್ದೂ ನಮ್ಮಿಂದ ವಿರಚಿತವಾದ ಈ ಪರಮಾರ್ಥ ಗೀತೆಯೇ ಇರುತ್ತದೆ. ಇದನ್ನೇ ಮೋಕ್ಷಾಪೇಕ್ಷಿಗಳು ಗ್ರಹಣಮಾಡಬೇಕೇ ಹೊರತು,ಅನ್ಯ ಗ್ರಂಥಗಳನ್ನು ನೋಡಬಾರದೆಂಬುದೇ ಈ ಗ್ರಂಥಕರ್ತರಾದ ನಿಜ ಗುಣರ ಅಭಿಪ್ರಾಯವಿರುತ್ತದೆ. ಹೇಗೆಂದರೆ, ಒಬ್ಬ ಗ್ರಹಸ್ಥನು ಸಂಸಾರದಲ್ಲಿ ಬಹಳಸಂಕಟಪಟ್ಟು ದುಃಖವನ್ನು ಸಹಿಸಲಾರದೆ, ಜೋತಿಷ್ಯವನ್ನು ಹೇಳುವ ಒಬ್ಬ ಬ್ರಾಹ್ಮಣನ ಬಳಿಗೆ ಹೋಗಿ "ಹೇ ಸ್ವಾಮೀ ಸಂಸಾರದಲ್ಲಿ ನನಗೆ ಮೇಲಿಂದಮೇಲೆ ತೊಂದರೆಗಳು ಬರುತ್ತವೆ, ಇವು ಏನು ಕಾರಣ ಬರುತ್ತವೆ? ಮತ್ತು ಇವುಗಳ ನಿವೃತ್ತಿಗೆ ಏನಾದರೂ ಉಪಾಯವಿದ್ದರೆ ಹೇಳಬೇಕು" ಎಂದು

CC-0. Jangamwadi Math Collection. Digitized by eGangotri

ಬೇಡಿಕೊಂಡನು. ಬಳಿಕ ಜೋತಿಷ್ಯನು ಪ್ರಶ್ನಾರ್ಥ ಚಿಂತಾಮಣಿಮೊದಲಾದ ಗ್ರಂಥಗಳನ್ನು ತೆಗೆದು ನೋಡಿ, ಆ ಗೃಹಸ್ಥನನ್ನು ಕುರಿತು "ನಿನ್ನ ಮೇಲೆ ಶನಿ ದೃಷ್ಟಿಯು ಬಿದ್ದಿರುತ್ತದೆ. ಆದ್ದರಿಂದಲೇ ನೀನು ಮೇಲಿಂದಮೇಲೆ ಸಂಕಟ ದಲ್ಲಿ ಬೀಳುವಿ. ಆದ್ದರಿಂದ ವೇದಾಧ್ಯಯನ ಮಾಡಿದಂಥಾ ಒಬ್ಬ ಯೋಗ್ಯ ಬ್ರಾಹ್ಮಣನಿಗೆ ಒಂದು ಆಕಳ ದಾನವನ್ನು ಮಾಡಿದರೆ, ಶನಿಯ ಕಾಟದಿಂದ ಪಾರಾಗುವಿ" ಎಂದು ಹೇಳಿದನು. ಇಲ್ಲಿ ಜೋತಿಷ್ಯ ಹೇಳುವ ಬ್ರಾಹ್ಮಣನ ಮುಖ್ಯ ತಾತ್ಪರ್ಯವೇನಂದರೆ, ನನಗೆ ಆಕಳ ದಾನವನ್ನು ಕೊಡಲಿ ಎಂಬ ಅಭಿಪ್ರಾಯವಿರುವಂತೆ, ಮೋಕ್ಷಾಪೇಕ್ಷಿಗಳೆಲ್ಲರು ನನ್ನ ಗ್ರಂಥವನ್ನೇ ನೋಡಲಿ ಎಂಬಅಭಿಪ್ರಾಯವೇ ಗ್ರಂಥಕರ್ತರಾದ ಶ್ರೀಮನ್ನಿಜಗುಣ ಸ್ವಾಮಿಗಳದಿರುತ್ತದೆ.

ಉಕ್ತ ಪ್ರಯೋಜನವುಳ್ಳ ಗ್ರಂಥವನ್ನು ತ್ಯಾಗಮಾಡಿ, ಪುರುಷಾರ್ಥ ವನ್ನು ಕೊಡದೆ, ಕೇವಲ ಭೇದಬುದ್ಧಿಯನ್ನುಂಟುಮಾಡುತ್ತಿರುವ ಗ್ರಂಥಗಳಿಗೆ ಶರಣಾಗತನಾದವನು, ಪುನಃ ಪುನಃ ಜನನಮರಣರೂಪ ದುಃಖವನ್ನು ಅನು ಭವಿಸಿ, ಸುಖಗಾಣದೆ, ಕಡೆಗೆ ಅದ್ವೈತ ಜ್ಞಾನವನ್ನುಪದೇಶಿಸುವ ಈ ಗ್ರಂಥಕ್ಕೆ ಶರಣಾಗತನಾಗಿಯೇ ಮೋಕ್ಷವನ್ನು ಪಡೆಯಬೇಕಾಗಿರುತ್ತದೆಂದು ಹೇಳುತ್ತಾರೆ.

ತನಗಾಯಸಮಿನಿತಿಲ್ಲದೆ ।
ಘನ ಮುಕ್ತಿಯನೀವ ಮತವನುಳಿದ ಮಹಾಯಾ ॥
ತನಗೈಯುವ ರೊಲಿದಾತಂ ।
ಗನುವಕ್ಕುಂ ದ್ರವಿಡ ಮುಂಡಕ ನ್ಯಾಯಮಿದುಂ ॥ ೬ ॥

ಟೀಕಾ:— ತನಗೆ=ಮೋಕ್ಷಾಪೇಕ್ಷಿಯಾದ ತನಗೆ, ಆಯಸಂ=ಕಷ್ಟವ, ಇನಿತು=ಎಳ್ಳಷ್ಟಾದರೂ, ಇಲ್ಲದೆ=ಆಗದ ಹಾಗೆ, ಘನಮುಕ್ತಿಯನು=ಪುನರಾವೃತ್ತಿ ರಾಹಿತ್ಯವಾದ ಮೋಕ್ಷವನ್ನು, ಈವ=ಕೊಡುವಂಥಾ, ಮತವನು=ಅದ್ವೈತಮತ ವನ್ನು, ಉಳಿದು=ಬಿಟ್ಟು, ಮಹಾಯಾತನೆ=ತಿರಿತಿರಿಗಿ ಹುಟ್ಟಿ ಸಾಯುವಂತಾ ಮಹಾದುಃಖಕ್ಕೆ, ಗೈಯುವರ=ಹೊಂದಿಸುವಂಥವರನ್ನು, ಒಲಿದಾತಂಗೆ=ಆಶ್ರಯ ಮಾಡಿಕೊಂಡವನಿಗೆ, ಇದು=ಈಗ ಮುಂದೆಹೇಳಲ್ಪಡುವಂಥಾ, ದ್ರವಿಡಮುಂಡಕ ನ್ಯಾಯಂ=ದ್ರಾವಿಡ ದೇಶದಲ್ಲಿದ್ದ ಬೆಕ್ಕಿನನ್ಯಾಯವು, ಅನುವಕ್ಕುಂ=ಆಗುವದು.

ತಾತ್ಪರ್ಯ:— ಕೂಲಿ ಮಾಡಿ ಧನ ಸಂಪಾದನೆ ಮಾಡಿದಂತೆ ಭೇದ ಪ್ರತಿ ಪಾದನಮಾಡುವ ಗ್ರಂಥಗಳು, ಅನೇಕ ಸಾಧನಗಳನ್ನೂ ಅನಿತ್ಯಗಳಾದ ಅನೇಕ ಸಾಧ್ಯಗಳನ್ನೂ ಪ್ರತಿಪಾದನಮಾಡುತ್ತವೆ. ಅಂಜನದಿಂದ ಮನೆಯೊಳಗೆ ಹುಗಿ ದಿಟ್ಟ ಹಣವನ್ನು ಪ್ರಾಪ್ತಿಮಾಡಿಕೊಂಡಂತೆ, ಅದ್ವೈತ ಗ್ರಂಥಗಳು ನಿತ್ಯ ಸ್ವಯಂ ಸಿದ್ಧವಾದ ಪರಬ್ರಹ್ಮವಸ್ತುವನ್ನೇ ಪ್ರತಿಪಾದನಮಾಡುತ್ತವೆ. ಆದ್ದರಿಂದ ದ್ವೈತ

CC-0. Jangamwadi Math Collection. Digitized by eGangotri

ಗ್ರಂಥಗಳು ತನಗೆ ಬಹಳ ದುಃಖವನ್ನುಂಟುಮಾಡುತ್ತವೆ. ಅದ್ವೈತ ಗ್ರಂಥಗಳು ಸಾಧನ ಹೇಳದೆ ಸಿದ್ಧ ವಸ್ತು ಬೋಧಮಾಡುವದರಿಂದ, ತನಗೆ ಸುಖವನ್ನುಂಟು ಮಾಡುವಂಥವುಗಳಿರುತ್ತವೆ. ಹೀಗಿದ್ದರೂ ಯಾವಾತನು ಅನಾಯಾಸದಿಂದ ಪುರುಷಾರ್ಥವನ್ನು ಪ್ರತಿಪಾದಿಸುವ ಅದ್ವೈತ ಗ್ರಂಥವನ್ನು ತ್ಯಾಗಮಾಡಿ, ಅನಿತ್ಯ ಫಲಗಳನ್ನು ಕೊಡುವ ದ್ವೈತವಾದಿಗಳ ಗ್ರಂಥಕ್ಕೆ ಮರುಳಾದವನು, ಮನೆಯೊಳಗಿರುವ ಕಾಮಧೇನುವನ್ನು ಹೊರಗೆ ಹೊಡೆದು, ಗೊಡ್ಡಾಕಳದ ಬೆನ್ನು ಹತ್ತಿದಂತೆ ಆಗುತ್ತದೆ. ಮತ್ತೂ ದ್ರವಿಡ ಮಂಡಕ ನ್ಯಾಯವೂ ಪ್ರಾಪ್ತವಾಗುತ್ತದೆ. ಹೇಗಂದರೆ, ದ್ರವಿಡ ದೇಶದಲ್ಲಿ ಒಬ್ಬ ಗೃಹಸ್ಥನು ಮತ್ತೊಬ್ಬನ ಕಡೆಯಿಂದ ಯಾರೂ ಇಲ್ಲದ ಅರಣ್ಯ ಸ್ಥಳದಲ್ಲಿ ನೂರು ರೂಪಾಯಿ ಸಾಲವನ್ನು ತಕ್ಕೊಂಡು ಇನ್ನು ಆರು ತಿಂಗಳಿಗೆ ತಿರಿಗಿ ಕೊಡುತ್ತೇನೆಂದು ಹೇಳಿದ್ದನು. ಆರು ತಿಂಗಳಾದ ನಂತರ, ಸಾಲ ಕೊಟ್ಟವನು ಮನೆಗೆ ಹೋಗಿ ನೂರು ರೂಪಾಯಿಗಳನ್ನು ಕೇಳಲು, "ನೀನು ನನಗೆ ನೂರು ರೂಪಾಯಿಗಳನ್ನು ಕೊಟ್ಟೇ ಇಲ್ಲ, ಸುಳ್ಳೇ ಬೇಡಲಿಕ್ಕೆ ಬಂದಿರುವಿಯಲ್ಲ" ಎಂದು ಬೆದರಿಸಿ ಕಳಿಸಿದನು. ಬಳಿಕ ಸಾಲ ಕೊಟ್ಟವನು ನಿರುಪಾಯನಾಗಿ ಕೋರ್ಟಿಗೆ ಫಿರ್ಯಾದಿ ಮಾಡಿದನು. ಕೋರ್ಟಿನಲ್ಲಿ ನ್ಯಾಯಾಧೀಶರು, "ಇವನಿಂದ ನೀನು ನೂರು ರೂಪಾಯಿಗಳನ್ನು ತಕ್ಕೊಂಡದ್ದು ಖರೇ ಏನು?" ಎಂದು ಕೇಳಿದರು. ಇದಕ್ಕೆ ಪ್ರತಿವಾದಿಯು "ಇವನಿಂದ ನಾನು ರೂಪಾಯಿಗಳನ್ನು ತಕ್ಕೊಂಡಿಯೇ ಇಲ್ಲ. ಸುಳ್ಳೇ ಹೇಳುತ್ತಾನೆ" ಅಂದನು. ಈ ಮಾತನ್ನು ಕೇಳಿ ವಾದಿಯು "ಅದೇಕೆ? ನೂರು ರೂಪಾಯಿಗಳನ್ನು ತಕ್ಕೊಂಡು, ಇಲ್ಲೆಂದು ಬಾಯಿಬಡೆಯುತ್ತೀಯಾ" ಎಂದು ಹೇಳಿದನು. ಅನಂತರ ನ್ಯಾಯಾಧೀಶರು "ಒಳ್ಳೇದು, ಎಲೋ, ವಾದಿ, ನೀನು ಅವನಿಗೆ ರೂಪಾಯಿಗಳನ್ನು ಕೊಟ್ಟ ಬಗ್ಗೆ ಸಾಕ್ಷಿ ಏನು" ಎಂದು ಕೇಳಿದರು. ಅದಕ್ಕೆ ವಾದಿಯು "ಅರಣ್ಯದೊಳಗಿರುವ ಮಟಬೆಕ್ಕೇ ಸಾಕ್ಷಿಯಾಗಿರುತ್ತದೆ" ಎಂದು ಹೇಳಿದನು. ಇದನ್ನು ಕೇಳಿ ಪ್ರತಿವಾದಿಯು "ಅಡವಿ ಬೆಕ್ಕು ಇದ್ದಿಲ್ಲ. ಊರ ಬೆಕ್ಕು ಇತ್ತು" ಅಂದನು. ಈ ಮಾತನ್ನು ನ್ಯಾಯಾಧೀಶರು ಕೇಳಿ– "ಎಲೋ, ಪ್ರತಿವಾದಿಯೇ, ನೀನು ಅವನ ಕಡೆಯಿಂದ ನೂರು ರೂಪಾಯಿಗಳನ್ನು ತಕ್ಕೊಂಡಿರುವೆನೆಂದು, ನಿನ್ನ ಮುಖದಿಂದಲೇ ಕಬೂಲ ಆದಂತಾಯಿತು. ಆದ್ದರಿಂದ ಅವನ ನೂರು ರೂಪಾಯಿಗಳನ್ನು ಕೊಡು" ಎಂದು ಹೇಳಿ ಕೊಡಿಸಿದರು.

ಇಲ್ಲಿ ಈ ಕಥೆಯ ತಾತ್ಪರ್ಯವೇನಂದರೆ, ಮೊದಲೇ ಅವನಿಗೆ ನೂರು ರೂಪಾಯಿಗಳನ್ನು ಕೊಟ್ಟದ್ದರೆ ಋಣಮುಕ್ತನಾಗುತ್ತಿದ್ದನು. ಕೊಡದಿದ್ದ ಕಾರಣದಿಂದಲೇ ಕೋರ್ಟಿಗೆ ಹೋಗಿ ಧನ ಹಾಳುಮಾಡಿಕೊಂಡು ಪುನಃ ಅವನಿಗೆ ನೂರು ರೂಪಾಯಿಗಳನ್ನು ಕೊಟ್ಟದ್ದಲ್ಲದೆ, ಕೋರ್ಟಿನ ಖರ್ಚನ್ನೂ ಕೊಡಬೇಕಾಯಿತು.

CC-0. Jangamwadi Math Collection. Digitized by eGangotri

ಈ ದೃಷ್ಟಾಂತದಂತೆ, ಮುಮುಕ್ಷು ಪುರುಷನು ಮೊದಲೇ ಸಿದ್ಧಾರ್ಥಬೋಧಕವಾದ ಈ ಗ್ರಂಥವನ್ನೇ ಸ್ವೀಕರಿಸಿ, ಗುರು ಮುಖದಿಂದ ಶ್ರವಣಮನನಾದಿಗಳನ್ನು ಮಾಡಿಕೊಂಡು ನಿಶ್ಚಯವಾದ ಜ್ಞಾನದಿಂದ ಮುಕ್ತನಾಗುತ್ತಿದ್ದನು. ಇದನ್ನು ಬಿಟ್ಟು ಭೇದವಾದಿಗಳ ಗ್ರಂಥದಲ್ಲಿ ಪ್ರವೃತ್ತನಾದ್ದರಿಂದ, (ದ್ವಿತಿಯಾ ದ್ವೈ ಭಯಂ ಭವತಿ)* ಪುನಃ ಪುನಃ ಜನನ ಮರಣರೂಪ ಪ್ರವಾಹದಲ್ಲಿ ಬಿದ್ದು, ಹೊರಳಾಡಿ ಸುಖ ಕಾಣದೆ ಕಡೆಗೆ ಬೇಸತ್ತು, (ಅಭಯಂ ವೈಜನಕ ಪ್ರಾಪ್ತೋsಸಿ)* ಅಭೇದವನ್ನು ಪ್ರತಿಪಾದನ ಮಾಡುವ ಗ್ರಂಥಕ್ಕೆ ಶರಣಾಗತನಾಗಬೇಕಾಗುವದು ಎಂಬ ತಾತ್ಪರ್ಯವು.

ಮತ್ತು ಇದೇ ವಿಷಯದಲ್ಲಿ ಗುದ್ದಿಸಿಕೊಂಡು ಹಣ ಕೊಟ್ಟವನ ಕಥೆಯಿರುತ್ತದೆ. ಏನಂದರೆ, ಒಬ್ಬನು ಮತ್ತೊಬ್ಬನಿಗೆ ನೂರು ರೂಪಾಯಿಗಳನ್ನು ಕೊಡತಕ್ಕದ್ದಿತ್ತು. ರೂಪಾಯಿ ಕೊಟ್ಟವನು ಯಾವ ಕಾಲಕ್ಕೆ ರೂಪಾಯಿಗಳನ್ನು ಕೊಡು ಎಂದು ಕೇಳಿದರೂ, ನನ್ನ ಹತ್ತರ ರೂಪಾಯಿಗಳಿಲ್ಲ. ನನ್ನ ಹತ್ತರ ನೂರು ರೂಪಾಯಿಗಳು ಇದ್ದಾಗ್ಗೆ ಕೊಟ್ಟೇನು, ಎಂದು ಹೇಳುತ್ತಿದ್ದನು. ಒಂದು ದಿವಸ ರೂಪಾಯಿ ಕೊಟ್ಟವನು, ಇವನನ್ನು ಹಿಡಿದು ಕೂಡ್ರಿಸಿ, "ನನ್ನ ರೂಪಾಯಿಗಳನ್ನು ಕೊಟ್ಟು ಇಲ್ಲಿಂದ ಎದ್ದು ಹೋಗು, ಇಲ್ಲದಿದ್ದರೆ ನಿನ್ನನ್ನು ಬಿಡುವದಿಲ್ಲ" ಎಂದು ಹೇಳಿದನು. ಇಷ್ಟಾದರೂ ಇವನು ಅವನಿಗೆ ರೂಪಾಯಿಗಳನ್ನು ಕೊಡಲಿಲ್ಲ. ಮನೆಯಲ್ಲಿ ರೂಪಾಯಿಗಳನ್ನು ಇಟ್ಟಿದ್ದರೂ, ನನ್ನಲ್ಲಿ ರೂಪಾಯಿಗಳು ಇಲ್ಲ ಎಂದು ಹೇಳುತ್ತಿದ್ದನು. ಆಗ ರೂಪಾಯಿ ಕೊಟ್ಟವನು ಬೇಸತ್ತು ಇವನನ್ನು ಕುರಿತು, "ನೀನು ಘಟ್ಟಿಯಾದ ನೂರು ಉಳ್ಳೀಗಡ್ಡಿಗಳನ್ನು ತಿಂದರೆ, ನಾನು ನಿನಗೆ ನೂರು ರೂಪಾಯಿಗಳನ್ನು ಬಿಟ್ಟುಕೊಡುತ್ತೇನೆ" ಎಂದು ಹೇಳಿದನು. ಅದಕ್ಕೆ ಸಾಲಗಾರನು ನೂರು ಉಳ್ಳೀಗಡ್ಡಿಗಳನ್ನು ತಿನ್ನಲಿಕ್ಕೆ ಒಡಂಬಟ್ಟನು. ಯಾವಾಗ ತಿನ್ನಲಿಕ್ಕೆ ಹತ್ತಿದನೋ, ಆಗ ಅವನಿಂದ ತಿನ್ನಲಿಕ್ಕೇ ಆಗಲಿಲ್ಲ. ಕಿಂತು ಹತ್ತು ಇಪ್ಪತ್ತು ತಿನ್ನುವದರೊಳಗಾಗಿಯೇ ಸಾಕಾಯಿತು. ಬಾಕಿ ಉಳ್ಳೀಗಡ್ಡಿಗಳೆಲ್ಲಾ ಹಾಗೇ ಉಳಿದವು. ಆಗ ರೂಪಾಯಿ ಕೊಟ್ಟವನು "ಒಳ್ಳೇದು, ನೀನು ನೂರುಕೆಂಪು ಗಿಡ್ಡ ಮೆಣಶಿನಕಾಯಿಗಳನ್ನು ತಿನ್ನು. ಅಂದರೆ, ನಾನು ನಿನಗೆ ನೂರು ರೂಪಾಯಿಗಳನ್ನು ಬಿಟ್ಟುಕೊಡುತ್ತೇನೆ" ಎಂದು ಹೇಳಿದನು. ಆಗ ಸಾಲಗಾರನು ಒಪ್ಪಿ, ನೂರು ಮೆಣಶಿನಕಾಯಿಗಳನ್ನು ತಿನ್ನಲಿಕ್ಕೆ ಆರಂಭ ಮಾಡಿದನು. ಆದರೆ ಅವನಿಂದ ಎಲ್ಲಾ ತಿನ್ನಲಿಕ್ಕೆ ಆಗಲಿಲ್ಲ. ಕಿಂತು ಐದು ಅಥವಾ ಹತ್ತು ಮೆಣಶಿನಕಾಯಿಗಳನ್ನು ತಿನ್ನುವದರೊಳಗೇ ಸಾಕಾಗಿಹೋಯಿತು. ಆಗ ರೂಪಾಯಿ ಕೊಟ್ಟವನು "ನೀನು ಪಾದರಕ್ಷೆಯ ನೂರು ಪೆಟ್ಟುಗಳನ್ನು ಸಹನಮಾಡಿಕೋ, ನಾನು ನಿನಗೆ ನೂರು ರೂಪಾಯಿಗಳನ್ನು ಬಿಟ್ಟ

---

* ಭೇದ ಬುದ್ಧಿಯಿಂದ ನಿಶ್ಚಯವಾಗಿಯೂ ದುಃಖವಾಗುತ್ತದೆಂದೂ, *ಎಲೈ ಜನಕನೇ ನೀನು ಅಭೇದ ಜ್ಞಾನವುಳ್ಳವನಾದ್ದರಿಂದ ಸುಖವನ್ನು ಹೊಂದಿರುವಿ ಎಂದೂ ಶ್ರುತಿಗಳು ಹೇಳುತ್ತವೆ.

CC-0. Jangamwadi Math Collection. Digitized by eGangotri

ಕೊಡುತ್ತೇನೆ" ಎಂದು ಹೇಳಿದನು. ಅದಕ್ಕೆ ಕಬೂಲಾಗಿ ಯಾವಾಗ ಕಾಲ್ಮರೆಯಿಂದ ಹೊಡಿಸಿಕೊಳ್ಳಲಿಕ್ಕೆ ಹತ್ತಿದನೋ, ಆಗ ಹತ್ತು ಹನ್ನೆರಡು ಹೊಡತಗಳು ಬೀಳುವದರೊಳಗೆ ಸಾಕಾಗಿ ಹೋಯಿತು. ನೂರು ಪೆಟ್ಟುಗಳನ್ನು ಸಹನ ಮಾಡುವದೂ ಅವನ ಕಡೆಯಿಂದ ಆಗಲಿಲ್ಲ. ಆದ್ದರಿಂದ ಉಳ್ಳೀಗಡ್ಡಿ, ಮೆಣಶಿನ ಕಾಯಿ, ಕಾಲ್ಮರೆಯ ಹೊಡತ ಇವುಗಳನ್ನು ಪುಗಸೆಟ್ಟಿಲೆ ತಿಂದು, ಮೇಲೆ ನೂರು ರೂಪಾಯಿಗಳನ್ನು ಕೊಡಬೇಕಾಯಿತು.

ಈ ದೃಷ್ಟಾಂತದಂತೆ, ಅಜ್ಞಾನಿಯಾದ ಮೂರ್ಖ ಪುರುಷನು ಸಂಸಾರದಲ್ಲಿ ಅನೇಕ ಪ್ರಕಾರ ದುಃಖಪಟ್ಟು, ಯಾವಾಗ ಆತ್ಮವನ್ನು ಬಲ್ಲ ಮಹಾತ್ಮರ ಬಳಿಗೆ ಉಪದೇಶದ ಸಲುವಾಗಿ ಶರಣಾಗತನಾಗುತ್ತಾನೋ, ಆಗ ಮಹಾತ್ಮರು ಅವನಿಗೆ 'ನೀನೇ ಬ್ರಹ್ಮಸಿದ್ದಿ' ಎಂದು ಉಪದೇಶಮಾಡುತ್ತಾರೆ. ಆಗ ಅವನು ಈ ಉಪದೇಶವನ್ನು ಯಾವ ರೀತಿಯಿಂದಲೂ ಅಂಗೀಕಾರ ಮಾಡುವದೇ ಇಲ್ಲ. ಆಗ ಮಹಾತ್ಮರು ಅವನಿಂದ ಅನೇಕ ದೇವತೆಗಳ ಉಪಾಸನವನ್ನೂ ಅನೇಕ ವ್ರತಗಳನ್ನೂ ಮಾಡಿಸಿ, ಬಳಿಕ ಅವನನ್ನು ಅನೇಕ ತೀರ್ಥಯಾತ್ರೆಗಳಲ್ಲಿ ತಿರುಗಿಸುವರು. ಹೀಗೆ ಮಾಡುವದೇ ಉಳ್ಳೀಗಡ್ಡಿ ಮೆಣಸಿನಕಾಯಿಗಳನ್ನು ತಿಂದಂತಾಯಿತು. ಆ ಮೇಲೆ, ಮಹಾತ್ಮರು ಮೊದಲು ಹೇಳಿದ ಮಾತನ್ನೇ ಸ್ವೀಕರಿಸುತ್ತಾರೆ. ಅಂದರೆ ಮೂರ್ಖನು ಖರೇ ಉಪದೇಶವನ್ನು ಗ್ರಹಿಸುವದಿಲ್ಲ. ಯಾವಾಗ ಸಂಚಾರದಲ್ಲಿ ಅತ್ತಿತ್ತ ತಿರುಗಾಡಿ ಬೇಸತ್ತು ಬರುವನೋ, ಆಗ ಅದ್ವೈತ ಶಾಸ್ತ್ರಗಳೆಂಬ ಕಾಲ್ಮರಿಯ ಹೊಡತ ತಿಂದು ನಾನು ಬ್ರಹ್ಮನಿದ್ದೇನೆಂದು ಅಂಗೀಕಾರ ಮಾಡಲಿಕ್ಕೇಬೇಕಾಗುವದು. ಆಗ ಇವನು ಶಾಂತಿಯನ್ನು ಹೊಂದುತ್ತಾನೆ. ಅತ್ತಿತ್ತ ತಿರುಗಾಡುವದನ್ನು ಬಿಡುತ್ತಾನೆ. ಈ ಕಥೆಯು ಜ್ಞಾನ ವೈರಾಗ್ಯ ಪ್ರಕಾಶವೆಂಬ ಹಿಂದುಸ್ತಾನಿ ಭಾಷೆಯ ಗ್ರಂಥದಲ್ಲಿ ಹೇಳಲ್ಪಟ್ಟಿರುತ್ತದೆ.

ಮತ್ತೂ ಇದೇ ವಿಷಯದಲ್ಲಿ [ಪ್ರಭಾತ ಘಟ್ಟಕುಟೀನ್ಯಾಯ] ಬೆಳಗಿನ ಜಕಾತಿ ಕಟ್ಟೆಯ ನ್ಯಾಯವೂ ಇರುತ್ತದೆ. ಹೇಗಂದರೆ, ಒಬ್ಬ ಗಳ್ಳಿಯವನು ತನ್ನ ಚಕ್ಕಡಿಯಲ್ಲಿ ಕಾಳಿನ ಚೀಲಗಳನ್ನು ಹೇರಿಕೊಂಡು, ಮಾರಾಟ ಮಾಡುವದಕ್ಕೆ ಒಂದು ಪಟ್ಟಣಕ್ಕೆ ಹೊರಟನು. ಪಟ್ಟಣದ ಸಮೀಪಕ್ಕೆ ಬರುವದರೊಳಗೆ ಹೊತ್ತು ಮುಳುಗಿ ಸ್ವಲ್ಪ ಕತ್ತಲೆಯಾಯಿತು. ಆಗ ಅವನು ತನ್ನ ಮನಸ್ಸಿನಲ್ಲಿ ಆಲೋಚನೆಯನ್ನು ಮಾಡಿದ್ದೇನಂದರೆ:- "ನಾನು ಹೀಗೇ ಈಗ ಊರೊಳಗೆ ಹೋದರೆ ಜಕಾತಿ ಕಟ್ಟೆಯವರು ಬಹಳೇ ಸುಂಕವನ್ನು ತಕ್ಕೊಳ್ಳುತ್ತಾರೆ. ಆದ್ದರಿಂದ ಈ ಹೊತ್ತು ರಾತ್ರಿ ಹೇಗಾದರೂ ಮಾಡಿ, ಈ ಮಾರ್ಗವನ್ನು ತಪ್ಪಿಸಿ ಬೇರೊಂದು ದಾರಿಯಿಂದ ಊರೊಳಗೆ ಪ್ರವೇಶ ಮಾಡಿದರಾಯಿತು. ಸುಳ್ಳೇ ಸುಂಕವನ್ನು ಏಕೆ ಕೊಡಬೇಕು?" ಎಂದು ನಿಶ್ಚಯ ಮಾಡಿ, ಅದೇ ಪ್ರಕಾರ ಮತ್ತೊಂದು ದಾರಿಯನ್ನು ಹಿಡಿದು ಬೆಳತನಕ ದಾರಿತಪ್ಪಿ ಗುಡ್ಡದೊಳಗೆಲ್ಲಾ ತಿರುಗಾಡಿ, ಬಹಳ ಕಷ್ಟಪಟ್ಟು

CC-0. Jangamwadi Math Collection. Digitized by eGangotri

ಬೆಳಗಾಗುವ ಸಮಯದಲ್ಲಿ ಜಕಾತಿ ಕಟ್ಟೆಯ ಮುಂದೇ ಬಂದುನಿಂತನು. ಜಕಾತಿ ಕಟ್ಟೆಯವನು ಗಾಡಿಯನ್ನು ತರಬಿ ಸುಂಕವನ್ನು ತಕ್ಕೊಂಡು ಮುಂದಕ್ಕೆ ಗಾಡಿಯನ್ನು ಬಿಟ್ಟನು. ಬೆಳತನಕ ಸುಮ್ಮನೆ ತಿರುಗಾಡಿ ದಣಿದು ಮತ್ತು ಜಕಾತಿಯನ್ನು ಕೊಟ್ಟೇ ಊರೊಳಗೆ ಹೋಗಬೇಕಾಯಿತು. ಮೊದಲೇ ಸುಂಕ ಕೊಟ್ಟಿದ್ದರೆ, ಸುಖವಾಗಿ ಊರೊಳಗೆ ಹೋಗುತ್ತಿದ್ದನು. ಈ ದೃಷ್ಟಾಂತದಂತೆ, ಮೋಕ್ಷಾಪೇಕ್ಷಿಯ ಸಾಧನಚತುಷ್ಟಯವೆಂಬ ಕಾಳಿನ ಚೀಲಗಳನ್ನು ಮನಸ್ಸೆಂಬ ಚಕ್ಕಡಿಯಲ್ಲಿ ಹೇರಿಕೊಂಡು, ಮೋಕ್ಷವೆಂಬ ನಗರಕ್ಕೆ ಹೋಗುವಷ್ಟರೊಳಗೆ, ಆ ಮೋಕ್ಷ ನಗರದ ಮುಂಭಾಗದಲ್ಲಿ ವೇದಾಂತವೆಂಬ ಜಕಾತಿ ಕಟ್ಟೆಯಿತ್ತು. ಅಖಂಡಾದ್ವೈತ ತತ್ವವನ್ನು ಪದೇಶಮಾಡುವಂಥಾ ಗುರುವೆಂಬಕಟ್ಟೆಯ ಯಜಮಾನನೂ ಇದ್ದನು. ಇವರನ್ನು ಕಂಡು, ಅವಿದ್ಯಾ ಕಾಮ ಕರ್ಮಗಳೆಂಬ ಜಕಾತಿ ಸುಂಕವನ್ನು ಕೊಡಬೇಕಾಗುತ್ತದೆಂದು ತಿಳಕೊಂಡು, ಮೋಕ್ಷನಗರದೊಳಗೆ ಬರದೆ, ಅಜ್ಞಾನವೆಂಬ ನಸುಗತ್ತಲಯಲ್ಲಿ ಕರ್ಮೋಪಾಸನೆಗಳಿಂದಾಗಲಿ, ತೀರ್ಥಯಾತ್ರೆಯಿಂದಾಗಲಿ, ಅಥವಾ ಯಾವದೊಂದು ಮಾರ್ಗದಿಂದಾಗಲಿ, ಮೋಕ್ಷವೆಂಬ ನಗರದೊಳಗೆ ಪ್ರವೇಶಮಾಡಬೇಕನ್ನುವಷ್ಟರಲ್ಲಿ, ಪಾಪ–ಪುಣ್ಯಗಳಿಂದ ಜನನ–ಮರಣಗಳೆಂಬ ಗುಡ್ಡದ ದಾರಿಹಿಡಿದು, ಜನ್ಮ ಜರೆ ರೋಗಗಳಿಂದ ದುಃಖಪಟ್ಟು, ವಿವೇಕೋದಯವೆಂಬ ಸೂರ್ಯೋದಯವಾಗಲು, (ಬೆಳಗಾಗಲು) ವೇದಾಂತವೆಂಬ ಜಕಾತಿಕಟ್ಟೆ ಬಂತು. ಅದರಲ್ಲಿ ಸದ್ಗುರುವೆಂಬ ಕಟ್ಟೆಯ ಯಜಮಾನನೂ ಕೂತಿದ್ದನು. ಈ ಯಜಮಾನನು, ಈ ಮುಮುಕ್ಷು ಪುರುಷನು ಮೋಕ್ಷನಗರದೊಳಗೆ ಪ್ರವೇಶ ಮಾಡುತ್ತಾನೆಂದು ತಿಳಿದು, ವೇದಾಂತಶ್ರವಣವೆಂಬ, ಚಕ್ಕು ಮಾಡಿ; ಅವಿದ್ಯಾ ಕಾಮ, ಕರ್ಮಗಳೆಂಬ ಸುಂಕವನ್ನು ತಕ್ಕೊಂಡೇ ಮೋಕ್ಷನಗರದೊಳಗೆ ಬಿಟ್ಟನು.

ಈ ನ್ಯಾಯದ ತಾತ್ಪರ್ಯವೇನಂದರೆ,"ತಮೇವ ವಿದಿತ್ವಾಽತಿಮೃತ್ಯುಮೇತಿ ನಾನ್ಯಃಪಂಥಾ ವಿದ್ಯತೆ ಅಯನಾಯ" ಏಕಮೇವಾದ್ವಿತೀಯ ವಸ್ತುವನ್ನು ತಿಳಿದರೆ ಅವನು ಸಂಸಾರವನ್ನು ದಾಟುತ್ತಾನೆ. ಅಂದರೆ ಜ್ಞಾನವೇ ಮೋಕ್ಷಕ್ಕೆ ಮುಖ್ಯ ಉಪಾಯವಾಗಿರುತ್ತದೆ. ಇದನ್ನು ಬಿಟ್ಟು ಮೋಕ್ಷವನ್ನು ಹೊಂದಬೇಕೆಂದರೆ, ಬೇರೆ ದಾರಿಯೇ ಇಲ್ಲ, ಎಂದು ಶ್ರುತಿಯು ಒಂದೇಸವನೆ ಕೂಗುತ್ತಿರುತ್ತದೆ. ಆದ್ದರಿಂದ ಇಂಥಾ ಜ್ಞಾನವನ್ನು ಪದೇಶಿಸುವ ಗ್ರಂಥವನ್ನು ಬಿಟ್ಟು, ದ್ವೈತವಾದಿಗಳ ವಾಗ್ಜಾಲಕ್ಕೆ ಮರುಳಾಗಿ ಅನ್ಯಸಾಧನಗಳನ್ನು ಆಶ್ರಯಿಸಿದವನು, ಪುನಃ ಪುನಃ ಹುಟ್ಟಿ ದುಃಖಪಟ್ಟು ಮರಳಿ ಈ ಗ್ರಂಥಕ್ಕೆ ಶರಣು ಬಂದೇ ಮೋಕ್ಷವನ್ನು ಪಡೆಯಬೇಕಾಗುತ್ತದೆಂಬ ತಾತ್ಪರ್ಯವು.

ವಿಷಯ ಸೂಚನೆ.

ಬಳಿಕ ಈಗಿನ, ಹಿಂದಿನ, ಮುಂದಿನ ತನ್ನ ಸ್ಥಿತಿಗತಿಗಳನ್ನು ತಾನು ವಿಚಾರ ಮಾಡಿ ನೋಡದೆ, ಕೇವಲ ಭೋಗದತ್ತ ಲೋಲುಪ್ತನಾಗಿ ಕಾಲವನ್ನು ವ್ಯರ್ಥ ಕಳೆಯಬಾರದೆಂದು ಹೇಳುತ್ತಾರೆ:—

CC-0. Jangamwadi Math Collection. Digitized by eGangotri

ತನ್ನ ನಿಜಸ್ಥಿತಿಯಃರಿಯದೆ।
ಮುನ್ನಿನ ಭವದಾಗುಹೋಗುಗಳ ನಾರೈಯ್ಯದೆ ||
ಇನ್ನೊದಗುವ ಗತಿಗಾಣದೆ।
ಭಿನ್ನಣ ಮುಳ್ಳಿಡೆಯೊಳುಣ್ಣಲಂತವನೆಂಗಂ ||೭||

ಟೀಕಾ:—ತನ್ನ=ಸ್ವಕೀಯ, ನಿಜಸ್ಥಿತಿ=ಸರ್ವೋಪಾಧಿ ನಿರ್ಮುಕ್ತವಾದ ಪ್ರತ್ಯಗಾತ್ಮ ಸ್ವರೂಪವನ್ನು, ಅರಿಯದೆ=ಗುರುಶಾಸ್ತ್ರಗಳಿಂದ ವಿಚಾರಮಾಡಿ ತಿಳಿಯದೆ, ಮುನ್ನಿನ=ಮೊದಲಿನ, ಭವದ=ಜನನ ಮರಣರೂಪ ಸಂಸಾರದ, ಆಗುಹೋಗುಗಳನು=ಅನೇಕ ಜಾತಿಯ ಶರೀರಗಳು ಬಂದು ಹೋಗಿರುವದನ್ನು, ಆರೈಯ್ಯದೆ=ವಿಚಾರದಿಂದ ಸ್ಮರಣಕ್ಕೆ ತಂದುಕೊಳ್ಳದೆ, ಇನ್ನು=ಮುಂದೆ, ಒದಗುವ=ಕರ್ಮಾನುಗುಣವಾಗಿ ಪ್ರಾಪ್ತವಾಗುವ, ಗತಿಗಾಣದೆ=ಜನ್ಮಭೋಗಗಳನ್ನು ವಿವೇಕದೃಷ್ಟಿಯಿಂದ ನೋಡದೆ, ಭಿನ್ನಣಮುಳ್ಳ=ವೈರತ್ವಬುದ್ಧಿಯುಳ್ಳವನ, ಎಡೆಯೊಳ್=ಮನೆಯಲ್ಲಿ, ಉಣ್ಣಲ್=ಊಟಮಾಡಿದಂಥಾ, ಅಂತವನ=ಆ ಪುರುಷನ ಎಂಗಂ=ಮೂರ್ಖತ್ವದಂತೆ ಆಗುವದು.

ತಾತ್ಪರ್ಯ:— ದೇಹ, ಇಂದ್ರಿಯ, ಪ್ರಾಣ, ಮನ, ಬುದ್ಧಿ, ಅಹಂಕಾರ ಮೊದಲಾದ ಅನಾತ್ಮ ವಸ್ತುಗಳು ಅವಿದ್ಯೆಯಿಂದ ಕಲ್ಪಿತಗಳಾಗಿರುವದರಿಂದ ಆತ್ಮಸ್ವರೂಪಗಳಾಗಲಾರವು. ಇವುಗಳಿಗೆ ಕಾರಣವಾದ ಅವಿದ್ಯೆಯೂ ಆಗಲಾರದು. ಈ ಕಾರ್ಯ ಕಾರಣಗಳಿಗೆ ಸಾಕ್ಷಿಯಾದ ಸ್ವಯಂಪ್ರಕಾಶನಾದ ಪ್ರತ್ಯಗಾತ್ಮನೇ ತಾನಾಗಿರುವನು. ಅಂದರೆ, ಇಂಥಾ ತನ್ನ ನಿಜವು ಸ್ಥೂಲ ಸೂಕ್ಷ್ಮ ಕಾರಣ ಶರೀರಗಳಿಗೆ ಸಾಕ್ಷಿಯಾಗಿರುವದೆಂಬ ತಾತ್ಪರ್ಯವು. ಇಂಥಾ ನಮ್ಮ ನಿಜ ಸ್ವರೂಪವು ನಮ್ಮ ಅನುಭವಕ್ಕೆ ಹೇಗೆ ಬರುವದು? ಅಂದರೆ, ನಿದ್ರೆಯಲ್ಲಿ ಮನ ಮೊದಲಾದ ಇಂದ್ರಿಯಗಳು ತಮ್ಮ ಕಾರಣವಾದ ಅವಿದ್ಯೆಯಲ್ಲಿ ಅಡಗಿಕೊಂಡಿರುತ್ತವೆ. ಆಗ ತಾನು ಆ ಅವಿದ್ಯೆಗೆ ಸಾಕ್ಷಿಯಾಗಿ ತನ್ನ ಮಹಿಮೆಯಲ್ಲಿ ತಾನೇ ಆನಂದರೂಪದಿಂದಿರುತ್ತಾನೆ. ನಿದ್ರೆಯಿಂದ ಎಚ್ಚತ್ತು ಜಾಗ್ರತಕ್ಕೆ ಬಂದ ಬಳಿಕ ನಾನು ಏನೂ ತಿಳಿಯಲಿಲ್ಲ. ಆನಂದಮಯನಾಗಿದ್ದೇನೆಂದು ತನ್ನ ಅನುಭವವನ್ನು ಹೇಳುತ್ತಾನೆ. ಆದ್ದರಿಂದ ನಿದ್ರೆಯಲ್ಲಿ ತನು, ಮನ, ಮೊದಲಾದವುಗಳು ಏನೂ ಇಲ್ಲದೆ, ಯಾವದು ಆನಂದಮಯವಾಗಿತ್ತೋ ಅದೇನಾನಿದ್ದೇನೆಂದು ತನ್ನ ಅನುಭವದಿಂದ ತಾನೇ ತಿಳಕೊಳ್ಳಬೇಕು. ಇಂಥಾ ತನ್ನ ನಿಜವನ್ನು ಶ್ರುತಿ, ಗುರು, ಸ್ವಾನುಭವಗಳಿಂದ ವರ್ತಮಾನಕಾಲದಲ್ಲಿ ವಿಚಾರಮಾಡಿ ತಿಳಕೊಳ್ಳಲಿಲ್ಲ.

ಮತ್ತು ಈ ದೇಹ ಪ್ರಾಪ್ತಿಯಾಗುವದಕ್ಕಿಂತ ಪೂರ್ವದಲ್ಲಿ ದೇವ, ಮನುಷ್ಯ, ಪಶು, ಪಕ್ಷಿ, ಮೊದಲಾದ ಎಷ್ಟೋ ಶರೀರಗಳು ಬಂದುಹೋಗಿರುತ್ತವೆ. ಇವು

CC-0. Jangamwadi Math Collection. Digitized by eGangotri

ಗಳನ್ನು ವಿಚಾರಮಾಡುವದರಿಂದ ಮೇಲಿಂದಮೇಲೆ ಒದಗುವ ಗರ್ಭವಾಸ, ಜನ್ಮ, ಜರಾ, ಮರಣ, ನರಕಯಾತನ, ಸ್ವರ್ಗಪತನ ಮೊದಲಾದ ದುಃಖಗಳು ಕಾಣುತ್ತವೆ. ಅನಂತರ 'ಸಂಸಾರ ಸಾಕು' ಎಂದು ವಿಷಯಗಳಲ್ಲಿ ವೈರಾಗ್ಯಶಾಲಿಯಾಗಿ, ಆತ್ಮಾನಾತ್ಮ ವಿಚಾರ ವಿವೇಕ ಮಾಡುತ್ತಾ ಜ್ಞಾನದ್ವಾರ ಮುಕ್ತನಾಗುತ್ತಾನೆ. ಪರಂತು ಈ ಪ್ರಕಾರ ತನ್ನ ಹಿಂದಿನ ಸ್ಥಿತಿಗತಿಯನ್ನು ತಾನು ವಿಚಾರಮಾಡಲಿಲ್ಲ.

ಮತ್ತು ಇನ್ನುಮುಂದಾದರೂ ಪುಣ್ಯ ಪಾಪ ಕರ್ಮಗಳಿಂದ ಸ್ವರ್ಗ ನರಕ ಲೋಕಗಳಿಗೆ ಹೋಗಿ, ಸುಖ ದುಃಖಗಳನ್ನು ಭೋಗಿಸಿ, ಬಳಿಕ ಈ ಲೋಕಕ್ಕೆ ಬಿದ್ದು, ಇಲ್ಲಿ ಮನುಷ್ಯ ಕ್ರಿಮಿಕೀಟಕ ಮೊದಲಾದ ಶರೀರಗಳನ್ನು ಹೊತ್ತುಕೊಂಡು ತಿರುಗಬೇಕಾಗುತ್ತದೆ, ಎಂಬುದನ್ನು ವಿವೇಕದೃಷ್ಟಿಯಿಂದ ನೋಡದೆ; ಕೇವಲ ಸ್ತ್ರೀ-ಪುತ್ರವಿತ್ತಾದಿ ವಿಷಯಗಳಲ್ಲಿ ಲೋಲುಪ್ತನಾಗಿ ಕೂತುಕೊಂಡರೆ ತನ್ನ ನಾಶವನ್ನು ತಾನೇ ಮಾಡಿಕೊಳ್ಳುತ್ತಾನೆ. ಹೇಗೆಂದರೆ, ವೈರಿಯು ತನ್ನ ಮನೆಗೆ ತನ್ನನ್ನು ಊಟಕ್ಕೆ ಕರೆಯಲು, ಒಬ್ಬ ಮೂರ್ಖನು ಇವನು ಮಿತ್ರನೋ? ವೈರಿಯೋ? ಅಥವಾ ಉದಾಸೀನನೋ, ಇವನಮನೆಗೆ ಊಟಕ್ಕೆ ಹೋಗುವದು ಯೋಗ್ಯವೋ ಅಲ್ಲೋ ಎಂಬ ಮೊದಲಾದ ವಿಚಾರಗಳನ್ನು ಮಾಡಲಿಲ್ಲ. ಇವನು ನನ್ನ ಶತ್ರು ಇದ್ದಾನೆ. ಎಂದು ಸ್ಮರಣಕ್ಕೂ ತಂದುಕೊಳ್ಳಲಿಲ್ಲ. ಇವನ ಮನೆಗೆ ಹೋಗಿ ಊಟಮಾಡಿದರೆ, ವಿಷಹಾಕಿ ಕೊಂದಾನು ಎಂದು ಮುಂದಿನ ವಿಚಾರವನ್ನೂ ಮಾಡಲಿಲ್ಲ. ವೈರಿಯು ಊಟಕ್ಕೆ ಕರೆದಾಕ್ಷಣವೇ ಅವನ ಮನೆಗೆ ಹೋಗಿ ಊಟಮಾಡಿ ಸತ್ತುಹೋದ ಮೂರ್ಖನಂತೆ, ಮನುಷ್ಯನುತನ್ನ ಈಗಿನ, ಹಿಂದಿನ, ಮುಂದಿನ ವಿಚಾರಗಳನ್ನು ಮಾಡದೆ ವಿಷಯಸುಖದಲ್ಲಿ ಮುಳುಗಿಹೋದರೆ, ಸ್ತ್ರೀ ಮೋಹಕ್ಕೆ ಬಿದ್ದು ಸುಂದೋಪಸುಂದರು ನಾಶವಾದಂತೆ, ತನ್ನ ಅನರ್ಥವನ್ನು ತಾನೇ ಮಾಡಿಕೊಳ್ಳುತ್ತಾನೆ.

ಬಳಿಕ, ಜೀವಾತ್ಮ ಪರಮಾತ್ಮರಿಬ್ಬರು ಉಪಾಧಿ ಮೂಲಕ ಭೇದವಿದ್ದಂತೆ ತೋರಿಬಂದರೂ, ಸ್ವರೂಪತಃ ಅಭೇದರಿರುತ್ತಾರೆ. ಆದ್ದರಿಂದ ಯಾವಾತನು ತನ್ನಸ್ವರೂಪವನ್ನು ತಿಳಿಯುವನೋ, ಅವನು ವೇದ, ಗುರು, ದೇವ ಇವರನ್ನು ತಿಳಿದವನು ಎಂದು ಜ್ಞಾನದ ಸ್ತುತಿಯನ್ನೂ, ಈ ಗ್ರಂಥವಲ್ಲಿರುವ ಜೀವಬ್ರಹ್ಮೈಕ್ಯವನ್ನೂ, ಈ ಕಂದದಲ್ಲಿ ಚನ್ನಾಗಿ ಪ್ರತಿಪಾದನ ಮಾಡುತ್ತಾರೆ.

ತನ್ನ ನಿಜಾನು ಸರಣದಿಂ ।
ದುನ್ನಿಸುವದು ವೇದದೈವ ಗುರುಕುಲವದರಿಂ ॥
ಮುನ್ನವೆ ತನ್ನಂ ತಿಳಿದೊಡ ।
ವಂ ನಿಜದಿಂ ನೋಡೆ ವೇದ ದೈವ ಗುರುಜ್ಞಂ ॥ ೮ ॥

CC-0. Jangamwadi Math Collection. Digitized by eGangotri

ಟೀಕಾ:— ತನ್ನ=ಸ್ವಕೀಯವಾದ, ನಿಜ=ಪಾರಮಾರ್ಥಿಕ ಸ್ವರೂಪದ, ಅನುಸರಣದಿಂದ=ಅನುಭವದಿಂದ, ವೇದ ದೈವ ಗುರುಕುಲವ=ವೇದ, ದೈವ, ಗುರುಗಳನ್ನೂ ಕುರಿತು, ಉನ್ನಿಸುವದು=ನನ್ನಂತಿರುವರೆಂದು ಅನುಮಾನ ಮಾಡುವದು, ಅದರಿಂ=ಆದ ಕಾರಣದಿಂದ, ತನ್ನಂ=ಅಖಂಡ ಪ್ರತ್ಯಗಾತ್ಮ ಸ್ವರೂಪನಾದ ತನ್ನನ್ನು, ಮುನ್ನವೆ=ವೇದಾದಿಗಳನ್ನು ತಿಳಿಯುವದಕ್ಕಿಂತ ಮುಂಚೆ, ತಿಳಿದೊಡೆ=ಅರತದ್ದಾದರೆ, ಆವಂ=ಆ ಪುರುಷನು, ವೇದ ದೈವ ಗುರುಜ್ಞಂ=ವೇದ, ದೇವ, ಗುರುಗಳನ್ನು ಬಲ್ಲವನು.

ತಾತ್ಪರ್ಯ:— ಪರ ಬ್ರಹ್ಮದ ಪ್ರಕಾಶದಿಂದ ಸೂರ್ಯ, ಚಂದ್ರ, ಅಗ್ನಿ, ನಕ್ಷತ್ರಾದಿಗಳು ಪ್ರಕಾಶಮಾನಗಳಾಗಿರುವವೆಂದು ತಿಳಿಯುವಂತೆ, ಬ್ರಹ್ಮಾಭಿನ್ನವಾದ ತನ್ನ ಪ್ರತ್ಯಗಾತ್ಮ ಸ್ವರೂಪ ಜ್ಞಾನದಿಂದ, ವೇದ ದೈವ ಗುರುಗಳು ಚೈತನ್ಯ ಸ್ವರೂಪರಾಗಿರುವರೆಂದು ತಿಳಿಯತಕ್ಕದ್ದು. ಅಂದರೆ, ಯಾವಾತನು ತನ್ನನ್ನು ಅರಿತಿರುನನೋ ಅವನು ವೇದ ಈಶ್ವರ ಗುರುಗಳನ್ನು ಅರಿತವನು. ಯಾವಾತನು ತನ್ನನ್ನು ತಿಳಕೊಳ್ಳಲಿಲ್ಲವೋ ಅವನು ವೇದ, ದೈವ, ಗುರುಗಳನ್ನು ತಿಳದವನಲ್ಲ. ಹೇಗಂದರೆ, ಯಾವಾತನು ಮಣ್ಣು, ಭಂಗಾರ, ಕಬ್ಬಿಣ ಇವು ಗಳನ್ನು ತಿಳದವನೋ ಅವನು ಕ್ರಮದಿಂದ ಗಡಿಗೆ-ಮಡಿಕೆಗಳನ್ನೂ ಸರಿಗೆ-ವಂಕಿ ಗಳನ್ನೂ ಕತ್ತರಿ-ಚೂರಿಗಳನ್ನೂ ತಿಳದವನು, ಯಾವಾತನು ಉಪಾದಾನ ಕಾರಣ ಗಳಾದ ಮಣ್ಣು, ಭಂಗಾರ, ಕಬ್ಬಿಣಗಳನ್ನು ತಿಳಿಯಲಿಲ್ಲೋ, ಅವನು ಯಾವ ಕಾರ್ಯ ಪದಾರ್ಥಗಳನ್ನೂ ತಿಳಿಯಲಿಲ್ಲ ಎಂಬ ಅಭಿಪ್ರಾಯವು. "ಏಕ ವಿಜ್ಞಾನೇನ ಸರ್ವವಿಜ್ಞಾತಂ", ಒಂದು ತಿಳಿಯೋಣದರಿಂದ ಸಕಲವು ತಿಳಿಯಲ್ಪಡು ವದು; ಎಂಬ ಶ್ರುತಿಯು ಇದ್ದಮೂಲಕ ತನ್ನನ್ನು ತಿಳದವನು ಎಲ್ಲವನ್ನೂ ತಿಳದವನು, ಎಂಬ ತಾತ್ಪರ್ಯವು.

ಅದು ಕಾರಣದಿಂ ತಾನಿ ।
ಲ್ಲದೊಡೇನುಂ ತೋರದಾಗಿ ತನ್ನ ಮೊದಲರಿ ॥
ವುದು ಪರತತ್ವಂ ಬೇರೆಂ ।
ಬುದು ಘಟಿಸದದೇಕೆ ನೋವೆನಲ್ ಶ್ರುತಿನಿಕರಂ ॥ ೯ ॥

ಟೀಕಾ:— ಅದು ಕಾರಣದಿಂ=ತನ್ನ ಜ್ಞಾನದಿಂದಲೇ ವೇದಾದಿಗಳ ಜ್ಞಾನ ವಾಗುವದರಿಂದ, ತಾನಿಲ್ಲದೊಡೆ=ಪರಬ್ರಹ್ಮಸ್ವರೂಪನಾದ ತಾನೊಬ್ಬನು ಇಲ್ಲ ದಿದ್ದರೆ, ಏನುಂ=ಈಶ್ವರ, ಗುರು ವೇದಗಳು, ತೋರದಾಗಿ=ಪ್ರತೀತಿಯಾಗದ್ದ ರಿಂದ, ತನ್ನ=ತನ್ನ ನಿಜವನ್ನು, ಮೊದಲು=ಗುರುವೇದಾದಿಗಳನ್ನರಿಯುವದಕ್ಕಿಂತ ಮುಂಚೆ, ಅರಿವುದು=ತಿಳಿಯುವದು, ಶ್ರುತಿನಿಕರಂ=ಶ್ರುತಿಗಳ ಸಮೂಹವು,

CC-0. Jangamwadi Math Collection. Digitized by eGangotri

ಏಕಂ ಏವ ಎನಲ್=ಸ್ವಗತ, ಸಜಾತಿ, ವಿಜಾತಿ, ಭೇದತ್ರಯಗಳಿಂದ ರಹಿತವಾಗಿ ಒಂದೇ ಪರಬ್ರಹ್ಮವಿರುತ್ತದೆಂದು ನಿಶ್ಚಯವಾಗಿ ಹೇಳುವದರಿಂದ, ಅದು=ಆ ಪರತತ್ವಂ=ಪರಬ್ರಹ್ಮವು, ಬೇರೆ=ತನಗಿಂತಲೂ ಭಿನ್ನ, ಎಂಬುದು=ಅನ್ನುವಂಥಾದ್ದು, ಘಟಿಸದು=ಸಿದ್ಧಿಸಲಾರದು.

ತಾತ್ಪರ್ಯ:—ಯಾವಾತನು ತನ್ನನ್ನು ತಾನು ಯಥಾರ್ಥವಾಗಿ ತಿಳಿಯುವನೋ, ಅವನು ವೇದ, ದೈವ, ಗುರುಗಳನ್ನು ಬಲ್ಲವನು ಎಂದು ಹೇಳೋಣದರಿಂದ, ಅಖಂಡ ಸಚ್ಚಿದಾನಂದ ಸ್ವರೂಪನಾದ ತಾನೊಬ್ಬನು ಇದ್ದರೆ, ಗುರು ವೇದಾದಿಗಳೆಲ್ಲವು ತೋರುವವೆಂದೂ, ತಾನಿಲ್ಲದಿದ್ದರೆ ಏನೂ ತೋರದೆಂದೂ ಹೇಳಿದಂತಾಯಿತು; ಹೇಗೆಂದರೆ, ಸ್ವಪ್ನಕ್ಕೆ ಅಧಿಷ್ಠಾನಭೂತನಾದ ತಾನೊಬ್ಬನಿದ್ದರೆ, ಸ್ವಪ್ನಕಲ್ಪಿತಗಳಾದ ಗುರುದೈವ ವೇದಾದಿಗಳೆಲ್ಲವೂ ತೋರುತ್ತವೆ. ತಾನಿಲ್ಲದಿದ್ದರೆ, ಸ್ವಪ್ನಕಲ್ಪಿತ ವಸ್ತುಗಳೇನೂ ತೋರುವದಿಲ್ಲ, ಎಂದು ಹೀಗೆ ಹೇಳುವದರಿಂದ ಈ ಗ್ರಂಥದಲ್ಲಿ ಏಕ ಜೀವವಾದವೂ ದೃಷ್ಟಿರೇವ ಸೃಷ್ಟಿಯೆಂಬ ವಾದವೂ ಪ್ರತಿಪಾದನಮಾಡಲ್ಪಡುತ್ತವೆಂಬ ತಾತ್ಪರ್ಯವು.

ಕುಂತೀ ಪುತ್ರನಾದ ಕರ್ಣನೇ ರಾಧಾಪುತ್ರನೆಂದು ತಿಳಕೊಂಡಂತೆ, ಪರಬ್ರಹ್ಮವೇ ಅವಿದ್ಯಾ ಮೂಲಕ ಜೀವನೆಂಬ ಹೆಸರನ್ನು ಪಡೆದಿರುವದು. ಆದ್ದರಿಂದ ಪರಬ್ರಹ್ಮ ಸ್ವರೂಪವು ತನಗಿಂತಲೂ ಭಿನ್ನ ಎಂದು ಹೇಳುವದು ಯೋಗ್ಯವಲ್ಲ. ಭಿನ್ನವೇ ಎಂದು ಹೇಳುವ ಪಕ್ಷದಲ್ಲಿ, ಚೇತನನಾದ ತನಗಿಂತಲೂ ಭಿನ್ನವಾದದ್ದು ಜಡವಾಗಿರಬೇಕಾಯಿತು. ಪರ ತತ್ವವು ಜಡವೆಂದು ಅಂಗೀಕರಿಸಿದರೆ, ನಿತ್ಯವೆಂಬುದನ್ನು ಬಿಟ್ಟು ಅನಿತ್ಯವಾದದ್ದೆನ್ನಬೇಕಾಗುವದು. ಇದಕ್ಕೂ ಒಡಂಬಟ್ಟರೆ ಈ ಮಾತು ಶಾಸ್ತ್ರಕ್ಕೂ ಮಹಾತ್ಮರ ಅನುಭವಕ್ಕೂ ವಿರೋಧವಾಗಿರುತ್ತದೆ. ಆದ್ದರಿಂದ ಪರ ತತ್ವವು ತನಗಿಂತಲೂ ಭಿನ್ನ ಎಂಬುದು ಸಂಭವಿಸುವದಿಲ್ಲ, ಎಂದು ಯುಕ್ತಿಯನ್ನು ಹೇಳಿ ಶ್ರುತಿ ಪ್ರಮಾಣವನ್ನೂ ತೋರಿಸುತ್ತಾರೆ— "ಏಕಮೇವಾದ್ವಿತೀಯಂ ಬ್ರಹ್ಮ" ಈ ಶ್ರುತಿಯಲ್ಲಿ ಏಕ, ಏವ, ಅದ್ವಿತೀಯ ಎಂಬ ಮೂರು ಪದಗಳಿರುತ್ತವೆ. ಇವು ಕ್ರಮದಿಂದ ಸ್ವಗತ, ಸಜಾತಿ, ವಿಜಾತಿ, ಭೇದತ್ರಯವನ್ನು ನಿರಾಕರಿಸುತ್ತ ಅಖಂಡ ಸ್ವರೂಪವಾದ ಪರ ತತ್ವವನ್ನು ಪ್ರತಿಪಾದನಮಾಡುತ್ತವೆ.

ಬಳಿಕ; ಅಧಿಕಾರಿ, ಸಂಬಂಧ, ಪ್ರಯೋಜನ, ವಿಷಯಗಳೆಂಬ ಅನುಬಂಧ ಚತುಷ್ಟಯವನ್ನು ಹೇಳಿ ಗ್ರಂಥಾರಂಭಮಾಡುತ್ತಾರೆ. ಬಳಿಕ ಶಿಷ್ಯನು ಭಕ್ತಿಯಿಂದ ಶ್ರೀಗುರುಗಳಿಗೆ ಶರಣಾಗತನಾಗಿ ತನ್ನ ಸ್ವರೂಪ ವಿಷಯವಾಗಿ ಪ್ರಶ್ನೆಯನ್ನು ಮಾಡುತ್ತಾನೆ.

CC-0. Jangamwadi Math Collection. Digitized by eGangotri

ಶ್ರೀಗುರುವಿಗೆ ಶಿಷ್ಯನು ಪೊಡಮಟ್ಟು ।
ರಾಗಂ ಮಿಗೆ ಭಕ್ತಿಯೊಳಳವಟ್ಟು ॥
ತನ್ನ ನಿಜಸ್ಥಿತಿ ತಾನೇನೆಂದು ।
ಮುನ್ನಿನ ಪರಿಭವವೆಂತಾಯ್ತೆಂದು ॥
ಇನ್ನಿದು ಪರಿವುದುಪಾಯಮಿದೆಂದು ।
ನನ್ನಿಯು ನೆನಗೀಗಳೆ ಪೇಳೆಂದು ॥
ಬಿನ್ನೈಸಿದೊಡೆ ಗುರೂತ್ತಮನಂದು ।
ಮನ್ನಿಸಿದನು ಶಿಷ್ಯನೊಳಿಂತೆಂದು ॥
ಕೇಳೆಲೆ ವಾಸಿಷ್ಠಾದಿಗಳಲ್ಲಿ ।
ಪೇಳಿದ ತತ್ವಾರ್ಥವನಿಂದಿಲ್ಲಿ ॥
ನಿನಗರುಪುವೆ ನಾನೀಗೀತೆಯೊಳು ।
ತನುಜನೆ ಕೇಳ್ಕೈ ತಿಳಿದೊಲವಿನೊಳು ॥೧॥

ಟೀಕಾ:— ಶಿಷ್ಯನು = ಮೋಕ್ಷಾಪೇಕ್ಷಿಯಾದವನು, ರಾಗಂ=ಪ್ರೀತಿಯು, ಮಿಗೆ=ಹೆಚ್ಚಾಗಲು, ಭಕ್ತಿಯೊಳ್=ಭಕ್ತಿಯಿಂದ, ಅಳವಟ್ಟು=ಕೂಡಿಕೊಂಡು, ಶ್ರೀಗುರುವಿಗೆ=ಶ್ರೋತ್ರಿಯಬ್ರಹ್ಮನಿಷ್ಠನಾದ ಸದ್ಗುರುವಿಗೆ, ಪೊಡಮಟ್ಟು=ಶರಣಾಗತನಾಗಿ, ತನ್ನ ನಿಜಸ್ಥಿತಿ=ತನ್ನ ಖರೇಸ್ವರೂಪವು, ತಾನೇನೆಂದು=ನಾನು ಯಾವದಾಗಿರುವೆನೆಂಬುದನ್ನು, ಮುನ್ನಿನ=ಮೊದಲಿನ, ಪರಿಭವವು=ಜನನ ಮರಣರೂಪ ಸಂಸಾರವು, ಎಂತಾಯ್ತೆಂದು = ಹೇಗೆ ಆಗುತ್ತದೆಂಬುದನ್ನು, ಇನ್ನು = ಬಳಿಕ, ಇದು = ಈ ಸಂಸಾರವು, ಪರಿವುದು = ನಾಶವಾಗುವದಕ್ಕೆ, ಉಪಾಯಂ=ಸಾಧನವು, ಇದೆಂದು=ಇದೇ ಆಗಿರುತ್ತದೆಂಬುದನ್ನು, ನನ್ನಿಯನು= ನಿಶ್ಚಯವಾಗಿ, ಎನಗೆ=ಶರಣಾಗತನಾದ ನನಗೆ, ಈಗಳೇ=ಪ್ರಶ್ನಮಾಡಿದ ಸಮಕಾಲದಲ್ಲಿಯೇ, ಪೇಳೆಂದು=ಹೇಳಬೇಕೆಂದು, ಬಿನ್ನೈಸಿದೊಡೆ=ಬೇಡಿಕೊಂಡ ಕೂಡಲೆ, ಅಂದು=ಆ ಹೊತ್ತಿನಲ್ಲಿ, ಗುರೂತ್ತಮನು=ಎಂಟು ಪ್ರಕಾರ ಗುರುಗಳಲ್ಲಿ ಶ್ರೇಷ್ಠನಾದ ವಿಹಿತಗುರುವು, ಇಂತೆಂದು=ಹೀಗೆಂದು, ಶಿಷ್ಯನೊಳ್= ಅಧಿಕಾರಿಯಾದ ಶಿಷ್ಯನಿಗೆ, ಮನ್ನಿಸಿದನು=ತಿಳಿಸಿದನು, ಎಲೆ=ಎಲೈ ಶಿಷ್ಯನೇ, ಕೇಳು=ಏಕಾಗ್ರಚಿತ್ತದಿಂದ ಆಲಿಸು, ವಾಸಿಷ್ಠಾದಿಗಳಲ್ಲಿ=ಯೋಗವಾಸಿಷ್ಠ ಶ್ರುತಿ, ಸ್ಮೃತಿ, ಪುರಾಣಾದಿಗಳಲ್ಲಿ, ಪೇಳಿದ=ಹೇಳಿದ, ತತ್ವಾರ್ಥವನು=ಖರೇ ಅರ್ಥವನ್ನು, ಇಂದು=ಈ ಹೊತ್ತು, ಇಲ್ಲಿ=ಈ ಸ್ಥಳದಲ್ಲಿ, ಆನು=ಶ್ರೀಮನ್ನಿಜಗುಣ ಶಿವಯೋಗಿಯಾದ ನಾನು, ನಿನಗೆ=ಅಧಿಕಾರಿಯಾದ ನಿನಗೋಸ್ಕರ, ಈ ಗೀತೆ

CC-0. Jangamwadi Math Collection. Digitized by eGangotri

ಯೊಳು=ಈ ಪರಮಾರ್ಥ ಗೀತೆಯಲ್ಲಿ, ಅರಪುವೆನು=ತಿಳಿಸುವೆನು, ತನುಜನೆ= ಎಲೈ ಮಗನೇ, ಒಲವಿನೊಳು=ಪ್ರೀತಿಯಿಂದ, ತಿಳಿದು=ಅರ್ಥಜ್ಞಾನಮಾಡಿ ಕೊಂಡು, ಕೇಳೈ=ಶ್ರವಣಮಾಡುವಂಥವನಾಗು.

ತಾತ್ಪರ್ಯ:— ವಿವೇಕ ವೈರಾಗ್ಯಶೀಲನಾದ ಶ್ರೀರಾಮಚಂದ್ರನು ಮೋಕ್ಷಾಪೇಕ್ಷಿಯಾಗಿತತ್ವಜ್ಞಾನವನ್ನು ಪಡೆದುಕೊಳ್ಳುವದಕ್ಕೋಸ್ಕರ ಭಯಭಕ್ತಿ ಯುಕ್ತನಾಗಿ ಶ್ರೀ ವಸಿಷ್ಠ ಗುರುಗಳಿಗೆ ಶರಣಾಗತನಾದನು. ಬಳಿಕ ತನ್ನ ನಿಜ ಸ್ವರೂಪವು ಯಾವದಾಗಿರಬಹುದು, ಎಂದು ಪ್ರಶ್ನೆಮಾಡಿದನು. ಯಾಕಂದರೆ ? ಚಾರ್ವಾಕರು ದೇಹಕ್ಕೆ ಆತ್ಮನೆನ್ನುವರು. ಚಾರ್ವಾಕೈಕ ದೇಶಿಗಳು ಇಂದ್ರಿಯ ಗಳಿಗೆ ಆತ್ಮನೆನ್ನುವರು. ಹಿರಣ್ಯಗರ್ಭವಾದಿಯು ಪ್ರಾಣಕ್ಕೆ ಆತ್ಮನೆನ್ನುವರು. ಉಪಾಸಕರು ಮನಸ್ಸಿಗೆ ಆತ್ಮನೆನ್ನುವರು. ಬೌದ್ಧನು ಬುದ್ಧಿಗೆ ಆತ್ಮನೆನ್ನುವನು. ಶೂನ್ಯವಾದಿಯು ಶೂನ್ಯಕ್ಕೆ ಆತ್ಮನೆನ್ನುವನು. ತಾರ್ಕಿಕರು ನಿದ್ರೆಯಲ್ಲಿ ಆತ್ಮನು ಜಡನಾಗಿರುತ್ತಾನೆಂದು ಹೇಳುವರು. ಪ್ರಭಾಕರನು ಹೊನ್ನಿಪುಳದಂತೆ ಆತ್ಮನು ಚಿಜ್ಜಡನಾಗಿರುತ್ತಾನೆಂದು ಹೇಳುವನು. ಸಾಂಖ್ಯರು ಆತ್ಮನು ಚಿದ್ರೂಪನೆನ್ನು ವರು. ಮತ್ತು ಆತ್ಮನ ಅಳತೆ ವಿಷಯದಲ್ಲಿ ಅಂತರಾಳನು ಆತ್ಮನು ಅಣುಪರಿಣಾಮ ನೆನ್ನುವನು. ದಿಗಂಬರನು ಆತ್ಮನು ದೇಹೋಚಿತ ಮಧ್ಯಮಪರಿಣಾಮವೆನ್ನು ವನು. ವೇದಾಂತಿಗಳು ಏಕ ಆತ್ಮನು ಪೂರ್ಣನೆನ್ನುವರು. ಮತ್ತು ಸಾಂಖ್ಯನ್ಯಾಯ, ವೈಶೇಷಿಕ, ಪ್ರಭಾಕರ ಮೊದಲಾದವರು ಹಲವಾತ್ಮರು ಪೂರ್ಣರಾಗಿರುವರೆಂದು ಹೇಳುವರು. ವೇದಾಂತಿಗಳು ಒಬ್ಬ ಆತ್ಮನೇ ಪೂರ್ಣರಾಗಿರುತ್ತಾನೆಂದು ಹೇಳು ವರು. ಆದ್ದರಿಂದ ಇವರೆಲ್ಲರು ಹೇಳುವದನ್ನು ಕೇಳಿ ಸಂಶಯದಿಂದ ಕೂಡಿದ ಮನಸ್ಸುಳ್ಳವನಾಗಿದ್ದೇನೆ. ದಯಾಸಿಂಧುವಾದ ಸದ್ಗುರುನಾಥನೇ, ನೀನು ಯಾವ ದಕ್ಕೆ ಆತ್ಮನೆಂದು ಹೇಳುತ್ತಿಯೋ ಅದನ್ನೇ ನಾನು ನಿಶ್ಚಯವಾಗಿನಂಬುತ್ತೇನೆ.

ಮತ್ತು ಈ ಸೃಷ್ಟಿಯು ಮೊದಲು ಹೇಗಾಯಿತು? ಯಾಕಂದರೆ, ಈ ಸಂಸಾ ರಚಕ್ರಕ್ಕೆ ಕಾಲವೇ ಕಾರಣವೆಂದು ಜೋತಿಷ್ಯಜ್ಞರು ಹೇಳುತ್ತಾರೆ. ಬೆಂಕಿಗೆ ಸುಡುವ ತನವು; ನೀರಿಗೆ ಕೆಳಮುಖವಾಗಿ ಹರಿಯುವ ತನವು ಸ್ವಭಾವವಾಗಿರು ವಂತೆ, ಈ ಜಗತ್ತು ಸ್ವಭಾವಸಿದ್ಧವಾಗಿರುತ್ತದೆಂದು ಲೋಕಾಯುತರು ಹೇಳು ತ್ತಾರೆ. ಸ್ತ್ರೀಯಳು ಋತುಮತಿಯಾದರೆ ಗರ್ಭಧಾರಣವಾಗಬೇಕು. ಚಂದ್ರನು ಉದಯನಾದರೆ ಸಮುದ್ರವು ಉಕ್ಕೇರಬೇಕು. ಎಂಬ ಒಂದುನಿಯತಿಯುಂಟು. ಅದು ಸಕಲ ವಸ್ತುಗಳಲ್ಲಿಯೂ ಕೂಡಿಕೊಂಡಿರುತ್ತದೆ. ಆ ನೀತಿಯೇ ಕಾರಣ ವೆಂದು ಪೂರ್ವಮೀಮಾಂಸಕರು ಹೇಳುತ್ತಾರೆ. ಎಷ್ಟೋ ಸ್ತ್ರೀಯರು ಋತುಮತಿ ಯುಳ್ಳವರಾದರೂ ಗರ್ಭಧಾರಣವನ್ನು ಮಾಡುವದಿಲ್ಲ. ಕಿಂತು ಆ ಸ್ತ್ರೀಯರಲ್ಲಿ ಯಾವಳೋ ಒಬ್ಬ ಸ್ತ್ರೀಯಳು ಗರ್ಭಧಾರಣವನ್ನು ಮಾಡುತ್ತಾಳೆ. ಆದ್ದರಿಂದ

CC-0. Jangamwadi Math Collection. Digitized by eGangotri

ಈ ಸೃಷ್ಟಿಯು ಅಕಸ್ಮಾತ್ ತನ್ನಿಂದ ತಾನೇ ಆಗಿರುತ್ತದೆಂದು ನಾಸ್ತಿಕರು ಹೇಳು ತ್ತಾರೆ. ಎಣ್ಣೆ, ಬತ್ತಿ, ಅಗ್ನಿ, ಈ ಮೂರೂಕೂಡಿಕೊಂಡು ದೀಪವನ್ನುಂಟು ಮಾಡುವಂತೆ, ಎಲೆ,ಅಡಿಕೆ, ಕಾಚು, ಸುಣ್ಣ, ಈ ನಾಲ್ಕೂಕೂಡಿ ಮುಖದಲ್ಲಿ ಕೆಂಪುಬಣ್ಣವನ್ನುಂಟುಮಾಡುವಂತೆ, ಭೂಮಿ, ಜಲ, ಅಗ್ನಿ, ವಾಯು, ಈ ನಾಲ್ಕು ಭೂತಗಳು ಕೂಡಿ ಈ ಜಗದ್ರಚನೆಯನ್ನು ಮಾಡಿರುತ್ತವೆಂದು ಜಗತ್ಸ ತ್ಯವಾದಿಗಳು ಹೇಳುತ್ತಾರೆ. ಸತ್ವ-ರಜ-ತಮೋಮಯವಾದ ಪ್ರಕೃತಿಯೇ ಕಾರ ಣವೆಂದು ಶಾಕ್ತೇಯರೂ, ಸಾಂಖ್ಯರೂ ಹೇಳುತ್ತಾರೆ. ಯೋಗಶಾಸ್ತ್ರಜ್ಞರು ಹಿರಣ್ಯಗರ್ಭನೇ ಕಾರಣನೆಂದು ಹೇಳುತ್ತಾರೆ. ವೇದಾಂತಿಗಳು ಬ್ರಹ್ಮವೇ ಕಾರಣವೆಂದು ಹೇಳುತ್ತಾರೆ. ಮತ್ತು ಈ ಸೃಷ್ಟಿಯು ಕರ್ತನಾದ ಈಶ್ವರನಿಂದ ರಚಿತವಾಗಿರುವದು ಅಂದರೆ, ಆ ಈಶ್ವರನು ಕುಂಬಾರನಂತೆ ಚಕ್ರದಂಡಾದಿ ಸಾಧನಗಳಿಂದ ಸಹಿತನೋ? ಅಥವಾ ರಹಿತನೋ? ಸಾಧನ ಸಹಿತನಾದರೆ ಜೀವತ್ವ ಪ್ರಾಪ್ತಿಯಾಗುವದು. ರಹಿತನಾದರೆ ಈ ವಿಚಿತ್ರರೂಪ ಜಗತ್ತನ್ನು ಹೇಗೆ ರಚನೆಮಾಡಿರುವನು? ಎಂಬ ಅನೇಕ ಸಂಶಯಗಳು ಬರುತ್ತವೆ, ಆದ್ದ ರಿಂದ ಈ ಜನನಮರಣ ರೂಪವಾದ ಸೃಷ್ಟಿಯು ಮೊದಲು ಯಾರಿಂದ ಹೇಗೆ ಆಯಿತು? ಎಂಬುದನ್ನು ನನಗೆ ನಿಶ್ಚಯವಾಗಿ ಹೇಳಿರಿ.

ಮತ್ತು ಈ ಸಂಸಾರವು ನಿವೃತ್ತಿಯಾಗಬೇಕಾದರೆ ಸಾಧನವೇನು? ಅಂದರೆ ಕರ್ಮ, ಉಪಾಸನಾ, ಜ್ಞಾನ ಈ ಮೂರು ಕೂಡಿ ಸಾಧನವೋ? ಅಥವಾ ಒಂದೊಂದೇ ಸಾಧನಗಳೋ? ಅಥವಾ ಕರ್ಮ ಉಪಾಸನಾ, ಜ್ಞಾನ, ಜ್ಞಾನ ಕರ್ಮ, ಹೀಗೆ ಇವುಗಳ "ಸಮುಚ್ಚಯ" ಕೂಡುವಿಕೆಯೇ ಸಾಧನವೋ? ಯಾಕಂದರೆ, ಪೂರ್ವಮೀಮಾಂಸಕರು ಪಾಪ ಕರ್ಮತ್ಯಾಗ ಪೂರ್ವಕ ಪುಣ್ಯ ಕರ್ಮಗಳನ್ನು ಮಾಡುವದೇ ಮೋಕ್ಷಕ್ಕೆ ಸಾಧನವೆನ್ನುವರು. ನ್ಯಾಯವೈಶೇಷಿ ಕರು, ಮೊದಲು ಅನಾತ್ಮ ವಸ್ತುಗಳನ್ನು ವಿಚಾರಮಾಡಿದ ಮೇಲೆ ಆತ್ಮವಸ್ತು ತಾನೇ ಪ್ರಾಪ್ತಿಯಾಗುವದು. ಆದ್ದರಿಂದ ಅನಾತ್ಮ ವಿಚಾರವೇ ಮೋಕ್ಷಕ್ಕೆ ಸಾಧನವೆನ್ನುವರು. ಸಾಂಖ್ಯರು ಪ್ರಕೃತಿ ಪುರುಷರುಗಳ ವಿವೇಕವೇ ಮೋಕ್ಷಕ್ಕೆ ಸಾಧನವೆನ್ನುವರು. ಯೋಗ ಶಾಸ್ತ್ರಜ್ಞರು ಯಮ ನಿಯಮಾದಿ ಅಷ್ಟಾಂಗ ಪೂರ್ವಕ ಚಿತ್ತವೃತ್ತಿ ನಿರೋಧವೇ ಮೋಕ್ಷಕ್ಕೆ ಸಾಧನವೆನ್ನುವರು. ಆದ್ದರಿಂದ ತಾವು ನಿಶ್ಚಯವಾಗಿ ಮೋಕ್ಷೋಪಾಯವನ್ನು ತೋರಿಸಬೇಕು. ಯಾಕಂದರೆ, ಕಣ್ಣೊಳಗಿನ ಹಳ್ಳು, ಕಾಲೊಳಗಿನ ಮುಳ್ಳು, ಸಾಲ, ರೋಗ, ಮನೆಕದನ, ಸಂಶಯ ಇವು ಏನುಮಾಡುತ್ತವೆಂದು ಉದಾಸೀನಮಾಡಬಾರದು. ಮಾಡಿದರೆ, ತನ್ನ ಅನರ್ಥವನ್ನು ತಾನೇ ಮಾಡಿಕೊಂಡಂತೆ ಆಗುತ್ತದೆಂಬ ನೀತಿ ವಚನವಿದ್ದ ಮೂಲಕ ಈ ನನ್ನ ಸಂಶಯವನ್ನು ಈಗಳೇ ಕಳೆಯಿರಿ ಎಂಬ ಅಭಿಪ್ರಾಯವು.

CC-0. Jangamwadi Math Collection. Digitized by eGangotri

ಶಿಷ್ಯನ ಪ್ರಶ್ನೆಗಳನ್ನು ಕೇಳಿ ಶ್ರೀ ವಸಿಷ್ಠ ಮಹರ್ಷಿಗಳು ಸಂತೋಷಭರಿತ ರಾಗಿ, ಮುಂದೆ ಹೇಳುವ ಪ್ರಕಾರ ಯೋಗ್ಯ ಉತ್ತರಗಳನ್ನು ಕೊಟ್ಟರುತ್ತಾರೆ. ಆ ಯೋಗವಾಸಿಷ್ಠ, ಶೃತಿ, ಸ್ಮೃತಿಪುರಾಣ, ಮೊದಲಾದವುಗಳಲ್ಲಿ ಹೇಳಲ್ಪಟ್ಟ ಅರ್ಥವನ್ನೇ ಸಂಗ್ರಹಿಸಿ, ಈ ಪರಮಾರ್ಥ ಗೀತೆಯಲ್ಲಿ ಶಿಷ್ಯನಾದ ನಿನಗೋಸ್ಕರ ನಾನುಪ್ರತಿಪಾದನ ಮಾಡುತ್ತೇನೆ. ಏಕಾಗ್ರ ಚಿತ್ತದಿಂದ ಕೇಳು, ಎಂದುಗುರು ಗಳು ಶಿಷ್ಯನಿಗೆ ಅಭಯವನ್ನು ಕೊಟ್ಟರು.

ಬಳಿಕ ನಿಜಸ್ವರೂಪವು ಪ್ರತ್ಯಕ್ಷ, ಅನುಮಾನ ಪ್ರಮಾಣಗಳಿಂದ ಗೋಚ ರವಾಗುವದಿಲ್ಲ. ಆದ್ದರಿಂದ ಅಸತ್, ಜಡ, ದುಃಖಾದಿಗಳಿಗೆ ವಿಲಕ್ಷಣವಾಗಿದ್ದ ಸಚ್ಚಿದಾನಂದ ವಸ್ತುವೇ ನಿನ್ನ ನಿಜಸ್ವರೂಪವು, ಎಂದು ಮೊದಲನೆಯ ಪ್ರಶ್ನಕ್ಕೆ ಉತ್ತರವನ್ನು ಹೇಳುತ್ತಾರೆ.

ಸುಜನ ಶಿರೋಮಣಿ ಶಿಷ್ಯನೆ ನಿನ್ನ ।
ನಿಜವೂಹಿಸಬಾರದು ಸಂಪನ್ನ ॥
ಅದು ವಚನಕೆ ಗೋಚರ ಮಲ್ಲೆಂದು ।
ಅದು ಮಾನಸಕೆ ವಿಷಯಮಲ್ಲೆಂದು ॥
ಪೇಳುತ್ತಂ ಮತ್ತೊಂದನುವಿಂದ ।
ಕೇಳುಪದೇಶಿಸ ಬೇಕದರಿಂದ ॥
ಸತ್ಯಜ್ಞಾನ ಸುಖಾತ್ಮಕನೆಂದು ।
ನಿತ್ಯಂ ಪರಿಪೂರ್ಣಂ ತಾನೆಂದು ॥
ದೃಶ್ಯವಿಲಕ್ಷಣದಿಂ ಕುರುಹಿಟ್ಟು ।
ವಶ್ಯಮಿದೆಂದೆನೆ ಲಕ್ಷಿಸಿಕೊಟ್ಟು ॥
ಮನಸಿಗೆ ಗೋಚರವೆಂದೆನಿಸುತ್ತ ।
ಜಾನಿಸಿ ಪೇಳಿತ್ತುಶ್ರುತಿಗಳ ಮೊತ್ತ ॥೨॥

ಟೀಕಾ:— ಸುಜನ=ಸದ್ಗುಣಿಗಳ ಮಧ್ಯದಲ್ಲಿ, ಶಿರೋಮಣಿ=ಶ್ರೇಷ್ಠವಾದ, ಶಿಷ್ಯನೆ=ಯೋಗ್ಯಾಧಿಕಾರಿಯೆ, ನಿನ್ನ=ನಿನ್ನ, ನಿಜವು=ಖರೇ ಸ್ವರೂಪವು,ಊಹಿಸ ಬಾರದು=ಅನುಮಾನಮಾಡಲಿಕ್ಕೆ ಬರಲಾರದು, ಸಂಪನ್ನ=ಸಾಧನ ಚತುಷ್ಟಯ ದಿಂದ ಕೂಡಿದಂಥಾ ಶಿಷ್ಯನೇ,ಅದು=ಆ ನಿನ್ನ ನಿಜಸ್ವರೂಪವು,ವಚನಕೆ=ನುಡಿಯ ವ್ಯಾಪಾರಕ್ಕೆ, ಗೋಚರಂ=ವಿಷಯವು, ಅಲ್ಲೆಂದು=ಆಗುವದಿಲ್ಲೆಂದು, ಅದು=ಆ ನಿನ್ನ ಖರೆಸ್ವರೂಪವು, ಮಾನಸಕೆ=ಮನಸ್ಸಿನ ಊಹೆಗೆ,ವಿಷಯಂ=ಪ್ರತೀತಿಯು,

CC-0. Jangamwadi Math Collection. Digitized by eGangotri

ಅಲ್ಲೆಂದು=ಆಗುವದಿಲ್ಲೆಂದು, ಶ್ರುತಿಗಳ=ವೇದಗಳ, ವೊತ್ತ=ಸಮೂಹವು, ಪೇಳುತ್ತಂ=ಹೇಳುತ್ತಾ, ಮತ್ತೊಂದು=ಬೇರೊಂದು ಪ್ರಕಾರದ, ಅನುವಿಂದ=ಉಪಾಯದಿಂದ, ಉಪದೇಶಿಸಬೇಕು=ತಿಳಿಸಬೇಕು, ಕೇಳು=ಏಕಾಗ್ರಚಿತ್ತದಿಂದ ಆಲಿಸು, ಆದರಿಂದ=ಆ ಉಪಾಯದಿಂದ, ದೃಶ್ಯವಿಲಕ್ಷಣದಿಂ=ಅಸತ್,ಜಡ,ದುಃಖ,ಅನಿತ್ಯ, ಪರಿಚ್ಛಿನ್ನಾತ್ಮಕ:ಮಾಯೆಗಿಂತಲೂ ವಿಪರೀತವಾಗಿರುವಂಥಾ,ಸತ್ಯ ಜ್ಞಾನ ಸುಖಾತ್ಮಕನೆಂದು=ಸಚ್ಚಿದಾನಂದ ಸ್ವರೂಪನೆಂದು, ನಿತ್ಯಂ ಪರಿಪೂರ್ಣಂ ತಾನೆಂದು=ಅಭಾವಚತುಷ್ಟಯ ತ್ರಿವಿಧ ಪರಿಚ್ಛೇದ ರಹಿತನಾದವನೆಂದು, ಕುರುಹಿಟ್ಟು=ಗುರ್ತು ಮಾಡಿಕೊಟ್ಟು, ವಶ್ಯವಿದು=ಸದಾಪ್ರಾಪ್ತವಾದದ್ದೆಂದು, ಎಂದೆನೆ=ಅನ್ನುವ ಹಾಗೆ, ಲಕ್ಷಿಸಿಕೊಟ್ಟು=ಅಪರೋಕ್ಷ ಮಾಡಿಕೊಟ್ಟು, ಮನಸಿಗೆ=ಅಂತಃಕರಣದ ವೃತ್ತಿವ್ಯಾಪ್ತಿಗೆ, ಗೋಚರವೆಂದು=ಸಾಕ್ಷಾತ್ಕಾರವಾಗುವದೆಂದು, ಎನಿಸುತ್ತ=ಬ್ರಹ್ಮವೆತ್ತರಿಂದ ಹೇಳಿಸುತ್ತ, ಜಾನಿಸಿ=ತಿಳಕೊಂಡು,ಪೇಳಿತು=ಹೇಳಿತು.

ತಾತ್ಪರ್ಯ:– ಅಖಂಡೈಕರಸವಾದ ನಿನ್ನ ಸ್ವರೂಪವು ರೂಪುವುಳ್ಳದ್ದಲ್ಲದ್ದರಿಂದ ಪ್ರತ್ಯಕ್ಷ ಪ್ರಮಾಣಕ್ಕೆ ವಿಷಯವಾಗುವದಿಲ್ಲ. ಚಿನ್ಹವಿಲ್ಲದ್ದರಿಂದ ಅನುಮಾನ ಪ್ರಮಾಣಕ್ಕೆ ಗೋಚರವಾಗುವದಿಲ್ಲ. "ಯತೋ ವಾಚೋ ನಿವರ್ತಂತೆ, ಅಪ್ರಾಪ್ಯ ಮನಸಾ ಸಹ" ಆದ್ದರಿಂದ ಮನೋ ಸಹಿತ ನುಡಿಗಳು ಆತ್ಮನನ್ನು ಕಾಣದೆ ಹಿಮ್ಮುಖಗಳಾಗಿರುತ್ತವೆಂದು ಶೃತಿ ಪ್ರಮಾಣವಿರುತ್ತದೆ. ಯಾವ ವಸ್ತುಗಳು ಗೋತ್ವವೆಂಬ ಜಾತಿ, ಕೆಂಪು ಹಸರುಗಳೆಂಬ ಗುಣ, ಓದುತ್ತಾನೆ ಅಡಿಗೆ ಮಾಡುತ್ತಾನೆಂಬ ಕ್ರಿಯೆ, ಅವಯವ ಅವಯವಿಗಳೆಂಬ ಸಂಬಂಧ ಉಳ್ಳವುಗಳೋ, ಅವು ವಾಕ್ಕು ಮನಸ್ಸುಗಳಿಗೆ ವಿಷಯಗಳಾಗುತ್ತವೆ. ಆದರೆ, ನಿನ್ನ ನಿಜ ಸ್ವರೂಪವು ಅದ್ವಯವಾದ್ದರಿಂದ ಜಾತಿಯಿಲ್ಲ. ನಿರ್ಗುಣವಾದ್ದರಿಂದ ಗುಣವಿಲ್ಲ. ಅಕ್ರಿಯವಾದ್ದರಿಂದ ಕ್ರಿಯೆಯಿಲ್ಲ. ನಿರವಯವವಾದ್ದರಿಂದ ಸಂಬಂಧವಿಲ್ಲ. ಆದ್ದರಿಂದ ವಾಕ್ಕು ಮನಸ್ಸುಗಳಿಗೆ ಗೋಚರವಾಗುವದಿಲ್ಲ, ಎಂದು ಶೃತಿಗಳು ಹೇಳುತ್ತಾ; ದೃಶ್ಯವಿಲಕ್ಷಣ ದ್ವಾರಾತಟಸ್ಥ ಲಕ್ಷಣದಿಂದ ನಿನ್ನ ನಿಜವನ್ನು ಬೋಧ ಮಾಡುತ್ತವೆ. ಹೇಗಂದರೆ, ಅಸತ್, ಜಡ, ದುಃಖ, ಅನಿತ್ಯ, ಪರಿಚ್ಛಿನ್ನ ಲಕ್ಷಣಾತ್ಮಕ ದೃಶ್ಯವಾದ ಮಾಯೆಗೆ ದೃಗ್ರೂಪಮಾಗಿಯೂ, ಸತ್, ಚಿತ್, ಆನಂದ, ನಿತ್ಯ, ಪರಿಪೂರ್ಣ ಲಕ್ಷಣಗಳಿಂದ ಲಕ್ಷಿತವಾಗಿಯೂ, ಇರುವದೇ ನಿನ್ನ ನಿಜ ಸ್ವರೂಪವು, ಎಂದು ಈ ಉಪಾಯದಿಂದ ನಿನ್ನ ನಿಜವನ್ನು ನಿನಗೆ ಗೊತ್ತು ಮಾಡಿ ಕೊಟ್ಟು, ಜ್ಞಾನಾಜ್ಞಾನ ಅವಸ್ಥೆಗಳಲ್ಲಿ ನೀನು ಒಂದೇ ಪ್ರಕಾರವಾಗಿರುತ್ತೀ, ಎಂದು ಹೇಳಿ, ನಿನ್ನ ನಿಜವು ಬಹಿರ್ಮುಖಗಳಾದ ಮನೋ ವಾಕ್ಕುಗಳಿಗೆ ಅವೇದ್ಯವಾದರೂ; ಅಂತರ್ಮುಖಗಳಾದ ತತ್ವಮಸಿ ಮೊದಲಾದ ವಾಕ್ಯಗಳಿಂದಲೂ, ಆ ವಾಕ್ಯಗಳ ಶ್ರವಣ ಮನನ ನಿಧಿಧ್ಯಾಸನಗಳಿಂದುತ್ಪನ್ನವಾದ ಅಖಂಡ ಬ್ರಹ್ಮಾಕಾರ ಅಂತಃಕರಣ ವೃತ್ತಿವ್ಯಾಪ್ತಿಯಿಂದಲೂ, ಅಪರೋಕ್ಷವಾಗುತ್ತದೆಂದು

CC-0. Jangamwadi Math Collection. Digitized by eGangotri

“ಮನಸೈ ವೇದಮಾಸ್ತವ್ಯಂ” ಮೊದಲಾದ ಶ್ರುತಿ ರಾಶಿಯು ತಾನು ತಿಳಿದು ಬ್ರಹ್ಮವೇತ್ತರ ಮುಖದಿಂದ ಶಿಷ್ಯರಿಗೆ ಬೋಧ ಮಾಡಿಸುತ್ತದೆ.

ಸೂಚನೆ:– ನನ್ನ ನಿಜವು ಯಾವದು? ಎಂಬ ಮೊದಲಿನ ಪ್ರಶ್ನಕ್ಕೂ, ಮೊದಲು ಈ ಸೃಷ್ಟಿಯು ಹೇಗಾಯಿತು? ಎಂಬ ಎರಡನೆಯ ಪ್ರಶ್ನಕ್ಕೂ, ಉತ್ತರವನ್ನು ಆರನೆಯಗತಿ ಮುಗಿಯುವವರೆಗೆ ಹೇಳುತ್ತಾ ಹೋಗಿ, ಏಳನೇ ಗತಿಯಿಂದ ಹತ್ತನೇಗತಿಯವರೆಗೆ ಸಂಸಾರ ನಿವೃತ್ತಿಗೆ ಉಪಾಯವೇನೆಂಬ ಮೂರನೇ ಪ್ರಶ್ನಕ್ಕೆ ಉತ್ತರವನ್ನು ಹೇಳುತ್ತಾ, ಹನ್ನೊಂದನೇ ಗತಿಯಲ್ಲಿ ಯೋಗಿಯ ಚರಿತ್ರವನ್ನು ಹೇಳಿ ಗ್ರಂಥ ಸಮಾಪ್ತಿಯನ್ನು ಮಾಡುತ್ತಾರೆ. ಆದ್ದರಿಂದ ಈ ಅಭಿಪ್ರಾಯವನ್ನು ಮನಸ್ಸಿನಲ್ಲಿಟ್ಟುಕೊಂಡು ಮುಂದಿನ ಗ್ರಂಥವನ್ನು ಓದಬೇಕು.

ಬಳಿಕ, ಪೂರ್ವೋಕ್ತ ನಿನ್ನ ನಿಜಸ್ವರೂಪದಲ್ಲಿ ಅನಾದಿ, ಅನಿರ್ವಚನೀಯವಾದ ಮಾಯಾಶಕ್ತಿಯುಂಟು. ಆದರಿಂದಲೇ ಜಗದುತ್ಪತ್ತಿಯಾಗಿರುವದೆಂದು ಪ್ರತಿಪಾದನ ಮಾಡುತ್ತಾರೆ.

ನಿಜದೊಳು ಸದಸತ್ತಾಗಿಹ ಶಕ್ತಿ ।
ಅಜೆಯೆನಿಸುವದದು ಮಾಯಾಶಕ್ತಿ ॥
ಅದುವೆ ಜಗತ್ಕಾರಣ ಮಾಗಿಹುದು ।
ಅದರಿಂ ಪ್ರಕೃತಿಯೆನಿಸಿಕೊಳುತಿಹುದು ॥
ನಾನತ್ವಕೆ ಕಾರಣ ಮಾಗಿಹುದು ।
ಆನಂದಾಚ್ಛಾದಕ ಮಾಗಿಹುದು ॥
ಸದ್ಭಾವವ ನಿಲ್ಲೆನಿಸುತ್ತಿಹುದು ।
ಚಿದ್ಭಾವವನದು ಮುಸುಕಿರುತಿಹುದು ॥
ಉಳ್ಳ ಬ್ರಹ್ಮವ ನಿಲ್ಲೆನಿಸುವದು।
ಇಲ್ಲದ ಲೋಕವನುಂಟೆನಿಸುವದು॥
ಮಾನ್ಯನೆಯಿದು ನಿನ್ನನೆ ನೆಮ್ಮಿಹುದು।
ಅನ್ಯಾನನ್ಯೇತರ ಮಾಗಿಹುದು

ಟೀಕಾ:— ನಿಜದೊಳು=ನಿನ್ನ ಸಚ್ಚಿದಾನಂದ ಸ್ವರೂಪದಲ್ಲಿ, ಸದಸತ್ತು=ಮರಿವೆ ಅರಿವೆ ಕಾಲಗಳಲ್ಲಿ ಇತ್ತು ಇಲ್ಲೆಂದು, ಆಗಿಹ=ಆಗಿರುವಂಥಾ, ಶಕ್ತಿ=ಮಾಯಾಶಕ್ತಿಯು, ಅದು=ಆ, ಮಾಯಾಶಕ್ತಿ=ಅಘಟಿತಘಟನಾರೂಪವಾದಶಕ್ತಿಯು, ಅಜೆಯೆನಿಸುವದು=ಉತ್ಪತ್ತಿ ಇಲ್ಲದ್ದರಿಂದ ಅನಾದಿಯೆನಿಸುವದು, ಅದುವೆ=

CC-0. Jangamwadi Math Collection. Digitized by eGangotri

ಆ ಅನಾದಿಯಾದ ಮಾಯೆಯು, ಜಗತ್ಕಾರಣಂ=ಈ ನಾಮರೂಪಾತ್ಮಕ ಸೃಷ್ಟಿಗೆ ಕಾರಣವು, ಆಗಿಹುದು=ಆಗಿರುವದು, ಅದರಿಂ=ಜಗತ್ತಿಗೆ ಕಾರಣವಾಗುವದರಿಂದ, ಪ್ರಕೃತಿ=ವಿಕೃತಿಗಳಿಗೆಬೀಜವೆಂದು, ಎನಿಸಿಕೊಳುತಿಹುದು=ಹೇಳಿಸಿಕೊಳ್ಳುವದು, ನಾನತ್ವಕೆ=ಜಡಚೇತನಭೇದಗಳಿಗೆ, ಕಾರಣಂ=ಹೇತು, ಆಗಿಹುದು=ಆಗಿರುವದು, ಸದ್ಭಾವವನು=ಎಂದಿಗಾದರೂಇರುವಬ್ರಹ್ಮವನ್ನು, ಇಲ್ಲೆನಿಸುತ್ತಿಹುದು=ಇಲ್ಲೆಂದು ಹೇಳಿಸುತ್ತಿರುವದು, ಅದು=ಆ ಮಾಯೆಯು, ಚಿದ್ಭಾವವನು=ತನ್ನ ಸ್ವರೂಪಭೂತ ವಾದ ಜ್ಞಾನವನ್ನು, ಮುಸಿಕಿರುತಿಹುದು=ಮುಚ್ಚಿರುವದು, ಉಳ್ಳ ಬ್ರಹ್ಮವನು= ನಿತ್ಯವಾದ ಬ್ರಹ್ಮವನ್ನು, ಇಲ್ಲೆನಿಸುವದು=ಅಸತ್ತೆಂದು ಹೇಳಿಸುವದು, ಇಲ್ಲದ ಲೋಕವನು=ಅಭಾವವಾದಹದಿನಾಲ್ಕು ಲೋಕಗಳನ್ನು, ಉಂಟೆನಿಸುವದು=ಇರು ತ್ತವೆಂದು ಪ್ರತಿಪಾದನೆ ಮಾಡಿಸುವದು, ಮಾನ್ಯನೆ=ಮನ್ನಣೆಗೆ ಯೋಗ್ಯನಾದ ಶಿಷ್ಯನೇ, ಇದು=ಈಮಾಯೆಯು, ನಿನ್ನನ್ನೆ=ಸಚ್ಚಿದಾನಂದಸ್ವರೂಪನಾದನಿನ್ನನ್ನೇ ನೆಮ್ಮಿಹುದು=ಆಶ್ರಯವಮಾಡಿಕೊಂಡಿರುವದು, ಅನ್ಯ=ಭಿನ್ನ, ಅನನ್ಯ=ಅಭಿನ್ನ. ಇತರವಾಗಿ=ಈ ಭಿನ್ನಾಭಿನ್ನಗಳಿಗೆ ಬೇರೆಯಾಗಿ, ಇಹುದು=ಇರುವದು.

ತಾತ್ಪರ್ಯ:— ಅಗ್ನಿಯಲ್ಲಿ ದಾಹಕ ಶಕ್ತಿ, ಮಣ್ಣಿನಲ್ಲಿ ಜಿಗಿಶಕ್ತಿ ಇರು ವಂತೆ ಸಚ್ಚಿದಾನಂದ ಘನಸ್ವರೂಪನಾದ ನಿನ್ನಲ್ಲಿ ಒಂದುಮಾಯಾಶಕ್ತಿಯುಂಟು. ಅಗ್ನಿಯಲ್ಲಿರುವ ದಾಹಕ ಶಕ್ತಿಯು ಮಣಿ ಮಂತ್ರ, ಔಷಧಗಳಪ್ರತಿಬಂಧಕದಿಂದ ಇಲ್ಲೆಂದೂ, ಪ್ರತಿಬಂಧಕ ಅಭಾವದಿಂದ ಉಂಟೆಂದೂ, ಹೇಳಿಸಿಕೊಳ್ಳುವಂತೆ, ನಿನ್ನಲ್ಲಿರುವ ಮಾಯಾಶಕ್ತಿಯು ಅಜ್ಞಾನ ಮತ್ತು ಜ್ಞಾನ ಈ ಅವಸ್ಥೆಗಳಲ್ಲಿ ಉಂಟಿಲ್ಲೆಂದು ಹೇಳಿಸಿಕೊಳ್ಳುತ್ತದೆ. ಈ ಲಕ್ಷಣಾತ್ಮಕ ಮಾಯಾಶಕ್ತಿಯೇ ಉತ್ಪತ್ತಿಇಲ್ಲದ್ದರಿಂದ ಅನಾದಿಯೆನಿಸುವದು. ಮತ್ತು ಈ ಮಾಯೆಯೇ ವಿಚಿತ್ರ ವಾದ ನಾಮರೂಪಾತ್ಮಕ ಈ ಜಗತ್ತಿಗೆ ಕಾರಣವಾದ್ದರಿಂದ ಪ್ರಕೃತಿ ಯೆನಿಸಿ ಕೊಳ್ಳುವದು. ಅನೇಕ ಶರೀರಾದಿ ಕಾರ್ಯರೂಪದಿಂದ ಪರಿಣಮಿಸಿ ಸ್ಥೂಲ ಸೂಕ್ಷ್ಮ ಶರೀರಗಳಲ್ಲಿ ನಾನು ಎಂಬ ಅಭಿಮಾನವನ್ನುಂಟುಮಾಡಿ, ವಿಕ್ಷೇಪ ಶಕ್ತಿ ಯಿಂದ ಅನೇಕ ದುಃಖಗಳನ್ನು ಕೊಡುವದರಿಂದ ತನ್ನ ನಿಜಸ್ವರೂಪ ಭೂತ ವಾದ ಆನಂದವನ್ನು ಮುಚ್ಚಿರುವದು. ಈ ದೇಹಾದಿಗಳಿಗಿಂತಲೂ ಭಿನ್ನವಾಗಿ ಸದ್ರೂಪದಿಂದಿದ್ದ ತನ್ನ ನಿಜವನ್ನು ಇಲ್ಲೆನಿಸಿ, ಚಿದ್ರೂಪವನ್ನು ಮರೆಮಾಡಿ, ಎಂದಿಗೂ ನಾಶವಾಗದ ಪರಬ್ರಹ್ಮಸ್ವರೂಪನಾದ ತನ್ನನ್ನು ಮಿಥ್ಯೆಯೆಂದೆನಿಸಿ, ಮಾಯಾಮಯಗಳಾದ ಹದಿನಾಲ್ಕು ಲೋಕಗಳನ್ನು, ಸ್ವಪ್ನ ಇಂದ್ರಜಾಲದಾಟ ಗಳಂತೆ ರಚನೆ ಮಾಡಿ, ಜನರನ್ನು ಮೋಹಿಸಿ, ಇವು ಸತ್ಯವಾದವುಗಳೆಂದು ಅವರ ಮುಖದಿಂದ ನುಡಿಸಿ, ಚಂದ್ರನ ಕಲಂಕು ಚಂದ್ರನನ್ನು ನೆಮ್ಮಿರುವಂತೆ, ಈ ಮಾಯೆಯು ಸಚ್ಚಿದಾನಂದ ಸ್ವರೂಪನಾದ ನಿನ್ನನ್ನೇ ಆಶ್ರಯಮಾಡಿಕೊಂಡಿ

CC-0. Jangamwadi Math Collection. Digitized by eGangotri

ರುವದು. ಪರಂತು, ನಿನ್ನೊಡನೆ ಕೂಡಿಕೊಂಡೂ ಇಲ್ಲ; ನಿನಗಿಂತಲೂ ಭಿನ್ನವಾಗಿಯೂ ಇಲ್ಲ. ಕಿಂತು ಅನಿರ್ವಚನೀಯವಾಗಿರುತ್ತದೆ. ಹೇಗಂದರೆ, ಮಾಯೆಯು ಚೇತನಕಿಂತಲೂ ಭಿನ್ನವಿಲ್ಲ. ಯಾಕೆಂದರೆ ? ಭಿನ್ನವೆಂದು ಅಂಗೀಕರಿಸಿದರೆ, "ನೇಹ ನಾನಾಸ್ತಿ ಕಿಂಚನ" ಆತ್ಮನಕಿಂತಲೂ ಬೇರೆ ಯಾವದೂ ಇಲ್ಲೆಂಬ ಮೊದಲಾದ ಶ್ರುತಿಗಳಿಗೆ ವಿರೋಧವಾಗುತ್ತದೆ. ಮತ್ತು ಚೈತನ್ಯದೊಡನೆ ಅಭಿನ್ನವೆಂದೂ ಹೇಳಲಿಕ್ಕೆ ಬರುವದಿಲ್ಲ. ಯಾಕಂದರೆ ಜಡ, ಚೇತನಗಳಿಗೆ ಅಭೇದವೆಂದೂ ಆಗುವದಿಲ್ಲ. ಮತ್ತು ಮಾಯಾ ಚೇತನಗಳಿಗೆ ಭೇದಾಭೇದವಾದರೂ ಹೇಳಲಿಕ್ಕೆ ಬರುವದಿಲ್ಲ. ಅರ್ಥಾತ್, ಮಾಯೆಯು ಚೇತನಕ್ಕಿಂತ ಭಿನ್ನವೆಂದು ಹೇಳುವ ವಿಷಯದಲ್ಲಿ ದೃಷ್ಟಾಂತವೇ ಸಿಗುವದಿಲ್ಲ. ಮತ್ತು ಜಡ ಚೇತನಗಳಿಗೆ ಭೇದಾಭೇದವು ಯಾವ ರೀತಿಯಿಂದಲೂ ಸಂಭವಿಸುವದಿಲ್ಲ. ಯಾಕಂದರೆ, ಎರಡು ವಿರೋಧಿ ಧರ್ಮಗಳು ಒಂದರಲ್ಲಿ ಎಂದೂ ಕೂಡಿರುವದಿಲ್ಲ, ಈ ಕಾರಣದಿಂದ ಭೇದಾಭೇದ ಹೇಳಲಿಕ್ಕೆ ಬರುವದಿಲ್ಲ. ಇದರಂತೆ, ಮಾಯೆಗೆ ಸತ್ತು ಎಂದು ಹೇಳಲಿಕ್ಕೆ ಬರುವದಿಲ್ಲ. ಸತ್ತು ಎಂದು ಅಂಗೀಕರಿಸಿದರೆ, ಬ್ರಹ್ಮೊಂದು ಸತ್ಯ, ಮಾಯೆ ಒಂದು ಸತ್ಯ ಹೀಗೆ: ಎರಡು ಸತ್ಯಗಳಾದರೆ, ಅದ್ವೈತ ಶ್ರುತಿಯಿಂದ ವಿರೋಧ ಪ್ರಾಪ್ತವಾಗುತ್ತದೆ. ಒಂದು ಪಕ್ಷದಲ್ಲಿ ಮಾಯೆಯು ಅಸತ್ತೆಂದು: ಅಂಗೀಕರಿಸಿದರೆ, ಅಸತ್ತಾದ ಮಾಯೆಯು ಜಡ ಜಗತ್ತಿಗೆ ಕಾರಣವಾಗಲಾರದು. ಯಾಕಂದರೆ ಅಸತ್ತಿನಿಂದ ಜಗತ್ತಿನ ಉತ್ಪತ್ತಿಯಾಗಲಾರದು. ಅಸತ್ತೆಂಬ ಹೆಸರು ಅಭಾವಕ್ಕೆ ಇರುತ್ತದೆ. ಒಂದು ಪಕ್ಷಕ್ಕೆ ಅಭಾವದಿಂದ ಭಾವೋತ್ಪತ್ತಿಯನ್ನು ಅಂಗೀಕಾರ ಮಾಡಿದರೆ, ಘಟಕಾರ್ಯದ ಸಲುವಾಗಿ ಮೃತ್ತಿಕೆಯ ಜರೂರವೇ ಇಲ್ಲದಾಗ ಬೇಕಾಯಿತು. ಹೀಗಾದರೆ, ಸರ್ವ ವಸ್ತುಗಳ ಅಭಾವವು ಎಲ್ಲಕಡೆಯಲ್ಲಿಯೂ ಇರುತ್ತದೆ. ಆದರಿಂದ ಸರ್ವ ಪದಾರ್ಥಗಳು ಸರ್ವತ್ರ ಉತ್ಪತ್ತಿಯಾಗಬೇಕಾಯಿತು. ಹೀಗಾಗುವದು ಎಲ್ಲಿಯೂ ಕಂಡುಬರುವದಿಲ್ಲ. ಮತ್ತು ಅಭಾವದಿಂದ ಭಾವೋತ್ಪತ್ತಿಯೂ ಆಗುವದಿಲ್ಲ. ಆದ್ದರಿಂದ ಮಾಯೆಯು ಅಸತ್ತೂ ಅಲ್ಲ. ಮತ್ತು ಮಾಯೆಯು ಸತ್ತು ಅಸತ್ತು ಎರಡೂ ರೂಪ ಆಗುವದಿಲ್ಲ. ಯಾಕಂದರೆ, ವಿರೋಧಿ ಧರ್ಮದ್ವಯಗಳು ಒಂದರಲ್ಲಿರುವದಿಲ್ಲ. ಮತ್ತು ಮಾಯೆಯು ಸಾವಯವ ನಿರವಯವೂ ಆಗುವದಿಲ್ಲ. ಒಂದು ಪಕ್ಷದಲ್ಲಿ ಸಾವಯವ ಎಂದು ಅಂಗೀಕರಿಸಿದರೆ, ಆ ಮಾಯೆಗೆ ಮತ್ತೊಂದು ಕಾರಣ ಉಂಟೆಂದು ಅಂಗೀಕಾರ ಮಾಡಬೇಕಾಗುವದು. ಯಾಕಂದರೆ, ಯಾವದು ಸಾವಯವ ಪದಾರ್ಥವುಂಟೋ ಅದು ಯಾವದಾದರೊಂದು ಕಾರಣದಿಂದ ಅವಶ್ಯವಾಗಿಯೇ ಉತ್ಪನ್ನವಾಗಿರಲಿಕ್ಕೆ ಬೇಕು. ಈ ಕಾರಣದಿಂದ ಅದಕ್ಕೆ ಸಾವಯತ್ವ ಎಂದೂ ಗ್ರಹಣ ಮಾಡಲಿಕ್ಕೆ ಬರುವದಿಲ್ಲ. ಅಂಗೀಕಾರಮಾಡಿದರೆ, ಅನವಸ್ಥಾದಿ ದೋಷಗಳು ಪ್ರಾಪ್ತವಾಗುತ್ತವೆ. ಮತ್ತು ಮಾಯೆಯು ನಿರವಯವೆಂದೂ ಗ್ರಹಣಮಾಡಲಿಕ್ಕೆ ಬರುವದಿಲ್ಲ. ಯಾಕಂದರೆ, ನಿರವಯವ ಮಾಯೆಯಿಂದ ಸಾವಯವ ಜಗತ್ತಿನ

CC-0. Jangamwadi Math Collection. Digitized by eGangotri

ಉತ್ಪತ್ತಿಯನ್ನು ಅಂಗೀಕಾರಮಾಡಲಿಕ್ಕೆ ಬರುವದಿಲ್ಲ. ಮತ್ತು ಸಾವಯುವ ನಿರವಯುವಗಳೆರಡೂ ಒಂದರಲ್ಲಿ ಇರುವದೂ ಇಲ್ಲ. ಮತ್ತು ಯಾವದು ಸಾವಯುವ ವಾಗುವದೋ ಅದು ಎಂದೂ ನಿರವಯುವವಾಗುವದಿಲ್ಲ. ಯಾವದು ನಿರವಯುವ ವಾಗುವದೋ ಅದು ಎಂದೂ ಸಾವಯುವವಾಗುವದಿಲ್ಲ. ಎರಡೂ ಪರಸ್ಪರ ವಿರೋಧಗಳಾಗುವದರಿಂದ ಒಂದರಲ್ಲಿ ಕೂಡುವದೂ ಇಲ್ಲ. ಆದ್ದರಿಂದ ಮಾಯೆಯ ಸ್ವರೂಪವು ಅನಿರ್ವಚನೀಯುವಾಗಿರುತ್ತದೆ. ಯಾವದು ಯಾವ ಉಕ್ತ ರೀತಿಯಿಂದಲೂ ನಿರ್ವಚನಮಾಡಲಿಕ್ಕೆ ಬರುವದಿಲ್ಲವೋ, ಅದು ಅನಿರ್ವಚ ನೀಯುವೆಂದು ಹೇಳಿಸಿಕೊಳ್ಳಲ್ಪಡುತ್ತದೆ.

ಬಳಿಕ; ಏನೊಂದು ನಾಮರೂಪಾದಿಗಳಿಲ್ಲದಂಥಾ ನಿರ್ಗುಣನಾದ ನೀನು ಮಾಯೋಪಾಧಿಯಿಂದ ಸಚ್ಚಿದಾದಿ ಲಕ್ಷಣನೂ, ಸರ್ವಜ್ಞನೂ, ಸರ್ವನಿಯಂತ್ರನೂ ಎನಿಸಿ ಸಗುಣಮಹೇಶ್ವರನಾಗಿರುವಿ ಎಂದುಪ್ರತಿಪಾದನ ಮಾಡುತ್ತಾರೆ.

ಸಾಕ್ಷಾನ್ನಿರ್ಲಕ್ಷಣವಹ ನೀನು ।
ಈಕ್ಷಿಸೆ ನಿರ್ಗುಣವಾಗಿಹ ನೀನು ॥
ಅಜೆಯಿಂ ನಾನಾ ಗುಣಮಯನೆನಿಸಿ ।
ನಿಜದಿಂ ಬಹುಲಕ್ಷಣಯುತನೆನಿಸಿ ॥
ನಾನಾಶಕ್ತಿ ಸಮನ್ವಿತನೆನಿಸಿ ।
ನಾನಾವಿಧ ಲೀಲಾಸ್ಪದನೆನಿಸಿ ॥
ಸತತಂ ಸರ್ವನಿಯಾಮಕನಾಗಿ ।
ನುತ ಸರ್ವಗ ಸರ್ವಾತ್ಮಕನಾಗಿ ॥
ಕುಂದದೆ ಸ್ವೇಚ್ಛಾಚರಣೆಯನುಳ್ಳ ।
ಸ್ಪಂದಾ ಸ್ಪಂದಾ ಕಾರವನುಳ್ಳ ॥
ನೀನೇ ಸಕಲ ಜಗನ್ಮಯನಪ್ಪೆ ।
ಆ ನಿಜದಿಂದೆ ಮಹೇಶನೆನಿಪ್ಪೆ ॥ ೪ ॥

ಟೀಕಾ:— ನೀನು=ನೀನು, ಸಾಕ್ಷಾತ್=ಅನುಭವ ಪ್ರತ್ಯಕ್ಷದಿಂದ, ನಿರ್ಲ ಕ್ಷಣವಹ–ಯಾವದೊಂದು ಲಕ್ಷಣಗಳಿಲ್ಲದಂಥಾ ವಸ್ತುವಾಗಿದ್ದೀ, ಈಕ್ಷಿಸೆ=ವಿಚಾರ ಮಾಡಲಾಗಿ, ನೀನು=ನೀನು, ನಿರ್ಗುಣವಾಗಿಹ=ಸತ್ವ, ರಜ, ತಮ, ಗುಣಗಳಿಂದ ರಹಿತನಾಗಿದ್ದೀ, ಅಜೆಯಿಂ=ಅನಾದಿಯಾದ ಮಾಯೋಪಾಧಿಯಿಂದ, ನಾನಾ ಗುಣಮಯನು=ಸರ್ವಜ್ಞತ್ವಾದಿ ಗುಣಗಳ ಸ್ವರೂಪನು, ಎನಿಸಿ=ಅನ್ನಿಸಿಕೊಂಡು,

CC-0. Jangamwadi Math Collection. Digitized by eGangotri

ನಿಜದಿಂ=ಸ್ವರೂಪದಿಂದ, ಬಹುಲಕ್ಷಣ=ಸಚ್ಚಿದಾದಿ ಲಕ್ಷಣಗಳಿಂದ, ಯುತನೆನಿಸಿ= ಕೂಡಿಕೊಂಡವನೆಂದು ಹೇಳಿಸಿಕೊಂಡು, ನಾನಾಶಕ್ತಿ = ಜ್ಞಾನ, ಇಚ್ಛಾ ಕ್ರಿಯಾದಿಗಳೆಂಬ ಶಕ್ತಿಗಳಿಂದ, ಸಮನ್ವಿತನೆನಿಸಿ=ಯುಕ್ತನಾದವನೆನ್ನಿಸಿಕೊಂಡು, ನಾನಾವಿಧ=ಅನೇಕ ಪ್ರಕಾರಗಳಾದ, ಲೀಲಾ=ಸೃಷ್ಟಿ, ಸ್ಥಿತಿ, ಸಂಹಾರಾದಿ ಕ್ರೀಡೆ ಗಳಿಗೆ, ಆಸ್ಪದನು = ಆಶ್ರಯನು, ಎನಿಸಿ = ಅನ್ನಿಸಿಕೊಂಡು, ಸತತಂ = ಯಾವಾಗಲೂ, ಸರ್ವಂ=ಜಗತ್ತನ್ನು, ನಿಯಾಮಕನಾಗಿ=ಶಾಸನಮಾಡುವವ ನಾಗಿ, ನುತ=ಸರ್ವರಿಂದಲೂ ಸ್ತೋತ್ರಮಾಡಿಸಿಕೊಳ್ಳುವದಕ್ಕೆ ಯೋಗ್ಯನಾದ, ಸರ್ವಗ=ಪರಿಪೂರ್ಣನು, ಸರ್ವಾತ್ಮಕನು=ಚರಾಚರ ಪ್ರಾಣಿಗಳ ಪ್ರತ್ಯಗಾತ್ಮ ಸ್ವರೂಪನು, ಆಗಿ=ಇರುವಂಥವನಾಗಿ, ಕುಂದದೆ=ಕಡಿಮೆಯಾಗದೆ, ಸ್ವೇಚ್ಛಾ ಚರಣೆಯುಳ್ಳ=ತನ್ನಿಚ್ಛೆ ಬಂದಹಾಗೆ ಅನೇಕತರದ ಲೀಲೆಗಳುಳ್ಳಂಥಾ, ಸ್ಪಂದಾ ಸ್ಪಂದ=ಚೇತನಾಚೇತನ, ಆಕಾರವನುಳ್ಳ=ರೂಪುಳ್ಳ, ನೀನೇ=ಮಾಯೋಪಾಧಿ ಯುಕ್ತನಾದವನೇ, ಸಕಲ ಜಗನ್ಮಯನು=ಸರ್ವ ಜಗತ್ತಿನ ಸ್ವರೂಪನು, ಅಪ್ಪೆ= ಆಗಿರುವಿ, ಆ ನಿಜದಿಂದೆ=ಆ ನಿನ್ನ ನಿಜಸ್ವರೂಪದಿಂದ, ಮಹೇಶನು=ಪರಮೇಶ್ವ ರನು, ಎನಿಪ್ಪೆ=ಹೇಳಿಸಿಕೊಳ್ಳುವಿ.

ತಾತ್ಪರ್ಯ:— ಸೋಪಾಧಿಕ ಸಚ್ಚಿದಾದಿ ಲಕ್ಷಣಗಳಿಂದಲೂ ಸತ್ವಾದಿ ಗುಣತ್ರಯದಿಂದಲೂ ರಹಿತನಾಗಿ ಅಖಂಡ ಸ್ವರೂಪದಿಂದಿರುವ ನೀನು; ಅನಾದಿ ಲಕ್ಷಣಾತ್ಮಕ ಮಾಯೋಪಾಧಿಯಿಂದ ಸರ್ವಜ್ಞತ್ವಾದಿ ಗುಣಗಳುಳ್ಳವನೆನ್ನಿಸಿ ಕೊಂಡು, ಸ್ವರೂಪತಃ:ಸತ್ ಚಿತ್ ಆನಂದಾದಿ ಲಕ್ಷಣಗಳಿಂದ ಯುಕ್ತನಾದವನು ಆಗಿರುವಿ. ಮತ್ತು ಜ್ಞಾನ, ಇಚ್ಛಾ, ಕ್ರಿಯಾ ಶಕ್ತಿಗಳಿಂದೊಡಗೂಡಿ ಜಗ ದುತ್ಪತ್ತಿ ಸ್ಥಿತಿ ನಾಶಾದಿ ಕ್ರೀಡೆಗಳನ್ನು ಮಾಡುತ್ತಾ, ಯಾವಾಗಲೂ ಈ ಚರಾ ಚರ ರೂಪ ಜಗತ್ತನ್ನು ಕುರಿತು ಅವರವರ ಕರ್ಮಾನುಗುಣವಾಗಿ ಸುಖ ದುಃಖಾದಿ ಭೋಗಗಳನ್ನುಂಟುಮಾಡುತ್ತಾ, ಸರ್ವಾಂತರ್ಯಾಮಿಯಾಗಿಯೂ, ಸಕಲ ಪ್ರಾಣಿಗಳ ಪ್ರತ್ಯಗಾತ್ಮ ಸ್ವರೂಪನಾಗಿಯೂ ಇರುವಿ. ಮತ್ತು ಇಷ್ಟಲ್ಲದೆ ತಮ್ಮ ಇಚ್ಛೆಗೆ ಬಂದಹಾಗೆ ವರ್ತನ ಮಾಡುತ್ತಿರುವಂಥಾ ಈ ಸ್ಥಾವರ ಜಂಗಮ ರೂಪುಳ್ಳ ಜಗತ್ತೆಲ್ಲಾ ನೀನೇ ಆಗಿರುವಿ. ಆದ್ದರಿಂದಲೇ ನೀನೇ ಮಹೇಶ್ವರ ನೆನಿಸಿಕೊಳ್ಳುವಿ.

ಬಳಿಕ; ಮಹೇಶ್ವರನಾದ ನಿನ್ನಲ್ಲಿ ಅನಂತ ಚಿಚ್ಛಕ್ತಿಗಳುಂಟು. ಆ ಶಕ್ತಿಗಳೇ ಈ ಚರಾಚರ ಜಗದ್ರೂಪಗಳಾಗಿ ತೋರುವದರಿಂದ ನೀನೇ ವಿವರ್ತ ರೂಪದಿಂದ ಜಗದ್ರೂಪನಾಗಿರುವಿ ಎಂದು ಹೇಳುತ್ತಾರೆ.

ಏವಂ ವಿಧಗುಣ ಲಕ್ಷಣಮುಳ್ಳ ।
ಭಾವದ ಕಲ್ಪಿತ ಕಲೆಗಳನುಳ್ಳ ॥

CC-0. Jangamwadi Math Collection. Digitized by eGangotri

ನಿನ್ನೊಳು ನಾನಾವಿಧ ಶಕ್ತಿಗಳು ।
ನನ್ನೊಡ ನಗಲದ ಚಿಚ್ಛಕ್ತಿಗಳು ॥
ಕೆಲವೀಬ್ರಹ್ಮಾಂಡಾವಳಿಯಾಗಿ ।
ಕೆಲವಿಂತೀ ಭೂತಾತ್ಮಕವಾಗಿ ॥
ಸ್ಥಾವರ ಭೇದದ ರೂಪುಗಳಾಗಿ ।
ತೀವಿದ ಜಂಗಮದಾ ಕೃತಿಯಾಗಿ ॥
ಏನುಂಟಾದೆಲ್ಲಂ ತಾವಾಗಿ ।
ನಾನಾವಿಧ ಭೂತಾತ್ಮಕವಾಗಿ ॥
ತೋರ್ಪವು ನಿನ್ನಿಂ ಬೇರಿಲ್ಲಾಗಿ ।
ತೋರ್ಪೆಯು ನೀನೆ ಜಗನ್ಮಯನಾಗಿ ॥ ೫ ॥

ಟೀಕಾ:— ಏವಂವಿಧ=ಮೇಲೆಹೇಳಿದಪ್ರಕಾರ, ಗುಣಲಕ್ಷಣವುಳ್ಳ=ಸರ್ವಜ್ಞತ್ವಾದಿಗುಣ ಸಚ್ಚಿದಾದಿ ಲಕ್ಷಣ ಇವುಗಳುಳ್ಳಂಥಾ, ಭಾವದ=ಸದ್ವಸ್ತುವಿನ ಮೂಲಕ, ಕಲ್ಪಿತ=ಅಧ್ಯಾಸಗಳಾದ, ಕಲೆಗಳನುಳ್ಳ=ಕಾರ್ಯಗಳುಳ್ಳಂಥಾ, ನಿನ್ನೊಳು=ನಿನ್ನ ಅಖಂಡಸ್ವರೂಪದಲ್ಲಿ, ನಾನಾವಿಧ=ಅನೇಕಪ್ರಕಾರಗಳಾದ, ಶಕ್ತಿಗಳು=ಶಕ್ತಿಗಳು, ನಿನ್ನೊಡನೆ=ನಿನ್ನಕೂಡ, ಅಗಲದ=ವಿಯೋಗವಾಗದ, ಚಿಚ್ಛಕ್ತಿಗಳು=ಜ್ಞಾನಶಕ್ತಿಗಳು, ಕೆಲವು=ಅನಂತ ಚಿಚ್ಛಕ್ತಿಗಳ ಪೈಕಿ ಕೆಲವು, ಈ ಬ್ರಹ್ಮಾಂಡ=ಈ ಇಂದ್ರಿಯಂಗಳಿಗೆ ಪ್ರತ್ಯಕ್ಷವಾಗಿ ತೋರುವಂಥಾಬ್ರಹ್ಮಾಂಡಗಳ, ಆವಳಿಯಾಗಿ=ಸಾಲಾಗಿ, ಕೆಲವು=ಕೆಲವುಚಿಚ್ಛಕ್ತಿಗಳು, ಇಂತು=ಮುಂದೆ ಹೇಳುವಪ್ರಕಾರ, ಈ ಭೂತಾತ್ಮಕವಾಗಿ=ಪ್ರತ್ಯಕ್ಷವಾಗಿ ಕಾಣುವಂಥಾ ಪಂಚಭೂತಗಳ ಸ್ವರೂಪವಾಗಿ, ಸ್ಥಾವರ=ಇದ್ದಲ್ಲಿರುವ,ಭೇದದ=ಕಲ್ಲುಮರ ಮೊದಲಾದವುಗಳ, ರೂಪುಗಳಾಗಿ=ಆಕಾರವುಳ್ಳವುಗಳಾಗಿ, ತೀವಿದ=ತುಂಬಿದ, ಜಂಗಮದ=ಅತ್ತಿತ್ತ ಚರಿಸುವ ಪ್ರಾಣಿಗಳ, ಆಕೃತಿಯಾಗಿ=ರೂಪುಗಳಾಗಿ, ಏನು ಉಂಟಾದೆಲ್ಲಂ=ಏನು ಉತ್ಪನ್ನವಾಗಿರುವದೋ ಅದೆಲ್ಲವು, ತಾವಾಗಿ=ಆ ಚಿಚ್ಛಕ್ತಿಗಳೆ ಆಗಿ, ನಾನಾವಿಧ=ಅನೇಕಪ್ರಕಾರಗಳಾದ, ಭೂತಾತ್ಮಕವಾಗಿ=ಚರಾಚರ ಪ್ರಾಣಿಗಳ ಸ್ವರೂಪಗಳಾಗಿ, ನಿನ್ನಿಂ=ಮಹೇಶ್ವರನಾದ ನಿನಗಿಂತಲೂ, ಬೇರೆ=ಭಿನ್ನವಾಗಿ, ಇಲ್ಲಾಗಿ=ಇಲ್ಲದ್ದರಿಂದ,ನೀನೆ=ಸಚ್ಚಿದಾನಂದಾದಿ ಲಕ್ಷಣವುಳ್ಳ ನೀನೆ,ಜಗನ್ಮಯನಾಗಿ=ವಿವರ್ತಮೂಲಕ ಜಗದ್ರೂಪನಾಗಿ, ತೋರ್ಪೆಯು=ನೀನೆ ತೋರುತ್ತಿರುವಿ.

ತಾತ್ಪರ್ಯ:— ಪೂರ್ವದಲ್ಲಿ ಹೇಳಲ್ಪಟ್ಟ ಸರ್ವಜ್ಞತ್ವ ಸರ್ವನಿಯಾಮಕತ್ವ ಸರ್ವಾಂತರ್ಯಾಮಿತ್ವಾದಿ ಮೊದಲಾದ ಗುಣಗಳಿಂದಲೂ ಸತ್, ಚಿತ್,

CC-0. Jangamwadi Math Collection. Digitized by eGangotri

ಆನಂದ, ನಿತ್ಯ, ಪರಿಪೂರ್ಣ ಮೊದಲಾದ ಲಕ್ಷಣಗಳಿಂದಲೂ ಯುಕ್ತನಾದಂಥಾ, ಸದ್ರೂಪವಾದ ವಸ್ತುವಿನಲ್ಲಿ ಅಧ್ಯಾಸಗಳಾಗಿ ತೋರುವ ಅನೇಕ ಕಾರ್ಯಗಳುಳ್ಳಂಥಾ, ಮಹೇಶ್ವರನಾದ ನಿನ್ನೊಡನೆ ಯಾವಾಗಲೂ ಕೂಡಿಕೊಂಡಿರುವಂಥಾ ಹಲವು ಜ್ಞಾನಶಕ್ತಿಗಳುಂಟು. ಅವುಗಳಲ್ಲಿ ಕೆಲವು ಜ್ಞಾನಶಕ್ತಿಗಳು ಬ್ರಹ್ಮಾಂಡಗಳ ಸಾಲುಗಳಾದವು. ಕೆಲವು ಆ ಬ್ರಹ್ಮಾಂಡದೊಳಗಿರುವ ಪ್ರಾಣಿಗಳ ಸ್ವರೂಪಗಳಾದವು. ಆ ಪ್ರಾಣಿಗಳಲ್ಲಿ ಕೆಲವು ಸಂಚಾರಮಾಡದಿರುವ ಕಲ್ಲು, ಮರ, ಮೊದಲಾದವುಗಳು ಸ್ಥಾವರ ಪ್ರಾಣಿಗಳೆನಿಸಿಕೊಂಡವು. ಕೆಲವ ಹೋಗುವ ಬರುವ ಕೂಡ್ರುವ ನಿಲ್ಲುವ ಮೊದಲಾದ ವ್ಯವಹಾರಗಳನ್ನು ಮಾಡುವದರಿಂದ ಜಂಗಮ ಜೀವಿಗಳೆನಿಸಿಕೊಂಡವು. ಈ ಪ್ರಕಾರ ದೃಶ್ಯಮಾನವಾಗಿ ಕಾಣಿಸುವಂಥಾ ಈ ನಾಮರೂಪಾತ್ಮಕ ಜಗತ್ತೇನುಂಟೋ, ಇದೆಲ್ಲವು ಆ ಜ್ಞಾನಶಕ್ತಿಗಳೇ ಆಗಿರುತ್ತವೆ. ಆದರೂ ಅವು ನಿನಗಿಂತಲೂ ಭಿನ್ನವಾಗಿ ತೋರುವದಿಲ್ಲ. ಆದ್ದರಿಂದ ಮಣ್ಣು ಜಗಿಶಕ್ತಿ ದ್ವಾರಾ ಗಡಿಗೆ ಮಡಿಕೆಗಳಾದಂತೆ, ಅರಳೆಯು ದಾರದಿಂದ ಅರಿವೆಯಾದಂತೆ, ಸಚ್ಚಿದಾನಂದಸ್ವರೂಪನಾದ ನೀನೆ ಜ್ಞಾನಶಕ್ತಿಗಳ ದ್ವಾರಾ ಜಗದ್ರೂಪನಾಗಿರುವಿ ಎಂಬ ತಾತ್ಪರ್ಯವು.

ಬಳಿಕ; ನಿನ್ನಲ್ಲಿರುವ ಚಿಚ್ಛಕ್ತಿಗಳೇ ಜೀವೇಶ್ವರರುಗಳಾಗಿ ತೋರುತ್ತಿರುವವೆಂದು ದೃಷ್ಟಾಂತಪೂರ್ವಕ ಪ್ರತಿಪಾದನ ಮಾಡುತ್ತಾರೆ.

ಶರನಿಧಿಯಲ್ಲಿ ಜಲಂಗಳವೆಂತು ।
ತೆರೆಯೆನಿಸುತ್ತಾಡುತ್ತಿಹವಂತು ॥
ಆ ನಿನ್ನಲ್ಲಿಯ ಸಂವಿತ್ತುಗಳು ।
ಭಾನು ಕಳಾನಿಭ ಚಿಚ್ಛಕ್ತಿಗಳು ॥
ಸಂಕಲ್ಪಾದಿ ಮುಖತ್ವತೆ ವಿಡಿದು ।
ಭೋಂಕನೆ ಕೆಲವೀಭ್ರಮವಂ ಪಡೆದು ॥
ಜೀವರೆನಿಸಿ ವ್ಯವಹರಿಸುತ್ತಿಹವು ।
ದೇವರೆನಿಸಿ ಮಿಕ್ಕಿನಲಿರುತಿಹವು ॥
ಜೀವರೊಳಾಯಿತು ಭೌತಿಕ ದೇಹ ॥
ದೇವರೊಳಾಯಿತು ಮಾಯಿಕ ದೇಹ ॥
ಅವರಿಗುಪಾಸ್ಯೋಪಾಸಕರೆಂಬ ।
ವಿವರಣೆ ಯೆಸೆವುದು ಮಹಿಮಾಲಂಬ ॥ ೬ ॥

ಟೀಕಾ:– ಶರನಿಧಿಯಲ್ಲಿ=ಸಮುದ್ರದಲ್ಲಿ, ಜಲಂಗಳು=ನೀರುಗಳು, ಎಂತು= ಹೇಗೆ, ತೆರೆಯೆನಿಸುತ್ತ=ಅಲೆಗಳೆಂದು ಹೇಳಿಕೊಳ್ಳುತ್ತ, ಆಡುತ್ತಿಹವು=ಸಂಚಾರ

CC-0. Jangamwadi Math Collection. Digitized by eGangotri

ಮಾಡುತ್ತಿರುವವೋ, ಅಂತು=ಹಾಗೆ, ಆ ನಿನ್ನಲ್ಲಿಯ=ಸಚ್ಚಿದಾನಂದ ಸ್ವರೂಪ ನಾದ ನಿನ್ನಲ್ಲಿಯ, ಸಂವಿತ್ತುಗಳು=ಜ್ಞಾನಗಳು, ಭಾನು=ಸೂರ್ಯನ, ಕಳಾ= ಕಿರಣಗಳಿಗೆ, ನಿಭ=ಸದೃಶಗಳಾದ, ಚಿಚ್ಛಕ್ತಿಗಳು=ಜ್ಞಾನ ಶಕ್ತಿಗಳು, ಸಂಕ ಲ್ಪಾದಿ=ನಾವು ಜೀವೇಶ್ವರರುಗಳಾಗಬೇಕೆಂಬ ಮೊದಲಾದ ಸಂಕಲ್ಪಗಳ, ಮುಖ ತ್ವತೆ=ಅಭಿಮುಖತ್ವವನ್ನು, ವಿಡಿದು=ಹಿಡಕೊಂಡು, ಭೋಂಕನೆ=ಬೇಗನೆ, ಕೆಲವು=ಕೆಲವು ಜ್ಞಾನಶಕ್ತಿಗಳು, ಈ ಭ್ರಮವಂ=ಪ್ರತ್ಯಕ್ಷವಾಗಿ ತೋರುತ್ತಿರುವ [ಸ್ವರೂಪ ವಿಸ್ಮೃತಿ ರೂಪ] ಭ್ರಾಂತಿಯನ್ನು, ಪಡೆದು=ಹೊಂದಿ, ಜೀವರೆನಿಸಿ= ಜೀವಾತ್ಮರುಗಳೆಂದು ಹೇಳಿಸಿಕೊಂಡು, ವ್ಯವಹರಿಸುತ್ತಿಹವು=ವ್ಯಾಪಾರ ಮಾಡು ತ್ತಿರುವವು, ದೇವರೆನಿಸಿ=ದೇವರುಗಳೆಂದು ಹೇಳಿಸಿಕೊಂಡು, ಮಿಕ್ಕಿನಲ್ಲಿ=ಶ್ರೇಷ್ಠ ತನದಲ್ಲಿ, ಇರುತಿಹವು=ಇರುತ್ತಿರುವವು, ಜೀವರೊಳು=ಜೀವಿಗಳಲ್ಲಿ, ಭೌತಿಕ= ಭೂತ ಸಂಬಂಧವಾದ, ದೇಹ=ಶರೀರವು, ಆಯಿತು=ಉತ್ಪನ್ನವಾಗಿರುವದು, ದೇವರೊಳು=ದೇವತೆಗಳಲ್ಲಿ, ಮಾಯಿಕ=ಮಾಯಾಮಯ ಸಂಬಂಧವಾದ, ದೇಹ= ಶರೀರವು, ಆಯಿತು=ಆಗಿರುವದು, ಮಹಿಮಾಲಂಬ=ಈ ಆಶ್ಚರ್ಯಕ್ಕೆ ಆಶ್ರಯ ಭೂತನಾದ ಎಲೈ ಶಿಷ್ಯನೇ, ಅವರಿಗೆ=ಆ ಜೀವೇಶ್ವರರುಗಳಿಗೆ, ಉಪಾಸ್ಯ ಉಪಾ ಸಕರೆಂಬ=ಪೂಜ್ಯ ಪೂಜಕರೆಂಬ, ವಿವರಣೆ=ಭೇದರೂಪ ವಿಸ್ತಾರವು, ಎಸೆವುದು= ಶೋಭಾಯಮಾನವಾಗಿರುವದು.

ತಾತ್ಪರ್ಯ:- ಸಮುದ್ರದೊಳಗಿರುವ ಜಲಗಳೇ ತೆರೆಗಳೆಂಬ ಬೇರೆ ನಾಮ ವನ್ನು ಹೊಂದಿ ಅದೇ ಸಮುದ್ರದಲ್ಲಿ ಅತ್ತಿತ್ತ ತಿರುಗಾಡುವಂತೆ, ಅಖಂಡ ಚೈತನ್ಯ ಸ್ವರೂಪನಾದ ನಿನ್ನಲ್ಲಿ ಅನೇಕ ಜ್ಞಾನಶಕ್ತಿಗಳುಂಟು. ಅವು ಸೂರ್ಯನ ಕಿರಣ ಗಳಿಗೆ ಸಮಾನಗಳಾಗಿರುತ್ತವೆ. ಇಂಥಾ ಚಿಚ್ಛಕ್ತಿಗಳು ನಾವು ಬಹು ಜೀವಿಗಳು ಆಗಬೇಕೆಂದು ಸಂಕಲ್ಪಕ್ಕೆ ಅಭಿಮುಖವಾದ ಕೂಡಲೆ, ವಿಸ್ಮೃತಿಯೆಂಬ ಭ್ರಾಂತಿ ಯನ್ನು ಹೊಂದಿ, ಜೀವಿಗಳೆನಿಸಿಕೊಂಡು ಪರತಂತ್ರವಾಗಿ ವ್ಯವಹಾರ ಮಾಡ ಹತ್ತಿದವು. ಕೆಲವು ಚಿಚ್ಛಕ್ತಿಗಳು ದೇವರೆನ್ನಿಸಿಕೊಂಡು ಸ್ವತಂತ್ರವಾಗಿ ಶ್ರೇಷ್ಠ ತನದಲ್ಲಿರಹತ್ತಿದವು. ಸಕಲ ಜೀವಿಗಳಿಗೆ ಪೃಥಿವ್ಯಾದಿ ಪಂಚಭೂತಗಳ ಸಂಬಂಧ ವಾದ ಭೌತಿಕ ಶರೀರಗಳಾದವು. ದೇವರುಗಳಿಗೆ ಬೇಕಾದ ಕಾಲಕ್ಕೆ ಬೇಕಾದ ನಾಮ ರೂಪುಗಳನ್ನು ಧಾರಣ ಮಾಡುವಂಥಾ, ಮಾಯಾಮಯ ಸಂಬಂಧ ವಾದ ಶರೀರವು ಪ್ರಾಪ್ತವಾಯಿತು. ಬಳಿಕ ಆ ಜೀವನು ಪೂಜಕನೆಂದೂ ದೇವರು ಪೂಜ್ಯನೆಂದೂ ಹೇಳಿಸಿಕೊಳ್ಳುವ ಭೇದ ವ್ಯವಹಾರವು ಒದಗಿತು. ಒಂದು ಅಖಂಡವಸ್ತುವಿನಲ್ಲಿ ಭೇದರೂಪ ವ್ಯವಹಾರವು ತೋರುವದೇ ಆಶ್ಚರ್ಯ, ಈ ಆಶ್ಚರ್ಯಕ್ಕೆ ನೀನೇ ಆಶ್ರಯನಾಗಿರುವದರಿಂದ ಮಹಿಮಾಲಂಬನೆಂದು ಹೇಳಿಸಿ ಕೊಳ್ಳುವಿ. ಅರ್ಥಾತ್ ಅಧಿಷ್ಠಾನಸ್ವರೂಪವಾದ ಪರಬ್ರಹ್ಮನೇ ನೀನಾಗಿರುವಿ ಎಂಬ ತಾತ್ಪರ್ಯವು.

CC-0. Jangamwadi Math Collection. Digitized by eGangotri

ಬಳಿಕ; ಎಲೈ ಶಿಷ್ಯನೇ ಪರಬ್ರಹ್ಮಸ್ವರೂಪನಾದ ನೀನೇ ಹರಿಹರ ಬ್ರಹ್ಮಾದಿದೇವರುಗಳ ನಾಮವನ್ನು ಪಡಕೊಂಡು ಪ್ರಕಾಶಮಾನನಾಗಿರುತ್ತೀ ಎಂದು ಈ ಪದ್ಯದಲ್ಲಿ ಪ್ರತಿಪಾದನ ಮಾಡುತ್ತಾರೆ.

ಬ್ರಹ್ಮ ನೆನಿಸಿ ಲೋಕವ ಸೃಜಿಸುತ್ತ ।
ಬ್ರಹ್ಮಾಧ್ಯಯನಾದಿಯ ನರುಪುತ್ತ ॥
ವಿಷ್ಣುವೆನಿಸಿ ಜಗಮಂ ಪಾಲಿಸುತ ।
ವೈಷ್ಣವ ಜನರುಗಳಂ ಲಾಲಿಸುತ ॥
ರುದ್ರನೆನಿಸಿ ಯೋಲೈಸಿ ಕೊಳುತ್ತ ।
ಕ್ಷುದ್ರದಘವನುರೆ ಸಂಹರಿಸುತ್ತ ॥
ಈಶ್ವರನೆನಿಸಿಯೆ ಭಜಿಸಿಕೊಳುತ್ತ ।
ಶಾಶ್ವತ ಸೌಖ್ಯಂಗಳ ನೀವುತ್ತ ॥
ಸಾಧು ಸದಾಶಿವನಾಗಿ ಜಗತ್ತ ।
ಬೋಧಿಸಿ ತನ್ನ ಪದವ ನೀವುತ್ತ ॥
ಮತ್ತಾಯಾದೇವರ ಪೆಸರಿಂದ ।
ಚಿತ್ತ ದೊಲವ ನೀವುತ್ತಿಹೆ ಕಂದ ॥೭॥

ಟೀಕಾ:— ಕಂದ=ಎಲೈ ಮಗುವೇ, ಲೋಕವ=ಹದಿನಾಲ್ಕು ಲೋಕಗಳನ್ನು, ಸೃಜಿಸುತ್ತ=ಹುಟ್ಟಿಸುತ್ತಾ, ಬ್ರಹ್ಮಾಧ್ಯಯನಾದಿಯನು=ವೇದಾಧ್ಯಯನ ಉಪಾಂಗ ಮೊದಲಾದವುಗಳನ್ನು, ಅರುಪುತ್ತ=ತಿಳಿಸುತ್ತ, ಬ್ರಹ್ಮನು=ಪಿತಾಮಹನು, ಎನಿಸಿ=ಅನ್ನಿಸಿಕೊಂಡು, ಜಗಮಂ–ಜಗತ್ತನ್ನು, ಪಾಲಿಸುತ–ರಕ್ಷಣೆ ಮಾಡುತ್ತಾ, ವೈಷ್ಣವ–ವಿಷ್ಣು ಸಂಬಂಧಿಗಳಾದ, ಜನರುಗಳಂ–ಭಕ್ತರನ್ನು, ಲಾಲಿಸುತ–ಸಂತೋಷಪಡಿಸುತ್ತ, ವಿಷ್ಣುವೆನಿಸಿ–ವ್ಯಾಪಕ ಶೀಲನಾದ ಪರಮಾತ್ಮನೆನಿಸಿ, ಓಲೈಸಿಕೊಳ್ಳುತ್ತ–ಸಕಲರಿಂದ ಹೊಗಳಿಸಿಕೊಳ್ಳುತ್ತ, ಕ್ಷುದ್ರದ–ತುಚ್ಛವಾದ, ಅಘವನು–ಪಾಪವನ್ನು. ಉರೆ–ಚನ್ನಾಗಿ, ಸಂಹರಿಸುತ್ತ–ನಾಶಮಾಡುತ್ತ, ರುದ್ರನೆನಿಸಿ–ಸಂಹಾರಕರ್ತನೆಂದು ಹೇಳಿಸಿಕೊಂಡು, ಭಜಿಸಿಕೊಳ್ಳುತ್ತ–ಸೇವಾ ಮಾಡಿಸಿಕೊಳ್ಳುತ್ತ, ಶಾಶ್ವತ–ನಿತ್ಯಗಳಾದ, ಸೌಖ್ಯಂಗಳನು–ಸುಖಗಳನ್ನು, ಈವುತ್ತ–ಕೊಡುತ್ತ, ಈಶ್ವರನೆನಿಸಿ–ಜಗನ್ನಿಯಂತೃಯೆಂದು ಹೇಳಿಸಿಕೊಂಡು, ಜಗತ್ತ–ಜಗತ್ತಿನಲ್ಲಿರುವ ಮುಮುಕ್ಷುಗಳನ್ನು ಕುರಿತು, ಬೋಧಿಸಿ–ಉಪದೇಶಿಸಿ, ತನ್ನ ಪದವನು–ಪರಮಾನಂದ ಸ್ವರೂಪವಾದ ತನ್ನ ಸ್ಥಾನವನ್ನು, ಈವುತ್ತ–ಕೊಡುತ್ತ, ಸಾಧು–ಉತ್ತಮನಾದ, ಸದಾಶಿವನಾಗಿ–ಯಾವಾಗಲೂ ಸುಖದಿಂದಿರುವಂಥವನಾಗಿ, ಮತ್ತು–ಪುನರಪಿ, ಆಯಾ ದೇವರ–ಬೇರೆ ಬೇರೆ ದೇವರುಗಳ, ಪೆಸರಿಂದ–ಹೆಸರಿನಿಂದ, ಚಿತ್ತದ–ಭಕ್ತರ ಮನಸ್ಸಿನ, ಒಲವನು–ಇಷ್ಟಾರ್ಥವನ್ನು, ಈವುತ್ತ–ಕೊಡುತ್ತ, ಇಹೆ–ಇದ್ದೀ.

CC-0. Jangamwadi Math Collection. Digitized by eGangotri

ತಾತ್ಪರ್ಯ:— ಎಲೈ ಶಿಷ್ಯನೇ ಅಖಂಡ ಸಚ್ಚಿದಾನಂದ ಪರಬ್ರಹ್ಮ ಸ್ವರೂಪನಾದ ನೀನು ಒಳಗೆ ಸತ್ವಗುಣ, ಹೊರಗೆ ರಜೋಗುಣದುಪಾಧಿಯಿಂದ ಬ್ರಹ್ಮನೆನಿಸಿಕೊಂಡು, ಪಾತಾಳಾದಿ ಹದಿನಾಲ್ಕು ಲೋಕಗಳನ್ನು ರಚನೆ ಮಾಡಿ, ಆ ಲೋಕಗಳಲ್ಲಿರುವ ಜನರುಗಳ ಭೋಗಮೋಕ್ಷಾರ್ಥವಾಗಿ ಕರ್ಮಕಾಂಡ, ಉಪಾಸನಾಕಾಂಡ, ಜ್ಞಾನಕಾಂಡ, ಇವುಗಳಿಂದ ಕೂಡಿದ ಋಕ್, ಯಜು ಸ್ಸಾಮಗಳೆಂಬ ವೇದಗಳನ್ನೂ; ಛಂದಸ್ಸು, ಕಲ್ಪ, ವ್ಯಾಕರಣ, ಶಿಕ್ಷೆ ಮೊದಲಾದ ವೇದಾಂಗಗಳನ್ನೂ; ಅಧ್ಯಯನ ಮಾಡಿಸುವಂಥವನಾದಿ, ಮತ್ತು ಒಳಗೆ ರಜೋಗುಣ, ಹೊರಗೆ ಸತ್ವಗುಣದುಪಾಧಿಯಿಂದ ವಿಷ್ಣುವೆನಿಸಿಕೊಂಡು, ಜಗತ್ತನ್ನು ಕಾಪಾಡುತ್ತಾ ಧ್ರುವ–ಪ್ರಲ್ಹಾದಾದಿ ಭಕ್ತರಿಗೆ ಒಳ್ಳೇ ಪ್ರೀತನಾಗಿ ರುವಿ, ಒಳಗೆ ಸತ್ವಗುಣ ಹೊರಗೆ ತಮೋಗುಣದುಪಾಧಿಯಿಂದ ರುದ್ರನೆನಿಸಿ, ಎಲ್ಲರಿಂದ ಸ್ತುತಿ ಮಾಡಿಸಿಕೊಂಡು, ಅವರ ಕೆಟ್ಟ ಪಾಪಗಳನ್ನು ಸುಟ್ಟು ಬೂದಿ ಮಾಡುತ್ತಿರುವಿ. ಸತ್ವ, ರಜ, ತಮಗಳೆಂಬ ತ್ರಿಗುಣಾತ್ಮಕ ಉಪಾಧಿಯಿಂದ ಈಶ್ವರನೆಂದು ಹೇಳಿಸಿಕೊಂಡು, ಎಲ್ಲರಿಂದ ಆರಾಧನೆಯನ್ನು ಮಾಡಿಸಿಕೊಳ್ಳುತ್ತ, ಅವರಿಗೆ ಸಾಲೋಕ್ಯ, ಸಾಮಿಪ್ಯ ಮೊದಲಾದ ಮುಕ್ತಿಗಳನ್ನು ಕೊಡುತ್ತಿರುವಿ. ತ್ರಿಗುಣಾತ್ಮಕದ ಗುಣಗಂಧಾವಸ್ಥೆಯ ಉಪಾಧಿಯಿಂದ ಸರ್ವೋತ್ಕೃಷ್ಟನಾದ ಸದಾಶಿವನೆಂದು ಹೇಳಿಸಿಕೊಂಡು, ಜಗತ್ತಿನಲ್ಲಿರುವ ಮುಮುಕ್ಷುಗಳಿಗೆಲ್ಲಾ ತತ್ವೋಪದೇಶವನ್ನು ಮಾಡಿ, ಅವರಿಗೆ ಪುನರಾವೃತ್ತಿರಹಿತವಾದ ಮೋಕ್ಷವನ್ನು ಕೊಡುವಿ. ಇಷ್ಟಲ್ಲದೆ ಮತ್ತು ಬೇರೆ ಬೇರೆ ದೇವರುಗಳ ಹೆಸರುಗಳಿಂದ ನೀನೇ ಭಕ್ತರ ಇಷ್ಟಾರ್ಥಗಳನ್ನು ಕೊಟ್ಟು ರಕ್ಷಣ ಮಾಡುತ್ತಿರುವಿ.

ಮತ್ತು ನಿನ್ನಲ್ಲಿರುವ ಜ್ಞಾನ ಶಕ್ತಿಯೇ ಸರಸ್ವತಿ, ಲಕ್ಷ್ಮಿ, ಗಿರಿಜೆ, ಮೊದಲಾದ ನಾಮಂಗಳನ್ನು ಧರಿಸಿ; ಭಕ್ತರ ಇಷ್ಟಾರ್ಥವನ್ನು ಪೂರ್ಣಮಾಡು ವಳು ಎಂದು ಪ್ರತಿಪಾದನ ಮಾಡುತ್ತಾರೆ—

ಸೇವಕರಿಷ್ಟವ ನೀವಾಶಕ್ತಿ ।
ಭಾವಿಸೆ ನಿನ್ನೊಳು ಸಂವಿಚ್ಛಕ್ತಿ ॥
ವಾಣಿಯೆನಿಸಿ ವಾಕ್ಸಿದ್ಧಿಯ ನಿತ್ತು ।
ಮಾಣದೆ ಲಕ್ಷ್ಮಿಯೆನಿಸಿ ಶುಭವಿತ್ತು ॥
ಗಿರಿಜೆಯೆನಿಸಿ ಸೌಭಾಗ್ಯವನಿತ್ತು ।
ವರವಂಬಿಕೆ ಯೆನಿಸುತ್ತೊಲಿದಿತ್ತು ॥
ಯೋಗವನಿತ್ತು ಮನೋನ್ಮನಿಯೆನಿಸಿ ।
ಭೋಗವನಿತ್ತಾ ಕುಂಡಲಿಯೆನಿಸಿ ॥

CC-0. Jangamwadi Math Collection. Digitized by eGangotri

ಮತ್ತೆಯು ಬಹು ನಾಮಂಗಳನೆರಸಿ ।
ತತ್ತದಖಿಳ ರೂಪಿಂದವತರಿಸಿ ॥
ತಾನೇ ಭುವನೇಶ್ವರಿಯಾಗಿಹಳು ।
ನಾನಾ ಭಕ್ತ ಸುಖಪ್ರದೆಯುಹಳು ॥ ೮ ॥

ಟೀಕಾ:— ಸೇವಕರಿಗೆ=ಭಕ್ತರಿಗೆ, ಇಷ್ಟವನು=ಬೇಡಿದ ಪದಾರ್ಥವನ್ನು, ಈವ=ಕೊಡುವಂಥಾ, ಆ ಶಕ್ತಿ=ಆ ಸಾಮರ್ಥ್ಯವು, ಭಾವಿಸೆ=ವಿಚಾರಮಾಡಿ ನೋಡಲಾಗಿ, ನಿನ್ನೊಳು=ನಿನ್ನಲ್ಲಿರುವ, ಸಂವಿಚ್ಛಕ್ತಿ=ಜ್ಞಾನಶಕ್ತಿಯು, ವಾಕ್=ನುಡಿದಂತೆಯಾಗುವ, ಸಿದ್ಧಿಯನು=ಸಾಮರ್ಥ್ಯವನ್ನು, ಇತ್ತು=ಕೊಟ್ಟು, ವಾಣಿಯೆನಿಸಿ=ಸರಸ್ವತಿಯೆಂದು ಹೇಳಿಸಿ, ಶುಭಂ=ಸುಖವನ್ನು, ಇತ್ತು=ಕೊಟ್ಟು, ಮಾಣದೆ=ಬಿಡದೆ, ಲಕ್ಷ್ಮಿಯೆನಿಸಿ=ಲಕ್ಷ್ಮಿಯೆಂದು ಹೇಳಿಸಿಕೊಂಡು, ಸೌಭಾಗ್ಯವನು=ಸಂಪತ್ತನ್ನು, ಇತ್ತು=ಕೊಟ್ಟು, ಗಿರಿಜೆಯೆನಿಸಿ=ಪಾರ್ವತಿಯೆಂದು ಹೇಳಿಸಿಕೊಂಡು, ವರವ=ಇಚ್ಛೈಸಿದ್ದನ್ನು, ಒಲಿದು=ಪ್ರೀತಿಯಿಂದ, ಇತ್ತು=ಕೊಟ್ಟು, ಅಂಬಿಕೆಯೆನಿಸುತ್ತ=ತಾಯಿಯೆಂದು ಹೊಗಳಿಸಿಕೊಳ್ಳುತ್ತ, ಯೋಗವನು=ಚಿತ್ತೈಕಾಗ್ರತೆಯನ್ನು, ಇತ್ತು=ಕೊಟ್ಟು, ಮನೋನ್ಮನಿಯೆನಿಸಿ=ಮನಸ್ಸನ್ನು ಅಂತರ್ಮುಖ ಮಾಡುವಂಥಾ ಶಕ್ತಿಯೆಂದು ಹೇಳಿಸಿಕೊಂಡು, ಭೋಗವನು=ಸುಖದುಃಖಗಳೆರಡರಲ್ಲಿ ಯಾವದಾದರೊಂದನ್ನು, ಇತ್ತು=ಕೊಟ್ಟು, ಕುಂಡಲಿಯೆನಿಸಿ=ಕುಂಡಲಿ ಶಕ್ತಿಯೆಂದು ಹೇಳಿಸಿಕೊಂಡು, ಮತ್ತೆಯು=ಬಳಿಕಾದರೂ, ಬಹುನಾಮಂಗಳ=ಅನೇಕ ಹೆಸರುಗಳನ್ನು, ನೆರಿಸಿ=ಕೂಡಿಕೊಂಡು, ತತ್ತತ್=ಆಯಾಯ, ಅಖಿಳರೂಪಿಂದ=ನಾಮಗಳಿಗೆ ಅನುಗುಣವಾದ ರೂಪುಗಳಿಂದ, ಅವತರಿಸಿ=ಶರೀರ ಧಾರಣಮಾಡಿ, ತಾನೇ=ನಿನ್ನಲ್ಲಿರುವ ಚಿಚ್ಛಕ್ತಿಯೇ, ಭುವನೇಶ್ವರಿಯು=ಹದಿನಾಲ್ಕು ಲೋಕಗಳಿಗೆ ಒಡೆಯಳು, ಆಗಿಹಳು=ಆಗಿರುವಳು, ನಾನಾಭಕ್ತ=ಅನೇಕ ಭಕ್ತರಿಗೆ, ಸುಖಪ್ರದೆಯು=ಸುಖವನ್ನು ಕೊಡತಕ್ಕವಳು, ಆಹಳು=ಆಗಿರುವಳು.

ತಾತ್ಪರ್ಯ:— ಎಲೈ ಶಿಷ್ಯನೇ ನಿನ್ನ ಸಚ್ಚಿದಾನಂದ ಘನ ಸ್ವರೂಪದಲ್ಲಿರುವ ಜ್ಞಾನಶಕ್ತಿಯೇ ಭಕ್ತರು ಬೇಡಿದ ಫಲವನ್ನು ಕೊಡುವಂಥಾದ್ದಾಗಿರುತ್ತದೆ. ಮತ್ತು ಈ ಶಕ್ತಿಯು ಕಾರ್ಯಾನುಮೇಯವಾಗಿರುತ್ತದೆ ಹೊರತು ಪ್ರತ್ಯಕ್ಷವಾಗಿರುವದಿಲ್ಲ. ಆದ್ದರಿಂದ ಬೇರೆ ಬೇರೆ ಫಲಗಳನ್ನು ಕೊಡುವದರಿಂದ ಬೇರೆ ಬೇರೆ ಹೆಸರುಗಳನ್ನು ಪಡೆದಿರುವದು. ಹೇಗೆಂದರೆ ಆಡಿದಂತೆ ಮಾಡುವ ಶಕ್ತಿಯು ನುಡಿಯಲ್ಲಿದ್ದರೆ, ಅದಕ್ಕೆ ವಾಕ್ಸಿದ್ಧಿಯೆನ್ನುತ್ತಾರೆ. ಅಥವಾ ಯಾವತ್ತು ಶಾಸ್ತ್ರಗಳನ್ನು ಪ್ರತಿಪಾದನ ಮಾಡುವ ಶಕ್ತಿಗೆ ವಾಕ್ಸಿದ್ಧಿಯೆಂದು

CC-0. Jangamwadi Math Collection. Digitized by eGangotri

ಹೇಳುತ್ತಾರೆ. ಇಂಥಾ ವಾಕ್ಸಿದ್ಧಿಯನ್ನು ಕೊಡುವದರಿಂದಲೇ ಆ ಚಿಚ್ಛಕ್ತಿಗೆ ಸರಸ್ವತಿ ಎಂಬ ಹೆಸರು ಬಂತು. ಇದರಂತೆ ಸುಖವನ್ನುಂಟು ಮಾಡುವದರಿಂದ ಲಕ್ಷ್ಮಿಯೆಂದು, ಸಂಪತ್ತನ್ನುಂಟು ಮಾಡುವದರಿಂದ ಪಾರ್ವತಿಯೆಂದು, ಬೇಡಿದ ಇಚ್ಛೆಯನ್ನು ಪೂರ್ಣಮಾಡುವದರಿಂದ ಅಂಬಿಕೆಯೆಂದೂ, ಹಠಯೋಗ ಮೊದಲಾದವುಗಳನ್ನುಂಟುಮಾಡುವದರಿಂದ ಮನೋನ್ಮನಿಯೆಂದೂ, ಇಹಪರ ಭೋಗಗಳನ್ನುಂಟು ಮಾಡುವದರಿಂದ ಕುಂಡಲಿಯೆಂದೂ ಹೇಳಿಸಿಕೊಳ್ಳುವದಲ್ಲದೆ ಇನ್ನೂ ಅನೇಕ ಹೆಸರುಗಳನ್ನು ಪಡೆದು ನಾನಾ ರೂಪದಿಂದ ಅವತಾರ ಮಾಡಿರುವಳು. ಈ ವಿಷಯವು ದೇವೀ ಪುರಾಣದಲ್ಲಿ ವಿಸ್ತಾರವಾಗಿ ಪ್ರತಿಪಾದನ ಮಾಡಲ್ಪಟ್ಟಿರುತ್ತದೆ. ಗ್ರಂಥ ವಿಸ್ತಾರವಾಗುವದೆಂಬ ಭೀತಿಯಿಂದ ಬರೆಯುವದು ಬಿಡಲ್ಪಟ್ಟಿರುತ್ತದೆ. ಅಲ್ಲಿ ನೋಡಿಕೊಳ್ಳತಕ್ಕದ್ದು. ಈ ಪ್ರಕಾರ ನಿನ್ನ ಚಿಚ್ಛಕ್ತಿಯೇ ಚತುರ್ದಶಲೋಕಗಳಿಗೆ ಒಡೆಯಳಾಗಿ ಸರ್ವಭಕ್ತರಿಗೂ ಸುಖವನ್ನು ಕೊಡುವಂಥವಳು ಆಗಿರುತ್ತಾಳೆ.

ಬಳಿಕ; ನಿನ್ನಲ್ಲಿರುವ ಜ್ಞಾನಶಕ್ತಿಯೇ ಒಂಭತ್ತು ಪ್ರಕಾರವಾದ ಭಕ್ತಿಯ ಸ್ವರೂಪದಿಂದ ಸಕಲ ಭಕ್ತರನ್ನು ಹೊಂದಿಕೊಂಡಿರುತ್ತದೆಂದು ಪ್ರತಿಪಾದನ ಮಾಡುತ್ತಾರೆ.

ಶಿವನ ಕಥಾ ಗೋಷ್ಟಿಗೆ ಕಿವಿಗೊಡುವ ||
ಶಿವನಂ ಪೊಗಳೆ ರಸನೆ ಗುಡಿಯಿಡುವ |

ಶಿವ ಮೂರ್ತಿಗಳಂ ನೆನವುತ್ತಿರ್ಪ |
ಶಿವನೋಲಗದೊಳು ಸಲೆ ನೆಲಸಿರ್ಪ ||

ಶಿವನಲ್ಲಿಯೆ ಪರಿಚರ್ಯವನುಳ್ಳ |
ಶಿವನರ್ಚನೆಯೊಳಗಭಿರತಿಯುಳ್ಳ ||

ಶಿವನಸಿ ಪದದೊಳಗೆರಕತೆಯುಳ್ಳ |
ಶಿವ ಸಂಪದದೊಳು ಸುಸ್ಥಿತಿಯುಳ್ಳ ||

ಶಿವನಿಗೆ ತನು ಮುಖ್ಯವನರ್ಪಿಸುತ |
ನವವಿಧ ಸದ್ಭಕ್ತಿಯೊಳಿಂತಿರುತ ||

ಭಕ್ತಿಯ ರೂಪಿಂದಾ ಸಂವಿತ್ತು |
ಭಕ್ತರೊಳೈದಿಹುದೆಲ್ಲಾ ಹೊತ್ತು |

ಟೀಕಾ:—ಶಿವನ=ಪರಮೇಶ್ವರನ, ಕಥಾ=(ಮಹಿಮೆಯನ್ನು ಪ್ರತಿಪಾದನ ಮಾಡುವಂಥಾ) ಕಥೆಯ, ಗೋಷ್ಟಿಗೆ=ಮಾತುಗಳಿಗೆ, ಕಿವಿಗೊಡುವ=ಶ್ರವಣೇಂ

CC-0. Jangamwadi Math Collection. Digitized by eGangotri

ದ್ರಿಯವನ್ನು ಕೊಡುವಂಥಾ (ಶ್ರವಣ ಭಕ್ತಿಯು), ಶಿವನಂ=ಮಹೇಶ್ವರನನ್ನು, ಪೊಗಳೆ=ಹೊಗಳುವದರಲ್ಲಿ, ರಸನೆ=ನಾಲಿಗೆಯು, ಕುಡಿಯಿಡುವ=ತುದಿಯನ್ನು ಚಾಚುವಂಥಾ (ಕೀರ್ತನ ಭಕ್ತಿಯು) ಶಿವ=ಉಮೇಶನ, ಮೂರ್ತಿಗಳು=ಲೀಲಾವತಾರ ಮೂರ್ತಿಗಳನ್ನೂ, ನೆನೆವುತ್ತಿರ್ಪ=ಸ್ಮರಣ ಮಾಡುತ್ತಿರುವಂಥಾ (ಸ್ಮರಣರೂಪ ಭಕ್ತಿಯು.) ಶಿವನ=ಧೂರ್ಜಟಿಯ, ಓಲಗದೊಳು=ಸಭೆಯಲ್ಲಿ, ಸಲೆ=ಚನ್ನಾಗಿ, ನೆಲಸಿರ್ಪ=ವಾಸವಾಗಿರುವಂಥಾ, (ಪಾದಸೇವನರೂಪ ಭಕ್ತಿಯು.) ಶಿವನಲ್ಲಿಯೇ=ಶಂಕರನಲ್ಲಿಯೇ, ಪರಿಚರ್ಯವನುಳ್ಳ=ಸೇವೆಯನ್ನುಳ್ಳಂಥಾ, (ದಾಸ್ಯಭಕ್ತಿಯು.) ಶಿವನ=ಗಿರೀಶನ, ಅರ್ಚನೆಯೊಳಗೆ=ಪೂಜೆಯಲ್ಲಿ, ಅಭಿರತಿಯುಳ್ಳ=ಪ್ರೀತಿಯುಳ್ಳಂಥಾ (ಅರ್ಚನ ಭಕ್ತಿಯು.) ಶಿವನ=ಮಹಾದೇವನ, ಅಸಿಪದದೊಳಗೆ=ಯಥಾರ್ಥವಾದ ಸ್ವರೂಪದಲ್ಲಿ, ಎರಕತೆಯುಳ್ಳ=ಹೊಂದಿಕೊಂಡಿರುವಂಥಾ, (ವಂದನರೂಪ ಭಕ್ತಿಯು), ಶಿವನ=ವಿರುಪಾಕ್ಷೇಶ್ವರನ, ಸಂಪದದೊಳು=ಐಶ್ವರ್ಯದಲ್ಲಿ, ಸುಸ್ಥಿತಿಯುಳ್ಳ=ಚನ್ನಾಗಿ ನೆಲಗೊಂಡಿರುವಂಥಾ (ಸಖ್ಯ ಭಕ್ತಿಯು,) ಶಿವನಿಗೆ=ಹರನಿಗೆ, ತನು ಮುಖ್ಯವನು=ಶರೀರ ಮೊದಲಾದವುಗಳನ್ನು, ಅರ್ಪಿಸುತ=ನಿವೇದನ ಮಾಡುವಂಥಾ (ಆತ್ಮನಿವೇದನ ಭಕ್ತಿಯು.) ಇಂತು=ಈ ಪ್ರಕಾರ, ನವವಿಧ=ಒಂಭತ್ತು ಪ್ರಕಾರಗಳಾದ, ಸದ್ಭಕ್ತಿಯೊಳು=ಉತ್ತಮ ಭಕ್ತಿಗಳಲ್ಲಿ, ಆ ಸಂವಿತ್ತು=ನಿನ್ನಲ್ಲಿರುವ ಆ ಜ್ಞಾನಶಕ್ತಿಯು, ಭಕ್ತಿಯ ರೂಪಿಂದ=ಪ್ರೀತಿ ಲಕ್ಷಣಾತ್ಮಕವಾದ ಭಕ್ತಿಯ ಸ್ವರೂಪದಿಂದ, ಇರುತ=ವಾಸಮಾಡುತ್ತಾ, ಎಲ್ಲಾ ಹೊತ್ತು=ಸರ್ವ ಕಾಲಗಳಲ್ಲಿ, ಭಕ್ತರೊಳ್=ಭಕ್ತರಲ್ಲಿ, ಐದಿಹುದು=ಹೊಂದಿಕೊಂಡಿರುವದು.

ತಾತ್ಪರ್ಯ:— ಎಲೈ ಶಿಷ್ಯನೇ ಮತ್ತು ನಿನ್ನಲ್ಲಿರುವ ಜ್ಞಾನಶಕ್ತಿಯೇ ನವವಿಧ ಭಕ್ತಿಗಳರೂಪಿಂದ ಸರ್ವ ಭಕ್ತರಲ್ಲಿ ಕೂಡಿಕೊಂಡಿರುತ್ತದೆ. ಆ ನವವಿಧ ಭಕ್ತಿಗಳು ಯಾವವು? ಅಂದರೆ, ವಿರಹಿಯು ಸ್ತ್ರೀಯಳ ವರ್ಣನೆಯನ್ನು ಕಿವಿಗೊಟ್ಟು ಕೇಳುವಂತೆ, ಪರಮೇಶ್ವರನ ಲೀಲಾಕಥೆಗಳನ್ನು ಕಿವಿಗೊಟ್ಟು ಏಕಾಗ್ರದಿಂದ ಕೇಳುವದೆ ಶ್ರವಣ ಭಕ್ತಿಯು. ಈ ಭಕ್ತಿಯಿಂದ ಯುಕ್ತನಾದವನು ಪರೀಕ್ಷಿತರಾಜನು. ಯೌವನ ಸ್ತ್ರೀಯಳು ಆಲಿಂಗನ ಸುಖಕ್ಕೆ ವಶವಾಗದಿದ್ದರೆ, ಆ ಸ್ತ್ರೀಯಳನ್ನು ಕುರಿತು, ತನ್ನ ದೇಹವ ಬೊಗ್ಗಿಸಿ ಹೊಗಳುತ್ತಿರುವ ಕಾಮುಕನಂತೆ, ಶರೀರದಲ್ಲಿ ರೋಮಾಂಚನೆಗಳೆದ್ದು, ನೇತ್ರಗಳಿಂದ ಆನಂದೋದಕವನ್ನು ಸುರಿಸುತ್ತಾ ಸದ್ಗದಿತ ಕಂಠನಾಗಿ, ಪರಮೇಶ್ವರನ ಮಹಿಮೆಗಳನ್ನು ನಾಲಿಗೆಯಿಂದ ಸ್ತುತಿ ಮಾಡುವದೇ ಕೀರ್ತನ ಭಕ್ತಿಯು. ಈ ಭಕ್ತಿಯು ನಾರದ ಮಹರ್ಷಿಯಲ್ಲಿ ಇತ್ತು. ಭೃಂಗಕ್ಕೆ ಆಧೀನವಾದ ಕೀಟಯು ತನ್ನಂಗ ಗುಣಗಳನ್ನು ಮರೆದು ಅಂತರಂಗದಲ್ಲಿ ಭೃಂಗವನ್ನೇ

CC-0. Jangamwadi Math Collection. Digitized by eGangotri

ಧ್ಯಾನಮಾಡುವಂತೆ, ಶಿವನ ಮೂರ್ತಿಯನ್ನು ಸ್ಮರಣ ಮಾಡುವದೆ ಸ್ಮರಣ ನಾಮಕವಾದ ಭಕ್ತಿಯು. ಈ ಭಕ್ತಿಯು ಪ್ರಲ್ಹಾದನಲ್ಲಿತ್ತು. ಸತಿ, ಪುತ್ರ, ಗೃಹ, ಧನ ಇವುಗಳನ್ನು ಬಯಿಸಿ ಕಂಡ ಕೆಲಸಗಳನ್ನು । ಬೇಸರಿಯದೆ ಮಾಡು ತ್ತಿರುವ ಲೌಕಿಕನಂತೆ, ಹಸಿವೆ, ನೀರಡಿಕೆ, ರೋಗ, ನಿದ್ರೆ ಮೊದಲಾದವು ಗಳನ್ನು ಬಿಟ್ಟು ಶಿವನ ಸನ್ನಿಧಾನವಲ್ಲಿದ್ದು ಉಪಚರಿಸುವದು ಸೇವನ ಭಕ್ತಿಯು. ಈ ಭಕ್ತಿಯು ಶ್ರೀ ವಿಷ್ಣುವಿನ ಪತ್ನಿಯಾದ ಲಕ್ಷ್ಮೀದೇವಿಯಲ್ಲಿತ್ತು. ಸಿಂಹಾಸನವಲ್ಲಿ ಕುಳಿತು ಸಭೆಯನ್ನು ರಚನೆ ಮಾಡುವ ರಾಜನಿಗೆ ನಮ್ರ ಸ್ವಭಾವ ದಿಂದ ರಾಜೋಪಕರಣಗಳನ್ನು ಕೊಡುತ್ತಿರುವ ಸೇವಕನಂತೆ, ಕಾಯಿಕ, ವಾಚಕ, ಮಾನಸಿಕ ಎಂಬ ತ್ರಿಕರಣಗಳಿಂದ ಶಿವನ ಚರಣಾರವಿಂದದಲ್ಲಿ ಕಿಂಕರಭಾವದಿಂದಿರುವದೇ ದಾಸ್ಯಭಕ್ತಿಯು. ಈ ಭಕ್ತಿಯು ಹನುಮಂತ ನಲ್ಲಿತ್ತು. ಸುಂದರ ಸ್ತ್ರೀಯರು ತನ್ನನ್ನು ಕಂಡಾಕ್ಷಣವೆ ಮೋಹಿಸಲೆಂದು ತಿಳಿದು ಕಾಮಿಯು ತನ್ನ ಶರೀರವನ್ನು ಅಲಂಕಾರಮಾಡುವಂತೆ, ಶಿವನನ್ನು ವಸ್ತ್ರ, ಆಭರಣ, ಗಂಧ, ಹೂವಿನ ಮಾಲೆಗಳಿಂದ ಸಿಂಗಾರ ಮಾಡುವದೇ ಅರ್ಚನ ಭಕ್ತಿಯು. ಈ ಪೂಜಾಭಕ್ತಿಯು ಪೃಥುರಾಜನಲ್ಲಿತ್ತು. ರಾಜರೆದು ರಿಗೆ ಯುದ್ಧವನ್ನು ಮಾಡಿ ಪರಾಕ್ರಮುವನ್ನು ಪಡೆಯಬೇಕೆಂಬ ಅಭಿಮಾನ ದಿಂದ ಬೇಸರಿಲ್ಲದೆ ದೇಹವನ್ನು ದಂಡಿಸುವ ಸಾಧಕನಂತೆ ಪರಮಾತ್ಮನ ಪಾದಾರವಿಂದಗಳಲ್ಲಿ ಶರೀರವನ್ನು ಕೆಡಹುವದೆ ವಂದನ ಭಕ್ತಿಯು. ಈ ಭಕ್ತಿಯು ಅಕ್ರೂರನಲ್ಲಿತ್ತು. ಸರಸಸಲ್ಲಾಪಗಳಿಂದ ಸುರತ ಕ್ರೀಡೆಗಳಲ್ಲಿ ಮೆಚ್ಚಿಸಿಕೊಂಡ ಪುರುಷನಿಗೆ ಮರುಳಾಗಿ ಕರಚರಣಾದಿಗಳಿಂದ ಯುಕ್ತವಾದ ಶರೀರಗಳೆರಡಾದರೂ ಪ್ರಾಣ ಒಂದಾಗಿರುವ ಅನುಕೂಲಿನೀಯಾದ ಸ್ತ್ರೀಯ ಳಂತೆ, ಶಿವನಿಗೆ ಅನುಕೂಲವಾಗಿ ಸುಖಸಂಪತ್ತಿನಿಂದಿರುವದೇ ಸಖ್ಯಭಕ್ತಿಯು. ಈ ಭಕ್ತಿಯು ಅರ್ಜುನನಲ್ಲಿತ್ತು. ಲೋಕದಲ್ಲಿ ಪತಿಭಕ್ತಿಯುಕ್ತಳಾದ, ಪತಿವ್ರತಾ ಸ್ತ್ರೀಯಳು ತನ್ನ ದೇಹವನ್ನು ಗಂಡನಿಗೆ ಅರ್ಪಿಸಿದಂತೆ, ಶಿವನಿಗೆ ದೇಹ, ದ್ರವ್ಯ, ಪ್ರಾಣ, ಮನಸ್ಸು ಮೊದಲಾದವುಗಳನ್ನು ಕೊಡುವದೇ ಆತ್ಮ ನಿವೇದನ ಭಕ್ತಿಯು. ಈ ಭಕ್ತಿಯು ಬಲಿಚಕ್ರವರ್ತಿಯಲ್ಲಿತ್ತು. ಈ ರೀತಿ ನಿನ್ನಲ್ಲಿರುವ ಸಂವಿತ್ತೇ ಒಂಭತ್ತು ಪ್ರಕಾರಗಳಾದ ಭಕ್ತಿಯ ಸ್ವರೂಪದಿಂದ ಯಾವತ್ತು ಭಕ್ತರಲ್ಲಿ ಯಾವಾಗಲೂ ಕೂಡಿಕೊಂಡಿರುತ್ತದೆ.

ಬಳಿಕ; ಶಿವನಲ್ಲಿ ವಿಶೇಷವಾದ ಭಕ್ತಿಯಿಂದ ಯುಕ್ತರಾಗಿದ್ದರೆ ಅಷ್ಟೈ ಶ್ವರ್ಯ, ಆರು ಗುಣ, ಆರು ಅವಯುವಗಳಿಂದ ಕೂಡಿದ ಈಶನ ಪದವೇ ಪ್ರಾಪ್ತಿಯಾಗುತ್ತದೆಂದು ಹೇಳುತ್ತಾರೆ.

ಈ ನವವಿಧ ಭಕ್ತಿಯ ಪಥದಿಂದ।
ಆ ನಿಖಿಳಗಿರೀಶ್ವರ ನೊಲವಿಂದ॥

CC-0. Jangamwadi Math Collection. Digitized by eGangotri

ಅಷ್ಟೈಶ್ವರ್ಯಂ ಗುಣವಾರೆಂಬ ।
ತುಷ್ಟಿಸದಾ ಸರ್ವಜ್ಞತೆಯೆಂಬ ।
ನಿತ್ಯ ಸುಬೋಧಂ ಬೇರೊಂದೆಂಬ ।
ಸತ್ಯಮೆನಲ್ ಸ್ವಾತಂತ್ರ್ಯಮಿದೆಂಬ ।
ತಾನಳಿಯದ ಶಕ್ತಿತ್ವವದೆಂಬ ।
ನಾನಾ ಶಕ್ತಿತ್ವಂ ತಾನೆಂಬ ।
ಆರಂಗಮಿವೀಶನ ಪದವಕ್ಕು ।
ಮೀರಿದ ಭಕ್ತಿಗೆ ಯದೆ ಫಲವಕ್ಕು ॥
ಆ ನಿಜಭಾಗ್ಯಂ ಸಿದ್ಧಿಸಿದವರು ।
ಸೂಸು ತಿಳಿಯೆ ಮುಕ್ತರ್ನೋಡವರು ॥ ೧೦ ॥

ಟೀಕಾ:— ಈ ನವವಿಧ=ಹಿಂದೆ ಹೇಳಲ್ಪಟ್ಟ ಒಂಭತ್ತು ಪ್ರಕಾರಗಳಾದ, ಭಕ್ತಿಯ=ಅನನ್ಯ ಪ್ರೇಮಲಕ್ಷಣ ಭಕ್ತಿಯ, ಪಥದಿಂದ=ಮಾರ್ಗದಿಂದ, ಆ ನಿಖಿಳರ್ಗೆ=ಭಕ್ತಿಯಿಂದ ಯುಕ್ತರಾದವರಿಗೆ, ಈಶ್ವರನ=ಶಿವನ, ಒಲವಿಂದ= ಕೃಪೆಯಿಂದ, ಅಷ್ಟೈಶ್ವರ್ಯಂ=ಅಣಿಮಾ ಮಹಿಮಾದಿ ಎಂಟು ಐಶ್ವರ್ಯಗಳು, ಗುಣವಾರೆಂಬ=ಜ್ಞಾನ ಐಶ್ವರ್ಯ ಶಕ್ಯಾದಿ ಆರು ಗುಣಗಳೆಂಬ, ಸದಾತುಷ್ಟಿ= ಯಾವಾಗಲೂ ಸಂತೋಷದಿಂದ ಇರುವಿಕೆಯು, ಸರ್ವಜ್ಞತೆಯೆಂಬ=ತ್ರಿಕಾಲ ವಸ್ತುಗಳ ಜ್ಞಾನವೆಂಬ, ಬೇರೊಂದೆಂಬ=ಎರಡನೇಯದೆನ್ನಿಸುವಂಥಾ, ನಿತ್ಯಸು ಬೋಧಂ=ಉತ್ಪತ್ತಿಯಿಲ್ಲದ ಸ್ವರೂಪ ಜ್ಞಾನವು, ಇದೆಂಬ=ಪ್ರತ್ಯಕ್ಷವೆಂದು ಹೇಳಿ ಸಿಕೊಳ್ಳುವಂಥಾ, ಸತ್ಯಮೆನಲ್=ಯಥಾರ್ಥವೆಂದನ್ನುವಂಥಾ, ಸ್ವಾತಂತ್ರ್ಯಂ= ಪರಾಧೀನವಿಲ್ಲದಿರುವಿಕೆಯು, ತಾನಳಿಯದ=ತಾನು ನಾಶವಾಗದೆ ಎಂದಿಗಾದರೂ ಇರುವಂಥಾ, ಶಕ್ತಿತ್ವವದೆಂಬ=ಶಕ್ತಿಯೆಂದು ಹೇಳಿಸಿಕೊಳ್ಳುವಂಥಾ, ನಾನಾ ಶಕ್ತಿತ್ವಂ=ಅನಂತ ಸಾಮರ್ಥ್ಯವು, ತಾನೆಂಬ=ನಾನೆಂದು ಹೇಳಿಸಿಕೊಳ್ಳುವಂಥಾ, ಆರಂಗಂ=ಈ ಆರು ಅವಯವಗಳು, ಇವು=ಅಷ್ಟೈಶ್ವರ್ಯ, ಆರು ಗುಣ,ಆರಂಗ, ಇವುಗಳು, ಈಶನ=ಪರಮಾತ್ಮನ, ಪದವು=(ಯಾವತ್ತರು ಹೊಂದಲಿಕ್ಕೆಯೋಗ್ಯ ವಾದ) ಸ್ಥಾನವು, ಆಕ್ಕು=ಆಗುವದು, ಮೀರಿದ=ಶ್ರೇಷ್ಠವಾದ, ಭಕ್ತಿಗೆ=ಪ್ರೇಮಕ್ಕೆ ಅವೆ=ಆಪದವೇ, ಫಲವಕ್ಕು=ಫಲವಾಗುವದು, ಸೂಸು=ಎಲ್ಲೈ ಮಗುವೇ, ಆ ನಿಜ ಭಾಗ್ಯಂ=ಉಕ್ತ ಯಥಾರ್ಥ ಐಶ್ವರ್ಯವನ್ನು, ಸಿದ್ಧಿಸಿದವರು=ಪ್ರಾಪ್ತಿಮಾಡಿಕೊಂ ಡವರು, ತಿಳಿಯೆ=ವಿಚಾರಮಾಡಿ ನೋಡಿದರೆ, ಅವರು=ಆ ಪುರುಷರು,ಮುಕ್ತರು= ಜನನ ಮರಣ ರೂಪ:ಬಂಧದಿಂದ್ವಬಿಡುಗಡೆಯನ್ನು ಹೊಂದಿದವರು, ನೋಡು= ತಿಳಕೋ ?

CC-0. Jangamwadi Math Collection. Digitized by eGangotri

ತಾತ್ಪರ್ಯ:— ಹಿಂದಿನ ಶ್ಲೋಕದಲ್ಲಿ ಹೇಳಲ್ಪಟ್ಟ ಒಂಬತ್ತು ಪ್ರಕಾರಗಳಾದ ಭಕ್ತಿಯು ಮಾರ್ಗದಿಂದಲೂ, ಶಿವನ ಕೃಪೆಯಿಂದಲೂ, ಸರ್ವರಿಗೆ ಎಂಟು ಐಶ್ವರ್ಯ, ಆರು ಗುಣ, ಆರು ಅಂಗ ಇವುಗಳು ಪ್ರಾಪ್ತವಾಗುತ್ತವೆ. ಅವು ಯಾವವು ? ಅಂದರೆ ಅತ್ಯಂತ ಸೂಕ್ಷ್ಮವಾದ ನೊರಜು ಮೊದಲಾದ ಪ್ರಾಣಿಗಳ ಶರೀರಗಳಲ್ಲಿ ಅವುಗಳ ಆತ್ಮಸ್ವರೂಪದಿಂದ ಪ್ರವೇಶ ಮಾಡುವದೇ ಅಣಿಮೆ. ಬ್ರಹ್ಮಾಂಡಾದಿ ಶಿವಾಂತವಾದ ಮೂವತ್ತಾರು ತತ್ವಗಳಿಗಿಂತಲೂ ಹೊರಗೆ ವ್ಯಾಪಿಸಿ ಇರುವತನವೇ ಮಹಿಮೆ. ಮಹಾ ಮೇರು ಪರ್ವತಕ್ಕೆ ಸಮಾನವಾದ ಶರೀರವುಳ್ಳಾತನನ್ನು ಮೇಲಕ್ಕೆ ನೆಗಹುವ ಕೃತ್ಯದಲ್ಲಿ ಪರಮಾಣುವಿಗೆ ಸದೃಶವಹುದೇ ಲಘಿಮೆ. ಪರಮಾಣುವಿಗೆ ಸದೃಶವಾದ ದೇಹವನ್ನು ಮೇಲಕ್ಕೆ ನೆಗಹುವ ಕೃತ್ಯದಲ್ಲಿ ಸುಮೇರುವಿನ ಭಾರವಂತೆ ತೋರ್ಪುದೇ ಗರಿಮೆ. ಸ್ವಸ್ಥಾನದೊಳಿರ್ದು ಸಮಸ್ತಲೋಕ ಸಾಕ್ಷಾತ್ಕಾರವಂ ಪಡೆಯುವದೇ ಪ್ರಾಪ್ತಿ. ಸ್ವೇಚ್ಛೆಯಿಂದ ಆಕಾಶಗಮನಾದಿ ಸರ್ವಸಿದ್ಧಿಯೇ ಪ್ರಾಕಾಮ್ಯವೆನಿಸುವದು. ಅಥವಾ ತನ್ನ ಶರೀರ ಪ್ರಕಾಶದಿಂದ ಸರ್ವ ಪದಾರ್ಥಗಳನ್ನು ಬೆಳಗುವತನವಾದರೂ ಪ್ರಾಕಾಮ್ಯವೆನಿಸುವದು. ತನ್ನಿಚ್ಛೆ ಮಾತ್ರದಿಂದ ಜಗದುತ್ಪತ್ತಿ, ಸ್ಥಿತಿ, ನಾಶ ಮೊದಲಾದ ಕೃತ್ಯಗಳನ್ನು ಮಾಡುವದೂ, ಸೂರ್ಯ ಚಂದ್ರಾದಿ ಗ್ರಹಗಳನ್ನು ಪ್ರೇರಿಸುವತನವೂ, ಈಶ್ವರತ್ವವೆನಿಸುವದು. ದಿಕ್ಪಾಲಕರಿಂದೊಡಗೂಡಿದ ಜಗತ್ತನ್ನು ತನ್ನ ಆಧೀನ ಮಾಡಿಕೊಂಡು ನಡಿಸುವತನವೇ ವಶಿತ್ವವೆನಿಸುವದು. ಈ ಅಣಿಮಾದಿ ವಶಿತ್ವಗಳೆಂಟೂ ಅಷ್ಟೈಶ್ವರ್ಯಗಳೆನಿಸುವವು. ಸಕಲ ವಸ್ತುಗಳನ್ನು ಬೆಳಗುವಂಥಾದ್ದು ಜ್ಞಾನ, ಸ್ವತಂತ್ರವಾಗಿರುವತನವೇ ಐಶ್ವರ್ಯವು. ಆ ಐಶ್ವರ್ಯವನ್ನು ಕಾಯುವ ಸಾಮರ್ಥ್ಯವೇ ಶಕ್ತಿಯು. ಸಹಾಯ ಸಂಪತ್ತಿಯಿಂದೊಡಗೂಡಿರುವದೇ ಬಲವು. ಪರಾಕ್ರಮತನವೇ ವೀರ್ಯವು. ಕಳೆಗುಂದದೆ ಧೈರ್ಯದಿಂದಿರುವದೇ ತೇಜಸ್ಸು. ಈ ಜ್ಞಾನಾದಿ ತೇಜಸ್ಸುಗಳಾರೂ ಗುಣಗಳೆನಿಸುವವು. ಏನೊಂದು ಬಯಸದೆ ಯಾವಾಗಲೂ ಸಂತೋಷದಿಂದಿರುವದೇ ತುಷ್ಟಿಯು. ಭೂತ, ವರ್ತಮಾನ, ಭವಿಷ್ಯ ಇವುಗಳ ಜ್ಞಾನವು ಏಕಕಾಲದಲ್ಲಿ ಆಗುವದೇ ಸರ್ವಜ್ಞತೆಯು. ಯಾವಾಗಲೂ ತನ್ನ ಸ್ವರೂಪವನ್ನು ತಾನು ಮರೆಯದಿಹುದೇ ನಿತ್ಯ ಸುಬೋಧವು. ಅನ್ಯರಿಗೆ ಪರಾಧೀನವಾಗದಿರುವದೇ ಸ್ವತಂತ್ರವು. ಎಲ್ಲರನ್ನು ತನ್ನಾಧೀನರನ್ನಾಗಿ ಮಾಡಿಕೊಳ್ಳುವದೇ ನಿತ್ಯ ಶಕ್ತಿಯು. ಇಂಥಾ ಅನೇಕ ಶಕ್ತಿಗಳಿಂದ ಕೂಡಿರುವದೇ ಅನಂತ ಶಕ್ತಿಯು. ಈ ತುಷ್ಟ್ಯಾದಿ ಅನಂತ ಶಕ್ತಿಗಳೇ ಆರು ಅಂಗಗಳೆನಿಸುವವು. ಈ ಷಡಂಗಕ್ಕೆ ವಾಯು ಪುರಾಣದೊಳಗಿನದೊಂದು ಶ್ಲೋಕವು ಪ್ರಮಾಣವಾಗಿರುತ್ತದೆ. ಅದು ಯಾವದು ? ಅಂದರೆ:—

"ಸರ್ವಜ್ಞತಾ ತೃಪ್ತಿರನಾದಿಬೋಧಃ ಸ್ವತಂತ್ರತಾ ನಿತ್ಯಮಲುಪ್ತಶಕ್ತಿಃ ।
ಅನಂತ ಶಕ್ತಿಶ್ಚ ವಿಭೋರ್ವಿದಿಜ್ಞಾಃ ಷಡಾಹುರಂಗಾನಿ ಮಹೇಶ್ವರಸ್ಯ"

CC-0. Jangamwadi Math Collection. Digitized by eGangotri

ಈ ಪ್ರಕಾರ ಅಷ್ಟೈಶ್ವರ್ಯ, ಆರು ಗುಣ, ಆರಂಗ, ಇವು ಈಶ್ವರನ ಪದವೆನ್ನಲ್ಪಡುತ್ತವೆ. ಶಿವನಲ್ಲಿ ವಿಶೇಷವಾದ ಭಕ್ತಿಯುಳ್ಳವರಿಗೆ ಈ ಶಿವಪದವು ಪ್ರಾಪ್ತವಾಗುತ್ತದೆ. ಎಲೈ ಶಿಷ್ಯನೇ ಇಂಥಾ ಈಶ್ವರನ ಐಶ್ವರ್ಯವನ್ನು ಪ್ರಾಪ್ತಿಮಾಡಿಕೊಂಡವರು ಮುಕ್ತರೆಂದೇ ತಿಳಿ. ಈ ವಿಷಯದಲ್ಲಿ ಸಂಶಯ ಪಡಬೇಡ.

ಬಳಿಕ; ನಿನ್ನ ಚಿಚ್ಛಕ್ತಿಯೇ ಪ್ರಮಾತೃ ಪ್ರಮಾಣಾದಿಗಳಾಗಿ ಪ್ರತ್ಯಕ್ಷ ಅನುಮಾನ, ಆಗಮುಗಳೆಂಬ ಹೆಸರುಗಳಿಂದ ಹೇಳಿಸಿಕೊಳ್ಳುವದು. ಮತ್ತು ಒಂದು ಜೀವತ್ವವನ್ನು ಕಳೆದರೆ, ಪ್ರಮಾತೃ ಪ್ರಮಾಣಾದಿಗಳೇನೂ ತೋರದೇ ನಿನ್ನ ಸಚ್ಚಿದಾನಂದ ಸ್ವರೂಪವೇ ಉಳಿಯುತ್ತದೆಂದು ಹೇಳುತ್ತಾರೆ.

ಚಿತ್ತದು ಕೇಳನು ಭೂತಿಯೆನಿಕ್ಕು ।
ಮತ್ತದು ತಾನೇ ಪವಣವೆನಿಕ್ಕು ॥
ಸತ್ಯವಿದಿಂದ್ರಿಯ ದನುಭವದಿಂದ ।
ಪ್ರತ್ಯಕ್ಷಮೆನಿಪ್ಪುದು ಪೆಸರಿಂದ ॥
ಕುರುಹಂ ಕಂಡನುಭವಿಪುದರಿಂದ ।
ಅರಿಯುದನನುಮಾನದ ಪೆಸರಿಂದ ।
ಆಗಳು ನುಡಿವಿಡಿ ದರಿವುದರಿಂದ ।
ಆಗಮವೆನಿಸುವ ದಂತದರಿಂದ ॥
ತನುವಿನುಪಾಧಿಯುಲೇ ಮಾತೃತ್ವ ।
ನಿನಗಾಗ ಮದಲಹುದು ಮೇಯತ್ವ ॥
ಅನುಭವ ಕೆಡಲಾ ಮೂದೆರ ನಳಿದು ।
ಮನವಂ ಮೀರಿಹೆ ನುಡಿಗಳ ನುಳಿದು ।
ಅದರಿಂ ನಿನ್ನಂ ಬೇರೊಂದಿಲ್ಲ ।
ವಿದಿತಂ ತಿಳಿ ಬಂಧಂ ನಿನಗಿಲ್ಲ ।
ಪ್ರತ್ಯಕ್ಷಾದಿಕಮಂ ನೆರೆ ಬಿಟ್ಟು ।
ನಿತ್ಯಸುಖದೊಳಿರು ನಿಜವಳವಟ್ಟು ॥ ೧೧ ॥

ಟೀಕಾ :— ಕೇಳ್=ಏಕಾಗ್ರಚಿತ್ತದಿಂದ ಆಲಿಸು, ಅದು=ಆ, ಚಿತ್ತು=ಚಿದ್ರೂಪು, ಅನುಭೂತಿ=ಪ್ರಮಾತೃ, ಎನಿಕ್ಕುಂ=ಎನಿಸುವದು, ಮತ್ತೆ=ಅನಂತರ, ಅದು=ಆ ಚಿತ್ತೇ, ತಾನೇ=ಸ್ವಯಂ, ಪವಣವು=ಪ್ರಮಾಣವು. ಎನಿಕ್ಕುಂ=ಎನಿಸುವದು, ಇಂದ್ರಿಯದ=ದಶೇಂದ್ರಿಯಗಳ, ಅನುಭವದಿಂದ=ಜ್ಞಾನದಿಂದ, ಸತ್ಯವಿದು=ಅಪರೋಕ್ಷವಾದ ಚಿದ್ರೂಪು, ಪೆಸರಿಂದ=ಹೆಸರಿನಿಂದ, ಪ್ರತ್ಯಕ್ಷಂ=ಪ್ರತ್ಯಕ್ಷ ಪ್ರಮಾಣವು, ಎನಿಪ್ಪುದು=ಎನಿಸುವದು, ಕುರುಹಂ=

CC-0. Jangamwadi Math Collection. Digitized by eGangotri

ಗುರ್ತನ್ನು, ಕಂಡು=ನೋಡಿ, ಅನುಭವಿಪುದರಿಂದ=ತಿಳಿಯುವದರಿಂದ, ಅದನು=ಆ ಚಿದ್ರೂಪನನ್ನು, ಅನುಮಾನದ=ಅನುಮಾನ ಪ್ರಮಾಣದ, ಪೆಸರಿಂದ= ಹೆಸರಿನಿಂದ,ಆಗಳು-ಸದ್ಯತ್ಕಾಲದಲ್ಲಿ ಅರಿ=ತಿಳಿ, ಆಗಳು=ಸದ್ಯತ್ಕಾಲದಲ್ಲಿ,ನುಡಿವಿಡಿದು=ವಚನವನ್ನು ಅನುಸರಿಸಿ,ಅರಿವುದರಿಂದ=ತಿಳಿಯುವದರಿಂದ,ಅಂತದರಿಂದ= ಆ ನುಡಿಯ ಉಪಾಧಿಯಿಂದ, ಆಗಮವೆನಿಸುವದು=ಆಗಮ .ಪ್ರಮಾಣವೆಂದು ಹೇಳಿಸಿಕೊಳ್ಳುವದು, ತನುವಿನ=ಶರೀರದ, ಉಪಾಧಿಯಲೇ=ನಿಮಿತ್ತದಿಂದಲೇ, ನಿನಗೆ=ಸಚ್ಚಿದಾನಂದ ಸ್ವರೂಪನಾದ ನಿನಗೆ, ಮಾತೃತ್ವ=ಜೀವತ್ವವು, ಆಗಮದಲಿ=ಆ ವೇದಗಳಲ್ಲಿ, ಮೇಯತ್ವ=ಪ್ರತಿಪಾದ್ಯತ್ವವು, ಅಹುದು=ಆಗುವದು, ಅನುಭವಕೆಡಲ್=ಜೀವತ್ವವು ನಷ್ಟವಾಗಲಾಗಿ, ಆ ಮೂದೆರನು=ಆ ಮೂರು ಪ್ರಕಾರಗಳಾದ ಪ್ರಮಾತೃ, ಪ್ರಮಾಣ, ಪ್ರಮೇಯಾದಿಗಳನ್ನು, ಅಳಿದು= ನಾಶಮಾಡಿ, ನುಡಿಗಳ=ವಾಕ್ಯಗಳನ್ನು, ನುಳಿದು=ಬಿಟ್ಟು, ಮನವಂ=ಸಂಕಲ್ಪ ವಿಕಲ್ಪಾತ್ಮಕ ಮನಸ್ಸನ್ನು, ಮೀರಿ=ದಾಟಿ, ಇಹೆ=ಇದ್ದೀ, ಅದರಿಂ=ಆದ ಕಾರಣದಿಂದ, ನಿನ್ನಿಂ=ಸಚ್ಚಿದಾನಂದ ಸ್ವರೂಪನಾದ ನಿನಗಿಂತಲೂ, ಒಂದ್= ಒಂದು ಪದಾರ್ಥವಾದರೂ, ಬೇರೆಯಿಲ್ಲ–ಭಿನ್ನವಿಲ್ಲ, ನಿನಗೆ–ಪರಿಪೂರ್ಣನಾದ ನಿನಗೆ, ವಿದಿತಂ–ಪ್ರಸಿದ್ಧವಾಗಿ, ಬಂಧಂ–ಜನನಮರಣಾತ್ಮಕ ಸಂಸಾರವು. ಇಲ್ಲ–ಇರುವದಿಲ್ಲ. ತಿಳಿ–ಚನ್ನಾಗಿ ವಿಚಾರ ಮಾಡು, ಪ್ರತ್ಯಕ್ಷಾದಿಕಮಂ– ಪ್ರತ್ಯಕ್ಷ, ಅನುಮಾನ, ಆಗಮ ಪ್ರಮಾಣಗಳನ್ನು, ನೆರೆ–ಚನ್ನಾಗಿ, ಬಿಟ್ಟು– ತ್ಯಜಿಸಿ, ನಿಜವಳವಟ್ಟು–ನಿನ್ನ ಯಥಾರ್ಥಸ್ವರೂಪವನ್ನು ಪ್ರಾಪ್ತಿಮಾಡಿಕೊಂಡು, ನಿತ್ಯಸುಖದೊಳು–ಆ ಅಖಂಡಾನಂದ ಸ್ವರೂಪದಲ್ಲಿ, ಇರು–ವಾಸ ಮಾಡು.

ತಾತ್ಪರ್ಯ:— ಎಲೈ ಶಿಷ್ಯನೇ, ಮತ್ತು ನಿನ್ನ ಚಿದ್ರೂಪವೇ ಅಜ್ಞಾನದಲ್ಲಿ ಪ್ರತಿ ಬಿಂಬಿಸಿ ಜೀವವೆನಿಸಿತು. ಅಂತಃಕರಣ ವಿಶಿಷ್ಟವಾಗಿ ಪ್ರಮಾತೃವೆನಿಸಿತು. ಅಂತಃಕರಣ ವೃತ್ತ್ಯವಚ್ಛಿನ್ನವಾಗಿ ಪ್ರಮಾಣವೆನಿಸಿತು. ಘಟಾದ್ಯವಚ್ಛಿನ್ನವಾಗಿ ಪ್ರಮೇಯವೆನಿಸಿತು. ಬಳಿಕ ಕೆರೆಯಲ್ಲಿರುವ ನೀರೆ ಕಾಲುವೆಯಿಂದ ಹೊರಟು, ಗದ್ದೆಗಳ ಪರ್ಯಂತರ ಹೋಗಿ, ಆ ಗದ್ದೆಗಳ ಆಕಾರವಾದಂತೆ; ಅಂತಃಕರಣ ವೃತ್ತಿಯು ನೇತ್ರಾದಿಂದ್ರಿಯಗಳ ದ್ವಾರಾ ಹೊರಗೆ ಹೊರಟು, ವಿಷಯಗಳ ಪರ್ಯಂತರ ಹೋಗಿ, ಆ ವಿಷಯಗಳ ಆಕಾರವನ್ನು ಹೊಂದುತ್ತದೆ. ಆಗ್ಯೆ ವೃತ್ತಿ ಮತ್ತು ವಿಷಯ ಇವೆರಡು ಒಂದೇ ಸ್ಥಾನದಲ್ಲಿರುವದರಿಂದ, ವೃತ್ತ್ಯುಪಹಿತ ಚೇತನವೂ ವಿಷಯೋಪಹಿತ ಚೇತನವೂ ಅಭೇದಗಳಾಗಿರುತ್ತವೆ. ಆ ವೃತ್ತಿದ್ವಾರಾ ಪ್ರಮಾತೃಚೇತನವಾದರೂ ವಿಷಯಕ್ಕೆ ಸಂಬಂಧವಾಗಿರುತ್ತದೆ. ಆ ಕಾಲಕ್ಕೆ ಯಾವದಾದರೊಂದು ವಿಷಯದ ಪ್ರತ್ಯಕ್ಷಜ್ಞಾನವಾಗುತ್ತದೆ. ಚಾರ್ವಾಕರು ಇಂದ್ರಿಯ ಮತ್ತು ವಿಷಯ ಇವುಗಳ

CC-0. Jangamwadi Math Collection. Digitized by eGangotri

ಸಂಯೋಗಕ್ಕೆ ಪ್ರತ್ಯಕ್ಷವೆನ್ನುವರು. ನೈಯಾಯಿಕರು ವೃತ್ತಿ ಮತ್ತು ವಿಷಯ ಇವುಗಳ ಸಂಯೋಗಕ್ಕೆ ಪ್ರತ್ಯಕ್ಷವೆನ್ನುವರು. ಸಿದ್ಧಾಂತಿಗಳು ವೃತ್ತಿಚೇತನ, ವಿಷಯಚೇತನ, ಇವೆರಡರ ಅಭೇದಕ್ಕೆ ಪ್ರತ್ಯಕ್ಷವೆನ್ನುತ್ತಾರೆ. ಆದ್ದರಿಂದ ನಿನ್ನ ಸ್ವರೂಪಭೂತವಾದ ಚೈತನ್ಯವೇ ಪ್ರತ್ಯಕ್ಷ ಎಂಬ ನಾಮವನ್ನು ಪಡೆಯಿತು. ಇದರಂತೇ ನಿನ್ನ ಸ್ವರೂಪಭೂತವಾದ ಚಿದ್ರೂಪೇನೇತ್ರೇಂದ್ರಿಯದಿಂದ ಪಕ್ಷ ರೂಪಪರ್ವತದಲ್ಲಿ ಹೊರಡುತ್ತಿರುವಂಥಾ,ಹೇತುವಾದ ಧೂಮವನ್ನು ಗುರ್ತಿಟ್ಟು ಆ ಪರ್ವತದಲ್ಲಿ ಸಾಧ್ಯವಾದ ಅಗ್ನಿಯಿರುತ್ತದೆಂದು ಮನೋಪಾಧಿಯಿಂದ ಅನುಮಾನಮಾಡುತ್ತದೆ. ಆದ್ದರಿಂದ ಅನುಮಾನ ಎಂಬ ಹೆಸರನ್ನೂ ಪಡೆಯಿತು. ಮತ್ತು ನುಡಿಯನ್ನು ಅನುಸರಿಸಿ ಯಾವದಾದರೊಂದು ವಸ್ತುವನ್ನು ತಿಳಿಯುವದರಿಂದ ಆಗಮ ಎಂಬ ಹೆಸರನ್ನು ಪಡೆಯಿತು. ಮತ್ತು ಶರೀರೋಪಾಧಿಯಿಂದೊಡಗೂಡಿದ್ದರಿಂದ (ಪ್ರಮಾತೃ) ಜ್ಞಾತೃ ಎಂಬ ಹೆಸರನ್ನೂ ವೇದ ವಾಕ್ಯಗಳಿಂದ ಪ್ರತಿಪಾದನ ಮಾಡಿಸಿಕೊಳ್ಳುವದರಿಂದ (ಮೇಯತ್ವ) ಜ್ಞೇಯ ಎಂಬ ಹೆಸರನ್ನೂ ಪಡೆಯಿತು.

ಈ ಪ್ರಕಾರ ಎಲೈ ಶಿಷ್ಯನೇ, ನಿನ್ನ ಸ್ವರೂಪವಾದ ಚಿದ್ರೂಪು ಹಲವು ಉಪಾಧಿಗಳಿಂದೊಡಗೂಡುವದರಿಂದ ಹಲವು ನಾಮುಗಳನ್ನು ಧರಿಸಿತು. ಆದರೆ ನಿನ್ನ ಯಥಾರ್ಥ ಸ್ವರೂಪಜ್ಞಾನದಿಂದ ಅವಿದ್ಯೋಪಾಧಿಯುಕ್ತವಾದ ಜೀವತ್ವವು ನಷ್ಟವಾಗಿ ಹೋದರೆ, ಪ್ರಮಾತೃ, ಪ್ರಮಾಣ, ಪ್ರಮೇಯಗಳೆಂಬ ತ್ರಿಪುಟ ನಾಶವಾಗುವದಲ್ಲದೆ, ವಾಕ್ಕು ಮನಸ್ಸುಗಳಿಗೆ ಕೂಡಾ ಅಸಂಗನಾಗಿ ಪರಿಪೂರ್ಣ ರೂಪನಾಗಿರುತ್ತೀ. ಆದ್ದರಿಂದ ಸರ್ವಕ್ಕೂ ನೀನೆ ಅಧಿಷ್ಠಾನನಾಗಿರೋಣದರಿಂದ ನಿನ್ನಲ್ಲಿ ಕಲ್ಪಿತವಾದ ಸಕಲ ಪ್ರಚಂಚವು ನಿನ್ನಲ್ಲಿಯೇ ಲಯವಾಗುತ್ತದೆ. ಹೇಗಂದರೆ ನಿನ್ನಲ್ಲಿ ತೋರಿದ ಸ್ವಪ್ನ ಪ್ರಪಂಚವು ನಿನ್ನಲ್ಲಿಯೇ ಲೀನವಾಗುತ್ತದೆ ಹೊರತು, ಬೇರೆ ನಾಶವಾಗುವದಿಲ್ಲ. ಆದ್ದರಿಂದಲೇ ಸಚ್ಚಿದಾನಂದ ಸ್ವರೂಪನಾದ ನಿನಗಿಂತಲೂ ಭಿನ್ನವಾಗಿ ಯಾವದೂ ಇಲ್ಲ. ಪರಿಚ್ಛಿನ್ನ ವಸ್ತುಗಳಿಗೆ ಬಂಧ ಪ್ರಾಪ್ತವಾಗುತ್ತದೆ. ನೀನು ಪರಿಪೂರ್ಣನಾಗಿರೋಣದರಿಂದ ನಿನಗೆ ಬಂಧವೂ ಇಲ್ಲ. ಮತ್ತು ನೇತ್ರ, ಮನ, ವಾಕ್ಕು ಉಪಾಧಿಗಳಿಂದ ಪ್ರಾಪ್ತವಾದ ಪ್ರತ್ಯಕ್ಷ ಅನುಮಾನ, ಆಗಮುಗಳೆಂಬ ಅಭಿಧಾನಗಳನ್ನೂ ತ್ಯಾಗಮಾಡಿ ಕೇವಲ ಅಖಂಡಾನಂದ ಸ್ವರೂಪವಾದ ನಿನ್ನಲ್ಲಿಯೇ ನೀನು ಸುಖವಾಗಿರು, ಅಂದರೆ ಇಂದ್ರಿಯ ಮನಸ್ಸುಗಳನ್ನು ವಿಷಯಗಳ ಕಡೆಗೆ ಬಿಡದೇ ನಿನ್ನ ಆಧೀನದಲ್ಲಿಟ್ಟುಕೊಂಡು ಸ್ವರೂಪಾಕಾರ ವೃತ್ತಿ ಮಾಡುತ್ತಾ, ಆ ವೃತ್ತಿಯಲ್ಲಿ ಪ್ರತಿಬಿಂಬಿತವಾದ ಆನಂದವನ್ನು ಅನುಭವಿಸು ಎಂಬ ತಾತ್ಪರ್ಯವು.

ಈ ಕಂದದಲ್ಲಿ, ಎಷ್ಟು ಪದಗಳಿಂದ ಯಾವ ವಿಷಯವು ಪ್ರತಿಪಾದನ ಮಾಡಲ್ಪಟ್ಟಿತು ಎಂದು ಪ್ರಶ್ನೆ ಮಾಡಿದರೆ; ಅದಕ್ಕೆ ಉತ್ತರವನ್ನು ಹೇಳುತ್ತಾರೆ.

CC-0. Jangamwadi Math Collection. Digitized by eGangotri

ಗತಿಯೊಂದನೆಯದಿದಕ್ಕೆತಿ ।
ಹಿತವೆನಿಪ ನಿರೂಪಣಂಗಳೇಕಾದಶವಂ ॥
ತತಿಶಯಮಾಗಿರೆ ತಿಳಿಯ ।
ಲ್ಪ್ರತಿಪಾದಿತವಿಲ್ಲಿ ವಸ್ತು ಶಕ್ತಿ ದ್ವಿತಿಯಂ ॥.

ಟೀಕಾ:—ಒಂದನೆಯ=ಮೊದಲನೆಯ, ಗತಿಯು=ಅಧ್ಯಾಯವು, ಇದಕ್ಕೆ=ಈ ಗತಿಗೆ, ಅತಿ ಹಿತವೆನಿಪ=ಬಹಳ ಯೋಗ್ಯಗಳಾದ, ನಿರೂಪಣಂಗಳ್=ಪ್ರತಿಪಾದನೆಗಳು, ಅಂತು=ಒಟ್ಟಿಗೆ, ಏಕಾದಶವಂ=ಹನ್ನೊಂದು, ಅತಿಶಯಮಾಗಿರೆ=ವಿಶೇಷವಾಗಿದ್ದರೂ, ತಿಳಿಯಲ್=ವಿಚಾರಮಾಡಲಾಗಿ, ಇಲ್ಲಿ=ಈಗತಿಯಲ್ಲಿ, ವಸ್ತು ಶಕ್ತಿ=ಶಿವ ಮತ್ತು ಶಕ್ತಿ, ದ್ವಿತಿಯಂ=ಈ ಎರಡು, ಪ್ರತಿಪಾದಿತವು=ಹೇಳಲ್ಪಟ್ಟವು,

ಇಂತಿ ಪ್ರಥಮಗತಿಯೊಂದರೊಳು ನಿರೂಪಣ (೧೮ಕ್ಕೆ ಚರಣ ೧೩೭ ಕ್ಕಂ) ಮಂಗಳಮಸ್ತು.

ಓಂ

ದ್ವಿತಿಯ ಗತಿ

ಬಳಿಕ ಈ ಕಂದದಲ್ಲಿ, ಹಿಂದಿನ ಗತಿಯಲ್ಲಿ ಹೇಳಿದ ಅರ್ಥವನ್ನು ಸಂಕ್ಷೇಪ ರೀತಿಯಿಂದ ತೋರಿಸಿ, ಮುಂದೆ ಈ ಗತಿಯಲ್ಲಿ ಪಂಚಭೂತೋತ್ಪತ್ತಿಯನ್ನೂ ಪಂಚೀಕರಣವನ್ನೂ ಹೇಳುತ್ತೇವೆಂದು ಪ್ರತಿಜ್ಞೆ ಮಾಡುತ್ತಾರೆ.

ಕುಂದದೆ ಮಹೇಶ್ವರಾದಿಗ ।
ಳಂದವ ನಾನಂದದಿಂದೆ ಪೇಳ್ದೀಕ್ರಮದೋಳ್ ॥
ಮುಂದೀಗಳರಿಯೆ ಜಗದೊಲ ।
ವಿಂದಿಳೆ ಮೊದಲಾದ ಭೂತದುದಯವನುಸುರ್ವೆಂ ॥

ಟೀಕಾ:— ಕುಂದದೆ–ಕಡಿಮೆಯಾಗದೆ, ಮಹೇಶ್ವರಾದಿಗಳ–ಮಹೇಶ್ವರ, ಬ್ರಹ್ಮ, ವಿಷ್ಣು ಮೊದಲಾದವರ, ಅಂದವನು–ಸ್ವರೂಪವನ್ನು, ಆನಂದದಿಂದೆ-ಸಂತೋಷದಿಂದೆ, ಈ ಕ್ರಮದೋಳ್–ಈ ರೀತಿಯಿಂದೆ, ಪೇಳ್ದು–ಹೇಳಿ, ಮುಂದೆ–ಈ ಎರಡನೇ ಗತಿಯಲ್ಲಿ, ಈಗಳ್–ವರ್ತಮಾನ ಕಾಲದಲ್ಲಿ, ಜಗತ್–ಜಗತ್ತಿನಲ್ಲಿರುವ ಮುಮುಕ್ಷುಗಳು, ಅರಿಯೆ–ತಿಳಿಯುವ ಹಾಗೆ, ಒಲವಿಂದ ಕೃಪೆಯಿಂದ, ಇಳೆ–ಪೃಥ್ವಿಯೇ, ಮೊದಲಾದ–ಮುಂತಾದ, ಭೂತ--ಪಂಚ ಭೂತಗಳ, ಉದಯವನು–ಉತ್ಪತ್ತಿಯನ್ನು, ಉಸುರ್ವೆಂ--ಹೇಳುವೆನು.

ತಾತ್ಪರ್ಯ:— ಹಿಂದಿನ ಗತಿಯಲ್ಲಿ ಒಂದು ಚೈತನ್ಯವೇ ಮಾಯೋಪಾಧಿಯಿಂದ ಮಹೇಶ್ವರ, ಬ್ರಹ್ಮ, ವಿಷ್ಣು, ರುದ್ರಾದಿ ನಾಮಗಳನ್ನು ಧರಿಸಿತೆಂದೂ, ಆ ಚೈತನ್ಯದಲ್ಲಿರುವ ಚಿಚ್ಛಕ್ತಿಯೇ ಸರಸ್ವತಿ, ಲಕ್ಷ್ಮಿ, ಅಂಬಿಕಾ

CC-0. Jangamwadi Math Collection. Digitized by eGangotri

ಮೊದಲಾದ ಹೆಸರುಗಳನ್ನು ಪಡೆಯಿತೆಂದೂ ಹೇಳಿ; ಈಗ ಈ ಎರಡನೇ ಗತಿ ಯಲ್ಲಿ ಮುಮುಕ್ಷುಗಳು ಚನ್ನಾಗಿ ತಿಳಕೊಳ್ಳುವ ಹಾಗೆ ಕೃಪೆಯಿಂದ ಪಂಚ ಭೂತಗಳ ಉತ್ಪತ್ತಿಯನ್ನೂ ಪಂಚೀಕರಣವನ್ನೂ ಪ್ರತಿಪಾದನ ಮಾಡುತ್ತೇ ವೆಂಪು ಪ್ರತಿಜ್ಞಾ ಮಾಡುತ್ತಾರೆ.

ಬಳಿಕ; ಎಲೈ ಶಿಷ್ಯನೇ! ಮಹೇಶ್ವರನಾದ ನಿನ್ನಿಂದಲೇ ಪಂಚಭೂತ ಗಳು ಉತ್ಪತ್ತಿಯಾದವು. ಆ ಮೇಲೆ ನೀನೇ ಬ್ರಹ್ಮನೆಂಬ ಹೆಸರನ್ನು ಹೊಂದಿ, ಪ್ರತಿಯೊಂದು ಭೂತವನ್ನು ಐದು ವಿಭಾಗಪಡಿಸಿದಿಯೆಂದು ಪ್ರತಿಪಾದನ ಮಾಡುತ್ತಾರೆ.

ಅಲ್ಲಿಯೆ ಮಾಯೋಪಾಧಿಕನಪ್ಪ ।
ಎಲ್ಲವ ಬಲ್ಲ ಮಹೇಶನೆನಿಪ್ಪ ॥
ನಿನ್ನಿಚ್ಛೆಯಲೇ ನಭವಾಯಿತ್ತು ।
ನನ್ನಿಯನಿಲನದರೊಳಗಾಯಿತ್ತು ।
ವಾಯುವಿನೊಳಗಾ ಪಾವಕವಾಯ್ತು ।
ವಾಯು ಸಖನೊಳಾ ಜಲವಾಯಿತ್ತು ॥
ಆ ಜಲದೊಳು ವಸುಮತಿಯಾಯಿತ್ತು ।
ರಾಜೀವಜನಹೆ ನೀನಾ ಹೊತ್ತು ॥
ಬರಿ ಭೂತಂಗಳ್ ವ್ಯವಹಾರಕ್ಕೆ ।
ನೆರೆ ಸಾಧನವಲ್ಲಾತ್ಮ ಚಯಕ್ಕೆ ॥
ಅದರಿಂದಖಿಳ ಕರಣಬೇಕೆಂದು ।
ವಿದಿತಾಂ ಪಂಚೀಕರಿಸಿದನೆಂದು ॥ ೧ ॥

ಟೀಕಾ:— ಅಲ್ಲಿಯೆ–ಪೂರ್ವದಲ್ಲಿಯೆ, ಮಾಯೋಪಾಧಿಕನ–ತ್ರಿಗುಣಾ ತ್ಮಕ ಮಾಯೋಪಾಧಿಯುಳ್ಳವನು, ಅಪ್ಪ–ಆದ, ಎಲ್ಲವಬಲ್ಲ--ಸರ್ವಜ್ಞನಾದ, ಮಹೇಶನು–ಪರಮಾತ್ಮನು, ಎನಿಪ್ಪ--ಹೇಳಿಸಿಕೊಳ್ಳುವಂಥಾ, ನಿನ್ನ–(ಮಹೇ ಶ್ವರನಾದ) ನಿನ್ನ, ಇಚ್ಛೆಯಲೇ--(ಬಹಳ ಪ್ರಜೆಗಳಾಗಬೇಕೆಂಬ) ಸಂಕಲ್ಪ ದಿಂದಲೇ, ನಭವಾಯಿತ್ತು--ಆಕಾಶವಾಯಿತು, ಅದರೊಳಗೆ--ಆಕಾಶದಿಂದ, ನನ್ನಿಯನು--ನಿಶ್ಚಯವಾಗಿ, ಅನಿಲನು--ವಾಯುವು, ಆಯಿತ್ತು--ಉತ್ಪನ್ನ ವಾಯಿತು, ಆ ವಾಯುವಿನೊಳಗೆ--ಆ ಗಾಳಿಯಿಂದ, ಪಾವಕವು–ಅಗ್ನಿಯು, ಆಯ್ತು--ಉತ್ಪನ್ನವಾಯಿತು, ಆ ವಾಯು ಸಖನೊಳು--ಆ ಬೆಂಕಿಯಿಂದ, ಜಲವು–ನೀರು, ಆಯಿತ್ತು--ಹುಟ್ಟಿತು, ಆ ಜಲದೊಳು--ಆ ನೀರಿನಿಂದ, ವಸು ಮತಿಯು--ಭೂಮಿಯು, ಆಯಿತ್ತು--ಉದಯವಾಯಿತು, ಆ ಹೊತ್ತು–ಆ ವೇಳೆಯಲ್ಲಿ, ನೀನು–ಮಹೇಶ್ವರನಾದ ನೀನು, ರಾಜೀವಜನು–ಬ್ರಹ್ಮನು, ಅಹೆ–ಇದ್ದೀ, ಬರಿ ಭೂತಂಗಳ್--ಕೇವಲ ಪಂಚ ಭೂತಗಳೇ, ವ್ಯವಹಾರಕ್ಕೆ–

CC-0. Jangamwadi Math Collection. Digitized by eGangotri

ವಿಷಯಗಳ ಉಪಭೋಗಕ್ಕೆ, ನೆರೆ–ಚನ್ನಾಗಿ, ಸಾಧನವಲ್ಲ--ಸಹಕಾರಿಗಳಾಗುವದಿಲ್ಲ. ಆದರಿಂದ--ಅದಕಾರಣದಿಂದ, ಆತ್ಮಚಯಕ್ಕೆ--ಜೀವರಾಶಿಗೆ, ಅಖಿಳ--ಅನೇಕ, ಕರಣಬೇಕೆಂದು--ಇಂದ್ರಿಯಗಳು ಬೇಕಾಗುತ್ತವೆಂದು, ವಿಧಿತಾಂ-ಬ್ರಹ್ಮನಾದ ತಾನು, ಅಂದು-ಆ ಹೊತ್ತಿನಲ್ಲಿ, ಪಂಚೀಕರಿಸಿದನು–ಪ್ರತಿಒಂದು ಭೂತವನ್ನು ಐದೈದು ವಿಭಾಗಮಾಡಿದನು.

ತಾತ್ಪರ್ಯ:— ಎಲೈ ಶಿಷ್ಯನೇ ನೀನು ಮೊದಲನೇ ಗತಿಯಲ್ಲಿ ಮಾಯೋಪಾಧಿಯಿಂದ ಸರ್ವಜ್ಞನಾದ ಮಹೇಶ್ವರನಾದಿ ಎಂದು ಹೇಳಲ್ಪಟ್ಟಿರುತ್ತದೆ. ಅಂಥಾ ಮಹೇಶ್ವರನಾದ ನೀನು ಬಹಳ ಜೀವರುಗಳಾಗಬೇಕೆಂದು (ಈಕ್ಷಣ) ಸಂಕಲ್ಪಮಾಡಿದ್ದರಿಂದಲೇ ಆಕಾಶವಾಯಿತು. ಆದರಿಂದ ಗಾಳಿ ಹುಟ್ಟಿತು. ಅದರಿಂದ ಬೆಂಕಿಯಾಯಿತು. ಅದರಿಂದ ನೀರು ಹುಟ್ಟಿತು. ಅದರಿಂದ ಭೂಮಿ ಹುಟ್ಟಿತು, ಆ ಕಾಲಕ್ಕೆ ನಿನಗೆ ಬ್ರಹ್ಮನೆಂಬ ಹೆಸರು ಪ್ರಾಪ್ತವಾಯಿತು. ಬರೇ ಕಟ್ಟಿಗೆಯು ಮುಂಡಿಗಿದ್ದರೆ, ಮನುಷ್ಯರಿಗೆ ಉಪಯೋಗವಾಗುವದಿಲ್ಲೆಂದು ತಿಳಿದು ಬಡಿಗನು ಅದನ್ನು ಕೆತ್ತಿ, ಕೊಯಿದು, ತೊಲೆ, ಕಂಭ, ಜಂತಿಗಳನ್ನು ಮಾಡಿ ಮನೆಯನ್ನು ರಚನೆ ಮಾಡುವಂತೆ, ಸೃಷ್ಟಿಕರ್ತನಾದ ನೀನು ಈ ಕೇವಲ ಪಂಚಭೂತಗಳು ಪ್ರಾಣಿಗಳ ಭೋಗ, ಮೋಕ್ಷಾದಿ ವ್ಯವಹಾರಕ್ಕೆ ಸಹಕಾರಿಗಳಾಗುವದಿಲ್ಲೆಂದು ತಿಳಕೊಂಡು, ಕರ, ಚರಣ, ನೇತ್ರ, ಶ್ರೋತ್ರಾದಿ ಅವಯವಗಳು ಬೇಕೆಂದು ಆ ಪಂಚಭೂತಗಳನ್ನು ಇಪ್ಪತ್ತೈದು ಪ್ರಕಾರ ಭಾಗಪಡಿಸುವಂಥವನಾದಿ.

ಬಳಿಕ; ಪಂಚಭೂತಗಳು ಐದೈದು ವಿಭಾಗಗಳಾಗಿ ಇಪ್ಪತ್ತೈದು ತತ್ವಾತ್ಮಕ, ಸ್ಥೂಲ ಶರೀರವಾಯಿತೆಂದು ಹೇಳುತ್ತಾರೆ.

ಆ ಭೇದದೊಳರಿ ಭೂತಮಿದ್ಯೆದು ।
ಶೋಭೆಯನೈದಿದ ವೊಂದೊಂದೈದು ॥
ಸರಿ ಭಾಗದೊಳೊಂದೊಂದೆರಡಾಗಿ ।
ಎರಡರೊಳೊಂದಂಶವೆ ನೆಲೆಯಾಗಿ ॥
ಉಳಿದರ್ಧಂಶಂಗಳೆ ನಾಲ್ಕಾಗಿ ।
ತಿಳಿಭಾಗಂ ಬಡೆದವು ಸಮನಾಗಿ ॥
ನೆಲೆಯಾಗಿರ್ದ್ದಾರ್ಯಂಶಂಗಳೊಳು ।
ಉಳಿದ ನಿಜಾಂಶವನಾ ಮಿಕ್ಕರೊಳು ॥
ಬೆರಕೆಯ ನೈದಿದ ವೊಂದೊಂದೈದು ।
ವಿರಚಿಸೆ ತತ್ವಮಿವಿಪ್ಪತ್ತೈದು ।
ಈ ತತ್ವ ಸಮೇಷ್ಟಿಯೆ ತನುವಾಯ್ತು ।
ಈ ತೆರನಿಂ ಪಂಚೀಕೃತವಾಯ್ತು ॥ ೨ ॥

CC-0. Jangamwadi Math Collection. Digitized by eGangotri

ಟೀಕಾ:— ಆ ಭೇದದೊಳು=ಮೇಲೆ ಹೇಳಿದ ರೀತಿಯಿಂದ, ಇವು ಐದು ಭೂತ=ಇವು ಪಂಚ ಭೂತಗಳು, ಒಂದೊಂದು=ಪ್ರತಿಒಂದು ಭೂತಗಳು, ಐದು=ಪಂಚ ಪ್ರಕಾರ, ಶೋಭೆಯನು=ಮನೋಹರತ್ವವನು, ಐದಿದವು=ಹೊಂದಿದವು, ಅರಿ=ತಿಳಕೋ, ಒಂದೊಂದು=ಪ್ರತಿಒಂದು ಭೂತವು, ಸರಿ ಭಾಗದೊಳು=ಸಮಾನ ಹಿಸೆಯಿಂದ, ಎರಡಾಗಿ=ಎರಡು ಭಾಗಗಳಾಗಿ, ಎರಡ ರೊಳು=ಆ ಎರಡು ಪಾಲುಗಳಲ್ಲಿ, ಒಂದಂಶವೆ=ಒಂದು ಭಾಗವೆ, ನೆಲೆಯಾಗಿ=ಇದ್ದಕಿದ್ದ ಹಾಗಿದ್ದು, ಉಳಿದ=ಬಾಕಿ, ಅರ್ಧಾಂಶಂಗಳೇ=ಅರ್ಧ ಭಾಗಗಳೇ, ನಾಲ್ಕಾಗಿ=ನಾಲ್ಕು ಪಾಲುಗಳಾಗಿ, ಸಮನಾಗಿ=ಸರಿಯಾಗಿ, ಭಾಗಂ=ಹಿಸೆ ಯನ್ನು, ಬಡೆದವು=ಹೊಂದಿದವು, ತಿಳಿ=ಅರಿತುಕೊ, ಮಿಕ್ಕರೊಳು=ಹೆಚ್ಚಾ ಗಿದ್ದ, ನೆಲೆಯಾಗಿರ್ದ=ಇದ್ದಕ್ಕಿದ್ದ ಹಾಗಿದ್ದ, ಅಂಶಂಗಳೊಳು=ಭಾಗಗಳಲ್ಲಿ, ಉಳಿದ ನಿಜಾಂಶವನು=ಮಿಕ್ಕುಳಿದ ನಾಲ್ಕು ನಾಲ್ಕು ಭಾಗಗಳನ್ನು (ಕೂಡಿಸ ಲಾಗಿ), ಒಂದೊಂದು=ಪ್ರತಿಒಂದು ಭೂತಗಳು, ಐದು=ಪಂಚಪ್ರಕಾರ, ಬೆರಕೆ ಯನು=ಕೂಡುವಿಕೆಯನ್ನು, ಐದಿದವು=ಹೊಂದಿದವು, ವಿರಚಿಸೆ=ಗಣನೆಮಾಡ ಲಾಗಿ, ಇವು ಇಪ್ಪತ್ತೈದು ತತ್ವ=ಇವು ಇಪ್ಪತ್ತೈದು ಭಾಗಗಳಾದವು.

ತಾತ್ಪರ್ಯ:— ಎಲೈ ಶಿಷ್ಯನೇ, ಈ ಪಂಚಭೂತಗಳು, ಇಪ್ಪತ್ತೈದು ತತ್ವಗಳು ಹೇಗಾದವು ? ಅಂದರೆ, ಕೇಳು. ಒಂದು ರೂಪಾಯಿಯನ್ನು ತಕ್ಕೊಂಡು ಅದರಲ್ಲಿ ಎಂಟೆಂಟು ಅಣೆಯ ಎರಡು ಭಾಗಗಳನ್ನು ಮಾಡಬೇಕು. ಬಳಿಕ ಒಂದು ಎಂಟು ಆಣೆಯ ಭಾಗವನ್ನು ಹಾಗೇ ಇಟ್ಟು, ಮತ್ತೊಂದು ಎಂಟು ಅಣೆಯನ್ನು ತಕ್ಕೊಂಡು ಅದರಲ್ಲಿ ಎರಡೆರಡು ಆಣೆಯ ನಾಲ್ಕು ಭಾಗ ಗಗಳನ್ನು ಮಾಡಬೇಕು. ಈ ನಾಲ್ಕು ಭಾಗಗಳನ್ನು ಮೊದಲು ಇದ್ದಕ್ಕಿದ್ದ ಹಾಗಿಟ್ಟ ಎಂಟಾಣೆಯ ಭಾಗವನ್ನೂ ಕೂಡಿಸಲಾಗಿ ಐದು ಭಾಗಗಳಾದವು. ಒಂದು ರೂಪಾಯಿಯಲ್ಲಿ ಐದು ಭಾಗಗಳಾದಂತೆ ಐದು ರೂಪಾಯಿಗಳಲ್ಲಿ ಇಪ್ಪತ್ತೈದು ಭಾಗಗಳಾಗುತ್ತವೆ. ಈ ದೃಷ್ಟಾಂತದಂತೆ, ಪ್ರತಿಯೊಂದು ಭೂತ ಗಳು ಮೊದಲು ಎರಡು ಭಾಗಗಳಾದವು. ಆ ಎರಡು ಭಾಗಗಳಲ್ಲಿ ಒಂದು ಭಾಗವನ್ನು ಹಾಗೇ ಇಟ್ಟು, ಮತ್ತೊಂದು ಭಾಗವನ್ನು ತಕ್ಕೊಂಡು, ಅದರಲ್ಲಿ ಸಮನಾಗಿ ನಾಲ್ಕು ಭಾಗಗಳನ್ನು ಮಾಡಬೇಕು. ಬಳಿಕ ಹಾಗೇ ಇದ್ದ ಅರ್ಧ ಭಾಗದಲ್ಲಿ ಈ ನಾಲ್ಕು ಭಾಗಗಳನ್ನು ಕೂಡಿಸಲಾಗಿ ಐದು ಭಾಗಗಳಾದವು. ಇದರಂತೆ ಪ್ರತಿಒಂದು ಭೂತವನ್ನು ಭಾಗಮಾಡಿದರೆ ಇಪ್ಪತ್ತೈದು ತತ್ವಗಳು ಆಗುತ್ತವೆ. ಈ ಇಪ್ಪತ್ತೈದು ತತ್ವಗಳ ರಾಶಿಯೆ ಸ್ಥೂಲ ಶರೀರ ವಾಗುವದು· ಈ ರೀತಿಯಿಂದ ಪಂಚೀಕರಣವಾಗಿರುವದು.

ಬಳಿಕ, ಆಕಾಶ ಪಂಚೀಕರಣದಿಂದ ಅಂತ:ಕರಣ ಪಂಚಕದುತ್ಪತ್ತಿ ಯನ್ನು ಪ್ರತಿಪಾದನ ಮಾಡುತ್ತಾರೆ.

CC-0. Jangamwadi Math Collection. Digitized by eGangotri

ಗಗನಾಂಶವೆ ಜ್ಞಾತೃತ್ವವುದಾಯ್ತು ।
ಬಗೆಯಲು ಸಂಸೃತಿಗದು ಗುರಿಯಾಯ್ತು ॥
ಧರೆ ಕಳೆವೆರಸಲಹಂಕೃತಿಯಾಯ್ತು ।
ಪರಿತೋರದ ಮೂಢತೆಯದಕಾಯಿತ್ತು ॥
ಜಲ ಕಳೆವೆರಸಲು ಚಿತ್ತವದಾಯ್ತು ।
ತಿಳಿವಿನ ರೂಪವೆ ನೋಡದಕಾಯ್ತು ।
ಜ್ವಲನಂ ಬೆರಸಲು ಮತಿಯಾಯಿತ್ತು ।
ಕಳೆವೆತ್ತಿಹ ರೂಪದ ಕಾಯಿತ್ತು ॥
ಮರುತಂ ಬೆರಸಲು ಮನವಾಯಿತ್ತು ।
ನಿರುತಂ ಚಂಚಲವದ ಕಾಯಿತ್ತು ॥
ಬಗೆ ನಿರವಧಿಯಂತಃ ಕರಣತ್ವ ।
ಮಿಗಿಲಹವಿವು ತಿಳಿಯಂಬರ ತತ್ವ ॥ ೩ ॥

ಟೀಕಾ:—ಗಗನ-ಆಕಾಶದ, ಅಂಶವೆ-ಅರ್ಧಭಾಗವೇ, ಅದು-ಅರ್ಧಭಾಗವು ಜ್ಞಾತೃತ್ವಂ-ವಿಷಯಗಳನ್ನು ಗ್ರಹಿಸುವತನವುಳ್ಳದ್ದು, ಆಯ್ತು-ಆಯಿತು, ಬಗೆಯಲು-ವಿಚಾರಮಾಡಲು, ಅದು-ಆಜ್ಞಾತೃತ್ವವು, ಸಂಸೃತಿಗೆ-ಸಂಸಾರಕ್ಕೆ, ಗುರಿಯಾಯ್ತು-ಕಾರಣವಾಯಿತು. ಧರೆಕಳೆ-(ಆಕಾಶದ ಪಾದಾಂಶವು) ಭೂಮಿಯ ಅಂಶವನ್ನು, ವೆರಸಲು-ಕೂಡಲು, ಅಹಂಕೃತಿಯು-ಅಹಂಕಾರವು, ಆಯ್ತು-ಆಯಿತು, ಅದಕೆ-ಆ ಅಹಂಕಾರಕ್ಕೆ, ಪರಿತೋರದ-ಏನೊಂದು ತಿಳಿಯದ, ಮೂಢತೆಯು-ತಮೋಸ್ವಭಾವವು, ಆಯ್ತು-ಆಯಿತು, ಜಲಕಳೆ-ನೀರಿನ ಭಾಗವನ್ನು, ವೆರಸಲು-ಕೂಡಲು, ಚಿತ್ತವದಾಯ್ತು-ಚಿತ್ತು ಉತ್ಪನ್ನವಾಯಿತು, ಅದಕೆ-ಆ ಚಿತ್ತಕ್ಕೆ, ತಿಳಿವಿನ ರೂಪವೆ-ಅರಿತದ್ದನ್ನು ಪುನಃ ನೆನಪುಮಾಡುವ ಸ್ವಭಾವವೇ ಆಯ್ತು-ಆಯಿತು, ನೋಡು-ವಿಚಾರಮಾಡು, ಜ್ವಲನಂ-ಅಗ್ನಿಯನ್ನು, ಬೆರಸಲು-ಕೂಡಲು, ಮತಿಯು-ಬುದ್ಧಿಯು, ಆಯಿತ್ತು-ಆಯಿತು, ಅದಕೆ-ಆ ಬುದ್ಧಿಗೆ, ಕಳೆವೆತ್ತಿಹರೂಪ-ಸರ್ವಪದಾರ್ಥಗಳನ್ನು ತಿಳಿಯುವತನವು, ಆಯಿತ್ತು-ಆಯಿತು, ಮರುತಂ-ಗಾಳಿಯನ್ನು, ಬೆರಸಲು-ಕೂಡಲು, ಮನವು-ಮನಸ್ಸು, ಆಯಿತು—ಆಯಿತು, ಅದಕೆ—ಆ ಮನಸ್ಸಿಗೆ, ನಿರುತಂ—ಯಾವಾಗಲೂ, ಚಂಚಲವು—ಸಂಕಲ್ಪವಿಕಲ್ಪತನವು, ಆಯಿತು—ಆಯಿತು, ಬಗೆ—ವಿಚಾರಮಾಡಿದರೆ, ನಿರವಧಿಯು—ಸೀಮೆಯಿಲ್ಲದ್ದು; ಅಂತಃಕರಣತ್ವ—ಒಳಗಿರುವ ಸಾಧನವೆನಿಸುವದು, ಇವು—ಈ ಜ್ಞಾತೃಮನ ಬುದ್ಧ್ಯಾದಿಗಳು, ಮಿಗಿಲಹವು, (ಬೇರೆ ಇಂದ್ರಿಯ

CC-0. Jangamwadi Math Collection. Digitized by eGangotri

ಗಳಿಗೆ ಅವಕಾಶವನ್ನು ಕೊಡುತ್ತಾ) ಶ್ರೇಷ್ಠವಾಗಿರುವವು. ಅಂಬರತತ್ವ— (ಆದ್ದರಿಂದಲೆ) ಆಕಾಶದ ತತ್ವಗಳೆಂದು, ತಿಳಿ—ತಿಳಕೋ ?

ತಾತ್ಪರ್ಯ:— ಎಲೈ ಶಿಷ್ಯನೇ ! ಆಕಾಶದ ಅರ್ಧಭಾಗವೇ ಜ್ಞಾತೃವಾಯಿತು, ಇದು ಜಾಗ್ರದವಸ್ಥೆಯಲ್ಲಿ. ಭ್ರೂಮಧ್ಯಸ್ಥಾನದಲ್ಲಿದ್ದು ವಿಷಯಗಳನ್ನು ಇಚ್ಛಿಸುವದರಿಂದ ಇದು ಸಂಸಾರಕ್ಕೆ ಕಾರಣವಾಯಿತು. ಉಳಿದ ಆಕಾಶದ ಅರ್ಧ ಭಾಗದಲ್ಲಿ ನಾಲ್ಕು ಭಾಗಗಳನ್ನು ಮಾಡಿ, ಆ ನಾಲ್ಕರಲ್ಲಿ ಒಂದು ಭಾಗವನ್ನು ಭೂಮಿಯ ಭಾಗದಲ್ಲಿ ಕೂಡಿಸಲಾಗಿ ಅಹಂಕಾರವಾಯಿತು. ಇದಕ್ಕೆ ಏನೊಂದು ತಿಳಿಯದ ಮೂಢತ್ವವೇ ಕಾರ್ಯವಾಯಿತು. ಯಾಕಂದರೆ ಕಾರಣದೊಳಗಿರುವ ಗುಣವು ಕಾರ್ಯದಲ್ಲಿಯೂ ಕಂಡು ಬರುತ್ತದೆ. ಆದ್ದರಿಂದ ಪೃಥ್ವಿಯು ಮೌಢ್ಯಭಾವದಿಂದಿರುತ್ತದೆ. ಅದರಿಂದ ಅದರ ಕಾರ್ಯದಲ್ಲಿಯೂ ಮೂಢತ್ವವು ಪ್ರಾಪ್ತವಾಗಿರುತ್ತದೆ. ಆಕಾಶದ ಒಂದು ಭಾಗವು ಜಲದ ಅರ್ಧ ಭಾಗವನ್ನು 'ಕೂಡಲು ಚಿತ್ತುತ್ಪನ್ನವಾಯಿತು. ಅದಕ್ಕೆ ಅನುಭವಿಸಲ್ಪಟ್ಟ ವಸ್ತುಗಳನ್ನು ಸ್ಮರಣ ಮಾಡುವದೇ ಧರ್ಮವಾಗಿರುವದು, ಯಾಕಂದರೆ, ಜಲವು ತನ್ನ ಗರ್ಭದಲ್ಲಿ ಜಲಚರಗಳನ್ನೂ ಮುತ್ತು ರತ್ನಗಳನ್ನೂ ಇಟ್ಟುಕೊಂಡಿರುವಂತೆ, ಆ ಜಲದ ಕಾರ್ಯವಾದ ಈ ಚಿತ್ತಾದರೂ ಅನೇಕ ಸಂಸ್ಕಾರಗಳನ್ನು ತನ್ನಲ್ಲಿಟ್ಟುಕೊಂಡು ಪ್ರಸಂಗಾನುಸಾರ ಸ್ಮರಣ ಮಾಡುತ್ತದೆ. ಆದ್ದರಿಂದ ಈ ಚಿತ್ತು ಜಲದ ಕಾರ್ಯವೆನ್ನಲ್ಪಡುತ್ತದೆ. ಮತ್ತು ಆಕಾಶದ ಒಂದು ಭಾಗವು ಅಗ್ನಿಯ ಅರ್ಧ ಭಾಗವನ್ನು ಕೂಡಲು ಬುದ್ಧಿ ಉತ್ಪನ್ನವಾಯಿತು. ಇದಕ್ಕೆ ಸರ್ವ ವಸ್ತುಗಳನ್ನು ತಿಳಿಯುವದೇ ಕೆಲಸವಾಯಿತು. ಯಾಕಂದರೆ, ಅಗ್ನಿಯು ಘಟಪಟಾದಿ ಸಕಲ ವಸ್ತುಗಳನ್ನು ಬೆಳಗುತ್ತಿರುತ್ತದೆ. ಆದ್ದರಿಂದ ಅದರ ಕಾರ್ಯವಾದ ಬುದ್ಧಿಯಾದರೂ ಘಟಪಟಾದಿ ವಸ್ತುಗಳನ್ನು ತಿಳಿಯುತ್ತದೆ. ಈ ಕಾರಣದಿಂದಲೇ ಬುದ್ಧಿಯು ಅಗ್ನಿಯ ಕಾರ್ಯವೆನ್ನಲ್ಪಡುವದು, ಮತ್ತು ಆಕಾಶದ ಒಂದು ಭಾಗವು ವಾಯುವಿನ ಅರ್ಧಭಾಗದಲ್ಲಿ ಬಂದು ಕೂಡಲು ಮನಸ್ಸುತ್ಪನ್ನವಾಯಿತು. ಅದಕ್ಕೆ ಯಾವಾಗಲೂ ಚಂಚಲ ಸ್ವಭಾವವಾಗಿರುವದೇ ಕೆಲಸವಾಯಿತು. ಯಾಕಂದರೆ, ವಾಯು ಚಂಚಲ ಸ್ವಭಾವವುಳ್ಳದ್ದಾಗಿರುವದರಿಂದ ಅದರ ಕಾರ್ಯವಾದ ಮನಸ್ಸಾದರೂ ಚಂಚಲವಾಗಿರುತ್ತದೆ. ಈ ಮನ, ಬುದ್ಧಿ, ಚಿತ್ತ, ಅಹಂಕಾರ, ಜ್ಞಾತೃ ಇವುಗಳು, ವಾಕ್ಕು ಮತ್ತು ನೇತ್ರಾದಿ ಇಂದ್ರಿಯಗಳ ವ್ಯಾಪಾರಗಳಿಗೆ ಅವಕಾಶಕೊಡುವದರಿಂದ ಆಕಾಶ ತತ್ವಗಳೆನಿಸಿಕೊಳ್ಳುವವು. ಆದ್ದರಿಂದಲೇ ಆಕಾಶದಂತೆ (ನಿರವಧಿ) ಸೀಮಾರಹಿತವಾದವುಗಳೆಂದು ಶ್ರೇಷ್ಠವಾಗಿರುವವು. ಇದಕ್ಕೆ ಅಂತಃಕರಣ ಪಂಚಕ ಎಂಬ ಹೆಸರು ಪ್ರಾಪ್ತವಾಗಿರುತ್ತದೆ. ಪರಂತು ಈ ಐದಕ್ಕೆ ಆಕಾಶ ಪಂಚೀಕರಣವೆನ್ನುತ್ತಾರೆ.

CC-0. Jangamwadi Math Collection. Digitized by eGangotri

ಬಳಿಕ; ವಾಯು ಪಂಚೀಕರಣವನ್ನು ಪ್ರತಿಪಾದನ ಮಾಡುತ್ತಾರೆ.

ಬರಿ ಮಾರುತನೇ ವ್ಯಾನವದಾಯ್ತು
ನೆರೆ ತಿರ್ಯಗ್ಗತಿಯುದಕಾಯಿತ್ತು ॥
ಧಾರುಣಿಗೂಡಿದೊಡಸುವಾಯಿತ್ತು ।
ಧಾರಣ ಶಕ್ತಿಯನದು ಪಡೆಯಿತ್ತು ॥
ವಾರಿಯ ಕೂಡಲಪಾನವದಾಯ್ತು ।
ಭೋರನಧೋಮುಖ ಗತಿಯುದಕಾಯ್ತು ॥
ಅನಲಂ ಗೂಡಲುದಾನವದಾಯ್ತು ।
ತನಗದರಿಂ ನುಡಿ ನೊದಲಾಯಿತ್ತು ॥
ಅಂಬರ ಗೂಡಿ ಸಮಾನವದಾಯ್ತು !
ತುಂಬಿದ ತನುವಿನೊಳದು ತೋರಿತ್ತು ॥
ಇಲ್ಲಿ ತಿಳಿಯುಲಿವಕೀಚಲನತ್ವ ।
ಉಳ್ಳದರಿಂದವೆ ಮಾರುತತತ್ವ ॥ ೪ ॥

ಟೀಕಾ:— ಬರಿ ಮಾರುತನೇ= (ಏನೊಂದು ಮಿಶ್ರವಿಲ್ಲದ) ಅರ್ಧವಾಯುವೇ, ಅದು= ಅದು, ವ್ಯಾನವು= ವ್ಯಾನನಾಮಕವಾದ ವಾಯುವು, ಆಯ್ತು= ಆಯಿತು, ಆದಕೆ= ಆ ವ್ಯಾನವಾಯುವಿಗೆ, ನೆರೆ= ಚನ್ನಾಗಿ, ತಿರ್ಯಗ್ಗತಿಯು= ಎಲ್ಲ ಕಡೆಗೆ ತಿರುಗಾಡುವುದು, ಆಯಿತ್ತು= ಆಯಿತು, ಧಾರುಣಿ=ಭೂಮಿಯನ್ನು, ಕೂಡಿದೊಡೆ= ಬೆರೆತಾಗ್ಯೆ, ಅಸುವು= ಪ್ರಾಣವಾಯುವು, ಆಯಿತ್ತು= ಆಯಿತು, ಅದು=ಆ ಪ್ರಾಣವಾಯುವು, ಧಾರಣ ಶಕ್ತಿಯನು=ಶರೀರವನ್ನೆತ್ತಿ ಹಿಡಿಯುವ ಸಾಮರ್ಥ್ಯವನ್ನು, ಪಡೆಯಿತ್ತು= ಸಂಪಾದನ ಮಾಡಿಕೊಂಡಿತು, ಅದು= ಆ ವಾಯುವು, ವಾರಿಯ=ಜಲವನ್ನು, ಕೂಡಲು=ಹೊಂದಲು, ಅಪಾನವು= ಅಪಾನವಾಯುವು, ಆಯ್ತು= ಆಯಿತು, ಆದಕೆ= ಆ ಅಪಾನವಾಯುವಿಗೆ, ಭೋರನೆ= ಶೀಘ್ರವಾಗಿ, ಅಧೋಮುಖಗತಿಯು= ಕೆಳಮುಖವಾಗಿ ಗಮನ ಮಾಡುವದು, ಆಯ್ತು= ಆಯಿತು, ಅದು= ಆ ವಾಯುವು, ಅನಲಂ= ಅಗ್ನಿಯನ್ನು, ಕೂಡಲು= ಬೆರೆಯಲು, ಉದಾನವು= ಉದಾನವಾಯು, ಆಯ್ತು= ಆಯಿತು, ಅದರಿಂ= ಅಗ್ನಿಯನ್ನು ಕೂಡೋಣವರಿಂದ, ತನಗೆ=ಆ ವಾಯುವಿಗೆ, ನುಡಿಮೊದಲಾಯಿತ್ತು= ಶಬ್ದಗಳನ್ನುಚ್ಚರಿಸುವಂಥಾ ಊರ್ಧ್ವ ಗಮನವಾಯಿತು, ಅದು= ಆ ವಾಯುವು, ಅಂಬರ=ಆಕಾಶವನ್ನು, ಕೂಡಿ= ಬೆರತು, ಸಮಾನವು= ಸಮಾನವಾಯುವು, ಆಯ್ತು= ಆಯಿತು, ಅದು=ಆ ಸಮಾನವಾಯುವು, ತುಂಬಿದ=ಪೂರ್ಣವಾದ, ತನುವಿನೊಳು,= ಶರೀರದಲ್ಲಿ, ತೋರಿತ್ತು= ಪ್ರತೀತಿ

CC-0. Jangamwadi Math Collection. Digitized by eGangotri

ಯಾಗಿತ್ತು, ಇಲ್ಲಿ= ಈ ಪ್ರಸಂಗದಲ್ಲಿ, ತಿಳಿಯಲ್= ವಿಚಾರ ಮಾಡಲು, ಇವಕೆ = ಈ ಪ್ರಾಣಾಪಾನಾದಿಗಳಿಗೆ, ಚಲನತ್ವ= ಓಲೆದಾಡುವತನವು, ಉಳ್ಳದರಿಂದವೆ= ಉಂಟಾದ್ದರಿಂದವೆ, ಮಾರುತಃತತ್ವ= ವಾಯುತತ್ವವು.

ತಾತ್ಪರ್ಯ:—ಯಾವ ಭೂತಗಳಲ್ಲಿ ಕೂಡದಿರುವ ಅರ್ಧವಾಯುವೇ ವ್ಯಾನ ವಾಯುವಾಯಿತು. ಆದ್ದರಿಂದಲೇ ವಿಶೇಷ ಶಕ್ತಿಯುಳ್ಳದ್ದಾಗಿ ಶರೀರದ ತುಂಬ ಸಂಚಾರಮಾಡುತ್ತಿರುತ್ತದೆ. ಆದರೆ, ಸೂರ್ಯಮಂಡಲಪರ್ಯಂತರ ಸಂಚಾರ ಮಾಡುತ್ತಿರುವ ಪಕ್ಷಿಗಳಲ್ಲಿಯೂ ಬಹಳದೂರ ಓಡುತ್ತಿರುವ ಅಥವಾ ಹಾರುತ್ತಿರುವ ಪುಂಡರಲ್ಲಿಯೂ ಈ ವ್ಯಾನವಾಯುವು ಅಧಿಕವಾಗಿರುತ್ತದೆಂದು ತಿಳಿಯತಕ್ಕದ್ದು. ಮತ್ತು ಈ ವಾಯುವಿನ ಒಂದು ಪಾದಾಂಶ ಭಾಗವು ಭೂಮಿಯ ಭಾಗವನ್ನು ಕೂಡಲು ಪ್ರಾಣವಾಯುವಾಯಿತು. ಇದು ಹೃದಯದಲ್ಲಿದ್ದುಕೊಂಡು ಶರೀರವನ್ನು ನೆಲಕ್ಕೆ ಬೀಳಗೊಡದಂತೆ ಎತ್ತಿಹಿಡಿಯುವ ಸಾಮರ್ಥ್ಯವನ್ನು ಪಡೆದಿರುತ್ತದೆ. ಯಾಕಂದರೆ, ಗ್ರಾಮ, ಅರಣ್ಯ, ನದಿ, ವನ, ಪರ್ವತ ಮೊದಲಾದವುಗಳನ್ನು ಧರಿಸುವ ಸಾಮರ್ಥ್ಯವು ಪೃಥ್ವಿಯಲ್ಲಿರುತ್ತದೆ. ಇಂಥಾ ಪೃಥ್ವಿಯನ್ನು ವಾಯು ಕೂಡಿದ್ದರಿಂದಲೇ ಪ್ರಾಣವಾಯುವಿಗೆ ಶರೀರ ಧಾರಣ ಮಾಡುವ ಸಾಮರ್ಥ್ಯವು ಬಂದಿರುತ್ತದೆ. ಮತ್ತು ವಾಯುವಿನ ಒಂದು ಪಾದ ಭಾಗವು ಜಲದ ಭಾಗವನ್ನು ಕೂಡಲು ಅಪಾನ ವಾಯು ಆಯಿತು. ಇದು ಗುದೇಂದ್ರಿಯದಲ್ಲಿದ್ದುಕೊಂಡು ಕೆಳಮುಖವಾಗಿ ಹೋಗಿ ಬರುವ ವ್ಯಾಪಾರವನ್ನು ಮಾಡುತ್ತದೆ.

ವಾಯುವಿನ ಒಂದು ಪಾದಾಂಶವು ಅಗ್ನಿಯ ಭಾಗವನ್ನು ಕೂಡಲು ಉದಾನವಾಯಿತು. ಆದ್ದರಿಂದಲೇ ಈ ವಾಯುವು ಕಂಠಸ್ಥಾನದಲ್ಲಿದ್ದು ಮಾತುಗಳನ್ನಾಡಿಸುತ್ತಾ ಮೇಲಕ್ಕೆ ಮುಖವಾಗಿರುವದು. ಮತ್ತು ವಾಯುವಿನ ಪಾದಾಂಶ ಭಾಗವು ಆಕಾಶದ ಭಾಗವನ್ನು ಬೆರೆಯಲುಸಮಾನವಾಯುವಾಯಿತು. ಇದು ನಾಭಿ ಮಂಡಲದಲ್ಲಿದ್ದುಕೊಂಡು ಶರೀರದ ತುಂಬಾ ಸಂಚಾರಮಾಡುತ್ತಿರುತ್ತದೆ. ಇಲ್ಲಿ ವಿಚಾರ ಮಾಡಿ ನೋಡಿದರೆ, ಈ ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ ವಾಯುಗಳು ಚಲನತನವುಳ್ಳವುಗಳಾದ್ದರಿಂದ ವಾಯುವಿನ ತತ್ವಗಳೆನಿಸಿಕೊಳ್ಳುತ್ತವೆ.

ಏಳಿಕ:- ಅಗ್ನಿತತ್ವವು ಉಳಿದ ಭೂತಗಳಲ್ಲಿ ಬೆರಿಕೆಯಾಗುವದರಿಂದ ನೇತ್ರ ಶ್ರೋತ್ರಾದಿ ಇಂದ್ರಿಯಗಳು ಉತ್ಪನ್ನವಾದವು ಎಂದು ಅಗ್ನಿಯ ಪಂಚೀಕರಣವನ್ನು ಪ್ರತಿಪಾದನ ಮಾಡುತ್ತಾರೆ. ೦

ಉದಿತಾಗ್ನ್ಯಂಶವೆ ಲೋಚನವಾಯ್ತು ।
ಅದು ರೂಪಪ್ರತಿಭಾಸಕ ಮಾಯ್ತು ॥

CC-0. Jangamwadi Math Collection. Digitized by eGangotri

JNANA SIMHASAN JNANAMANDIR
LIBRARY
Jangamawadi Math, Varanasi
Acc. No. ....4231....

ಧರಣಿಯು ನೊಂದಲು ನಾಸಿಕ ವಾಯ್ತು ।
ಸುರಭಿಗದು ಪ್ರತಿಭಾಸಕ ಮಾಯ್ತು ॥
ಉದಕದೊಳೊಂದಲು ರಸನೆಯುದಾಯ್ತು ।
ಅದು ಸುರಸ ಪ್ರತಿಭಾಸಕ ಮಾಯ್ತು ॥
ಮಾರುತನೊಳಗೊಂದಲು ತ್ವಕ್ಕಾಯ್ತು ।
ಸ್ಪರ್ಶಪ್ರತಿ ಭಾಸಕ ಮಾಯಿತ್ತು ॥
ಗಗನಂ ಗೂಡಲು ಶ್ರುತಿಯಾಯಿತ್ತು ।
ಮಿಗೆ ಶಬ್ದ ಪ್ರತಿಭಾಸಕ ಮಾಯ್ತು ॥
ಎಲ್ಲಾ ವಿಷಯುವ ತೋರುವ ತತ್ವ ।
ಉಳ್ಳದರಿಂದಿದು ತೈಜಸ ತತ್ವ ॥ ೫ ॥

ಟೀಕಾ:—ಉದಿತ= ಉತ್ಪನ್ನವಾದ, ಅಗ್ನಿ= ಬೆಂಕಿಯ, ಅಂಶವೆ= ಅರ್ಧ ಭಾಗವೇ, ಲೋಚನವು= ನೇತ್ರವು, ಆಯ್ತು= ಆಯಿತು, ಅದು= ಆ ನೇತ್ರವು, ರೂಪಪ್ರತಿ= ರೂಪು ವಿಷಯವನ್ನು ಕುರಿತು, ಭಾಸಕಂ= ಪ್ರಕಾಶ ಮಾಡುವಂಥಾದು, ಆಯ್ತು= ಆಯಿತು, ಧರಣಿಯನು= ಭೂಮಿಯನ್ನು, ಒಂದಲು= ಕೂಡಲು, ನಾಸಿಕವು= ಘ್ರಾಣೇಂದ್ರಿಯವು, ಆಯ್ತು= ಆಯಿತು, ಅದು= ಆ ನಾಸಿಕವು, ಸುರಭಿಗೆ= ಸುಗಂಧಕ್ಕೆ, ಪ್ರತಿಭಾಸಕಂ= ಬೆಳಗುವಂಥಾದ್ದು, ಆಯ್ತು=ಆಯಿತು, ಅದು= ಆ ಅಗ್ನಿಯು, ಉದಕದೊಳು= ಜಲದಲ್ಲಿ, ಒಂದಲು= ಕೂಡಲು, ರಸನೆಯು= ನಾಲಿಗೆಯು, ಆಯ್ತು= ಆಯಿತು, ಅದು= ಆ ನಾಲಿಗೆಯು, ಸುರಸ ಪ್ರತಿ=ಮಧುರ ರಸವನ್ನು ಕುರಿತು, ಭಾಸಕಂ=ಪ್ರಕಾಶ ಮಾಡುವಂಥಾದ್ದು, ಆಯ್ತು= ಆಯಿತು, ಮಾರುತನೊಳಗೆ= ವಾಯುವಿನಲ್ಲಿ, ಒಂದಲು= ಕೂಡಲು, ತ್ವಕ್ಕು= ಚರ್ಮೇಂದ್ರಿಯವು, ಆಯ್ತು= ಆಯಿತು, ಸ್ಪರ್ಶಪ್ರತಿ= ಮೃದು ವಿಷಯವನ್ನು ಕುರಿತು, ಭಾಸಕಂ= ಬೆಳಗುವಂಥಾದ್ದು, ಆಯ್ತು= ಆಯಿತು, ಗಗನಂ= ಆಕಾಶವನ್ನು, ಕೂಡಲು= ಹೊಂದಲು, ಶ್ರುತಿಯು=ಕಿವಿಯು, ಆಯಿತ್ತು= ಆಯಿತು, ಮಿಗೆ= ವಿಶೇಷವಾದ, ಶಬ್ದಪ್ರತಿ= ಶಬ್ದ ವಿಷಯವನ್ನು ಕುರಿತು, ಭಾಸಕಂ= ತಿಳಿಸುವಂಥಾದ್ದು, ಆಯ್ತು=ಆಯಿತು, ಎಲ್ಲಾ ವಿಷಯುವ= ಪಂಚ ವಿಷಯುಗಳನ್ನು, ತೋರುವಸತ್ವ=ಬೆಳಗುವ ಸಾಮರ್ಥ್ಯವು, ಉಳ್ಳದರಿಂದ= ಇದ್ದದರಿಂದ, ಇದು= ಈ ಪ್ರತ್ಯಕ್ಷವಾದದ್ದು, ತೈಜಸ ತತ್ವ= ಅಗ್ನಿ ತತ್ವವು.

ತಾತ್ಪರ್ಯ:—ಆಕಳ ಕರವು ಆಕಳ ಮೊಲೆಯನ್ನು ಕುಡಿಯಲಿಕ್ಕೆ ಹೋಗ್ಗುವದೇ ಹೊರತು, ಎಮ್ಮೆಯ ಮೊಲೆಯನ್ನು ಕುಡಿಯಲಿಕ್ಕೆ ಹೋಗುವದಿಲ್ಲ ಹೇಗೋ; ಹಾಗೇ ಯಾವ ಭೂತಗಳಿಂದ ಯಾವ ಇಂದ್ರಿಯಗಳು ಉತ್ಪನ್ನಗಳಾಗಿರುವವೋ,

CC-0. Jangamwadi Math Collection. Digitized by eGangotri

ಆ ಭೂತಗಳ ವಿಷಯಗಳನ್ನು ಗ್ರಹಿಸುವದಕ್ಕೆ ಅವೇ ಇಂದ್ರಿಯಗಳು ಹೋಗುತ್ತವೆ. ಹೊರತು ಬೇರೆ ಇಂದ್ರಿಯಗಳು ಬೇರೆ ವಿಷಯಗಳನ್ನು ಗ್ರಹಿಸಲಾರವು. ಹೇಗಂದರೆ ಅಗ್ನಿಯ ಅರ್ಧಭಾಗವೇ ನೇತ್ರವಾಯಿತು. ಇದು ಅಗ್ನಿಯ ಸಂಬಂಧವಾದ ರೂಪು ವಿಷಯವನ್ನು ಬೆಳಗುತ್ತದೆ. ಹೊರತು, ಶಬ್ದ ವಿಷಯವನ್ನು ಬೆಳಗುವದಿಲ್ಲ. ಅಗ್ನಿಯ ಒಂದು ಪಾದ ಭಾಗವು ಭೂಮಿಯ ಭಾಗವನ್ನು ಕೂಡಲು ನಾಸಿಕೇಂದ್ರಿಯವಾಯಿತು. ಆದ್ದರಿಂದ ಪೃಥ್ವಿಸಂಬಂಧವಾದ ಗಂಧವನ್ನು ಗ್ರಹಣ ಮಾಡುತ್ತದೆ. ಅಗ್ನಿಯ ಪಾದ ಭಾಗವು ಜಲದ ಭಾಗವನ್ನು ಕೂಡಲು ನಾಲಿಗೆಯು ಆಯಿತು. ಆದ್ದರಿಂದ ಇದು ಜಲಸಂಬಂಧವಾದ ರಸ ವಿಷಯವನ್ನು ತಿಳಿಯುತ್ತಿರುತ್ತದೆ. ಅಗ್ನಿಯ ಪಾದಾಂಶವು ವಾಯುಭಾಗದಲ್ಲಿ ಕೂಡಲು ತ್ವಗೇಂದ್ರಿಯವಾಯಿತು. ಆದ್ದರಿಂದ ವಾಯು ಸಂಬಂಧವಾದ ಮೃದು ವಿಷಯವನ್ನು ಗ್ರಹಣ ಮಾಡುತ್ತದೆ. ಅಗ್ನಿಯ ಪಾದ ಭಾಗವು ಆಕಾಶದ ಭಾಗವನ್ನು ಹೊಂದಲು ಶ್ರೋತ್ರವಾಯಿತು. ಆದ್ದರಿಂದ ಅದು ಆಕಾಶ ಸಂಬಂಧವಾದ ಶಬ್ದ ವಿಷಯವನ್ನು ಗ್ರಹಣ ಮಾಡುತ್ತದೆ. ಈ ಪ್ರಕಾರ ಶ್ರೋತ್ರ, ನೇತ್ರಾದಿ ಇಂದ್ರಿಯಗಳು ಶಬ್ದ, ರೂಪು ಮೊದಲಾದ ವಿಷಯಗಳನ್ನು ಬೆಳಗುವ ಸಾಮರ್ಥ್ಯವುಳ್ಳವುಗಳಾದ್ದರಿಂದಲೇ ಅಗ್ನಿಯ ಕಾರ್ಯಗಳೆನಿಸಿಕೊಳ್ಳುತ್ತವೆ. ಇದು ಅಗ್ನಿಯ ಪಂಚೀಕರಣವು.

ಬಳಿಕ:— ಜಲತತ್ವದಿಂದ ವಿಷಯ ಪಂಚಕದುತ್ಪತ್ತಿಯನ್ನು ಪ್ರತಿಪಾದನ ಮಾಡುತ್ತಾರೆ.

ಉದಕಾಂಶವೆ ತಿಳಿ ರಸವಾಯಿತ್ತು ।
ಅದು ಜಿಹ್ವೆಗೆ ಗೋಚರವಾಯಿತ್ತು ॥
ಕ್ಷೋಣಿಯೊಳೊಂದಿ ಸುರಭಿಮಾಯಿತ್ತು ।
ಘ್ರಾಣಕ್ಕದು ಗೋಚರ ಮಾಯಿತ್ತು ॥
ಶಿಖಿಯಂ ಬೆರಸಲು ರೂಪವದಾಯ್ತು ।
ಸುಖನೇತ್ರಕ್ಕದು ದೃಶ್ಯತೆಯಾಯ್ತು ॥
ಪೊಕ್ಕನಿಲನೊಳಾ ಸ್ಪರ್ಶವದಾಯ್ತು ।
ತ್ವಕ್ಕಿಂಗದು ವೇದ್ಯತೆಯಾಯಿತ್ತು ॥
ತವೆ ನಭವೆರದಾರವವಾಯಿತ್ತು ।
ಶ್ರವಣಕ್ಕದು ವೇದ್ಯತೆಯಾಯಿತ್ತು ॥
ಎಲ್ಲರೊಳುಂ ಮಿಗಿ ಸೊಗಯಿಪ ಸತ್ವ ।
ಉಳ್ಳದರಿಂದವೆ ಯುಪ್ಪಿನ ತತ್ವ ॥ ೬ ॥

CC-0. Jangamwadi Math Collection. Digitized by eGangotri

ಟೀಕಾ:— ಉದಕ= ಜಲದ, ಅಂಶವೆ= ಅರ್ಧಭಾಗವೆ, ರಸಂ= ರಸವಿಷ, ಯವು, ಅಯಿತ್ತು= ಆಯಿತು, ಅದು= ಆ ರಸ ವಿಷಯವು, ಜಿಹ್ವೆಗೆ=ನಾಲಿಗೆಗೆ ಗೋಚರಂ=ವಿಷಯವು, ಆಯಿತ್ತು= ಆಯಿತು, ಕ್ಷೋಣಿಯೊಳು= ಪೃಥ್ವಿಯಲ್ಲಿ ಒಂದಿ= ಕೂಡಿ, ಸುರಭಿಯು= ಸುಗಂಧವು, ಆಯಿತ್ತು= ಆಯಿತು, ಅದು=ಆ ಗಂಧವು, ಘ್ರಾಣಕ್ಕೆ= ನಾಸಿಕಕ್ಕೆ, ಗೋಚರಂ= ವಿಷಯವು, ಆಯಿತ್ತು= ಆಯಿತು, ಅದು= ಜಲದ ಪಾದಭಾಗವು, ಶಿಖಿಯಂ=ಅಗ್ನಿಯನ್ನು, ಬೆರಸಲು= ಕೂಡಲು, ರೂಪವು =ಆಕಾರ ವಿಷಯವು. ಆಯ್ತು=ಆಯಿತು,ಅದು= ಆ ರೂಪು ಸುಖನೇತ್ರಕ್ಕೆ=ಒಳ್ಳೇ ಕಣ್ಣಿಗೆ, ದೃಶ್ಯತೆಯು=ಕಾಣಿಸಿಕೊಂಬುವಿಕೆಯು ಆಯ್ತು= ಆಯಿತು,ಅದು= ಆ ಜಲದಪಾದಭಾಗವು,ಅನಿಲನೊಳು=ವಾಯುವಿನಲ್ಲಿ,ಪೊಕ್ಕು= ಸೇರಿ, ಸ್ಪರ್ಶವು= ಸ್ಪರ್ಶ ವಿಷಯವು, ಆಯ್ತು=ಆಯಿತು, ಅದು= ಸ್ಪರ್ಶವು, ತ್ವಕ್ಕಿಂಗೆ=ಚರ್ಮೇಂದ್ರಿಯಕ್ಕೆ,ವೇದ್ಯತೆಯು= ತಿಳಿಸಿಕೊಂಬುವಿಕೆಯು,ಆಯ್ತು= ಆಯಿತು, ತವೆ= ಚನ್ನಾಗಿ, ನಭ= ಆಕಾಶವನ್ನು, ವೆರಸು=ಕೂಡಿ, ರವವು= ಶಬ್ದವು, ಆಯಿತ್ತು= ಆಯಿತು, ಆದು= ಆ ಶಬ್ದವು, ಶ್ರವಣಕ್ಕೆ= ಕಿವಿಗೆ, ವೇದ್ಯ ತೆಯು= ಗೋಚರವು, ಆಯಿತ್ತು=ಆಯಿತು, ಎಲ್ಲರೊಳು= ಶಬ್ದ ಸ್ಪರ್ಶಾದಿ ವಿಷಯಗಳಲ್ಲಿ, ಮಿಗೆ=ವಿಶೇಷವಾಗಿ, ಸೊಗಯಿಪ= ಸಂತೋಷವನ್ನುಂಟು ಮಾಡುವ, ಸತ್ವ= ಸಾಮರ್ಥ್ಯ, ಉಳ್ಳದರಿಂದವೆ= ಇದ್ದದರಿಂದವೆ, ಅಪ್ಪಿನತತ್ವ= ಜಲದ ತತ್ವಗಳೆಂದು ತಿಳಿ= (ಎಲೈಶಿಷ್ಯನೇ) ವಿಚಾರಮಾಡಿ ನೋಡು.

ತಾತ್ಪರ್ಯ:— ಬಳೀ ಜಲದ ಅರ್ಧಭಾಗವೇ ರಸವಿಷಯವಾಯಿತು ಆದ್ದರಿಂದ ಇದು ನಾಲಿಗೆಗೆ ವಿಷಯವಾಯಿತು. ಜಲದ ಒಂದು ಪಾದ ಭಾಗವು ಭೂಮಿಯಲ್ಲಿ ಕೂಡಲು ಸುಗಂಧವಾಯಿತು. ಆದ್ದರಿಂದ ಅದು ಪೃಥ್ವಿಯ ಕಾರ್ಯವಾದ ನಾಸಿಕೇಂದ್ರಿಯಕ್ಕೆ ವಿಷಯವಾಯಿತು. ಜಲದ ಒಂದು ಪಾದ ಭಾಗವು ಅಗ್ನಿಯ ಪಾದ ಭಾಗವನ್ನು ಕೂಡಲು ರೂಪವಿಷಯವಾಯಿತು. ಆದ ರಿಂದ ಇದು ಅಗ್ನಿಯ ತತ್ವದಿಂದ ಉತ್ಪನ್ನವಾದ ನೇತ್ರಕ್ಕೆ ವಿಷಯವಾಯಿತು. ಜಲದ ಪಾದಾಂಶವು ವಾಯು ಭಾಗದಲ್ಲಿ ಕೂಡಿ ಸ್ಪರ್ಶ ವಿಷಯವಾಯಿತು. ಆದ್ದರಿಂದ ಇದು ವಾಯು ತತ್ವದಿಂದುತ್ಪನ್ನವಾದತ್ವಕ್ಕಿಗೆ ವಿಷಯವಾಯಿತು. ಜಲದ ಒಂದು ಪಾದ ಭಾಗವು ಆಕಾಶದ ಭಾಗವನ್ನು ಕೂಡಿಕೊಂಡು ಶಬ್ದ ವಿಷ ಯವಾಯಿತು. ಆದ್ದರಿಂದ ಇದು ಆಕಾಶ ತತ್ವದಿಂದ ಉತ್ಪನ್ನವಾದ ಶ್ರೋತ್ರಕ್ಕೆ ವಿಷಯವಾಯಿತು. ಈ ಪ್ರಕಾರ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ಐದು ವಿಷಯಗಳು ಮನೋಹರವಾಗಿರುವದರಿಂದ ಜಲದ ಕಾರ್ಯಗಳೆನಿಸುತ್ತ ವೆಂದು ತಿಳಿ.

ಬಳಿಕ:— ಭೂಮಿಯ ತತ್ವದಿಂದ ಪಂಚಕರ್ಮೇಂದ್ರಿಯಂಗಳು ಉತ್ಪನ್ನ ಗಳಾದವೆಂಬು ಹೇಳುತ್ತಾರೆ.

CC-0. Jangamwadi Math Collection. Digitized by eGangotri

ಒದವಿ ಧರಾಂಶವೆ ಗುದವಾಯಿತ್ತು ।
ಅದಕೆ ವಿಸರ್ಜನವೇ ಕ್ರಿಯೆಯಾಯ್ತು ॥
ಸಲಿಲದೊಳೊಂದಲು ಗುಹ್ಯವದಾಯ್ತು ।
ಸಲೆ ಸುಖಿಸುವ ಕರ್ಮವೇ ಯದಕಾಯ್ತು ॥
ಪದವಾ ಶಿಖಿ ಯೋಗದೊಳಾಯಿತ್ತು ।
ಅದಕಾ ಗಮನವೆ ಕ್ರಿಯೆಯಾಯಿತ್ತು ॥
ಪುದಿದನಿಲನೊಳಾ ಕರವಾಯಿತ್ತು ।
ಅದಕಾ ದಾನವೆ ಕ್ರಿಯೆಯಾಯಿತ್ತು ॥
ಪೊಂದಿ ಗಗನದೊಳಾ ವಾಕ್ಕಾಯ್ತು ।
ಅಂದದಕಾ ನುಡಿಯೇ ಕ್ರಿಯುಯಾಯ್ತು ।
ಎಲ್ಲದರಂಶವ ಧಾರಣಸತ್ವ ।
ಉಳ್ಳದರಿಂದವೆ ವಸುಧಾ ತತ್ವ

ಟೀಕಾ:—ಧರಾಂಶವೆ= ಭೂಮಿಯ ಅರ್ಧಭಾಗವೆ, ಒದವಿ= ಉಂಟಾಗಿ, ಗುದವು= ಪಾಯುವು, ಆಯಿತ್ತು= ಆಯಿತು, ಅದಕ್ಕೆ= ಆ ಪಾಯುವಿಗೆ, ವಿಸರ್ಜನವೇ= ಮಲವನ್ನು ಬಿಡುವದೇ. ಕ್ರಿಯೆಯು= ವ್ಯಾಪಾರವು, ಆಯ್ತು= ಆಯಿತು, ಅದು=ಆ ಭೂಮಿಯು, ಸಲಿಲದೊಳು = ಜಲದಲ್ಲಿ,ಒಂದಲು=ಕೂಡಲು,ಗುಹ್ಯವು= ಉಪಸ್ಥವು, ಆಯ್ತು= ಆಯಿತು, ಅದಕೆ=ಆ ಗುಹ್ಯೇಂದ್ರಿಯಕ್ಕೆ, ಸಲೆ= ಚನ್ನಾಗಿ, ಸುಖಿಸುವ= ರತಿಕ್ರೀಡಾನಂದವನ್ನನುಭವಿಸುವ, ಕರ್ಮವೆ= ವ್ಯಾಪಾರವೆ, ಆಯ್ತು= ಆಯಿತು,ಶಿಖಿ=ಅಗ್ನಿಯು, ಯೋಗದೊಳು= ಕೂಡುವಿಕೆಯಲ್ಲಿ, ಪದವು= ಪಾದೇಂದ್ರಿಯವು,ಆಯಿತ್ತು= ಆಯಿತು, ಅದಕ್ಕೆ= ಆ ಪಾದೇಂದ್ರಿಯಕೆ, ಗಮನವೆ= ಹೋಗುವದೇ, ಕ್ರಿಯೆಯು= ವ್ಯಾಪಾರವು, ಆಯಿತ್ತು= ಆಯಿತು, ಅನಿಲನೊಳು= ವಾಯುವಿನಲ್ಲಿ, ಪುದಿದು= ಸಂಬಂಧವಾಗಿ, ಕರವು= ಹಸ್ತವು, ಆಯಿತ್ತು= ಆಯಿತು, ಅದಕ್ಕೆ= ಆ ಹಸ್ತಕ್ಕೆ, ಆದಾನವೆ= ತಕ್ಕೊಂಬುವದೇ, ಕ್ರಿಯೆಯು=ವ್ಯಾಪಾರವು, ಆಯಿತ್ತು= ಆಯಿತು, ಗಗನದೊಳಗೆ= ಆಕಾಶದಲ್ಲಿ, ಪೊಂದಿ= ಯುಕ್ತವಾಗಿ, ವಾಕ್ಕಾಯ್ತು= ವಾಗೀಂದ್ರಿಯವಾಯಿತು, ಅಂದು= ಆ ಹೊತ್ತಿನಲ್ಲಿ, ಅದಕೆ= ಆ ವಾಗೀಂದ್ರಿಯಕ್ಕೆ, ನುಡಿಯೇ= ಮಾತಾಡುವದೆ, ಕ್ರಿಯೆಯು= ವ್ಯಾಪಾರವು, ಆಯ್ತು=ಆಯಿತು, ಎಲ್ಲದರ= ಅನ್ಯಭೂತಗಳ, ಅಂಶವ= ಭಾಗವನ್ನು, ಧಾರಣ=ಧರಿಸುವಂಥಾ, ಸತ್ವ= ಸಾಮರ್ಥ್ಯ ಉಳ್ಳದರಿಂದವೆ=ಇದ್ದದರಿಂದವೇ, ವಸುಧಾತತ್ವ= ಪೃಥ್ವಿಯ ತತ್ವವು.

CC-0. Jangamwadi Math Collection. Digitized by eGangotri

ತಾತ್ಪರ್ಯ:- ಬರೀ ಪೃಥ್ವಿಯ ಅರ್ಧ ಭಾಗವೇ ಗುದೇಂದ್ರಿಯವಾಯಿತು. ಯಾಕಂದರೆ, ಪೃಥ್ವಿಯು ವರ್ತುಲಾಕಾರವಾಗಿರುತ್ತದೆ. ಇದರಂತೆ ಗುದವಾದರೂ ವರ್ತುಲಾಕಾರವಾಗಿಯೇ ಇರುತ್ತದೆ. ಆದ್ದರಿಂದ ಇದು ಪೃಥ್ವಿಯ ಭಾಗದಿಂದು ತ್ಪನ್ನವಾಗಿರುತ್ತದೆ. ಮತ್ತು ಮಲ ಬಿಡುವದೇ ಈ ಗುದಕ್ಕೆ ವ್ಯಾಪಾರವಾಗಿರುತ್ತದೆ. ಭೂಮಿಯ ಪಾದ ಭಾಗವು ಜಲದ ಭಾಗದಲ್ಲಿ ಬೆರೆಯಲು ಗುಹ್ಯೇಂದ್ರಿಯವಾಯಿತು. ಯಾಕಂದರೆ, ಜಲಕ್ಕೆ ದಂಡಾಕೃತಿಯಿರುತ್ತದೆ. ಇದರಂತೆ ಗುಹ್ಯವಾದರೂ ದಂಡಾಕೃತಿಯಾಗಿರುತ್ತದೆ. ಆದ್ದರಿಂದ ಈ ಇಂದ್ರಿಯು ಜಲತತ್ವದಿಂದ ಕೂಡಿರುತ್ತದೆ. ಈ ಗುಹ್ಯಕ್ಕೆ ಸುರತಕ್ರೀಡಾನಂದವೆ ವ್ಯಾಪಾರವಾಗಿರುತ್ತದೆ. ಭೂಮಿಯ ಪಾದ ಭಾಗವು ಅಗ್ನಿಯ ಭಾಗದಲ್ಲಿ ಕೂಡಲು ಪಾದಗಳಾದವು. ಯಾಕಂದರೆ, ಅಗ್ನಿಯು ಊರ್ಧ್ವ ಮುಖವಾಗಿರುವಂತೆ, ಈ ಪಾದಗಳಾದರೂ ಮೇಲಕ್ಕೇಳುವದರಿಂದ ಅಗ್ನಿತತ್ವದಿಂದ ಕೂಡಿರುತ್ತವೆ. ಇವುಗಳಿಗೆ ಹೋಗುಬರುವ ವ್ಯಾಪಾರವೇ ಕರ್ಮವಾಗಿರುತ್ತದೆ. ಭೂಮಿಯ ಪಾದಾಂಶವು ವಾಯುವಿನ ಅಂಶದಲ್ಲಿ ಕೂಡಿ ಕೈಗಳಾದವು. ಯಾಕಂದರೆ, ವಾಯು ಸದಾ ಚಂಚಲವಾಗಿರುವಂತೆ ಕೈಗಳಾದರೂ ಸ್ವಾಭಾವಿಕ ಚಂಚಲಗಳಾಗಿರುತ್ತವೆ. ಆದ್ದರಿಂದು ವಾಯು ತತ್ವಮಿಶ್ರಿತಗಳಾಗಿರುತ್ತವೆ. ಈ ಕೈಗಳಿಗೆ ಕೊಡುವದು, ತಕ್ಕೊಳುವದು ವ್ಯಾಪಾರವಾಗಿರುತ್ತದೆ. ಭೂಮಿಯ ಪಾದ ಭಾಗವು ಆಕಾಶದ ಭಾಗದಲ್ಲಿ ಕೂಡಲು ವಾಗಿಂದ್ರಿಯವಾಯಿತು. ಇದಕ್ಕೆ, ಮಾತಾಡುವದೇ ವ್ಯಾಪಾರವಾಗಿರುತ್ತದೆ. ಈ ಪ್ರಕಾರ ಪಂಚಕರ್ಮೇಂದ್ರಿಯಗಳು ಅನ್ಯ ಭೂತಗಳ ಅಂಶವನ್ನು ಧಾರಣಮಾಡುವ ಸಾಮರ್ಥ್ಯವುಳ್ಳವುಗಳಾದ್ದರಿಂದ ಭೂಮಿಯ ತತ್ವಗಳಾಗಿರುತ್ತವೆ.

ಬಳಿಕ; ಪ್ರತಿಯೊಂದು ಭೂತದಂಶದಿಂದ ಉತ್ಪನ್ನಗಳಾದ ಇಂದ್ರಿಯಗಳನ್ನು ಬೇರ್ಪಡಿಸಿ ತೋರಿಸುವದಲ್ಲದೆ, ಮುಖ್ಯ ಮುಖ್ಯ ಇಂದ್ರಿಯಗಳನ್ನೂ ತೋರಿಸುತ್ತಾರೆ.

ಅಹಮುಂ ಪ್ರಾಣಂ ಘ್ರಾಣಂ ಗಂಧ।
ಸಹಿತಂ ಧರೆಯಂಶಂಗಳ ಬಂಧ ॥

ಚಿತ್ತವಪಾನಂ ರಸನೆಯು ಗುಹ್ಯ।
ಪತ್ತಿ ಜಲಾಂಶಗಳವೆನಲೂಹ್ಯ ॥

ಬುದ್ಧಿಯುದಾನಂ ರೂಪಂ ಪಾದ।
ಬದ್ಧವೆನಿಪ ಶಿಖಿಕಳೆಗಳ ಬೇದ ॥

CC-0. Jangamwadi Math Collection. Digitized by eGangotri

ಮನವುಂ ತ್ವಕ್ಕುಂ ಸ್ಪರ್ಶಂ ಪಾಣಿ ।
ಎನಿಪವು ವಾಯು ಕಳಾಯು ಕ್ಶ್ರೇಣಿ ॥

ಮತ್ತೆ ಸಮಾನಂ ಶ್ರುತಿರವವಾಕ್ಕು ।
ಪತ್ತಿದ ನಭದ ಕಳೆಗಳೆನಿಸಿರ್ಕು ॥

ಆಯಾ ಕಳೆಗಳ ಬೆರಸುವ ಸತ್ವ ।
ಪಾಯುರಸಾಕ್ಷಿ ವ್ಯಾನಜ್ಞತ್ವ ॥ ೮ ॥

ಟೀಕಾ:— ಅಹಮುಃ= ಅಹಂಕಾರವು, ಪ್ರಾಣಂ= ಅಸುವು, ಘ್ರಾಣಂ = ನಾಸಿಕವು, ಗಂಧ= ಗಂಧವಿಷಯವು, ಸಹಿತಂ= ಕೂಡಿ, ಧರೆಯ= ಭೂಮಿಯ, ಅಂಶಂಗಳ= ಭಾಗಗಳಿಂದ, ಬಂಧ= ಕಟ್ಟಲ್ಪಟ್ಟಂಥವುಗಳು, ಚಿತ್ತವು= ಚಿತ್ತು, ಅಪಾನಂ= ಅಪಾನವಾಯು, ರಸನೆಯು= ನಾಲಿಗೆಯು, ಗುಹ್ಯ= ಉಪಸ್ಥವು, ಪತ್ತಿ ಜಲಾಂಶಗಳ= ಜಲದ ಭಾಗಗಳಿಂದ ಹತ್ತಿಕೊಂಡಿರುವದೆಂದು, ಎನಲ್= ಅನ್ನುವಹಾಗೆ, ಊಹ್ಯ= ಅನುಮಾನ ಮಾಡತಕ್ಕದ್ದು, ಬುದ್ಧಿಯು= ಮತಿಯು, ಉದಾನಂ= ಉದಾನವಾಯು, ರೂಪಂ= ರೂಪವಿಷಯವು, ಪಾದ= ಕಾಲುಗಳು, ಬದ್ಧವೆನಿಪ= ಕಟ್ಟಿಸಿಕೊಂಡವು ಎಂದು ಹೇಳಿಸಿಕೊಳ್ಳುವಂಥಾ, ಶಿಖಿ= ಅಗ್ನಿಯ, ಕಳೆಗಳ= ಅಂಶಗಳ, ಭೇದ= ವಿಭಾಗಗಳಾಗಿರುತ್ತವೆ, ಮನವು=ಮನಸ್ಸು, ತ್ವಕ್ಕುಂ= ಚರ್ಮ, ಸ್ಪರ್ಶಂ= ಸ್ಪರ್ಶವಿಷಯ, ಪಾಣಿ= ಕೈಗಳು, ವಾಯು= ವಾಯುವಿನ, ಕಳಾ= ಅಂಶಗಳಿಂದ, ಯುಕ್= ಕೂಡಿದಂಥಾ, ಶ್ರೇಣಿ= ಸಾಲೆಂದು, ಎನಿಪವು= ಎನ್ನಿಸಿಕೊಳ್ಳುವವು, ಪಾಯು= ಪೃಥ್ವಿಸಂಬಂಧವಾದ, ಗುದವು, ರಸ, ಜಲಸಂಬಂಧವಾದ ರಸವಿಷಯವು, ಅಕ್ಷಿ= ಅಗ್ನಿಸಂಬಂಧವಾದ ನೇತ್ರವು, ವ್ಯಾನ= ವಾಯುಸಂಬಂಧವಾದ ವ್ಯಾನವಾಯು, ಜ್ಞತ್ವ= ಆಕಾಶಸಂಬಂಧವಾದ ಜ್ಞಾತೃ, ಆಯಾ=ಬೇರೆ, ಕಳೆಗಳ= ಅಂಶಗಳನ್ನು, ಬೆರಸುವ= ಕೂಡಿಸುವ, ಸತ್ವ= ಸಾಮರ್ಥ್ಯವುಳ್ಳವುಗಳಾಗಿರುತ್ತವೆ.

ಈ ಪದ್ಯದ ಅರ್ಥವು ಸುಗಮವಿದ್ದದರಿಂದ ತಾತ್ಪರ್ಯವನ್ನು ಬರೆಯದೆ, ಪಂಚೀಕರಣದ ಕೋಷ್ಟಕವು ಬರೆಯಲ್ಪಟ್ಟಿರುತ್ತದೆ.

CC-0. Jangamwadi Math Collection. Digitized by eGangotri

ಪಂಚ ಭೂತಗಳ ಮಿಶ್ರಣದಿಂದಾದ ಪಂಚೀಕರಣ ಕೋಷ್ಟಕವು.

ಆಯಾ ಭೂತಾಂಶದಿಂದ ಪುಟ್ಟಿದ ಕಾರ್ಯ ವರ್ಗವು

	ಆಕಾಶ	ವಾಯು	ಅಗ್ನಿ	ಜಲ	ಪೃಥ್ವಿ
ಆಕಾಶ	ಜ್ಞಾತೃ ೧	ಸಮಾನ	ಶ್ರೋತ್ರ	ಶಬ್ದ	ವಾಕ್ಕ
ವಾಯು	ಮನ	ವ್ಯಾನ ೨	ತ್ವಕ್ಕು	ಸ್ಪರ್ಶ	ಪಾಣಿ
ಅಗ್ನಿ	ಬುದ್ಧಿ	ಉದಾನ	ನೇತ್ರ ೩	ರೂಪು	ಪಾದ
ಜಲ	ಚಿತ್ತ	ಅಪಾನ	ರಸನೆ	ರಸ ೪	ಗುಹ್ಯ
ಪೃಥ್ವಿ	ಅಹಂ-ಕಾರ	ಪ್ರಾಣ	ನಾಸಿಕ	ಗಂಧ	ಗುದ ೫

ಆಕಾಶ ಪದದ ಮುಂದಿನ ಪ್ರತಿಯೊಂದು ಸಾಲಿನ ೧-೨-೩-೪-೫-ನೇ ಚೌಕ ಮನೆಯಲ್ಲಿದ್ದ ತತ್ವಗಳು, ಯಾವದೊಂದು ಭೂತ ಮಿಶ್ರವಿಲ್ಲದೆ ಶುದ್ಧವಾದ ರ್ಧಭೂತದಿಂದ ಉತ್ಪನ್ನವಾದವುಗಳು.

ಪಂಚೀಕರಣದ ಮುಖ್ಯ ತಾತ್ಪರ್ಯ

ಜನರು ತಿಪ್ಪಿಗೋಸುಗ ತಿಪ್ಪಿಯನ್ನು ಕೆದರುವದಿಲ್ಲ. ಕಿಂತು, ರತ್ನ ಪ್ರಾಪ್ತಿಗೋಸ್ಕರ ಕೆದರುತ್ತಾರೆ. ಮತ್ತು ಉಪನಿಷತ್ತುಗಳಲ್ಲಿ ಸೃಷ್ಟಿಗೋಸುಗ ಸೃಷ್ಟಿಯು ಹೇಳಲ್ಪಡುವದಿಲ್ಲ. ಕಿಂತು, ಅಧ್ಯಾರೋಪ ಅಪವಾದದ್ವಾರಾ ಅಧಿಷ್ಠಾನವಾದ ಪರಬ್ರಹ್ಮವನ್ನು ತಿಳಿಸುವದರಗೋಸುಗ ಪ್ರತಿಪಾದನಮಾಡಲ್ಪಡುತ್ತದೆ. ಇವುಗಳಂತೆ, ಈ ಪಂಚೀಕರಣ ವಿಚಾರವಾದರೂ ಜಡ-ಭೂತಗಳನ್ನು ವಿಭಾಗಪಡಿಸುವದಕ್ಕೋಸ್ಕರವಲ್ಲ. ಕಿಂತು, ಪ್ರತ್ಯಗಾತ್ಮ ಸ್ವರೂಪ ಜ್ಞಾನವಾಗುವದಕ್ಕೋಸ್ಕರ ಹೇಳಲ್ಪಟ್ಟಿರುತ್ತದೆಂಬ ತಾತ್ಪರ್ಯವು.

ಬಳಿಕ; ಸಚ್ಚಿದಾನಂದ ಸ್ವರೂಪನಾದ ನಿನಗೆ ತನುತ್ರಯ ಅವಸ್ಥಾತ್ರಯ ಮೂಲಕ ಜೀವತ್ರಯತ್ವವು ಕ್ಷಿಪ್ರಾಪ್ತಿಯಾಯಿತು ಎಂದು ಹೇಳುತ್ತಾರೆ.

ಸ್ಥೂಲದೊಡಲೊಳಿವ ನೀನೆಡೆಗೊಂಡು ।
ಮೇಲಿಂದ್ರಿಯದೊಳು ವಿಷಯವ ಕಂಡು ॥

CC-0. Jangamwadi Math Collection. Digitized by eGangotri

ವ್ಯವಹರಿಸುವದೇ ಜಾಗರ ವಕ್ಕು ।
ಅವನರಿವಾತನೇ ವಿಶ್ವನೆ ನಿಕ್ಕು ।
ಚರಿಸುತ್ತೀ ಪರಿಯೊಳು ಪೊರಗಿರ್ದ ।
ಕರಣವಡಿಗಿ ವಾಸನೆ ವೆರಸಿರ್ದ ॥
ಮನದಾ ವ್ಯವಹಾರವೆ ಕನಸಕ್ಕು ।
ನಿನಗದರೊಳು ತೈಜಸ ಪೆಸರಕ್ಕು ॥
ತಮದೊಳು ಮನ ಮುಳಿಗಿಹುದೇ ಸುಪ್ತಿ ।
ಸಮನಿಸೆ ಕಾರಣದೇಹ ಕ್ಲುಪ್ತಿ ॥
ಅಲ್ಲಿ ನಿನಗೆಪ್ರಾಜ್ಞತೆ ಪೆಸರಕ್ಕು ।
ಬಲ್ಲನೆ ಜೀವತೆ ನಿನಗಿಂತಕ್ಕು ॥ ೯ ॥

ಟೀಕಾ :— ನೀನು=(ಶಂಭುಲಿಂಗನಾದ) ನೀನು, ಸ್ಥೂಲದೊಡಲೊಳ್= ಸ್ಥೂಲ ಶರೀರದಿಂದ, ಇವ=ಈ ಇಪ್ಪತ್ತೈದು ತತ್ವಗಳನ್ನು, ಎಡೆಗೊಂಡು= ಆಶ್ರಯ ಮಾಡಿಕೊಂಡು, ಮೇಲೆ=ಅನಂತರ, ಇಂದ್ರಿಯದೊಳ್=ಇಂದ್ರಿಯ ದಿಂದ, ವಿಷಯವ=ಶಬ್ದಾದಿ ವಿಷಯವನ್ನು, ಕಂಡು=ನೋಡಿ, ವ್ಯವಹರಿಸು ವದೇ=ಇಷ್ಟಾನಿಷ್ಟ ಬುದ್ಧಿಯಿಂದ ಗ್ರಹಣತ್ಯಾಗ ಮಾಡುವದೇ, ಜಾಗರವು= ಜಾಗ್ರದವಸ್ಥೆಯು, ಅಕ್ಕು=ಆಗುವದು, ಅವಂ=ಆ ವ್ಯವಹಾರಗಳನ್ನು, ಅರಿ ವಾತನೆ=ತಿಳಿಯುವವನೇ, ವಿಶ್ವನು=ವಿಶ್ವಜೀವನು, ಎನಿಕ್ಕು=ಎನಿಸುವನು, ಈ ಪರಿಯೊಳು=ಈ ರೀತಿಯಿಂದ, ಚರಿಸುತ್ತ=ತಿರುಗಾಡುತ್ತ, ಪೊರಗಿರ್ದ=ಹೊರಗೆ ವ್ಯವಹಾರ ಮಾಡುತ್ತಿರ್ದ, ಕರಣವಡಗಿ=ವಾಗಾದಿಂದ್ರಿಯಂಗಳ ವ್ಯಾಪಾರವು ಹೋಗಿ, ವಾಸನೆ=ಆ ವ್ಯವಹಾರ ಸಂಬಂಧವಾದ ವಾಸನೆಯಿಂದ, ವೆರಸಿರ್ದ= ಕೂಡಿಕೊಂಡಿರ್ದ, ಮನದ=ಮನಸ್ಸಿನ, ವ್ಯವಹಾರವೇ=ವ್ಯಾಪಾರವೇ, ಕನ ಸಕ್ಕು=ಸ್ವಪ್ನಾವಸ್ಥೆಯಾಗುವದು, ಅದರೊಳ್=ಆ ಸ್ವಪ್ನಾವಸ್ಥೆಯಲ್ಲಿ, ನಿನಗೆ= ಆನಂದ ಘನವಾದ ನಿನಗೆ, ತೈಜಸ=ತೈಜಸವೆಂಬ, ಪೆಸರು=ಹೆಸರು, ಅಕ್ಕು= ಆಗುವದು, ತಮದೊಳು=ಅವಿದ್ಯೆಯಲ್ಲಿ, ಮನ=ಮನಸ್ಸು, ಮುಳಿಗಿಹುದೇ= ಅವ್ಯಕ್ತವಾಗಿರುವದೇ, ಸುಪ್ತಿ=ಸುಷುಪ್ತಾವಸ್ಥೆಯು, ಕಾರಣದೇಹ=(ಸ್ಥೂಲ ಸೂಕ್ಷ್ಮಶರೀರದ್ವಯಗಳಿಗೆ ಬೀಜ ಭೂತವಾದ) ಶರೀರವು, ಸಮನಿಸೆ=ಪ್ರಾಪ್ತಿ ಯಾಗಲು, ಅಲ್ಲಿ=ಆ ಕಾರಣ ಶರೀರದಲ್ಲಿ, ನಿನಗೆ=ನಿನಗೆ, ಪ್ರಾಜ್ಞತೆ=ಪ್ರಾಜ್ಞ ನೆಂಬ, ಪೆಸರು=ಹೆಸರು, ಅಕ್ಕು=ಆಗುವದು, ಬಲ್ಲನೆ=ಎಲ್ಲ ತಿಳಿಯುವಂಥಾ ಶಿಷ್ಯನೇ! ನಿನಗೆ=ನಿನಗೆ, ಜೀವತೆ=ಜೀವತ್ವವು, ಇಂತು=ಈ ಪ್ರಕಾರ, ಅಕ್ಕು= ಆಗುವದು.

ತಾತ್ಪರ್ಯ:— ಹಿಂದನ ಶ್ಲೋಕದಲ್ಲಿ ಹೇಳಲ್ಪಟ್ಟ ಇಪ್ಪತ್ತೈದು ತತ್ವಾ ತ್ಮಕವಾದ ಸ್ಥೂಲ ಶರೀರವು ತಯಾರ ಆದ ಕೂಡಲೇ, ಇದರಲ್ಲಿ ಮಹೇಶ್ವರ

CC-0. Jangamwadi Math Collection. Digitized by eGangotri

ನಾದ ನೀನೇ ಜೀವರೂಪದಿಂದ ಪ್ರವೇಶಮಾಡಿ ಶರೀರವೇ ನಾನೆಂದು ಅಭಿಮಾನಿಸಿಕೊಂಡು, ಶ್ರೋತ್ರಾದಿ ಜ್ಞಾನೇಂದ್ರಿಯಗಳಿಂದ ಶಬ್ದಾದಿ ವಿಷಯಗಳನ್ನು ನೋಡಿ, ತನಗೆ ಪ್ರಿಯವಾದವುಗಳನ್ನು ತಕ್ಕೊಳ್ಳುತ್ತಾ ತನಗೆ ಅಪ್ರಿಯವಾದವುಗಳನ್ನು ಬಿಡುತ್ತಾ ವ್ಯವಹಾರ ಮಾಡುವದೇ ಜಾಗ್ರದವಸ್ಥೆಯೆನಿಸುವದು. ಇವರಲ್ಲಿ ಅನೇಕ ಭೋಗ್ಯವಸ್ತುಗಳನ್ನು ಉಪಭೋಗಮಾಡುತ್ತಾ ಈ ಅವಸ್ಥೆಯ ಅಭಿಮಾನವುಳ್ಳವನೇ ವಿಶ್ವ ಜೀವನು. "ವಿಶ್ವ" ಅಂದರೆ ಈ ಶಬ್ದವು "ವಿಶ್" ಧಾತುವಿನ ಮೇಲೆ ಉತ್ಪನ್ನವಾಗಿರುತ್ತದೆ. ಆದ್ದರಿಂದ ದೇಹೇಂದ್ರಿಯಾದಿಗಳಲ್ಲಿ ಪ್ರವೇಶ ಮಾಡಿದ್ದರಿಂದಾಗಲಿ ಅಥವಾ ದೇಹೇಂದ್ರಿಯಾದಿಗಳಲ್ಲಿ ತುಂಬಿಕೊಂಡಿರುವದರಿಂದಾಗಲಿ "ವಿಶ್ವ"ಜೀವನೆಂಬ ಹೆಸರು ಪ್ರಾಪ್ತವಾಗಿರುತ್ತದೆ.

ಈ ಪ್ರಕಾರ ವ್ಯವಹಾರವನ್ನು ಮಾಡುತ್ತಾ ಅತ್ತಿತ್ತ ಸಂಚಾರ ಮಾಡುತ್ತಿರಲು, ಜಾಗ್ರದ್ಭೋಗದಾಯಕ ಕರ್ಮವು ತೀರಲು, ಸ್ವಪ್ನಾವಸ್ಥೆಯು ಪ್ರಾಪ್ತವಾಗುತ್ತದೆ. ಆಗ ವ್ಯಾಪಾರವನ್ನು ಮಾಡುತ್ತಿದ್ದ ವಾಗಾದಿ ಕರ್ಮೇಂದ್ರಿಯಗಳೂ, ಶ್ರೋತ್ರಾದಿ ಜ್ಞಾನೇಂದ್ರಿಯಗಳೂ, ಮನಸ್ಸಿನಲ್ಲಿ ಅಂತರ್ಭಾವಗಳಾಗಿ ಮನಸ್ಸೊಂದೇ ಅನೇಕ ವಾಸನೆಗಳ ಮೂಲಕ ವ್ಯವಹಾರವನ್ನು ಮಾಡುತ್ತದೆ. ಈ ವ್ಯವಹಾರವೇ ಸ್ವಪ್ನಾವಸ್ಥೆಯೆಂದು ಹೇಳಿಸಿಕೊಳ್ಳಲ್ಪಡುವದು. ಇಂಥಾ ಸ್ವಪ್ನಾವಸ್ಥೆಯಲ್ಲಿ ನಿನಗೆ ತೈಜಸ ಎಂಬ ಹೆಸರು ಪ್ರಾಪ್ತವಾಯಿತು. ಯಾಕಂದರೆ, ಸ್ವಪ್ನಾವಸ್ಥೆಯಲ್ಲಿ ಪಿತ್ತನಾಮಕ ತೇಜವು ವಿಶೇಷವಾಗಿದ್ದರಿಂದಲೂ, ಅಥವಾ ಚಂದ್ರ ಸೂರ್ಯಾದಿಗಳ ಪ್ರಕಾಶದ ಅಪೇಕ್ಷೆಯಿಲ್ಲದೆ ತಾನೇ ಸ್ವಪ್ನ ಪ್ರಪಂಚವನ್ನು ಬೆಳಗುವದರಿಂದಲೂ, "ತೈಜಸ" ಎಂಬ ಹೆಸರು ಪ್ರಾಪ್ತವಾಗಿರುತ್ತದೆ.

ಈ ಪ್ರಕಾರ ನೆನಸು ಕನಸುಗಳ ಭೋಗದಿಂದ ದಣಿದ ಜೀವನು, ಸ್ವಪ್ನ ಭೋಗಕ್ಕೆ ಕಾರಣವಾದ ಕರ್ಮವು ಅಳಿದು ಹೋಗುತ್ತಿರಲು, ಅನೇಕ ವಾಸನೆಗಳಿಂದೊಡಗೂಡಿದ ಮನೋ ಸಮೇತನಾಗಿ ಅವಿದ್ಯೆಯಲ್ಲಿ ಮುಳಿಗಿ ಹೋಗುತ್ತಾನೆ. ಆಗ ಜೀವನಿಗೆ ಸುಷುಪ್ತ್ಯವಸ್ಥೆಯು ವಿಶ್ರಾಂತಿಯ ಸ್ಥಾನವೆನಿಸುತ್ತದೆ ನಾನು ಸ್ವಲ್ಪಾದರೂ ಏನನ್ನೂ ತಿಳಿಯಲಿಲ್ಲ. ಎಂಬ ವೃತ್ತಿಯೇ ಸುಷುಪ್ತಿ ಎನ್ನಲ್ಪಡುವದು. ಈ ಅವಸ್ಥೆಯಲ್ಲಿ ಜೀವನಿಗೆ ಕಾರಣ ಶರೀರವು ಅವಶ್ಯವಾಗಿಯೇ ಒದಗುತ್ತದೆ. ಈ ಅವಸ್ಥೆಯಲ್ಲಿ ನಿನಗೆ ಪ್ರಾಜ್ಞನೆಂಬ ಹೆಸರು ಪ್ರಾಪ್ತವಾಗುತ್ತದೆ. ಯಾಕಂದರೆ ಆ ನಿದ್ರೆಯಲ್ಲಿ ಏನೊಂದು ತಿಳಿಯದ್ದರಿಂದ ಅಧಿಕವಾದ ಅಜ್ಞಾನವಿದ್ದದರಿಂದಲೂ, ಅಥವಾ ಯಾವತ್ತು ಇಂದ್ರಿಯಗಳ ಜ್ಞಾನವು ಘನೀಭೂತವಾಗಿ ವಿಶೇಷವಾದ್ದರಿಂದಲೂ ಪ್ರಾಜ್ಞನೆಂಬ ಹೆಸರು ಬಂದಿರುತ್ತದೆ. ಈ ಪ್ರಕಾರ ನೆನಸು, ಕನಸು, ನಿದ್ರೆಗಳಿಗೆ ಯಾವತ್ತನ್ನು

CC-0. Jangamwadi Math Collection. Digitized by eGangotri

ತಿಳಿಯುತ್ತಿರುವಂಥಾ ನಿನಗೆ ಜೀವತ್ವವು ಈ ರೀತಿ ಒದಗಿರುತ್ತದೆ. ಒಬ್ಬ ಪುರುಷನ ಕ್ರಿಯಾಭೇದ ಮೂಲಕ ಯಾಜಕ, ಪಾಠಕ, ವಾಚಕ ಎಂಬ ಹೆಸರುಗಳು, ಬಂದಂತೆ, ಸಾಕ್ಷಿಯಾದ ನಿನಗೆ ಶರೀರತ್ರಯ ಅವಸ್ಥಾತ್ರಯ ಮೂಲಕ ವಿಶ್ವ ತೈಜಸ, ಪ್ರಾಜ್ಞ ಎಂಬ ಹೆಸರುಗಳು ಬಂದಿರುತ್ತವೆ.

ಬಳಿಕ; ಜಾಗೃತ್ ಸ್ವಪ್ನ ಅವಸ್ಥೆಗಳಲ್ಲಿ ನಿನಗೆ ಹೇಗೆ ಜ್ಞಾನವುಂಟೋ ಹಾಗೇ ಸುಪ್ತಿಯಲ್ಲಾಯ್ದರೂ ಜ್ಞಾನ ಉಂಟು ಎಂದು ಸಿದ್ಧಮಾಡಿ, ಸಾಕ್ಷಿ ಸ್ವರೂಪವನ್ನು ಬೋಧಿಸುತ್ತಾರೆ.

ಎಂತು ನೆನಸು ಕನಸಿನೊಳರಿವುಂಟು ।
ಅಂತಾ ಸುಪ್ತಿಯೊಳ್ನಿನಗರಿ ವುಂಟು ॥
ಇಲ್ಲದಿರಲು ನಿದ್ರೆಯ ನೆಚ್ಚತ್ತು ।
ಇಲ್ಲಿ ನೆನಹು ನಿನಗೆಂತುದಿಸಿತ್ತು ॥
ಏನುವ ನರಿಯದೆ ಸುಖ ನಿದ್ರೆಯೊಳು ।
ಆ ನಿರ್ದೆನು ವೆಂಬೀ ನೆನಹುಗಳು ॥
ಅನುಭವಿಸದೆ ನೆನೆಯಲಿ ಕಳವಲ್ಲ ।
ಎನಿಪುದರಿಂ ತಾನಲ್ಲಿಯೆ ಬಲ್ಲ ॥
ತಮದ ಸುಖದ ನೆನಹುಗಳವೆಯಾಗಿ ।
ಸಮನಿಪದಲ್ಲಿ ಕರಣವಿಲ್ಲಾಗಿ ॥
ನಿನಗದರಿಂ ಸಿದ್ಧಂಸದ್ರೂಪು ।
ಘನ ಚಿತ್ಸುಖ ಜ್ಯೋತಿರ್ಮಯರೂಪು ॥ ೧೦ ॥

ಟೀಕಾ:— ನೆನಸು ಕನಸಿನೊಳು=ಜಾಗ್ರತ್ಸ್ವಪ್ನಂಗಳಲ್ಲಿ, ಎಂತು=ಹೇಗೆ, ಅರಿವುಂಟು=ಜ್ಞಾನವುಂಟೋ, ಅಂತು=ಹಾಗೇ, ಆಸುಪ್ತಿಯೊಳ್=ಆನಿದ್ರೆಯಲ್ಲಾದರೂ, ನಿನಗೆ=ನಿನಗೆ, ಅರಿವುಂಟು=ಜ್ಞಾನವುಂಟು, ಇಲ್ಲದಿರಲು=ನಿದ್ರೆಯಲ್ಲಿ ಅರವು ಇಲ್ಲದಿದ್ದರೆ, ನಿದ್ರೆಯನು=ಸುಪ್ತಿಯನ್ನು ಎಚ್ಚತ್ತು=ಬಿಟ್ಟಮೇಲೆ, ಇಲ್ಲಿ=ಈ ಜಾಗ್ರದವಸ್ಥೆಯಲ್ಲಿ ನಿನಗೆ=ನಿನಗೆ, ನೆನಹು=(ಏನೊಂದು ತಿಳಿಯದೆ ಸುಖದಿಂದಿದ್ದೆನೆಂಬ) ಸ್ಮೃತಿಯು, ಎಂತು=ಹೇಗೆ, ಉದಿಸಿತ್ತು=ಉತ್ಪನ್ನವಾಯಿತು ? ಏನುವಂ=ಯಾವದೊಂದನ್ನು, ಅರಿಯದೆ=ತಿಳಿಯದೆ, ಸುಖನಿದ್ರೆಯೊಳು=ಆನಂದಮಯವಾದ ನಿದ್ರೆಯಲ್ಲಿ ಆನಿರ್ದೆನು=ನಾನು ಇದ್ದೆನು, ಎಂಬೀ ನೆನಹುಗಳು=ಹೀಗೆಂದು ಹೇಳಿಸಿಕೊಳ್ಳುವ ಈ ಸ್ಮೃತಿಗಳು, ಅನುಭವಿಸದೆ=ತನಗೆ ಜ್ಞಾನವಾಗದೆ, ನೆನೆಯಲಿಕೆ=ಸ್ಮರಣ ಮಾಡುವದಕ್ಕೆ, ಅಳವಲ್ಲ=ಶಕ್ಯವಲ್ಲ, ಎನಿಪುದರಿಂ=ಅನ್ನುವದರಿಂದ, ನಾನು=ತಾನು, ಅಲ್ಲಿಯೆ=ಆ ನಿದ್ರೆಯಲ್ಲಿಯೆ, ಬಲ್ಲ=ಅರಿತವನು, ತಮದ=ಅಜ್ಞಾತ ಸಂಬಂಧವಾದ, ಸುಖದ=ಸ್ವರೂಪ ಸಂಬಂಧವಾದ, ನೆನಹು

CC-0. Jangamwadi Math Collection. Digitized by eGangotri

ಗಳು=ಸ್ಮೃತಿಗಳು, ಅವೆಯಾಗಿ=ಇರುವಂಥವುಗಳಾದಾಗ್ಯೂ, ಅಲ್ಲಿ=ಆ ಸುಪ್ತಿಯಲ್ಲಿ ಕರಣಂ=ಮನೋಸಾಧನವು, ಇಲ್ಲಾಗಿ=ಇಲ್ಲದ್ದರಿಂದ, ಸಮನಿಸದು=ಸ್ಮೃತಿಯು ಬರಲಾರದು. ಅದರಿಂ=ಈ ಕಾರಣದಿಂದ, ನಿನಗೆ=ನಿನಗೆ, ಸದ್ರೂಪು=ತ್ರಿಕಾಲ ಅಬಾಧ್ಯತ್ವರೂಪು, ಘನಚಿತ್=ಲೋಪವಿಲ್ಲದ ಜ್ಞಾನವು, ಸುಖ=ದುಃಖ ಮಿಶ್ರ ವಿಲ್ಲದ ಆನಂದವು, ಜ್ಯೋತಿರ್ಮಯರೂಪು=ಸ್ವಯಂಪ್ರಕಾಶಸ್ವರೂಪವು, ಸಿದ್ಧಂ= ನಿಶ್ಚಯಮಾಡಿದ್ದಾಯಿತು.

ತಾತ್ಪರ್ಯ:— ಎಲೈ ಶಿಷ್ಯನೇ, ನಿನಗೆ ಜಾಗ್ರತ್ಸ್ವಪ್ನಂಗಳಲ್ಲಿ ಹೇಗೆ ಜ್ಞಾನವುಂಟೋ, ಹಾಗೇ ಸುಷುಪ್ತ್ಯವಸ್ಥೆಯಲ್ಲಾದರೂ ಜ್ಞಾನವುಂಟು, ಈ ಜ್ಞಾನವು ನಿದ್ರೆಯಲ್ಲಿ ನಿನಗಿಲ್ಲದಿದ್ದರೆ, ಆ ನಿದ್ರೆಯಿಂದ ಎಚ್ಚರಿಕೆಯಾದ ಮೇಲೆ ನಾನು ಏನೊಂದನ್ನು ತಿಳಿಯದೆ ಸುಖದಿಂದ ಮಲಗಿದ್ದೆನೆಂಬ ಸ್ಮೃತಿಯು ಹೇಗೆ ಉತ್ಪನ್ನವಾಯಿತು? ಯಾಕಂದರೆ, ಯಾವ ವಸ್ತು ಪೂರ್ವದಲ್ಲಿ ಅನು ಭವಿಸಲ್ಪಡುವದೋ ಅದು ಬಳಿಕ ಸ್ಮರಣಮಾಡುವದಕ್ಕೆ ಬರುತ್ತದೆ. ಅನಾನುಭವ ವಸ್ತು ಸ್ಮೃತಿಗೆ ಎಂದೂ ಬರುವದಿಲ್ಲ. ಈ ಮಾತು ಸರ್ವಜನರ ಅನುಭವಸಿದ್ಧವಾಗಿರುತ್ತದೆ. ಜಾಗ್ರದವಸ್ಥೆಯಲ್ಲಿ ಸ್ಮೃತಿಯಾಗುವದರಿಂದ ಸುಷುಪ್ತ್ಯವಸ್ಥೆಯಲ್ಲಿ ಅವಶ್ಯವಾಗಿ ಜ್ಞಾನವಾಗಿರಲಿಕ್ಕೇ ಬೇಕು.

ಶಂಕಾ:— ನಿದ್ರೆಯಲ್ಲಿ ನನಗೆ ಜ್ಞಾನವಿದ್ದರೆ ಜಾಗ್ರತ್ಕಾಲದಂತೆ ಸ್ಮೃತಿಯೂ ಕೂಡಾ ಆಗಬೇಕಾಗಿತ್ತು, ಹಾಗಾಗುವದಿಲ್ಲ. ಆದ್ದರಿಂದ ನಿದ್ರೆ ಯಲ್ಲಿ ಜ್ಞಾನವಿಲ್ಲ ಎಂಬುವದೇ ಅನುಭವಸಿದ್ಧವಾಗಿರುತ್ತದೆ.

ಸಮಾಧಾನ:—ಆ ನಿದ್ರೆಯಲ್ಲಿ ಅಜ್ಞಾನ ಮತ್ತು ಸುಖ ಇವುಗಳ ಅನುಭ ವವೂ ಉಂಟು. ಅನುಭವವಿದ್ದ ಬಳಿಕ ಸಂಸ್ಕಾರವುಂಟು. ಸಂಸ್ಕಾರವಿದ್ದ ಮೇಲೆ ಸ್ಮೃತಿಯಾದರೂ ಉಂಟು. ಆದರೆ ನಮಗೆ ಏಕೆ ಅನುಭವಕ್ಕೆ ಬರುವದಿಲ್ಲ? ಎಂದು ಕೇಳಿದರೆ, ಆ ನಿದ್ರೆಯಲ್ಲಿ ನೆನಹು ಮಾಡುವದಕ್ಕೆ ಯೋಗ್ಯವಾದ ಮನೋಕರಣ ವಿಲ್ಲ. ಆದ್ದರಿಂದ ಸ್ಮೃತಿಗೆ ಬರುವದಿಲ್ಲ. ಆಗ ಅನುಭವವು ಅವಿದ್ಯಾವೃತ್ತಿ ಯಲ್ಲಿ ಸಂಸ್ಕಾರ ರೂಪದಿಂದ ಸೂಕ್ಷ್ಮವಾಗಿರುತ್ತದೆ. ಈ ಅವಿಧ್ಯಾವೃತ್ತಿಯ ಲ್ಲಿಯೇ ಮನಸ್ಸು ಅಡಗಿಕೊಂಡಿರುತ್ತದೆ. ಜಾಗ್ರತ್ಕಾಲದಲ್ಲಿ ಆ ಅವಿದ್ಯಾವೃತ್ತಿ ಯೇ ಪರಿಣಾಮರೂಪದಿಂದ ಮನಸ್ಸಾಗುತ್ತದೆ. ಆಗ ಅವಿದ್ಯಾವೃತ್ತಿಯ ಲ್ಲಿದ್ದ ಅಜ್ಞಾನ ಮತ್ತು ಸುಖ ಇವುಗಳ ಅನುಭವ ಸಂಸ್ಕಾರವು ಮನಸ್ಸಿನಾಗಿ ಆ ಮೇಲೆ ಸ್ಮೃತಿಗಳಾಗುತ್ತವೆ. ಆದ್ದರಿಂದಲೇ ನಿನಗೆ ಸಚ್ಚಿದಾನಂದ ಸ್ವಯಂ ಪ್ರಕಾಶತ್ವವು ಸಿದ್ಧವಾಗಿರುತ್ತದೆ. ಯಾಕಂದರೆ, ಜಾಗ್ರದವಸ್ಥೆಯಲ್ಲಿ "ನಾನು ಇದ್ದೇನೆ" ಎಂಬ ಅನುಭವವಿರುವದರಿಂದ ಸ್ಪಷ್ಟವಾಗಿ ಸದ್ರೂಪನು. ಸ್ವಪ್ನ ದಲ್ಲಿ ಕಲ್ಪಿತ ಪದಾರ್ಥಗಳನ್ನೆಲ್ಲಾ ತಾನೇ ತಿಳಿಯುವದರಿಂದ ಚಿದ್ರೂಪನು. ಸುಪ್ತಿಯಲ್ಲಿ ಯಾವ ವಿಷಯಗಳಿಲ್ಲದಿದ್ದರೂ ಸುಖವಾಗಿರುವದರಿಂದ ಆನಂದ

CC-0. Jangamwadi Math Collection. Digitized by eGangotri

ರೂಪನು. ಈ ಜಾಗ್ರಾದಿ ಮೂರು ಅವಸ್ಥೆಗಳನ್ನು ಬೆಳಗುವದರಿಂದ ಸ್ವಯಂ ಪ್ರಕಾಶನು ನೀನೆ ಆಗಿರುವಿ. ಎಂಬದೇ ಸಿದ್ಧವಾಯಿತು. (ಅಂದರೆ) ನೀರು ಉಷ್ಣಕ್ಕೆ, ಕಟ್ಟಿಗೆ ಪ್ರಕಾಶಕ್ಕೆ, ಪಾತ್ರವಿದ್ದಂತೆ; ಜಾಗ್ರತ್ ಸ್ವಪ್ನಾದಿಗಳು ನಿನ್ನ ಸಚ್ಚಿದಾದಿಗಳಿಗೆ ಯೋಗ್ಯಗಳಾಗಿರುತ್ತವೆ. ಎಂಬ ತಾತ್ಪರ್ಯವು. ಆದರೆ ಹಾಲಿನಲ್ಲಿ ಮಧುರತ್ವ, ದ್ರವತ್ವ, ಶುಭ್ರತ್ವಾದಿಗಳು ಪರಸ್ಪರ ಭಿನ್ನ ವಿಲ್ಲದೆ ಏಕರೂಪವಾಗಿರುವಂತೆ, ಸಚ್ಚಿದಾದಿಗಳು ಏಕರೂಪವಾಗಿರುತ್ತವೆ. ಹೊರತು ಭಿನ್ನರೂಪವಾಗಿರುವದಿಲ್ಲ. ಹೀಗೆ ಹೇಳುವದರಿಂದ ಆತ್ಮನಿಗೆ ಸಚ್ಚಿ ದಾದಿಗಳು ಗುಣಗಳು ಎಂದು ಹೇಳುವ ನೈಯಾಯಿಕರ ಮತವು ಯೋಗ್ಯ ವಲ್ಲೆಂಬ ತಾತ್ಪರ್ಯವು.

ಬಳಿಕ; ಅಖಂಡೈಕರಸವಾದ ನಿನ್ನ ಸ್ವರೂಪದಲ್ಲಿ ನಾದಾತ್ಮಕವಾದ ಓಂಕಾರವು ಮೊದಲೇ ಉತ್ಪನ್ನವಾಯಿತು. ಅದರಿಂದ ವೇದಾದಿಗಳೂ ಚರಾ ಚರ ಜಗತ್ತೂ ಉತ್ಪನ್ನವಾಯಿತೆಂದು ಓಂಕಾರ ಮೂಲಕ ಸೃಷ್ಟಿಯನ್ನು ಪ್ರತಿ ಪಾದನ ಮಾಡುತ್ತಾರೆ.

ನಿನ್ನೊಳು ಶಬ್ದ ಬ್ರಹ್ಮವೆನಿಪ್ಪ ।
ಮುನ್ನಾಯಿತು ಸರ್ವಾತ್ಮಕವಪ್ಪ ॥
ಪ್ರಣವಂ ಕೇಳದರಿಂ ಗುಣವರ್ಣ ।
ಗಣಿಸಲು ಮೂರವರಿಂ ಬಹುವರ್ಣ ॥
ವೇದ ಪುರಾಣಾಗಮ ವದರಿಂದ ।
ಚೋದಿತ ಮತಭಾಷೆಗಳದರಿಂದ ॥
ಅವುವಿಡಿದಾಚರಣೆಯ ಫಲದಿಂದ ।
ವಿವಿಧ ಚರಾಚರ ವಹ ರೂಪಿಂದ ॥
ಸಕಲ ವಿಕಲ ತತ್ವಾತ್ಮಕವಾಗಿ ।
ಸಕಲಾತ್ಮಗಳಾಗಿಹ ನಿಜವಾಗಿ ॥
ಇನಿತೆಲ್ಲವು ನಿನ್ನಿಯ ಪೆಸರಿಂದ ।
ಜನಿಸಿದ ತತ್ವಾರ್ಥವ ತಿಳಿಯೆಂದ ॥ ೧೧ ॥
ಕ್ಷಣಭಂಗುರವಹ ಕನಸಿನ ಬಾಳು ।
ಗಣಿಸಲ್ ಶತವರ್ಷ ಭ್ರಮೆಕೇಳು ॥
ಅಂತೀಬಗೆ ದೋರದ ನಿನ್ನಲ್ಲಿ ।
ಸಂತತ ಮಿಪ್ಪುದು ಪುಸಿ ತಿಳಿದಲ್ಲಿ ॥

ಟೀಕಾ:— ನಿನ್ನೊಳು=ಸಚ್ಚಿದಾನಂದ ಸ್ವರೂಪವಾದ ನಿನ್ನಲ್ಲಿ, ಶಬ್ದ ಬ್ರಹ್ಮವೆ ನಿಪ್ಪ=ನಾದಬ್ರಹ್ಮವೆಂದು ಹೇಳಿಸಿಕೊಳ್ಳುವೆಂಥಾ, ಸರ್ವಾತ್ಮಕವಪ್ಪ= ಸಕಲ ಜೀವಗಳ ಆತ್ಮಸ್ವರೂಪವಾದಂಥಾ, ಪ್ರಣವಂ=ಓಂಕಾರವು, ಮುನ್ನಾ ಯಿತು=ಮೊದಲೇ ಆಗಿತ್ತು, ಕೇಳ್=ಎಲೈ ಶಿಷ್ಯನೇ ಏಕಾಗ್ರ ಚಿತ್ತದಿಂದ ಆಲಿಸು ಅದರಿಂ=ಓಂಕಾರದಿಂದ, ಗಣಿಸಲು=ಲೆಕ್ಕಮಾಡಲು, ಮೂರು ಗುಣವರ್ಣ=

CC-0. Jangamwadi Math Collection. Digitized by eGangotri

ಸತ್ವ, ರಜ, ತಮುಗಳೆಂಬ ಮೂರುಗುಣಗಳೂ, ಅಕಾರ, ಉಕಾರ, ಮಕಾರ ಗಳೆಂಬ ಮೂರು ಅಕ್ಷರಗಳೂ ಆದವು; ಅವರಿಂ=ಆಮೂರು ವರ್ಣಗಳಿಂದ, ಬಹುವರ್ಣ=ಐವತ್ತು ಅಕ್ಷರಗಳಾದವು, ಅದರಿಂದ=ಆ ಅಕ್ಷರ ರಾಶಿಯಿಂದ, ವೇದ=ಋಗಾದಿ ನಾಲ್ಕುವೇದಗಳೂ, ಪುರಾಣ=ಬ್ರಹ್ಮಾದಿ ಹದಿನೆಂಟು ಪುರಾಣ ಗಳೂ, ಆಗಮ=ಕಾಮಿಕಾದಿ ಇಪ್ಪತ್ತೆಂಟು ದಿವ್ಯಾಗಮಂಗಳೂ ಆದವು, ಅದ ರಿಂದ=ಆ ವರ್ಣಸಮೂಹದಿಂದ, ಚೋದಿತ=ವ್ಯವಹರಿಸಲ್ಪಟ್ಟ, ಮತಭಾಷೆಗಳು= ಮತಗಳ ಬೇರೆ ಬೇರೆ ಮಾತುಗಳು ಆದವು, ಅವು ವಿಡಿದ=ಆ ಋಗಾದಿ ವೇದೋಕ್ತ ಕರ್ಮವನ್ನು ಪರಿಗ್ರಹಿಸಿದ, ಆಚರಣೆಯ=ಅನುಷ್ಠಾನದ, ಫಲ ದಿಂದ=ಪುಣ್ಯ ಪಾಪ ಮಿಶ್ರರೂಪೆಂಬ ಫಲದಿಂದ, ವಿವಿಧ=ನಾನಾಪ್ರಕಾರ ಗಳಾದ, ಚರಾಚರ ವಹರೂಪಿಂದ=ಸ್ಥಾವರ ಜಂಗಮಾತ್ಮಕ ಸ್ವರೂಪದಿಂದ, ಸಕಲವಿಕಲ ತತ್ವಾತ್ಮಕವಾಗಿ=ಕಾರ್ಯಕಾರಣಾತ್ಮಕ ಪ್ರಪಂಚವಾಗಿ,ನಿಜವಾಗಿ= ಯಥಾರ್ಥವಾಗಿ, ಸಕಲಾತ್ಮಗಳಾಗಿ=ಅನೇಕಾತ್ಮಗಳಾಗಿ, ಇಹ=ಇರುವಂಥಾ, ಇನಿತು=ಇಷ್ಟು, ಎಲ್ಲವು=ಸರ್ವಪ್ರಪಂಚವು, ನಿನ್ನಯ=ನಿನ್ನಸಂಬಂಧವಾದ, ಪೆಸರಿಂದ=ಓಂಕಾರ ಎಂಬ ಹೆಸರಿಂದ, ಜನಿಸಿದ=ಉತ್ಪನ್ನವಾದ, ತತ್ವಾರ್ಥವ= ಯಥಾರ್ಥವನ್ನು, ತಿಳಿಯೆಂದ=ತಿಳಕೋ ಎಂದನು.

ಕ್ಷಣಭಂಗುರವಹ=ಕ್ಷಣದಲ್ಲಿಯೇ ಉತ್ಪತ್ತಿಯಾಗಿ ನಾಶವಾಗುವಂಥಾ, ಕನಸಿನ=ಸ್ವಪ್ನದ, ಬಾಳು=ಬದಕು, ಗಣಿಸಲ್=ವಿಚಾರಮಾಡಲು, ಶತವರ್ಷ= ನೂರುವರ್ಷದ, ಭ್ರಮೆ=ಭ್ರಾಂತಿ, ಕೇಳು=ಎಲೈ ಶಿಷ್ಯನೇ,ಏಕಾಗ್ರಚಿತ್ತದಿಂದ ಆಲಿಸು, ಅಂತೀ ಬಗೆ=ಹಿಂದೆ ಹೇಳಲ್ಪಟ್ಟ ಭಾವನೆಯು, ದೋರದ=ತೋರ ದಿರುವ, ನಿನ್ನಲ್ಲಿ=ನಿನ್ನಸ್ವರೂಪದಲ್ಲಿ, ಸಂತತಂ=ಯಾವಾಗಲೂ, ಇಪ್ಪುದು=ಇರು ವದು, ತಿಳಿದಲ್ಲಿ=ತನ್ನನ್ನು ತಾನು ಅರಿದಲ್ಲಿ, ಪುಸಿ=ಸುಳ್ಳಾಗಿರುವದು.

ತಾತ್ಪರ್ಯ:— ಎಲೈ ಶಿಷ್ಯನೇ! ಏಕಾಗ್ರಚಿತ್ತದಿಂದ ಕೇಳು. ಈ ಚರಾ ಚರ ರೂಪ ಜಗತ್ತು ಉತ್ಪನ್ನವಾಗುವದಕ್ಕಿಂತಲೂ ಮುಂಚೆ ಸಚ್ಚಿದಾನಂದ ಸ್ವರೂಪನಾದ ನೀನೊಬ್ಬನೇ ಇದ್ದಿ. ನಿನ್ನಲ್ಲಿ ನಾದಬ್ರಹ್ಮವೆಂದು ಹೇಳಿಸಿ ಕೊಳ್ಳುವಂಥಾ ಸಕಲ ಚರಾಚರ ಪ್ರಾಣಿಗಳಲ್ಲಿ ವ್ಯಾಪಕವಾಗಿರುವಂಥಾ, ಓಂಕಾರವಾಯಿತು. ಈ ಓಂಕಾರದಿಂದ ಸತ್ವ, ರಜ, ತಮುಗಳೆಂಬ ಮೂರು ಗುಣಗಳೂ ಅಕಾರ, ಉಕಾರ, ಮಕಾರಗಳೆಂಬ ಅಕ್ಷರತ್ರಯಂಗಳೂ ಉತ್ಪನ್ನ ವಾದವು. ಆ ಅಕಾರ, ಉಕಾರ, ಮಕಾರಗಳಿಂದ ಸ್ವರಗಳೂ ವ್ಯಂಜನಗಳೂ ಒಟ್ಟುಗೂಡಿ ಐವತ್ತು ಅಕ್ಷರಗಳಾದವು. ಈ ಐವತ್ತು ಅಕ್ಷರಗಳಿಂದ ಋಕ್, ಯಜು, ಸಾಮ, ಅಥರ್ವಣಗಳೆಂಬ ನಾಲ್ಕು ವೇದಗಳೂ, ಬ್ರಹ್ಮ, ಪದ್ಮ, ವೈಷ್ಣವ, ಶೈವ, ಭಾಗವತಾದಿ ಹದಿನೆಂಟು ಪುರಾಣಗಳೂ, ಕಾಮಿಕಾಗಮ, ಯೋಗಜ, ಚಿಂತ್ಯ, ಕಾರಣ, ಅಜಿತ, ದೀಪ್ತ ಮೊದಲಾದ ಇಪ್ಪತ್ತೆಂಟು

CC-0. Jangamwadi Math Collection. Digitized by eGangotri

ಆಗಮಗಳೂ, ಲೋಕದಲ್ಲಿ ವ್ಯವಹರಿಸಲ್ಪಡುವಂಥಾ ಹಿಂದುಸ್ತಾನಿ, ಮರಾಠಿ, ಕರ್ನಾಟಕ, ತೆಲಗು, ತಮಿಳು ಮೊದಲಾದ ಆಯಾ ದೇಶೋಚಿತಗಳಾದ ಭಾಷೆಗಳೂ ಉತ್ಪನ್ನಗಳಾದವು. ಆ ವೇದ, ಪುರಾಣ, ಆಗಮಗಳಲ್ಲಿ ಪ್ರತಿಪಾದನ ಮಾಡಲ್ಪಟ್ಟ ನಾನಾ ಪ್ರಕಾರಗಳಾದ ವಿಹಿತ, ನಿಷಿದ್ಧ ಕರ್ಮಗಳನ್ನಾಚರಿಸುವದರಿಂದ ಪುಣ್ಯ, ಪಾಪ, ಮಿಶ್ರ ಎಂಬ ಮೂರು ಫಲಗಳಾದವು. ಪುಣ್ಯಫಲದಿಂದ ದೇವತೆಗಳಾದರು, ಪಾಪಫಲದಿಂದ ದೈತ್ಯರುಗಳಾದರು. ಮಿಶ್ರಫಲದಿಂದ ಮನುಷ್ಯರಾದರು. ಹೀಗೆ ಸ್ವರ್ಗ, ಮೃತ್ಯು, ಪಾತಾಳಗಳೆಂಬ ಮೂರು ಲೋಕಗಳೂ ಆ ಲೋಕದಲ್ಲಿರುವ ಸ್ಥಾವರ ಜಂಗಮ ಪ್ರಾಣಿಗಳೂ ಉತ್ಪನ್ನವಾದವು. ಈ ಪ್ರಕಾರ ಕಾರ್ಯ, ಕಾರಣ ಲಕ್ಷಣಾತ್ಮಕ ಪ್ರಪಂಚವಾಗಿ ಅನೇಕಾತ್ಮಗಳಾಗಿ ತೋರುತ್ತಿರುವವು. ಈ ಯಾವತ್ತು ಸೃಷ್ಟಿಯೆಲ್ಲಾ ನಿನ್ನ ಹೆಸರಾದ ಓಂಕಾರದಿಂದಲೇ ಉತ್ಪನ್ನವಾಗಿರುತ್ತದೆ. ಆದ್ದರಿಂದ ಇದಕ್ಕೆಲ್ಲಾ ನೀನೆ ಅಧಿಷ್ಠಾನನಾಗಿರುವಿ. ಈ ಜಗದುತ್ಪತ್ತಿ, ಸ್ಥಿತಿ, ನಾಶಗಳಿಗೆ ಕಾರಣವಾದ ನಿನ್ನ ನಿಜವೇ ಯಥಾರ್ಥವಾಗಿರುತ್ತದೆ. ಉಳಿದ ಪ್ರಪಂಚವೆಲ್ಲವು ಮಿಥ್ಯೆಯಾಗಿರುತ್ತದೆ.

ಪ್ರಶ್ನೆ:— ಹಾಗಾದರೆ, ನನ್ನಲ್ಲಿ ಯಾವಾಗಲೂ ಕಾಣುತ್ತಿರುವಂಥಾ ಪ್ರಪಂಚವಾದರೂ ನನಗೆ ನಿಜವಾಗಿಯೇ ಕಂಡುಬರುತ್ತದೆ. ಆದ್ದರಿಂದ ಸುಳ್ಳಲ್ಲ. ಸ್ವರೂಪದಂತೆ ಸತ್ಯವಾಗಿರುತ್ತದೆ.

ಉತ್ತರ:— ಹಾಗಲ್ಲ; ನಿನ್ನ ಅನುಭವಕ್ಕೆ ಬರುವಂಥಾ ಒಂದು ದೃಷ್ಟಾಂತವನ್ನು ಕೊಡುತ್ತೇನೆ. ಕೇಳು, ಏನಂದರೆ, ಅಕಸ್ಮಾತ್ ಒಂದು ರಾತ್ರಿಯಲ್ಲಿ ನಿನಗೆ ಸ್ವಪ್ನ ಪ್ರಾಪ್ತಿಯಾಯಿತು. ಆ ಸ್ವಪ್ನವು ಒಂದು ಕ್ಷಣಕಾಲ ಮಾತ್ರ ತೋರುತ್ತದೆ. ಅದರಲ್ಲಿ ನಿನಗೆ ಎಷ್ಟೋ ವರ್ಷಗಳವರೆಗೂ ವ್ಯವಹಾರಮಾಡಿದಂತೆ ಕಾಣುತ್ತದೆ. ಹೀಗಿದ್ದರೂ ಜಾಗ್ರತ್ಕಾಲ ಪ್ರಾಪ್ತಿಯಾದರೆ ಆ ಸ್ವಪ್ನ ಭ್ರಾಂತಿಯೆಲ್ಲಾ ಕೆಟ್ಟು ಹೋಗುತ್ತದೆ. "ಆಗ ಒಂದು ಕ್ಷಣ ಹೊತ್ತಿನಲ್ಲಿ ತೋರಿದ ಸ್ವಪ್ನವು ನೂರು ವರ್ಷದಂತೆ ನನಗೆ ತೋರಿತು. ಇದೇನು ಆಶ್ಚರ್ಯ!" ಎಂದು ತನ್ನ ಮನಸ್ಸಿಗೆ ಹೊಳೆಯುತ್ತದೆ. ಯೋಗ ವಾಸಿಷ್ಠದಲ್ಲಿ ಗಾಧಿ ಬ್ರಾಹ್ಮಣನ ಕಥೆ, ಸ್ವಪ್ನ ಶತರುದ್ರಿ, ವ್ಯಾಖ್ಯಾನ ಮೊದಲಾದವುಗಳಲ್ಲಿ ವಿಸ್ತಾರ ಪೂರ್ವಕ ಸ್ವಪ್ನ ಪ್ರಪಂಚವು ವರ್ಣಿಸಲ್ಪಟ್ಟಿರುತ್ತದೆ. ಅಲ್ಲಿ ನೋಡಿ ತಿಳಕೊಳ್ಳತಕ್ಕದ್ದು. ಜಾಗ್ರತ್ಕಾಲವು ಬಂದ ಮೇಲೆ ಸ್ವಪ್ನ ಪ್ರಪಂಚವು ಹೇಗೆ ಸುಳ್ಳಾಗುವದೋ, ಹಾಗೇ ಸ್ವರೂಪಜ್ಞಾನವಾದನಂತರ ಈ ವಿಶ್ವ ಪ್ರಪಂಚವಾದರೂ ಸುಳ್ಳಾಗಿರುತ್ತದೆ.

ಈ ಕಂದ ಪದ್ಯದಿಂದ ಎರಡನೇ ಗತಿಯಲ್ಲಿ ಯಾವ ವಿಷಯವು ಹೇಳಲ್ಪಟ್ಟಿತು. ಎಂದು ಕೇಳಿದರೆ; ಅದಕ್ಕೆ ಉತ್ತರವನ್ನು ಹೇಳುತ್ತಾರೆ.

CC-0. Jangamwadi Math Collection. Digitized by eGangotri

ಗತಿಯೆರಡನೆಯ ದಿದಕ್ಕತಿ |
ಹಿತವೆನಿಸ ನಿರೂಪಣಂಗಳೇಕಾದಶವಂ ||
ತತಿಶಯ ಮಾಗಿರೆ ತಿಳಿಯ |
ಲ್ಪ್ರತಿ ಪಾದಿತವಿಲ್ಲಿ ಭೂತ ಪಂಚೀಕರಣವಂ ||

ಟೀಕಾ:—ಗತಿಯು=ಅಧ್ಯಾಯವು, ಎರಡನೆಯದು=ದ್ವಿತೀಯವಾದುದು, ಇದಕೆ=ಈ ಗತಿಗೆ,ಅತಿಹಿತವೆನಿಸ=ಬಹಳೇ ಯೋಗ್ಯಂಗಳಾದ,ನಿರೂಪಣಂಗಳ್= ಹೇಳಲ್ಪಟ್ಟ ಪದ್ಯಗಳು, ಅತಿಶಯಮಾಗಿರೆ=ಆಧಿಕ್ಯವಾಗಿದ್ದರೂ, ಅಂತು=ಒಟ್ಟಿಗೆ, ಏಕಾದಶವಂ=ಹನ್ನೊಂದು, ತಿಳಿಯಲ್=ವಿಚಾರಮಾಡಲಾಗಿ, ಇಲ್ಲಿ=ಈ ಗತಿ ಯಲ್ಲಿ, ಭೂತಪಂಚೀಕರಣಂ=ಪಂಚಭೂತಗಳ ಪಂಚೀಕರಣವು, ಪ್ರತಿಪಾದಿತವು= ಹೇಳಲ್ಪಟ್ಟಿತು.

ಇಂತು ಗತಿ ೨ಕ್ಕೆ ಚರಣ ೨೭೭ಕ್ಕಂ ಮಂಗಳಮಸ್ತು.
ಶ್ರೀಗುರು ಶಂಭುಲಿಂಗಾಯನಮಃ

ತೃತೀಯ ಗತಿ

ಬಳಿಕ; ಸಿಂಹಾವಲೋಕನ ನ್ಯಾಯದಿಂದ ಹಿಂದಿನ ಗತಿಯ ಅರ್ಥವನ್ನು ಸಂಕ್ಷೇಪವಾಗಿ ತಿಳಿಸಿ, ಈ ಗತಿಯಲ್ಲಿ ಮಹದಾದಿ ಸೃಷ್ಟಿಕ್ರಮವನ್ನು ಬೋಧಿಸು ತ್ತೇವೆಂಬ ಪ್ರತಿಜ್ಞಾ ಮಾಡುತ್ತಾರೆ.

|| ಕಂದ ||

ಸಾದರದಿಂ ಜೀವತ್ವದ |
ಭೇದವನಿಂತೊರೆದೆ ನಿನ್ನು ಮಹದಹಮಾದಿಕ ||
ವಾದಂದವ ನರಪುವೆನಿದ |
ನೋದಿವಿಚಾರಿಪುದು ಸಾಧಕರ್ನಲವಿಂದಂ ||

ಟೀಕಾ:— ಸಾದರದಿಂ=ಪ್ರೀತಿಯಿಂದ, ಜೀವತ್ವದ=ಜೀವ ಸ್ವರೂಪದ, ಭೇದವನು=ವಿಶ್ವಾದಿ ಜೀವ ಭೇದವನ್ನು, ಇಂತು=ಈ ಪ್ರಕಾರ, ಒರೆದೆನು= ತಿಳಿಸಿದೆನು, ಇನ್ನು=ಅನಂತರ, ಮಹದಹಮಾದಿಕವು=ಮಹತತ್ವ ಅಹಂಕಾರ ಮೊದಲಾದವುಗಳು, ಆದ=ಉತ್ಪನ್ನವಾದ, ಅಂದವನು=ಸ್ವರೂಪವನ್ನು, ಅರಪು ವೆನು=ತಿಳಿಸುವೆನು, ಸಾಧಕರ್=ಸಾಧ್ಯ ವಸ್ತುವನ್ನು ಸಾಧಿಸುವ ಇಚ್ಛೆಯುಳ್ಳ ವರು, ನಲವಿಂದ=ಪ್ರೀತಿಯಿಂದ, ಇದನು=ಈ ಗೀತೆಯನ್ನು, ಓದಿ=ಪಠನಮಾಡಿ, ವಿಚಾರಿಪುದು=ವಿಚಾರಮಾಡತಕ್ಕದ್ದು.

CC-0. Jangamwadi Math Collection. Digitized by eGangotri

ತಾತ್ಪರ್ಯ:— ಹಿಂದಿನ ಗತಿಯಲ್ಲಿ ತನುತ್ರಯ ಮೂಲಕ ಅವಸ್ಥಾತ್ರಯ ಜೀವತ್ರಯಾದಿಗಳನ್ನು ಪ್ರತಿಪಾದನಮಾಡಿ, ಈಗ ಮೂರನೇ ಗತಿಯ.ಲ್ಲಿ ಪ್ರಕೃತಿ, ಮಹತತ್ವ, ಅಹಂಕಾರ ಮೊದಲಾದ ಅದೃಷ್ಟ ತತ್ವಗಳನ್ನು ಪ್ರತಿಪಾದನ ಮಾಡುತ್ತೇನೆ. ಆದ್ದರಿಂದ ಸಾಧಕರು ಬಹು ಪ್ರೀತಿಯಿಂದ ಈ ಗ್ರಂಥವನ್ನು ಪಠನಮಾಡಿ ವಿಚಾರಮಾಡತಕದ್ದು. ಇಂದರೆ,ಗುರುಮುಖದಿಂದ ಈ ಗ್ರಂಥವನ್ನುಶ್ರವಣಮಾಡಿ ತಾನು ಮನನ ನಿದಿಧ್ಯಾಸಗಳನ್ನು ಮಾಡಿಕೊಳ್ಳತಕ್ಕದ್ದೆಂಬ ಅಭಿಪ್ರಾಯವು.

ಬಳಿಕ; ನಿನ್ನ ಆಶ್ರಿತವಾದ ಪ್ರಕೃತಿಯೇ ಜಗದ್ರೂಪವಾಯಿತು. ಅದಕ್ಕೆ ನೀನೇ ಆಶ್ರಯನಾಗಿರುವಿ. ಎಂದು ಪ್ರತಿಪಾದನ ಮಾಡುತ್ತಾರೆ.

ಸತ್ಯಂ ಸಂವಿತ್ಸುಖಮುಯನಪ್ಪ |
ನಿತ್ಯಂ ನಿನ್ನ ನಿರೀಕ್ಷಣವಪ್ಪ ||
ನಿಜವಹ ಶಕ್ತಿಯೆ ಕಾಲವೆನಿಕ್ಕು |
ನಿಜವದು ಪ್ರಕೃತಿಗೆ ಚೋದನಮುಕ್ಕು ||
ಸುಕೃತಿಯೆ ಕಾಲದಿ ಬೋಧಕಮಾದ |
ಪ್ರಕೃತಿಯು ಕಳೆ ಸರ್ವೋನ್ಮುಖವಾದ ||
ಬಿಂದುವೆನಿಸಿ ವಿರಳಂ ಬಡೆಯುತ್ತ |
ಅಂದವ್ಯಕ್ತ ನಿನದ ಮಾಗುತ್ತ ||
ಮುಂದಹ ತ್ರಿ ಗುಣಂಗಳ ಭೇದವನು |
ಒಂದಿ ವಿಕರಿಸಿ ಮಹದ್ರೂಪವನು ||
ತಳೆಯಿತ್ತಾ ಪ್ರಕೃತಿಗೆ ನಿಜಧಾಮು |
ತಿಳಿ ನೀನದರಿಂದಲೆ ನಿಸ್ಸೀಮು ||೧||

ಟೀಕಾ:— ಸತ್ಯಂ=ಸದ್ರೂಪನು, ಸಂವಿತ್=ಜ್ಞಾನ ಸ್ವರೂಪನು, ಸುಖಮುಯನು=ಆನಂದ ಸ್ವರೂಪನು, ಅಪ್ಪ=ಆದ, ನಿತ್ಯಂ=ನಿತ್ಯನು ಆವಂಥಾ, ನಿನ್ನ-ಚಿದಾದಿ ಸ್ವರೂಪನಾದ ನಿನ್ನ, ನಿರೀಕ್ಷಣವಪ್ಪ=ಜಗತ್ತನ್ನು ರಚಿಸಬೇಕೆಂಬ ಇಚ್ಛಾತ್ಮಕವಾದ, ನಿಜವಹ=ಯಥಾರ್ಥವಾದ, ಶಕ್ತಿಯೆ=ಚಿಚ್ಛಕ್ತಿಯೆ, ಕಾಲವು=ಕಾಲತತ್ವವು, ಎನಿಕ್ಕು=ಎನಿಸುವದು, ಅದು=ಆ ಕಾಲವು, ನಿಜವು=ಸತ್ಯವಾಗಿ, ಪ್ರಕೃತಿಗೆ=ಜಗನ್ಮೂಲವಾದ ಪ್ರಕೃತಿಗೆ, ಚೋದನಂ=ಪ್ರೇರಿಸುವಂಥಾದ್ದು, ಆಕ್ಕು=ಆಗುವದು, ಸುಕೃತಿಯೆ=ಹೇ ಪುಣ್ಯಶಾಲಿಯಾದ ಶಿಷ್ಯನೆ! ಕಾಲದಿ=ಕಾಲತತ್ವದಿಂದ, ಬೋಧಕಮಾದ=ಎಚ್ಚರಿಕೆಯನ್ನು ಹೊಂದಿದ, ಪ್ರಕೃತಿಯೆ=ಮಾಯೆಯು, ಸರ್ವೋನ್ಮುಖವಾದ=ಸುತ್ತಲೂ ಮೋರೆಯುಳ್ಳಂಥಾ, ಕಳೆ=ಕಳೆಯೆಂದು, ಬಿಂದುವು=ಬಿಂದುಯೆಂದು, ಎನಿಸಿ=ಅನ್ನಿಸಿಕೊಂಡು, ವಿರಳಂ=ಭೇದತ್ವ

CC-0. Jangamwadi Math Collection. Digitized by eGangotri

ವನ್ನು, ಭಡೆಯುತ್ತ=ಹೊಂದುತ್ತ, ಅಂದು=ಆ ಹೊತ್ತಿನಲ್ಲಿ, ಅವ್ಯಕ್ತ=ಗೂಢವಾದ, ನಿನದಂ=ಶಬ್ದವು, ಆಗುತ್ತ=ಉಂಟಾಗುತ್ತ, ಮುಂದಹ=ಮುಂದೆ ಆಗುವಂಥಾ, ತ್ರಿಗುಣಂಗಳ=ಸಾತ್ವಿಕ ರಾಜಸ ತಾಮಸಗಳೆಂಬ, ಭೇದವನು=ಭೇದತ್ವವನ್ನು, ಒಂದಿ=ಹೊಂದಿ, ವಿಕರಿಸಿ=ವೈಕಾರಿಕಾದಿ ಪಂಚಭೂತಗಳೆ ಕಡೆಯಾಗಿ, ಮಹ ದ್ರೂಪವನು=ಜಗದ್ರೂಪವನ್ನು, ತಳೆಯಿತ್ತು=ಪಡೆದಿತ್ತು, ಆ ಪ್ರಕೃತಿಗೆ=ಹಿಂದೆ ಹೇಳಿದ ಪ್ರಕೃತಿಗೆ, ನಿಜಧಾಮ=ಯಥಾರ್ಥವಾದ ಆಶ್ರಯನಾಗಿದೀ, ಅದರಿಂ ದಲೆ=ಆದ್ದರಿಂದಲೆ, ನೀನ=ಸಚ್ಚಿದಾನಂದನಾದ ನೀನು, ನಿಸ್ಸೀಮ=ದೇಶ, ಕಾಲ, ವಸ್ತು ಪರಿಚ್ಛೇದ ರಹಿತನಾದವನು, ತಿಳಿ=ಚನ್ನಾಗಿ ವಿಚಾರಮಾಡಿ ನೋಡಿಕೋ.

ತಾತ್ಪರ್ಯ:- ಈ ಜಗದುತ್ಪತ್ತಿಯಾಗುವದಕ್ಕಿಂತಲೂ ಪೂರ್ವದಲ್ಲಿ ಸತ್, ಚಿತ್, ಆನಂದ, ನಿತ್ಯ, ಪರಿಪೂರ್ಣ ಸ್ವರೂಪನಾದ ನೀನೊಬ್ಬನೇ ಇದ್ದಿ. ಇಂಥಾ ನಿನ್ನಲ್ಲಿ ಬಹಳ ಪ್ರಜೆಗಳಾಗಬೇಕೆಂಬ ಸಂಕಲ್ಪಾತ್ಮಕ ಈಕ್ಷಣವಾಯಿತು. ಆ ನಿನ್ನ ಸ್ವರೂಪಭೂತವಾದ ಈಕ್ಷಣಾತ್ಮಕ ಜ್ಞಾನಶಕ್ತಿಯೇ ಕಾಲತತ್ವವಾಯಿತು. ಆ ಕಾಲವೇ ತ್ರಿಗುಣಾತ್ಮಕವಾದ ಪ್ರಕೃತಿಗೆ ಪ್ರೇರಣೆಯನ್ನು ಮಾಡುವಂಥಾದ್ದಾ ಯಿತು. ಅನೇಕ ಜನ್ಮಂಗಳಲ್ಲಿ ನಿಷ್ಕಾಮ ಕರ್ಮಗಳನ್ನಾಚರಿಸಿ ಪರಿಪಕ್ವವಾದ ಅಂತಃಕರಣವುಳ್ಳಂಥಾ ಹೇ ಶಿಷ್ಯನೇ ! ಕೇಳು. ಆ ಕಾಲದಿಂದ ಜಾಗ್ರತೆಯನ್ನು ಪಡೆದಂಥಾ ಪ್ರಕೃತಿಯು, ಎಲ್ಲ ಕಡೆಗಿರುವ ಕಳೆಯೆಂದೂ ಪ್ರಕಾಶಮಯವಾದ ಬಿಂದುವೆಂದೂ ಭೇದನ್ನು ಪಡೆಯುತ್ತಾ, ಅದೇ ಕಾಲದಲ್ಲಿ ಅಗೋಚರವಾದ ಸೂಕ್ಷ್ಮನಾದವಾಯಿತು. ಅನಂತರ, ಮುಂದೆ ಪ್ರತಿಪಾದನ ಮಾಡಲ್ಪಡುವಂಥಾ ಸತ್ವ, ರಜ, ತಮ ಗುಣಗಳೆಂಬ ಭೇದವನ್ನು ಹೊಂದಿ, ವೈಕಾರಿಕ, ತೈಜಸ, ಭೂತಾದಿ ಎಂಬ ಅಹಂಕಾರತ್ರಯಾತ್ಮಕವಾಗಿ, ಭೂತಭೌತಿಕ ಜಗದ್ರೂಪವನ್ನೇ ಹೊಂದುವಂಥಾದ್ದಾಯಿತು. ಇಂಥಾ ಜಗತ್ತಿಗೆ ಮೂಲಕಾರಣವಾದ ಪ್ರಕೃತಿಗೆ ನೀನೇ ಅಧಿಷ್ಠಾನನಾಗಿರುತ್ತೀ. ಈ ಕಾರಣದಿಂದಲೇ ನೀನು ತ್ರಿವಿಧ ಪರಿಚ್ಛೇದ ರಹಿತ ಪರಿಪೂರ್ಣನಾಗಿರುತ್ತೀ. ನಿನ್ನ ಅನುಭವದಿಂದ ನೀನೇ ವಿಚಾರ ಮಾಡು.

ಬಳಿಕ; ನಿನ್ನ ಆಶ್ರಿತವಾದ ಪ್ರಕೃತಿಯೇ ಮಹತತ್ವವಾಯಿತು. ಅದರಿಂದ ಮೂರು ಅಹಂಕಾರಗಳೂ ಮೂರು ಗುಣಗಳೂ ಉತ್ಪನ್ನವಾದವು. ಎಂದು ಪ್ರತಿಪಾದನ ಮಾಡುತ್ತಾರೆ.

ಗುಣ ಗರ್ಭಾತ್ಮಕವಾದ ಮಹತ್ತು
ಗುಣ ಭೇದಂಗಳ ನೈದಿದ ಹೊತ್ತು ॥
ಪರಿವರ್ಧಿಸಿ ಪೂವದು ಮಿಡಿಯಾಂತು ।
ತಿರುಳಂ ಸಿಪ್ಪೆಗಳಹವೆಂತಂತು ॥

।

CC-0. Jangamwadi Math Collection. Digitized by eGangotri

ಪೂರೈಸುತ್ತಂತದು ಮೂರಾಗಿ ।
ಘೋರಂ ಶಾಂತಂ ಮೂಢತೆಯಾಗಿ ॥
ರಾಜಸ ಸಾತ್ವಿಕ ತಾಮಸವೆಂದು ।
ರಾಜಿಸಿ ಗುಣಭೇದಂ ದಳೆದಂದು ॥
ಈ ಕಲ್ಪನೆಗಂತದು ತಾವಾದಿ ।
ವೈಕಾರಿಕ ತೈಜಸ ಭೂತಾದಿ ॥
ಎನಿಪಾ ತ್ರಿವಿಧಾ ಹಂಕೃತಿ ಯಾಯ್ತು ।
ಜನಿಸಿ ಮಹತ್ತಿಗದಾವೃತವಾಯ್ತು ॥ ೨ ॥

ಟೀಕಾ:— ಗುಣ ಗರ್ಭಾತ್ಮಕವಾದ=ಸತ್ವಾದಿ ಗುಣಗಳನ್ನು ತನ್ನ ಹೊಟ್ಟೆಯಲ್ಲಿಟ್ಟುಕೊಂಡಿರುವ ಅವಸ್ಥಾತ್ಮಕವಾದ, ಮಹತ್ತು=ಮಹತತ್ವ, ಗುಣಭೇದಂಗಳನು=ಸತ್ವ, ರಜ, ತಮುಗಳೆಂಬ ಬೇರೆ ಬೇರೆ ಗುಣ ಸ್ವರೂಪವನ್ನು, ಐದಿದ ಹೊತ್ತು=ಹೊಂದಿದಂಥಾ ಕಾಲದಲ್ಲಿ, ಪೂವದು=ಹೂವು, ಪರಿವರ್ಧಿಸಿ=ಬೆಳೆದು, ಮಿಡಿಯಾಂತು=ಕೋಮಲವಾದ ಕಾಯಾಗಿ, ತಿರುಳ್=ತಿರುಳವು, ಸಿಪ್ಪೆಗಳು=ಸಿಪ್ಪೆಗಳು, ಎಂತು=ಹೇಗೆ, ಅಹವು=ಆಗುವವೋ, ಅ ತು=ಹಾಗೇ, ಅಂತದು=ಆ ಮಹತತ್ವವು,ಮೂರಾಗಿ=ಮೂರು ಪ್ರಕಾರವಾಗಿ,ಪೂರೈಸುತ್ತ=ಕಾರ್ಯವಾಗುತ್ತಾ, ಘೋರಂ=ಪ್ರವೃತ್ತಿ ಚಂಚಲಾತ್ಮಕವಾದ, ಶಾಂತಂ=ಪ್ರಕಾಶ ನಿಷ್ಟಯಾತ್ಮಕವಾದ, ಮೂಢತೆಯಾಗಿ=ಮೋಹ, ಮೌಢ್ಯಲಕ್ಷಣ ವೃತ್ತಿತ್ರಯಾತ್ಮಕವುಳ್ಳದ್ದಾಗಿ ರಾಜಸ ಸಾತ್ವಿಕ ತಾಮಸವೆಂದು=ಆ ವೃತ್ತಿಗಳೇ ಕ್ರಮದಿಂದ ರಜ, ಸತ್ವ, ತಮ ಗುಣಗಳೆಂದು ಹೇಳಿಸಿಕೊಂಡು, ರಾಜಿಸಿ=ಹೊಳೆದು, ಗುಣಭೇದಂ=ಗುಣಗಳ ಭೇದವನ್ನು, ದಳೆದಂದು=ಹೊಂದಿದ ಕಾಲದಲ್ಲಿ, ಈ ಕಲ್ಪನೆಗೆ=ಈ ಪ್ರಕಾರವಾದ ಕಾರ್ಯಕ್ಕೆ, ಅಂತದು=ಆ ಮಹತತ್ವವು, ತಾವಾದಿ=ಸತ್ವಾದಿ ಗುಣಗಳಿಗೆ ಮೂಲ ಕಾರಣವಾಗಿರುವಂಥಾ, ವೈಕಾರಿಕ=ವೈಕಾರಿಕ ಅಹಂಕಾರವೆಂದೂ ತೈಜಸ=ತೈಜಸ ಅಹಂಕಾರವೆಂದೂ, ಭೂತಾದಿ=ಭೂತಾದ ಅಹಂಕಾರವೆಂದೂ ಎನಿಪ=ಹೇಳಿಸಿಕೊಳ್ಳುವಂಥಾ, ತ್ರಿವಿಧ=ಮೂರು ಪ್ರಕಾರವಾದ, ಅಹಂಕೃತಿಯು=ಅಹಂಕಾರವು, ಆಯ್ತು=ಉತ್ಪನ್ನವಾಯಿತು ಅದು=ಆ ಅಹಂಕಾರವು, ಜನಿಸಿ=ಉತ್ಪನ್ನವಾಗಿ, ಮಹತ್ತಿಗೆ=ಮಹತತ್ವಕ್ಕೆ, ಆವೃತವಾಯ್ತು=ಆವರಣವನ್ನುಂಟು ಮಾಡಿತು.

ತಾತ್ಪರ್ಯ:— ಉಕ್ತ ಪ್ರಕೃತಿಯೇ ಸತ್ವಾದಿ ತ್ರಿಗುಣಾತ್ಮಕ ಸೃಷ್ಟಿಯನ್ನುಂಟು ಮಾಡುವದಕ್ಕೆ ಯೋಗ್ಯವಾದ ಗರ್ಭಾತ್ಮಕ ಅವಸ್ಥೆಯನ್ನು ಪಡೆಯಲು ಮಹತ್ತು ಎಂದು ಕರಿಸಿಕೊಳ್ಳುತ್ತದೆ. ಹೇಗಂದರೆ, ಬೀಜವನ್ನು ಭೂಮಿಗೆ ಬಿತ್ತಲು ಆ ಬೀಜವು ಮೊದಲಿನಂತಿರದೆ, ಮೊಳಕೆಯನ್ನುಂಟು ಮಾಡುವದಕ್ಕೆ ಯೋಗ್ಯವಾದ ಒಂದು ಉಬ್ಬಿದ ಅವಸ್ಥೆಯನ್ನು ಹೇಗೆ ಪಡೆಯುತ್ತದೆಯೋ, ಮತ್ತು

CC-0. Jangamwadi Math Collection. Digitized by eGangotri

ಗರ್ಭಿಣಿಯಾದ ಸ್ತ್ರೀಯಳು ಮೊದಲಿನಂತೆ ಕನ್ಯಾವಸ್ಥೆಯುಳ್ಳವಳೂ ಅಲ್ಲ; ಕೂಸನ್ನು ಹಡದವಳೂ ಆಗಿಲ್ಲ ಕಿಂತು ಮುಂದೆ ಹಡೆಯುವವಕ್ಕೆ ಯೋಗ್ಯವಾದ ಗರ್ಭಾತ್ಮಕ ಅವಸ್ಥೆಯನ್ನು ಹೊಂದಿರುವ ಗರ್ಭಿಣಿ ಸ್ತ್ರೀಯಳು ಹೇಗೋ, ಹಾಗೇ ಈ ಪ್ರಕೃತಿಯು ಸೃಷ್ಟಿಗೆ ಅಭಿಮುಖವಾಗಲು ಮಹತತ್ವ ಎಂದು ಹೇಳಿಸಿಕೊಳ್ಳು ತ್ತದೆ. ಬಳಿಕ, ಈ ಮಹತತ್ವದಿಂದ ವೈಕಾರಿಕ, ತೈಜಸ, ಭೂತಾದಿ ಎಂಬ ಮೂರು ಅಹಂಕಾರಗಳು ಉತ್ಪನ್ನವಾದವು. ಹೇಗಂದರೆ, ಹೂವು ಬೆಳೆದು ಮಿಡಿ ಯಾಗಲು ಅದರ ಒಳಸಿಪ್ಪೆ, ಹೊರಸಿಪ್ಪೆ, ತಿರುಳುಗಳೆಂದು ಮೂರು ಭಾಗಗಳು ಹೇಗೆ ಆಗುತ್ತವೆಯೋ, ಮತ್ತು ಬೀಜವು ಹುಟ್ಟಿ ಎರಡು ಎಲೆ ಒಂದು ಮೊಳಕೆ ಹೇಗೆ ಮೂರು ಭಾಗವಾಗುತ್ತದೆಯೋ, ಹಾಗೇ ಮಹತ್ತಾದರೂ ಮೂರು ಭಾಗ ವಾಯಿತು ಬಳಿಕ ವೈಕಾರಿಕ. ತೈಜಸ, ಭೂತಾದಿ ಎಂಬ ಮೂರು ಅಹಂಕಾ ರಗಳಿಂದ ಕ್ರಮವಾಗಿ ಶಾಂತ, ಘೋರ, ಮೂಢತೆ ಎಂಬ ಮೂರು ವೃತ್ತಿಗಳು ಉತ್ಪನ್ನವಾದವು. ಬಳಿಕ ಈ ಮೂರು ವೃತ್ತಿಗಳಿಂದ ಕ್ರಮವಾಗಿ ಸಾತ್ವಿಕ, ರಾಜಸ. ತಾಮಸ ಎಂಬ ಮೂರು ಗುಣಗಳು ಹುಟ್ಟಿದವು. ಈ ಪ್ರಕಾರ ಆ ಮಹ ತತ್ವದಿಂದ ಮೂರು ಅಹಂಕಾರಗಳು ಹುಟ್ಟಿ ಆ ಮಹತ್ತನ್ನೇ ಆವರಣ ಮಾಡು ವಂಥವುಗಳಾದವು.

ಬಳಿಕ; ವೈಕಾರಿಕ ತೈಜಸ ಅಹಂಕಾರಗಳೆರಡರಿಂದ ಮನಸ್ಸು, ವೈಕಾರಿಕ ಅಹಂಕಾರದಿಂದ ಹನ್ನೊಂದು ಇಂದ್ರಿಯ ಅಭಿಮಾನಿ ದೇವತೆಗಳು ಆಗಿರುತ್ತವೆ ಎಂದು ಹೇಳುತ್ತಾರೆ.

ಶಾಂತವೆನಿಪ ಸಾತ್ವಿಕದೊಂದಂದ ।
ಅಂತದು ತೈಜಸವಹ ಹಮ್ಮಿಂದ ॥
ಪೊಳೆವುದು ಮನವೆಂಬಿಂದ್ರಿಯವೊಂದು ।
ಬಳಿಕಿಂದ್ರಿಯದೇವತೆ ಹನ್ನೊಂದು ॥
ದಿಕ್ಕನಿಲ ರವಿ ವರುಣಾಶ್ವಿನಿಗಳು ।
ಅರ್ಕನುಮಿಂದ್ರಂ ಮೃತ್ಯುವಿಧಿಗಳು ॥
ಮಿತ್ರಂ ಮತ್ತೊಬ್ಬಂ ಮೃಗಧರನು ।
ಪುತ್ರನೆ ಹನ್ನೊಂದಧಿ ದೇವರನು ॥
ಸಾತ್ವಿಕ ಹಮ್ಮಿನ ಕಾರ್ಯಮಿದೆಂದು ।
ತತ್ವಜ್ಞರ್ಮಾರ್ಯರಾಮುಯವೆಂದು ॥
ಪೇಳ್ವರ್ಮನದ ವಿಕಲ್ಪಮಿವೆಲ್ಲ ।
ಕೇಳದರಿಂ ನಿತ್ಯಂ ನಿನಗಿಲ್ಲ ॥ ೩ ॥

ಟೀಕಾ:— ಶಾಂತವೆನಿಪ=ಶಾಂತವೆಂದು ಹೇಳಿಸಿಕೊಳ್ಳುವಂಥಾ, ಸಾತ್ವಿ ಕದ=ಪ್ರಕಾಶ ಲಕ್ಷಣಾತ್ಮಕ ಸತ್ವಗುಣದ, ಒಂದಂದ=ಈ ಒಂದು ಗುಣದ ಸ್ವರೂ ಪವಾದಂಥಾ, ಅಂತದು=ಮತ್ತದು, ತೈಜಸವಹ=ರಜೋಗುಣಾತ್ಮಕವಾದ,

CC-0. Jangamwadi Math Collection. Digitized by eGangotri

ಹಮ್ಮಿಂದ=ಅಹಂಕಾರದಿಂದ, ಮನವೆಂಬ=ಸಂಕಲ್ಪ ವಿಕಲ್ಪ ರೂಪಾತ್ಮಕ ಮನಸ್ಸೆಂಬ, ಇಂದ್ರಿಯವೊಂದು=ಒಂದು ಅಂತರಿಂದ್ರಿಯವು, ಪೊಳೆವುದು=ತೋರುವದು, ಬಳಿಕ=ಅನಂತರ, ಇಂದ್ರಿಯ=ಕರಣಗಳ, ದೇವತೆ=ಅಭಿಮಾನಿ ದೇವತೆಗಳು, ಹನ್ನೊಂದು=ಹನ್ನೊಂದು ಸಂಖ್ಯಾಕವಾಗಿರುವವು, ದಿಕ್ಕು-[ಶ್ರೋತ್ರಾಭಿಮಾನಿದೇವತಾ] ದಿಕ್ಕು, ಅನಿಲ=[ತ್ವಚಾಭಿಮಾನಿ ದೇವತಾ] ವಾಯು, ರವಿ=[ನೇತ್ರಾಭಿಮಾನಿ ದೇವತಾ] ಸೂರ್ಯ, ವರುಣ=[ರಸನಾಭಿಮಾನಿ ದೇವತಾ] ವರುಣ. ಅಶ್ವಿನಿಗಳು=[ನಾಸಿಕಾಭಿಮಾನಿ ದೇವತೆ] ಅಶ್ವಿನಿಕುಮಾರರು, ಅರ್ಕನು=[ಪಾದಾಭಿಮಾನಿ ದೇವತೆ] ಉಪೇಂದ್ರನು, ಇಂದ್ರಂ=[ಹಸ್ತಾಭಿಮಾನಿ ದೇವತೆ] ಇಂದ್ರನು, ಮೃತ್ಯು=[ಪಾಯು ಅಭಿಮಾನಿ ದೇವತೆ] ಯಮನು, ವಿಧಿಗಳು=[ಉಪಸ್ಥ ಅಭಿಮಾನಿ ದೇವತೆ] ಬ್ರಹ್ಮನು, ಮಿತ್ರಂ=[ವಾಕ್ಯಭಿಮಾನಿ ದೇವತಾ] ಅಗ್ನಿ, ಮತ್ತೊಬ್ಬ=ಬೇರೊಬ್ಬನು, ಮೃಗಧರನು=[ಮನೋಭಿಮಾನಿ ದೇವತೆ] ಚಂದ್ರನು, ಹನ್ನೊಂದಧಿ ದೇವರನು=ಈ ಹನ್ನೊಂದು ಅಭಿಮಾನಿ ದೇವತೆಗಳನ್ನು, ಸಾತ್ವಿಕ=ಸತ್ವ ಗುಣಮಯವಾದ, ಹಮ್ಮಿನ=ವೈಕಾರಿಕ ಅಹಂಕಾರದ, ಕಾರ್ಯಮಿದೆಂದು=ತತ್ವಗಳೆಂದು, ತತ್ವಜ್ಞರ್=ಬ್ರಹ್ಮವೆತ್ತರು,ಮಾಯಾಮಯವೆಂದು=ಅಘಟಿತಘಟನಾ ಲಕ್ಷಣಾತ್ಮಕ ಮಾಯೆಯ ಸ್ವರೂಪಗಳೆಂದು, ಪೇಳ್ವರ್=ಹೇಳುವರು, ಇವೆಲ್ಲ=ಈಗ ಹೇಳಿದ ಕಾರ್ಯವರ್ಗವೆಲ್ಲಾ ಮನದ=ಮನಸ್ಸಿನ, ವಿಕಲ್ಪಂ=ಭ್ರಾಂತಿಗಳಾಗಿರುವವು, ಅದರಿಂ=ಈ ಕಾರಣದಿಂದ, ಪುತ್ರನೆ=ಎಲೈ ಮಗನೇ, ಕೇಳು=ಏಕಾಗ್ರಚಿತ್ತದಿಂದ ಆಲಿಸು, ನಿತ್ಯಂ=ಯಾವಾಗಲೂ, ನಿನಗೆ=ಸಚ್ಚಿದಾನಂದ ಸ್ವರೂಪನಾದ ನಿನಗೆ, ಇಲ್ಲ=ಸಂಬಂಧವಿರುವದೇ ಇಲ್ಲ.

ತಾತ್ಪರ್ಯ:— ಸತ್ವಗುಣಾತ್ಮಕ ವೈಕಾರಿಕ ಅಹಂಕಾರದಿಂದಲೂ ರಜೋಗುಣಾತ್ಮಕ ತೈಜಸ ಅಹಂಕಾರದಿಂದಲೂ ಕೂಡಿಕೊಂಡು ಈ ಮನಸ್ಸು ಉತ್ಪನ್ನವಾಗಿರುತ್ತದೆ. ಯಾಕಂದರೆ, ಮನಸ್ಸು ನೇತ್ರಾದಿ ಇಂದ್ರಿಯಗಳ ದ್ವಾರಾ ಹೊರಟು, ವಿಷಯಗಳ ಪರ್ಯಂತರ ಗಮನ ಮಾಡುತ್ತದೆ. ಆದ್ದರಿಂದ ಇದರಲ್ಲಿ ರಜೋಗುಣವಿರುತ್ತದೆ. ಬಳಿಕ ವಿಷಯವನ್ನು ತಿಳಿಯುತ್ತದೆ. ಆದ್ದರಿಂದ ಇದರಲ್ಲಿ ಸತ್ವಗುಣವಿರುತ್ತದೆ. ಈ ಕಾರಣಗಳಿಂದ ಮನಸ್ಸು ವೈಕಾರಿಕ ತೈಜಸ ಅಹಂಕಾರಗಳಿಂದ ಉತ್ಪನ್ನವಾಗಿರುತ್ತದೆ. ಶ್ರೋತ್ರ, ತ್ವಕ್ಕು, ಚಕ್ಷು, ಜಿಹ್ವಾ, ಘ್ರಾಣ, ಪಾದ, ಪಾಣಿ, ಪಾಯು, ಉಪಸ್ಥ, ವಾಕ್ಕು, ಮನಸ್ಸು, ಈ ಹನ್ನೊಂದು ಇಂದ್ರಿಯಗಳಿಗೆ ಕ್ರಮವಾಗಿ ದಿಕ್ಕು, ವಾಯು, ಸೂರ್ಯ, ವರುಣ, ಅಶ್ವಿನಿ ಕುಮಾರರು, (ಉಪೇಂದ್ರ) ವಿಷ್ಣು, ಇಂದ್ರ, ಯಮ, ಪ್ರಜಾಪತಿ, ಅಗ್ನಿ, ಚಂದ್ರ ಇವರೇ ಹನ್ನೊಂದು ಅಭಿಮಾನಿ ದೇವತೆಗಳಾಗಿರುವರು. ಈ ದೇವತೆಗಳು ವೈಕಾರಿಕ ಅಹಂಕಾರದ ಕಾರ್ಯವೆಂದೂ, ಮಾಯಾಮಯಗಳೆಂದೂ, ಮನಸ್ಸಿನ ವಿಕಲ್ಪಾತ್ಮಕಗಳೆಂದೂ, ಪೇಳುವರು. ಆದ್ದರಿಂದ ಅಖಂಡ ಸಚ್ಚಿದಾನಂದ ಸ್ವರೂಪನಾದ ನಿನಗೆ ಈ ತತ್ವಗಳು ಎಂದೆಂದೂ ಇಲ್ಲ. ಎಂಬ ತಾತ್ಪರ್ಯವು.

CC-0. Jangamwadi Math Collection. Digitized by eGangotri

ಬಳಿಕ; ವೈಕಾರಿಕ ತೈಜಸ ಅಹಂಕಾರಗಳಿಂದ ಕ್ರಮವಾಗಿ ಜ್ಞಾನೇಂದ್ರಿಯ ಪಂಚಕ ಕರ್ಮೇಂದ್ರಿಯ ಪಂಚಕಗಳು ಉತ್ಪನ್ನವಾದವು ಎಂದು ಪ್ರತಿಪಾದನೆ ಮಾಡುತ್ತಾರೆ:—

ಘೋರವೆನಿಪ ರಾಜಸ ವದರಿಂದ ।
ಭೋರನೆ ವೈಕಾರಿಕ ವದರಿಂದ ॥
ಶ್ರವಣಂ ತ್ವಕ್ಕುಂ ಚಕ್ಷುವೆನಿಪ್ಪ ।
ವಿವರಿಸೆ ಜಿಹ್ವಾ ಘ್ರಾಣವೆನಿಪ್ಪ ॥
ಆ ವಾಕ್ಕುಂ ಕರಪಾದವೆನಿಪ್ಪ ।
ಭಾವಿಸೆ ಗುಹ್ಯಂ ಪಾಯುವೆನಿಪ್ಪ ॥
ಈ ನಿಖಿಳದೊಳಾ ಮುನ್ನಿನವೈದು ।
ಜ್ಞಾನೇಂದ್ರಿಯವಾ ಬಳಿಕಿನವೈದು ॥
ತವೆ ಕರ್ಮೇಂದ್ರಿಯಮಿವು ಜನಿಸಿದವು ।
ಅವು ಜೀವರ್ಗೆಕರಣ ಮೆನಿಸಿದವು ॥
ಬೇರ ವಕುಳುಮೆ ಯರಸಲಿಲ್ಲಾಗಿ ।
ತೋರುತಿಹವು ನಿನ್ನೊಳು ನೆಲೆಯಾಗಿ ॥ ೪ ॥

ಟೀಕಾ:— ಘೋರವೆನಿಪ=ಚಂಚಲಾತ್ಮಕವಾದ. ರಾಜಸವದರಿಂದ= ರಜೋಗುಣಾತ್ಮಕ ತೈಜಸ ಅಹಂಕಾರದಿಂದ, ವೈಕಾರಿಕವದರಿಂದ=ಸತ್ವಗುಣಾತ್ಮಕ ವೈಕಾರಿಕ ಅಹಂಕಾರದಿಂದ, ಭೋರನೆ=ಶೀಘ್ರವಾಗಿ, ಶ್ರವಣಂ=ಕಿವಿಯು, ತ್ವಕ್ಕು=ಚರ್ಮ, ಚಕ್ಷುವೆನಿಪ್ಪ=ಕಣ್ಣೆಂದು ಹೇಳಿಸಿಕೊಳ್ಳುವ, ವಿವರಿಸೆ=ವಿಚಾರ ಮಾಡಲು, ಜಿಹ್ವಾ=ನಾಲಿಗೆ, ಘ್ರಾಣವೆನಿಪ್ಪ=ನಾಸಿಕವೆಂದು ಕರಿಸಿಕೊಳ್ಳುವ, ಆ ವಾಕ್ಕುಂ=ಆ ವಾಗಿಂದ್ರಿಯವು, ಕರಪಾದವೆನಿಪ್ಪ=ಕೈಕಾಲುಗಳೆನ್ನುವಂಥಾ, ಭಾವಿಸೆ=ವಿಚಾರಿಸಲು, ಗುಹ್ಯಂ=ಉಪಸ್ಥವು, ಪಾಯುವೆನಿಪ್ಪ=ಗುದವೆನ್ನುವ, ಈ ನಿಖಿಳದೊಳು=ಈ ರಾಶಿಯಲ್ಲಿ, ಆ ಮುನ್ನಿನವೈದು = ಆ ಮೊದಲಿನವೈದು, ಜ್ಞಾನೇಂದ್ರಿಯವು=ಜ್ಞಾನಕ್ಕೆ ಸಾಧನವಾದ ಇಂದ್ರಿಯಗಳು, ಬಳಿಕಿನವೈದು= ಅನಂತರದಲ್ಲಿ ಹೇಳಿದ ಐದು, ತವೆ = ಚನ್ನಾಗಿ, ಕರ್ಮೇಂದ್ರಿಯವು = ಕೆಲಸಕ್ಕೆ ಸಾಧನವಾದ ಇಂದ್ರಿಯಗಳು, ಇವು = ಈಗ ಹೇಳಿದ ಹತ್ತು ಕರಣಗಳು, ಜನಿಸಿದವು=ಹುಟ್ಟಿದವು, ಅವು=ಆ ಇಂದ್ರಿಯಗಳು, ಜೀವರ್ಗೆ=ಜೀವರುಗಳಿಗೆ, ಕರಣಮೆನಿಸಿದವು=ಸಾಧನಗಳೆನಿಸಿದವು, ಅವಕೆ=ಆ ಇಂದ್ರಿಯಗಳಿಗೆ,ಬೇರೆ=ನಿನ್ನ ಹೊರತು, ಉಳುಮೆಯ = ಆಶ್ರಯಸ್ಥಾನವನ್ನು, ಅರಸಲು = ಹುಡುಕಲು, ಇಲ್ಲಾಗಿ= ಇಲ್ಲದ್ದರಿಂದ, ನಿನ್ನೊಳು = ಸಚ್ಚಿದಾನಂದ ಸ್ವರೂಪನಾದ ನಿನ್ನಲ್ಲಿ, ನೆಲೆಯಾಗಿ=ಸ್ಥಿರವಾಗಿ, ತೋರುತಿಹವು=ತೋರುತ್ತಿರುವವು.

ತಾತ್ಪರ್ಯ:— ವೈಕಾರಿಕ ಅಹಂಕಾರದಿಂದ ಕಿವಿ, ಚರ್ಮ, ನೇತ್ರ, ನಾಲಿಗೆ, ಮೂಗು ಎಂದು ಹೇಳಿಸಿಕೊಳ್ಳುವ ಐದು ಜ್ಞಾನೇಂದ್ರಿಯಗಳು ಉತ್ಪನ್ನ

CC-0. Jangamwadi Math Collection. Digitized by eGangotri

ವಾದವು. ಯಾಕಂದರೆ, ಅವು ಶಬ್ದ, ಸ್ಪರ್ಶ, ರೂಪು, ರಸ, ಗಂಧಗಳನ್ನು ತಿಳಿಯೋಣದರಿಂದ (ಪ್ರಕಾಶಮಾಡೋಣದರಿಂದ) ಸತ್ವಗುಣಾತ್ಮಕ ವೈಕಾರಿಕ ಅಹಂಕಾರದಿಂದ ಹುಟ್ಟಿರುತ್ತವೆ. ಬಳಿಕ ವಾಕ್ಕು, ಪಾದ, ಪಾಣಿ, ಪಾಯು, ಉಪಸ್ಥಗಳೆಂದು ಹೇಳಿಸಿಕೊಳ್ಳುವ ಐದು ಕರ್ಮೇಂದ್ರಿಯಗಳು ಭಾಷಣಾದಿ ವ್ಯವಹಾರಗಳನ್ನು ಮಾಡೋಣದರಿಂದ, ರಜೋಗುಣಾತ್ಮಕವಾದ ತೈಜಸ ಅಹಂಕಾರದಿಂದ ಉತ್ಪನ್ನಗಳಾಗಿರುತ್ತವೆ. ಕತ್ತಲೆಯಲ್ಲಿದ್ದ ಪದಾರ್ಥಗಳನ್ನು ನೋಡುವದಕ್ಕೆ ದೀವಿಗೆಯು ಸಾಧನವಾದಂತೆ, ಜೀವಿಗಳಿಗೆ ವಿಷಯಸುಖಗಳನ್ನು ಅನುಭವಿಸುವದಕ್ಕೆ ಸಾಧನಗಳಾಗಿರುವವು. ಆದರೆ. ಎಲೈ ಶಿಷ್ಯನೇ! ನಿನ್ನ ಚೈತನ್ಯದ ಹೊರತು ಬೇರೊಂದು ಆಶ್ರಯವಿಲ್ಲದ್ದರಿಂದ ಈ ಇಂದ್ರಿಯಗಳು ನಿನ್ನಲ್ಲಿಯೇ ತೋರುತ್ತಿರುತ್ತವೆ.

ಬಳಿಕ; ಭೂತಾದಿ ಅಹಂಕಾರದಿಂದ ಪಂಚಭೂತಗಳ ಉತ್ಪತ್ತಿಯನ್ನೂ ಸಪ್ತಾವರಣವನ್ನೂ ಎರಡು ಪದಗಳಿಂದ ಪ್ರತಿಪಾದಿಸುತ್ತಾರೆ.

ಮೂಢನೆನಿಪ ಭೂತಾದ್ಯಹಮಿಂದ ।
ರೂಢಿರವಂ ಮಾತ್ರರೂಪಿಂದ ॥
ನೆಗಳುತ್ತದರಿಂದವೆ ನಭವಾಯ್ತು ।
ಬಗೆಯುಲದಕೆ ಶಬ್ದವೆ ಗುಣವಾಯ್ತು ॥
ಆ ಗಗನವೆ ಮುಕದಹಮುಗಳಿಂದ ।
ಆಗಳೆಯಾವೃತ ಮಾಯ್ತುದರಿಂದ ॥
ಸ್ಪರುಶವೆ ತನ್ಮಾತ್ರಾರೂಪಿಂದ ।
ಪಿರಿದಾಯಿತು ಮಾರುತನದರಿಂದ ।
ಬೇರಾ ಸ್ಪರ್ಶವದಕೆ ಗುಣವಾಯ್ತು ।
ಮೂರಾವರಣವನುಳ್ಳದ್ದಾಯ್ತು ॥
ರೂಪವೆ ತನ್ಮಾತ್ರಾರೂಪಿಂದ.।
ದೀಪಿಸಿ ತಗ್ನಿಯು ಕೇಳದರಿಂದ ।
ಅದಕಾರೂಪವೆ ಗುಣವಾಯಿತ್ತು ।
ಅದು ಚತುರಾವರಣಂ ದಳೆಯಿತ್ತು ॥
ರಸವೇ ತನ್ಮಾತ್ರಾರೂಪಿಂದ ।
ಪಸರಿಸಿ ತಾಗಳೆ ಜಲವದರಿಂದ ॥
ಅದಕಾರಸವೇ ಗುಣವಾಯಿತ್ತು ।
ಅದು ಪಂಚಾವರಣಂ ದಳೆಯಿತ್ತು ॥
ಗಂಧವೆ ತನ್ಮಾತ್ರಾ ರೂಪಿಂದ ।
ಬಂಧುರವಾಯಿತು ಧರೆಯದರಿಂದ ॥

CC-0. Jangamwadi Math Collection. Digitized by eGangotri

ತೋರಲು ಗಂಧವದಕೆ ಗುಣವಾಯ್ತು ।
ಆರಾವರಣವನದು ದಳೆಯಿತ್ತು ॥
ಅದರಿಂ ಭೌತಿಕ ತನುವಾಯಿತ್ತು ।
ಅದು ಸಪ್ತಾವರಣಂ ದಳೆಯಿತ್ತು ॥ ೬ ॥

ಟೀಕಾ:—ಮೂಢವೆನಿಪ=ತಮೋಗುಣಭೂತವಾದ, ಭೂತಾದ್ಯಹವಿಂದ= ಭೂತಾದಿ ಅಹಂಕಾರದಿಂದ, ರೂಢಿ=ಪ್ರಸಿದ್ಧವಾದ, ರವಂ ಮಾತ್ರಾರೂಪಿಂದ=* ಶಬ್ದ ತನ್ಮಾತ್ರೆರೂಪಿಂದ, ನೆಗಳುತ್ತ=ಉಂಟಾಗುತ್ತ, ಅದರಿಂದವೆ=ಆ ಶಬ್ದ ತನ್ಮಾತ್ರೆಯಿಂದಲೇ, ನಭವಾಯ್ತು=ಆಕಾಶವಾಯಿತು, ಬಗೆಯಲ್=ವಿಚಾರ ಮಾಡಲು, ಅದಕೆ=ಆಕಾಶಕ್ಕೆ, ಶಬ್ದವೆ=ಶಬ್ದವೆ, ಗುಣವಾಯ್ತು=ಗುಣವಾಯ್ತು, ಅದರಿಂದ=ಆದ್ದರಿಂದ, ಆ ಗಗನವೆ=ಆ ಆಕಾಶವೆ, ಮಹದಹಮುಗಳಿಂದ=ಮಹ ತತ್ವ ಅಹಂಕಾರಗಳಿಂದ, ಆಗಳೆ=ಉತ್ಪತ್ತಿಯಾದಕೂಡಲೆ, ಆವೃತವಾಯ್ತು= ಆವರಣವುಳ್ಳದ್ದಾಯಿತು, ಸ್ಪರುಶವೆ ತನ್ಮಾತ್ರಾರೂಪಿಂದ=ಸ್ಪರ್ಶ ತನ್ಮಾತ್ರಾ ರೂಪದಿಂದ, ಮಾರುತನು=ವಾಯುವು, ಪಿರಿದಾಯಿತು=ದೊಡ್ಡದಾಯಿತು, ಅದ ರಿಂದ=ಆದ್ದರಿಂದ, ಅದಕೆ=ಆ ವಾಯುವಿಗೆ, ಬೇರಾ ಸ್ಪರ್ಶವು=ಮತ್ತೊಂದು ಸ್ಪರ್ಶವು, ಗುಣವಾಯ್ತು=ಗುಣವಾಯಿತ್ತು, ಮೂರು ವರಣವನುಳ್ಳದ್ದಾಯಿತು= ಮಹತ್ತು-ಅಹಂಕಾರ-ಆಕಾಶಗಳೆಂಬ ಮೂರು ಆವರಣಗಳಿಂದ ಯುಕ್ತವಾಯಿತು. ರೂಪವೆ ತನ್ಮಾತ್ರಾ ರೂಪಿಂದ=ರೂಪ ತನ್ಮಾತ್ರದಿಂದ, ಅಗ್ನಿಯು=ಅಗ್ನಿಯು, ದೀಪಿಸಿತು=ಪ್ರಜ್ವಲಿಸಿತು, ಕೇಳ್=ಶಿಷ್ಯನೇ ಆಲಿಸು, ಅದರಿಂದ=ಆದ್ದರಿಂದ, ಅದಕೆ=ಆ ಅಗ್ನಿಗೆ, ರೂಪವೆ ಗುಣವಾಯಿತ್ತು=ರೂಪ ಗುಣವಾಯಿತು, ಅದು=ಆ ಅಗ್ನಿಯು, ಚತುರಾವರಣಂ=ನಾಲ್ಕು ಆವರಣಗಳನ್ನು, ದಳೆಯಿತ್ತು=ಪಡೆದಿತ್ತು, ರಸವೇ ತನ್ಮಾತ್ರಾ ರೂಪಿಂದ=ರಸ ತನ್ಮಾತ್ರಾ ರೂಪದಿಂದ, ಜಲವು=ನೀರು, ಪಸರಿಸಿತು=ವಿಸ್ತಾರವಾಯಿತು, ಆದರಿಂದ=ಆದ್ದರಿಂದ, ಆಗಳೆ=ಉತ್ಪತ್ತಿ ಸಮ ಕಾಲಕ್ಕೆ, ಅದಕೆ=ಆ ಜಲಕ್ಕೆ, ರಸವೇ ಗುಣವಾಯಿತ್ತು=ರಸ ಗುಣವಾಯಿತು, ಅದು=ಆ ಜಲವು, ಪಂಚಾವರಣಂ=ಐದು ಆವರಣಗಳನ್ನು, ದಳೆಯಿತ್ತು= ಹೊಂದಿತ್ತು, ಗಂಧವೇ ತನ್ಮಾತ್ರಾ ರೂಪಿಂದ=ಗಂಧ ತನ್ಮಾತ್ರೆಯಿಂದ, ಧರೆಯು= ಪೃಥ್ವಿಯು, ಬಂಧುರವಾಯಿತು=ಗಟ್ಟಿಯಾಯಿತು, ತೋರಲು=ಹೀಗೆ ಪ್ರತೀತಿ ಯಾಗಲು, ಅದಕೆ=ಭೂಮಿಗೆ, ಗಂಧವೆ ಗುಣವಾಯ್ತು=ಗಂಧ ಗುಣವಾಯಿತು, ಅದರಿಂದ=ಆದ್ದರಿಂದ, ಅದು=ಆ ಭೂಮಿಯು, ಆರಾವರಣವಂ=ಆರು ಆವರಣ ಗಳನ್ನು, ದಳೆಯಿತ್ತು=ಹೊಂದಿತು, ಅದರಿಂ=ಹೀಗಾದ್ದರಿಂದ, ಭೌತಿಕ ತನುವು=

*ಶಬ್ದ ತನ್ಮಾತ್ರೆ ಅಂದರೆ, ಬರೇ ಶಬ್ದವಿದೆಯೇ ಹೊರತು ಬೇರೊಂದು ಬೆರಿಕೆಯಿಲ್ಲ ಎಂದು ಮಾತ್ರ ಪದವು ನಿಷೇಧಮಾಡುತ್ತದೆ.

CC-0. Jangamwadi Math Collection. Digitized by eGangotri

ಪಂಚಭೂತಗಳ ಸಂಬಂಧವಾದ ಶರೀರವು, ಆಯ್ತು=ಆಯಿತು, ಅದು=ಆ ಶರೀರವು, ಸಪ್ತಾವರಣಂ=ಮಹತ್ತು, ಭೂತಾದಿ ಅಹಂಕಾರ, ಆಕಾಶ, ವಾಯು, ಅಗ್ನಿ, ಭೂಮಿಗಳೆಂಬ ಏಳು ಆವರಣಗಳನ್ನು, ದಳೆಯಿತ್ತು=ಹೊಂದಿತ್ತು.

ಬಳಿಕ; ಕಾರಣಗಳಲ್ಲಿರುವ ಗುಣಗಳು ಕಾರ್ಯಗಳಲ್ಲಿ ಅನುಸ್ಯೂತಗಳಾಗಿರುತ್ತವೆ ಎಂದು ಪ್ರತಿಪಾದಿಸುತ್ತಾರೆ.

ನಭವನಿಲಾದಿಗಳಂ ತೀವಿಹುದು ।
ಶುಭರವ ವದರಿಂದವಕಾಗಿಹುದು ॥
ಮರುತ ನುಳಿದ ಮೂರಂ ತೀವಿಹುದು ।
ಸ್ಪರುಶನ ವದರಿಂದವಕಾಗಿಹುದು ॥
ಆ ಪಾವಕನೆರಡಂ ತೀವಿಹುದು ।
ರೂಪದರಿಂದವಕುಂಟಾಗಿಹುದು ॥
ವಸುಧೆಯನುದಕಂ ತೀವಿರುತಿಹುದು ।
ರಸವದರಿಂದದಕುಂಟಾಗಿಹುದು ॥
ಅದುಕಾರಣವಂಬರ ಮೊದಲಾಗಿ ।
ವಿಧಿತಂ ಗಂಧವತಿಯೆ ಕಡೆಯಾಗಿ ॥
ಒಂದೇಡುಂ ಮೂರುಂ ನಾಲ್ಕೈದು ।
ಪೊಂದಿರೆ ಗುಣಗಳ್ಭೂತಮಿವೈದು ॥ ೭ ॥

ಟೀಕಾ:— ನಭವು = ಆಕಾಶವು, ಅನಿಲಾದಿಗಳಂ = ವಾಯ್ವಾದಿ ನಾಲ್ಕು ಭೂತಗಳನ್ನು, ತೀವಿಹುದು=ತುಂಬಿಕೊಂಡಿರುವದು, ಅದರಿಂದ=ಈ ಕಾರಣದಿಂದ, ಅವಕೆ=ಆ ಭೂತಗಳಿಗೆ, ಶುಭ=ಮನೋಹರವಾದ, ರವವು=ಶಬ್ದವು, ಆಗಿಹುದು= ಆಗಿರುವದು, ಮರುತನು=ವಾಯು, ಉಳಿದ = ಅವಶಿಷ್ಟವಾದ, ಮೂರಂ=ಅಗ್ನಿ ಜಲ ಭೂಮಿಗಳನ್ನು, ತೀವಿಹುದು=ತುಂಬಿರುವದು, ಅವರಿಂದ= ಈ ಕಾರಣದಿಂದ, ಅವಕೆ=ಆ ಭೂತಗಳಿಗೆ, ಸ್ಪರುಶನವು=ಸ್ಪರ್ಶಗುಣವು, ಆಗಿಹುದು=ಆಗಿರುವದು, ಆ ಪಾವಕನು=ಆ ಅಗ್ನಿಯು, ಎರಡಂ=ಜಲ ಭೂಮಿಗಳನ್ನು, ತೀವಿಹುದು=ವ್ಯಾಪಿಸಿರುವದು, ಅದರಿಂದ=ಈ ಕಾರಣದಿಂದ, ಅವಕೆ= ಆ ಭೂತಗಳಿಗೆ, ರೂಪು=ರೂಪಗುಣವು, ಉಂಟಾಗಿರುವದು=ಉತ್ಪನ್ನವಾಗಿರುವದು, ಉದಕಂ=ಜಲವು, ವಸುಧೆಯಂ=ಭೂಮಿಯನ್ನು, ತೀವಿರುತಿಹುದು= ತುಂಬಿಕೊಂಡಿರುವದು, ಅದರಿಂದ=ಈ ಕಾರಣದಿಂದ, ಅದಕೆ=ಪೃಥ್ವಿಗೆ, ರಸವು= ಮಾಧುರ್ಯಗುಣವು, ಉಂಟಾಗಿಹುದು=ಉತ್ಪನ್ನವಾಗಿರುವದು, ಅದು ಕಾರಣಂ= ಈ ಹೇತುವಿನಿಂದ, ಅಂಬರ ಮೊದಲಾಗಿ = ಆಕಾಶವೇ ಮೊದಲುಗೊಂಡು,

CC-0. Jangamwadi Math Collection. Digitized by eGangotri

ವಿದಿತಂ=ಪ್ರಸಿದ್ಧವಾದ, ಗಂಧವತಿಯೇ=ಪೃಥ್ವಿಯೇ, ಕಡೆಯಾಗಿ=ಅಂತ್ಯವಾಗಿ, ಒಂದೆರಡಂ=ಒಂದು ಎರಡನ್ನು, ಮೂರುಂ=ಮೂರನ್ನು, ನಾಲ್ಕೈದು=ನಾಲ್ಕು ಐದು, ಗುಣಗಳ್=ಗುಣಗಳನ್ನು, ಪೊಂದಿರೆ=ಹೊಂದಿಕೊಂಡಿರುವಂಥಾ, ಇವು= ಇವೇ, ಐದು ಭೂತ=ಪಂಚಭೂತಗಳು.

ತಾತ್ಪರ್ಯ:— ಆಕಾಶವು, ವಾಯು, ಅಗ್ನಿ, ಜಲ, ಭೂಮಿಗಳಲ್ಲಿ ತುಂಬಿ ಕೊಂಡಿರುವದು. ಆದ್ದರಿಂದಲೇ ಆಕಾಶದ ಗುಣವಾದ ಶಬ್ದವು ವಾಯುವಿನಲ್ಲಿ ವೀಸ್ ವೀಸ್, ಅಗ್ನಿಯಲ್ಲಿ ಭುಗು ಭುಗು, ಜಲದಲ್ಲಿ ಜುಳು ಜುಳು, ಭೂಮಿ ಯಲ್ಲಿ ಕಡ ಕಡ ಎಂಬದಾಗಿ ತೋರುತ್ತವೆ. ಆದ್ದರಿಂದ ವಾಯ್ವಾದಿ ಭೂತಗಳು ಶಬ್ದಗುಣವುಳ್ಳವುಗಳಾಗಿರುತ್ತವೆ. ಇದರಂತೆ, ವಾಯುವು. ಅಗ್ನಿ, ಜಲ, ಭೂಮಿ ಗಳಲ್ಲಿ ತುಂಬಿಕೊಂಡಿರುವ ಕಾರಣದಿಂದಲೇ ವಾಯುವಿನಲ್ಲಿರುವ ಅನುಷ್ಣಾ ಶೀತ ಲಕ್ಷಣಾತ್ಮಕ ಸ್ಪರ್ಶವು, ಅಗ್ನಿಯಲ್ಲಿ ಉಷ್ಣಸ್ಪರ್ಶ, ಜಲದಲ್ಲಿ ಶೀತಸ್ಪರ್ಶ, ಭೂಮಿಯಲ್ಲಿ ಕಠಿನಸ್ಪರ್ಶವಾಗಿ ತೋರುತ್ತವೆ. ಆದ್ದರಿಂದ ಅಗ್ನಿ ಮೊದಲಾದ ಭೂತಗಳು ಸ್ಪರ್ಶಗುಣವುಳ್ಳವುಗಳಾಗಿರುತ್ತವೆ. ಅಗ್ನಿಯು, ಜಲಭೂಮಿಗಳಲ್ಲಿ ವ್ಯಾಪಕವಾಗಿರುವದು. ಆದ್ದರಿಂದಲೇ ಅಗ್ನಿಯ ಗುಣವಾದ ರೂಪು ಜಲದಲ್ಲಿ (ಶುಕ್ಲ) ಬಿಳೀ ಭೂಮಿಯಲ್ಲಿ ಕಪ್ಪು ಅಥವಾ ಹಳದೀ ರೂಪವಾಗಿರುತ್ತದೆ. ಈ ಕಾರಣದಿಂದಲೇ ಜಲ ಭೂಮಿಗಳು ರೂಪವುಳ್ಳವುಗಳಾಗಿರುತ್ತವೆ. ಜಲವು ಭೂಮಿಯನ್ನು ತುಂಬಿಕೊಂಡಿರುತ್ತದೆ. ಆದ್ದರಿಂದ ಜಲದ ಗುಣವಾದ ರಸವು ಭೂಮಿಯಲ್ಲಿ ಸೀ, ಹುಳಿ, ಉಪ್ಪು ಮೊದಲಾದ ಆರು ಭೇದವುಳ್ಳದ್ದಾಗಿರುತ್ತದೆ. ಈ ಕಾರಣದಿಂದ ಭೂಮಿಯು ರಸವುಳ್ಳದ್ದೆಂದು ಹೇಳಿಸಿಕೊಳ್ಳುತ್ತದೆ. ಆದ್ದರಿಂದ ಆಕಾಶ, ವಾಯು, ಅಗ್ನಿ, ಜಲ, ಭೂಮಿಗಳೆಂಬ ಐದು ಭೂತಗಳು ಕ್ರಮದಿಂದ ಶಬ್ದವೊಂದು, ಶಬ್ದಸ್ಪರ್ಶಗಳೆರಡು, ಶಬ್ದಸ್ಪರ್ಶ ರೂಪು ಮೂರು, ಶಬ್ದಸ್ಪರ್ಶ ರೂಪು ರಸ ನಾಲ್ಕು, ಶಬ್ದಸ್ಪರ್ಶ ರೂಪು ರಸ ಗಂಧ ಐದು ಈ ಪ್ರಕಾರ ಗುಣ ಗಳನ್ನು ಹೊಂದಿಕೊಂಡಿರುತ್ತದೆ.

ಬಳಿಕ; ಎಲೈ ಶಿಷ್ಯನೇ, ಎಲ್ಲ ಭೂತಗಳು ನಿನ್ನನ್ನೇ ಆಶ್ರಯಮಾಡಿದ್ದರಿಂದ ನೀನು ಅಧಿಷ್ಠಾನ ರೂಪನೂ ಅರ್ಥಾತ್ ಸದ್ರೂಪನೂ ಮಾನಸೇಂದ್ರಿಯಗಳಿಂದ ವಿಷಯಗಳನ್ನು ತಿಳಿಯುವದರಿಂದ ಚಿದ್ರೂಪನೂ ಆಗಿರುವಿ ಎಂದು ಹೇಳುತ್ತಾರೆ.

ಸನ್ನುತ ಸಚ್ಚಿಲ್ಲಕ್ಷಣಮುಳ್ಳ |
ನಿನ್ನೀ ನಿಜವನೆ ನೆಮ್ಮಿಹವೆಲ್ಲ ||
ಶ್ರವಣೇಂದ್ರಿಯದೊಳ್ತಿಳಿನಭಮಿರ್ಕ |
ತವೆ ಚರ್ಮದೊಳಾ ಮಾರುತನಿರ್ಕು ||

CC-0. Jangamwadi Math Collection. Digitized by eGangotri

ಎಸೆವಾ ಲೋಚನದೊಳು ಶಿಖಿಯಿರ್ಕು |
ರಸನೇಂದ್ರಿಯದೊಳು ಜಲಮಿರುತಿರ್ಕು ||
ಅಂತಃನಾಸಿಕದೊಳು ಧರೆಯಿರ್ಕು |
ಇಂತಿಂದ್ರಿಯದೊಳು ಭೂತಮಿವಿರ್ಕು ||
ನಿಜಮನದೊಳು ಶಬಲತೆಯಂ ಬಡೆದು |
ರುಜುವೆನಿಪಿಂದ್ರಿಯ ಪಥದೊಳ್ನಡೆದು ||
ಅನಿತು ವಿಷಯವೆಲ್ಲವ ನೀನರಿವೆ |
ತನುಜನೆ ನೀನದರಿಂ ಬರಿಯರಿವೆ ||೮||

ಟೀಕಾ:— ಸನ್ನುತ = ಚನ್ನಾಗಿ ಹೊಗಳಿಸಿಕೊಳ್ಳುವಂಥಾ, ಸಚ್ಚಿಲ್ಲಕ್ಷಣ ಮುಳ್ಳ = ಸತ್ ಚಿತ್ ಆನಂದಾದಿ ಸ್ವರೂಪ ಲಕ್ಷಣವುಳ್ಳಂಥಾ, ಸಿಸ್ನ = ಎಲೈ ಶಿಷ್ಯನೇ ನಿನ್ನ, ಈ ನಿಜವನೆ = ಅಪರೋಕ್ಷ ಭೂತವಾದ ಪ್ರತ್ಯಗಾತ್ಮ ಸ್ವರೂಪ ವನ್ನೇ, ಎಲ್ಲ=ಸಕಲ ಭೂತಗಳು, ನೆಮ್ಮಿಹವು=ಆಶ್ರಯಮಾಡಿಕೊಂಡಿರುವವು, ಶ್ರವಣೇಂದ್ರಿಯದೊಳ್=ಕಿವಿಯಲ್ಲಿ, ನಭಂ=ಆಕಾಶವು, ಇರ್ಕು=ಇರುವದು, ತಿಳಿ=ವಿಚಾರಮಾಡಿ ನೋಡು, ತವೆ=ಚನ್ನಾಗಿ, ಚರ್ಮದೊಳು=ತ್ವಗಿಂದ್ರಿಯದಲ್ಲಿ, ಆ ಮಾರುತನು=ಆ ವಾಯುವು, ಇರ್ಕು=ಇರುವದು, ಎಸೆವ=ಶೋಭಾಯಮಾನ ವಾದ, ಆ ಲೋಚನದೊಳು=ಆ ನೇತ್ರಂಗಳಲ್ಲಿ, ಶಿಖಿಯಿರ್ಕು=ಅಗ್ನಿ ಯಿರುವದು, ರಸನೇಂದ್ರಿಯದೊಳು=ನಾಲಿಗೆಯಲ್ಲಿ, ಜಲಂ=ನೀರು, ಇರುತಿರ್ಕು=ಇರುತ್ತಿರು ವದು, ಅಂತಾನಾಸಿಕದೊಳು=ಹಿಂದೆ ಹೇಳಲ್ಪಟ್ಟ ಮೂಗಿನಲ್ಲಿ, ಧರೆಯಿರ್ಕು= ಭೂಮಿಯಿರುವದು, ಇಂತು=ಈ ಪ್ರಕಾರ, ಇಂದ್ರಿಯದೊಳು=ಇಂದ್ರಿಯಗಳಲ್ಲಿ, ಭೂತಮಿವಿರ್ಕು=ಈ ಐದು ಭೂತಗಳಿರುವವು, ನಿಜಮನದೊಳು=ನಿಜದೊಳಗೆ ಕಲ್ಪಿತವಾದ ಮನಸ್ಸಿನಲ್ಲಿ, ಶಬಲತೆಯಂ=ಉಪಾಧಿಯನ್ನು, ಬಡೆದು=ಹೊಂದಿ, ರುಜುವೆನಿಪ=ಸರಳವೆನಿಸುವ, ಇಂದ್ರಿಯ ಪಥದೊಳ್=ಇಂದ್ರಿಯ ಮಾರ್ಗ ಗಳಲ್ಲಿ, ನಡೆದು=ವಿಷಯಗಳ ಪರ್ಯಂತರ ಹೋಗಿ, ಅನಿತು=ಅಷ್ಟು, ವಿಷಯ ವೆಲ್ಲ=ಸಕಲ ವಿಷಯಗಳನ್ನು, ನೀನು=ಪ್ರತ್ಯಗಾತ್ಮನಾದ ನೀನು, ಅರಿವೆ=ತಿಳಿ ಯುವೆ, ತನುಜನೆ=ಎಲೈ ಮಗನೇ, ಅದರಿಂ=ಈ ಕಾರಣದಿಂದ, ನೀನು=ನೀನು, ಬರಿಯರಿವೆ=ಕೇವಲ ಚಿದ್ರೂಪನಾಗಿದ್ದೀ.

ತಾತ್ಪರ್ಯ:—ಉಪನಿಷತ್ತುಗಳಿಂದಲೂ ಬ್ರಹ್ಮವೇತ್ತರಿಂದಲೂ ಪ್ರತಿಪಾದಿ ಸಲಿಕ್ಕೆ ಯೋಗ್ಯವಾದ ಸಚ್ಚಿದಾನಂದ ಸ್ವರೂಪನಾದ ಎಲೈ ಶಿಷ್ಯನೇ ! ಪ್ರಕೃತಿ ಮಹತತ್ವ, ಅಹಂಕಾರ, ಪಂಚ ತನ್ಮಾತ್ರೆ, ಪಂಚ ಮಹಾಭೂತ ಇವುಗಳೆಲ್ಲಾ ನಿನ್ನನ್ನೇ ಆಶ್ರಯ ಮಾಡಿಕೊಂಡಿರುವವು. ಆದ್ದರಿಂದ ನೀನು ಸಕಲ ಭೂತ ಭೌತಿಕ ವಸ್ತುಗಳಲ್ಲಿ ಸದ್ರೂಪದಿಂದ ಅನುಸ್ಯೂತನಾಗಿರುವಿ. ಅಂದರೆ ಅಧಿಷ್ಠಾನ

CC-0. Jangamwadi Math Collection. Digitized by eGangotri

ನಾಗಿರುವಿ ಎಂಬ ತಾತ್ಪರ್ಯವು. ಮತ್ತು ಕಾರಣಗಳಾದ ಮಣ್ಣು, ಭಂಗಾರ, ಕಬ್ಬಿಣ ಇವುಗಳ ಕಾರ್ಯಗಳಾದ ಹರಿವೆ, ಗಡಗಿ, ಸರಿಗಿ, ವಂಕಿ, ಕತ್ತರಿ, ಚೂರಿಗಳಲ್ಲಿ ಮಣ್ಣು ಭಂಗಾರ ಕಬ್ಬಿಣಗಳು ಇರುವಂತೆ, ಕಾರಣಗಳಾದ ಆಕಾಶ, ವಾಯು, ಅಗ್ನಿ, ಜಲ, ಭೂಮಿ ಇವುಗಳ ಕಾರ್ಯಗಳಾದ ಶ್ರೋತ್ರ, ತ್ವಕ್ಕು, ನೇತ್ರ, ಜಿಹ್ವಾ, ನಾಸಿಕ ಇವುಗಳಲ್ಲಿ ಕ್ರಮದಿಂದ ಆಕಾಶಾದಿ ಪಂಚಭೂತಗಳು ಇರುತ್ತವೆ, ಅಂದರೆ, ಏಕಾದಶೇಂದ್ರಿಯಗಳೆಲ್ಲಾ ಭೂತಕಾರ್ಯ ಅನಾತ್ಮಗಳಾಗಿರುತ್ತವೆ. ಎಂಬ ತಾತ್ಪರ್ಯವು.

ಶಂಕಾ:— ಆತ್ಮನು ಚಿದ್ರೂಪನಾಗಿದ್ದರೆ ಸಕಲ ವಿಷಯಗಳನ್ನು ಏಕಕಾಲದಲ್ಲಿ ತಿಳಿಯುತ್ತಿರಬೇಕು. ಅವನಿಗೆ ಇಂದ್ರಿಯಗಳು ಏಕೆ ಬೇಕು?

ಸಮಾಧಾನ:— ಸೂರ್ಯನು ಸಕಲ ಪದಾರ್ಥಗಳನ್ನು ಬೆಳಗುವಂತೆ ಆತ್ಮನು ಎಲ್ಲ ಜಗತ್ತನ್ನೂ ಬೆಳಗುತ್ತಿರುತ್ತಾನೆ. ಆದರೆ, ಸೂರ್ಯನ ಪ್ರಕಾಶವು ಸೂರ್ಯಕಾಂತಿಮಣಿಯಲ್ಲಿ ಬಿದ್ದರೆ ವಿಶೇಷವಾಗಿ ಕಾಷ್ಠಾದಿಗಳನ್ನು ಸುಡುವಂತೆ, ಆತ್ಮನು ಮನಸ್ಸೆಂಬ ಮಣಿಯಲ್ಲಿ ಪ್ರತಿಬಿಂಬಿಸಿ ಸರಳವಾದ ಶ್ರೋತ್ರಾದಿ ಇಂದ್ರಿಯಗಳ ಮಾರ್ಗದಿಂದ ಶಬ್ದಾದಿ ವಿಷಯಗಳನ್ನು ತಿಳಿಯುತ್ತಿರುತ್ತಾನೆ. ಆದ್ದರಿಂದ ಆತ್ಮನು ಕೇವಲ ಚಿದ್ರೂಪನಾಗಿರುತ್ತಾನೆ.

ಬಳಿಕ; ಏಳು ಪ್ರಕೃತಿ ವಿಕೃತಿಗಳನ್ನೂ ಹದಿನಾರು ವಿಕೃತಿಗಳನ್ನೂ ಪ್ರತಿಪಾದನಮಾಡುತ್ತಾರೆ.

ಪ್ರಕೃತಿಗೆ ಸಹಜಾಶ್ರಯ ಮಾಗಿರ್ದ |
ಸುಕೃತಿಯೆ ನಿನ್ನೊಳು ಪೊಳೆವುತ್ತಿರ್ದ ||
ತವೆ ಮೊದಲೆನಿಸುವ ಮಹದಹಮುಗಳು |
ರವಮಾದಿಗಳಹ ತನ್ಮಾತ್ರೆಗಳು ||
ಪ್ರಕೃತಿಯು ವಿಕೃತಿಗಳೆನಿಸುವಿವೇಳು |
ಪ್ರಕೃತಿಗಳೆಂದೆನಿಸಿರ್ಪವು ಕೇಳು ||
ಅವರಿಂದುದಿಸಿದ ಭೂತಮಿವೈದು |
ವಿವಿಧವೆನಿಸುವಿಂದ್ರಿಯ ಮೀರೈದು ||
ವ ನವೆಂಬಧಿಕೇಂದ್ರಿಯ ಮಿಕ್ಕುದೊಂದು |
ಇನಿತನು ಷೋಡಶ ವಿಕೃತಿಗಳೆಂದು ||
ಪೇಳುವರಿವು ಜಗದಾಕಾರವನು |
ತಾಳಿಹವೆಂಬುದನರಿಯಲೆ ಸೂನು ||೯||

ಟೀಕಾ:— ಸುಕೃತಿಯೆ=ಪುಣ್ಯಶಾಲಿಯೆ! ಪ್ರಕೃತಿಗೆ=ತ್ರಿಗುಣಾತ್ಮಕ ಪ್ರಕೃತಿಗೆ, ಸಹಜಾಶ್ರಯಮಾಗಿರ್ದ=ಸ್ವರೂಪದಿಂದಧಿಷ್ಠಾನವಾಗಿರುವಂಥಾ

CC-0. Jangamwadi Math Collection. Digitized by eGangotri

ನಿನ್ನೊಳು=ನಿನ್ನ ಸಚ್ಚಿದಾನಂದ ಸ್ವರೂಪದಲ್ಲಿ, ಪೊಳೆವುತ್ತಿರ್ದ=ಪ್ರಕಾಶಮಾನ ವಾಗಿ ತೋರುತ್ತಿರುವಂಥಾ, ತವೆ=ಚನ್ನಾಗಿ, ಮೊದಲೆನಿಸುವ=ಜಗದುತ್ಪತ್ತಿಗೆ ಪೂರ್ವವೆಂದು ಹೇಳಿಸಿಕೊಳ್ಳುವ, ಮಹದಹಮುಗಳು=ಮಹತ್ತು ಅಹಂಕಾರಗಳು, ರವವಾದಿಗಳು=ಶಬ್ದ ಸ್ಪರ್ಶ ರೂಪ ರಸ ಗಂಧಗಳೆಂದು, ಅಹ=ಹೇಳಿಸಿಕೊಳ್ಳುತ್ತಿ ರುವ, ತನ್ಮಾತ್ರೆಗಳು=ಪಂಚಭೂತಗಳ ಬೀಜಗಳು, ಪ್ರಕೃತಿಯ=ತ್ರಿಗುಣಾತ್ಮಕ ಪ್ರಕೃತಿಯ, ವಿಕೃತಿಗಳೆನಿಸುವವು=ಕಾರ್ಯಗಳೆಂದು ಹೇಳಿಸಿಕೊಳ್ಳುವವು, ಕೇಳು=ಏಕಾಗ್ರಚಿತ್ತದಿಂದ ಆಲಿಸು, ಇವೇಳು=ಈಗ ಹೇಳಿದ ಮಹದಾದಿ ಗಂಧ ತನ್ಮಾತ್ರೆ ಅಂತ್ಯವಾದ ಏಳು, ಪ್ರಕೃತಿಗಳು=ಕಾರಣಗಳು, ಎನಿಸಿರ್ಪವು=ಅನ್ನಿಸಿ ಕೊಳ್ಳುವವು, ಅವರಿಂದ=ಆ ಪಂಚತನ್ಮಾತ್ರೆಗಳಿಂದ, ಉದಿಸಿದ=ಉತ್ಪನ್ನವಾದ, ಭೂತಮಿವೈದು=ಇವೇ ಆಕಾಶಾದಿ ಪಂಚಭೂತಗಳು, ವಿವಿಧವೆನಿಸುವ=ಹಲವು ಪ್ರಕಾರಗಳೆಂದು ಹೇಳಿಸಿಕೊಳ್ಳುವ, ಈರೈದು=ಹತ್ತು, ಇಂದ್ರಿಯವು=ಜ್ಞಾನೇಂ ದ್ರಿಯ ಕರ್ಮೇಂದ್ರಿಯಗಳು, ಮನವೆಂಬ=ಮನಸ್ಸೆಂದು ಹೇಳಿಸಿಕೊಳ್ಳುವ, ಅಧಿ ಕೇಂದ್ರಿಯಂ=ಹೆಚ್ಚಿನ ಇಂದ್ರಿಯವು, ಒಂದು ಇಹುದು=ಮತ್ತೊಂದಿರುವದು, ಇನಿ ತನು=ಆಕಾಶಾದಿ ಮನಸ್ಸುಗಳನ್ನು, ಷೋಡಶ=ಹದಿನಾರು, ವಿಕೃತಿಗಳೆಂದು= ಕಾರ್ಯಗಳೆಂದು, ಪೇಳುವರು=ಹೇಳುವರು, ಇವು=ಈಗ ಹೇಳಿದ ತತ್ವಗಳು, ಜಗ ದಾಕಾರವನು=ಈ ನಾಮರೂಪಾತ್ಮಕ ಜಗತ್ತಿನ ರೂಪವನ್ನು, ತಾಳಿಹವು=ಹೊಂದಿ ರುವವು, ಎಂಬುದನು=ಎಂಬುದನು , ಎಲೆ ಸೂನು=ಎಲೈ ಮಗನೇ, ಅರಿ=ತಿಳಿ.

ತಾತ್ಪರ್ಯ:— ಅನೇಕ ಜನ್ಮಂಗಳಲ್ಲಿ ನಿಷ್ಕಾಮ ಪುಣ್ಯಕರ್ಮಗಳನ್ನು ಮಾಡುವದರಿಂದ ಪರಿಶುದ್ಧಾಂತಃಕರಣವುಳ್ಳಂಥಾ ಎಲೈ ಶಿಷ್ಯನೇ ! ಕೇಳು. ತ್ರಿಗುಣಾತ್ಮಕ ಮೂಲ ಪ್ರಕೃತಿಗೆ ಆಶ್ರಯವಾಗಿರುವಂಥಾ ಸಚ್ಚಿದಾನಂದ ಸ್ವರೂಪ ನಾದ ನಿನ್ನಲ್ಲಿ, ಮೊಟ್ಟಮೊದಲು ಪ್ರಕೃತಿಯಿಂದ ಮಹತತ್ವ, ಅಹಂಕಾರ, ಶಬ್ದ, ಸ್ಪರ್ಶ, ರೂಪು. ರಸ, ಗಂಧಗಳೆಂಬ ಪಂಚ ತನ್ಮಾತ್ರೆಗಳು ಒಟ್ಟುಗೂಡಿ ಏಳು ಆಗುತ್ತವೆ; ಇವು ಪ್ರಕೃತಿಯಿಂದ ಉತ್ಪತ್ತಿಯಾದ್ದರಿಂದ ವಿಕೃತಿಗಳೆನಿಸುವವು. ಮತ್ತು ಉತ್ತರೋತ್ತರ ಕಾರ್ಯಕ್ಕೆ ಪೂರ್ವಪೂರ್ವ ಕಾರಣವಾಗುವದರಿಂದ ಈ ಏಳೂ ಪ್ರಕೃತಿಗಳೆಂದೂ ಹೇಳಿಸಿಕೊಳ್ಳುವವು. ಹೇಗಂದರೆ, ಪ್ರಕೃತಿಯಿಂದ ಮಹತತ್ವವುತ್ಪನ್ನವಾದ್ದರಿಂದ ಮಹತತ್ವವು ವಿಕೃತಿಯಾಯಿತು. ಈ ಮಹತತ್ವ ದಿಂದ ಅಹಂಕಾರ ಉತ್ಪನ್ನವಾಗಲು ಮಹತತ್ವವು ಪ್ರಕೃತಿಯಾಯಿತು. ಅಹಂ ಕಾರ ವಿಕೃತಿಯಾಯಿತು, ಅಹಂಕಾರದಿಂದ ಶಬ್ದ ತನ್ಮಾತ್ರೆ ಉತ್ಪನ್ನವಾಗಲು ಅಹಂಕಾರವು ಪ್ರಕೃತಿಯಾಯಿತು. ಶಬ್ದ ತನ್ಮಾತ್ರೆ ವಿಕೃತಿಯಾಯಿತು. ಈ ಪ್ರಕಾರ ಈ ಮಹದಾದಿ ಏಳು ತತ್ವಗಳು ಪ್ರಕೃತಿ ವಿಕೃತಿಗಳೆಂದು ಬಲ್ಲವರಿಂದ ಹೇಳಿಸಿಕೊಳ್ಳುತ್ತವೆ. ಮತ್ತು ಆ ಪಂಚ ತನ್ಮಾತ್ರೆಗಳಿಂದ ಉತ್ಪನ್ನಗಳಾದ ಆಕಾಶಾದಿ ಪಂಚಭೂತಗಳು ಆ ಭೂತಗಳಿಂದ ಉತ್ಪನ್ನಗಳಾದ ಶ್ರೋತ್ರಾದಿ

CC-0. Jangamwadi Math Collection. Digitized by eGangotri

ಜ್ಞಾನೇಂದ್ರಿಯ ಪಂಚಕ ವಾಗಾದಿ ಕರ್ಮೇಂದ್ರಿಯ ಪಂಚಕ ಒಂದು ಮನಸ್ಸು ಎಲ್ಲಾ ಒಟ್ಟುಗೂಡಿ ಹದಿನಾರು ವಿಕೃತಿಗಳೆಂದು ಅಂದರೆ ಕಾರ್ಯಗಳೆಂದು ಹೇಳಿಸಿಕೊಳ್ಳುವವು. ಆದ್ದರಿಂದ ಎಲೈ ಮಗನೇ ಈ ಸಪ್ತ ಪ್ರಕೃತಿ ಷೋಡಶ ವಿಕೃತಿಗಳೇ ಜಗತ್ತಿನ ರೂಪವನ್ನೂ ಧಾರಣಮಾಡಿಪ್ಪತ್ತವೆಂದು ನಿಶ್ಚಯಮಾಡು.

ಬಳಿಕ; ಕ್ರಮಸೃಷ್ಟಿಯನ್ನೂ ಮತ್ತು ಒಂದೇ ಕಾಲವಲ್ಲಿ ಆದ ಯುಗಪತ್ಸೃಷ್ಟಿಯನ್ನೂ ಪ್ರತಿಪಾದನಮಾಡುತ್ತಾರೆ.

ಮಾಯೆಯ ಪೊಳವು ಮಹತ್ತೆನಿಸಿರ್ಕು ।
ಒಯ್ಯಾರದಿ ಹಮ್ಮದರೊಳು ತೋರ್ಕು ॥
ಅ ಮೂಲದ ಹಮ್ಮೆ ಮನವೆನಿಸಿರ್ಕು ।
ಆ ಮನವದು ತಾಂ ಬ್ರಹ್ಮವೆನಿಕ್ಕು ॥
ಬಗೆಯಾ ಬ್ರಹ್ಮಂಗೊಡಲಾಗಿರ್ಕು ।
ಗಗನಾದಿಗಳದರಿಂ ಪುಟ್ಟಿರ್ಕು ॥
ಈ ತೆರದಿಂದೆ ಜಗತ್ತಿನ ಹುಟ್ಟು ।
ಜಾತಾಜಾಂಡಕ್ಕದು ಸಮುಕಟ್ಟು ॥
ಶರನಿಧಿಯೊಳು ಬುದ್ಬುದವಾದಂತೆ ।
ನಿರವಧಿಯಹ ನಿಜದೊಳಗೋರಂತೆ ॥
ತೋರಿದಜಾಂಡಂಗಳಸಂಖ್ಯಾತ ।
ತೋರಿ ಯಡಗುತಿಹವೆಲೆ ವಿಖ್ಯಾತ ॥ ೧೧ ॥

ಟೀಕಾ:-ಮಾಯೆ ಯ=ಅಘಟಿತಘಟನಾಲಕ್ಷಣಾತ್ಮಕ ಮಾಯೆಯ, ಪೊಳವು=ಮಿಸಕೇ, ಮಹತ್ತು=ಮಹತತ್ವವು, ಎನಿಸಿರ್ಕು=ಎನ್ನಿಸುತ್ತಿರುವುದು, ಒಯ್ಯಾರದಿ=ಸೊಬಗಿನಿಂದ, ಹಮ್ಮು=ಅಹಂಕಾರವು, ಅದರೊಳು=ಆ ಮಹತ್ವದಲ್ಲಿ, ತೋರ್ಕು=ತೋರುವದು, ಆ ಮೂಲದ ಹಮ್ಮೆ=ಆ ಮೂಲ ಭೂತವಾದ ಅಹಂಕಾರವೇ, ಮನವೆನಿಸಿರ್ಕು=ಮನಸ್ಸೆಂದು ಹೇಳಿಸಿಕೊಂಡಿರುವದು, ಆ ಮನವದು=ಆ ಮನಸ್ಸು, ತಾಂ=ತಾನು, ಬ್ರಹ್ಮವೆನಿಕ್ಕು=ಸೃಷ್ಟಿಕರ್ತನಾದ ಬ್ರಹ್ಮವೆಂದೆನಿಸುವದು, ಬಗೆಯೆ=ವಿಚಾರಮಾಡಿ ನೋಡಲಾಗಿ, ಅ ಬ್ರಹ್ಮಂಗೆ=ಆ ಬ್ರಹ್ಮನಿಗೆ, ಒಡಲಾಗಿರ್ಕು=ಶರೀರವಾಗಿರುವದು, ಅದರಿಂ=ಆ ಮನಸ್ಸೆಂಬ ಬ್ರಹ್ಮನಿಂದ, ಗಗನಾದಿಗಳು=ಆಕಾಶಾದಿ ಭೂತಭೌತಿಕ ಪ್ರಪಂಚವು, ಪುಟ್ಟಿರ್ಕು=ಹುಟ್ಟಿರುವದು, ಈ ತೆರದಿಂ=ಈರೀತಿಯಿಂದ, ಜಗತ್ತಿನ=ನಾಮರೂಪಾತ್ಮಕ ಸೃಷ್ಟಿಯ, ಹುಟ್ಟು=ಉತ್ಪತ್ತಿಯಾಗಿರುವದು, ಅದು=ಆ ಮನಸ್ಸೇ, ಜಾತ=ಹುಟ್ಟಲ್ಪಟ್ಟ, ಅಜಾಂಡಕ್ಕೆ=ಬ್ರಹ್ಮಾಂಡಕ್ಕೆ, ಸಮುಕಟ್ಟು=ಮೂಲ ಕಾರಣವಾಗಿರುವದು, ಶರನಿಧಿಯೊಳು=ಸಮುದ್ರದಲ್ಲಿ, ಬುದ್ಬುದವಾದಂತೆ=ಗುಳ್ಳೆಗಳು ಏಳುವಂತೆ, ನಿರವಧಿಯಹ=ಸೀಮೆ

CC-0. Jangamwadi Math Collection. Digitized by eGangotri

ರಹಿತವಾದಂಥಾ, ನಿಜದೊಳಗೆ=ನಿಜವಾದ ಅಖಂಡಸ್ವರೂಪದಲ್ಲಿ, ಓರಂತೆ= ಚನ್ನಾಗಿ, ತೋರಿದ=ಕಾಣಿಸಿಕೊಂಡ, ಅಸಂಖ್ಯಾತ=ಗಣನೆಯಿಲ್ಲದ, ಅಜಾಂಡ ಗಳು=ಬ್ರಹ್ಮಾಂಡಗಳು, ಎಲೆ ವಿಖ್ಯಾತ=ಎಲೈ ವಿವೇಕದಿಂದ ಪ್ರಸಿದ್ಧನಾದ ಶಿಷ್ಯನೇ, ತೋರಿಯಡಗುತಿಹವು=ನಿನ್ನಲ್ಲಿ ತೋರಿ ಪುನಃ ನಿನ್ನಲ್ಲಿಯೇ ನಾಶ ವಾಗುತ್ತಿರುವವು.

ತಾತ್ಪರ್ಯ:-ಎಲೈ ಶಿಷ್ಯನೇ ಕೇಳು. ನಿನ್ನ ಆಶ್ರಿತವಾದ ಮಾಯೆಯೇ ಸೃಷಿ ಯನ್ನುಂಟುಮಾಡುವದಕ್ಕೆ ಅಭಿಮುಖವಾಗಲು ಮಹತ್ತತ್ವ ಎಂದು ಹೇಳಿಸಿಕೊಂ ಡಿತು. ಬಳಿಕ ಆ ಮಹತತ್ವದಿಂದಲೇ ಅಹಂಕಾರವಾಯಿತು. ಬಳಿಕ ಅಹಂಕಾ ರವೇ ಮನಸ್ಸೆಂಬನಾಮವನ್ನು ಪಡೆಯಿತು. ಆ ಮನವೇ ಸಂಕಲ್ಪ ವಿಕಲ್ಪರೂಪ ವಾಸನೆಗಳಿಂದ ಸೃಷ್ಟಿಯನ್ನು ರಚನೆ ಮಾಡಿದ್ದರಿಂದ ಬ್ರಹ್ಮವೆಂದು ಹೇಳಿಸಿ ಕೊಳ್ಳುವದು, ಅಥವಾ ವಿಚಾರಮಾಡಿ ನೋಡಿದರೆ, ಈ ಮನಸ್ಸೇ ಅನೇಕ ವಾಸ ನೆಗಳಿಂದ ಕೂಡಿಕೊಂಡು ಬ್ರಹ್ಮನಿಗೆ ಒಂದು ಶರೀರವಾಗಿರುವದೆಂದೂ ಹೇಳಬ ಹುದು. ಈ ಲಕ್ಷಣಾತ್ಮಕ ಮನಸ್ಸಿನಿಂದ ಆಕಾಶಾದಿ ಪಂಚಭೂತಗಳು ಹುಟ್ಟಿರು ತ್ತವೆ. ಈ ಪಂಚಭೂತಗಳ ಪೈಕಿ ಕಡೆಯದಾದ ಒಂದು ಪೃಥ್ವಿಯಲ್ಲಿ ಬ್ರಹ್ಮಾಂಡ ವಿರುತ್ತದೆ. ಆ ಬ್ರಹ್ಮಾಂಡದಲ್ಲಿ ಹದಿನಾಲ್ಕು ಲೋಕಗಳೂ ಆ ಲೋಕಕ್ಕೆ ಉಚಿ ತಗಳಾದ ಶರೀರಗಳೂ ಭೋಗಗಳೂ ಇರುತ್ತವೆ. ಈ ಪ್ರಕಾರ ಈ ನಾಮರೂ ಪಾತ್ಮಕ ಜಗತ್ತಿನ ಉತ್ಪತ್ತಿಯಾಗಿರುತ್ತದೆ. ಆದ್ದರಿಂದ ಉತ್ಪನ್ನವಾದ ಬ್ರಹ್ಮಾಂ ಡಕ್ಕೆ ಈ ಮನಸ್ಸೇ ಮೂಲಕಾರಣವಾಗಿರುತ್ತವೆ. ಆದರೆ ಒಳ್ಳೇ ವಿವೇಕಶಾಲಿ ಯಾದ ಶಿಷ್ಯನೇ ಕೇಳು. ಒಂದೇ ಸಮುದ್ರದಲ್ಲಿ ಅನೇಕ ಗುಳ್ಳೆಗಳಾಗುವಂತೆ ದೇಶ ಕಾಲ ವಸ್ತು ಪರಿಚ್ಛೇದ ಶೂನ್ಯವಾದಂಥಾ ಅಖಂಡಾನಂದ ಸ್ವರೂಪಮಾದನಿನ್ನಲ್ಲಿ ಎಷ್ಟೋ ಬ್ರಹ್ಮಾಂಡಗಳು ತೋರಿ ಅಡಗುತ್ತಿರುವವು ಅಂದರೆ, ಅನೇಕ ಬ್ರಹ್ಮಾಂ ಡಗಳ ಉತ್ಪತ್ತಿಗೂ ನಾಶಕ್ಕೂ ನೀನೇ ಅಧಿಷ್ಠಾನನಾಗಿರುವಿ ಎಂಬ ತಾತ್ಪರ್ಯವು

ಬಳಿಕ:-ಅಧಿಷ್ಠಾನ ಭೂತನಾದ ನಿನ್ನಲ್ಲಿ ಬಗೆಯಿಂದ ಭೂತ ಭೌತಿಕ ಸೃಷ್ಟಿಯು ಹೇಗೆ ಆಗಿರುವದೆಂಬುದನ್ನು ಅತ್ತಿಯ ಮರದ ದೃಷ್ಟಾಂತವನ್ನು ಕೊಟ್ಟು ಪ್ರತಿಪಾದನ ಮಾಡುತ್ತಾರೆ.

ವಿಸ್ಮಯ ವೊಂದಿದೆ ಕೇಳ್ನಿನ್ನಲ್ಲಿ ।
ಅಸ್ಪಂದಾತ್ಮಕವಹ ನಿನ್ನಲ್ಲಿ ॥
ಬಗೆಯೆಂದೆನಿಪೊಂದತ್ತಿಯ ಮರನು ।
ಮಿಗೆ ಪಸರಿಸಿ ಪಸಗಿತ್ತಾ ಮರನು ॥
ಕಾಲವೆನಿಪ ಫಳಯೊಳೊಲೆವುತ್ತ ।
ಮೇಲೆ ನಿಜಾಶ್ರಯವನೆ ಮುಸುಗುತ್ತ ॥

CC-0. Jangamwadi Math Collection. Digitized by eGangotri

ಚಿತ್ತದ ಹಮ್ಮಿನ ಬೇರುಗಳಿಂದ ।
ಮತ್ತೆ ಹೃಷೀಕವೆನಿಪ ತಳಿರಿಂದ ॥
ಜಾತಾಜಾಂಡ ಫಲಾವಳಿಯಿಂದ ।
ಭೂತವೆನಿಸುತೊಳಗಿಹ ನೊರಜಿಂದ ॥
ಮಸಗಿತು ಭೂತೋಪಾಧಿಗಳಲ್ಲಿ ।
ಎಸೆದುದು ಚಿತ್ತಖಿಳಾತ್ಮತೆಯಲ್ಲಿ ॥ ೧೧ ॥

ಟೀಕಾ:— ನೀನು=ಎಲೈ ಶಿಷ್ಯನೇ ನೀನು, ಇಲ್ಲಿ=ಈ ಪ್ರಸಂಗದಲ್ಲಿ, ಒಂದು ವಿಸ್ಮಯಂ ಇದೆ=ಒಂದು ಆಶ್ಚರ್ಯವು ಇರುತ್ತದೆ, ಕೇಳು=ಏಕಾಗ್ರ ಚಿತ್ತದಿಂದ ಆಲಿಸು, ಅಸ್ಪಂದಾತ್ಮಕವಹ=ಚಲನವಲನವಿಲ್ಲದೆ ಪರಿಪೂರ್ಣ ಸ್ವರೂಪವಾದಂಥಾ ನಿನ್ನಲ್ಲಿ=ನಿನ್ನಲ್ಲಿ, ಬಗೆಯೊಂದೆನಿಪ=ವಾಸನಾತ್ಮಕವೆಂದು ಹೇಳಿಸಿಕೊಳ್ಳುವ, ಅತ್ತಿಯ ಮರನು=ಅತ್ತಿಯ ಗಿಡವು, ಮಿಗೆ=ವಿಶೇಷವಾಗಿ, ಪಸರಿಸಿ=ಚಲ್ಲಿ ವರೆದು, ಮಸಗಿತ್ತು=ಶೋಭಾಯಮಾನವಾಗಿತ್ತು, ಆ ಮರನು=ಆ ಗಿಡವು, ಕಾಲವೆನಿಪ= ಭೂತ ವರ್ತಮಾನ ಭವಿಷ್ಯವೆಂಬ, ಘಾಳಿಯೊಳ್=ಘಾಳಿಯಿಂದ, ಒಲೆಯುತ್ತ= ಅಲೆದಾಡುತ್ತ, ಮೇಲೆ=ಬಳಿಕ, ನಿಜಾಶ್ರಯವನೆ=ತನಗೆ ಆಶ್ರಯವಾದ ಆತ್ಮನನ್ನೇ, ಮುಸುಗುತ್ತ=ಆಚ್ಛಾದನೆ ಮಾಡುತ್ತಾ, ಚಿತ್ತದ=ಸ್ಮರಣ ಮಾಡುವದಕ್ಕೆ ಯೋಗ್ಯವಾದ ಚಿತ್ತೆಂಬ, ಹಮ್ಮಿನ=ಅಭಿಮಾನಿಸಲಿಕ್ಕೆ ಯೋಗ್ಯವಾದ ಅಹಂಕಾರವೆಂಬ, ಬೇರುಗಳಿಂದ=ಬೇರುಗಳಿಂದ, ಮತ್ತೆ=ಅನಂತರ, ಹೃಷೀಕವೆನಿಪ= ಇಂದ್ರಿಯುಗಳೆಂಬ, ತಳಿರಿಂದ=ಎಲೆಗಳಿಂದ, ಜಾತ=ಉತ್ಪನ್ನಗಳಾದ, ಅಜಾಂಡ= ಬ್ರಹ್ಮಾಂಡಗಳೆಂಬ, ಫಲಾವಳಿಯಿಂದ=ಹಣ್ಣುಗಳ ಸಾಲಿನಿಂದ, ಭೂತವೆನಿಸುವ= ಪ್ರಾಣಿಗಳೆಂದು ಹೇಳಿಸಿಕೊಳ್ಳುವ, ಒಳಗಿಹ=ಹಣ್ಣಿನ ಒಳಗಿರುವಂಥಾ, ನೊರಜಿಂದ=ನೊರಜುಗಳಿಂದ, ಮಸಗಿತು=ವಿಜೃಂಭಿಸಿತು, ಚಿತ್ತು=ಚಿದ್ರೂಪು, ಭೂತೋಪಾದಿಗಳಲ್ಲಿ=ಜೀವಿಗಳಿಗೆ ಉಪಾಧಿಗಳಾದ ಅಂತಃಕರಣಗಳಲ್ಲಿ, ಅಖಿಳಾತ್ಮತೆಯಲ್ಲಿ=ಅನೇಕ ಜೀವಾತ್ಮರಾಗಿ, ಎಸೆದುದು=ಹೊಳೆಯುತ್ತಿರುವದು.

ತಾತ್ಪರ್ಯ:— ಎಲೈ ಶಿಷ್ಯನೇ! ಒಂದು ಆಶ್ಚರ್ಯವಿರುತ್ತದೆ. ಅದನ್ನು ನಿನಗೋಸುಗ ಪ್ರತಿಪಾದನಮಾಡುತ್ತೇನೆ. ಏಕಾಗ್ರಚಿತ್ತದಿಂದ ಆಲಿಸು. ಏನಂದರೆ, ಅಚಲ ಸ್ವರೂಪನಾದಂಥಾ ಅಂದರೆ ಪರಿಪೂರ್ಣ ಸ್ವರೂಪನಾದ ನಿನ್ನಲ್ಲಿ ಬಗೆಯೆಂದು ಹೇಳಿಸಿಕೊಳ್ಳುವ ಮನಸ್ಸೇ ಒಂದು ಅತ್ತಿಯ ಮರವೆಂದು ತಿಳಿ. ಈ ಗಿಡವು ವಿಶೇಷವಾಗಿ ಬೆಳೆದು ಎಲ್ಲ ಕಡೆಗೂ ಶೋಭಾಯಮಾನವಾಗಿರುತ್ತದೆ. ಅಂದರೆ, ಮಾಯಾ ಮೊದಲಾದ ಈ ಆರೋಪ ಸಂಸಾರವೇ ಒಂದು ವೃಕ್ಷವಾಗಿರುತ್ತದೆ ಎಂಬ ತಾತ್ಪರ್ಯವು. ಈ ಸಂಸಾರ ವೃಕ್ಷವು ಕಾಲವೆಂಬ ಘಾಳಿಯಿಂದ ಅತ್ತಿತ್ತ ಅಲೆದಾಡುತ್ತದೆ. ಅಂದರೆ, ಕಾಲ ಮೂಲಕ ಉತ್ಪತ್ತಿ ಸ್ಥಿತಿ ನಾಶ

CC-0. Jangamwadi Math Collection. Digitized by eGangotri

ಗಳುಳ್ಳದ್ದಾಗಿರುತ್ತದೆ ಎಂಬ ತಾತ್ಪರ್ಯವು. ಮತ್ತು ಗಿಡವು ಯಾವ ಸ್ಥಾನದಲ್ಲಿ ಬೆಳೆಯುವದೋ ಅದೇ ಸ್ಥಾನವನ್ನು ತನ್ನ ನೆರಳಿಂದ ಮುಚ್ಚಿಬಿಡುವಂತೆ, ಈ ಬಗೆಯೆಂಬ ಅತ್ತಿಮರವು ನಿನ್ನಲ್ಲಿ ಉದಯವಾಗಿ ಪುನಃ ನಿನ್ನ ನಿಜ ಸ್ವರೂಪ ವನ್ನೇ ಆವರಣಮಾಡಿರುವದು. ಅಹಂಕಾರ ಚಿತ್ತುಗಳೆಂಬ ಬೇರುಗಳಿಂದ ಘಟ್ಟಿ ಯಾಗಿರುವದು. ಜ್ಞಾನೇಂದ್ರಿಯ ಕರ್ಮೇಂದ್ರಿಯಗಳೆಂಬ ಸಣ್ಣ ಸಣ್ಣ ಚಿಗುರೆಲೆ ಗಳಿಂದ ಬಹು ಶೋಭಾಯಮಾನವಾಗಿರುತ್ತದೆ. ಅನೇಕ ಬ್ರಹ್ಮಾಂಡಗಳೆಂಬ ಹಣ್ಣುಗಳಿಂದ ಬೊಡ್ಡಿಹಿಡಿದು ತುದಿಯವರೆಗೂ ತುಂಬಿಕೊಂಡಿರುತ್ತದೆ. ಅತ್ತಿ ಹಣ್ಣುಗಳಲ್ಲಿ ಸಣ್ಣ ಸಣ್ಣ ನೊರಜುಗಳಿರುವಂತೆ, ಬ್ರಹ್ಮಾಂಡವೆಂಬ ಹಣ್ಣುಗಳಲ್ಲಿ ಬಹಳ ಜೀವರಾಶಿಗಳಿರುತ್ತವೆ. ಇವುಗಳಿಂದ ಯುಕ್ತವಾಗಿ ಈ ಬಗೆಯೆಂಬ ಅತ್ತಿಯ ಮರವು ಬಹಳ ಶೋಭಾಯಮಾನವಾಗಿರುವದು. ಆದರೆ, ಸಕಲ ಜೀವಿ ಗಳಲ್ಲಿಯೂ ಚಿತ್ತು ಜ್ಞಾನ ಸ್ವರೂಪದಿಂದ ಪ್ರಸಿದ್ಧವಾಗಿ ಹೊಳೆಯುತ್ತಿರುವದು.

ಬಳಿಕ:— ಮುಂದಿನ ಗತಿಗೆ ಬೀಜ ಭೂತವಾದ ಪ್ರಾಣಿಗಳ ಭೇದವನ್ನು ತೋರಿಸುತ್ತಾರೆ.

ಅಂಡಜ ಮುದ್ಭಿಜ ಸ್ವೇದಜವೆಂದು ।
ಪಿಂಡಜ ಮಿನ್ನು ಜರಾಯುಜವೆಂದು ॥
ಈ ತೆರದಿಂದೆ ಚತುರ್ವಿಧ ವಹವು ।
ಭೂತ ಗಳಿಂತೊಗೆದಡಗುತ್ತಿಹವು ॥

ಟೀಕಾ:— ಅಂಡಜಂ=ತತ್ತಿಯಿಂದ ಹುಟ್ಟುವಂಥಾ ಪಕ್ಷಿ ಮೊದಲಾದ ಪ್ರಾಣಿಗಳು, ಉದ್ಭಿಜ=ಭೂಮಿಯನ್ನುಬಗೆದು ಹುಟ್ಟುವ ಗಿಡ ಮೊದಲಾದವುಗಳು, ಸ್ವೇದಜವೆಂದು=ಬೆವರಿನಿಂದ ಹುಟ್ಟುವಂಥಾ ಹೇನು ಮೊದಲಾದ ಪ್ರಾಣಿಗಳೆಂದು, ಇನ್ನು=ಅನಂತರ, ಪಿಂಡಜ=ಶರೀರದಿಂದ ಹುಟ್ಟುವಂಥಾ (ಅಥವಾ) ಜರಾಯುಜ ವೆಂದು=ಜರಾಯುಜವೆಂಬ ಚೀಲದಿಂದ ಹುಟ್ಟುವ ಮನುಷ್ಯ ಮೊದಲಾದ ಪ್ರಾಣಿ ಗಳೆಂದು, ಈ ತೆರದಿಂದೆ=ಈ ರೀತಿಯಿಂದ, ಚತುರ್ವಿಧವಹವು=ನಾಲ್ಕು ಪ್ರಕಾರ ಗಳಾಗಿರುವವು, ಇಂತು=ಈ ಪ್ರಕಾರ, ಭೂತಗಳು=ಪ್ರಾಣಿಗಳು, ಒಗೆದು=ತೋರಿ, ಅಡಗುತ್ತಿಹವು=ನಾಶವಾಗುತ್ತಿರುವವು.

॥ ಕಂದ ॥

ಗತಿ ಮೂರನೆಯ ದಿದಕ್ಕತಿ ।
ಹಿತಮೆನಿಪ ನಿರೂಪಣಂಗಳೇಕಾದಶವಂ ॥
ತತಿಶಯ ಮಾಗಿರೆ ತಿಳಿಯಲ್ ।
ಪ್ರತಿಪಾದಿತವಿಲ್ಲಿ ಗುಣ ವಿಭೇದ ವಿಕಾರಂ ॥

ಬಳಿಕ:— ಈ ಗತಿಯಲ್ಲಿ ಹೇಳಿದ ವಿಷಯವನ್ನು ಸಂಕ್ಷೇಪ್ತವಾಗಿ ತಿಳಿಸಿ ಗತಿಯನ್ನು ಮುಗಿಸುತ್ತಾರೆ.

ಟೀಕಾ:— ಗತಿ = ಅಧ್ಯಾಯವು, ಮೂರನೆಯದು = ಮೂರನೆಯದು, ಇದಕ್ಕೆ=ಈ ಗತಿಗೆ, ಅತಿಹಿತವೆನಿಪ=ಬಹಳ ಯೋಗ್ಯಂಗಳಾದ, ನಿರೂಪಣಂಗಳ್=

CC-0. Jangamwadi Math Collection. Digitized by eGangotri

ಹೇಳಲ್ಪಟ್ಟ ಪದ್ಯಗಳು, ಅತಿಶಯಮಾಗಿರೆ=ಆಧಿಕ್ಯವಾಗಿದ್ದರೂ, ಅಂತು=ಒಟ್ಟಿಗೆ, ಏಕಾದಶವು=ಹನ್ನೊಂದು, ತಿಳಿಯಲ್=ವಿಚಾರಮಾಡಿ ನೋಡಲಾಗಿ, ಇಲ್ಲಿ=ಈ ಗತಿಯಲ್ಲಿ, ಗುಣವಿಭೇದ ವಿಕಾರಂ=ತ್ರಿಗುಣ ಮೂಲಕ ಭೇದವಾದ ಕಾರ್ಯವು, ಪ್ರತಿಪಾದಿತವು=ಹೇಳಲ್ಪಟ್ಟಿರುವದು.

ಅಂತು ಗತಿ ೩ ಕ್ಕಂ ನಿರೂಪಣ ೩೪ ಕ್ಕಂ
ಚರಣ ೪೦೮ ಕ್ಕಂ ಮಂಗಲ ಮಸ್ತು.

ಶ್ರೀಗುರು ಶಂಭು ಲಿಂಗಾಯನಮಃ

ಚತುರ್ಥ ಗತಿ

ಬಳಿಕ; ಈ ನಾಲ್ಕನೇ ಗತಿಯಲ್ಲಿ ತತ್ವಗಳ ಸಂಬಂಧವಾದ ಭೇದಗಳನ್ನು ಹೇಳುತ್ತೇವೆಂದು ಪ್ರತಿಜ್ಞಾ ಮಾಡುತ್ತಾರೆ.

ಸೂತ್ರ

ತಿಳಿಯಲ್ಸಮಸ್ತ ತತ್ವಂ ।
ಗಳನೊಲವಿಂದಿಂತು ಪೇಳ್ದ ತಾತ್ವಿಕ ಭೇದಂ ॥
ಗಳನೆಲ್ಲರರಿವ ತೆರದಿಂ ।
ಬಳಿಕೀಗಳನೂನ ವೇದ ಮತದಿಂದುಸುರ್ವೆಂ ॥

ಟೀಕಾ:- ತಿಳಿಯಲ್=ವಿಚಾರಮಾಡಿ ನೋಡಲು, ಸಮಸ್ತ ತತ್ವಂಗಳನು=ಎಲ್ಲ ತತ್ವಗಳನ್ನು, ಒಲವಿಂ=ಪ್ರೀತಿಯಿಂದ, ಇಂತು=ಈ ಪ್ರಕಾರ, ಪೇಳ್ದು=ಹೇಳಿ, ಬಳಿಕ=ಅನಂತರ, ತಾತ್ವಿಕ ಭೇದಂಗಳನು=ತತ್ವ ಸಂಬಂಧವಾದ ಭೇದಗಳನ್ನು, ಎಲ್ಲರು=ಸರ್ವರು, ಅರಿವ ತೆರದಿಂ=ತಿಳಿಯುವಹಾಗೆ, ಈಗಳ್=ವರ್ತಮಾನ ಕಾಲದಲ್ಲಿ, ಅನೂನ=ಸಂಪೂರ್ಣವಾದ ವೇದಮತದಿಂ=ವೇದಗಳ ಸಂಮತದಿಂದ, ಉಸುರ್ವೆಂ=ಹೇಳುವೆನು.

ತಾತ್ಪರ್ಯ:—ಪೂರ್ವಗತಿಯಲ್ಲಿ ಪ್ರಕೃತಿಯ ಗುಣ ಮೂಲಕ ಯಾವತ್ತು ತತ್ವಗಳು ಉತ್ಪತ್ತಿಯಾದವೆಂದು ಹೇಳಿ, ಈಗ ಈ ನಾಲ್ಕನೇ ಗತಿಯಲ್ಲಿ ಜರಾಯುಜಾದಿ ಶರೀರಗಳ ಉತ್ಪತ್ತಿಯನ್ನೂ, ಸ್ಥೂಲ ಶರೀರದಲ್ಲಿ ಪಂಚಭೂತಗಳ ಅಂಶವನ್ನೂ, ಶರೀರಕ್ಕೆ ಷಡ್ಭಾವ ವಿಕಾರವನ್ನೂ, ದೇಹದಲ್ಲಿ ಒಂಭತ್ತು ಚಕ್ರಗಳನ್ನೂ ಪಂಚಕೋಶಗಳ ಸ್ವರೂಪವನ್ನೂ ಪ್ರತಿಪಾದಿಸುತ್ತೇವೆ ಎಂದು ಪ್ರತಿಜ್ಞಾ ಮಾಡುತ್ತಾರೆ.

ಶಂಕಾ:—ನೀವು ಈ ತಾತ್ವಿಕಗಳನ್ನೆಲ್ಲಾ ನಿಮ್ಮ ಸ್ವಕಪೋಲಕಲ್ಪಿತದಿಂದ ಪ್ರತಿಪಾದನ ಮಾಡುತ್ತೀರಿ.

CC-0. Jangamwadi Math Collection. Digitized by eGangotri

ಸಮಾಧಾನ:— ಹಾಗಲ್ಲ; ನಾವು ವೇದ ಪ್ರಮಾಣಕ್ಕೆ ಸಮ್ಮತವಾಗಿಯೂ ಸಕಲರು ತಿಳಿದು ಆನಂದಪಡುವಂತೆಯೂ ತಾತ್ವಿಕ ಭೇದಗಗನ್ನು ಹೇಳುತ್ತೇವೆ. ಆದ್ದರಿಂದ ಸರ್ವರಿಂದಲೂ ಸ್ವೀಕರಿಸಲಿಕ್ಕೆ ಈ ಗ್ರಂಥವು ಯೋಗ್ಯವಾಗಿರುತ್ತ ದೆಂಬ ತಾತ್ಪರ್ಯವು.

ಬಳಿಕ; ಉದ್ಭಿಜ, ಸ್ವೇದಜ, ಜಾತಿಗಳ ಉತ್ಪತ್ತಿಯ ಸ್ವರೂಪಗಳನ್ನು ಪ್ರತಿಪಾದನ ಮಾಡುತ್ತಾರೆ.

ಜೀವರಿಗಾತೆರ ನಾದೊಡಲುಗಳು ।
ಭಾವಿಸೆನಾನಾವಸ್ಥಾದಿಗಳು ॥
ಅಲ್ಲಿ ಧರೆಯನೊಡೆ ವೊಗೆಯುತ್ತಿರ್ಪ ।
ಎಲ್ಲಾ ಭೂತ ವಿಕೃತಿಯಿಂ ತೋರ್ಪ ॥
ತರುಲತೆ ಬಹುವಿಧ ಗುಲ್ಮಾದಿಗಳು ।
ಪರಿಕಿಸಲುದ್ಭಿಜ ವಹ ಜಾತಿಗಳು ॥
ಅವನಿ ಜಲಾಗ್ನಿಯ ಪರಿಪಾಕದೊಳು ।
ಬೆವರಿನ ಪರಿಪಾಕದ ಭೇದದೊಳು ॥
ಆಕಸ್ಮಿಕವಹ ಜೀವಾದಿಗಳು ।
ಯೂಕ ಪಿಪೀಲಿಕ ಮಶಕಾದಿಗಳು ॥
ಕ್ಷಣ ಭಂಗುರವಹ ಕೀಟಾದಿಗಳು ।
ಗಣಿಸಲ್ ಸ್ವೇದಜವಹ ಜಾತಿಗಳು ॥ ೧ ॥

ಟೀಕಾ:— ಜೀವರಿಗೆ=ಪ್ರಾಣಿಗಳಿಗೆ, ಆ ತೆರನಾದ=ಆ ಪ್ರಕಾರಗಳಾದ ಒಡಲುಗಳು = ಶರೀರಗಳು, ಭಾವಿಸೆ= ವಿಚಾರಮಾಡಲು, ನಾನಾ = ಅನೇಕ ಪ್ರಕಾರಗಳಾದ, ಅವಸ್ಥಾದಿಗಳು=ಇರುವಿಕೆ ವೊದಲಾದವುಗಳು, (ತೋರುವವು), (ಹೇಗಂದರೆ) ಅಲ್ಲಿ = ಉತ್ಪತ್ತಿ ಸಮಯದಲ್ಲಿ, ಧರೆಯನ್ನು = ಭೂಮಿಯನ್ನು ಒಡೆದು=ಬಿಚ್ಚಿ, ಒಗೆಯುತ್ತಿಪ್ಪ=ಹುಟ್ಟುತ್ತಿರ್ಪ, ಎಲ್ಲಾ ಭೂತ=ಪಂಚಭೂತಗಳ, ವಿಕೃತಿಯಿಂ=ವಿಕಾರದಿಂದ, ತೋರ್ಪ=ತೋರುತ್ತಿರುವಂಥಾ, ತರು=ಮರ, ಲತೆ= ಬಳ್ಳಿ, ಬಹುವಿಧ=ಅನೇಕ ಪ್ರಕಾರಗಳಾದ, ಗುಲ್ಮಾದಿಗಳು=ಕಂಟಿ ವೊದಲಾದವು. ಗಳು, ಪರಿಕಿಸಲ್=ವಿಚಾರಿಸಲು, ಉದ್ಭಿಜವಹ=ಭೂಮಿಯನ್ನು ಬಿಚ್ಚಿರುವಂಥಾ, ಜಾತಿಗಳು=ಒಂದು ತರದ ಪ್ರಾಣಿಗಳು, ಅವನಿ=ಭೂಮಿ, ಜಲ=ನೀರು, ಅಗ್ನಿಯ= ಬೆಂಕಿಗಳ, ಪರಿಪಾಕದೊಳು=ಪರಿಪಕ್ವಸ್ಥಿತಿಯಿಂದ, ಬೆವರಿನ=ಆಯಾ ಭೂತಗಳ ಸ್ವೇದದ, ಪರಿಪಾಕದ= ಅಡಿಗೆಯಾಗುವದರ, ಭೇದದೊಳು = ಭೇದದಿಂದ, ಆಕಸ್ಮಿಕವಹ=ಒಮ್ಮಿಂದೊಮ್ಮೆಲೇ ತೋರುತ್ತಿರುವಂಥಾ, ಜೀವಾದಿಗಳು=ಪ್ರಾಣಿ ಗಳು, ಯೂಕ=ಹೇನು, ಪಿಪೀಲಿಕ=ಇರುವೆ, ಮಶಕಾದಿಗಳು=ನೊರಜು ವೊದ

CC-0. Jangamwadi Math Collection. Digitized by eGangotri

ಲಾದವುಗಳು, ಕ್ಷಣಭಂಗುರವಹ=ಒಂದು ಕ್ಷಣಹೊತ್ತಿನಲ್ಲಿ ನಾಶವಾಗುತ್ತಿರುವಂಥಾ, ಕೀಟಾದಿಗಳು=ಕೀಡಿ ಮೊದಲಾದ ಪ್ರಾಣಿಗಳು, ಗಣಿಸಲ್=ವಿಚಾರ ಮಾಡಲಾಗಿ, ಸ್ವೇದಜವಹ=ಬೆವರಿಂದುತ್ಪನ್ನವಾಗಿರುವಂಥಾ, ಜಾತಿಗಳು=ಒಂದು ಸ್ವಭಾವದ ಪ್ರಾಣಿಗಳು.

ತಾತ್ಪರ್ಯ:—ಸಕಲ ಪ್ರಾಣಿಗಳಿಗೆ ಹಿಂದೆ ಹೇಳಲ್ಪಟ್ಟ ನಾಲ್ಕು ಪ್ರಕಾರಗಳಾದ ಶರೀರಗಳೂ, ಉತ್ಪತ್ತಿ, ಸ್ಥಿತಿ, ನಾಶ ಮೊದಲಾದ ಅವಸ್ಥೆಗಳೂ, ವಿಚಾರ ಮಾಡಿ ನೋಡಲಾಗಿ ತೋರುತ್ತವೆ. ಆದರೆ, ಅವು ಹೇಗೆ ತೋರುತ್ತವೆ? ಎಂಬುದನ್ನು ವಿಚಾರ ಮಾಡಿ ನೋಡೋಣ. ಮರ, ಬಳ್ಳಿ, ಕಂಟಿ ಮೊದಲಾದವುಗಳು ಭೂಮಿಯನ್ನು ಬಗೆದು ಹುಟ್ಟುವದರಿಂದ ಇವು ಉದ್ಭಿಜ-ಜಾತಿಗಳೆನಿಸುತ್ತವೆ. ಆದರೆ, ಇವು ಆಕಾಶಾದಿ ಪಂಚಭೂತಗಳ ವಿಕಾರದಿಂದ ಹುಟ್ಟಿರುತ್ತವೆಂದು ತಿಳಿಯತಕ್ಕದ್ದು. ಹೇಗಂದರೆ, ಒಂದು ಮಾವಿನ ಮರವುಂಟು. ಅದರಲ್ಲಿ ಹಳದೀ ಬಣ್ಣದ ಎಲೆಗಳು ಪೃಥ್ವಿಯ ಅಂಶಗಳಿಂದೂ, ಬಿಳೀ ಬಣ್ಣದ ಎಲೆಗಳು ಜಲದಂಶಗಳಿಂದೂ, ಕೆಂಪು ಬಣ್ಣದ ಎಲೆಗಳು ಅಗ್ನಿಯ ಅಂಶಗಳಿಂದೂ, ಹಸರು ಬಣ್ಣದ ಎಲೆಗಳು ವಾಯುವಿನ ಅಂಶಗಳಿಂದೂ, ಊಹೆ ಮಾಡತಕ್ಕದ್ದು. ಮತ್ತು ಮರದಲ್ಲಿರುವ ಕಠಿಣ ಅಥವಾ ಭಾರವಾಗಿರುವ ಭಾಗವೆಲ್ಲಾ ಭೂಮಿಕಾರ್ಯವೆಂದೂ, ರಸವೆಲ್ಲಾ ಜಲದಂಶವೆಂದೂ, ಮೇಲಕ್ಕೆ ಬೆಳೆಯುವದು ಅಗ್ನಿಯ ಧರ್ಮವೆಂದೂ, ರಸವನ್ನು ಶಾಖೋಪಶಾಖೆಗಳಿಗೆ ಹಂಚಿಹಾಕುವದು ವಾಯುವಿನ ಕಾರ್ಯವೆಂದೂ, ಅವಕಾಶ ಕೊಡುವದು ಆಕಾಶದ ಧರ್ಮವೆಂದೂ, ಹೀಗೆ ಭೂತಗಳ ಬಣ್ಣ, ಆಕೃತಿ, ಕಾರ್ಯಗಳ ಮೇಲಿಂದ ಈ ವಸ್ತುಗಳು ಈ ಭೂತಗಳ ಸಾಂಕರ್ಯದಿಂದ ಆಗಿರುತ್ತವೆ. ಎಂದು ಅನುಮಾನ ಮೂಲಕ ತಿಳಿಯತಕ್ಕದ್ದು. ಆದ್ದರಿಂದ ಗಿಡಗಂಟಿ ಮೊದಲಾದವುಗಳೆಲ್ಲಾ ಪಂಚಭೂತಗಳ ಕಾರ್ಯಗಳಾಗಿರುತ್ತವೆ. ಬಳಿಕ ಹೇನು, ಇರುವೆ, ನೊರಜು, ಮತ್ತು ಒಂದು ಕ್ಷಣಕಾಲದಲ್ಲಿಯೇ ಹುಟ್ಟಿ ಇದ್ದು ಸತ್ತುಹೋಗುವ ಕ್ಷುದ್ರ ಜಂತುಗಳೆಲ್ಲಾ, ಭೂಮಿ, ಜಲ, ಅಗ್ನಿಗಳು ಕಾಲದಿಂದ ಹೆಚ್ಚು ಕಡಿಮೆಯಾಗುತ್ತಿರಲು, ಅವುಗಳ ಬೆವರಾದರೂ ಭೇದವಾಗುತ್ತದೆ. ಅಂಥಾ ಬೆವರುಗಳಿಂದ ಒಮ್ಮಿಂದೊಮ್ಮೆಲೇ ಹುಟ್ಟುತ್ತವೆ. ಇವೆಲ್ಲಾ ಸ್ವೇದಜಗಳೆನಿಸುವವು. ಹೇಗಂದರೆ, ಮಳೆಗಾಲದಲ್ಲಿ ಭೂಮಿ, ಬಿಸಲು, ಮೇಘ ಇವುಗಳ ಬೆವರಿನಿಂದ ಅಗಣಿತ ಮಳೆಹುಳಗಳು ಹುಟ್ಟುತ್ತವೆ. ಮತ್ತು ಭೂತಗಳ ಬೆವರಿನಿಂದ ಪ್ರಾಣಿಗಳು ಹುಟ್ಟುವಂತೆ, ಆಯಾ ಶರೀರಗಳ ಬೆವರಿನಿಂದ ಆಯಾಯ ಪ್ರಾಣಿಗಳು ಹುಟ್ಟುತ್ತವೆಂದು ತಿಳಿಯತಕ್ಕದ್ದು. ಅಂದರೆ, ಮನುಷ್ಯ ಶರೀರದ ಬೆವರಿನಿಂದ ಕೂರಿ, ಹೇನುಗಳು, ಬೆಕ್ಕಿನ ಮೈಯಲ್ಲಿ ಚಿಕ್ಕಾಡು, ನಾಯಿಯ ಮೈಯ್ಯಲ್ಲಿ ತೊನಸಿ, ದನಗಳ ದೇಹಗಳಲ್ಲಿ ಉಣ್ಣಿ ಮೊದಲಾದವುಗಳನ್ನು ಊಹೆ ಮಾಡಬೇಕು.

CC-0. Jangamwadi Math Collection. Digitized by eGangotri

ಬಳಿಕ; ಅಂಡಜ ಮತ್ತು ಪಿಂಡಜ ಜಾತಿಗಳ ಉತ್ಪತ್ತಿಯ ರೀತಿಯನ್ನು ಪ್ರತಿಪಾದಿಸುತ್ತಾರೆ.

ತತ್ತಿಯೆನಿಸಿ ಮೊದಲುದರದೊಳುದಿಸಿ ।
ಮತ್ತೊಡೆದಾಯಾ ತನುವಂ ಧರಿಸಿ ॥
ತಾನಿಹ ಪಕ್ಷಿ ಭುಜಂಗಾದಿಗಳು ।
ನೀಸರಿ ಮಗನೆ ಮುಸಳಿ ಮೀನಗಳು ॥
ಅಂಡಜ ಜಾತಿಯುವೆನಿಸುತ್ತಿಹವು ।
ಪಿಂಡದ ಗುಣಭೇದಂದಳೆದಿಹವು ॥
ರಮಣಿಯ ಪುಂಯೋಗದ ಕಳೆಗೂಡಿ ।
ಕ್ರಮಕಾಲದೊಳಂಗಂಗಳ್ಮೂಡಿ ॥
ಬೆಳೆಯುತ್ತಲ್ಲಿ ಜರಾಯುಜವೆನಿಸಿ ।
ಬಳಿಕ ಜರಾಯುವನೊಡೆವುತ್ತುದಿಸಿ ॥
ಇಲ್ಲಿಹ ನರಪಶು ಮಹಿಷಾದಿಕವು ।
ಎಲ್ಲಂ ತಿಳಿಯೆ ಜರಾಯುಜವಹವು ॥ ೨ ॥

ಟೀಕಾ:— ಮಗನೆ=ಎಲೈ ಶಿಷ್ಯನೇ, ತತ್ತಿಯೆನಿಸಿ=ಅಂಡಗಳೆಂದು ಹೇಳಿಸಿಕೊಂಡು, ಮೊದಲು=ಪ್ರಥಮದಲ್ಲಿ, ಉದುರದೊಳು=ಹೊಟ್ಟೆಯಿಂದ, ಉದಿಸಿ=ಉತ್ಪನ್ನವಾಗಿ, ಮತ್ತೆ=ಬಳಿಕ, ಒಡೆದು=ಎರಡು ಭಾಗವಾಗಿ, ಆಯಾ ತನುವಂ=ತಮ್ಮ ತಮ್ಮ ಸಜಾತಿ ಶರೀರವನ್ನು, ಧರಿಸಿ=ಹೊತ್ತುಕೊಂಡು, ತಾನಿಹ=ಇರುವಂಥಾ, ಪಕ್ಷಿಭುಜಂಗಾದಿಗಳು=ಪಕ್ಷಿ ಸರ್ಪ ಮೊದಲಾದವುಗಳು, ಮುಸಳಿ ಮೀನಗಳು=ಮುಸಳಿ ಮೀನಗಳು, ಅಂಡಜ ಜಾತಿಯುವು=ತತ್ತಿಯಿಂದುತ್ಪನ್ನವಾದ ಕುಲವುಳ್ಳವು, ಎನಿಸುತ್ತಿಹವು=ಅನ್ನಿಸಿಕೊಳ್ಳುತ್ತಿರುವವು, ಪಿಂಡದ=ಜರಾಯುಜದ, ಗುಣಭೇದಂ=ಗುಣದ ಭೇದತ್ವವನ್ನು ದಳೆದಿಹವು=ಹೊಂದಿಕೊಂಡಿರುವವು, ರಮಣಿಯ=ಸ್ತ್ರೀಯಳ, ಪುಂಯೋಗದ=ಪುರುಷ ಸಂಬಂಧದ, ಕಳೆಗೂಡಿ=ರೇತೋರಕ್ತಗಳು ಒಂದಾಗಿ, ಕ್ರಮಕಾಲದೊಳು=(ಮುಂದೆ ಹೇಳುವ) ಕಾಲಕ್ರಮದಿಂದ, ಅಂಗಂಗಳ್ಮೂಡಿ=ಅವಯುವಗಳು ಪ್ರಕಟತೆಯಾಗಿ, ಬೆಳೆಯುತ್ತ=ವೃದ್ಧಿಯನ್ನು ಹೊಂದುತ್ತ, ಅಲ್ಲಿ=ಗರ್ಭದಲ್ಲಿ, ಜರಾಯುಜವು=ಜರಾಯುನಾಮಕ ಚೀಲವು, ಎನಿಸಿ=ಅನ್ನಿಸಿಕೊಂಡು, ಬಳಿಕ=ಅನಂತರ, ಜರಾಯುವನು=ಜರಾಯುವೆಂಬ ಚೀಲವನ್ನು, ಒಡೆವುತ್ತ=ಹರಿವುತ್ತ, ಉದಿಸಿ=ಹುಟ್ಟಿ, ಇಲ್ಲಿಹ=ಈ ಲೋಕದಲ್ಲಿ ಇರುವಂಥಾ, ನರ=ಮನುಷ್ಯ, ಪಶು=ನಾಲ್ಕು ಪಾದಗಳುಳ್ಳ ಪ್ರಾಣಿ, ಮಹಿಷಾದಿಕವು=ಕೋಣ ಮೊದಲಾದವುಗಳು, ಎಲ್ಲಂ=ಸರ್ವವನ್ನು, ತಿಳಿಯೆ=ವಿಚಾರ ಮಾಡಲು, ಜರಾಯುಜವಹವು=ಜರಾಯು ಚೀಲದಿಂದ ಉತ್ಪನ್ನವಾದವುಗಳಿರುವವು, ನೀನರಿ=ಶಿಷ್ಯನೇ ನೀನು ವಿಚಾರಮಾಡು.

CC-0. Jangamwadi Math Collection. Digitized by eGangotri

ತಾತ್ಪರ್ಯ:–ಎಲೈ ಮಗನೇ ಕೇಳು. ಮೊದಲು ಹೊಟ್ಟೆಯಿಂದ ತತ್ತಿಗಳಾಗಿ ಹುಟ್ಟಿ, ಬಳಿಕ ಆ ತತ್ತಿಗಳು ಒಡೆದು ಎರಡು ಭಾಗಗಳಾಗುತ್ತಿರಲಿಕ್ಕೆ, ಪಾರಿವಾಳದ ತತ್ತಿಗಳಿದ್ದರೆ ಪಾರಿವಾಳ, ನವಲಿನ ತತ್ತಿಗಳಿದ್ದರೆ ನವಲು, ಹಾವಿನ ತತ್ತಿಗಳಿದ್ದರೆ, ಹಾವು. ಹೀಗ ತಮ್ಮ ತಮ್ಮ ಸಜಾತಿ ಶರೀರಗಳನ್ನು ಧರಿಸಿಕೊಂಡು ಇರುತ್ತವೆ. ಇವೆಲ್ಲಾ ತತ್ತಿಗಳನ್ನು ಒಡೆದು ಉತ್ಪನ್ನಗಳಾದ್ದರಿಂದ ಅಂಡಜಗಳೆನಿಸುತ್ತಿರುವವು. ಮತ್ತು ಜರಾಯುಜ ಪ್ರಾಣಿಗಳಿಗಿಂತಲೂ ಸ್ವಭಾವದಿಂದ ಭೇದತ್ವವನ್ನು ಪಡೆದಿರುತ್ತವೆ. ಸ್ತ್ರೀ ಪುರುಷರ ಸುರತ ಕ್ರೀಡಾಕಾಲದಲ್ಲಿ ಸ್ತ್ರೀಯಳ ರಜಸ್ಸು ಪುರುಷನ ರೇತಸ್ಸು ಇವೆರಡು ಏಕೀಭಾವವನ್ನು ಹೊಂದಿ, ಮುಂದೆ ಹೇಳಲ್ಪಡುವ ಪ್ರಕಾರ ಕಲಲ ಬುಬ್ಬುದ ಮೊದಲಾದ ಅವಸ್ಥೆಯನ್ನು ಹೊಂದಿ, ಮಾಸಗಳು ಕಳೆದಂತೆ ಅವಯವಗಳು ಪ್ರಕಟವಾಗುತ್ತವೆ. ಹೀಗೆ ಗರ್ಭವು ಹೊಟ್ಟೆಯಲ್ಲಿ ಬೆಳೆಯುತ್ತಿರುತ್ತದೆ. ಆಗ ಜರಾಯುವೆಂಬ ಚೀಲವು ಹೊಟ್ಟೆಯಲ್ಲಿರುವ ಶಿಸುವನ್ನು ಮುಚ್ಚಿಕೊಂಡಿರುತ್ತದೆ. ಅನಂತರ, ಕೆಲವು ದಿವಸಗಳು ಹೋಗಲು, ಆ ಜರಾಯುವೆಂಬ ಚೀಲವು ಹರಿದು ಹೋಗುತ್ತದೆ. ಆ ಜರಾಯು ಚೀಲಕ್ಕೆ ಲೋಕದಲ್ಲಿ ಮಾಸ ಎಂದು ಕರೆಯುತ್ತಾರೆ. ಮನುಷ್ಯ, ಪಶು, ಕೋಣ, ಮಂಗ ಮೊದಲಾದವುಗಳೆಲ್ಲಾ ಜರಾಯುವೆಂಬ ಚೀಲದಿಂದುತ್ಪನ್ನಗಳಾದ್ದರಿಂದ ಜರಾಯುಜಗಳೆನಿಸುತ್ತಿರುವವು. ಎಂದು ವಿಚಾರಮಾಡಿ ನಿಶ್ಚಯಮಾಡುವಂಥವನಾಗು.

ಬಳಿಕ; ಮಲಗಳನ್ನೂ ಪೂರ್ಣಾಂಗ • ನ್ಯೂನಾಂಗ ಹೆಣ್ಣು ಗಂಡುಗಳ ಉತ್ಪತ್ತಿಯ ಕಾರಣವನ್ನೂ ಹೇಳುತ್ತಾರೆ.

ಆ ಜೀವಿಗಳಿಗೆ ಜನಿಯುಪ್ಪಂದು ।
ಯೋಜಿಸಿ ಬಾಹ್ಯಮಲಂಗಳ ವಂದು ॥
ಪತಿಯುಮಲಂ ಕಾರ್ಮಿಕ ಮಲವೆಂದು ।
ಸತಿಯು ಮಲಂ ಮಾಯಾಮಲವೆಂದು ॥
ಕೇಳುದ್ವಯವಾಣವ ಮಲವೆಂದು ।
ಪೇಳುವರು ಕೂಟಂ ಬಡೆದಂದು ॥
ತೋರತನು ಸ್ಥಿತಿ ಯಾಗಳೆಯುಕ್ಕು ॥
ಆ ರೇತೋಽಧಿಕದಿಂ ಗಂಡಕ್ಕು ॥
ರಮಣಿಯು ರುಧಿರಂ ಮಿಗೆ ಪೆಣ್ಣಕ್ಕು ।
ಸಮಸಂಬಂಧವೆ ಷಂಡನೆನಿಕ್ಕು ॥
ಗಣ್ಯದಧಮತನು ಪಾಪದಿ ಬಕ್ಕು ।
ಪುಣ್ಯ ಫಲದಿ ಪೂರ್ಣಾಂಗಮುದಕ್ಕು ॥೩॥

CC-0. Jangamwadi Math Collection. Digitized by eGangotri

ಟೀಕಾ:— ಆ ಜೀವಿಗಳಿಗೆ =ಆ ಜರಾಯುಜ ಜೀವಿಗಳಿಗೆ, ಜನಿಯಪ್ಪಂದ:= ಉತ್ಪತ್ತಿಯಾದ ಕಾಲದಲ್ಲಿ, ಅವು=ಆ ಜೀವಿಗಳು, ಬಾಹ್ಯ ಮಲಂಗಳ=ಹೊರಗಿನ ಮಲಗಳನ್ನು, ಯೋಜಿಸಿ ಕೂಡಿಕೊಂಡು (ಇರುವವು.) ಅಂದು=ಆ ಹೊತ್ತಿನಲ್ಲಿ, ಪತಿಯಮಲಂ=ಗಂಡನರೇತಸ್ಸು, ಕಾರ್ಮಿಕ ಮಲವೆಂದು=ಕಾರ್ಮಿಕ ಮಲವೆಂದು, ಸತಿಯ ಮಲಂ=ಹೆಂಡತಿಯ ರಜಸ್ಸು, ಮಾಯಾಮಲವೆಂದು=ಮಾಯಾ ಮಲವೆಂದು, ಕೇಳು=ಎಲೈ ಶಿಷ್ಯನೇ ಏಕಾಗ್ರಚಿತ್ತದಿಂದವಧರಿಸು, ದ್ವಯವು=ಆ ರೇತೋರಕ್ತಗಳು, ಆಣವ ಮಲವೆಂದು=ಆಣವಮಲವೆಂದು, ಪೇಳುವರು=ಹೇಳುವರು, ಅವು=ಆ ರೇತೋರಕ್ತಗಳು, ಕೂಟಂ=ಸಂಯೋಗವನ್ನು, ಬಡೆದಂದು= ಹೊಂದಿದಕಾಲದಲ್ಲಿ, ತೋರತನುಸ್ಥಿತಿಯು=ಪ್ರತೀತಿಯಾಗುವಂಥಾ ಶರೀರದ ರಚನೆಯು, ಆಗಳೆಯಕ್ಕು=ಅದೇಕಾಲದಲ್ಲಿ ಆಗುವದು, ಆರೇತೋಽಧಿಕದಿಂ= ಪುರುಷನ ರೇತಸ್ಸು ಹೆಚ್ಚಿಗಾಗುವದರಿಂದ, ಗಂಡಕ್ಕು=ಗಂಡುಕೂಸು ಆಗುವದು, ರಮಣಿಯ=ಸ್ತ್ರೀಯಳ, ರುಧಿರಂ=ರಕ್ತವು, ಮಿಗೆ=ಹೆಚ್ಚಾಗಲು, ಪೆಣ್ಣಕ್ಕು=ಹೆಣ್ಣು ಕೂಸು ಆಗುವದು, ಸಮಸಂಬಂಧವೆ=ರೇತೋರಕ್ತಗಳು ಸಮಾನವಾಗಿ ಸಂಯೋಗವಾದರೆ, ಷಂಡನೆನಿಕ್ಕು=ಷಂಡನೆನಿಸುವನು, ಗಣ್ಯದ=ಗುರ್ತಿಸಲಿಕ್ಕೆ ಯೋಗ್ಯವಾದ, ಅಥಮತನು=ಕನಿಷ್ಠವಾದ ಶರೀರವು, ಪಾಪದಿ=ಪಾಪದಿಂದ, ಬಕ್ಕು = ಬರುವದು, ಪುಣ್ಯಫಲದಿ = ಪುಣ್ಯಫಲದಿಂದ, ಅದು = ಆಶರೀರವು ಪೂರ್ಣಾಂಗಂ=ಎಲ್ಲ ಅವಯವಗಳಿಂದ ಯುಕ್ತವಾದದ್ದು, ಅಕ್ಕು=ಆಗುವದು.

ತಾತ್ಪರ್ಯ:— ಎಲ್ಲ ಜರಾಯುಜ ಪ್ರಾಣಿಗಳು ತಾಯಿಯ ಗರ್ಭದಿಂದ ಹುಟ್ಟಿ ಬರುವಾಗ ಮಲಮೂತ್ರ ರಕ್ತಮೊದಲಾದ ಮಲಗಳಿಂದ ಯುಕ್ತವಾಗಿಯೇ ಬರುತ್ತವೆ. ಈ ಶರೀರವು ಮೂರು ಮಲಗಳಿಂದಲೇ ಕೂಡಿಕೊಂಡಿರುತ್ತದೆ. ಹೇಗಂದರೆ, ತಂದೆಯ ಮಲವು ಕಾರ್ಮಿಕ ಮಲವೆಂದೂ ತಾಯಿಯ ಮಲವು ಮಾಯಾ ಮಲವೆಂದೂ ಅವೆರಡೂ ಕೂಡಿಕೊಳ್ಳಲು ಆಣವ ಮಲವೆಂದೂ ಬಲ್ಲವರು ಹೇಳುತ್ತಾರೆ. ಅಂದರೆ, ಇಂಥಾ ಮಲಮಯವಾದ ಶರೀರವು ರೇತೋ ರಕ್ತಗಳ ಸಂಯೋಗವಾದ ಕೂಡಲೆ ಉಂಟಾಗುತ್ತದೆ.

ಮತ್ತು ಆ ಸಂಭೋಗ ಕಾಲದಲ್ಲಿ ಪುರುಷನ ವೀರ್ಯವು ಅಧಿಕವಾದರೆ ಗಂಡು ಹುಟ್ಟುವದು. ಸ್ತ್ರೀಯಳ ರಕ್ತವು ಅಧಿಕವಾದರೆ ಹೆಣ್ಣು ಹುಟ್ಟುವದು. ಆದರೆ ಸ್ತ್ರೀಯರು ಗರ್ಭಿಣಿಯರಾಗಿರಲು ಹೆಣ್ಣಾಗಲಿ ಅಥವಾ ಗಂಡಾಗಲಿ ಹಡೆಯುತ್ತಾರೆಂದು ನಾವು ಹೇಗೆ ತಿಳಿಯೋಣ? ಅಂದರೆ, ಈ ವಿಷಯವನ್ನು ಬೇರೆ ಶಾಸ್ತ್ರಂಗಳಲ್ಲಿ ಹೇಳಿದ್ದಾರೆ. ಆದ್ದರಿಂದ ಇಲ್ಲಿ ಸಂಕ್ಷೇಪವಾಗಿ ತಿಳಿಸುತ್ತೇವೆ. ಏನಂದರೆ, ಗರ್ಭಿಣಿ ಸ್ತ್ರೀಯಳು ಎಡಭುಜವನ್ನು ನೆಲಕ್ಕೆ ಹಚ್ಚಿ ಮಲಗಿಕೊಂಡಿ

CC-0. Jangamwadi Math Collection. Digitized by eGangotri

ದ್ದರೆ ಹೆಣ್ಣು ಹಡೆಯುವಳೆಂದೂ, ಬಲಭುಜವನ್ನು ನೆಲಕ್ಕೆಹಚ್ಚಿ ಮಲಗಿಕೊಂಡಿದ್ದರೆ ಗಂಡು ಹಡೆಯುವಳೆಂದೂ ತಿಳಿಯತಕ್ಕದ್ದು. ಮತ್ತು ಇನ್ನೊಂದು ಸುಗಮ ಉಪಾಯವಿರುತ್ತದೆ. ಗರ್ಭಿಣಿ ಸ್ತ್ರೀಯಳ ಮೊಲೆ ಹಾಲನ್ನು ತಕ್ಕೊಂಡು ಒಂದು ಹುಲ್ಲುಕಡ್ಡಿಯ ತುದಿಗೆ ಹಚ್ಚಿ, ಒಂದು ವಾಟಕದಲ್ಲಿ ಸ್ವಚ್ಛ ಜಲವನ್ನು ಹಾಕಿ, ಅದರಲ್ಲಿ ಆ ಕಡ್ಡಿಯನ್ನು ಇಡಬೇಕು. ಅಂದರೆ, ಮೊಲೆಹಾಲನ್ನು ಹಚ್ಚಿದ ಕಡ್ಡಿಯ ತುದಿಯನ್ನು ನೀರಿಗೆ ಮುಟ್ಟಿಸಬೇಕೆ ಹೊರತು, ವಾಟಕದ ತಳತನಕ ಕಡ್ಡಿಯನ್ನು ಹಾಕಬಾರದು. ಹೀಗೆ ಮಾಡಿದ ಮೇಲೆ ಆ ಕಡ್ಡಿಯ ತುದಿಗಿದ್ದ ಮೊಲೆಹಾಲು ನೀರಿನಲ್ಲಿ ಕಸ್ತುರಿ ಗೆರೆಯಂತೆ ಎಳೆ ಬಿಟ್ಟರೆ ಹೆಣ್ಣುಕೂಸು ಹುಟ್ಟುತ್ತದೆಂದು ತಿಳಿಯಬೇಕು. ಹೀಗಾಗದೆ, ಹಾಲು ನೀರಿನ ಮೇಲೆ ತೇಲಾಡುತ್ತಿದ್ದರೆ ಗಂಡುಕೂಸು ಹುಟ್ಟುತ್ತದೆಂದು ತಿಳಿಯಬೇಕು. ಇದು ಎರಡು ಮೂರು ಸಾರೆ ಪರೀಕ್ಷೆಮಾಡಿ ಮನಗಂಡ ವಿಷಯವಾಗಿರುತ್ತದೆ. ಆದ್ದರಿಂದ ಸರ್ವರು ಇದನ್ನು ಶೋಧಮಾಡಿ ನೋಡತಕ್ಕದ್ದು. ಮತ್ತು ಬಯಕೆಗಳ ಮೇಲಿಂದ ಪುಣ್ಯವಂತನಾಗಲಿ, ಪಾಪಿಯಾಗಲಿ ಹುಟ್ಟುತ್ತಾನೆಂದು ಊಹೆ ಮಾಡತಕ್ಕದ್ದು. ಆ ರೇತೋರಕ್ತಗಳು ಸಮಾನವಾದರೆ ಷಂಡನು ಹುಟ್ಟುವನು. ಮತ್ತು ಕುಂಟ, ಕುರುಡ ಮೂಕ, ಕಿವುಡ ಮೊದಲಾದವರು ಅವಯವಗಳಿಂದ ಹೀನರಾಗಿರುತ್ತಾರೆ. ಆದ್ದರಿಂದ ಇವರ ಶರೀರವು ಪಾಪದಿಂದ ಬಂದಿರುತ್ತದೆ. ಸರ್ವ ಅವಯವಗಳಿಂದ ಯುಕ್ತವಾಗಿ ಸುಂದರವಾದ ಶರೀರವು ಪುಣ್ಯಫಲದಿಂದ ಪ್ರಾಪ್ತವಾಗಿರುತ್ತದೆ. ಎಂದು ಊಹೆಮಾಡತಕ್ಕದ್ದು.

ಬಳಿಕ; ದೇಹದಲ್ಲಿರುವ ಸಪ್ತ ಧಾತುಗಳನ್ನೂ ದೇಹೋತ್ಪತ್ತಿಯ ಕ್ರಮವನ್ನೂ ಪ್ರತಿಪಾದಿಸುತ್ತಾರೆ.

ತ್ವಕ್ಕು ರುಧಿರ ಮಾಂಸಂ ತಾಯಂಶ ।
ಅಕ್ಕೆಲು ನರ ಮಜ್ಜೆಯು ಪಿತಿನಂಶ ॥
ಇವು ತಾವೇ ಷಟ್ಕೋಶವೆನಿಕ್ಕು ।
ಇವರ ಸಮ್ಮೇಳ್ಪಿಯೆ ದೇಹ ವೆನಿಕ್ಕುಂ ॥
ಮಾತಾಪಿತರುಂಡನ್ನರಸದೊಳು ।
ರೇತ ಮುದಿಸಲಂತಾ ದೇಹದೊಳು ॥
ಆರುಂ ಕೋಶಂ ರೇತವಿವೇಳು ।
ನೀರನೆ ನೋಡಿಂತಿವು ಧಾತುಗಳು ॥
ಆಗಳೆ ಕೇಳಾ ರತಿಮಥನದೊಳು ।
ಯೋಗವಹುದು ರೇತಂ ರಕ್ತದೊಳು ॥

CC-0. Jangamwadi Math Collection. Digitized by eGangotri

ಮತ್ತಾ ಯೋಗವಿಧಂ ತನುವಿಂಗೆ ।
ಬಿತ್ತಧರಿಂ ಸಂಸೃತಿ ಜೀವಂಗೆ ॥೪॥

ಟೀಕಾ:— ತ್ವಕ್ಕು=ಚರ್ಮ, ರುಧಿರ=ರಕ್ತ, ಮಾಂಸ=ಮಾಂಸವು. ತಾಯಂಶ=ತಾಯಿಯ ಭಾಗವು, ಅಕ್ಕು=ಆಗುವದು, ಎಲು=ಅಸ್ಥಿ, ನರ=ನಾಡಿ, ಮಜ್ಜೆಯು=ಮಜ್ಜೆಯು, ಪಿತನಂಶ=ತಂದೆಯ ಭಾಗವು, ಇವು=ಈಗ ಹೇಳಿದುವು, ತಾವೇ=ತಾವು, ಷಟ್ಕೋಶಂ=ಆರು ಚೀಲಗಳು, ಎನಿಕ್ಕು=ಎನ್ನಿಸುವವು, ಇವರ= ಈ ಆರು ಚೀಲಗಳ, ಸಮೇಷ್ಟಿಯೆ=ಕೂಡಿಕೊಂಡಿರುವಿಕೆಯೇ, ದೇಹಂ=ಶರೀರವು, ಎನಿಕ್ಕು=ಎನಿಸುವುದು, ಮಾತಾಪಿತರು=ತಂದೆತಾಯಿಗಳು, ಉಂಡನ್ನರಸದೊಳು=ಊಟಮಾಡಿದ ಅನ್ನದ ರಸದಿಂದ, ರೇತಂ=ವೀರ್ಯವು, ಉದಿಸಲ್= ಉತ್ಪನ್ನವಾಗಲು, ಅಂತಾದೇಹದೊಳು=ಆ ಶರೀರದಲ್ಲಿ, ಆರುಂಕೋಶಂ=ಆರು ಚೀಲಗಳು, ರೇತಂ=ರೇತಸ್ಸು, ಇವು=ಎಲ್ಲಾ ಕೂಡಿದವು, ಎಳು=ಏಳು, ನೀರನೆ= ಎಲೈ ಶಿಷ್ಯನೇ, ಇಂತು=ಈ ಪ್ರಕಾರ, ಇವು ಧಾತುಗಳು=ಇವು ಏಳು ಧಾತುಗಳು, ನೋಡು=ವಿಚಾರಮಾಡು, ಕೇಳ್=ಏಕಾಗ್ರಚಿತ್ತದಿಂದ ಆಲಿಸು, ರತಿಮಥನದೊಳು=ಸುರತಕ್ರೀಡೆಯಲ್ಲಿ, ಆಗಳೆ=ತತ್ಕಾಲಕ್ಕೆ, ರೇತಂ=ರೇತಸ್ಸು, ರಕ್ತದೊಳು= ರಕ್ತದಲ್ಲಿ, ಯೋಗವಹುದು=ಕೂಡುವದು, ಮತ್ತೆ=ಅನಂತರ, ಆ ಯೋಗವಿಧಂ= ಆ ಕೂಡುವಿಕೆಯು, ತನುವಿಂಗೆ=ಶರೀರೋತ್ಪತ್ತಿಗೆ, ಬಿತ್ತು= ಕಾರಣವಾಯಿತು, ಅದರಿಂ=ಶರೀರ ಉಂಟಾದ್ದರಿಂಧ, ಜೀವಂಗೆ=ಜೀವನಿಗೆ, ಸಂಸೃತಿ=ಸಂಸಾರವು, ಬಿತ್ತು=ಕಾರಣವಾಯಿತು.

ತಾತ್ಪರ್ಯ:— ಎಲೈ ಶಿಷ್ಯನೇ ಕೇಳು. ಚರ್ಮ, ರಕ್ತ, ಮಾಂಸ ಈ ಮೂರು ತಾಯಿಯ ಅಂಶಗಳು, ಎಲು, ನರ, ಮಜ್ಜೆ ಈ ಮೂರು ತಂದೆಯ ಅಂಶಗಳು; ಇವೇ ಆರು ಕೋಶಗಳೆಂದು ಹೇಳಿಸಿಕೊಳ್ಳುವವು. ಇವುಗಳ ಸಮುಚ್ಚಯವೇ ಸ್ಥೂಲ ಶರೀರವೆನಿಸುವದು. ಮತ್ತು ತಾಯಿತಂದೆಗಳು ಊಟಮಾಡಿದ ಅನ್ನದ ರಸದಿಂದ ಆ ಶರೀರದಲ್ಲಿ ವೀರ್ಯವು ಉತ್ಪನ್ನವಾಗುತ್ತದೆ. ಮೊದಲಿನವಾರು ಈ ರೇತಸ್ಸು ಒಂದು ಕೂಡಿ ಏಳು ಧಾತುಗಳೆನಿಸುತ್ತವೆ. ಮತ್ತು ಪುರುಷನು ಸ್ತ್ರೀಯೊಡನೆ ಸುರತಕ್ರೀಡೆಯನ್ನು ಮಾಡುವಾಗ ಪುರುಷನ ವೀರ್ಯವು ಸ್ತ್ರೀಯಳ ರಕ್ತದೊಳಗೆ ಪ್ರವೇಶಮಾಡುತ್ತದೆ. ಆದ್ದರಿಂದಲೇ ತಂದೆಯ್ಯ ಅಂಶಗಳಾದ ಎಲು, ನರ, ಮಜ್ಜಾದಿಗಳು ಶರೀರದ ಒಳಗಿರುತ್ತವೆ. ತಾಯಿಯ ಅಂಶಗಳಾದ ಚರ್ಮ, ರಕ್ತಾದಿಗಳು ಹೊರಭಾಗದಲ್ಲಿರುತ್ತವೆ. ಈ ಪ್ರಕಾರ ರೇತೋರಕ್ತಗಳ ಸಂಯೋಗದಿಂದ ಶರೀರ ರಚನೆಯಾಗುತ್ತದೆ. ಈ ಶರೀರ ಪ್ರಾಪ್ತಿಯಿಂದಲೇ ಜೀವಾತ್ಮನಿಗೆ ದೇಹಾತ್ಮ ಬುದ್ಧಿಯುಂಟಾಗಿ ಅದರಿಂದ ಪುಣ

CC-0. Jangamwadi Math Collection. Digitized by eGangotri

ಪಾಪಗಳನ್ನುವ ಮಾಡುತ್ತಾನೆ. ಅವುಗಳಿಂದ ಪುನಃ ಪುನಃ ಜನನ ಮರಣರೂಪ ಸಂಸಾರವನ್ನು ಹೊಂದುತ್ತಿರುತ್ತಾನೆ.

ಬಳಿಕ; ಕಾಲಕ್ರಮದಿಂದ ಸ್ತ್ರೀಯಳ ಶರೀರದಲ್ಲಿ ಪಿಂಡವು ಬೆಳೆದು, ಒಂಬತ್ತು ತಿಂಗಳಾದ ನಂತರ ಹೊರಗೆ ಬರುತ್ತದೆಂದು ಹೇಳುತ್ತಾರೆ.

ಮಲವೆರಡವು ಬೆರದೊಂದು ದಿನಕ್ಕೆ ।
ಕಲಲಂ ಬುದ್ಬುದ ವೈದು ದಿನಕ್ಕೆ ॥
ಪತ್ತು ದಿನಕೆ ಕಂದಾಕೃತಿಯದಕೆ ।
ಮತ್ತೆಯು ದಿನದಶ ಪಂಚಕ ಬಲಿಕೆ ॥
ತಲೆ ತೋಳ್ತೊಡೆ ಸರ್ವಾಂಗ ತತಿಗಳು ।
ಬೆಳೆವವು ಚೌಮಾಸಾಂತ ಗತಿಯೊಳು ॥
ನವಿರ ಕುಳಿಗಳೆಲುಗಳು ಚಲನೆಗಳು ।
ಸವನಿಪವೈದಾರೇಳ್ಮಾಸದೊಳು ॥
ಪೂರ್ವಸ್ಮರಣಂ ಜನಿಪಾಯಾಸ ।
ಸಾರ್ವಮದೆಂಟು ನವಕ್ರಮಮಾಸ ॥
ಸೂತಿಮರುತನಿಂದಿದು ಜನಯಕ್ಕು ।
ಈ ತೆರದಿಂ ಪಿಂಡೋದಯವಕ್ಕು ॥೫॥

ಟೀಕಾ:— ಮಲವೆರಡವು=ಆ ರೇತೋರಕ್ತಗಳು, ಬೆರದು=ಕೂಡಿಕೊಂಡು ಒಂದು ದಿವಸಕ್ಕೆ=ಒಂದು ವಾಸರದಲ್ಲಿ, ಕಲಲಂ=ಸಮರಸವಾಗುವದು, ಐದು ದಿನಕ್ಕೆ=ಪಂಚ ದಿವಸಗಳಲ್ಲಿ, ಬುದ್ಬುದವು=ಗುಳ್ಳೆಗಳಾಕಾರವಾಗಿರುವದು, ಪತ್ತು ದಿನಕೆ=ಹತ್ತು ದಿವಸಗಳಲ್ಲಿ, ಅದಕೆ=ಆ ಬುದ್ಬುದಕೆ, ಕಂದಾಕೃತಿಯು=ಒಂದು ದುಂಡ ಗಡ್ಡೆಯಾಕಾರವಾಗುವದು, ಮತ್ತೆಯು=ಅನಂತರ, ದಿನದಶಪಂಚಕ= ಹದಿನೈದು ದಿವಸಕ್ಕೆ, ಬಲಿಕೆ=ಸ್ವಲ್ಪ ಬೆಳೆದು ಉದ್ದಾಗುವದು, ಚೌಮಾಸಾಂತ ಗತಿಯೊಳು=ನಾಲ್ಕು ತಿಂಗಳ ಕಡೆಯಲ್ಲಿ [ಕ್ರಮವಾಗಿ] ತಲೆ=ಶಿರವು, ತೋಳು= ಕೈಗಳು, ತೊಡೆ=ಕಾಲುಗಳು, ಸರ್ವಾಂಗ=ಹೊಟ್ಟೆ ಮೊದಲಾದ ಅವಯವಗಳ, ತತಿಗಳು=ಸಮೂಹಗಳು, ಬೆಳೆವವು=ಹುಟ್ಟುವವು, ಐದಾರೇಳ್ಮಾಸದೊಳು=ಐದು ಆರು ಏಳು ತಿಂಗಳುಗಳಲ್ಲಿ [ಕ್ರಮವಾಗಿ] ನವಿರು=ಕೂದಲುಗಳು, ಕುಳಿಗಳು= ತೂತುಗಳು, ಎಲುಗಳು=ಅಸ್ಥಿಗಳು, ಚಲನೆಗಳು=ಚೇತನೆಗಳು, ಸವನಿಪವು= ಪ್ರಾಪ್ತವಾಗುವವು, ಎಂಟು ನವಕ್ರಮ ಮಾಸ=ಕ್ರಮದಿಂದ ಎಂಟು ಒಂಭತ್ತು ತಿಂಗಳುಗಳಲ್ಲಿ, ಪೂರ್ವ ಸ್ಮರಣಂ=ಹಿಂದಿನ ಜನ್ಮಂಗಳ ಸ್ಮೃತಿಯು, ಜನಿಪ= ಹುಟ್ಟುವಂಥಾ, ಆಯಾಸ=ಕಷ್ಟವು, ಸಾರ್ವಮದು=ಪ್ರಾಪ್ತಿಯಾಗುವದು, ಇದು=

CC-0. Jangamwadi Math Collection. Digitized by eGangotri

ಉಕ್ತಗರ್ಭವು, ಸೂತಿಮರುತನಿಂದ=ಪ್ರಸೂತಿವಾಯುವಿನಿಂದ, ಜನಿಯಕ್ಕು=ಉತ್ಪತ್ತಿಯಾಗುವದು, ಈತೆರದಿ=ಈ ಪ್ರಕಾರದಿಂದ, ಪಿಂಡೋದಯವು=ಶರೀರದ ಹುಟ್ಟುವಿಕೆಯು, ಅಕ್ಕು=ಆಗುವದು.

ತಾತ್ಪರ್ಯ:— ಸ್ತ್ರೀ ಪುರುಷರ ರೇತೋ ರಕ್ತಗಳು ಕೂಡಿ ಮೊದಲನೆಯ ದಿವಸದಲ್ಲಿ ಕಲಲದಾಕೃತಿಯಾಗಿರುತ್ತವೆ. ಅಂದರೆ, ಒಂದು ಪಾತ್ರೆಯಲ್ಲಿ ಬಿಳೀ ಮತ್ತು ಕೆಂಪು ಬಣ್ಣಗಳನ್ನು ಕೂಡಿಸಲು ಒಂದು ಆಕಾರವಾಗಿರುವಂತೆ, ರೇತೋರಕ್ತಗಳು ಕೂಡಿಕೊಂಡು ಒಂದು ಅವಸ್ಥೆಯನ್ನು ಪಡೆದಿರುತ್ತವೆಂಬ ತಾತ್ಪರ್ಯವು. ಇದಕ್ಕೆ ಗರ್ಭವೆನ್ನುತ್ತಾರೆ. ಇದು ಐದನೇ ದಿವಸದಲ್ಲಿ ಅನೇಕ ಗುಳ್ಳೆಗಳ ಆಕಾರವನ್ನು ಪಡೆಯುತ್ತದೆ. ಬಳಿಕ ಏಳನೆಯ ದಿವಸದಲ್ಲಿ ಅದು ಸ್ವಲ್ಪ ಘಟ್ಟಿಯಾಗಿ ಬುರಗಿನ ಆಕಾರವನ್ನು ಹೊಂದುತ್ತದೆ. ಹತ್ತನೆಯ ದಿವಸದಲ್ಲಿ ಒಂದು ದುಂಡಾಕಾರವುಳ್ಳ ಗಡ್ಡೆ ಅಥವಾ ಅನ್ನದ ಉಂಡಿಯ ರೂಪವನ್ನು ಧರಿಸುತ್ತದೆ. ಹದಿನೈದು ದಿವಸಕ್ಕೆ ಅದು ಸ್ವಲ್ಪ ಬೆಳೆದು ಕೋಲಿನಂತೆ ಉದ್ದವಾಗುತ್ತದೆ. ಅನಂತರ ಒಂದು ತಿಂಗಳಿಗೆ ಶಿರವು, ಎರಡು ತಿಂಗಳಿಗೆ ಬಾಹುಗಳು, ಮೂರು ತಿಂಗಳಿಗೆ ಪಾದಗಳು, ನಾಲ್ಕು ತಿಂಗಳಿಗೆ ಹೊಟ್ಟೆ ಬೆರಳು ಮೊದಲಾದ ಅವಯವಗಳೆಲ್ಲಾ ಉತ್ಪತ್ತಿಯಾಗುತ್ತವೆ. ಆಗ ಗರ್ಭವು ತಾಯಿಯ ಹೊಟ್ಟೆಯಲ್ಲಿ ಪ್ರಕಟವಾಗುತ್ತದೆ. ಕೂಸು ಗಂಡಾಗಿದ್ದರೆ ಹೊಟ್ಟೆಯ ಬಲಭಾಗದಲ್ಲಿರುವದು. ಹೆಣ್ಣಾಗಿದ್ದರೆ ಎಡಭಾಗದಲ್ಲಿರುವದು. ನಪುಂಸಕವಾಗಿದ್ದರೆ ಮಧ್ಯದಲ್ಲಿರುತ್ತದೆ. ಆದ್ದರಿಂದ ತಾಯಿಯು ಬಲಭುಜವನ್ನು ನೆಲಕ್ಕೆ ಹಚ್ಚಿ ಮಲಗಿಕೊಂಡರೆ, ಗಂಡು ಹುಟ್ಟುವದೆಂದೂ, ಎಡಭುಜವನ್ನು ನೆಲಕ್ಕೆ ಹಚ್ಚಿ ಮಲಗಿಕೊಂಡರೆ ಹೆಣ್ಣು ಹುಟ್ಟುವನೆಂದೂ ಊಹೆಮಾಡಬೇಕು. ಮತ್ತು ಸ್ಥಿರತ್ವ ಗಾಂಭೀರ್ಯತ್ವ ಮೊದಲಾದ ಭಾವನೆಗಳು ತೋರಿದರೆ ಗಂಡು ಹುಟ್ಟುವದೆಂದೂ, ಚಾಪಲ್ಯತ್ವ ನಾಚಿಕೆ ಮೊದಲಾದ ಭಾವನೆಗಳು ತೋರಿದರೆ ಹೆಣ್ಣು ಹುಟ್ಟುವದೆಂದೂ ತಿಳಿಯಬೇಕು. ಮತ್ತು ಹೊಟ್ಟೆಯೊಳಗಿರುವ ಗರ್ಭವೇ ತಾಯಿಯ ಮನೋ ಮೂಲಕ ಅನೇಕ ವಿಷಯಗಳನ್ನು ಇಚ್ಛಿಸುತ್ತದೆ. ಆದ್ದರಿಂದ ತಾಯಿಯು ಇಚ್ಛಿಸಿದ್ದನ್ನು ಗರ್ಭ ಬೆಳೆಯುವದರ ಸಲುವಾಗಿ ಅವಶ್ಯವಾಗಿ ಕೊಡತಕ್ಕದು. ಒಂದುವೇಳೆ ಬಯಕೆಯನ್ನು ಪೂರ್ಣಮಾಡದಿದ್ದರೆ, ಗರ್ಭವು ಅವಯವಗಳಿಂದ ಹೀನವಾಗಿಯೂ ಅಶಕ್ತವಾಗಿಯೂ ಬುದ್ಧಿ ಮಾಂದ್ಯವುಳ್ಳದ್ದಾಗಿಯೂ ಬಹುಕಷ್ಟದಿಂದ ಹುಟ್ಟುತ್ತದೆ. ಆದ್ದರಿಂದ ಗರ್ಭಿಣಿಯ ಬಯಕೆಯನ್ನು ಬಲ್ಲವರು ಪೂರ್ಣಮಾಡಬೇಕು. ಐದನೆಯತಿಂಗಳಲ್ಲಿ ಮಾಂಸ ರಕ್ತಗಳು ಬೆಳೆಯುತ್ತವೆ. ಕೂದಲುಗಳು ನೇತ್ರಾದಿ ತೂತುಗಳು ಕಾಣುತ್ತವೆ. ಆರನೆಯ ತಿಂಗಳಲ್ಲಿ ಎಲುಬುಗಳು ನಾಡಿಗಳು ಉಗುರುಗಳು ಆಗುತ್ತವೆ. ಏಳನೆಯ ತಿಂಗಳಿಗೆ ಬಲ, ಬಣ್ಣ, ಶರೀರ ಪೂರ್ಣತ್ವ ಚಲನತ್ವಾದಿಗಳು ಆಗುತ್ತವೆ. ಎಂಟ

CC-0. Jangamwadi Math Collection. Digitized by eGangotri

ನೆಯ ತಿಂಗಳಲ್ಲಿ ಗರ್ಭವು ತನ್ನ ಎರಡು ಕೈಗಳನ್ನೂ ಎರಡು ಮೊಣಕಾಲ ಸಂಧಿಗಳಲ್ಲಿ ಸೇರಿಸಿ, ಕಿವಿಗಳನ್ನು ಮುಚ್ಚಿಕೊಂಡಿರುತ್ತದೆ. ಮತ್ತು ಹಿಂದಿನ ಮುಂದಿನ ಅನೇಕ ಜನ್ಮಂಗಳ ಜ್ಞಾನವಾಗುವದರಿಂದ ಉದ್ವಿಗ್ನ ಮನಸ್ಸುಳ್ಳದ್ದಾಗಿ ಬಹಳೇ ಶೋಕವನ್ನು ಮಾಡುತ್ತದೆ. ಮತ್ತು ಗರ್ಭದಲ್ಲಿರುವಂಥಾ ಕೂಸು ಜಠರಾಗ್ನಿಯ ಸಂತಾಪದಿಂದಲೂ ಕೃಮಿಗಳ ಕಡತದಿಂದಲೂ ಮಲಮೂತ್ರಗಳ ಹೇಸಿಗೆಯಿಂದಲೂ ಬಹಳೇ ಸಂಕಟಪಡುತ್ತಾ ಕುಂಭೀಪಾಕ ನರಕದ ದುಃಖವು ಈ ದುಃಖಕ್ಕಿಂತಲೂ ಸ್ವಲ್ಪವೆಂದು ತಿಳಿಯುತ್ತದೆ. ಈ ರೀತಿ ಅನೇಕ ಜಾತಿಯ ದುಃಖಗಳನ್ನು ಸ್ಮರಣಮಾಡಿ ಈ ದುಃಖದಿಂದ ಬಿಡುಗಡೆಯಾಗಬೇಕಾದರೆ ಏನು ಉಪಾಯವನ್ನು ಮಾಡಬೇಕು. ಎಂದು ತನ್ನೊಳಗೆ ತಾನೇ ಆಲೋಚಿಸುತ್ತಾ, "ಹೇ ಶಂಭೋ! ಈ ಗರ್ಭವಾಸದಿಂದ ನನ್ನನ್ನು ಪಾರುಮಾಡಿದರೆ ಬಳಿಕೀ ಗರ್ಭಕ್ಕೆ ಎಂದೂ ಬಾರದಂತೆ ನಿನ್ನ ಭಕ್ತಿ ಜ್ಞಾನ ನಾಮಸ್ಮರಣ ಸಜ್ಜನರ ಸಂಗವನ್ನು ಮಾಡಿ ಕೃತಾರ್ಥನಾಗುತ್ತೇನೆ" ಎಂದು ಪರಮಾತ್ಮನನ್ನು ಕುರಿತು ಬೇಡಿಕೊಳ್ಳುತ್ತಿರುತ್ತದೆ. ಬಳಿಕ ಒಂಭತ್ತನೆಯ ತಿಂಗಳಲ್ಲಿ ಪ್ರಸೂತಿ ಸಮಯವು ಬರುತ್ತದೆ. ಆಗ ಕಟ್ಟಿಗೆಯ ಹೊರೆಯನ್ನು ಹೊತ್ತು ಬೇಸತ್ತು ನೆರಳಿಗೆ ಸುಮ್ಮನೆ ಕೂತುಕೊಂಡ ಪುರುಷನಂತೆ ಕೂಸು ಸುಮ್ಮನೇ ಕೂತುಕೊಳ್ಳುತ್ತದೆ. ಮತ್ತು ತಾಯಿಯ ನಾಭಿ ಸ್ಥಾನದಲ್ಲಿರುವ ನಾಡಿಯ ದ್ವಾರಾ ಅನ್ನದ ರಸವನ್ನು ಗ್ರಹಿಸಿ ಗರ್ಭವು ಜೀವಿಸಿರುತ್ತದೆ. ಈ ಸ್ಥಿತಿಯಿಂದ ಇರುವಷ್ಟರಲ್ಲಿ ಕೋಟಿ ಸಿಡ್ಲು ಹೊಡೆದಂತೆ ಪ್ರಸೂತಿವಾಯು ಹೊಡೆಯುತ್ತದೆ. ಆಗ ಅಧೋಮುಖವಾಗಿ ಕಂಬೆಚ್ಚಿನಲ್ಲಿ ತಂತಿಯು ಹಾಯ್ದಂತೆ ಬಹು ಕಷ್ಟದಿಂದ, ಜರಾಯು ಚೀಲವನ್ನು ಹರಿದು ಯೋನಿಯೆಂಬ ಯಂತ್ರದಿಂದ ಹೊರಗೆ ಬೀಳುತ್ತದೆ. ಆಗ ಕೂಸಿನ ಸರ್ವ ಅವಯವಗಳು ರಕ್ತ ಮೇದಸ್ಸುಗಳಿಂದ ಲೇಪಿಸಲ್ಪಟ್ಟಿರುತ್ತವೆ. ಮತ್ತು ಕೇವಲ ಮಾಂಸದ ಪಿಂಡವಿರೋಣದರಿಂದ ನಾಯಿ ಬೆಕ್ಕುಗಳಿಂದ ರಕ್ಷಿಸಲ್ಪಡುತ್ತದೆ. ಈ ರೀತಿ ಶರೀರವು ಉತ್ಪತ್ತಿಯಾಗಿರುವದು.

ಬಳಿಕ; ಪಂಚ ಭೂತಗಳ ಅಂಶಗಳಾದ ಕಠಿಣ, ದ್ರವ, ಉಷ್ಣ, ಚಲನ ಅವಕಾಶ ಲಕ್ಷಣಾತ್ಮಕವಾದ ಇಪ್ಪತ್ತೈದು ಗುಣಗಳು ಶರೀರದಲ್ಲಿರುತ್ತವೆ, ಆದ್ದರಿಂದ ಈ ಶರೀರವು ಭೌತಿಕವಾಗಿರುತ್ತದೆ. ಎಂದು ಹೇಳುತ್ತಾರೆ.

ಭೂತಾಂಶಕ ಗುಣ ಪಂಚೀಕರಿಸಿ ।
ಆ ತನುವಿನೊಳಿರುತಿಹ ವಾವರಿಸಿ ॥
ಸರನೆಲು ಮಾಂಸಂ ರೋಮ ತ್ವಕ್ಕು ।
ಧರೆಯ ಕಠಿಣ ಗುಣವಿಂ ತೈದಕ್ಕು ॥
ಜಲಕಫಮೂತ್ರಂ ರಕ್ತಂ ಪಿತ್ತ ।
ಜಲದಗುಣಗಳಿಂತೈದರ ನೊತ್ತ ॥

CC-0. Jangamwadi Math Collection. Digitized by eGangotri

ಕ್ಷುಧೆ ತೃಷೆ ನಿದ್ರಾಲಸ್ಯಂ ಸಂಗ ।
ವಿಧಿಸಿದ ಶಿಖಿ ಗುಣವಿಂತೈದಂಗ ॥
ಪರಿವ ನಿಲುವ ನಡಗುವ ಲಂಘಿಸುವ ।
ಚರಿಸುವ ಗುಣವೈದನಿಲನೊಳೆಸೆವ ॥
ಅರಿವರ್ಗದ ಕಡೆಯಣ ದುಳಿದೈದು ।
ಅರಿನಭ ಗುಣವಿಂತಿಪ್ಪತ್ತೈದು ॥೬॥

ಟೀಕಾ:— ಭೂತ=ಪಂಚಭೂತಗಳ, ಅಂಶಕ=ಭಾಗಸಂಬಂಧೆಗಳಾದ, ಗುಣ=ಕಠಿಣತ್ವಾದಿ ಗುಣಗಳು, ಪಂಚೀಕರಿಸಿ=ಐದ್ಯೆದು ವಿಭಾಗ ಮಾಡಿ, ಆ ತನುವಿನೊಳು=ಆ ಸ್ಥೂಲ ಶರೀರದಲ್ಲಿ, ಆವರಿಸಿ=ಮುಚ್ಚಿಕೊಂಡು, ಇರುತಿಹವು=ಇರುತ್ತಿರುವವು, ನರವು=ನಾಡಿಯು, ಎಲು=ಅಸ್ತಿ, ಮಾಂಸ=ಮಾಂಸವು, ರೋಮ=ಕೂದಲು, ತ್ವಕ್ಕು=ಚರ್ಮ, ಧರೆಯ=ಪೃಥ್ವಿಯ, ಕಠಿಣ=ಕಠಿಣವಾದ, ಗುಣವು=ಧರ್ಮವುಳ್ಳವು, ಇಂತು=ಈ ಪ್ರಕಾರ, ಐದಕ್ಕು=ಐದು ಆಗಿರುವವು, ಜಲ=ನೀರು, ಕಫ=ಕಫ, ಮೂತ್ರ=ಮೂತ್ರವು, ರಕ್ತಂ=ಶೋಣಿತವು, ಪಿತ್ತ=ಪಿತ್ತವು, ಇಂತು=ಈ ಪ್ರಕಾರ, ಐದರ ಮೊತ್ತ=ಜಲಾದಿ ಐದರ ಸಮೂಹವು, ಜಲದ=ನೀರಿನ, ಗುಣಗಳು=ಧರ್ಮಗಳು, ಕ್ಷುಧೆ=ಹಸಿವು, ತೃಷೆ=ನೀರಡಿಕೆ, ನಿದ್ರಾ=ನಿದ್ರೆ, ಆಲಸ್ಯ=ಸೋಮಾರಿತನವು, ಸಂಗ=ಸ್ತ್ರೀಸಂಗ, ಇಂತು=ಈ ಪ್ರಕಾರ, ಐದಂಗ=ಐದು ಭಾಗಗಳು, ವಿಧಿಸಿದ=ಸಂಬಂಧಿಸಲ್ಪಟ್ಟ, ಶಿಖಿ=ಅಗ್ನಿಯ, ಗುಣವು=ಧರ್ಮವುಳ್ಳವು, ಪರಿವ=ಹರಿಯವ, ನಿಲುವ=ನಿಲ್ಲುವ, ನಡಗುವ=ಹಾರುವ, ಲಂಘಿಸುವ=ಜಿಗಿಯುವ, ಚರಿಸುವ=ತಿರುಗಾಡುವ, ಅನಿಲನೊಳು=ವಾಯುವಿನಲ್ಲಿ, ಎಸೆವ=ಶೋಭಾಯಮಾನವಾದ, ಗುಣವೈದು=ಐದು ಧರ್ಮವುಳ್ಳವುಗಳು, ಅರಿವರ್ಗದ=(ಕಾಮಕ್ರೋಧಾದಿ) ಶತ್ರುವರ್ಗದ, ಕಡೆಯಣದ=ಕಡೆಯಲ್ಲಿರುವ ಮತ್ಸರ ಗುಣವನ್ನು, ಉಳಿದು=ಬಿಟ್ಟು, ಐದು=ಕಾಮ ಕ್ರೋಧಾಧಿಗಳು, ನಭ=ಆಕಾಶದ, ಗುಣವು=ಗುಣವುಳ್ಳವು, ಇಂತು=ಈ ಪ್ರಕಾರ, ಇಪ್ಪತ್ತೈದು ಗುಣಗಳು, ಅರಿ=ತಿಳಿ.

ತಾತ್ಪರ್ಯ:— ಹೇ ಶಿಷ್ಯನೇ, ಹಿಂದೆ ಹೇಳಲ್ಪಟ್ಟ ಕ್ರಮದಿಂದ ಉತ್ಪನ್ನವಾದ ಈ ಸ್ಥೂಲ ಶರೀರವು ಪಂಚಭೂತಗಳ ಕಾರ್ಯವಾಗಿರುತ್ತದೆ. ಹೇಗಂದರೆ, ಶರೀರದಲ್ಲಿರುವ ಕಠಿಣ ಭಾಗವೆಲ್ಲಾ ಪೃಥ್ವಿಯದೆನಿಸುವದು. ದ್ರವವೆಲ್ಲಾ ಜಲದಂಶವೆನಿಸುವದು. ಉಷ್ಣವೆಲ್ಲಾ ಅಗ್ನಿಯ ಭಾಗವೆನಿಸುವದು. ಚಲನತ್ವವೆಲ್ಲವೂ ವಾಯುವಿನ ಭಾಗವೆನಿಸುತ್ತದೆ. ಅವಕಾಶ ಧರ್ಮವು ಆಕಾಶದ್ದಿರುತ್ತದೆ. ಆದ್ದರಿಂದ ಶರೀರವು ಭೂತಕಾರ್ಯವಾದ್ದರಿಂದ ನೀನಲ್ಲ ನೀನು ಈ ಸ್ಥೂಲ ಶರೀರಕ್ಕೆ ದ್ರಷ್ಟಾ ಪುರುಷನಾಗಿದ್ದೀ.

ಶಿಷ್ಯ:— ಹೇ ಸ್ವಾಮೀ ಈ ಶರೀರವು ಭೌತಿಕವಾಗಿರುವದನ್ನು ಚನ್ನಾಗಿ ನನಗೆ ತಿಳಿಯುವಂತೆ ಬೋಧೆ ಮಾಡಬೇಕು.

CC-0. Jangamwadi Math Collection. Digitized by eGangotri

ಗುರು:— ಅಸ್ಥಿ ರೋಮಾದಿಗಳು ಕಠಿಣವಾಗಿರೋಣದರಿಂದ ಭೂಮಿಯ ಕಾರ್ಯವಾಗಿರುತ್ತವೆ. ಮತ್ತು ಮೃತವಾದ ಬಳಿಕ ಶರೀರವನ್ನು ಭೂಮಿಯಲ್ಲಿ ಹುಗಿದರೂ ಅಸ್ಥಿ ರೋಮಗಳು ಕೆಲವು ದಿವಸ ಇದ್ದು ಭೂಮಿಯಲ್ಲಿ ಏಕವಾಗುತ್ತವೆ. ಆದ್ದರಿಂದ ರೋಮಾದಿಗಳು ಭೂಮಿಯ ಭಾಗಗಳು.

ಮೂತ್ರ ರಕ್ತ ಪಿತ್ತಾದಿಗಳು ದ್ರವವಾಗಿರೋಣದರಿಂದ ಜಲದ ಕಾರ್ಯಗಳಾಗಿರುತ್ತವೆ.

ಕ್ಷುಧಾತೃಷಾದಿಗಳು ಉಷ್ಣವಾಗಿರುವದು ಅನುಭವಕ್ಕೆ ಬರುವದರಿಂದ ಅಗ್ನಿಯ ಕಾರ್ಯಗಳಾಗಿರುತ್ತವೆ. ಹಸಿವೆ ನೀರಡಿಕೆಗಳು ಜಠರಾಗ್ನಿಯ ಪ್ರಬಲತೆಯಿಂದಲೇ ಆಗುತ್ತವೆ. ಮತ್ತು ನಿದ್ರಾ ಆಲಸ್ಯಗಳು ಬೇಸಿಗೆ ಕಾಲದಲ್ಲಿಯೇ ವಿಶೇಷವಾಗಿ ತೋರುತ್ತವೆ.

ಹರಿಯುವ ನಿಲ್ಲುವ ನಡುಗುವ ಮೊದಲಾದ ಗುಣಗಳಲ್ಲಿ ಚಲನತ್ವ ಧರ್ಮವಿರೋಣದರಿಂದ ವಾಯು ಕಾರ್ಯಗಳಾಗಿರುತ್ತವೆ. ಕಾಮಕ್ರೋಧಾದಿಗಳು ಹೃದಯಾಕಾಶದಲ್ಲಿ ಹುಟ್ಟುವದರಿಂದಲೂ ನಿರೂಪಗಳಾದ್ದರಿಂದಲೂ ಆಕಾಶದ ಕಾರ್ಯಗಳೆನಿಸುತ್ತವೆ.

ಹೀಗಿರುವ ಇಪ್ಪತ್ತೈದು ತತ್ವಗಳು ನೀನಲ್ಲ. ಇವುಗಳಿಗೆ ಸಾಕ್ಷಿಯಾಗಿರುತ್ತೀ. ಆ ಇಪ್ಪತ್ತೈದು ತತ್ವಗಳು ಕೆಳಗಿನ ಕೋಷ್ಟಕದಲ್ಲಿ ಕೊಟ್ಟಂತೆ ಇರುತ್ತವೆ.

ಪೃಥ್ವಿ	ಜಲ	ಅಗ್ನಿ	ವಾಯು	ಆಕಾಶ
ನರ	ನೀರು	ಕ್ಷುಧೆ	ಹರಿವುದು	ಕಾಮ
ಎಲು	ಕಫ	ತೃಷೆ	ನಿಲುವುದು	ಕ್ರೋಧ
ಮಾಂಸ	ಮೂತ್ರ	ನಿದ್ರೆ	ನಡುಗುವದು	ಲೋಭ
ಕೂದಲು	ರಕ್ತ	ಆಲಸ್ಯ	ಹಾರುವದು	ಮೋಹ
ಚರ್ಮ	ಪಿತ್ತ	ಸಂಗ	ನಡೆಯುವದು	ಮದ

CC-0. Jangamwadi Math Collection. Digitized by eGangotri

ಬಳಿಕ; ಪಂಚಭೂತಗಳ ಪಂಚೀಕರಣದಿಂದಾದ ಇಪ್ಪತ್ತೈದು ತತ್ವಾತ್ಮಕ ಸ್ಥೂಲ ಶರೀರವು ಆರು ವಿಕಾರಗಳುಳ್ಳದ್ದೆಂದು ಹೇಳುತ್ತಾರೆ.

ಪಂಚೀಕರಿಸಿದ ಭೂತದೊಳಾದ ।
ಮುಂಚಿನಜಾಂಡದ ಭುವನದೊಳಾದ॥
ಅನ್ನದ ವಿಕೃತಿಯೆನಿಸುವೀ ದೇಹ।
ಉನ್ನಿಸೆ ಭಾವ ವಿಕಾರ ಸಮೂಹ ॥
ಪೊಟ್ಟೆಯೊಳುಂಟೆಬಸ್ತಿತೆಯೊಂದು।
ಪುಟ್ಟುವ ಜಾಯತೆಯೆಂಬುವದೊಂದು॥
ಶಿಶುರೂಪಿನ ಪರಿಣಮತೆಯದೊಂದು ।
ಪೊಸ ಜವ್ವನದ ವಿವರ್ಧತೆಯೊಂದು ॥
ಮುಪ್ಪಿನ ಪಕ್ಷೀಯತೆ ಮತ್ತೊಂದು ।
ತಪ್ಪದೆ ಕೆಡುವ ವಿನಶ್ಯತೆಯೊಂದು ॥
ಇವು ಷಡ್ಭಾವ ವಿಕಾರವೆನಿಕ್ಕು ।
ಇವರಿಂ ಬಹು ಬಾಧೆಗಳುಂಟಕ್ಕು ॥೭॥

ಟೀಕಾ:—ಪಂಚೀಕರಿಸಿದ=(ಪ್ರತಿ ಒಂದು ಭೂತವನ್ನು) ಐದೈದು ವಿಭಾಗ ಮಾಡಿದ, ಭೂತದೊಳ್=ಭೂತದಿಂದ, ಆದ=ಆದಂಥಾ, ಮುಂಚಿನ=ಮೊದಲಿನ, ಅಜಾಂಡ=ಬ್ರಹ್ಮಾಂಡದ, ಭುವನದೊಳ್=ಲೋಕದಲ್ಲಿ,ಆದ=ಆದಂಥಾ, ಅನ್ನದ= ಅನ್ನದ, ವಿಕೃತಿ=ವಿಕಾರ, ಎನಿಸುವ=ಹೇಳಿಸಿಕೊಳ್ಳುವ, ಈ ದೇಹ=ಈ ಶರೀರವು, ಉನ್ನಿಸೆ=ವಿಚಾರ ಮಾಡಿನೋಡಲು, ಭಾವವಿಕಾರ ಸಮೂಹ=ಆರು ವಿಕಾರಗಳುಳ್ಳದ್ದು, ಪೊಟ್ಟೆಯೊಳು=ಹೊಟ್ಟೆಯಲ್ಲಿ, ಉಂಟೆಂಬ=ಇರುತ್ತದೆಂಬ, (ಅರ್ಥವುಳ್ಳ) ಅಸ್ತಿತೆಯೊಂದು=ಅಸ್ತಿತೆ ಒಂದು ವಿಕಾರವು, ಪುಟ್ಟುವ=ಹುಟ್ಟುವ;(ಅರ್ಥವುಳ್ಳ) ಜಾಯತೆಯೆಂಬುವದೊಂದು=ಜಾಯತೆ ಎಂಬ ಒಂದು ವಿಕಾರವು, ಶಿಶುರೂಪಿನ= ಬಾಲ್ಯರೂಪಿನ (ಅರ್ಥವುಳ್ಳ) ಪರಿಣಮತೆಯದೊಂದು = ಪರಿಣತೆಯೆಂಬ ಒಂದು ವಿಕಾರವು, ಪೊಸಜವ್ವನದ=ಹೊಸ ಯೌವನಾವಸ್ಥೆಯ, (ಅರ್ಥವುಳ್ಳ) ವಿವರ್ಧತೆಯೊಂದು = ವಿವರ್ಧತೆಯೆಂಬ ಒಂದು ವಿಕಾರವು, ಮುಪ್ಪಿನ= ವೃದ್ಧಾಪ್ಯವಸ್ಥೆಯ (ಅರ್ಥವುಳ್ಳ) ಅಪಕ್ಷೀಯತೆ=ಸೊರಗುವದು, ಮತ್ತೊಂದು= ಎರಡನೆಯದು, ತಪ್ಪದೆ=ಬಿಡದೆ, ಕೆಡುವ=ನಾಶವಾಗುವ (ಅರ್ಥವುಳ್ಳ) ವಿನಶ್ಯತೆಯೊಂದು=ವಿನಶ್ಯತೆಯೆಂಬ ವಿಕಾರ ಒಂದು, ಇವು=ಈಗ ಹೇಳಿದುವು, ಷಡ್ಭಾವ ವಿಕಾರವೆನಿಕ್ಕು=ಆರು ವಿಕಾರಗಳೆನಿಸುವವು, ಇವರಿಂ=ಈ ಆರು ವಿಕಾರಗಳಿಂದ, ಬಹು ಬಾಧೆಗಳು=ಅನೇಕ ಸಂಕಟಗಳು, ಉಂಟಕ್ಕು=ಉಂಟಾಗುತ್ತವೆ.

CC-0. Jangamwadi Math Collection. Digitized by eGangotri

ತಾತ್ಪರ್ಯ:—ಎಲೈ ಶಿಷ್ಯನೇ ಕೇಳು. ಈ ದೇಹವು ಪಂಚ ಭೂತಗಳನ್ನು ಇದ್ದೈದು ವಿಭಾಗ ಮಾಡಿದ್ದರಿಂದಾದದ್ದು ಮತ್ತು ಈ ಬ್ರಹ್ಮಾಂಡಕ್ಕಿಂತಲೂ ಮೊದಲೊಂದು ಬ್ರಹ್ಮಾಂಡವಿತ್ತು. ಆ ಬ್ರಹ್ಮಾಂಡ ಪ್ರಳಯವಾದಮೇಲೆ ಈ ಬ್ರಹ್ಮಾಂಡ ಹುಟ್ಟಿರುತ್ತದೆ. ಆ ಬ್ರಹ್ಮಾಂಡದಲ್ಲಿ ನೀನೊಂದು ಶರೀರವನ್ನು ಧಾರಣಮಾಡಿಕೊಂಡಿದ್ದಿ. ಆ ಶರೀರದಿಂದ ಪುಣ್ಯಪಾಪಕರ್ಮಗಳನ್ನು ಮಾಡಿರುವಿ. ಆ ಪುಣ್ಯಪಾಪಕರ್ಮಗಳಿಂದಲೂ ಈ ಶರೀರವು ರಚಿಸಲ್ಪಟ್ಟಿರುತ್ತದೆ. ಮತ್ತು ತಾಯಿತಂದೆಗಳು ಅನ್ನವನ್ನು ಊಟಮಾಡಲು ಆ ಅನ್ನವು ರೇತೋರಕ್ತಗಳ ಆಕಾರವಾಗಿ ಪರಿಣಮಿಸುತ್ತದೆ ಆ ರೇತೋರಕ್ತಗಳ ಸಂಯೋಗದಿಂದ ಈ ಶರೀರವು ಹುಟ್ಟಿದ್ದರಿಂದಲೂ ಮತ್ತು ಅನ್ನದಿಂದಲೇ ಜೀವಿಸುವದರಿಂದಲೂ ಈ ದೇಹವು ಅನ್ನದ ವಿಕಾರವಾಗಿರುತ್ತದೆ ಅರ್ಥಾತ್ ದೇಹವು ಭೂತಕಾರ್ಯ ಪುಣ್ಯಪಾಪ ಕರ್ಮಜನಿತ, ಅನ್ನದ ವಿಕಾರಾತ್ಮಕ ಎಂದು ಹೇಳಲ್ಪಟ್ಟಂತಾಯಿತು. ಆದ್ದರಿಂದ ಇಂಥಾದೇಹವು ಯಾಸ್ಕಮುನಿಯಿಂದ ಹೇಳಲ್ಪಟ್ಟ ಆರುವಿಕಾರಗಳುಳ್ಳದ್ದರಿಂದ ಇದು ಅನಾತ್ಮವಾಗಿರುತ್ತದೆ. ನೀನಲ್ಲ; ನೀನು ಇದಕ್ಕೆ ಸಾಕ್ಷಿಯಾಗಿಯೂ ನಿರವಯವನಾಗಿಯೂ ನಿರ್ವಿಕಾರನಾಗಿಯೂ ಅಜಡನಾಗಿಯೂ ಇದ್ದೀ.

ಶಿಷ್ಯ:— ಹೇ ಸ್ವಾಮೀ ಈ ದೇಹವು ಆರು ವಿಕಾರಗಳುಳ್ಳದ್ದಿರುತ್ತದೆಂದು ಹೇಳಿದಿರಿ; ಆ ವಿಕಾರಗಳು ಯಾವವು?

ಗುರು:— ಈ ದೇಹವು ಹುಟ್ಟುವದಕ್ಕಿಂತ ಮುಂಚೆ ತಾಯಿಯ ಹೊಟ್ಟೆಯಲ್ಲಿರುವದರಿಂದ ಅಸ್ತಿತೆಯೆಂದೂ, ತಾಯಿಯ ಗರ್ಭದಿಂದ ಹುಟ್ಟುವದರಿಂದ ಜಾಯತೆಯೆಂದೂ, ಬಾಲ್ಯಾವಸ್ಥೆಯನ್ನು ಪಡೆಯುವದರಿಂದ ಪರಿಣತೆಯೆಂದೂ, ದೊಡ್ಡದಾಗಿ ಯೌವನಾವಸ್ಥೆಯನ್ನು ಹೊಂದುವದರಿಂದ ವಿವರ್ಧತೆಯೆಂದೂ, ವಾರ್ಧಿಕ್ಯದಲ್ಲಿ ದೇಹವು ಕ್ಷೀಣವಾಗುವದರಿಂದ ಅಪಕ್ಷೀಯತೆಯೆಂದೂ, ಅವಶ್ಯವಾಗಿ ಮರಣವಾಗುವದರಿಂದ ವಿನಶ್ಯತಿಯೆಂದೂ, ಹೀಗೆ ಆರು ವಿಕಾರಗಳು ಶರೀರಕ್ಕೆ ಇರುತ್ತವೆ. ಈ ಆರು ವಿಕಾರಾವಸ್ಥೆಗಳಲ್ಲಿ ಅನೇಕ ದುಃಖಗಳು ಬರುತ್ತವೆ. ಯಾವವು? ಅಂದರೆ ಗರ್ಭದುಃಖ, ಜನನದುಃಖ, ಬಾಲ್ಯದುಃಖ, ಯೌವನದುಃಖ, ವೃಧ್ಧಾಪ್ಯದುಃಖ, ಮರಣದುಃಖ, ಅಧ್ಯಾತ್ಮಿಕಾದಿ ತಾಪತ್ರಯದುಃಖ ಇನ್ನೂ ಅನೇಕ ದುಃಖಗಳಿರುತ್ತವೆ. ಇವುಗಳೆಲ್ಲಕ್ಕೂ ಈ ಆರು ವಿಕಾರಗಳೇ ಕಾರಣಗಳಾಗಿರುತ್ತವೆ.

ಬಳಿಕ; ಶರೀರದ ಪರಿಮಿತಿಯನ್ನೂ ನಾಭಿಸ್ಥಾನದಲ್ಲಿರುವ ನಾಡಿಯ ಗಡ್ಡಿಯನ್ನೂ ಜೀವಾತ್ಮನಿರುವ ಮನೆಯನ್ನೂ ಹೇಳುತ್ತಾರೆ.

ತನು ತೊಂಭತ್ತಾರಂಗುಲದುದ್ದ ।
ಎನಿಸುವ ಪವಣವಿದಾಗಮ ಸಿದ್ಧ ॥
ಮೂಲಾಧಾರವೆ ತಿಳಿ ತನು ಮಧ್ಯ ।
ಬಾಲನೆ ಯದು ಗುದ ಗುಹ್ಯದ ಮಧ್ಯ ॥

CC-0. Jangamwadi Math Collection. Digitized by eGangotri

ಅದರಿಂ ಮೇಲೆ ನವಾಂಗುಲ ಮಿತಿಯೆ ।
ಪದವದು ನಾಭಿಯೊಳಿಪ್ಪುವು ತಿಳಿಯೆ ॥
ಅಲ್ಲಿಯೆ ನಾಲ್ಬೆರಳಾಯತದಿಂದ ।
ಬಲ್ಲನೆ ಮೆರೆವುದು ನಾಡಿಯ ಕಂದ ॥
ಅದರೊಳಗುದಿಸಿದವೆಲ್ಲಾ ನಾಡಿ ।
ಅದು ತೋರ್ಪುದು ಕುಂಡಲಿಯೊಡಗೂಡಿ ।
ಕೇಳದರಿಂದೀರಾರಂಗುಲಿಯ ।
ಮೇಲಿಹ ಹೃದಯವೆ ಜೀವನ ನಿಳಯ ॥ ೮ ॥

ಟೀಕಾ:— ತನು=ಶರೀರವು, ತೊಂಭತ್ತಾರಂಗುಲದ=ತೊಂಭತ್ತಾರು ಬೆರಳಿನ, ಉದ್ದ=ಎತ್ತರವು, ಎನಿಸುವ=ಹೇಳಿಸಿಕೊಳ್ಳುವ, ಇದು=ಈ, ಪವಣವು=ಪ್ರಮಾಣವು, ಆಗಮಸಿದ್ಧ=ಆಗಮದಿಂದ ಹೇಳಲ್ಪಟ್ಟಿರುತ್ತದೆ, ಮೂಲಾಧಾರವೇ=ಮೂಲಾಧಾರವೇ, ತನುಮಧ್ಯ=ಶರೀರದ ಮಧ್ಯಸ್ಥಾನವಾಗಿರುತ್ತದೆ, ತಿಳಿ=ಅರಿ, ಬಾಲನೇ=ಹೇ ಮಗನೇ! ಅದು=ಆ ತನುಮಧ್ಯವು, ಗುದಗುಹ್ಯದಮಧ್ಯ=ಪಾಯು ಮತ್ತು ಉಪಸ್ಥ ಇವೆರಡರ ಮಧ್ಯದಲ್ಲಿರುವದು, ಅದರಿಂ=ಆ ತನುಮಧ್ಯದಿಂದ, ಮೇಲೆ=ಊರ್ಧ್ವಕ್ಕೆ, ನವಾಂಗುಲ=ಒಂಭತ್ತು ಬೆರಳಿನ, ಮಿತಿಯೆ=ಅಳತೆಯಲ್ಲಿ, ಪದವದು=ಸ್ಥಾನವದು, ತಿಳಿಯೆ=ವಿಚಾರಮಾಡಲು, ನಾಭಿಯೊಳಿಪ್ಪುದು=ನಾಭಿಯಲ್ಲಿರುವದು, ಬಲ್ಲನೆ=ವಿಚಾರಶೀಲನಾದ ಶಿಷ್ಯನೇ,ಅಲ್ಲಿಯೆ=ಆ ನಾಭಿಯಲ್ಲಿಯೇ, ನಾಲ್ಬೆರಳ=ನಾಲ್ಕು ಬೆರಳಿನ, ಆಯತದಿಂದ=ವಿಸ್ತಾರದಿಂದ, ನಾಡಿಯ ಕಂದ=ನಾಡಿಗಳ ಗಡ್ಡಿಯು, ಮೆರೆವುದು=ಶೋಭಾಯಮಾನವಾಗಿರುವದು, ಅದರೊಳಗೆ=ಆ ನಾಡಿ ಗಡ್ಡಿಯಿಂದ, ಎಲ್ಲಾ ನಾಡಿ=ಸಕಲ ನಾಡಿಗಳು, ಉದಿಸಿದವು=ಉತ್ಪನ್ನವಾದವು, ಅದು=ನಾಡಿಯ ಕಂದವು, ಕುಂಡಲಿಯೊಡಗೂಡಿ=ಕುಂಡಲಿ ನಾಮಕ ಸರ್ಪದೊಡನೆ ಕೂಡಿಕೊಂಡು, ತೋರ್ಪುದು=ಪ್ರತೀತಿಯಾಗುವದು, ಕೇಳ್=ಎಲೈ ಶಿಷ್ಯನೇ! ಏಕಾಗ್ರಚಿತ್ತದಿಂದ ಆಲಿಸು, ಅದರಿಂ=ಆ ನಾಭಿಸ್ಥಾನದಿಂದ, ಈರಾಂಗುಲಿಯ=ಹನ್ನೆರಡುಬೆರಳಿನ, ಮೇಲಿನ=ಊರ್ಧ್ವದಲ್ಲಿರುವ, ಹೃದಯವೇ=ಹೃದಯ ಸ್ಥಾನವೇ, ಜೀವನ=ಜೀವಾತ್ಮನ, ನಿಳಯ=ಮನೆಯು (ಆಗಿರುವದು)

ತಾತ್ಪರ್ಯ:— ಎಲೈ ಶಿಷ್ಯನೇ ಏಕಾಗ್ರ ಚಿತ್ತದಿಂದ ಆಲಿಸು! ಈ ಶರೀರವು ತಮ್ಮ ತಮ್ಮ ತೊಂಭತ್ತಾರು ಬೆರಳಿನ ಪ್ರಮಾಣದಷ್ಟು ಉದ್ದವಾಗಿರುತ್ತದೆ. ಈ ಮಾತು ನಮ್ಮ ಸ್ವಕಪೋಲ ಕಲ್ಪಿತವಾದದ್ದಲ್ಲ. ಕಿಂತು ವೇದ ಪ್ರಮಾಣಸಿದ್ಧ ವಾಗಿರುತ್ತದೆ. ಅಂದರೆ 'ಷಣ್ಣವತ್ಯಾತ್ಮಕ ಮಿತಿ' ಜಾಬಾಲೋಪನಿಷತ್ತಿನಲ್ಲಿ ಹೇಳಿರುತ್ತದೆ. ಈ ದೇಹದ ಮಧ್ಯಸ್ಥಾನವು ಮೂಲಾಧಾರವೆಂದು ಹೇಳಲ್ಪಡುತ್ತದೆ. ಆದರೆ, ಆ ಮೂಲಾಧಾರವು ಗುದದಿಂದ ಎರಡಂಗುಲದ ಮೇಲೆ ಮೇಢ್ರದಿಂದ ಎರಡಂಗುಲದ ಕೆಳಗೆ ಇರುತ್ತದೆ. ಆದರಿಂದ ಒಂಭತ್ತು ಅಂಗುಲಗಳ

CC-0. Jangamwadi Math Collection. Digitized by eGangotri

ಮೇಲೆ ನಾಭಿಸ್ಥಾನವಿರುತ್ತದೆ. ಅಲ್ಲಿ ನಾಲ್ಕು ಬೆರಳುಗಳ ಪ್ರಮಾಣ ವಿಸ್ತಾರವಾಗಿರುವ ಒಂದು ನಾಡಿ ಕಂದವು ಕೋಳಿಯ ತತ್ತಿಯಾಕೃತಿಯಾಗಿರುತ್ತದೆ. ಆದರೊಳಗಿಂದ ಈಡಾ ಪಿಂಗಳಾ ಸುಷುಮ್ನಾ ಮೊದಲಾದ ನಾಡಿಗಳು ಹೊರಟಿರುತ್ತವೆ. ಹೇಗಂದರೆ, ಮೂಲಾಧಾರದಿಂದೆದ್ದು ಬ್ರಹ್ಮರಂಧ್ರ ಪರ್ಯಂತರ ಸುಷುಮ್ನಾ ನಾಡಿಯು ಹೋಗಿರುತ್ತದೆ. ಇದರ ಎಡಬಲದಲ್ಲಿ ಈಡಾ ಪಿಂಗಳ ನಾಡಿಗಳು ಉದಯವಾಗಿರುತ್ತವೆ. ಗಾಂಧಾರಿ, ಹಸ್ತಿ, ಜೆಹ್ವೆ, ಎಂಬೆರಡು ನಾಡಿಗಳು ಎಡಬಲದ ಎರಡು ನೇತ್ರಗಳ ಪರ್ಯಂತರ ಹೋಗಿರುತ್ತವೆ. ವಿಲಂಬಿನಿ ನಾಡಿಯು ನಾಸಿಕದ ವರೆಗೆ ಹೋಗಿರುತ್ತದೆ. ಪೂಷಾ ಅಲಂಬುಷಾ ಎಂಬೆರಡು ನಾಡಿಗಳು ಎರಡು ಕಿವಿಗಳ ಪರ್ಯಂತರ ಹೋಗಿರುತ್ತವೆ. ಶೂರೆ ಎಂಬ ನಾಡಿಯು ಭ್ರೂಮಧ್ಯೆ ಪರ್ಯಂತರ ಹೋಗಿರುವದು. ವಿಶ್ವೋದರಿ ಎಂಬ ನಾಡಿಯು ಭಕ್ಷ್ಯಭೋಜ್ಯಾದಿಗಳೆಂಬ ನಾಲ್ಕು ಪ್ರಕಾರದ ಅನ್ನವನ್ನು ಉಣ್ಣುತ್ತದೆ. ಸರಸ್ವತಿ ಎಂಬ ನಾಡಿಯು ನಾಲಿಗೆಯ ವರೆಗೆ ಹೋಗಿ ಯಾವತ್ತು ಭಾಷಾ ಮತ್ತು ಅನೇಕ ತರದ ಶಬ್ದಗಳನ್ನು ನುಡಿಯುತ್ತಿರುವದು. ರಾಕೆ ಎಂಬ ಹೆಸರಿನ ನಾಡಿಯು ಜಲವನ್ನು ಕುಡಿದು ಕ್ಷಣಕಾಲದಲ್ಲಿ ಕೆಮ್ಮನ್ನು ಹುಟ್ಟಿಸಿ, ಮೂಗಿನಲ್ಲಿ ಶ್ಲೇಷ್ಮವನ್ನು ಸಿಂಪಡಿಸುತ್ತದೆ. ಕಂಠಕೂಪವನ್ನು ಆಶ್ರಯಮಾಡಿಕೊಂಡಿರುವ ಶಂಖಿನೀ ನಾಮಕ ನಾಡಿಯು ಕೆಳಮುಖವುಳ್ಳದ್ದಾಗಿ ಅನ್ನಸಾರವನ್ನು ಸೆಳದುಕೊಂಡು ಮಸ್ತಕದಲ್ಲಿ ಸಿಂಪಡಿಸುತ್ತದೆ. ನಾಭಿಯ ಕೆಳಭಾಗಕ್ಕೆ ಮೂರು ನಾಡಿಗಳು ಹೋಗಿರುತ್ತವೆ. ಅವು ಯಾವವು ? ಅಂದರೆ, ಕುಹೂ ನಾಮಕ ನಾಡಿಯು ಮಲವನ್ನು ತ್ಯಜಿಸುತ್ತದೆ. ವಾರುಣಿ ಎಂಬ ನಾಡಿಯು ಮೂತ್ರವನ್ನು ಬಿಡುತ್ತದೆ. ಚಿತ್ರ ಎಂಬ ಸಿವನೀ ನಾಡಿಯು ವೀರ್ಯಸೇಚನ ಮಾಡುತ್ತದೆ. ಈ ರೀತಿ ಮುಖ್ಯವಾದ ಕೆಲವು ನಾಡಿಗಳನ್ನು ಹೇಳಿದ್ದೇವೆ. ಆದರೆ ನಾಡಿಗಳು ಎಪ್ಪತ್ತೆರಡು ಸಾವಿರವಿರುತ್ತವೆ. ಅರಳೆ ಎಲೆಯು ಜಲದಲ್ಲಿ ಬಿದ್ದು ಕೊಳೆಯಲು ಕಡೆಗೆ ಅದರಲ್ಲಿ ಸಣ್ಣ ಸಣ್ಣ ಎಳೆಗಳು ಎಲ್ಲ ಕಡೆಗೂ ಹೇಗೆ ತೋರುತ್ತವೆಯೋ, ಹಾಗೇ ಈ ಶರೀರದ ತುಂಬ ನಾಡಿಗಳಿರುತ್ತವೆ. ಇವೆಲ್ಲಾ ನಾಡಿಗಳು ನಾಭಿಸ್ಥಾನದಲ್ಲಿರುವ ನಾಡಿಕಂದದಿಂದಲೇ ಹುಟ್ಟಿರುತ್ತವೆ. ಮತ್ತು ವಾಯು, ವಹ್ನಿ, ಬಿಂದು ನಾದ ಮನ ಮೊದಲಾದವುಗಳೆಲ್ಲಾ ಕುಂಡಲಿ ಶಕ್ತಿಯಿಂಥಲೇ ಉತ್ಪನ್ನವಾಗಿರುತ್ತವೆ. ಇದು ಅ, ಕ, ಚ, ಟಾದಿ ಅಷ್ಟ ಪ್ರಕೃತಿರೂಪವಾಗಿರುತ್ತದೆ. ಅನ್ನ ನೀರುಗಳನ್ನು ತಡೆಯುತ್ತದೆ. ಇಂಥ ಕುಂಡಲೀ ಶಕ್ತಿಯಿಂದೊಡಗೂಡಿ ಆ ನಾಡಿಯ ಕಂದವಿರುತ್ತದೆ. ಆದರಿಂದ ಹನ್ನೆರಡು ಬೆರಳಿನ ಮೇಲಿರುವ ಸ್ಥಾನವೇ ಜೀವನ ಮನೆಯಾಗಿರುತ್ತದೆ. ಅಂದರೆ ಹೃದಯದಲ್ಲಿ ಅಷ್ಟದಳ ಕಮಲವಿರುತ್ತದೆ. ಈ ಕಮಲ ಮಧ್ಯದಲ್ಲಿ ಜ್ಯೋತಿರೂಪನಾದ ಅಣು ಮಾತ್ರ ಜೀವನಿರುತ್ತಾನೆ. ಇವನು ಸರ್ವಸ್ವವನ್ನು ತಿಳಿಯುತ್ತಾನೆ. ಮತ್ತು ಸರ್ವವನ್ನೂ

CC-0. Jangamwadi Math Collection. Digitized by eGangotri

ಮಾಡುತ್ತಾನೆ. ಆದ್ದರಿಂದ ಕರ್ತಾ ಭೋಕ್ತಾ ಸುಖ ದುಃಖ ತಾನೆಂದು ವಾದ ಮಾಡುತ್ತಾನೆ. ಮತ್ತು ಜೀವನು ಪೂರ್ವ ದಳಾದಿಗಳ ಮೇಲೆ ತಿರಗಹತ್ತಲು, ಭಕ್ತಿ, ನಿದ್ರಾ, ಕೋಪ, ಪಾಪಕರ್ಮ, ಕ್ರೀಡೆ, ಗಮನ, ಶೃಂಗಾರಬುದ್ಧಿ, ದಾನಾದಿಗಳನ್ನು ಮಾಡಬೇಕೆಂಬುವ ಬುದ್ಧಿ, ಈ ಪ್ರಕಾರ ಎಂಟು ಗುಣಗಳು ಹುಟ್ಟುತ್ತವೆ. ಯಾವಾಗ್ಗೆ ಜೀವನು ಕಮಲದ ಮಧ್ಯಸ್ಥಾನದಲ್ಲಿ ನಿಲ್ಲುತ್ತಾನೋ ಆಗ್ಗೆ ಎಲ್ಲವನ್ನು ತಿಳಿಯುತ್ತಾನೆ. ಗಾಯನ, ನೃತ್ಯ, ಪಠಣ ಮೊದಲಾದವುಗಳನ್ನು ಮಾಡುತ್ತಾ ಆನಂದದಿಂದಿರುತ್ತಾನೆ. ಆದ್ದರಿಂದ ಹೃದಯವು ಜೀವನ ವಾಸಸ್ಥಳವಾಗಿರುತ್ತದೆ.

ಬಳಿಕ; ದೇಹದಲ್ಲಿ ಒಂಭತ್ತು ಚಕ್ರ ಅವುಗಳ ಸ್ಥಾನ, ದಳ, ಆಕೃತಿ, ಅಕ್ಷರ, ವರ್ಣ ಅಧಿದೈವ ಮೊದಲಾದವುಗಳನ್ನು ಹೇಳುತ್ತಾರೆ.

ದೇಹದೊಳಾನವ ಚಕ್ರದೆಡೆಗಳು |
ಊಹಿಸೆ ತನು ಮಧ್ಯಂ ಶಿಶ್ನಗಳು ||
ನಾಭಿ ಹೃದಯ ಕಂಠಂ ಕೂರ್ಚಗಳು |
ಶೋಭಿತ ಖಂ ಶಿಖೆ ಶಿಖೆಯಗ್ರಗಳು ||
ಅವು ನಾಲ್ಕಾರೀರೈದೀರಾರು |
ತವೆ ಷೋಡಶ ಯುಗಳಂ ದಶನೂರು |
ಮೂರೊಂದೆನಿಪ ದಳ ಕ್ರಮದಿಂದ ||
ತೋರುವ ಕಂಜದೊಳೆಸೆ ವಿವರಿಂದ |
ಬೇರಾಕೃತಿ ಬೇರಕ್ಷರ ವರ್ಣ ||
ಬೇರಧಿ ದೈವಾದಿಕದಿಂ ಪೂರ್ಣ ||
ಎನಿಸಿರುತಿಹವಿವೆ ನಿಜಯೋಗಿಗಳು |
ಮನದೊಳು ಜಾನಿಸಿ ಸುಖಿಸುವೆಡೆಗಳು || ೯ ||

ಟೀಕಾ:- ದೇಹದೊಳ್=ಶರೀರದಲ್ಲಿ, ಆ ನವಚಕ್ರದ=ಆ ಒಂಭತ್ತುಚಕ್ರಗಳ, ಎಡೆಗಳು=ಸ್ಥಾನಗಳು, ಊಹಿಸೆ=ವಿಚಾರಮಾಡಲು, ತನುಮಧ್ಯಂ=ಗುದಗುಹ್ಯದ ಮಧ್ಯ, ಶಿಶ್ನಗಳು=ಮೇಢ್ರಗಳು, ನಾಭಿ=ನಾಭಿ, ಹೃದಯ=ಎದೆ, ಕಂಠಂ=ಗಳ, ಕೂರ್ಚಗಳು=ಎರಡು ಹುಬ್ಬಿನ ನಡುವಿನ ಸ್ಥಾನಗಳು, ಶೋಭಿತ=ಮನೋಹರವಾದ, ಖಂ=ಹಣೆಯ ಮುಂಭಾಗ, ಶಿಖೆ=ಶಿಖಾಸ್ಥಾನ, ಶಿಖೆಯಗ್ರಗಳು=ಪಶ್ಚಿಮ ಸ್ಥಾನಗಳು, ಅವು=ಆ ಸ್ಥಾನಗಳು, ನಾಲ್ಕು=ಚತುಃ, ಆರು=ಷಟ್, ಈರೈದು=ಹತ್ತು, ಈರಾರು=ಹನ್ನೆರಡು, ತವೆ=ಚನ್ನಾಗಿ, ಷೋಡಶ=ಹದಿನಾರು, ಯುಗಳಂ=ಎರಡು, ದಶನೂರು=ಸಾವಿರ, ಮೂರು=ತ್ರಯ, ಒಂದು=ಏಕ, ದಳಕ್ರಮದಿಂದ=ಎಲೆಗಳ ಕ್ರಮದಿಂದ, ತೋರುವ=ಪ್ರತೀತಿಯಾಗುತ್ತಿರುವಂಥಾ, ಕಂಜದೊಳು=ಕಮಲದಲ್ಲಿ, ಎಸೆವಿವರಿಂದ=ತೋರುವ ಭೇದದಿಂದ, ಬೇರಾಕೃತಿ=ಭಿನ್ನ ರೂಪು,

CC-0. Jangamwadi Math Collection. Digitized by eGangotri

LIBRARY
Jangamawadi Math, Varanasi
Acc. No. ......4231......

ಬೇರಕ್ಷರ=ಭಿನ್ನ ಭಿನ್ನ ಅಕ್ಷರ, ವರ್ಣ=ಬೇರೆಬೇರೆ ಬಣ್ಣ, ಬೇರಧಿ ದೈವಾದಿಕದಿಂ=ಭಿನ್ನ ಭಿನ್ನವಾಗಿರುವ ಅಧಿದೈವಾದಿಗಳಿಂದ, ಪೂರ್ಣವೆನಿಸಿರುತಿಹವು=ತುಂಬಿಕೊಂಡಿರುವವೆಂದು ಹೇಳಿಸಿಕೊಳ್ಳುವವು, ಇವೇ=ಈ ಸ್ಥಾನಗಳನ್ನೇ, ನಿಜಯೋಗಿಗಳು=ಖರೇ ಯೋಗಿಗಳು, ಮನದೊಳು=ಮನಸ್ಸಿನಿಂದ, ಜಾನಿಸಿ=ಧ್ಯಾನಮಾಡಿ, ಸುಖಿಸುವ=ಸಂತೋಷವನ್ನು ಹೊಂದುವ, ಎಡೆಗಳು=ಸ್ಥಾನಗಳು (ಇರುತ್ತವೆ).

ಮತ್ತು ಕೆಳಗೆ ಕೊಟ್ಟಿರುವ ಪ್ರಕಾರ ಸ್ಥಾನ ಚಕ್ರಾದಿಗಳ ಕೋಷ್ಟಕವು ಇರುತ್ತದೆಂದು ತಿಳಿಯತಕ್ಕದ್ದು.

ಸ್ಥಾನ	ಚಕ್ರ	ಸಂಖ್ಯಾ	ದಳ	ಆಕೃತಿ
ಮೂಲಾಧಾರ	ಆಧಾರ ಚಕ್ರ	ನಾಲ್ಕು ದಳ (೪)	ವ ಶ ಷ ಸ	ತಾರಕಾಕೃತಿ
ಶಿಶ್ನ	ಸ್ವಾಧಿಷ್ಠಾನ ಚಕ್ರ	ಆರು ದಳ (೬)	ಬ ಭ ಮ ಯ ರ ಲ	ದಂಡಕಾಕೃತಿ
ನಾಭಿ	ಮಣಿಪೂರಕ ಚಕ್ರ	ಹತ್ತು ದಳ (೧೦)	ಡ ಢ ಣ ತ ಥ ದ ಧ ನ	ಕುಂಡಲಾಕೃತಿ
ಹೃದಯ	ಅನಾಹತ ಚಕ್ರ	ಹನ್ನೆರಡು ದಳ (೧೨)	ಕ ಖ ಗ ಘ ಙ ಚ ಛ ಜ ಝ ಞ ಟ ಠ	ಅರ್ಧಚಂದ್ರಾಕೃತಿ
ಕಂಠ	ವಿಶುದ್ಧಿ ಚಕ್ರ	ಹದಿನಾರು ದಳ (೧೬)	ಅಆಇಈ ಉಊ ಋೠಌೡಎಐ ಓಔಅಂಅಃ	ದರ್ಪಣಾಕೃತಿ
ಕೂರ್ಚ	ಅಗ್ನಿ ಚಕ್ರ	ಎರಡು ದಳ (೨)	ಹಂ ಕ್ಷಂ	ಜ್ಯೋತಿರಾಕೃತಿ
ಖಂ	ಬ್ರಹ್ಮರಂಧ್ರ ಚಕ್ರ	ಸಾವಿರ ದಳ (೧೦೦೦)	ಸೋಹಂ	ನಿಃಕಲಾಕೃತಿ
ಶಿಖೆ	ಶಿಖಾಚಕ್ರ	ಮೂರು ದಳ (೩)	ಹ್ರಾಂ ಹ್ರೀಂ ಹ್ರುಂ	ನಿಃಶೂನ್ಯಾಕೃತಿ
ಶಿಖೆಯಗ್ರ	ಪಶ್ಚಿಮ ಚಕ್ರ	ಏಕದಳ (೧)	ಓಂ	ನಿರಂಜನಾಕೃತಿ

CC-0. Jangamwadi Math Collection. Digitized by eGangotri

ನವಸ್ಥಾನ ಚಕ್ರಾದಿಗಳ ಕೋಷ್ಟಕವು

ಅಕ್ಷರ	ವರ್ಣ	ಅಧಿದೈವ	ಶಕ್ತಿ	ಭಕ್ತಿ
ನಕಾರ	ಪೀತವರ್ಣ	ಬ್ರಹ್ಮನಧಿ ದೇವತೆ	ಕ್ರಿಯಾಶಕ್ತಿ	ಶ್ರದ್ಧಾಭಕ್ತಿ
ಮಕಾರ	ಶ್ವೇತವರ್ಣ	ವಿಷ್ಣು ಅಧಿದೇವತೆ	ಇಚ್ಛಾಶಕ್ತಿ	ನೈಷ್ಟಿಕಾ ಭಕ್ತಿ
ಶಿಕಾರ	ರಕ್ತವರ್ಣ	ರುದ್ರನಧಿ ದೇವತೆ	ಜ್ಞಾನಶಕ್ತಿ	ಸಾವಧಾನ ಭಕ್ತಿ
ವಕಾರ	ಹರಿತವರ್ಣ	ಈಶ್ವರ ನಧಿದೇವತೆ	ಆದಿಶಕ್ತಿ	ಅನುಭವ ಭಕ್ತಿ
ಯಕಾರ	ನೀಲವರ್ಣ	ಸದಾಶಿವ ನಧಿದೇವತೆ	ಪರಶಕ್ತಿ	ಆನಂದ ಭಕ್ತಿ
ಓಂಕಾರ	ಮಾಣಿಕ್ಯವರ್ಣ	ಮಹೇಶ್ವರ ನಧಿದೇವತೆ	ಚಿಚ್ಛಕ್ತಿ	ಸಮರಸ ಭಕ್ತಿ
ಅಕಾರ	ಜ್ಯೋತಿವರ್ಣ	ಪರಶಿವ ನಧಿದೇವತೆ	ಆನಂದಮಯ ಶಕ್ತಿ	ಪರಿಪೂರ್ಣ ಭಕ್ತಿ
ಉಕಾರ	ಮಹ ಜ್ಯೋತಿವರ್ಣ	ಸರ್ವೇಶ್ವರ ನಧಿದೇವತೆ	ನಾಭ್ರಾಂತಿ ಶಕ್ತಿ	ನಿರಂಜನ ಭಕ್ತಿ
ಮಕಾರ	ಅಗಣಿತ ಜ್ಯೋತಿವರ್ಣ	ಮಹದೇವ ನಧಿದೇವತೆ	ನಿರಾಮಯ ಶಕ್ತಿ	ಅಪ್ರದರ್ಶನ ಭಕ್ತಿ

CC-0. Jangamwadi Math Collection. Digitized by eGangotri

ನವಸ್ಥಾನ ಚಕ್ರಾದಿಗಳ ಕೋಷ್ಟಕವು

ಆತ್ಮ	ಮುಖ	ಹಸ್ತ	ಪ್ರಸಾದ	ಲಿಂಗ
ಜೀವಾತ್ಮ	ಪ್ರಾಣಮುಖ	ಸುಚಿತ್ತ ಹಸ್ತ	ಗಂಧಪ್ರಸಾದ	ಆಚಾರಲಿಂಗ
ಅಂತರಾತ್ಮ	ಜಿಹ್ವೆಮುಖ	ಸುಬುದ್ಧಿ ಹಸ್ತ	ರಸಪ್ರಸಾದ	ಗುರುಲಿಂಗ
ಪರಮಾತ್ಮ	ನೇತ್ರಮುಖ	ನಿರಹಂಕೃತಿ ಹಸ್ತ	ರೂಪಪ್ರಸಾದ	ಶಿವಲಿಂಗ
ನಿರ್ಮಳಾತ್ಮ	ತ್ವಗ್ಮುಖ	ಸಮನ ಹಸ್ತ	ಸ್ಪರ್ಶಪ್ರಸಾದ	ಜಂಗಮ ಲಿಂಗ
ಶುದ್ಧಾತ್ಮ	ಶ್ರೋತ್ರಮುಖ	ಸುಜ್ಞಾನ ಹಸ್ತ	ಶಬ್ದ ಪ್ರಸಾದ	ಪ್ರಸಾದ ಲಿಂಗ
ಜ್ಞಾನಾತ್ಮ	ಹೃದಯಮುಖ	ಸದ್ಭಾವ ಹಸ್ತ	ತೃಪ್ತಿ ಪ್ರಸಾದ	ಮಹಾಲಿಂಗ
ಮಹಾತ್ಮಾ	ಬ್ರಹ್ಮರಂಧ್ರ ಮುಖ	ನಿಃಕಲ ಹಸ್ತ	ಆನಂದಪ್ರಸಾದ	ಇಷ್ಟಲಿಂಗ
ದಿವ್ಯಾತ್ಮ	ಉನ್ಮನಿ ಮುಖ	ನಿರಾಳ ಹಸ್ತ	ಪರಿಪೂರ್ಣ ಪ್ರಸಾದ	ಪ್ರಾಣಲಿಂಗ
ಚಿನ್ಮಯಾತ್ಮ	ಪಶ್ಚಿಮಮುಖ	ನಿರಾಮಯ ಹಸ್ತ	ಅವಿರಳಪ್ರಸಾದ	ಭಾವಲಿಂಗ

CC-0. Jangamwadi Math Collection. Digitized by eGangotri

ನವಸ್ಥಾನ ಚಕ್ರಾದಿಗಳ ಕೋಷ್ಟಕವು

ಅಂಗ	ತನು	ಕಲೆ	ನಾದ	ದಿಕ್ಕು
ಪೃಥ್ವಿಅಂಗ	ಸ್ಥೂಲತನು	ನಿವೃತ್ತಿ ಕಲೆ	ಪೇಣ್ದುಂಬಿ ನಾದ	ಪೂರ್ವದಿಕ್ಕು
ಅಪ್ಪು ಅಂಗ	ಸೂಕ್ಷ್ಮತನು	ಪ್ರತಿಷ್ಠಾ ಕಲೆ	ವೀಣಾನಾದ	ಪಶ್ಚಿಮದಿಕ್ಕು
ತೇಜಾಂಗ	ಕಾರಣತನು	ವಿದ್ಯಾಕಲೆ	ಘಂಟಾನಾದ	ದಕ್ಷಿಣ ದಿಕ್ಕು
ವಾಯು ಅಂಗ	ಮಹಾಕಾರಣ ತನು	ಶಾಂತಿ ಕಲೆ	ಭೇರಿನಾದ	ಉತ್ತರ ದಿಕ್ಕು
ಆಕಾಶಾಂಗ	ಆನಂದತನು	ಶಾಂತಾತೀತ ಕಲೆ	ಮೇಘನಾದ	ಊರ್ಧ್ವದಿಕ್ಕು
ಆತ್ಮಾಂಗ	ಶುದ್ಧತನು	ಶಾಂತಾತೀತೋತ್ತರ ಕಲೆ	ಪ್ರಣವನಾದ	ಪಾತಾಳದಿಕ್ಕು
ತ್ಯಾಗಾಂಗ	ನಿರ್ಮಲತನು	ಆನಂದ ಕಲೆ	ದಿವ್ಯನಾದ	ಶುದ್ಧ ದಿಕ್ಕು
ಭೋಗಾಂಗ	ಚಿದ್ರೂಪತನು	ನಿರ್ಮಳಕಲೆ	ಸಿಂಹನಾದ	ಹೃತ್ಕಮಲ ದಿಕ್ಕು
ಯೋಗಾಂಗ	ಚಿನ್ಮಯತನು	ನಿರ್ವಾಚ್ಯಕಲೆ	ಮಹಾನಾದ	ದಿವ್ಯದಿಕ್ಕು

CC-0. Jangamwadi Math Collection. Digitized by eGangotri

ನವಸ್ಥಾನ ಚಕ್ರಾದಿಗಳ ಕೋಷ್ಟಕವು

ಸ್ಥಳ	ಲಕ್ಷಣ	ವೇದ	ಸಾದಾಖ್ಯ	ಸಂಜ್ಞ
ಭಕ್ತಿಸ್ಥಳ	ಸತ್‌ಲಕ್ಷಣ	ಋಗ್ವೇದ	ಕರ್ಮ ಸಾದಾಖ್ಯ	ಪರಸಂಜ್ಞ
ಮಹೇಶ್ವರ ಸ್ಥಳ	ಚಿತ್‌ಲಕ್ಷಣ	ಯಜುರ್ವೇದ	ಕತೃಸಾದಾಖ್ಯ	ಗೂಢಸಂಜ್ಞ
ಪ್ರಸಾದಿ ಸ್ಥಳ	ಆನಂದ ಲಕ್ಷಣ	ಸಾಮವೇದ	ಮೂರ್ತಿ ಸಾದಾಖ್ಯ	ಶರೀರಸ್ಥ ಸಂಜ್ಞ
ಪ್ರಾಣಲಿಂಗ ಸ್ಥಳ	ನಿತ್ಯಲಕ್ಷಣ	ಅಥರ್ವಣವೇದ	ಅಮೂರ್ತಿ ಸಾದಾಖ್ಯ	ಲಿಂಗಕ್ಷೇತ್ರ ಸಂಜ್ಞೆ
ಶರಣಸ್ಥಳ	ಪರಿಪೂರ್ಣ ಲಕ್ಷಣ	ಅಜಪವೇದ	ಶಿವಸಾದಾಖ್ಯ	ಆನಂದಿ ಸಂಜ್ಞೆ
ಐಕ್ಯಸ್ಥಳ	ಅಖಂಡಲಕ್ಷಣ	ಗಾಯತ್ರಿವೇದ	ಮಹಾ ಸಾದಾಖ್ಯ	ಮಹಾ ಮಯಸಂಜ್ಞೆ
ನಿಃಕಲಸ್ಥಳ	ಅನಾಮಯ ಲಕ್ಷಣ	ಧನುರ್ವೇದ	ಅಗಮ್ಯ ಸಾದಾಖ್ಯ	ಪ್ರಣವ ಸಂಜ್ಞ
ನಿರಂಜನ ಸ್ಥಳ	ಅಗಮ್ಯಲಕ್ಷಣ	ಗಂಧರ್ವವೇದ	ಅವಿರಳ ಸಾದಾಖ್ಯ	ನಾರಾಯಮ ಸಂಜ್ಞ
ನಿಶ್ಶೂನ್ಯ ಸ್ಥಳ	ಅಗೋಚರ ಲಕ್ಷಣ	ನಿಶ್ಶಬ್ದ ವೇದ	ನಿರ್ಮಳ ಸಾದಾಖ್ಯ	ಅವಿರಳ ಸಂಜ್ಞ

CC-0. Jangamwadi Math Collection. Digitized by eGangotri

ಈ ಪ್ರಕಾರ ಅಧಿದೈವಾದಿಗಳಿಂದ ನವಚಕ್ರಗಳು ತುಂಬಿಕೊಂಡಿರುತ್ತವೆ. ಯೋಗಿಗಳು ಆ ಸ್ಥಾನ, ಚಕ್ರ ಮತ್ತು ಆ ಚಕ್ರಗಳಲ್ಲಿರುವ ಲಿಂಗ, ಮಂತ್ರ, ಮೊದಲಾದವುಗಳನ್ನು ಕ್ರಮದಿಂದ ಧ್ಯಾನಮಾಡಿ, ಲಿಂಗದಲ್ಲಿ ಮನೋಲಯ ಗೊಳಿಸಿ ಸಂತೋಷವನ್ನು ಹೊಂದುವಂಥಾ ಈ ನವಸ್ಥಾನಗಳಿರುತ್ತವೆ. ಈ ರೀತಿಯು ಅಖಂಡೇಶ್ವರ ವಚನದ ಪ್ರಸಾದಿ ಸ್ಥಳದಲ್ಲಿ ವರ್ಣಿಸಲ್ಪಟ್ಟಿರುತ್ತದೆ.

ಬಳಿಕ; ಈ ತನುವಿನಲ್ಲಿ ಐದು ಕೋಶಗಳಿರುತ್ತವೆಂದು ಪ್ರತಿಪಾದನ ಮಾಡುತ್ತಾರೆ.

ಮತ್ತೀತನು ವೈದುಂ ಕೋಶವನು ।
ಪೊತ್ತಿಹುದೆಲೆ ನೀನರಿಯಂತವನು ॥
ಅನ್ನಮಯಂ ತನು ತಾನೆನಿಸಿರ್ಕು ।
ನನ್ನಿಯದಕೆ ಜರೆ ಮರಣಂ ತೋರ್ಕು ॥
ಅಸುಗಳ್ ಪ್ರಾಣಮಯಂ ನೀ ನೋಡು ।
ಪಸಿವುಂ ನೀರಡಿಕೆಗೆ ತಾ ನೀಡು ॥
ಮನವೆ ಮನೋಮಯ ಕೋಶವೆನಿಕ್ಕು ।
ಜನಿಪರಿ ವರ್ಗಕ್ಕದು ಗುರಿಯಕ್ಕು ॥
ಬುದ್ಧಿಯೆ ವಿಜ್ಞಾನಮಯಂ ಕೇಳು ।
ಸಿದ್ಧವದಕೆ ಮೋಹಂ ಬಲುಗೋಳು ॥
ಪ್ರಕೃತಿಯದಾನಂದಮಯಂ ನೋಡು ।
ವಿಕೃತಿ ವಿಹಂಗಂಗಳಿಗದು ಗೂಡು ॥ ೧೦ ॥

ಟೀಕಾ:— ಮತ್ತೆ=ಬಳಿಕ, ಈ ತನುವು=ಈ ಶರೀರವು, ಐದುಂ=ಪಂಚ, ಕೋಶವನು=ಕೋಶಗಳನ್ನು, ಪೊತ್ತಿಹುದು=ಹೊತ್ತುಕೊಂಡಿರುವದು, ಎಲೆ=ಎಲೆ ಮಗನೇ, ಅಂತವನು=ಆ ಕೋಶಗಳನ್ನು, ನೀನು=ಅಧಿಕಾರಿಯಾದ ನೀನು, ಅರಿ=(ವಿಚಾರಮಾಡಿ) ತಿಳಕೋ, ಅನ್ನಮಯಂ=ಅನ್ನದ ವಿಕಾರವು, ತನು= ದೇಹವು, ತಾನೆನಿಸಿರ್ಕು=ತಾನೆಂದು ಹೇಳಿಸಿಕೊಳ್ಳುವದು, ಅದಕೆ=ಆ ಶರೀರಕ್ಕೆ, ನನ್ನಿ=ನಿಶ್ಚಯವಾಗಿ, ಜರೆ=ಮುಪ್ಪು, ಮರಣಂ=ಸಾವು, ತೋರ್ಕು=ತೋರುವದು. ಅಸುಗಳ್=ವಾಯುಗಳೇ, ಪ್ರಾಣಮಯಂ=ಪ್ರಾಣಮಯ ಕೋಶವು, ಪಸಿವುಂ ನೀರಡಿಕೆಗೆ=ಹಸಿವೆ ತೃಷೆಗಳಿಗೆ, ತಾ ನೀಡು=ತಾನು ಪರತಂತ್ರವಾಗಿರುವದು, ನೀನು=ಎಲೈ ಶಿಷ್ಯನೇ ! ನೀನು, ನೋಡು=ಅರಿ, ಮನವೇ=ಸಂಕಲ್ಪವಿಕಲ್ಪ ಮಾದ ಮನಸ್ಸೇ, ಮನೋಮಯ ಕೋಶವು=ಮನೋವಿಕಾರಾತ್ಮಕ ಆವರಣವು, ಎಕ್ಕು=ಆಗುವದು, ಅದು=ಆ ಮನೋಮಯ ಕೋಶವು, ಜನಿಪ=ಹುಟ್ಟುವ, ಅರಿವರ್ಗಕ್ಕೆ=ಕಾಮಕ್ರೋಧಾದಿ ಶತ್ರುವರ್ಗಕ್ಕೆ, ಗುರಿಯಕ್ಕು=ಕಾರಣವಾಯಿತು.

CC-0. Jangamwadi Math Collection. Digitized by eGangotri

ಬುದ್ಧಿಯೇ=ನಿಶ್ಚಯಾತ್ಮಕ ಮತಿಯೇ, ವಿಜ್ಞಾನಮಯಂ=ವಿಜ್ಞಾನಮಯ ಕೋಶವು, ಅದಕೆ=ಆ ಕೋಶಕ್ಕೆ, ಮೋಹಂ=ವಿಪರೀತ ತಿಳವಳಿಕೆಯು, ಬಲು ಗೋಳು=ಬಹಳ ತೊಂದರೆಯು, ಸಿದ್ಧವು=ಅವಶ್ಯವಾಗಿ ಪ್ರಾಪ್ತಗಳಾಗುವವು, ಪ್ರಕೃತಿಯದು=ತ್ರಿಗುಣಾತ್ಮಕ ಪ್ರಕೃತಿಯು, ಆನಂದಮಯಂ=ಆನಂದಮಯ ಕೋಶವು, ಅದು=ಅದು, ವಿಕೃತಿ=ಕಾರ್ಯಗಳೆಂಬ, ವಿಹಂಗಂಗಳಿಗೆ=ಪಕ್ಷಿಗಳಿಗೆ, ಗೂಡು=ಮನೆಯಾಗಿರುವದು.

ತಾತ್ಪರ್ಯ:— ಮತ್ತು ಈ ಶರೀರವು ಪಂಚಕೋಶಗಳನ್ನು ಹೊತ್ತು ಕೊಂಡಿರುತ್ತದೆ. ಆದ್ದರಿಂದ ಅಂತರಂಗಿಯಿಂದ ಮುಚ್ಚಿದ ಜಲದಂತೆ, ಆತ್ಮನು ಪಂಚಕೋಶಗಳಿಂದ ಮುಚ್ಚಲ್ಪಟ್ಟವನಾದ ಕಾರಣ ತೋರುವದಿಲ್ಲ. ಆದರೆ, ಜಲದಮೇಲಿನ ಅಂತರಂಗಿಯನ್ನು ತೆಗೆದು ಹಾಕಲು, ಒಳಗಿನ ಶುದ್ಧವಾದ ಜಲವು ತೋರುವಂತೆ, ಪಂಚಕೋಶಗಳನ್ನು ವಿವೇಕದಿಂದ ಬೇರ್ಪಡಿಸಲು ಸ್ವಯಂಪ್ರಕಾಶನಾದ ಪ್ರತ್ಯಗ್ರೂಪ ಆತ್ಮನೇ ಹೊಳೆಯುತ್ತಾನೆ. ಈ ಆತ್ಮ ಸ್ವರೂಪ ಸ್ಥಿತಿಯಿಂದಿರುವದೇ ಮೋಕ್ಷವೆನಿಸುತ್ತದೆ. ಆದ್ದರಿಂದ ಪಂಚಕೋಶ ಗಳನ್ನು ಅವಶ್ಯವಾಗಿ ವಿಚಾರಮಾಡತಕ್ಕದ್ದು. ಹೇಗಂದರೆ— ಈ ಶರೀರವೇ ಅನ್ನಮಯಕೋಶವೆನಿಸುತ್ತದೆ. ಯಾಕಂದರೆ, ಈ ದೇಹವು ಅನ್ನದಿಂದಲೇ ಉತ್ಪನ್ನವಾಗುತ್ತದೆ. ಅನ್ನದಿಂದಲೇ ರಕ್ಷಣವಾಗುತ್ತದೆ. ಅನ್ನವಿಲ್ಲದಿದ್ದರೆ ನಾಶವಾಗುತ್ತದೆ. ಆದ್ದರಿಂದ ಈ ಶರೀರವು ಅನ್ನಮಯಕೋಶವೆನಿಸಲ್ಪಡುತ್ತದೆ. ಇದು ಚರ್ಮ, ಮಾಂಸ, ರಕ್ತ, ಅಸ್ಥಿ, ಮಲ ಮೊದಲಾದವುಗಳಿಂದ ತುಂಬಿ ಕೊಂಡಿರುತ್ತದೆ, ಆದ್ದರಿಂದ ನಿತ್ಯ ಶುದ್ಧ ಚೈತನ್ಯರೂಪ ಆತ್ಮಾ ಹೇಗಾದೀತು? ಉತ್ಪತ್ತಿಗಿಂತ ಮೊದಲೂ ಮರಣವಾದ ಮೇಲೆಯೂ ಈ ಶರೀರವಿರುವದಿಲ್ಲ. ಸ್ಥಿರವಾದದ್ದೂ ಅಲ್ಲ. ಉತ್ಪನ್ನವಾದ ಸಮಯದಲ್ಲಿ ಮಾತ್ರ ಘಟದಂತೆ ದೃಶ್ಯ ಮಾನವಾಗಿ ಬಾಲ್ಯ, ಕೌಮಾರ, ಮುಪ್ಪು, ಮರಣ ಮೊದಲಾದವುಗಳಿಂದ ಯುಕ್ತವಾಗಿರುತ್ತದೆ. ಅರ್ಥಾತ್ ದೇಹದ ಧರ್ಮ, ಕರ್ಮ, ಅವಸ್ಥಾದಿಗಳಿಗೆ ಲ್ಲಕ್ಕೂ ಆತ್ಮನು ಸಾಕ್ಷಿಯಾಗಿರುತ್ತಾನೆ. ಆದ್ದರಿಂದ ಮಾಂಸ ಮಲಗಳ ಮಯ ವಾದ ಅಪವಿತ್ರವಾದ ಶರೀರವು ಹೇಗೆ ಆತ್ಮವಾದೀತು? ಇಂಥಾ ದೇಹದಲ್ಲಿ ಮೂಢ ಜನವು ನಾನೆಂಬ ಬುದ್ಧಿಯನ್ನು ಮಾಡುತ್ತದೆ. ಆದರೆ ವಿಚಾರಶೀಲ ರಾದ ಸತ್ಪುರುಷರು ಎಂದೂ ಅದರಲ್ಲಿ ಆತ್ಮಬುದ್ಧಿಯನ್ನು ಮಾಡರು. ಆದ್ದರಿಂದ ಹೇ ಶಿಷ್ಯನೇ! ಇದರಲ್ಲಿದ್ದ ಆತ್ಮಬುದ್ಧಿಯನ್ನು ತ್ಯಾಗಮಾಡಿ ನಿರ್ವಿಕಲ್ಪ ಪರ ಬ್ರಹ್ಮವೆ ನಾನೆಂದು ತಿಳಿದು, ಪರಬ್ರಹ್ಮದಲ್ಲಿಯೇ ಶಾಂತಿಯನ್ನು ಹೊಂದುವಂಥವ ನಾಗು. ಮತ್ತು ತನ್ನ ನೆರಳದೇಹದಲ್ಲಿಯೂ ಮತ್ತು ಕನ್ನಡಿಯಲ್ಲಿ ಪ್ರತಿಬಿಂಬಿತ ವಾದ ದೇಹದಲ್ಲಿಯೂ ಸ್ವಪ್ನ ಕಲ್ಪಿತವಾದ ದೇಹದಲ್ಲಿಯೂ ಹೇಗೆ ಆತ್ಮಬುದ್ಧಿ ಯನ್ನು ಮಾಡುವದಿಲ್ಲವೋ, ಹಾಗೇ ಈ ಜೀವಿಸಿರುವ ದೇಹದಲ್ಲಿಯೂ ಆತ್ಮ

CC-0. Jangamwadi Math Collection. Digitized by eGangotri

ಬುದ್ಧಿಯನ್ನು ಮಾಡಬೇಡ, ಈ ದೇಹಾತ್ಮಬುದ್ಧಿಯೇ ಸಕಲರಿಗೆ ಜನ್ಮಾದಿ ದುಃಖಗಳನ್ನುಂಟು ಮಾಡುವಂಥಾದ್ದಾಗಿರುತ್ತದೆ. ಆದ್ದರಿಂದ ನೀನು ಪ್ರಯತ್ನ ಶೀಲನಾಗಿ ಈ ದೇಹಾತ್ಮ ಬುದ್ಧಿಯನ್ನು ತ್ಯಜಿಸಿದರೆ ನಿನಗೆ ಪುನರ್ಭವವೆಂದಿಗೂ ಆಗಲಾರದು. ಇದರಂತೆ ಪ್ರಾಣಮಯಕೋಶವನ್ನು ವಿಚಾರಮಾಡತಕ್ಕದ್ದು. ಹೇಗಂದರೆ, ಪಂಚಕರ್ಮೇಂದ್ರಿಯಂಗಳಿಂದ ಕೂಡಿಕೊಂಡು ವಾಯುವಿಕಾರಾತ್ಮಕವಾದ ಈ ಪ್ರಾಣಮಯಕೋಶವು ದೇಹದ ಎಲ್ಲ ಇಂದ್ರಿಯಗಳನ್ನು ಪ್ರೇರಣೆ ಮಾಡುತ್ತಾ, ಪ್ರಾಣಾಪಾನಾದಿ ಸಂಜ್ಞೆ ಪಡೆದು ದೇಹದ ಒಳಗೂ ಹೊರಗೂ ಹೋಗೋಣ ಬರೋಣ ಮೊದಲಾದ ಕಾರ್ಯವನ್ನು ಮಾಡುತ್ತಿರುತ್ತದೆ. ಆದ್ದರಿಂದಲೇ ಹಸಿವೆ ನೀರಡಿಕೆಗೆ ಆಧೀನವಾಗಿರುತ್ತದೆ. ಮತ್ತು ಇಷ್ಟಾನಿಷ್ಟಗಳನ್ನು ತನ್ನನ್ನು ಪರರನ್ನು ತಿಳಿಯುವದಿಲ್ಲ. ಆದ್ದರಿಂದ ಪ್ರಾಣಮಯ ಕೋಶವು ಜಡವಾಗಿರುತ್ತದೆ. ಆದ್ದರಿಂದ ಆತ್ಮಸ್ವರೂಪವಾಗಲಾರದು, ಮತ್ತು ಪಂಚಜ್ಞಾನೇಂದ್ರಿಯ ಮತ್ತು ಮನಸ್ಸು ಇವುಗಳ ಸಮೂಹವೇ ಮನೋಮಯಕೋಶವೆನ್ನಲ್ಪಡುತ್ತದೆ. ಇದು ಶರೀರಾದಿಗಳಲ್ಲಿ ಅಹಂಬುದ್ಧಿಯನ್ನೂ ಗೃಹಾದಿಗಳಲ್ಲಿ ಮಮಕಾರ ಬುದ್ಧಿಯನ್ನೂ ಮಾಡುತ್ತಾ, ಪಂಚಜ್ಞಾನೇಂದ್ರಿಯಂಗಳಿಂದ ಪಂಚವಿಷಯಗಳನ್ನೂ ಸ್ವೀಕರಿಸುತ್ತ, ನಾನಾಪ್ರಕಾರ ಸಂಕಲ್ಪ ವಿಕಲ್ಪಗಳನ್ನು ಮಾಡುತ್ತಿರುತ್ತದೆ. ಆದ್ದರಿಂದ ಈ ಮನಸಿನಗಿಂತಲೂ ಬೇರೆ ಅವಿದ್ಯೆಯಿಲ್ಲ, ಈ ಮನವೇ ಅವಿದ್ಯಾರೂಪವಾಗಿರುತ್ತದೆ. ಇದು ನಷ್ಟವಾದರೆ ಎಲ್ಲ ಪ್ರಪಂಚವು ನಷ್ಟವಾಗುತ್ತದೆ. ಇದು ವೃದ್ಧಿಯಾದರೆ ಪ್ರಪಂಚವು ಬೆಳೆಯುತ್ತದೆ. ಏನೊಂದಿಲ್ಲದ ಸ್ವಪ್ನದಲ್ಲಿ ಮನಸ್ಸು ತನ್ನ ಶಕ್ತಿಯಿಂದಲೇ ಭೋಕ್ತೃತ್ವ ಮೊದಲಾದ ಸೃಷ್ಟಿಯನ್ನು ನಿರ್ಮಾಣಮಾಡುತ್ತದೆ. ಹೀಗೆ ಜಾಗ್ರದವಸ್ಥೆಯಲ್ಲಿಯೂ ಮಾಡುತ್ತದೆ. ಆದ್ದರಿಂದ ಜಾಗ್ರಕ್ಕೂ ಸ್ವಪ್ನಕ್ಕೂ ಏನೂ ವಿಶೇಷವಿಲ್ಲ. ಮತ್ತು ನಿದ್ರೆ ಸಮಯದಲ್ಲಿ ಮನೋಲೀನವಾಗುತ್ತಿರಲಿಕ್ಕೆ ಯಾವ ವಸ್ತುವಾದರೂ ತೋರುವದಿಲ್ಲ. ಆದ್ದರಿಂದ ಸಂಸಾರವು ಮನಃಕಲ್ಪಿತವಾಗಿರುತ್ತದೆ. ವಾಯುವಿನಿಂದ ಮೇಘವು ಹೇಗೆ ಒಯ್ಯುವದೂ ತರುವದೂ ಮಾಡಲ್ಪಡುತ್ತದೆಯೋ ಹಾಗೇ ಮನಸ್ಸಿನಿಂದ ಬಂಧ ಮೋಕ್ಷಗಳು ಕಲ್ಪಿಸಲ್ಪಡುತ್ತವೆ. ಅಂದರೆ, ಮನಸ್ಸು ರಜತಮಗುಣಗಳಿಂದ ಕೂಡಿದರೆ ಬಂಧಕ್ಕೆ ಕಾರಣವಾಗುತ್ತದೆ. ಸತ್ವಗುಣದಿಂದ ಕೂಡಿದರೆ ಮೋಕ್ಷಕ್ಕೆ ಸಾಧನವಾಗುತ್ತದೆ. ಇಂಥಾ ಮನಸ್ಸು ಕಾಮ, ಕ್ರೋಧ, ಲೋಭ; ಮೋಹ, ಮದ, ಮತ್ಸರಗಳೆಂಬ ಆರು ವೈರಿಗಳೊಡನೆ ಕೂಡಿ ವಿಕಾರಾತ್ಮಕವಾದ್ದರಿಂದಲೂ, ಆದ್ಯಂತವುಳ್ಳದ್ದರಿಂದಲೂ ದುಃಖಾತ್ಮಕವಾದ್ದರಿಂದಲೂ ದೃಶ್ಯವಾದ್ದರಿಂದಲೂ, ಈ ಮನೋಮಯಕೋಶವು ಆತ್ಮನಾಗಲಾರದು. ಕಿಂತು, ಅನಾತ್ಮವಾಗಿರುತ್ತದೆ. ಮತ್ತು ಬುದ್ಧಿಯು ಪಂಚಜ್ಞಾನೇಂದ್ರಿಯಗಳೊಡನೆ ಕೂಡಿಕೊಂಡು ಕರ್ತೃತ್ವ ಲಕ್ಷಣವುಳ್ಳದ್ದೇ ವಿಜ್ಞಾನಮಯಕೋಶವೆನಿಸುತ್ತದೆ. ಇದಾದರೂ ಸಂಸಾರಕ್ಕೆ ಕಾರಣವಾಗಿರುತ್ತದೆ. ಹೇಗಂದರೆ,

CC-0. Jangamwadi Math Collection. Digitized by eGangotri

ಪ್ರಕೃತಿಯ ವಿಕಾರಾತ್ಮಕವಾದ ವಿಜ್ಞಾನಮಯಕೋಶವು ಚೈತನ್ಯದ ಪ್ರತಿಬಿಂಬದಿಂದ ಯುಕ್ತವಾಗಿ,ದೇಹೇಂದ್ರಿಯಾದಿಗಳಲ್ಲಿ ಯಾವಾಗಲೂ ಜ್ಞಾನಕ್ರಿಯೆಗಳಿಗೆ ನಾನೇ ಕರ್ತನೆಂದು ಅಭಿಮಾನಮಾಡುತ್ತದೆ. ಇಂಥಾ ಅಹಂಕಾರ ಸ್ವಭಾವದಿಂದ ಕೂಡಿದ ಜೀವನು ಸಕಲ ವ್ಯವಹಾರಗಳನ್ನು ಹೊತ್ತುಕೊಂಡು, ವಾಸನಾನುಸಾರವಾಗಿ ಪುಣ್ಯಾಪುಣ್ಯ ಕರ್ಮಗಳನ್ನು ಮಾಡುತ್ತಾ, ಅವುಗಳ ಫಲವನ್ನು ಭೋಗಿಸುತ್ತಿರುತ್ತಾನೆ. ಮತ್ತು ಜೀವನು ವಿಜ್ಞಾನಮಯ ಕೋಶೋಪಾಧಿಯಿಂದಲೇ ನಾನಾಪ್ರಕಾರ ಯೋನಿಗಳಲ್ಲಿ ತಿರುಗುತ್ತಾ, ಇಹಲೋಕ ಪರಲೋಕ ಜಾಗ್ರತ್ ಸ್ವಪ್ನಾವಸ್ಥೆಗಳಿಗೆ ಹೋಗುತ್ತಾ ಬರುತ್ತಾ ಅನೇಕ ಸುಖ ದುಃಖಗಳನ್ನನುಭವಿಸುತ್ತಾನೆ. ಈ ವಿಜ್ಞಾನಮಯ ಕೋಶವು ಚೈತನ್ಯದ ಅತಿ ಸಮೀಪವಲ್ಲಿರುವದರಿಂದ ಎಲ್ಲ ವಸ್ತುಗಳನ್ನು ಪ್ರಕಾಶಮಾಡುತ್ತದೆ. ಮತ್ತು ದೇಹ ಸಂಬಂಧಗಳಾದ ವರ್ಣಾಶ್ರಮ ಧರ್ಮ ಕರ್ಮ ಗುಣಾದಿಗಳನ್ನು ಕುರಿತು ಅಭಿಮಾನಮಾಡುತ್ತದೆ. ಈ ವಿಜ್ಞಾನಮಯ ಕೋಶಕ್ಕೆ ಸಾಕ್ಷಿಯಾದ ಪ್ರತ್ಯಗಾತ್ಮನು ಈ ಮಿಥ್ಯಾತ್ಮಕ ಕೋಶೋಪಾಧಿಯಿಂದ ಜೀವಭಾವವನ್ನು ಹೊಂದಿ, ತಾನು ಭಿನ್ನನೆಂದು ತಿಳಿಯುತ್ತಿರುತ್ತಾನೆ. ವಿಕಾರಾತ್ಮಕವಾದ ಕಬ್ಬಿಣದ ಉಪಾಧಿಯಿಂದ ಅಗ್ನಿಯೂ ಅನೇಕಾಕಾರವಾದಂತೆ ಕಂಡುಬರುತ್ತವೆ. ಪರಂತು, ಅಗ್ನಿಯು ಯಾವಾಗಲೂ ಒಂದೇ ಸ್ವರೂಪವಾಗಿರುತ್ತದೆ. ಇದರಂತೆ ಪರಮಾತ್ಮನಾದರೂ ಉಪಾಧಿಯ ಸಂಗದಿಂದ ಅನೇಕ ಗುಣಗಳಾಕಾರವಾದಂತೆ ಕಂಡುಬರುತ್ತಾನೆ. ಪರಂತು, ಪರಮಾತ್ಮನು ಯಾವಾಗಲೂ ಒಂದೇ ರೂಪನಾಗಿರುತ್ತಾನೆ. ಈ ವಿಜ್ಞಾನಮಯ ಕೋಶವು ವಿಕಾರಿತ್ವ, ಜಡತ್ವ, ಪರಿಚ್ಛಿನ್ನತ್ವ, ದೃಶ್ಯತ್ವ, ವ್ಯಭಿಚಾರಿತ್ವವಿರೋಣದರಿಂದ ಅನಿತ್ಯವಾಗಿರುತ್ತದೆ ಮತ್ತು ಅವಿವೇಕವುಳ್ಳದ್ದಾಗಿ ಅನೇಕ ದುಃಖಗಳಿಗೆ ಮೂಲಕಾರಣವಾಗಿರುತ್ತದೆ. ಆದ್ದರಿಂದ ವಿಜ್ಞಾನಮಯ ಕೋಶವೂ ಆತ್ಮವಾಗಲಾರದು. ಅವಿದ್ಯೆಯ ಸೂಕ್ಷ್ಮ ವೃತ್ತಿಗಳಲ್ಲಿ ಪ್ರತಿಬಿಂಬಿಸಿದ ಆನಂದವೇ ಆನಂದಮಯ ಕೋಶವೆನ್ನಲ್ಪಡುತ್ತದೆ. ಈ ಆನಂದಮಯ ಕೋಶವು ಸುಪ್ತಿಯಲ್ಲಿ ಚನ್ನಾಗಿ ಹೊಳೆದು ಕಾಣಲ್ಪಡುತ್ತದೆ. ಸ್ವಪ್ನ ಜಾಗರಣಾವಸ್ಥೆಗಳಲ್ಲಿ ಇಷ್ಟವಸ್ತುವಿನ ದರ್ಶನ, ಲಾಭ, ಉಪಭೋಗಾದಿಗಳಿಂದ ಪ್ರಿಯ ಮೋದ ಪ್ರಮೋದಗಳೆಂಬ ಮೂರು ಆನಂದಗಳು ತೋರುತ್ತವೆ. ಇವೇ ಆನಂದಮಯ ಕೋಶವೆನ್ನಲ್ಪಡುತ್ತವೆ. ಈ ಆನಂದಮಯ ಕೋಶವಾದರೂ ಅವಿದ್ಯೋಪಾಧಿಯುಳ್ಳದ್ದರಿಂದಲೂ ಪ್ರಕೃತಿಯ ವಿಕಾರವಾದ್ದರಿಂದಲೂ ಮತ್ತು ಸುಕೃತ ಕ್ರಿಯೆಯ ಕಾರ್ಯವಾದ್ದರಿಂದಲೂ ಅನೇಕ ವಿಕಾರಗಳಿಂದ ಕೂಡಿಕೊಂಡಿರುವದರಿಂದಲೂ ಆತ್ಮವಾಗಲಾರದು. ಆತ್ಮನು ಉಕ್ತ ಪಂಚಕೋಶಗಳಿಗೆ ರಹಿತನಾಗಿರುತ್ತಾನೆ. ಶ್ರುತಿ ಯುಕ್ತಿ ಸ್ವಾನುಭವಗಳಿಂದ ಪಂಚಕೋಶಗಳನ್ನು ನೇತಿಗಳೆಯುತ್ತಿರಲಿಕ್ಕೆ, ನಿಷೇಧಕ್ಕೆ ಅವಧಿರೂಪನಾದ ಬೋಧರೂಪ ಸಾಕ್ಷಿಯೇ ಉಳಿಯುತ್ತಾನೆ. ಈ ಪ್ರತ್ಯಗಾತ್ಮನೇ ಸ್ವಯಂಜ್ಯೋತಿಯೂ ಪಂಚಕೋಶ-

CC-0. Jangamwadi Math Collection. Digitized by eGangotri

ವಿಲಕ್ಷಣನೂ ಅವಸ್ಥಾತ್ರಯ ಸಾಕ್ಷಿಯೂ ನಿರ್ವಿಕಾರನೂ ನಿರಂಜನನೂ ನೀನೇ ಆಗಿರುತ್ತೀ, ಆದ್ದರಿಂದ ಮಿಂಚಿನಂತೆ, ತೋರಿ ಅಡಗುವ ವಿಕಾರಾತ್ಮಕವಾದ ಆನಂದಮಯ ಕೋಶವು ನೀನಲ್ಲ.

ಬಳಿಕ; ಪಂಚಕ್ಲೇಶಗಳಾದರೂ ಕೂಡಾ ಈ ದೇಹವನ್ನು ಕಟ್ಟಿರುತ್ತವೆಂಬ ಧನ್ನೂ ಅವಿದ್ಯಾದಿಗಳ ಕಾರ್ಯವನ್ನೂ ಉಕ್ತ ಪ್ರಪಂಚವು ದಾದಿಯ ಕಥೆಯಂತೆ ಸಂಕಲ್ಪಮಾತ್ರವಿರುತ್ತದೆಂಬುದನ್ನೂ ಪ್ರತಿಪಾದನ ಮಾಡುತ್ತಾರೆ.

ಕ್ಲೇಶಗಳೈದೀ ತನುಮುಖ್ಯಕ್ಕೆ ।
ಪಾಶದ ಬಿಗುಹಿನ ದುಃಖವದಕ್ಕೆ ॥
ತಿಳಿಯಲವಿದ್ಯೆಯೆ ನಿಜದೊಳು ಮೋಸ ।
ಬಳಿಕಸ್ಮಿತೆ ದೇಹಾತ್ಮಾಧ್ಯಾಸ ॥
ಪಡೆವ ವಿಷಯರತಿ ರಾಗದವೇಷ ।
ಕೆಡಲದು ಪುಟ್ಟುವ ಕೋಪದ್ವೇಷ ॥
ಕೂಡಿದ ವಿಷಯಂಗಳ ಬಿಡದಿಹುದು ।
ನೋಡಂತದಭಿನಿವೇಶ ಮೆನಿಪುದು ॥
ತೋರುವವಿದ್ಯೆಯೆ ಪರಿಭವಕಾರಿ ।
ಮೂರುಂ ತಾಪಕ್ಕಸ್ಮಿತೆ ದಾರಿ ॥
ಅರಿಷಡ್ವರ್ಗಕೆ ರಾಗವೆ ಬಿತ್ತು ।
ದುರಿತಂಗಳಿಗಿವು ತಾವೇ ಗೊತ್ತು ॥ ೧೧ ॥
ಬಾಲಕನಿಗೆ ದಾದಿಯು ಕಥೆಯೆಂತು ।
ಪೇಳಿದವೆಲ್ಲಂ ಧಿಟವಹುದಂತು ॥
ಈ ಪರಿ ಯೆನಿಸುವ ತೋರಿಕೆಯೆಲ್ಲ ।
ಕಾಪಟ್ಯಂ ನಿನ್ನೊಳು ನಿಜವಲ್ಲ ॥

ಟೀಕಾ:— ಐದು=ಪಂಚ, ಕ್ಲೇಶಗಳು=ದುಃಖಗಳೆಂಬ, ಪಾಶದ=ಹಗ್ಗದ, ಬಿಗುಹಿನ=ಕಟ್ಟಲ್ಪಟ್ಟದರ, ದುಃಖವು=ದುಃಖವು, ತನುಮುಖ್ಯಕ್ಕೆ=ಮುಖ್ಯವಾಗಿ ಶರೀರಕ್ಕೆ, ಅದಕ್ಕೆ=ಆ ಶರೀರಕ್ಕೇಯೇ, ತಿಳಿಯಲ್=ವಿಚಾರಮಾಡಲಾಗಿ, ನಿಜದೊಳು= ತನ್ನ ಸ್ವರೂಪದಲ್ಲಿ, ಮೋಸ = ಆವರಣವನ್ನು ಮಾಡುವದು, ಅವಿದ್ಯೆಯೇ=ಅವಿದ್ಯೆಯೆನಿಸುವದು, ಬಳಿಕ=ಅನಂತರ, ದೇಹಾತ್ಮಾಧ್ಯಾಸ= ದೇಹವೇ ನಾನೆಂಬ ಭ್ರಾಂತಿಯು, ಅಸ್ಮಿತೆ=ಅಸ್ಮಿತೆಯೆನಿಸುವದು, ಪಡೆವ= ಹೊಂದುವ, ವಿಷಯರತಿ=ವಿಷಯಗಳ ಪ್ರೀತಿಯೇ, ರಾಗದವೇಷ=ರಾಗದರೂಪು (ಆಗಿರುತ್ತದೆ) ಅದು=ಆ ರಾಗವು, ಕೆಡಲು=ನಷ್ಟವಾಗಲು, ಪುಟ್ಟುವ=ಹುಟ್ಟು ವಂಥಾ, ಕೋಪ=ಕ್ರೋಧವೇ, ದ್ವೇಷ=ವೈರವೆನಿಸುತ್ತದೆ, ಕೂಡಿದ=ಸಂಗ್ರಹ ಮಾಡಿದ, ವಿಷಯಂಗಳ=ವಿಷಯಗಳನ್ನು, ಬಿಡದಿಹುದು=ಬಿಡಲಾರದಿರುವದು,

CC-0. Jangamwadi Math Collection. Digitized by eGangotri

ಅಂತದು=ಆ ಗುಣವೇ, ಅಭಿನಿವೇಶವೆನಿಪುದು=ಒಂದು ತರದಹಠಾತ್ಮಕ ದುಃಖವೆನಿಸುತ್ತದೆ, ನೋಡು=ವಿಚಾರಮಾಡು, ತೋರುವ=ಪ್ರತೀತಿಯಾಗುವ, ಅವಿದ್ಯೆಯೆ=ಅಜ್ಞಾನವೇ, ಪರಿಭವಕಾರಿ=ಜನನಮರಣಗಳನ್ನುಂಟುಮಾಡುವಂಥಾದ್ದು, ಅಸ್ಮಿತೆ=ದೇಹವೇ ನಾನೆಂಬ ಮತಿಯು, ಮೂರುಂತಾಪಕ್ಕೆ=ಆಧ್ಯಾತ್ಮಿಕ ಆಧಿಭೌತಿಕ, ಆಧಿದೈವಿಕಗಳೆಂಬ ಮೂರು ದುಃಖಗಳಿಗೆ, ದಾರಿ=ಮಾರ್ಗವಾಗಿರುವದು, ರಾಗವೇ=ವಿಷಯಾಭಿಲಾಷೆಯೇ, ಅರಿಷಡ್ವರ್ಗಕ್ಕೆ=ಕಾಮಕ್ರೋಧಾದಿಗಳಿಗೆ, ಬಿತ್ತು=ಕಾರಣವಾಗಿರುವದು, ದುರಿತಂಗಳಿಗೆ=ಪಾಪಂಗಳಿಗೆ, ಇವು=ಈಗ ಹೇಳಿವ ಕಾಮಾದಿಗಳು, ತಾವೇ=ತಾವೇ, ಗೊತ್ತು=ಮೂಲಕಾರಣಗಳಾಗಿರುವವು, ಬಾಲಕನಿಗೆ=ಹುಡುಗನಿಗೆ, ದಾದಿಯ=ತೊತ್ತಿನ, ಕಥೆಯು=ಇತಿಹಾಸವು, ಎಂತು=ಹೇಗೋ, ಅಂತು=ಹಾಗೆ, ಪೇಳಿದನೆಲ್ಲಂ=ಹೇಳಿದುದೆಲ್ಲವು, ದಿಟವಹುದು=ಸತ್ಯವಾಗಿರುವದು, ಈ ಪರಿಯೆನಿಸುವ=ಈ ರೀತಿ ಹೇಳಿಸಿಕೊಳ್ಳುವ, ಎಲ್ಲ=ಸರ್ವ, ತೋರಿಕೆ=ಪ್ರತೀತಿಯು, ಕಾಪಟ್ಯಂ=ಮಾಯಾತ್ಮಕವಾಗಿರುವದು, ನಿನ್ನೊಳು=ಸಚ್ಚಿದಾನಂದ ಸ್ವರೂಪನಾದ ನಿನ್ನಲ್ಲಿ, ನಿಜವಲ್ಲ=ಯಥಾರ್ಥವಲ್ಲ.

ತಾತ್ಪರ್ಯ:- ಅವಿದ್ಯೆ, ಅಸ್ಮಿತೆ, ರಾಗ, ದ್ವೇಷ, ಅಭಿನಿವೇಶಗಳೆಂಬ ಪಂಚಕ್ಲೇಶಗಳೇ ಪಾಶಗಳಾಗಿರುತ್ತವೆ. ಈ ಪಂಚಕ್ಲೇಶಗಳಿಂದಲೇ ಜೀವನಿಗೆ ಅನೇಕ, ಪ್ರಕಾರಗಳಾದ ದುಃಖಗಳು ಪ್ರಾಪ್ತಿಯಾಗುತ್ತವೆ. ಹೇಗಂದರೆ, ಅನಾತ್ಮ, ಅಶುಚಿ ನಿತ್ಯ ದುಃಖಾತ್ಮಕ ದೇಹಾದಿ ವಸ್ತುಗಳಲ್ಲಿ ಆತ್ಮ, ಶುಚಿ, ನಿತ್ಯ, ಸುಖವೆಂಬ ಭಾವನೆಯೆ ಅವಿದ್ಯೆಯೆನಿಸುವದು. ಕತ್ತಲೆಯು ಸರ್ವ ಪದಾರ್ಥಗಳನ್ನು ಮುಚ್ಚುವಂತೆ, ಅವಿದ್ಯೆಯು ಜೀವರ ಪಾರಮಾರ್ಥಿಕ ಸ್ವರೂಪವನ್ನು ಆವರಣಮಾಡುತ್ತದೆ. ಬಳಿಕ ತನ್ನ ನಿಜರೂಪು ತನಗೆ ಗೊತ್ತಾಗದೇಹೋಗುತ್ತಿರಲು ಮುಂದೆ ದೃಶ್ಯವಾಗಿ ಕಾಣಿಸಿಕೊಳ್ಳುವಂಥಾ ಸ್ಥೂಲ ದೇಹವೇ ನಾನೆಂಬ ಬುದ್ಧಿಯು ಹುಟ್ಟುತ್ತವೆ. ಇದೇ ಸಕಲ ಅಹಂಕಾರಗಳಿಗೆ ಕಾರಣವಾಗಿರುತ್ತದೆ. ಈ ದೇಹವೇ ನಾನೆಂಬ ಬುದ್ಧಿಗೆ ಅಸ್ಮಿತೆಯೆಂದು ಕರೆಯುತ್ತಾರೆ. ಅನಂತರ ತನಗೆ ಸುಖವು ಹೇಗೆ ಲಭ್ಯವಾದೀತು? ಎಲ್ಲಿದ್ದೀತು? ಎಂದು ಹುಡುಕುತ್ತ ದುಃಖಾತ್ಮಕ ವಿಷಯಗಳಲ್ಲಿಯೇ ಸುಖವಿರುವದೆಂದು ಭಾವಿಸಿ ವಿಷಯಗಳನ್ನಿಚ್ಛಿಸುವ ಬುದ್ಧಿಯೇ ರಾಗವೆನಿಸುವದು. ಈ ರಾಗಮೂಲಕ ವಿಷಯಗಳನ್ನು ಪ್ರಾಪ್ತಿಮಾಡಿಕೊಳ್ಳುವ ಪ್ರಯತ್ನಶೀಲನಾಗಿರಲು, ಯಾವದಾದರೊಂದು ಕಾರಣದಿಂದ ವಿಷಯಪ್ರಾಪ್ತಿಯು ಪ್ರತಿಬಂಧಕವಾಗಲು, ಅದನ್ನು ಕುರಿತು ದುಃಖಮಾಡುವದೇ ದ್ವೇಷವೆನಿಸುವದು. ಬಳಿಕ ಈ ರೀತಿ ಎಲ್ಲ ವಿಷಯಗಳು ದುಃಖರೂಪಗಳಿರುತ್ತವೆ ಎಂಬ ಜ್ಞಾನವಿದ್ದರೂ ಕೂಡಾ ಒಂದು ವಿಷಯವು ಕಳೆದುಹೋದರೆ ಸುಮ್ಮನೆಬಿಡದೆ, ಮತ್ತೂ ಮತ್ತೂ ಆ ವಿಷಯ

CC-0. Jangamwadi Math Collection. Digitized by eGangotri

ವನ್ನು ಸಂಗ್ರಹಮಾಡುವದೇ ಅಭಿನಿವೇಶವುವೆನಿಸುವದು. ಈ ಅವಿದ್ಯೆಯೇ ಆವರಣಮಾಡುವದರಿಂದ ಅನೇಕ ಜನನ ಮರಣ ದುಃಖಗಳಿಗೆ ಕಾರಣವಾಗಿರುತ್ತವೆ. ಅಸ್ಮಿತೆಯೇ ಆಧ್ಯಾತ್ಮಿಕ, ಆಧಿಭೌತಿಕ, ಆದಿದೈವಿಕಗಳೆಂಬ ಮೂರು ತಾಪತ್ರಯಂಗಳಿಗೆ ಮಾರ್ಗವಾಗಿರುತ್ತದೆ. ಅಂದರೆ, ಈ ಅಸ್ಮಿತೆಯ ಮೂಲಕ ಪ್ರಾಪ್ತಿ, ಗಳಾಗುತ್ತವೆಂಬ ತಾತ್ಪರ್ಯವು. ರಾಗವೇ ಕಾಮ, ಕ್ರೋಧ, ಲೋಭ, ಮೋಹ ಮದ, ಮತ್ಸರಗಳೆಂಬ ಆರು ರಿಪುಗಳಿಗೆ ಕಾರಣವಾಗಿರುತ್ತದೆ. ಈ ಆರು ಅರಿಗಳು ಅನೇಕ ಪಾಪಂಗಳಿಗೆ ಕಾರಣಗಳಾಗಿರುತ್ತವೆ. ಈ ರೀತಿ ಪಂಚಕ್ಲೇಶಗಳಾದರೂ ದೇಹ ಮೂಲಕ ಜೀವನಿಗೆ ಸಂಭವಿಸಿರುತ್ತದೆ.

ಎಲೈ ಶಿಷ್ಯನೇ ! ಈಗ ಹೇಳಿದ ಯಾವತ್ತು ವಿಷಯವು ಬಾಲಕನನ್ನು ಸಮಾಧಾನಪಡಿಸುವದಕ್ಕೋಸ್ಕರ ಹೇಳಿದ ತೊತ್ತಿನ ಕಥೆಯಂತೆ ಸತ್ಯವಾಗಿರುವದು. ಅಂದರೆ, ದಾದಿಯ ಕಥೆಯಲ್ಲಿ ಈ ಸಂಸಾರವೆಲ್ಲವು ಸಂಕಲ್ಪಮಾತ್ರವಾಗಿರುತ್ತದೆಂಬ ತಾತ್ಪರ್ಯವು. ಅದು ಹೇಗಂದರೆ— ಒಬ್ಬಾನೊಬ್ಬ ಮುಗ್ಧನಾದ ಚಿಕ್ಕಬಾಲಕನು ತೊತ್ತಿನನ್ನು ಕುರಿತು–"ನನಗೋಸ್ಕರ ಒಂದು ವಿನೋದವಾದ ಕಥೆಯನ್ನು ಹೇಳು" ಎಂದು ಕೇಳಿದನು. ಆಗ ಆ ದಾಸಿಯು ಆ ಬುದ್ಧಿಶಾಲಿಯಾದ ಬಾಲಕನ ವಿನೋದಕ್ಕೋಸ್ಕರ ಮಧುರಾಕ್ಷರಗಳಿಂದೊಡಗೂಡಿದ ಆಖ್ಯಾನವನ್ನು ಹೇಳಲಿಕ್ಕುದ್ಯುಕ್ತಳಾದಳು. ಏನಂದರೆ, ಅತ್ಯಂತ ಅಸತ್ಪತ್ತನದಲ್ಲಿ (ಶೂನ್ಯನಗರದಲ್ಲಿ)ಶೌರ್ಯ ಧೈರ್ಯಾದಿ ಗುಣಯುಕ್ತರೂ ಧಾರ್ಮಿಕರೂ ಪ್ರೇಮಿಗಳೂ ಶೋಭಾಯಮಾನರೂ ಆದ ಮೂವರು ರಾಜಪುತ್ರರಿರುತ್ತಿದ್ದರು. ಇವರು ಆಕಾಶದಲ್ಲಿ ಜಲನಕ್ಷತ್ರಗಳಂತೆ ಆ ವಿಸ್ತೀರ್ಣವಾದ ಶೂನ್ಯನಗರದಲ್ಲಿ ಶೋಭಿಸುತ್ತಿದ್ದರು. ಇವರೊಳಗಿಬ್ಬರು ಹುಟ್ಟಲೇ ಇಲ್ಲ. ಒಬ್ಬಾತನು ಗರ್ಭದಲ್ಲಿದ್ದೇ ಇಲ್ಲ. ಈ ಮೂವರು ರಾಜಪುತ್ರರು ಒಂದಾನೊಂದು ಕಾಲದಲ್ಲಿ ದೈವವಶಾತ್ ಬಂಧುಗಳಿಂದ ವಿಯೋಗರಾಗಿ (ಬಂಧುಗಳು ಸತ್ತುಹೋಗಿದ್ದರಿಂದ) ದುರ್ಭಿಕ್ಷೆಯಿಂದ ಖಿನ್ನಮುಖವುಳ್ಳವರಾಗಿಯೂ ಶೋಕಮಾನಸರಾಗಿಯೂ ಜನಸಮೂಹದಿಂದೊಡಗೂಡಿದ ಶೂನ್ಯನಗರದಿಂದ ಉತ್ತಮನಗರ ಪ್ರಾಪ್ತಿಯ ಸಲುವಾಗಿ ಹೊರಟರು. ಆಗ ಈ ಮೂವರು ಬುಧ, ಶುಕ್ರ, ಶನಿ, ಈ ಮೂರು ಗ್ರಹಗಳು ಕೂಡಿಕೊಂಡು ಆಕಾಶದಿಂದ ಹೊರಟಂತೆ ಕಾಣುತ್ತಿದ್ದರು. ಬೇಸಿಗೆಯ ದಿನದಲ್ಲಿ ಸೂರ್ಯನ ಬಿಸಿಲಿನಿಂದ ಬಳಲಿದ ಚಿಗರೆಲೆಗಳಂತೆ, ಅತಿ ಮೃದು ಮತ್ತು ಕೋಮಲ ಶರೀರಗಳುಳ್ಳ ರಾಜಪುತ್ರರು ಮಾರ್ಗದಲ್ಲಿ ಸೂರ್ಯನ ಪ್ರಚಂಡ ಕಿರಣಗಳ ತಾಪದಿಂದ ತಪ್ತರಾದರು. ಮಾರ್ಗದಲ್ಲಿ ಕಾದ ಉಸಿಕಿನಿಂದ ಸುಡಲ್ಪಟ್ಟ ಪಾದಕಮಲವುಳ್ಳವರಾಗಿ ಹಾ ತಾತ ! ಎಂದು ಚಿಗರಿಯ ಹಿಂಡಿನಿಂದ ತಪ್ಪಿಸಿಕೊಂಡ ಚಿಗರಿಗಳಂತೆ ಶೋಕಮಾಡುತ್ತಿದ್ದರು.

CC-0. Jangamwadi Math Collection. Digitized by eGangotri

ಹುಲ್ಲುಗಳ ಮೊನೆಯಿಂದ ಚುಚ್ಚಲ್ಪಟ್ಟ ಚರಣಗಳುಳ್ಳವರೂ, ನಡೆಯುವ ಶ್ರಮದಿಂದ ನೊಯ್ಯುವ ಶರೀರದ ಸಂದುಗಳುಳ್ಳವರಾಗಿಯೂ, ಮಾರ್ಗದಲ್ಲಿದ್ದ ಧೂಳಿಯಿಂದ ಮುಚ್ಚಲ್ಪಟ್ಟ ಶರೀರವುಳ್ಳವರೂ ಆಗಿ ಬಹಳ ದೂರ ದಾರಿ ನಡೆದು ಕೊಂಡು ಹೋಗುತ್ತಿರುವಷ್ಟರೊಳಗೆ, ಮಾರ್ಗದಲ್ಲಿ ಚಿಗುರೆಲೆ, ಹೂವು, ಕಾಯಿ ಫಲಗಳಿಂದ ಭರಿತಗಳಾಗಿಯೂ, ಮೃಗಪಕ್ಷಿಗಳಿಗಾಶ್ರಯಭೂತವಾಗಿಯೂ, ಇರುವ ಮೂರು ಮರಗಳನ್ನು ಹೊಂದಿದರು. ಆ ಮೂರು ವೃಕ್ಷಗಳಲ್ಲಿ ಎರಡು ವೃಕ್ಷಗಳು ಹುಟ್ಟೇ ಇಲ್ಲ. ಮೂರನೆಯದು ಸುಖವಾಗಿ ಬೆಳೆಯುವದಕ್ಕೆ ಯೋಗ್ಯ ವಾದ ಬೀಜವು ಸ್ವಲ್ಪಾದರೂ ಇದ್ದಿಲ್ಲ. ಇಂಥಾ ಮರಗಳ ಪೈಕಿ ಒಂದು ಮರದ ಕೆಳಗೆ ದಣಿದ ಮೂವರು ರಾಜಪುತ್ರರು ಸ್ವರ್ಗಲೋಕದೊಳಗಿನ ಕಲ್ಪವೃಕ್ಷದ ಕೆಳಗೆ ಇಂದ್ರ, ವಾಯು ಯಮದೇವರುಗಳಂತೆ ವಿಶ್ರಾಂತಿಯನ್ನು ಹೊಂದಿದರು. ಮತ್ತು ಆ ಮರದ ಅಮೃತ ಸಮಾನವಾದ ಹಣ್ಣುಗಳನ್ನು ತಿಂದು, ರಸವನ್ನು ಕುಡಿದು, ಆ ಮರದ ಹೂಗಳನ್ನೆ ಮಾಲೆ ಮಾಡಿ ಧರಿಸಿಕೊಂಡು, ಬಹಳ ಹೊತ್ತು ವಿಶ್ರಾಂತಿಯನ್ನು ತಕ್ಕೊಂಡು, ಪುನಃ ಅಲ್ಲಿಂದ ಮುಂದಕ್ಕೆ ಹೊರಟರು. ಬಹಳ ದೂರ ಹೋಗುತ್ತಿರಲಿಕ್ಕೆ ಮಧ್ಯಾಹ್ನವಾಗಲು ತೆರೆಗಳ ಮಧುರರವದಿಂದ ಯುಕ್ತ ವಾದ ಮೂರು ಹೊಳೆಗಳು ಪ್ರಾಪ್ತಗಳಾದವು. ಆ ಮೂರರೊಳಗೊಂದು ಒಣಗೇ ಹೋಗಿತ್ತು. ಉಳಿದೆರಡರಲ್ಲಿ ಕುರುಡನ ಎರಡೂ ಕಣ್ಣುಗಳಿಲ್ಲದಂತೆ, ಸ್ವಲ್ಪಾ ದರೂ ನೀರು ಇದ್ದಿಲ್ಲ. ಯಾವ ಹೊಳೆಯು ಅತ್ಯಂತ ಒಣಗಿ ಹೋಗಿತ್ತೋ, ಅದ ರಲ್ಲಿ ಮೂವರು ರಾಜಪುತ್ರರು ಬ್ರಹ್ಮ ವಿಷ್ಣು ಹರರು ಅಥವಾ ಬಿಸಿಲಿನಿಂದ ಬೇಸತ್ತ ಜನರು ಗಂಗಾನದಿಯಲ್ಲಿ ಸ್ನಾನ ಮಾಡುವಂತೆ, ಪ್ರೀತಿಯಿಂದ ಸ್ನಾನ ಮಾಡಿದರು. ಮತ್ತು ಬಹಳಹೊತ್ತು ಜಲಕ್ರೀಡೆಯನ್ನಾಡಿ ಹಾಲಿನಂತಿರುವ ನೀರನ್ನು ಕುಡಿದು, ಸಂತುಷ್ಟ ಮನಸ್ಸುಳ್ಳವರಾಗಿ, ಆ ರಾಜಪುತ್ರರು ಮುಂದಕ್ಕೆ ನಡೆದರು. ಬಳಿಕ ಸೂರ್ಯನು ಅಸ್ತಂಗತನಾಗುತ್ತಿರಲು ಸಾಯಂಕಾಲ ವಾಯಿತು. ಆಗ ಹೊಸದಾಗಿ ಕಟ್ಟಲ್ಪಟ್ಟಂಥಾ ಪರ್ವತಪ್ರಾಯವಾದಂಥಾ ಮೇಲೆ ನಿಶಾನೆಗಳಿಂದಲೂ ಕೆಳಗೆ ಕಮಲಗಳಿಂದಲೂ ತುಂಬಿರುವಂಥಾ ನೀಲಾ ಕಾಶಗಳಂತೆ ಸುಂದರಗಳಾದ ಸರೋವರಗಳುಳ್ಳಂಥಾ, ದೂರದಿಂದ ಕೇಳಲ್ಪಟ್ಟ ಭಾಷಣ ಗಾಯನ ಮಾಡುವ ಜನಸಮೂಹವುಳ್ಳಂಥಾ, ಭವಿಷ್ಯತ್ ನಾಮಕ ನಗರವನ್ನು ಹೊಂದಿದರು. ಅದರಲ್ಲಿ ಮಹಾಗಿರಿಯ ಶೃಂಗಗಳಂತೆ ಬಹು ಶೋಭಾಯಮಾನಗಳಾದ ಸುವರ್ಣರತ್ನಮಯಗಳಾದ, ಮೂರು ಮನೆಗಳನ್ನು ನೋಡಿದರು. ಆ ಮೂರು ಮನೆಗಳೊಳಗೆ ಎರಡು ಮನೆಗಳನ್ನು ನಿರ್ಮಾಣ ಮಾಡೇ ಇಲ್ಲ. ಒಂದಕ್ಕೆ ಗೋಡೆಯೇ ಇಲ್ಲ. ಆಗ ಸುಂದರವಾದ ಗೋಡೆಯಿಲ್ಲದ ಮನೆಯನ್ನು ಆ ಮೂವರು ರಾಜಪುತ್ರರು ಪ್ರವೇಶಮಾಡಿದರು. ಚಲುವ ಮುಖ ವುಳ್ಳ ಮೂವರು ಮನೆಯೊಳಗೆ ಹೊಕ್ಕು ಸ್ವಲ್ಪಹೊತ್ತು ಕೂತು, ಅತ್ತಿತ

CC-0. Jangamwadi Math Collection. Digitized by eGangotri

ವಿಹಾರ ಮಾಡುತ್ತಿರುವಷ್ಟರಲ್ಲಿ ಭಂಗಾರ ಸದೃಶಗಳಾದ ಮೂರು ಭಾಂಡೆಗಳನ್ನು ನೋಡಿದರು. ಅವುಗಳೊಳಗೆ ಎರಡು ಪಾತ್ರೆಗಳು ಎರಡೆರಡು ತುಣಕಾಗಿದ್ದವು. ಒಂದು ಬಹಳೇ ತುಣಕಾಗಿಹೋಗಿತ್ತು. ಆಗ ಕುಶಲಬುದ್ಧಿಯುಳ್ಳಂಥಾ ಮೂವರು ರಾಜಪುತ್ರರು ತುಣಕಾದ ಆ ಪಾತ್ರೆಯನ್ನು ತಕ್ಕೊಂಡರು. ಆದರಲ್ಲಿ ನೂರು ಹೇರು ಕಡಿಮೆ ನೂರು ಹೇರಿನ ಅನ್ನವು ಮಾಡಲ್ಪಟ್ಟಿತು. ಬಳಿಕ ರಾಜಪುತ್ರರಿಂದ ಬಹಳ ಊಟ ಮಾಡುವಂಥಾ ಮೂವರು ಬ್ರಾಹ್ಮಣರು ಊಟಕ್ಕೋಸ್ಕರ ಕರಿಸಿಕೊಳ್ಳಲ್ಪಟ್ಟರು. ಅವರೊಳಗಿಬ್ಬರಿಗೆ ದೇಹವೇ ಇದ್ದಿಲ್ಲ. ಒಬ್ಬನಿಗೆ ಮುಖವೇ ಇದ್ದಿಲ್ಲ. ಆ ಮುಖವಿಲ್ಲದ ಬ್ರಾಹ್ಮಣನಿಂದ ನೂರು ಹೇರಿನನ್ನವೆಲ್ಲವೂ ಭೋಜನ ಮಾಡಲ್ಪಟ್ಟಿತು. ವಿಪ್ರರಿಂದುಂಡು ಬಿಟ್ಟ ಶೇಷ ಪ್ರಸಾದವು ರಾಜಪುತ್ರರಿಂದ ಉಣ್ಣಲ್ಪಟ್ಟಿತು. ಅನಂತರ ಆ ಭವಿಷ್ಯನ್ನಗರದಲ್ಲಿ ಮೂವರು ರಾಜಪುತ್ರರು ತೃಪ್ತಿಯನ್ನು ಹೊಂದಿದವರಾಗಿ ಹೇ ಮಗನೇ! ಈಗಲೂ ಸುಖದಿಂದ ಮೃಗ ಬೇಟೆಯನ್ನು ಆಡುತ್ತಲಿದ್ದಾರೆ. ಈ ಕಥೆಯನ್ನು ನೀನು ಮನನ ಮಾಡಿದರೆ ಪಂಡಿತನಾಗುವಿ, ಎಂದು ದಾದಿಯು ಬಾಲಕನಿಗೆ ಬಹು ರಮ್ಯವಾದ ಆಖ್ಯಾನವನ್ನು ಹೇಳಿದಳು. ಬಾಲಕನು ಆಖ್ಯಾನವನ್ನು ಕೇಳಿ ಬಹಳ ಸಂತೋಷವನ್ನು ಹೊಂದಿದನು.

ಈ ಕಥೆಯಂತೆ ಸಂಸಾರವೆಲ್ಲವು ಕಲ್ಪಿತ ದೃಢ ಸಂಕಲ್ಪಗಳಿಂದಲೇ ಸ್ಥಿತಿಯನ್ನು ಹೊಂದಿರುತ್ತದೆ. ಕೇವಲ ವಿಕಲ್ಪ ಜಾಲದಿಂದಲೇ ಬಂಧಮೋಕ್ಷಾದಿ ವ್ಯವಹಾರವು ಹೊಳೆಯುತ್ತಿರುತ್ತದೆ. ವಿಕಲ್ಪಗಳೆಲ್ಲಾ ಸಂಕಲ್ಪದ ಕಾರ್ಯಗಳಾದ್ದರಿಂದ ಸರ್ವ ಪ್ರಪಂಚವು ಸಂಕಲ್ಪವಶದಿಂದ ತೋರುತ್ತದೆ. ಸಂಕಲ್ಪ ವ್ಯತಿರಿಕ್ತ ಮಾತ್ರ ಬೇರೆ ಏನೂ ಇರುವದಿಲ್ಲ. ಆಕಾಶ, ಭೂಮಿ, ವಾಯು, ಅಂತರಿಕ್ಷ, ಗಿರಿ, ನದಿ, ದಿಕ್ಕುಗಳೆಲ್ಲಾ ಸ್ವಪ್ನದಂತೆ ಕೇವಲ ಸಂಕಲ್ಪದಿಂದಲೇ ರಚಿಸಲ್ಪಟ್ಟಿರುತ್ತವೆ. ಅರ್ಥಾತ್ ಭವಿಷ್ಯನ್ನಗರದಲ್ಲಿ ಮೂವರು ರಾಜಪುತ್ರರು ನದಿಗಳು ಮರಗಳು ಹೇಗೆ ಸಂಕಲ್ಪದಿಂದ ರಚನೆಗಳಾಗಿದ್ದವೋ, ಹಾಗೇ ಈ ಜಗತ್ತಿನ ಸ್ಥಿತಿಯಾದರೂ ಆಗಿರುವದು. ಸಮುದ್ರದಲ್ಲಿ ಜಲವೇ ತೋರುವಂತೆ ಆತ್ಮನಲ್ಲಿ ಆತ್ಮನಿಂದ ಎಲ್ಲ ಕಡೆಗೂ ಚಂಚಲಾತ್ಮಕ ಸಂಕಲ್ಪವೇ ತೋರುತ್ತದೆ. ಸೂರ್ಯ ಮತ್ತು ಜನರ ವ್ಯಾಪಾರಗಳಿಂದ ದಿವಸವು ಹೆಚ್ಚಾಗುವಂತೆ ಪರಮಾತ್ಮನಿಂದ ಮೊದಲುತ್ಪನ್ನವಾದ ಸಂಕಲ್ಪವೇ ಹೆಚ್ಚಾಗಿರುತ್ತದೆ. ಆದ್ದರಿಂದ ಸಮಗ್ರ ಜಗತ್ತು ಸಂಕಲ್ಪ ಮಾತ್ರವಾಗಿರುತ್ತದೆ. ಮನಸ್ಸಿನ ರಾಗದ್ವೇಷಾದಿ ವೃತ್ತಿಗಳೆಲ್ಲಾ ಕೇವಲ ಸಂಕಲ್ಪಾತ್ಮಗಳಾಗಿರುತ್ತವೆ. ಆದ್ದರಿಂದ ಈ ಪಾಪರೂಪ ಸಂಕಲ್ಪ ಜಾಲವನ್ನು ತ್ಯಾಗಮಾಡಿ ನಿರ್ವಿಕಲ್ಪವನ್ನು ಆಶ್ರಯ ಮಾಡಿದರೆ, ಹೇ ರಾಮ! ನಿಶ್ಚಯವಾಗಿ ಶಾಂತಿಯನ್ನು ಹೊಂದುವಿ. ಏನೂ ಸಂಶಯವಿಲ್ಲ. ಎಂಬ ತಾತ್ಪರ್ಯವು.

CC-0. Jangamwadi Math Collection. Digitized by eGangotri

"ಈ ಪರಿಯೆನಿಸುವ ತೋರಿಕೆಯಲ್ಲ" "ಕಾಪಟ್ಯಂ ನಿನ್ನೊಳು ನಿಜವಲ್ಲ" ಪ್ರತೀತಿ ಮಾತ್ರವಾಗಿ ತೋರುವ ಪ್ರಪಂಚವೆಲ್ಲವು ಸಂಕಲ್ಪಾತ್ಮಕವಾದ್ದರಿಂದ ನಿರ್ವಿಕಲ್ಪ ಸ್ವರೂಪನಾದ ನಿನ್ನಲ್ಲಿ ನಿಜವಲ್ಲ ಕಿಂತು ಮಾಯಾತ್ಮಕವಾಗಿರುತ್ತದೆಂಬ ತಾತ್ಪರ್ಯವು.

ಗತಿನಾಲ್ಕನೆಯು ದಿದಕ್ಕತಿ ।
ಹಿತವೆನಿಪ ನಿರೂಪಣಂಗಳೇಕಾದಶವಂ
ತತಿಶಯುವಾಗಿರೆ ತಿಳಿಯು ।
ಪ್ರತಿಪಾದಿತಮಿಲ್ಲಿ ಪಿಂಡದುದಯವಿಭೇದಂ ॥

ಟೀಕಾ:— ಗತಿ=ಪ್ರಕರಣವು, ನಾಲ್ಕನೆಯದು=ನಾಲ್ಕನೆಯದು, ಇದಕೆ= ಈ ಗತಿಗೆ, ಅತಿಹಿತವೆನಿಪ=ಬಹಳ ಯೋಗ್ಯಗಳಾದ, ನಿರೂಪಣಂಗಳು=ಪದ್ಯಗಳು, ಅತಿಶಯವಾಗಿರೆ=ಹೆಚ್ಚಾಗಿದ್ದರೂ, ಅಂತು=ಒಟ್ಟಿಗೆ, ಏಕಾದಶವಂ= ಹನ್ನೊಂದು, ತಿಳಿಯಲ್=ವಿಚಾರಮಾಡಿ ನೋಡಲಾಗಿ, ಇಲ್ಲಿ=ಈ ಪ್ರಕರಣದಲ್ಲಿ, ಪಿಂಡದುದಯ=ಶರೀರೋತ್ಪತ್ತಿಯ, ವಿಭೇದಂ=ಭೇದವು, ಪ್ರತಿಪಾದಿತಂ= ಹೇಳಲ್ಪಟ್ಟಿತು.

ಇಂತು ಗತಿ ೪ ಕ್ಕಂ ನಿರೂಪಣೆ ೪೪ ಕ್ಕಂ ಚರಣ ೫೪೪ ಕ್ಕಂ
ಮಂಗಳಮಸ್ತು

ಪಂಚಮ ಗತಿ

ಪೂರ್ವಗತಿಯಲ್ಲಿ ಶರೀರದ ಸ್ವರೂಪವನ್ನು ಹೇಳಿ, ಈಗ ಅದರೊಳಗಿರುವ ಪಂಚಭೂತಗಳ ವಿಕಾರಗಳನ್ನು ಹೇಳುತ್ತಾರೆ.

ತನುವಿನ ಹವಣಂ ತಿಳಿವಂ ।
ತನುನಯದಿಂದಿಂತು ಪೇಳ್ದೆನೊಲಿದು ಬಳಿಕ್ಕಾ ॥
ತನುವಿನೊಳುಭೂತ ವಿಕಾರ ।
ವೆನಿತನಿತುಮನೀಗ ಕೊರೆವೆ ನರಿವಂತಿಳೆಯೊಳ್ ॥

ಟೀಕಾ:—ತನುವಿನ=ಶರೀರದ, ಹವಣಂ=ನಾನಾರೀತಿಯನ್ನು, ತಿಳಿವಂತೆ= ಅರಿಯುವಹಾಗೆ, ಅನುನಯದಿಂದ=ಕ್ರಮದಿಂದ, ಇಂತು=ಈ ಪ್ರಕಾರ, ಒಲಿದು= ಪ್ರಸನ್ನನಾಗಿ, ಪೇಳ್ದೆನು=ಹೇಳಿದೆನು, ಬಳಿಕ=ಅನಂತರ, ಆ ತನುವಿನೊಳು=ಆ ಶರೀರದಲ್ಲಿ, ಭೂತವಿಕಾರವು=ಪಂಚಭೂತವಿಕಾರಗಳು, ಎನಿತು=ಎಷ್ಟೋ ಅನಿತುಂ=ಅಷ್ಟನ್ನು, ಈಗಳ್=ಸದ್ಯಕ್ಕೆ, ಅರಿವಂತೆ=ಸುಗಮ ತಿಳಿಯುವಹಾಗೆ, ಇಳೆಯೊಳ್=ಜಗತ್ತಿನಲ್ಲಿ, ಒರೆವೆನು=ಹೇಳುವೆನು.

ತಾತ್ಪರ್ಯ:— ನಾಲ್ಕನೇ ಗತಿಯಲ್ಲಿ ಅಂಡಜ, ಸ್ವೇದಜ, ಉದ್ಭಿಜ, ಜರಾಯುಜಾದಿ ಶರೀರಗಳ ಉತ್ಪತ್ತಿಯನ್ನೂ, ದೇಹದ ಅಳತೆಯನ್ನೂ, ಷಡ್ಭಾವ ವಿಕಾರಗಳನ್ನೂ, ಸ್ಥಾನಗಳನ್ನೂ, ಪಂಚಕೋಶಾದಿಗಳ ವಿಚಾರವನ್ನೂ, ಪ್ರತಿಪಾದನ ಮಾಡಿ, ಈ ಐದನೇ ಗತಿಯಲ್ಲಿ ಆ ಶರೀರದೊಳಗಿರುವ ಪಂಚಭೂತಗಳ ವಿಕಾರ

CC-0. Jangamwadi Math Collection. Digitized by eGangotri

ಗಳನ್ನು ಅಂತಃಕರಣ ಚತುಷ್ಟಯ, ನಾಲ್ಕು ವಾಕ್ಕು, ಅಧ್ಯಾಸಗಳ ವಿಚಾರ, ದೃಷ್ಟಿ ಸೃಷ್ಟಿ, ಮನಸ್ಸಿನ ಸ್ವರೂಪ ಮೊದಲಾದ ಪಂಚಭೂತಗಳ ವಿಕಾರಗಳನ್ನು ಪ್ರತಿಪಾದನ ಮಾಡುತ್ತೇವೆ. ಎಂದು ಗ್ರಂಥಕರ್ತರು ಪ್ರಕರಣದ ಆರಂಭದಲ್ಲಿ ಪ್ರತಿಜ್ಞೆಯನ್ನು ಮಾಡುತ್ತಾರೆ.

ಬಳಿಕ; ಶರೀರದಲ್ಲಿ ಪಂಚಭೂತಗಳ ಧರ್ಮಗಳು ಹೇಗಿರುತ್ತವೆ? ಎಂಬುದನ್ನು ಚನ್ನಾಗಿ ಪ್ರತಿಪಾದನ ಮಾಡುತ್ತಾರೆ.

ಇಳೆಯಂಶವೆ ತನುರೂಪಾಗಿಹುದು।
ಜಲದಂಶವೆ ಯಾದ್ರವ ಮಾಗಿಹುದು ॥
ದೇಹದ ಮಧ್ಯದೊಳು ಜ್ವಲಿಸುತ್ತ।
ಊಹಿಸಲನ್ನರಸವನೆ ಕೊಳುತ್ತ ॥
ಪಸಿವಂ ತೃಷೆಯಂ ಮಿಗೆ ಪುಟ್ಟಿಸುತ।
ವ್ಯಸನಾಲಸ್ಯಂಗಳನಾಗಿಸುತ ॥
ಧಾತುಗಳೇಳುಂ ಬಿಸಿಮಾಡುತ್ತ।
ಆ ತನುವಂ ಚಲುವೆಂದೆನಿಸುತ್ತ ॥
ಸಕಲಾವಯವಂ ದೀಪ್ತಿಯ ನೆಸಗಿ।
ವಿಕರಿಸಿ ಶೋಷಣೆ ಗೈದುರೆ ಮಸಗಿ ॥
ಇನಿತುಂ ಬಹುವಿಧವಾಗಿಹ ಕರ್ಮ।
ತನುವಿನೊಳಿಹುದಂತಗ್ನಿಯ ಧರ್ಮ ॥ ೧ ॥

ಟೀಕಾ:— ಇಳೆಯ=ಪೃಥ್ವಿಯ, ಅಂಶವೆ=ಭಾಗವೆ, ತನುರೂಪಾಗಿರುವದು=ಶರೀರದ ಆಕಾರವಾಗಿರುವದು, ಜಲದ=ನೀರಿನ, ಅಂಶವೆ=ಭಾಗವೆ, ಆದ್ರವಮಾಗಿಹುದು=ಒಸರಾಗಿರುವದು, ದೇಹದ=ಶರೀರದ, ಮಧ್ಯದೊಳು=ನಡುವಿನಲ್ಲಿ, ಉಜ್ವಲಿಸುತ್ತ=ಪ್ರಕಾಶಮಾನವಾಗುತ್ತ, ಊಹಿಸಲ್=ವಿಚಾರ ಮಾಡಲಾಗಿ, ಅನ್ನರಸವನೆ=ಅನ್ನದ ಸಾರವನ್ನೇ, ಕೊಳುತ್ತ=ತಕ್ಕೊಳ್ಳುತ್ತ, ಪಸಿವಂ=ಹಸಿವೆಯನ್ನು, ತೃಷೆಯಂ=ನೀರಡಿಕೆಯನ್ನು, ಮಿಗೆ=ವಿಶೇಷವಾಗಿ, ಪುಟ್ಟಿಸುತ=ಹುಟ್ಟಿಸುತ್ತ, ವ್ಯಸನ=ಸ್ತ್ರೀ ಮೊದಲಾದ ವ್ಯಸನ, ಆಲಸ್ಯಂಗಳನು=ಸೋಮಾರಿತನಗಳನ್ನು, ಆಗಿಸುತ=ಉಂಟುಮಾಡುತ್ತ, ಧಾತುಗಳೇಳುಂ=ರಸರಕ್ತ ಮೊದಲಾದ ಸಪ್ತ ಧಾತುಗಳನ್ನು, ಬಿಸಿಮಾಡುತ್ತ=ಬೆಚ್ಚಗೆ ಮಾಡುತ್ತ, ಆ ತನುವಂ=ಆ ಶರೀರವನ್ನು, ಚೆಲುವೆಂದೆನಿಸುತ್ತ=ಕಾಂತಿಮಯವೆಂದು ಹೇಳಿಸುತ್ತ, ಸಕಲ=ಎಲ್ಲ, ಅವಯವಂ=ಇಂದ್ರಿಯಗಳನ್ನು ಕುರಿತು, ದೀಪ್ತಿಯನು=ಪ್ರಕಾಶತ್ವವನ್ನು, ಎಸಗಿ=ಉಂಟುಮಾಡಿ, ಉರೆ=ಬಹಳ, ಮಸಗಿ=ಹೆಚ್ಚಾಗಿ, ವಿಕರಿಸಿ=ರೂಪನ್ನು ಬದಲಾಯಿಸಿ, ಶೋಷಣೆಗೈದು=ಒಣಗಿಸಿ, ಇನಿತುಂ=ಇಷ್ಟು, ಬಹುವಿಧವಾಗಿಹ=ಅನೇಕಪ್ರಕಾರಗಳಾಗಿರುವ, ಕರ್ಮ=ಕೆಲಸವು, ತನುವಿನೊಳಿಹುದು=ಶರೀರದಲ್ಲಿರುವದು, ಅಂತು=ಅದು, ಅಗ್ನಿಯ ಧರ್ಮ=ಬೆಂಕಿಯಧರ್ಮವು.

CC-0. Jangamwadi Math Collection. Digitized by eGangotri

ತಾತ್ಪರ್ಯ:— ಭೂಮಿಯ ಭಾಗವೇ ಶರೀರವಾಗಿರುವದು. ಅಂದರೆ, ಶರೀರದಲ್ಲಿರುವ ಅಸ್ಥಿರೋಮಾದಿ ಕಠಿಣ ಭಾಗಗಳೆಲ್ಲ ಪೃಥ್ವಿಯ ಅಂಶಗಳಾಗಿರುತ್ತವೆಂಬ ತಾತ್ಪರ್ಯವು. ಜಲದ ಅಂಶವೇ ದ್ರವವಾಗಿರುವದು. ಅಂದರೆ, ದೇಹದಲ್ಲಿರುವ ರೇತೋ ರಕ್ತಾದಿಗಳೆಲ್ಲಾ ಜಲದ ಅಂಶಗಳಾಗಿರುತ್ತವೆಂಬ ತಾತ್ಪರ್ಯವು. ಮೂಲಾಧಾರದಲ್ಲಿ ಪ್ರಕಾಶಮಾನವಾಗಿದ್ದು ಊಟಮಾಡಿದ ಅನ್ನವನ್ನು ಪಚನಮಾಡಿ ಸಾರವನ್ನು ಗ್ರಹಿಸುತ್ತದೆ. ಮತ್ತು ಹಸಿವೆ ನೀರಡಿಕೆಗಳನ್ನು ವಿಶೇಷವಾಗಿ ಹುಟ್ಟಿಸುತ್ತದೆ. ಸ್ತ್ರೀ ಸಂಗ ಮೊದಲಾದ ವ್ಯಸನಗಳನ್ನೂ ಈ ಹೊತ್ತು ಮಾಡುವ ಕೆಲಸವನ್ನು ನಾಳೆ ಮಾಡೋಣ ಎಂಬ ಆಲಸ್ಯವನ್ನೂ ಉಂಟುಮಾಡುತ್ತದೆ. ರಕ್ತ, ಮಾಂಸ, ಮೇದಸ್ಸು, ನಾಡಿ ಮೊದಲಾದ ಏಳು ಧಾತುಗಳನ್ನು ಬೆಚ್ಚಗೆಮಾಡುತ್ತಾ ಶರೀರವನ್ನು ಕಾಂತಿಮಯವಾಗಿಮಾಡುತ್ತದೆ. ಮತ್ತು ನೇತ್ರಶ್ರೋತ್ರಾದಿಂದ್ರಿಯಂಗಳಿಗೆ ಪ್ರಕಾಶವನ್ನುಂಟುಮಾಡುತ್ತದೆ.ಮತ್ತು ವಿಶೇಷವಾಗಿ ತೀಕ್ಷ್ಣತ್ವವನ್ನುಹೊಂದಿ, ಶರೀರವನ್ನು ವಿಕಾರಮಾಡಿ ಒಣಗಿಸಿಬಿಡುತ್ತದೆ. ದೇಹದಲ್ಲಿರುವ ಈ ಅನೇಕ ಪ್ರಕಾರಗಳಾದ ಕರ್ಮಗಳೆಲ್ಲಾ ಅಗ್ನಿಯ ಧರ್ಮಗಳಾಗಿರುತ್ತವೆ.

ಬಳಿಕ; ಉಳಿದೆರಡು ಭೂತಗಳ ಧರ್ಮಗಳನ್ನೂ ಈ ಪದ್ಯದಲ್ಲಿ ಪ್ರತಿಪಾದನಮಾಡುತ್ತಾರೆ.

ಕಾಲಾಧೀನದೊಳುಸುರಿಕ್ಕುತ್ತ ।
ಮೇಲೆ ಮಲಾದಿಕಮಂ ತ್ಯಜಿಸುತ್ತ ॥
ಅನ್ನರಸವನೊಡಲೊಳು ಪೀರುತ್ತ ।
ಇನ್ನುದ್ಗಾರಾದಿಕ ಮಾಗಿಸುತ ॥
ಸೀನುಂ ಕೆಮ್ಮುಗಳಂ ತೋರುತ್ತ ।
ತಾನಾಗುಳಿಕೆಗಳಂ ಮಾಡುತ್ತ ॥
ತವೆ ತನು ಶಿಖಿಯುಂ ಪಟುಮಾಡುತ್ತ ।
ಎವೆಯಾಟವನೆಡೆವಿಡದಾಡುತ್ತ ॥
ಕರಣ ಸಮೂಹವನೇ ಚರಿಸುತ್ತ ।
ಪರಿ ಪರಿಯೊಳು ಶಬ್ದಂ ಗೈಯುತ್ತ ॥
ಪೊರೆವುದೊಡಲೊಳಿಂತನಿಲನಧರ್ಮ ।
ತೆರವು ಗೊಡುವದಾಕಾಶದ ಧರ್ಮ ॥ ೨ ॥

ಟೀಕಾ:—ಕಾಲಾಧೀನದೊಳು=ಕಾಲಕ್ಕೆಪರತಂತ್ರವಾಗಿ, ಉಸುರಿಕ್ಕುತ್ತ=ಶ್ವಾಸೋಚ್ಛ್ವಾಸಮಾಡುತ್ತಾ, ಮೇಲೆ=ಬಳಿಕ, ಮಲಾದಿಕಂ=ಮಲಮೂತ್ರಾದಿಗಳನ್ನು, ತ್ಯಜಿಸುತ್ತ=ಬಿಡುತ್ತ, ಒಡಲೊಳು=ಶರೀರದಲ್ಲಿ, ಅನ್ನರಸವನು=ಅನ್ನದ ಸಾರವನ್ನು, ಪೀರುತ್ತ=ಜಗ್ಗುತ್ತ, ಇನ್ನು=ಬಳಿಕ, ಉದ್ಗಾರಾದಿಕಂ=ಡೇಕರಿಕೆ

CC-0. Jangamwadi Math Collection. Digitized by eGangotri

ಮೊದಲಾದವುಗಳನ್ನು, ಆಗಿಸುತ=ಉಂಟುಮಾಡುತ್ತಾ, ಸೀನುಂ=ಸೀನವನ್ನು, ಕೆಮ್ಮುಗಳಂ = ಕೆಮ್ಮುಗಳನ್ನು, ಮಾಡುತ್ತ = ರಚಿಸುತ, ತವೆ = ಚನ್ನಾಗಿ, ತನುಶಿಖಿಯಂ=ಶರೀರದಅಗ್ನಿ ಯನ್ನು, ಪಟುಮಾಡುತ್ತ=ವರ್ಧಿಸುತ್ತ, ಎಡೆವಿಡದೆ= ಅವಕಾಶವಿಲ್ಲದೆ, ಎವೆಯಾಟವನು=ರೆಪ್ಪೆ ಮುಚ್ಚೋಣ ತೆರೆಯೋಣವನ್ನು, ಆಡುತ್ತ=ಕ್ರೀಡಿಸುತ್ತ, ಕರಣ ಸಮೂಹವನೇ=ಚತುರ್ದಶ ಇಂದ್ರಿಯಗಳನ್ನೇ, ಚರಿಸುತ್ತ=ಪ್ರೇರಿಸುತ್ತ, ಪರಿ ಪರಿಯೊಳು=ನಾನಾ ರೀತಿಯಿಂದ, ಶಬ್ದಂ= ಧ್ವನಿಯನ್ನು, ಗೈಯುತ್ತ=ಮಾಡುತ್ತ, ಒಡಲೊಳು=ಶರೀರದಲ್ಲಿ, ಮೆರೆವುದು= ಚಂದಕಾಣಿಸುವುದು, ಅನಿಲನ ಧರ್ಮ=ವಾಯುವಿನ ಧರ್ಮವು, ತೆರಹು= ಅವಕಾಶತೆಯನ್ನು, ಕೊಡುವದು=ಉಂಟುಮಾಡುವದು, ಆಕಾಶದ ಧರ್ಮ= ಗಗನದ ಧರ್ಮವಾಗಿರುತ್ತದೆ.

ತಾತ್ಪರ್ಯ:— ಕಾಲಕ್ಕನುಗುಣವಾಗಿ ಉಸಿರಾಡಿಸುವದು ಪ್ರಾಣ, ಮಲ ಮೂತ್ರಗಳನ್ನು ಬಿಡುವದು ಅಪಾನ, ಅನ್ನದ ರಸವನ್ನು ಶರೀರದ ತುಂಬಾ ಪಸರಿಸುವುದು ವ್ಯಾನ, ಉದ್ಗಾರವನ್ನುಂಟುಮಾಡುವದು ಉದಾನ, ಸೀನು ಕೆಮ್ಮುಗಳನ್ನುಂಟುಮಾಡುವದು ನಾಗವಾಯು, ಆಕಳಿಕೆಯನ್ನುಂಟುಮಾಡುವದು ದೇವದತ್ತವಾಯು, ಎವೆಯಾಟವನ್ನು ಮಾಡುವದು ಕೂರ್ಮವಾಯು, ನಾಗಾದಿಗಳೇ ಕರ್ಮೇಂದ್ರಿಯಗಳನ್ನು, ಪ್ರಾಣಾದಿಗಳೇಜ್ಞಾನೇಂದ್ರಿಯಗಳನ್ನು, ವೈರಂಭ ಮುಖ್ಯಾದಿಗಳೇ ಅಂತಃಕರಣ ಚತುಷ್ಟಯವನ್ನು, ಪ್ರೇರಣೆಮಾಡುತ್ತವೆ. ಅಂದರೆ, ಚೇಷ್ಟಾಮಾಡಿಸುವದಕ್ಕೆ ಕಾರಣಗಳಾಗಿರುತ್ತವೆ. ಶರೀರದಲ್ಲಿ ಶಬ್ದವನ್ನು ಮಾಡೋಣ ಮತ್ತು ಅಗ್ನಿ ಬೆಳಿಸೋಣ ಇವೇ ಮೊದಲಾದ ಕಾರ್ಯಗಳು ವಾಯುವಿನ ಧರ್ಮಗಳಾಗಿರುತ್ತವೆ. ಯಾವ ಕಾರ್ಯಕ್ಕಾದರೂ ಅವಕಾಶತೆಯನ್ನು ಕೊಡುವದು ಆಕಾಶದ ಧರ್ಮವಾಗಿರುತ್ತದೆ.

ಈ ಪ್ರಕಾರ ಹೇಳೋಣದರಿಂದ ಈ ಶರೀರವು ಪೃಥ್ವಿಯ ಕಾರ್ಯವಾದ ಘಟದಂತೆ ಭೌತಿಕವಾಗಿರುತ್ತದೆ. ಘಟವು ದೃಶ್ಯಜಡ ಅನಾತ್ಮವಾಗಿ ತಾನೂ ಮತ್ತು ತನ್ನದು ಹೇಗೆ ಅಲ್ಲವೋ, ಹಾಗೇ ಈ ದೇಹವಾದರೂ ದೃಶ್ಯಜಡ ಅನಾತ್ಮವಾಗಿರೋಣದರಿಂದ ತಾನು ಮತ್ತು ತನ್ನದು ಅಲ್ಲ. ಕಿಂತು, ತಾನು ಇದರ ಉತ್ಪತ್ತಿ ನಾಶಂಗಳಿಗೆ ಸಾಕ್ಷಿಯಾಗಿಯೂ ಸ್ವಯಂಪ್ರಕಾಶನಾಗಿಯೂ ಸಚ್ಚಿದಾನಂದರೂಪ ಪ್ರತ್ಯಗಾತ್ಮನೂ ಆಗಿರುತ್ತಾನೆ ಎಂಬ ನಿಶ್ಚಯವೇ ಈ ಶರೀರ ವಿಚಾರದ ಪ್ರಯೋಜನವಾಗಿರುತ್ತದೆ. ಈ ನಿಶ್ಚಯದಿಂದ ಜನ್ಮಾದಿ ದುಃಖ ನಿವೃತ್ತಿ ಸುಖ ಪ್ರಾಪ್ತಿಯೇ ಮುಖ್ಯಫಲವು. ಈ ಶರೀರ ಸಂಬಂಧಗಳಾದ ತತ್ವಗಳ ವಿಚಾರವನ್ನು ವಿಚಾರ ಚಂದ್ರೋದಯ ಗ್ರಂಥದಲ್ಲಿ ಚನ್ನಾಗಿ ವಿಸ್ತಾರಪೂರ್ವಕ ಪ್ರತಿಪಾದಿಸಿರುತ್ತಾರೆ. ಅಲ್ಲಿ ನೋಡಿ ತಿಳಕೊಳ್ಳತಕ್ಕದ್ದು.

CC-0. Jangamwadi Math Collection. Digitized by eGangotri

ಬಳಿಕ; ಎಲೈ ಶಿಷ್ಯನೆ! ನಿನ್ನಲ್ಲಿ ತೋರುತ್ತಿರುವ ಆತ್ಮನಾನತ್ವವಾದರೂ ಉಪಾಧಿನಾನತ್ವದಿಂದಲೇ ತೋರುತ್ತದೆ ಹೊರತು ವಾಸ್ತವಿಕವಿಲ್ಲ ಎಂಬುದನ್ನು ಈ ಶ್ಲೋಕದಿಂದ ಹೇಳುತ್ತಾರೆ.

ಹಮ್ಮು ಮನೋ ನಭ ಮರುತಾದಿಕವು ।
ನೆಮ್ಮಿ ಧರೆಯ ನರಿವೀತನು ಪಲವು ॥
ಅದರೊಳಗಾ ವಾರಿಗೆ ನಾನತ್ವ ।
ಅದರೊಗನಲಂಗೆಯು ನಾನತ್ವ ॥
ಅದರೊ ಳಗನಲಂಗೆಯು ನಾನತ್ವ ।
ಅದರೋಳಗಾಕಾಶಕೆ ನಾನತ್ವ ॥
ಅದರೊಳಗಾ ಹಮ್ಮಿಗೆ ನಾನತ್ವ ।
ಅದರೊಳಗಾ ಮನಸ್ಸಿಗೆ ನಾನತ್ವ ॥
ತೋರುವವೋಲ್ ನಿನಗೆಯು ನಾನತ್ವ ।
ತೋರುತಮಿಪ್ಪುದು ತಿಳಿಯದು ತತ್ವ ॥
ಇಳೆಗೆ ನಾನತ್ವದ ಬಗೆಯೆಂತು ।
ತಳೆದ ಬಹುತ್ವಂ ಪುಸಿ ನಿನಗಂತು ॥ ೩ ॥

ಟೀಕಾ:— ಹಮ್ಮು=ಅಹಂಕಾರ, ಮನಃ=ಮನಸ್ಸು, ನಭ=ಆಕಾಶ, ಮರುತಾದಿಕವು=ವಾಯು ಮೊದಲಾದವುಗಳು, ಧರೆಯನ್ನು=ಪೃಥ್ವಿಯನ್ನು, ನೆಮ್ಮಿ=ಆಶ್ರೈಸಿ, ಈತನು=ಪ್ರತ್ಯಕ್ಷವಾಗಿ ಕಾಣಿಸುವ ದೇಹವು, ಪಲವು=ಅನೇಕ ಪ್ರಕಾರವಾಗಿರುವದು, ಅದರೊಳಗೆ=ಅದರಿಂದ, ಆವಾರಿಗೆ=ಜಲಕ್ಕೆ, ನಾನತ್ವ=ಅನೇಕತ್ವವು, ಅದರೊಳಗೆ=ಅದರಿಂದ, ಅನಲಂಗೆಯು=ಅಗ್ನಿಗೆ, ನಾನತ್ವ=ಅನೇಕತ್ವವು, ಅದರೊಳಗೆ=ಅದರಿಂದ, ಅನಿಲಂಗೆಯು=ವಾಯುವಿಗೆ, ನಾನತ್ವ=ಅನೇಕತ್ವವು, ಅದರೊಳಗೆ=ಅದರಿಂದ, ಆಕಾಶಕೆ=ಗಗನಕ್ಕೆ, ನಾನತ್ವ=ಅನೇಕತ್ವವು, ಅದರೊಳಗೆ=ಅದರಿಂದ, ಆ ಹಮ್ಮಿಗೆ=ಆ ಅಹಂಕಾರಕ್ಕೆ, ನಾನತ್ವ=ಅನೇಕತ್ವವು, ಅದರೊಳಗೆ=ಅದರಿಂದ, ಆ ಮನಸ್ಸಿಗೆ=ಮನಕ್ಕೆ, ನಾನತ್ವ=ಅನೇಕತ್ವವು, ತೋರುವವೋಲ್=ಪ್ರತೀತಿಯಾಗುವ ಹಾಗೆ, ನಿನಗೆಯು=ನಿನಗಾದರೂ, ನಾನತ್ವ=ಅನೇಕತ್ವವು, ತೋರುತಮಿಪ್ಪುದು=ಪ್ರತೀತಿಯಾಗುತ್ತಿರುವದು, ತಿಳಿಯದುತತ್ವ=ಅದರ ಯಥಾರ್ಥವನ್ನು ಅರಿ, ಇಳೆಗೆ=ಭೂಮಿಗೆ, ನಾನತ್ವದ=ಅನೇಕತ್ವದ, ಬಗೆಯು=ಭಾವನೆಯು, ಎಂತು=ಹೇಗೋ, ಅಂತು=ಹಾಗೆ, ನಿನಗೆ=ನಿನ್ನನ್ನು ಕುರಿತು, ತಳೆದ=ಹೊಂದಿದ, ಬಹುತ್ವಂ=ಅನೇಕತ್ವವು, ಪುಸಿ=ಸುಳ್ಳು.

ತಾತ್ಪರ್ಯ:— ಎಲೈ ಶಿಷ್ಯನೆ! ಪಂಚಭೂತಗಳಿಂದ ಉತ್ಪನ್ನಗಳಾದ ಭೌತಿಕ ಶರೀರಗಳು ಅನೇಕ ಪ್ರಕಾರಗಳಾಗಿರುತ್ತವೆ. ಈ ಉಪಾಧಿಗಳು ಅನೇಕ

CC-0. Jangamwadi Math Collection. Digitized by eGangotri

ವಾಗಿರೋಣದರಿಂದ ಸಚ್ಚಿದಾನಂದ ಸ್ವರೂಪನಾದ ನೀನಾದರೂ ಅನೇಕವಾಗಿರುವಂತೆ ಕಂಡುಬರುವದು. ಹೇಗಂದರೆ, ನೀರು ತುಂಬಿದ ಅನೇಕ ಕೊಡಗಳಲ್ಲಿ ಒಬ್ಬಾ ಸೂರ್ಯನೇ ಅನೇಕವಾಗಿ ಕಾಣಿಸುವಂತೆ,ಹೀಗೆ ಕಂಡಾಗ್ಯಾದರೂ ನೀನು ಒಬ್ಬಾತನೇ ಇರುವಿ. ಸ್ವಗತ, ಸಜಾತಿ, ವಿಜಾತಿ ಭೇದಶೂನ್ಯಮಾದ ಆತ್ಮನಲ್ಲಿ ಈ ಭೇದವು ಅಕಸ್ಮಾತ್ ಹೇಗೆ ತೋರಿತು? ಎಂದು ಶಿಷ್ಯನು ಕೇಳಿದಕೂಡಲೇ ಗುರುಗಳು ನಾನಾತ್ವದ ಪರಂಪರೆಯನ್ನು ಹೇಳಬೇಕಾಯಿತು. ಅದು ಹೇಗಂದರೆ, ಮನಸ್ಸುಅಹಂಕಾರ ಪಂಚಭೂತಗಳು ಕೂಡಿಕೊಂಡು ಈ ಅನೇಕ ಪ್ರಕಾರಗಳಾದ ಶರೀರಗಳಾಗಿರುತ್ತವೆ. ಆದರಿಂದ ಪೃಥ್ವಿ ಅನೇಕತ್ವವಾಯಿತು; ಆದರಿಂದ ಜಲ, ಅದರಿಂದ ಅಗ್ನಿ, ಆದರಿಂದ ವಾಯು, ಆದರಿಂದ ಆಕಾಶ, ಆದರಿಂದ ಅಹಂಕಾರ, ಆದರಿಂದ ಮನಸ್ಸಿಗೆ ಈ ಪ್ರಕಾರ ಉಕ್ತ ಭೂತಗಳಿಗೆ ನಾನಾತ್ವ ಬಂದಂತೆ; ಸಕಲ ಭೂತಗಳ ಉತ್ಪತ್ತಿಗೆ ಮೂಲ ಕಾರಣನಾದ ನಿನಗಾದರೂ ನಾನಾತ್ವಬಂದಿರುತ್ತದೆ. ಪರಂತು ವಿಚಾರಮಾಡಿ ನೋಡಿದರೆ, ಭೂಮಿಗೆ ಅನೇಕತ್ವವು ಹೇಗೆ ಮಿಥ್ಯೆಯಾಗಿರುವದೋ,ಹಾಗೆ ನಿನಗಾದರೂ ಮಿಥ್ಯೆಯಾಗಿರುವದು. ಅಂದರೆ, ನಾನಾತ್ವವು ಉಪಾಧಿಕಲ್ಪಿತವಾದದ್ದಲ್ಲದೆ ಯಥಾರ್ಥವಲ್ಲ ಎಂಬ ತಾತ್ಪರ್ಯವು.

ಬಳಿಕ; ಸ್ಥೂಲ ಶರೀರಕ್ಕೆ ರೋಗಗಳು; ಸೂಕ್ಷ್ಮ ಶರೀರಕ್ಕೆ ಸುಖದುಃಖಗಳು ತೋರುತ್ತವೆ. ಅವುಗಳಲ್ಲಿ ಅಧ್ಯಾಸಯುಕ್ತನಾಗುವದರಿಂದಲೇ ಆತ್ಮತ್ವದ ಭ್ರಾಂತಿಯು ಆಯಿತು. ವಿಚಾರಮಾಡಿ ನೋಡಿದರೆ, ನೀನು ನಿಷ್ಕಲ ಸಾಕ್ಷಿಯಾಗಿರುವಿ ಎಂದು ಹೇಳುತ್ತಾರೆ.

ಅಲ್ಲಿ ಮಗುಳೇ ವಾತಾದಿಕ ದೋಷ |
ಪಲ್ಲಟವೇ ಬಹು ರೋಗದ ವೇಷ ||
ಆಯಾ ವ್ಯಾಧಿಗಳಾ ವಡಲಿಂಗೆ |
ಸಾಯುಸವಲ್ಲವು ಮಿಕ್ಕೊಡಲಿಂಗೆ ||
ತೋರುವ ಮನ ಮಿಂತೆಲ್ಲಿಹುದಲ್ಲಿ |
ತೋರುಗು ಸುಖದುಃಖಾಕೃತಿಯಲ್ಲಿ ||
ಆ ನಿಖಿಳಂ ಸಂದಿಸಿದನುವಿಂದೆ |
ನಾನಾತ್ವದ ಭ್ರಮೆಯುಹುದದರಿಂದೆ ||
ಅವ ನವನೆಲ್ಲವ ನನುಕರಿಸುತ್ತ |
ತವೆ ನೀನಹೆ ಸಾಕ್ಷಕ ನೆನಿಸುತ್ತ ||
ಆದರಿಂದ ನೀನಲೆ ನಿಷ್ಕಲರೂಪು |
ವಿದಿತಂ ನಭದಂತಿರೆ ನಿರ್ಲೇಪ || ೪ ||

ಟೀಕಾ:— ಮಗುಳೆ=ಅನಂತರ, ಅಲ್ಲಿ=ಶರೀರದಲ್ಲಿ, ವಾತಾದಿಕದೋಷ= ವಾತ ಪಿತ್ತ ಕಫ ದೋಷಗಳ, ಪಲ್ಲಟವೇ=ಹೆಚ್ಚು ಕಡಿಮಿಯೇ, ಬಹುರೋಗದ

CC-0. Jangamwadi Math Collection. Digitized by eGangotri

ವೇಷ=ಬಷಳ ರೋಗಗಳ ಆಕಾರವು, ಆ ಒಡಲಿಂಗೆ=ಆ ಶರೀರಕ್ಕೆ, ಅಯಾ ವ್ಯಾಧಿಗಳು=ಆ ದೇಹೋಚಿತ ರೋಗಗಳು, ಮಿಕ್ಕ=ಉಳಿದ, ಒಡಲಿಂಗೆ=ದೇಹಕ್ಕೆ ಸಾಹಸವಲ್ಲವು=ದುಃಖವನ್ನುಂಟುಮಾಡಲಾರವು, ತೋರುವ=ದೃಶ್ಯವಾದ, ಮನಂ=ಮನಸ್ಸು, ಎಲ್ಲಿ=ಯಾವ ಸ್ಥಾನದಲ್ಲಿ, ಇಹುದೋ ಇರುವದೋ, ಅಲ್ಲಿ= ಅದೇ ಸ್ಥಾನದಲ್ಲಿ, ಸುಖ ದುಃಖಾಕೃತಿಯು=ಸುಖದುಃಖಗಳ ರೂಪು, ತೋರುಗು=ತೋರುವದು, ಅಲ್ಲಿ=ಆ ಶರೀರದಲ್ಲಿ, ಆ ನಿಖಿಳಂ=ಆ ರೋಗ ಸುಖ ದುಃಖಾದಿಗಳನ್ನು, ಸಂದಿಸಿದ=ಸೇರಿಸಿದ, ಅನುವಿಂದೆ=ಕಾರಣದಿಂದೆ, ನಾನ ತ್ವದ=ಆತ್ಮರು ಅನೇಕರೆಂಬ, ಭ್ರಮೆಯು=ಭ್ರಾಂತಿಯು, ಅಹುದು=ಆಗುವದು, ಅದರಿಂದೆ=ಆ ಕಾರಣದಿಂದೆ, ಅಮನವನಂ= ಆ ರೋಗ ಸುಖದುಃಖಗಳನ್ನು, ಎಲ್ಲವನು=ಸರ್ವವನ್ನು, ಅನುಕರಿಸುತ್ತ=ಹಿಂಬಾಲಿಸುತ್ತ, ತವೆ=ಚನ್ನಾಗಿ, ನೀನು=ಸ್ಥೂಲ ಸೂಕ್ಷ್ಮ ಶರೀರಗಳಿಗೆ ಅಧಿಷ್ಠಾನನಾದ ನೀನು, ಸಾಕ್ಷಿಕನೆನಿಸುತ್ತ=ಸಮೀಪದಲ್ಲಿದ್ದು ತಿಳಿಯುವವನೆಂದು ಹೇಳಿಸಿಕೊಳ್ಳುತ್ತಾ, ಅಹೆ=ಇದ್ದೀ, ಅದರಿಂದ=ಆದ್ದರಿಂದ, ನೀನು=ಪ್ರತ್ಯಗಾತ್ಮನಾದ ನೀನು, ಎಲೆ=ಎಲೈ ಶಿಷ್ಯನೇ,! ನಿಷ್ಕಲ ರೂಪು=ಹದಿನಾರು ಕಲೆಗಳಿಂದ ರಹಿತವಾದ ಸ್ವರೂಪವುಳ್ಳವನು, ವಿದಿತಂ=ಪ್ರಸಿದ್ಧವಾಗಿ, ನಭದಂತೆ=ಆಕಾಶದಂತೆ, ಇರೆ=ಇರಲಾಗಿ, ನಿರ್ಲೇಪ= ಏನೊಂದು ಅಂಟದವನು.

ತಾತ್ಪರ್ಯ:— ಸೂರ್ಯ ಚಂದ್ರ ಅಗ್ನಿಗಳಿಂದ ಬ್ರಹ್ಮಾಂಡ ಕಾರ್ಯವು ಸುಖವಾಗಿ ನಡೆಯುವಂತೆ, ವಾತ, ಪಿತ್ತ, ಕಫಗಳೆಂಬ ದೋಷಗಳಿಂದ ಶರೀರದ ಕಾರ್ಯವು ನಡೆದಿರುತ್ತದೆ. ಅರ್ಥಾತ್ ಈ ಮೂರು ದೋಷಗಳು ಸಮನಾಗಿದ್ದರೆ ಶರೀರವು ಆರೋಗ್ಯವಾಗಿರುತ್ತದೆ. ಈ ವಾತ ಪಿತ್ತ ಕಫ ದೋಷಗಳು ಹೆಚ್ಚು ಕಡಿಮೆಗಳಾದರೆ ರೋಗಗಳು ಹುಟ್ಟುತ್ತವೆ. ಅಂದರೆ, ದೇಶ, ಮಾಸ, ಋತು ಪ್ರಕೃತಿ ಆಹಾರ, ವಿಹಾರ, ಮೊದಲಾದವುಗಳಿಂದ ದೋಷಗಳು ವಿಕಾರತ್ವವನ್ನು ಹೊಂದುತ್ತವೆ. ವಿಕಾರ ಪಡೆಯುವದರಿಂದಲೇ (೮೧) ಪ್ರಕಾರವ ವಾತ (೬೪) ಪ್ರಕಾರದ ಪಿತ್ತ (೨೧೫) ಪ್ರಕಾರದ ಶ್ಲೇಷ್ಮಕಿಂತು ಮುನ್ನೂರು ಅರವತ್ತು(೩೬೦) ದೋಷಗಳುಂಟಾಗುತ್ತವೆ. ಈ ದೋಷಗಳಿಂದ ನಾಲ್ಕು ಸಾವಿರದಾರುನೂರು ನಾಲ್ವತ್ತೆಂಟು ಮುಖ್ಯ ರೋಗಗಳೂ ಸಾವಿರ ಸಂಕೀರ್ಣ ರೋಗಗಳೂ ಸಂಭವಿಸುತ್ತವೆ. ಇವುಗಳಲ್ಲಿ ಧಾತುಜ ಕರ್ಮಜಗಳೆಂದು ಎರಡು ಪ್ರಕಾರದ ರೋಗಗಳಿರುತ್ತವೆ. ಯಾವ ರೋಗವು ಶಾಸ್ತ್ರೋಕ್ತ ರೀತ್ಯಾ ಚಿಕಿತ್ಸೆ ಮಾಡಿದರೂ ಕೂಡಾ ನಿವೃತ್ತಿಯನ್ನು ಹೊಂದುವದಿಲ್ಲವೋ, ಅದು ಕರ್ಮಜವೆಂದು ತಿಳಿಯತಕ್ಕದ್ದು. ಅಂದರೆ ಜನ್ಮಾಂತರದಲ್ಲಿ ಮಾಡಲ್ಪಟ್ಟ ಪಾಪವೇ ವ್ಯಾಧಿರೂಪದಿಂದ ಬಾಧಿಸುತ್ತಿರುತ್ತದೆ. ಇದನ್ನು ಈಶ್ವರ ಪೂಜೆ, ಧ್ಯಾನ, ಜಪ ಮೊದಲಾದ ಪುಣ್ಯ ಕರ್ಮಗಳಿಂದ ನಿವೃತ್ತಿಯನ್ನು ಮಾಡಿಸತಕ್ಕದ್ದು. ಯಾವದು ಚಿಕಿತ್ಸೆಯಿಂದ

CC-0. Jangamwadi Math Collection. Digitized by eGangotri

ನಿವೃತ್ತಿಯನ್ನು ಹೊಂದುವದೋ ಅದು ಧಾತುಜವೆಂದು ತಿಳಿಯಬೇಕು. ಈ ರೋಗಗಳ ವಿಶೇಷ ಲಕ್ಷಣ ಪರೀಕ್ಷಾ ವಿಚಾರವು ಚರಕ, ಸುಶ್ರುತ, ಮಾಧವ ನಿದಾನ, ಯೋಗರತ್ನಾಕರ ಮೊದಲಾದ ಗ್ರಂಥಗಳಲ್ಲಿ ಚನ್ನಾಗಿ ವರ್ಣಿಸಲ್ಪಟ್ಟಿರುತ್ತದೆ. ಈ ರೋಗಗಳಾದರೂ ಆಯಾ ಶರೀರಗಳಿಗನುಸರಿಸಿ ಭಿನ್ನ ಭಿನ್ನಗಳಾಗಿರುತ್ತವೆ. ಅಂದರೆ, ಗೋ. ಅಶ್ವ, ಮನುಷ್ಯ ಮೊದಲಾದ ಜಾತಿಯ ಶರೀರಗಳಿಗುಚಿತವಾಗಿ ರೋಗಗಳು ಬೇರೆಯಾಗಿರುತ್ತವೆ. ಆದ್ದರಿಂದ ಪಶುದೇಹದ ರೋಗಗಳು ಮನುಷ್ಯ ಶರೀರಕ್ಕೆ ಬರುವದಿಲ್ಲ. ಮನುಷ್ಯ ಶರೀರದ ರೋಗಗಳು ಪಶುದೇಹಕ್ಕೆ ಬರುವದಿಲ್ಲ ಎಂಬ ತಾತ್ಪರ್ಯವು, ಮತ್ತೂ ಸಂಕಲ್ಪ ವಿಕಲ್ಪ ರೂಪದಿಂದ ಕಾಣಿಸಿಕೊಂಬ ಈ ಮನಸ್ಸು ಎಲ್ಲಿರುವದೋ ಅಲ್ಲೇ ಸುಖ ದುಃಖಗಳು ತೋರುತ್ತವೆ. ಹೇಗಂದರೆ, ಜಾಗ್ರದವಸ್ಥೆಯಲ್ಲಿ ಮನಸ್ಸು ಇರೋಣದರಿಂದ ಸುಖ ದುಃಖಗಳು ತೋರುತ್ತವೆ. ಸುಪ್ತಿಯಲ್ಲಿ ಮನಸ್ಸಿಲ್ಲದ್ದರಿಂದ ರೋಗದ ದುಃಖವಿದ್ದರೂ ಗೋತ್ತಾಗುವದಿಲ್ಲ, ಯಾಕಂದರೆ, ಮನಸ್ಸಿಲ್ಲದ್ದರಿಂದ, ಅರ್ಥಾತ್ ಮನಸ್ಸಿನ ಇಷ್ಟಾನಿಷ್ಟ ವೃತ್ತಿಗಳೇ ಸುಖದುಃಖಗಳಾಗಿರುತ್ತವೆಂಬ ತಾತ್ಪರ್ಯವು ಈ ಸ್ಥೂಲ ಶರೀರ ಸಂಬಂಧಗಳಾದ ಆರೋಗ್ಯ ರೋಗಗಳನ್ನು, ಸೂಕ್ಷ್ಮ ಶರೀರ ಸಂಬಂಧಗಳಾದ ಸುಖ ದುಃಖಗಳನ್ನು, ಅದ್ಯಾಸದಿಂದ ಹೊಂದಿದ್ದರಿಂದಲೇ ರೋಗಿ ಆರೋಗಿ ಸುಖಿ ದುಃಖಿ ಎಂಬ ಆತ್ಮನಾನತ್ವದ ಭ್ರಾಂತಿಯಾಗಿರುವದು. ಅಂದರೆ, ಸಾಂಖ್ಯ ಪಾತಂಜಲ. ನ್ಯಾಯ, ವೈಶೇಷ್ಯಿಕ, ಪೂರ್ವಮೀಮಾಂಸಕ ಇವರೆಲ್ಲರು ಏಕಾತ್ಮನಲ್ಲ ಅನೇಕಾತ್ಮರಿರುವರು ಎಂದು ಭ್ರಾಂತಚಿತ್ತರಾಗಿರುತ್ತಾರೆ. ಹೇಗಂದರೆ, ಎಲ್ಲ ಶರೀರಗಳಲ್ಲಿ ಒಬ್ಬಾತ್ಮನಾದರೆ ಒಂದೇ ಕಾಲದಲ್ಲಿ ಎಲ್ಲರೂ ಸುಖಿಗಳು ಎಲ್ಲರು ದುಃಖಿಗಳಾಗಬೇಕಾಗಿತ್ತು. ಹಾಗಿಲ್ಲದೆ, ಒಬ್ಬ ಸುಖೀ ಮತ್ತೊಬ್ಬ ದುಃಖೀ ಆಗಿರೋಣದರಿಂದ ಆತ್ಮರು ಅನೇಕರಿರುತ್ತಾರೆ. ಎಂದು ಹೇಳುವರು. ಇದು ಸಮೀಚೀನವಲ್ಲ. ಯಾಕಂದರೆ, ರಕ್ತ ಸ್ಫಟಿಕದಂತೆ ಅವರು ಅಂತಃಕರಣೋಪಾಧಿಯ ಧರ್ಮವನ್ನು ಆತ್ಮನಲ್ಲಿ ಆರೋಪಿಸುತ್ತಾರೆ. ಆದ್ದರಿಂದ ಆತ್ಮನಾನತ್ವ ಭ್ರಾಂತಿಯು ಆಗಿರುತ್ತದೆ. ವಿಚಾರ ಮಾಡಿ ನೋಡಿದರೆ ಒಬ್ಬಾತ್ಮನೇ ಸತ್ಯ. ಹೇಗಂದರೆ, ಅನೇಕ ಘಟಜಲೋಪಾಧಿಗಳಿಂದ ಸೂರ್ಯನು ಅನೇಕವಾಗಿ ಕಂಡು ಬಂದರೂ ಒಬ್ಬನೇ ಹೇಗೋ, ಹಾಗೇ ಅನೇಕ ಅಂತಃಕರಣೋಪಾಧಿಗಲ್ಲಿ ಆತ್ಮನಾನತ್ವ ಕಂಡುಬಂದರೂ ನಿಜವಾಗಿ ಒಬ್ಬಾತ್ಮನೇ ಇರುವನು. ಆದ್ದರಿಂದ ಎಲೈ ಶಿಷ್ಯನೇ! ಸ್ಥೂಲ ಸೂಕ್ಷ್ಮ ಶರೀರದ್ವಯಗಳಿಗೆ ಅಧಿಷ್ಠಾನಭೂತನಾದ ನೀನು ಎರಡು ಶರೀರಗಳ ಧರ್ಮಗಳನ್ನು ಅದ್ಯಾಸ ಮೂಲಕ ಹೊಂದಿದರೂ ಕೇವಲ ಸಾಕ್ಷೀ ಚಿನ್ಮಾತ್ರ ಸ್ವರೂಪನೇ ಇರುವಿ. ನಿನ್ನಲ್ಲಿ ಯಾವ ದೋಷಗಳು ಸಂಭವಿಸುವದಿಲ್ಲ. ಆದ್ದರಿಂದಲೇ ನೀನು ಪ್ರಾಣ, ಶ್ರದ್ಧಾ, ಸೂಕ್ಷ್ಮಾಕಾಶ, ವಾಯು, ಜ್ಯೋತಿ. ಅಪ, ಪೃಥ್ವೀ, ಹತ್ತು ಇಂದ್ರಿಯ, ಮನ, ಅನ್ನ,

CC-0. Jangamwadi Math Collection. Digitized by eGangotri

ವೀರ್ಯ, ತಪ, ಮಂತ್ರ, ಕರ್ಮ, ಲೋಕ, ಲೋಕಗಳ ವಿಷಯ ಇವೇ ಹದಿನಾರು ಕಲೆಗಳು ಇವುಗಳಿಂದ ರಹಿತನಾದ್ದರಿಂದ ನೀನು ನಿಷ್ಕಲರೂಪನಿರುತ್ತಿ. ಮತ್ತು ಆಕಾಶವು ಮೇಘ ಮಂಡಲಗಳಿಂದ ಮುಚ್ಚಲ್ಪಟ್ಟರೂ ಹೇಗೆ ನಿರ್ಮಲವಾಗಿ ರುವದೋ, ಹಾಗೇ ನೀನೂ ಸ್ಥೂಲ ಸೂಕ್ಷ್ಮ ಶರೀರಗಳಿಂದ ಯುಕ್ತನಾದರೂ ನಿರ್ಲೇಪನಾಗಿರುವಿ.

ಬಳಿಕ; ಒಂದು ಅವಿದ್ಯೆಯೇ ಅಂತಃಕರಣ ಚತುಷ್ಟಯ ರೂಪನ್ನೂ ನಾದ ಬಿಂದುಗಳ ರೂಪವನ್ನೂ ಹೊಂದಿರುವದೆಂದು ಹೇಳುತ್ತಾರೆ.

ಆದಿಯೆ ಮನ ಮೊಡಲಂ ಬಳಿಸಂದು ।
ಭೇದ ವಿಷಯುದೊಳು ವ್ಯವಹರಿಪಂದು ॥
ಮನವೆನಿಪುದು ಸಂಶಯುವಾದಂದು ।
ಎನಿಪುದು ಮತಿ ನಿಶ್ಚಯುವಾದಂದು ॥
ಅಹಮೆನಿಸುವದಭಿಮಾನಿಸುವಂದು ।
ಸಹಜಂ ಚಿತ್ತವದವಧರಿಪಂದು ॥
ಅರಿದರ್ಥವನುಸುರಲುಬೇಕೆಂದು ।
ಮೆರೆವಿಚ್ಛೆಯೊಳಾ ಪ್ರಕೃತಿಯೆ ಬಿಂದು ॥
ವಿರಳತೆಯುಹ ಕಾಲದೊಳುದಿಸಿರ್ದ ।
ಪರನಾದವೆ ಸೂಕ್ಷ್ಮತೆ ಪಡೆದಿರ್ದ ॥
ಅದು ತಾನೊಡಲೊಳು ವಾಙ್ಮಯವಾಗಿ ।
ಉದಿಸಿರ್ಪುದದರ್ಥಾನ್ವಯುಮಾಗಿ ॥೫॥

ಟೀಕಾ:— ಆದಿಯೆ=ಮೊದಲು, ಮನಂ=ಮನಸ್ಸು, ಒಡಲಂ=ಶರೀರವನ್ನು, ಬಳಿಸಂದು-ಸೇರಿಕೊಂಡು, ಭೇದವಿಷಯುದೊಳ್=ಘಟಪಟಾದಿ ವಿಷಯುಗಳಲ್ಲಿ, ವ್ಯವಹರಿಪಂದು=ವ್ಯವಹರಿಸುವ ಕಾಲದಲ್ಲಿ, ಸಂಶಯುವು=ಹೌದೋ ಅಲ್ಲೋ ಎಂಬ ಸಂಶಯುವು, ಆದಂದು=ಉಂಟಾದಕಾಲಕ್ಕೆ, ಮನವೆನಿಪುದು=ಮನಸ್ಸೆನಿಸುವದು, ನಿಶ್ಚಯುಮ=ದೃಢತೆಯು, ಆದಂದು=ಉತ್ಪನ್ನವಾದ ಕಾಲದಲ್ಲಿ, ಮತಿ=ಬುದ್ಧಿ, ಎನಿಪುದು=ಅನ್ನಿಸುವದು, ಅಭಿಮಾನಿಸುವಂದು=ಅಹಂಕರಿಸುವ ಕಾಲದಲ್ಲಿ, ಅಹಮೆನಿಸುವದು=ಹಮ್ಮೆನಿಸುವದು, ಸಹಜಂ=ಪ್ರಯತ್ನವಿಲ್ಲದೆ, ಅವಧರಿಪಂದು=ಸಂಸ್ಕಾರಧರಿಸುವ ಕಾಲದಲ್ಲಿ, ಅದು=ಆ ಮನವು, ಚಿತ್ತು=ಚಿತ್ತಾಯಿತು, ಅರಿದ=ತಿಳಿದ, ಅರ್ಥವನು=ಪದಾರ್ಥವನ್ನು, ಉಸುರಲುಬೇಕೆಂದು=ಹೇಳಬೇಕೆಂದು, ಮೆರೆವ=ಶೋಭಿಸುವ, ಇಚ್ಛೆಯೊಳ್=ರಾಗದಲ್ಲಿ, ಆ ಪ್ರಕೃತಿಯೇ=ಆ ಅವಿದ್ಯೆಯೇ, ಬಿಂದು=ಬಿಂದುವೆನಿಸಿತು, ವಿರಳತೆಯುಹ=ಅವಕಾಶವಿದ್ದ, ಕಾಲದೊಳು=ಕಾಲದಲ್ಲಿ, ಉದಿಸಿರ್ದ=ಉತ್ಪನ್ನವಾದ, ಸೂಕ್ಷ್ಮತೆ=ಸೂಕ್ಷ್ಮತನವನ್ನು, ಪಡೆದಿರ್ದ=ಹೊಂದಿದ, ಪರನಾದವೆ=ಶ್ರೇಷ್ಠನಾದವೆ, ಅದು=ತಾನು, ಒಡ

CC-0. Jangamwadi Math Collection. Digitized by eGangotri

ಲೊಳ=ದೇಹದಲ್ಲಿ, ವಾಙ್ಮಯವಾಗಿ=ವೈಖರಿರೂಪವಾಗಿ, ಅರ್ಥಾನ್ವಯವಾಗಿ= ಅರ್ಥದಿಂದೊಡಗೂಡಿದುದಾಗಿ, ಉದಿಸಿರ್ಪುದು=ಹುಟ್ಟಿರುವದು.

ತಾತ್ಪರ್ಯ:—(*) ಅವಿದ್ಯೆಯು ದೇಹದೊಡನೆ ಯುಕ್ತವಾಗಿ ಘಟ ಪಟಾದಿ ಭೇದರೂಪ ಜಗತ್ತಿನಲ್ಲಿ ವ್ಯವಹಾರವನ್ನು ಮಾಡುತ್ತಿರುವ ಕಾಲದಲ್ಲಿ ಇದು ಹಗ್ಗವೋ? ಅಥವಾ ಹಾವೋ? ಎಂಬ ದ್ವಿಕೋಟಿಲಕ್ಷಣಾತ್ಮಕ ಸಂಶಯವು ಎಂದಾಯಿತೋ, ಅಂದು ಆ ಅವಿದ್ಯೆಯು ಮನಸ್ಸೆಂಬ ಹೆಸರನ್ನು ಪಡೆಯಿತು. ಇದು ಹಾವು ಅಲ್ಲ. ಕಿಂತು, ಹಗ್ಗವೇ ಎಂದು ನಿಶ್ಚಯ ಮಾಡಿದಾಗ್ಯೆ ಬುದ್ಧಿ ಯೆಂಬ ನಾಮವನ್ನು ಹೊಂದಿತು. ಮತ್ತು ಉಕ್ತ ಅವಿದ್ಯೆಯೇ ಹಗ್ಗವನ್ನು ತಿಳಿದವನು ನಾನೇ ಎಂದು ಅಭಿಮಾನಿಸುತ್ತಿರಲಿಕ್ಕೆ ಅಹಂಕಾರ ಎಂದು ಕರೆಯಿಸಿ ಕೊಂಡಿತು. ಬಳಿಕ, ಈ ಹಗ್ಗವನ್ನು ಪೂರ್ವದಲ್ಲಿ ನಾನೇ ಹೊಸೆದಿಟ್ಟಿದ್ದೆನು ಎಂದು ಸ್ಮರಣವಾಗುತ್ತದೆ. ಈ ಸ್ಮರಣಕ್ಕೆ ಕಾರಣೀಭೂತವಾಗಿ ಸಂಸ್ಕಾರವಿರುವದು. ಈ ಸಂಸ್ಕಾರವನ್ನು ಪ್ರಯತ್ನವಿಲ್ಲದೆ ಸಹಜವಾಗಿ ತನ್ನಲ್ಲಿ ಇಟ್ಟುಕೊಳ್ಳುವದರಿಂದ ಚಿತ್ತೆಂಬ ನಾಮವನ್ನು ಪಡೆಯಿತು. ಮೊದಲು ನಾನು ಹೊಸದಿಟ್ಟ ಹಗ್ಗವನ್ನೇ ಹಾವು ಎಂದು ತಿಳಕೊಂಡಿದ್ದೆನು ಎಂಬ ಈ ಅರ್ಥವನ್ನು ಎರಡನೆಯವರಿಗೆ ತಿಳಿಸಬೇಕೆಂಬ ಇಚ್ಛಾ ಉತ್ಪನ್ನವಾಗಲು, ಉಕ್ತ ಅವಿದ್ಯೆಯೇ ಬಿಂದು ಎಂಬ ಹೆಸರನ್ನು ಪಡೆಯಿತು. ಬಳಿಕ ಸ್ವಲ್ಪ ಅವಕಾಶತೆಯುಳ್ಳ ಕಾಲದಲ್ಲಿ ಅದೇ ಅವಿದ್ಯೆಯಿಂದ ಪರನಾದವು ಜನಿಸಿತು. ಆ ಪರನಾದವು ಅತಿ ಸೂಕ್ಷ್ಮ ಮಾಗಿಯೂ ಶರೀರದೊಳಗೆ ಪಶ್ಯಂತಿ, ಮಧ್ಯಮಾ, ವೈಖರಿರೂಪ ವಾಙ್ಮಯ ವಾಗಿಯೂ ಶಬ್ದಾರ್ಥದಿಂದೊಡಗೂಡಿದ್ದಾಗಿಯೂ ತೋರುವದು.

ಎಲೈ ಶಿಷ್ಯನೇ ! ಈ ಮನಬುದ್ಧಿ ಚಿತ್ತು ಅಹಂಕಾರ ಬಿಂದು ಪರನಾದ ಗಳೆಲ್ಲಾ ನಿನ್ನಾಶ್ರಿತವಾದ ಅವಿದ್ಯೆಯಿಂದಲೇ ಕಲ್ಪಿಸಲ್ಪಟ್ಟಿರುತ್ತವೆ. ನೀನು ಇವುಗಳ ಭಾವಾಭಾವಗಳನ್ನು ಬೆಳಗುತ್ತಾ ಇವುಗಳಿಂದ ತಿಳಿಸಿಕೊಳ್ಳದೆ ಕೇವಲ ಸಚ್ಚಿದಾನಂದ ನಿರ್ವಿಕಾರ ಸ್ವಯಂ ಪ್ರಕಾಶರೂಪನಿರುತ್ತೀ ಎಂಬ ತಾತ್ಪರ್ಯವು.

ಬಳಿಕ; ವಾಕ್ಕು, ಪರೆ, ಪಶ್ಯಂತಿ, ಮಧ್ಯಮಾ, ವೈಖರೀ ಎಂದು ನಾಲ್ಕು ಪ್ರಕಾರವಾಗಿರುವದು. ಮತ್ತು ವೈಖರೀ ವಾಕ್ಕೇ ಸಂಸಾರಕ್ಕೆ ಕಾರಣವಾಗಿರು ತ್ತದೆ. ಎಂದು ಹೇಳುತ್ತಾರೆ.

ವರತನುಜನೆ ವಾಕ್ಕದು ನಾಲ್ಕಕ್ಕು ।
ಪರೆಪಶ್ಯಂತಾದಿಗಳೆನಿಸಿಕ್ಕು ॥
ನುಡಿವಾತ್ಮನ ತನುಮಧ್ಯದೊಳೆಂದು ।
ಬಿಡದಿಹ ನಾದವೆ ತಿಳಿ ಪರೆಯೆಂದು ॥

(*) ಅವಿದ್ಯೆ, ಮನ, ತಮ, ಇವು ಪರ್ಯಾಯ ನಾಮಗಳು.

CC-0. Jangamwadi Math Collection. Digitized by eGangotri

ನಾಭಿಯೊಳದು ನಿಷ್ಕಳವರ್ಣತೆಯ ।
ಶೋಭೆ ಪಡೆಯೆ ಪಶ್ಯಂತಿಯೆ ತಿಳಿಯೆ ॥
ಹೃದಯದೊಳದು ನುಡಿವಿಚ್ಛೆಯೊಳೊಂಡೆ ।
ಒದವಿರೆ ಮಧ್ಯಮೆಯಪ್ಪುದು ಮುಂದೆ ॥
ಅದು ಕೇಳಸುವಿಂದುರ ಮೊದಲಾಗಿ ।
ಪದವೆಂಟರೊಳಕ್ಷರ ರೂಪಾಗಿ ॥
ಪುಟ್ಟುವವಚನವೆ ವೈಖರಿಯಕ್ಕು ।
ನೆಟ್ಟನೆ ಸಂಸೃತಿಗದು ಮೊದಲಕ್ಕು ॥

ಟೀಕಾ:— ವರತನುಜನೆ=ಶ್ರೇಷ್ಠನಾದ ಮಗನೆ, ವಾಕ್ಕದು=ವಾಗಿಂದ್ರಿಯವು, ನಾಲ್ಕಕ್ಕು=ನಾಲ್ಕು ಪ್ರಕಾರವಾಗಿರುವದು, ಪರೆ=ಪರೆಯೆಂದು, ಪಶ್ಯಂತಿ=ಪಶ್ಯಂತಿಯೆಂದು, ಆದಿಗಳು=ಮೊದಲಾದವುಗಳು, ಎನಿಸಿಕ್ಕು=ಹೇಳಿಸಿಕೊಳ್ಳುವವು, ನುಡಿವಾತ್ಮನ=ಮಾತಾಡುವವನ, ತನುಮಧ್ಯದೊಳು=ಗುದ ಗಹ್ಯದ ಮಧ್ಯದಲ್ಲಿ, ಎಂದು=ಯಾವಾಗಲೂ, ಬಿಡದಿಹ=ಬಿಡದಿರುವಂಥಾ, ನಾದವೇ=ಸ್ವರವೇ, ಪರೆಯೆಂದು=ಪರಾವಾಕ್ಕೆಂದು, ತಿಳಿ = ಅರಿ, ಅದು=ಆ ಪರಾವಾಕ್ಕು, ನಾಭಿಯೊಳು=ನಾಭಿಯಲ್ಲಿ, ನಿಷ್ಕಳ=ಅವಯವ ಶೂನ್ಯವಾದ, ವರ್ಣತೆಯ=ಅಕ್ಷರಾತ್ಮತೆಯ, ಶೋಭೆ=ಚಲ್ವಿಕೆಯನ್ನು, ಪಡೆಯೆ=ಹೊಂದಲು, ಪಶ್ಯಂತಿಯೇ=ಪಶ್ಯಂತಿವಾಕ್ಕೆಂದು, ತಿಳಿಯೇ=ತಿಳಿಕೋ, ಅದು=ಆ ಪಶ್ಯಂತಿವಾಕ್ಕು, ಹೃದಯದೊಳು=ಎದೆಯಲ್ಲಿ, ಒಂದೆ=ಕೂಡಿ, ಒದವಿರೆ=ಸೇರಿರಲಾಗಿ, ಮುಂದೆ = ಅನಂತರ, ಮಧ್ಯಮೆ=ಮಧ್ಯಮವಾಕ್ಕು, ಅಪ್ಪುದು=ಆಗುವದು, ಕೇಳ್=ಏಕಾಗ್ರಚಿತ್ತದಿಂದ ಆಲಿಸು, ಅದು=ಆ ಮಧ್ಯಮವಾಕ್ಕು, ಅಸುವಿಂದ=ಪ್ರಾಣದಿಂದ ಯುಕ್ತವಾಗಿ, ಉರ=ಎದೆಯೇ, ಮೊದಲಾಗಿ=ಮುಂತಾಗಿ, ಪದವೆಂಟರ=ಎಂಟು ಸ್ಥಾನಗಳಲ್ಲಿ, ಅಕ್ಷರರೂಪಾಗಿ=ವರ್ಣಗಳಾಗಿ, ಪುಟ್ಟುವ=ಹುಟ್ಟುವಂಥಾ, ವಚನವೇ=ವಾಕ್ಕೇ, ವೈಖರಿಯಕ್ಕು=ವೈಖರಿ ವಾಣಿ ಎನಿಸುವದು, ಅದು=ಆ ವಾಕ್ಕು, ನೆಟ್ಟನೆ=ಸರಳವಾಗಿ, ಸಂಸೃತಿಗೆ=ಸಂಸಾರಕ್ಕೆ, ಮೊದಲಕ್ಕು=ಮೂಲಕಾರಣವಾಯಿತು.

ತಾತ್ಪರ್ಯ:— ಉತ್ತಮಾಧಿಕಾರಿಯಾದ ಎಲೈ ಶಿಷ್ಯನೇ! ಕೇಳು ವಾಗಿಂದ್ರಿಯು ನಾಲ್ಕು ಪ್ರಕಾರವಾಗಿರುತ್ತದೆ. ಆ ನಾಲ್ಕು ಪ್ರಕಾರದ ವಾಕ್ಕುಗಳು ಯಾವವು? ಅವು ಎಲ್ಲಿರುತ್ತವೆ? ಅಂದರೆ ಕೇಳು, ಆ ವಾಕ್ಕು ಪರಾ, ಪಶ್ಯಂತಿ, ಮಧ್ಯಮಾ ವೈಖರೀ ಎಂದು ನಾಲ್ಕು ಪ್ರಕಾರವಾಗಿರುವದು. ಆ ವಾಕ್ಕುಗಳು ಕ್ರಮವಾಗಿ ತನುಮಧ್ಯ, ನಾಭಿ, ಹೃದಯ, ಮುಖ ಸ್ಥಾನಗಳಲ್ಲಿರುತ್ತವೆ. ಹೇಗಿರುತ್ತವೆಂಬುದನ್ನು ಆಲಿಸು— ಗುದದಿಂದೆರಡಂಗುಲದ ಮೇಲೆ ಗುಹ್ಯದಿಂದೆರಡಂಗುಲದ ಕೆಳಗೆ ಒಂದಂಗುಲದ ಪರಿಮಿತವಾದ ಸ್ಥಾನವೇ ತನುಮಧ್ಯವೆನಿಸುವದು.

CC-0. Jangamwadi Math Collection. Digitized by eGangotri

ಅಲ್ಲಿ ಯಾವಾಗಲೂ ಸೂಕ್ಷ್ಮನಾದ ಸ್ವರೂಪದಿಂದಿರುವದೇ ಶ್ರೇಷ್ಠವಾದ ಪರಾ ವಾಕ್ಕೆನಿಸುವದು. ಇಂಥಾ ಪರಾವಾಕ್ಕೇ ನಾಭಿಸ್ಥಾನದಲ್ಲಿ ಅರ್ಥವಾಚಕ ವರ್ಣ ಗಳ ಕ್ರಮವಿಲ್ಲದೆ, ನವಿಲ ತತ್ತಿಯೊಳಗಿನ ರಸದಲ್ಲಿ ವಿಚಿತ್ರಗಳಾದ ಪಕ್ಷ್ಯಾದ್ಯ ವಯುವಗಳು ಅಸ್ಪಷ್ಟವಾಗಿರುವಂತೆ, ನಿರ್ವಿಕಲ್ಪಕ ವಾಣಿಯಾಗಿ ತೋರುವದೇ ಪಶ್ಯಂತಿ ವಾಕ್ಕು ಎನಿಸುವದು. ಮುಂದೆ ಪಶ್ಯಂತಿ ನಾಮಕ ವಾಣಿಯೇ ಹೃದಯ ಸ್ಥಾನವನ್ನು ಹೊಂದಿ ಪದಾರ್ಥ ವಾಚಕ ವರ್ಣಗಳು ಕ್ರಮವಾಗಿ ಮಾತಾಡ ಬೇಕೆಂಬ ಇಚ್ಛೆಯಿಂದಲೂ ಪ್ರಾಣವೃತ್ತಿಯಿಂದಲೂ ಕೂಡಿ ಸವಿಕಲ್ಪವಾಗಿ ತೋರುವ ವಾಣಿಯೇ ಮಧ್ಯಮ ವಾಕ್ಕೆನಿಸುವದು. ಬಳಿಕ ಆ ಮಧ್ಯಮ ವಾಕ್ಕೇ ಎದೆ, ಕಂಠ, ನಾಲಿಗೆ, ಮೂಲ, ತಾಲು, ತುಟಿ, ಹಲ್ಲು, ಮೂಗು, ತಲೆಗಳೆಂಬ ಎಂಟು ಸ್ಥಾನಗಳಲ್ಲಿ ಪ್ರಾಣವಾಯು ಸಂಬಂಧದಿಂದ ಹುಟ್ಟುವಂಥಾ ವರ್ಣಗಳ ರೂಪಾಗಿ, ಎರಡನೆಯವರ ಕರ್ಣಪುಟಕ್ಕೆ ಸ್ಪಷ್ಟ ಗೋಚರವಾಗಿಯೂ, ಘಟಪಟಾದಿ ವ್ಯವಹಾರಕ್ಕೆ ಕಾರಣವಾಗಿಯೂ ಇರುವ ವಚನವೇ ವೈಖರೀ ವಾಕ್ಕೆನಿಸುವದು. ಅಥವಾ ಅನುಭವ, ಸಂಸ್ಕಾರ, ಸ್ಮೃತಿ, ಉಚ್ಚಾರ ಇವೇ ಕ್ರಮ ದಿಂದ ಪರಾದಿ ವಾಕ್ಕುಗಳೆನಿಸುತ್ತವೆ. ಆದರೆ ವೈಖರೀ ವಾಕ್ಕು ಸಕಲ ಸಂಸಾರ ವ್ಯವಹಾರಕ್ಕೆ ಕಾರಣವಾಗುವದರಿಂದ ಮುಖ್ಯ ಬಂಧಸ್ವರೂಪವೆನಿಸುತ್ತದೆ.

ಬಳಿಕ; ಮನ ಮೊದಲಾದ ವಾಕ್ಕುಗಳಿಗೆ ಅಧಿಷ್ಠಾನನಾದ ನೀನು ನಿನ್ನ ಸ್ವರೂಪವನ್ನು ಮರೆತು, ಅಜ್ಞಾನಯುಕ್ತನಾದ್ದರಿಂದಲೇ ಸತ್ಯಾಧ್ಯಾಸ ಮೊದಲಾದ ನಾಲ್ಕು ಅಧ್ಯಾಸಗಳನ್ನು ಹೊಂದಿ, ಜಗತ್ತಿನಲ್ಲಿ ಜೀವಾತ್ಮನು ಅನ್ನಿಸಿಕೊಳ್ಳುವಿ ಎಂದು ಪ್ರತಿಪಾದಿಸುತ್ತಾರೆ.

ಇಂತರಿವೆಯೆ ಯಂತಜ್ಞತೆ ಗೂಡಿ ।
ಹಂತೆಯೊಳಾತ್ಮಾಧ್ಯಾಸಂ ಮಾಡಿ ॥
ಆಹಾತಮದೊಳು ದೋಹಂ ಬಡೆದು ।
ದೇಹದೊಳಾತ್ಮಾಧ್ಯಾಸಂ ದಳೆದು ॥
ವರರಜದಿಂ ವಿಷಯೇಚ್ಛೆಯೊಳಾಳಿ ।
ಕರಣದೊಳಾತ್ಮಾಧ್ಯಸಂ ಬೆತ್ತು ॥
ಶುದ್ಧಂ ಸತ್ವದಿ ಮಿಗೆ ಕಳೆವೆತ್ತು ।
ಬುದ್ಧಿ ಯೊಳಾತ್ಮಾಧ್ಯಾಸಂ ಬೆತ್ತು ॥
ನೀನಿಂತೀ ನಾಲ್ಕಕೆ ಗುರಿಯಾಗಿ ।
ಆನೆಂಬೀ ಭಾವಂ ಬಲುವಾಗಿ ॥
ಈ ತೆರದಿಂ ಪುರುಷನು ಎನಿಸಿರ್ಪೆ ।
ವಿತತ ಪ್ರಾಕೃತ ಸೃಷ್ಟಿಯೊಳಿರ್ಪೆ ॥ ೭ ॥

CC-0. Jangamwadi Math Collection. Digitized by eGangotri

ಟೀಕಾ:— ಇಂತು=ಈ ಪ್ರಕಾರ, ಅರಿವೆಯ=ಸ್ವರೂಪ ಚಿನ್ಮಾತ್ರದ, ಆಂತು=ಆ ಪ್ರಕಾರದ, ಅಜ್ಞತೆಗೂಡಿ=ಅಜ್ಞಾನದಿಂಪೊಡಗೂಡಿ, ಹಂತಿಯೊಳು= ಅಹಂಕಾರದಲ್ಲಿ, ಆತ್ಮಾಧ್ಯಾಸಂ=ಆತ್ಮ ಭ್ರಾಂತಿಯನ್ನುಮಾಡಿಕೊಂಡು, ಆಹ= ಏನು ಆಶ್ಚರ್ಯವು, ಆ ತಮದೊಳು=ಆ ಅಜ್ಞಾನಸಂಬಂಧವಾದ ತಮೋಗುಣ ದಿಂದ, ಮೋಹಂ=ಮತ್ಸರವನ್ನು, ಬಡೆದು=ಹೊಂದಿ, ದೇಹದೊಳು=ಶರೀರದಲ್ಲಿ, ಆತ್ಮಾಧ್ಯಾಸಂ=ನಾನೆಂಬ ಭ್ರಮವನ್ನು, ದಳೆದು=ಧರಿಸಿ, ವರ=ಶ್ರೇಷ್ಠವಾದ, ರಜದಿಂ=ರಜೋಗುಣದಿಂದ, ವಿಷಯ=ಶಬ್ದಸ್ಪರ್ಶಾದಿ ವಿಷಯಗಳ, ಇಚ್ಛೆ ಯೊಳ್=ಇಚ್ಛೆಯಲ್ಲಿ, ಆಳಿ=ಮುಣುಗಿ, ಕರಣದೊಳು=ಹತ್ತು ಇಂದ್ರಿಯಗಳಲ್ಲಿ, ಆತ್ಮಾಧ್ಯಾಸಂ=ಆತ್ಮಭ್ರಾಂತಿಯನ್ನು, ತಾಳಿ=ಹೊಂದಿ, ಶುದ್ಧಂ=ಮಲಿನವಿಲ್ಲದ, ಸತ್ವದಿ=ಸತ್ವಗುಣದಿಂದ, ಮಿಗೆ=ವಿಶೇಷವಾಗಿ, ಕಳೆವೆತ್ತು=ಪ್ರಕಾಶನನ್ನು ಪಡೆದು, ಬುದ್ಧಿಯೊಳ್=ಬುದ್ಧಿಯಲ್ಲಿ, ಆತ್ಮಾಧ್ಯಾಸಂ=ನಾನೆಂಬ ಭ್ರಾಂತಿ ಯನ್ನು, ಬೆತ್ತು=ಹೊತ್ತುಕೊಂಡು, ನೀನು=ಅಜ್ಞಾನಕ್ಕೆ ಸಾಕ್ಷಿಯಾದ ನೀನು, ಇಂತು=ಈ ಪ್ರಕಾರ, ಈ ನಾಲ್ಕಕೆ=ಈ ನಾಲ್ಕುತರದ ಅಧ್ಯಾಸಗಳಿಗೆ, ಗುರಿ ಯಾಗಿ=ಈಡಾಗಿ, ನಾನೆಂಬ=ನಾನೆಂದು ಅನ್ನುವಂಥಾ, ಈ ಭಾವಂ=ಈ ಭಾವ ನೆಯು, ಬಲುವಾಗಿ=ಅಧಿಕವಾಗಿ ಬೆಳೆದು, ಈ ತೆರದಿಂ=ಈ ರೀತಿಯಿಂದ, ಪುರ, ಷನು=ಜೀವನು, ಎನಿಸಿರ್ಪ=ಅನ್ನಿಸಿಕೊಳ್ಳಲು, ವಿತತ=ವಿಸ್ತಾರವಾದ್ರ ಪ್ರಾಕೃತ=ಪ್ರಕೃತಿಸಂಬಂಧವಾದ, ಸೃಷ್ಟಿಯೊಳು=ಜಗತ್ತಿನಲ್ಲಿ, ಇರ್ಪ=ವಾಸ ಮಾಡುತ್ತಿರುವಿ.

ತಾತ್ಪರ್ಯ:— ಎಲೈ ಶಿಷ್ಯನೇ ಕೇಳು. ಅವಿದ್ಯಾಮೂಲಕ ಅಂತಃಕರಣ ಚತುಷ್ಟಯ ನಾದ, ಬಿಂದು, ನಾಲ್ಕು ವಾಕ್ಕುಗಳು ಕಲ್ಪಿತಗಳಾಗಿ ಆವರಣ ಮಾಡೋಣದರಿಂದ, ನಿನ್ನ ಸಚ್ಚಿದಾನಂದ ಸ್ವರೂಪವನ್ನು ಮರೆದು, ಅಜ್ಞಾನದೊ ಳಗೆ ಕೂಡುವಂಥವನಾದಿ, ಅದರಿಂದ ಆ ಅಜ್ಞಾನದ ಕಾರ್ಯವಾದ ಅಹಂಕಾರವೇ ನಾನೆಂದು ತಿಳಕೊಂಡು ಅಭಿಮಾನವುಳ್ಳವನಾಗೋಣದರಿಂದ, ನಾನು ಕರ್ತಾ ನಾನು ಭೋಕ್ತಾ ಎಂದು ಅಹಂಕಾರದ ಧರ್ಮಗಳನ್ನು ನಿನ್ನಲ್ಲಿ ಅಧ್ಯಾಸ ಮಾಡಿ ಕೊಂಡಿರುವಿ. ಈ ಅಹಂಕಾರದಲ್ಲಿ ಆತ್ಮಭಾವನೆಯನ್ನು ಮಾಡುವದರಿಂದ ಇದಕ್ಕೆ ಸತ್ಯಾಧ್ಯಾಸವೆನ್ನುತ್ತಾರೆ. ಶುಕ್ತಿರಜತದಂತೆ ಅಲ್ಲದರಲ್ಲಿ ಹೌದು ಎಂಬ ಬುದ್ಧಿಯು ಅಧ್ಯಾಸವೆನ್ನಲ್ಪಡುವದು. ಪರಂತು ಪ್ರತ್ಯಗಾತ್ಮ ಅಹಂಕಾರಗಳ ಅಧ್ಯಾಸಕ್ಕೆ ರಜ್ಜುಸರ್ಪದಂತೆ ನಿರುಪಾಧಿಕಾಧ್ಯಾಸ ಅಥವಾ ಸ್ವರೂಪಾಧ್ಯಾಸ ಎಂದು ಕರೆಯು ತ್ತಾರೆ. ಬಳಿಕ ಅಹಂಕಾರದಲ್ಲಿದ್ದ ಕರ್ತೃತ್ವ ಭೋಕ್ತೃತ್ವ ಧರ್ಮಗಳ ಅಧ್ಯಾಸಕ್ಕೆ ಸಂಸರ್ಗಾಧ್ಯಾಸ ಅಥವಾ ಸೋಪಾಧಿಕಾಧ್ಯಾಸ ಎನ್ನುತ್ತಾರೆ. ಅನಂತರ ನೀನು ಅಜ್ಞಾನಕಾರ್ಯವಾದ ತಮೋಗುಣದಿಂದ ಆವರಣಯುಕ್ತನಾಗಿ, ಪ್ರತ್ಯಗಾತ್ಮನು ದೇಹಕ್ಕಿಂತಲೂ ಭಿನ್ನವಾಗಿಇಲ್ಲವೇ ಇಲ್ಲ. ಕಿಂತು,

CC-0. Jangamwadi Math Collection. Digitized by eGangotri

ವಂಧ್ಯಾಪುತ್ರನಂತೆ ಕೇವಲ ಶಬ್ದಗಮ್ಯನಾಗಿರುತ್ತಾನೆ. ಎಂಬ ವೈರತ್ವದಿಂದ ಈ ಶರೀರವೇ ನಾನೆಂದು ಅಭಿಮಾನಯುಕ್ತನಾದ್ದರಿಂದ ಮಿಥ್ಯಾಧ್ಯಾಸ ವೆನಿಸುವದು. ಬಳಿಕ ರಜೋಗುಣದಿಂದ ಯುಕ್ತನಾದ್ದರಿಂದಲೇ ವನಿತಾದಿ ಶಬ್ದ ಸ್ಪರ್ಶ ವಿಷಯಗಳ ಇಚ್ಛೆ ಎಂಬ ಸಮುದ್ರದಲ್ಲಿ ಮುಳಗಿ, ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯ ಎಂಬ ಹತ್ತು ಇಂದ್ರಿಯಗಳಿಂದ, ಉಕ್ತ ವಿಷಯ ಗಳನ್ನು ಗ್ರಹಣತ್ಯಾಗ ಮಾಡುವ ಕಾಲಕ್ಕೆ, ಶ್ರೋತ್ರವಾಗಾದಿಗಳೇ ನಾನೆಂದು ಅಭಿಮಾನ ಮಾಡುತ್ತಿರಲಿಕ್ಕೆ, ಇದು ಇತರಾಧ್ಯಾಸವೆನಿಸುತ್ತದೆ. ಬಳಿಕ ಪ್ರಕಾ ಶಾತ್ಮಕ ಸತ್ವ ಗುಣದಿಂದ ಕೂಡಿ ಸರ್ವ ದೃಶ್ಯ ಪದಾರ್ಥಗಳನ್ನು ತಿಳಿಯೋಣ ದರಿಂದ, ನಾನು ಬುದ್ಧಿ ಎಂದು ಅಭಿಮಾನಿಸುತ್ತಿರಲಿಕ್ಕೆ ಇದು ಇತರೇತರ ಅಧ್ಯಾಸವೆನಿಸುತ್ತದೆ. ಈ ಪ್ರಕಾರ ನಾಲ್ಕು ವಿಧದ ಅಧ್ಯಾಸಗಳಿಂದ ಕೂಡಿದವ ನಾದ್ದರಿಂದಲೇ ದೇಹದಲ್ಲಿ, ಇಂದ್ರಿಯಗಳಲ್ಲಿ, ಬುದ್ಧಿಯಲ್ಲಿ, ಅಹಂಕಾರದಲ್ಲಿ, ನಾನು ನಾನು ಎಂಬುವ ಈ ಭಾವನೆಯು ಬಹಳ ದೃಢವಾಗಿ ಹೋಯಿತು. ಆದ್ದರಿಂದಲೇ ನೀನು ಜೀವಾತ್ಮನು, ಎಂದು ಅನ್ನಿಸಿಕೊಂಡು ಪಂಚ ಭೂತಗಳ ಅಪಂಚೀಕರಣ ಪಂಚೀಕರಣಾತ್ಮಕ ಸೂಕ್ಷ್ಮ ಸ್ಥೂಲ ಶರೀರ ರೂಪ ಸೃಷ್ಟಿ ಯಲ್ಲಿ ಇರುವಂಥವನಾಗಿರುವಿ. ಅರ್ಥಾತ್ ಕೇವಲ ಸಚ್ಚಿದಾನಂದ ಸ್ವರೂಪನಾದ ನೀನು ತ್ರಿಗುಣಾತ್ಮಕವಾದ ಅಜ್ಞಾನೋಪಾಧಿಯಿಂದ ಅನಾತ್ಮಗಳಾದ ದೇಹ ಬುದ್ಧಿ ಅಹಂಕಾರಗಳಲ್ಲಿ ಆತ್ಮ ಭಾವನೆಯನ್ನು ಮಾಡಿ, ನಾಲ್ಕು ಅಧ್ಯಾಸಗಳಿಗೆ ಗುರಿಯಾಗಿ ಶರೀರವೆಂಬ ಪುರಿಯಲ್ಲಿ ನಾನೆಂದು ಮಲಗಿಕೊಂಡಿದ್ದರಿಂದಲೇ. ಪುರುಷನು ಅಥವಾ ಜೀವನು ಎಂದು ಕರಿಸಿಕೊಂಡಿರುವಿ. ಈ ಕಾರಣದಿಂದಲೇ ನಿನಗೆ ಜನನ ಮರಣ ರೂಪ ಸಂಸಾರವು ಬಂದಿರುತ್ತದೆ. ಈ ಅಧ್ಯಾಸ ವಿಚಾರವು ವಿಚಾರ ಚಂದ್ರೋದಯ, ವಿಚಾರ ಸಾಗರ, ವೃತ್ತಿ ಪ್ರಭಾಕರ ಸಿದ್ಧಾಂತ ಲೇಶ, ಬ್ರಹ್ಮ ಸೂತ್ರದ ಅಧ್ಯಾಸ ಭಾಷ್ಯ, ಇವುಗಳಲ್ಲಿ ವಿಶೇಷ ವರ್ಣಿಸಲ್ಪಟ್ಟಿರುತ್ತದೆ.

ಬಳಿಕ; ಎಲೈ ಶಿಷ್ಯನೇ ಕೇಳು. ನಿನ್ನಾಶ್ರಿತವಾದ ಅಜ್ಞಾನದಿಂದಲೇ ಮನಸ್ಸುತ್ಪನ್ನವಾಯಿತು. ಅದು ತಾನೇ ಈ ಚರಾಚರ ಜಗದ್ರೂಪವಾಯಿತು. ಈ ಜಗತ್ತಿನ ಸ್ಥಿತಿಯೂ ನಾಶವೂ ಅದರಿಂದಲೇ ಸಂಭವಿಸುತ್ತವೆ. ಆದ್ದರಿಂದ ಸ್ವಪ್ನದಂತೆ ಜಗತ್ತು ಮನೋಮಯವಾಗಿರುತ್ತದೆಂದು ಹೇಳುತ್ತಾರೆ.

ಮಿಗೆ ವಿಪರೀತ ಜ್ಞಾನಾಕೃತಿಯೆ ।
ಬಗೆ ಗೊಡಲಹವುನವುದಿಸಿತ್ತರಿಯೆ ॥
ಅದು ತಾನೇ ತನಗಿದಿರಿಟ್ಟಂತೆ ।
ಅದು ತನಗನ್ಯಂತಾನೆಂಬಂತೆ ॥
ಬಹುವಿಧಭೂತ ಭುವನ ರೂಪಾಗಿ ।
ಬಹುಕರಣೇಂದ್ರಿಯ ವಸುರೂಪಾಗಿ ॥

CC-0. Jangamwadi Math Collection. Digitized by eGangotri

ಸ್ಥಾವರ ಭೇದದ ಕೋಟಿಗಳಾಗಿ।
ತೀವಿದಖಿಳ ಜಂಗಮರೂಪಾಗಿ॥
ತೋರುತ್ತಾ ಮನವುಳ್ಳೊಡಿದೆಲ್ಲ।
ತೋರುವದದು ಕೆಡಲೊಂದುಮಿದಿಲ್ಲ॥
ಜಗವದರಿಂದ ಮನೋಮಯವೆಂದು।
ಬಗೆದೋರುವ ಕನಸಿನ ತೆರನೆಂದು ॥೮॥

ಟೀಕಾ:— ಮಿಗೆ=ವಿಶೇಷವಾಗಿ, ವಿಪರೀತಜ್ಞಾನ=ವಿರುದ್ಧ ಜ್ಞಾನದ, ಆಕೃತಿಯೇ=ರೂಪವೇ, ಬಗೆಗೆ=ಭಾವನೆಗಳಿಗೆ, ಒಡಲಹ=ಶರೀರವಾಗಿರುವಂಥಾ, ಮನಂ=ಮನಸ್ಸಾಗಿ, ಉದಿಸಿತ್ತು = ಉತ್ಪನ್ನವಾಗಿರುವದು, ಅರಿಯೆ = ವಿಚಾರ ಮಾಡುತ್ತಿರಲಾಗಿ, ಅದು=ಆ ಮನಸ್ಸು, ತಾನೇ=ಸ್ವಯವಾಗಿ,=ತನಗೆ=ಪ್ರತ್ಯಗಾತ್ಮ ಸ್ವರೂಪನಾದ ತನಗೆ, ಇದಿರಿಟ್ಟಂತೆ = ಮುಂಭಾಗದಲ್ಲಿರಿಸಿದಂತೆ, ಅದು= ಆ ಮನಸ್ಸು, ತನಗೆ=ತನಗೆ, ಅನ್ಯಂ=ಬೇರೆಯಾಗಿರುವದು, ತಾನೆಂಬಂತೆ=ತಾನೇ ಎನ್ನುವ ಹಾಗೆ (ಕಾಣಿಪುದು), ಬಹುವಿಧ=ಅನೇಕ ಪ್ರಕಾರಗಳಾದ, ಭೂತ=ಪೃಥಿವ್ಯಾದಿ ಪಂಚಭೂತಗಳ, ಭುವನ = ಸತ್ಯಲೋಕಾದಿ ಹದಿನಾಲ್ಕು ಲೋಕಗಳ, ರೂಪಾಗಿ=ಆಕಾರವಾಗಿ, ಬಹು=ಅನೇಕ, ಕರಣ=ಅಂತಃಕರಣ, ಇಂದ್ರಿಯವು= ದಶೇಂದ್ರಿಯಗಳ, ಅಸು=ದಶವಾಯುಗಳ, ರೂಪಾಗಿ=ಆಕಾರವಾಗಿ, ಸ್ಥಾವರ= ಇದ್ದಲ್ಲಿರುವ, ಭೇದದ=ನಾನಾತರದ, ಕೋಟಿಗಳಾಗಿ=ಅಸಂಖ್ಯಾತಗಳಾಗಿ, ತೀವಿದ=ತುಂಬಿದ, ಅಖಿಳ=ಸರ್ವ, ಜಂಗಮ=ತಿರುಗಾಡುವಂಥಾ ಜೀವಿಗಳ, ರೂಪಾಗಿ=ಆಕಾರವಾಗಿ, ತೋರುತ್ತ=ದೃಶ್ಯವಾಗುತ್ತ, ಆ ಮನಂ=ಉಕ್ತಮನಸ್ಸು, ಉಳ್ಳೊಡೆ=ಇದ್ದರೆ, ಇದೆಲ್ಲ=ಕಾಣುವ ಎಲ್ಲ ಜಗತ್ತು, ತೋರುವದು=ಪ್ರತೀತಿಯಾಗುವದು, ಅದು=ಆ ಮನಸ್ಸು, ಕೆಡಲ್=ನಷ್ಟವಾಗಲು, ಒಂದುಂ=ಒಂದಾದರೂ, ಇಲ್ಲ=ಇರುವದಿಲ್ಲ, ಅದರಿಂದ=ಈ ಕಾರಣದಿಂದ, ಜಗವು=ಜಗತ್ತು, ಮನೋಮಯವೆಂದು=ಮನಸ್ಸಿನ ವಿಕಾರವೆಂದು, ಬಗೆದೋರುವ=ಭಾವನೆಯಿಂದ ತೋರುವ, ಕನಸಿನ=ಸ್ವಪ್ನದ, ತೆರನೆಂದು=ಪ್ರಕಾರವೆಂದು, (ಅರಿ=ತಿಳಿ).

ತಾತ್ಪರ್ಯ:— ಎಲೈ ಶಿಷ್ಯನೇ ಕೇಳು! ಅಜ್ಞಾನವೇ ವಿಕಾರದಿಂದ ಈ ಮನೋರೂಪವಾಗಿರುತ್ತದೆ. ಇದು ಅನೇಕ ವಾಸನೆಗಳಿಂದ ಯುಕ್ತವಾಗಿರುತ್ತದೆ. ಇದು ಸಂಕಲ್ಪ ವಿಕಲ್ಪ ಮೊದಲಾದವಸ್ಥೆಗಳಿಂದ ಘಟದಂತೆ ದೃಶ್ಯವಾಗಿ ಕಾಣಿಸುತ್ತದೆ. ಹೇಗಂದರೆ, ಈಗ ನನ್ನ ಮನಸ್ಸು ಚನ್ನಾಗಿಲ್ಲ; ಈಗ ಸಂತೋಷವಾಗಿರುತ್ತದೆ ಎಂಬಿವೇ ಮೊದಲಾದ ಅನುಭವದಿಂದ ಗೊತ್ತಾಗುತ್ತದೆ. ಮತ್ತು ಕಾಮ ಕ್ರೋಧ ಸುಖ ದುಃಖಾದಿಗಳಿಂದ ದೃಶ್ಯವಾಗಿರೋಣದರಿಂದಲೇ ತನಗೆ ಬೇರೆಯಾಗಿರುತ್ತದೆ. ಮತ್ತು ನಾನು ಕಾಮೀ ಕ್ರೋಧೀ ಸುಖೀ ದುಃಖೀ ಎಂದು

CC-0. Jangamwadi Math Collection. Digitized by eGangotri

ಅನ್ನೋಣದರಿಂದ ಮನಸ್ಸೇ ತಾನೆಂಬಂತೆಯೂ ಕಂಡುಬರುತ್ತದೆ. ಅನೇಕ ಪ್ರಕಾರಗಳಾದ ಪೃಥಿವ್ಯಾದಿ ಪಂಚಭೂತಗಳ ರೂಪಾಗಿಯೂ, ಮನಬುಧ್ಯಾದಿ ಅಂತಃಕರಣ ಪಂಚಕರೂಪಾಗಿಯೂ, ಜ್ಞಾನೇಂದ್ರಿಯ ಕರ್ಮೇಂದ್ರಿಯ ಪಂಚಕ ರೂಪಾಗಿಯೂ, ಪ್ರಾಣಾದಿ ವಾಯುಗಳ ರೂಪಾಗಿಯೂ. ಅಸಂಖ್ಯಾತವಾಗಿ ಇದ್ದ ಕ್ಕಿದ್ದಲ್ಲೆ ಇರುವ ಸ್ಥಾವರ ವಸ್ತುಗಳ ರೂಪಾಗಿಯೂ, ಜಗತ್ತಿನ ಎಲ್ಲಕಡೆಗೂ ತುಂಬಿ ಕೊಂಡಿರುವ ಜೀವಿಗಳ ರೂಪಾಗಿಯೂ, ಈ ಮನಸ್ಸೇ ತೋರುತ್ತದೆ ಅರ್ಥಾತ್ ಮನಸ್ಸು ಒಂದು ಇದ್ದರೆ ಹೇಳಲ್ಪಟ್ಟ ಜಗಜ್ಜಾತವೆಲ್ಲವು ತೋರುತ್ತದೆ. ಆ ಮನ ವೊಂದು ನಾಶವಾದರೆ ಏನೊಂದೂ ತೋರುವದಿಲ್ಲ. ಆದ್ದರಿಂದ ಘಟವು ಮೃಣ್ಮಯ ವಾಗಿ ಭೂಷಣವು ಸುವರ್ಣಮಯವಾಗಿ ಕಾಣಿಸುವಂತೆ ಜಗವು ಮನೋಮಯ ವಾಗಿ ಕಾಣಿಸುತ್ತದೆ. ಮತ್ತು ಯಾವದೊಂದು ಪದಾರ್ಥವಿಲ್ಲದೆ ಸ್ವಪ್ನ ಪ್ರಪಂಚವು ಕೇವಲ ಭಾವನಾಮಯಾತ್ಮಕ ಹೇಗೆ ಆಗಿರುತ್ತದೆಯೋ ಹಾಗೇ ಈ ಪ್ರಪಂಚವಾದರೂ ಮನೋಮಯಾತ್ಮಕವಾಗಿರುತ್ತದೆ ಎಂಬ ಈ ವಿಷಯವನ್ನು ವಾಸಿಷ್ಠ ಗ್ರಂಥದಲ್ಲಿ ಲವಣಾಖ್ಯಾನ ಮತ್ತು ಗಾಧಿ ಬ್ರಾಹ್ಮಣನ ಆಖ್ಯಾನ ಇವು ಗಳಲ್ಲಿ ಚನ್ನಾಗಿ ಪ್ರತಿಪಾದನಮಾಡಲ್ಪಟ್ಟಿರುತ್ತದೆ; ಅಲ್ಲಿ ನೋಡಿಕೊಳ್ಳಬಹುದು.

ಬಳಿಕ; ಸರ್ವ ಜಗತ್ತು ರಜ್ಜು ಸರ್ಪ ದೃಷ್ಟಾಂತದಂತೆ, ನಿನ್ನಲ್ಲಿ ದೃಷ್ಟಿ ಸೃಷ್ಟಿ ರೂಪವಾಗಿರುತ್ತದೆಂದು ಪ್ರತಿಪಾದನಮಾಡುತ್ತಾರೆ.

ಅಂತಾ ಕಲ್ಪಿತ ವಿಷಯ ತತಿಗಳು।
ಇಂತೆಸೆದಿರ್ಪವು ನಿನ್ನುಳುಮೆಯೊಳು॥
ಈ ವನಸಾಗರ ಸರಿದದ್ರಿಗಳು।
ದೇವಾಸುರ ನರ ತಿರ್ಯಕ್ಕುಗಳು॥
ಇನಿತು ವಿಚಿತ್ರಂ ಥಿಟವೆಂಬಂತೆ।
ಜನಿಸಿತು ಪೊಂದೊಡಿಗೆಯ ಪರಿಯಂತೆ॥
ಮೋಣದು ಕಂಡಾಗುಂಟೆನಿಸಿತ್ತು।
ಕಾಣದ ಹೊತ್ತದ ನಿಲ್ಲೆನಿಸಿತ್ತು॥
ಅವರವರಾ ಸ್ಮರಣೆಯು ಕಥದಿಂದ।
ವಿವಿಧ ಪ್ರತಿಭಾಸಕ ರೂಪಿಂದ॥
ಈ ಮನವಾಗಳು ಬೇರೂರಿಹುದು।
ಈ ಮೂಜಗದಾ ಸ್ಥಿತಿಯಾಗಿಹುದು ॥೯॥

ಟೀಕಾ:—ಅಂತು=ಹಾಗೆ, ಆಕಲ್ಪಿತ=ಅಧ್ಯಾಸಗಳಾದ, ವಿಷಯತತಿಗಳು= ವಿಷಯ ರಾಶಿಗಳು, ಇಂತು=ಈ ಪ್ರಕಾರ, ನಿನ್ನ=ಅದ್ವಯಾನಂದ ರೂಪನಾದ ನಿನ್ನ, ಉಳುಮೆಯೊಳು=ಅಧಿಷ್ಠಾನದಲ್ಲಿ, ಎಸೆದಿರ್ಪವು=ತೋರುತ್ತಿರುವವು, ಈ= ತೋರುವಂಥಾ, ವನ=ಅರಣ್ಯ, ಸಾಗರ=ಸಮುದ್ರ, ಸರಿತ್=ನದಿ, ಅದ್ರಿಗಳು= ಪರ್ವತಗಳು, ದೇವ=ಇಂದ್ರಾದಿಗಳು, ಅಸುರ=ಬಲಿಚಕ್ರವರ್ತ್ಯಾದಿಗಳು, ನರ=

CC-0. Jangamwadi Math Collection. Digitized by eGangotri

ಮನುಷ್ಯರು, ತಿರ್ಯಕ್ಕುಗಳು=ಪಶು ಪಕ್ಷಿ ಮೊದಲಾದವುಗಳು, ಇನಿತು=ಇಷ್ಟು, ವಿಚಿತ್ರಂ=ಆಶ್ಚರ್ಯಕರವಾಗಿ, ಧಿಟವೆಂಬಂತೆ=ಸತ್ಯವೆನ್ನುವ ಹಾಗೆ, ಪೊಂದೊಡಿಗೆಯ ಪರಿಯಂತೆ=ಸುವರ್ಣದ ಆಭರಣಗಳಂತೆ, ಜನಿಸಿತು=ಹುಟ್ಟಿರುವದು, ಮೇಣ್=ಮತ್ತು, ಅದು=ಆ ಜಗತ್ತು, ಕಂಡಾಗ=ನೋಡಿದಾಗ, ಉಂಟೆನಿಸಿತ್ತು=ಇರುತ್ತದೆಂದು ಹೇಳಿಸಿಕೊಳ್ಳುವದು, ಕಾಣದ ಹೊತ್ತು=ನೋಡದ ಕಾಲದಲ್ಲಿ, ಅದು=ಆ ಜಗತ್ತು, ಇಲ್ಲೆನಿಸಿತ್ತು=ಅಭಾವವೆಂದು ಹೇಳಿಸಿಕೊಳ್ಳುವದು, ಅವರವರ=ಪ್ರತಿಯೊಬ್ಬರ, ಸ್ಮರಣೆಯ ಕಥದಿಂದ=ಸ್ಮೃತಿಯಾಗೋಣದರಿಂದ, ವಿವಿಧ=ನಾನಾತರದ, ಪ್ರತಿಭಾಸಕರೂಪಿಂದ=ಬೇರೆ ಬೇರೆಯಾಗಿ ತೋರುವದರಿಂದ, ಈ ಮನವು = ಸಂಕಲ್ಪವಿಕಲ್ಪವಾದ ಮನಸ್ಸು, ಆಗಳು = ಯಾವಾಗಲೂ, ಬೇರೂರಿಹುದು=ಕಾರಣವಾಗಿರುವದು, ಈ ಮೂಜಗವ=ಈ ಮೂರು ಲೋಕಗಳ, ಆಸ್ಥಿತಿಯಾಗಿರುವದು=ಆಧಾರಭೂತವಾಗಿರುವದು.

ತಾತ್ಪರ್ಯಃ—ಎಲೈ ಶಿಷ್ಯನೇ! ಕೇಳು ಹಿಂದೆ ಹೇಳಲ್ಪಟ್ಟ ಸ್ವಪ್ನ ಪ್ರಪಂಚದಂತೆ ಕಲ್ಪಿತಗಳಾದ ಯಾವತ್ತು ವಸ್ತುಗಳು ಸಚ್ಚಿದಾನಂದನ ಸ್ವರೂಪವಾದ ನಿನ್ನ ಅಧಿಷ್ಠಾನದಲ್ಲಿಯೇ ತೋರುತ್ತವೆ. ಅಂದರೆ, ಕಪ್ಪೆಚಿಪ್ಪಿನಲ್ಲಿ ಬೆಳ್ಳಿ; ಮೋಟ ಮರದಲ್ಲಿ ಕಳ್ಳ; ಸಾಕ್ಷಿಚೇತನದಲ್ಲಿ ಸ್ವಪ್ನ, ಮೊದಲಾದವುಗಳು ತೋರುವಂತೆ, ನಿನ್ನಲ್ಲಿ ಯಾವತ್ತೂ ಪ್ರಪಂಚವು ತೋರುತ್ತದೆ. ಹೇಗೆ ತೋರುತ್ತದೆ? ಅಂದರೆ, ಕೇಳು. ದಂಡಕಾರಣ್ಯಾದಿ ವನಗಳೂ ಲವಣಾದಿ ಸಮುದ್ರಗಳು, ಭಾಗೀರಥಿ ಮೊದಲಾದ ಹೊಳೆಗಳು, ಮೇರು ಮೊದಲಾದ ಪರ್ವತಗಳು, ಇಂದ್ರಾದಿ ದೇವತೆಗಳು, ಬಲಿಚಕ್ರವರ್ತ್ಯಾದಿ ಅರಸರು, ಮನುವಿನಿಂದುತ್ಪನ್ನರಾದ ಮನುಷ್ಯರು, ಪಶುಪಕ್ಷಿ ಸರ್ಪ ಮೊದಲಾದ ಜಂತುಗಳೆಲ್ಲಾ ನೋಡಿದೊಡನೆ ಆಶ್ಚರ್ಯಕರವಾಗಿಯೂ ಸತ್ಯವೆಂಬಂತೆಯೂ ಇಂದ್ರಜಾಲದಾಟದಂತೆ ತೋರುತ್ತಿರುವವು. ಅರ್ಥಾತ್ ಕಾಂತಿಯುಕ್ತ ಗುರುತ್ವ ರೂಪವಾದ ಭಂಗಾರದಲ್ಲಿ ನಾಮರೂಪಗಳಾದ ದಾಗೀನುಗಳು ಕಲ್ಪಿತವಾಗಿರುವಂತೆ, ಅಸ್ತಿ, ಭಾತಿ, ಪ್ರಿಯರೂಪನಾದ ನಿನ್ನಲ್ಲಿ ನಾಮರೂಪಾತ್ಮಕ ಜಗತ್ತು ಕಲ್ಪಿತವಾಗಿರುತ್ತದೆ. ಮತ್ತು ಈ ಜಗತ್ತು ನೋಡಿದ ಕಾಲಕ್ಕೆ ಉಂಟು ಎನಿಸುತ್ತದೆ. ನೋಡದ ಕಾಲಕ್ಕೆ ಇಲ್ಲೆನಿಸುತ್ತದೆ. ಅಂದರೆ, ಸ್ವಪ್ನದಲ್ಲಿ ದೋಷಯುಕ್ತ ವೃತ್ತಿಯೇ ಗಜ ತುರಗಗಳಾಗಿರುವಂತೆ, ಜಾಗ್ರದಲ್ಲಾದರೂ ಚೈತನ್ಯ ಪ್ರತಿಬಿಂಬದಿಂದ ಯುಕ್ತವಾದ ಅವಿದ್ಯಾ ವೃತ್ತಿಯೇ ಜಗದಾಕಾರವಾಗಿರುವದು. ಅರ್ಥಾತ್ ದೃಷ್ಟಿರೇವ ಸೃಷ್ಟಿ ಎಂಬ ತಾತ್ಪರ್ಯವು. ಆದ್ದರಿಂದ ಈ ಜಗತ್ತು ಹಲವು ಬಗೆಯಾಗಿ ತೋರುವದು. ಹೇಗಂದರೆ, ಹತ್ತುಮಂದಿಕೂಡಿ ಹೋಗುತ್ತಿರುವಾಗ ಮಾರ್ಗದಲ್ಲಿ ಬಿದ್ದಿರುವ ಹಗ್ಗವನ್ನು ಕಂಡು, ಹಗ್ಗವೆಂದು ಅರಿಯದಲೆ ಸರ್ಪ ಸಂಸ್ಕಾರವುಳ್ಳವನು ಇದು ಸರ್ಪವೆನ್ನುತ್ತಾನೆ; ಮಾಲಾ ಸಂಸ್ಕಾರವುಳ್ಳವನು ಹೂವಿನ ಮಾಲೆ

CC-0. Jangamwadi Math Collection. Digitized by eGangotri

ಯೆನ್ನುತ್ತಾನೆ; ದಂಡ ಸಂಸ್ಕಾರವುಳ್ಳವನು ದಂಡವೆನ್ನುತ್ತಾನೆ; ಜಲಧಾರಾ ಸಂಸ್ಕಾರವುಳ್ಳವನು ಜಲಧಾರೆಯೆನ್ನುತ್ತಾನೆ. ಹೀಗೆ ಅವರವರ ಸಂಸ್ಕಾರ ಸ್ಮೃತ್ಯಾದಿಗಳಿಂದ ಭಿನ್ನಭಿನ್ನವಾಗಿ ಪ್ರಾತಿಭಾಸಿಕ ಪದಾರ್ಥಗಳು ಹೇಗೆ ತೋರುತ್ತವೆಯೋ, ಹಾಗೇ ಈ ಜಗತ್ತಾದರೂ ತೋರುತ್ತದೆ. ಅಂದರೆ, ಇಲ್ಲಿ ಜಗತ್ತಿಗೆ ವ್ಯವಹಾರಿಕ ಸತ್ತೆಯನ್ನು ಒಡಂಬಡದೆ ಪ್ರಾತಿಭಾಸಿಕ ಸತ್ತೆಯನ್ನು ಅಂಗೀಕರಿಸಿರುವರೆಂಬ ತಾತ್ಪರ್ಯವು. ಈ ರೂಪದಿಂದ ಈ ಮನಸ್ಸು ಯಾವಾಗಲೂ ಮೂರುಲೋಕಗಳ ಉತ್ಪತ್ತಿಗೂ ಸ್ಥಿತಿಗೂ ಕಾರಣವಾಗಿರುವದು.

ಬಳಿಕ; ವಿಚಾರಮಾಡಿನೋಡುತ್ತಿರಲಿಕ್ಕೆ, ಈ ಜಗತ್ತು ತನ್ನಲ್ಲಿ ಅತ್ಯಂತಾಭಾವವಾಗಿರುತ್ತದೆಂದು ಅನೇಕ ದೃಷ್ಟಾಂತಗಳಿಂದ ಪ್ರತಿಪಾದನಮಾಡುತ್ತಾರೆ.

ಗಗನಜ ವಿಪ್ರನ ಕಥೆಯೊಡಲೆಂತು।
ಜಗಮಿರೆ ನಿನ್ನೊಳು ಬಾಧಿಸದಂತು॥
ಮುಗಿಲೆಡೆಯಾಟಂ ಗಗನದೊಳೆಂತು।
ಜಗಮಿರೆ ನಿನ್ನೊಳು ಬಾಧಿಸದಂತು॥
ನೆಗಳಿದ ಸರ್ಪಂ ನೇಣಿನೊಳೆಂತು।
ಜಗಮಿರೆ ನಿನ್ನೊಳು ಬಾಧಿಸದಂತು॥
ಭಾವಿಸೆ ಬಗೆಯು ವಿಕಾರವೆನಿಪ್ಪ।
ಜೀವರಿಗಾಗಳು ಮೋಹಕವಪ್ಪ॥
ಮನದ ಸ್ಥಿತಿಯಂ ಪೇಳಿದೆವಿಂತು।
ನಿನಗದರೊಳ್ ಪುದುವಾಳ್ತನವೆಂತು॥
ಮನದಂದವ ಕರುಣಿಸಬೇಕೆಂದು।
ತನಯಂ ಗುರುವಂ ಕೇಳಿದೊಡಂದು ॥೧೦॥

ಟೀಕಾ:—ಗಗನಜವಿಪ್ರನ=ಆಕಾಶಜ ಬ್ರಾಹ್ಮಣನ, ಕಥೆಯ=ಇತಿಹಾಸದ, ಒಡಲು=ಶರೀರವು, ಎಂತು=ಹೇಗೋ, ಅಂತು=ಹಾಗೆ, ನಿನ್ನೊಳು=ನಿನ್ನಲ್ಲಿ, ಜಗಂ=ಜಗತ್ತು, ಇರೆ=ಇದ್ದರೂ, ಬಾಧಿಸದು=ನಾಶಮಾಡಲಾರದು, ಮುಗಿಲ=ಮೇಘಗಳ, ಎಡೆಯಾಟಂ=ಗಮನಾಗಮನವು, ಗಗನದೊಳು=ಆಕಾಶದಲ್ಲಿ, ಎಂತು=ಹೇಗೋ, ಅಂತು=ಹಾಗೆ, ನಿನ್ನೊಳು=ನಿನ್ನಲ್ಲಿ, ಜಗಮಿರೆ=ಜಗತ್ತಿದ್ದರೂ, ಬಾಧಿಸದು=ಹಾನಿಯನ್ನುಮಾಡದು, ನೇಣಿನೊಳು=ಹಗ್ಗದಲ್ಲಿ, ನೆಗಳಿದ=ಕಲ್ಪನೆಮಾಡಿದ, ಸರ್ಪಂ=ಹಾವು, ಎಂತು=ಹೇಗೋ, ಅಂತು=ಹಾಗೆ, ನಿನ್ನೊಳು=ನಿನ್ನಲ್ಲಿ, ಜಗಮಿರೆ=ಜಗತ್ತಿದ್ದರೂ, ಬಾಧಿಸದು=ನಿನ್ನನ್ನು ಅಭಾವಮಾಡಲಾರದು, ಭಾವಿಸೆ=ವಿಚಾರಮಾಡಲು, ಬಗೆಯು=ಭಾವನೆಯು, ವಿಕಾರವೆನಿಪ್ಪ=ಕಾರ್ಯವೆನಿಸುವಂಥಾ, ಜೀವರಿಗೆ=ಪ್ರಾಣಿಗಳಿಗೆ, ಆಗಳು=ಯಾವಾಗಲೂ, ಮೋಹಕವಪ್ಪ=ಮೋಸ ಮಾಡುವಂಥಾ, ಮನದ=ಮನಸ್ಸಿನ, ಸ್ಥಿತಿಯಂ=ಸ್ವರೂಪವನ್ನು, ಇಂತು=ಈ

CC-0. Jangamwadi Math Collection. Digitized by eGangotri

ಪ್ರಕಾರ, ಪೇಳಿದೆವ್ರು=ಹೇಳಿದೆವು, ನಿನಗೆ=ಮನೋಸಾಕ್ಷಿಯಾದ ನಿನಗೆ,ಆದರೊಳ್=ಆ ಮನಸ್ಸಿನೊಡನೆ, ಪುದುವು=ಸಂಬಂಧವು, ಅಳ್ತನವು=ಒಡೆತನವು, ಎಂತು=ಹೇಗೆ (ಅನ್ನಲು), ಮನದಂದವ=ಮನಸ್ಸಿನ ಸ್ವರೂಪವನ್ನು, ಕರುಣಿಸಬೇಕೆಂದು=ಹೇಳಬೇಕೆಂದು, ಅಂದು=ಆ ಹೊತ್ತಿನಲ್ಲಿ, ತನಯಂ=ಮಗನು, ಗುರುವಂ=ಗುರುವನ್ನು, ಕೇಳಿದೊಡೆ=ವಿಚಾರಿಸಿದಕೂಡಲೆ.

ತಾತ್ಪರ್ಯ— ಗಗನಜನಾಮಕ ಬ್ರಾಹ್ಮಣನ ಕಥೆಯನ್ನು ವಿಚಾರ ಮಾಡುತ್ತಿರಲು, ಆವನ ಶರೀರವು ಹೇಗಿರುವದಿಲ್ಲವೋ; ಹಾಗೇ ಈ ಜಗತ್ತಾದರೂ ಇರುವದಿಲ್ಲ. ಪರಂತು, ನಿನ್ನಲ್ಲಿ ಭ್ರಾಂತಿಯಿಂದ ಜಗತ್ತು ತೋರಿದರೂ ಕೂಡಾ ಅದು ನಿನ್ನ ಸ್ವರೂಪಕ್ಕೆ ಬಾಧೆಯನ್ನುಂಟುಮಾಡಲಾರದು. ಆದರೆ, ಆ ಗಗನಜ ವಿಪ್ರನ ಕಥೆಯು ಹೇಗಂದರೆ ಕೇಳು. ವಶಿಷ್ಠರು ಶ್ರೀರಾಮಚಂದ್ರನನ್ನು ಕುರಿತು– "ಹೇ ರಾಮ! ಈ ಆಕಾಶಜ ಬ್ರಾಹ್ಮಣನ ಆಖ್ಯಾನವು ಕೇಳಲಿಕ್ಕೆ ಬಹಳ ಮನೋಹರವಾದದ್ದು. ಇದನ್ನು ಕೇಳೋಣದರಿಂದ ಈ ಉತ್ಪತ್ತಿ ಪ್ರಕರಣವು ಎಲ್ಲಾ ತಿಳಿಯಲ್ಪಡುತ್ತದೆ. ಆಕಾಶಜನಾಮಕ ಬ್ರಾಹ್ಮಣನು ಪರಮಧಾರ್ಮಿಕನೂ ಧ್ಯಾನೈಕನಿಷ್ಠನೂ ಯಾವಾಗಲೂ ಪ್ರಜೆಗಳ ಹಿತದಲ್ಲಿ ತತ್ಪರನಾದವನೂ ಇದ್ದನು. ಅವನು ಬಹಳ ದಿವಸ ಬದುಕಿದ್ದರೂ ಕೂಡಾ ಮೃತ್ಯುವಿಗೆ ವಶಗತ ನಾಗಲಿಲ್ಲ. ಆಗ ಮೃತ್ಯು– "ನಾನು ಕ್ರಮವಾಗಿ ಸರ್ವ ಪ್ರಾಣಿಗಳನ್ನು ಭಕ್ಷಿಸು ತ್ತೇನೆ. ಆದರೆ, ಈ ಗಗನಜವಿಪ್ರನನ್ನು ನಾನು ಯಾಕೆ ಭಕ್ಷಣಮಾಡುವದಿಲ್ಲ? ಕಲ್ಲಿನ ಮೇಲೆ ಹದನಾದ ಕತ್ತಿಯ ಆಟ ನಡೆಯದಂತೆ ಈ ಬ್ರಾಹ್ಮಣನಲ್ಲಿ ನನ್ನ ಶಕ್ತಿಯು ಕುಂಠಿತವಾಗುತ್ತದೆ" ಎಂದು ಹೀಗೆ ತನ್ನ ಮನದೊಳಗೆ ಆಲೋಚಿಸಿ, ಆವನನ್ನು ಕೊಲ್ಲುವದಕ್ಕೋಸ್ಕರ ಅವನ ಪುರಕ್ಕೆ ಹೋಯಿತು. ಆ ಪುರವು ಮೇರು ಮಧ್ಯದಲ್ಲಿರುತ್ತದೆ. ಅಲ್ಲಿ ಮೃತ್ಯು ಪ್ರವೇಶವಾಗದ್ದರಿಂದ ಅಲ್ಲಿರುವವರೆಲ್ಲರು ತಂತಮ್ಮ ಕರ್ಮಗಳನ್ನು ತ್ಯಾಗಮಾಡುತ್ತಿರಲಿಲ್ಲ. ಯಾವಾಗ್ಗೆ ಮೃತ್ಯುವು ಬ್ರಾಹ್ಮಣನ ಗೃಹವನ್ನು ಪ್ರವೇಶಮಾಡುವದಕ್ಕೆ ಉದ್ಯುಕ್ತವಾಯಿತೋ, ಆಗ್ಗೆ ಸಮಾಧಿಯು ವಿಘ್ನಗಳನ್ನು ತಡೆಯುವದಕ್ಕಾಗಿ ಪೂರ್ವದಲ್ಲಿಯೇ ಪ್ರಕಾರ ರೂಪದಿಂದ ಸಂಕಲ್ಪಿಸಲ್ಪಟ್ಟ ಅಗ್ನಿಯು ಪ್ರಳಯ ಕಾಲದ ಅಗ್ನಿಯಂತೆ, ಈ ಮೃತ್ಯುವನ್ನು ದಹನಮಾಡಲಿಕ್ಕೆ ಪ್ರಾಪ್ತವಾಯಿತು. ಆಗ ಮೃತ್ಯು ಆ ಜ್ವಾಲಾ ಮಯವಾದ ಅಗ್ನಿಮಾಲೆಯನ್ನು ಎರಡು ಭಾಗಮಾಡಿ ಬ್ರಾಹ್ಮಣನನ್ನು ಕಂಡು ತನ್ನ ಕೈಗಳಿಂದ ಅವನನ್ನು ಎಳೆದುಕೊಳ್ಳುವದಕ್ಕೋಸ್ಕರ ಯತ್ನಮಾಡಿತು. ಪರಂತು ಸಂಕಲ್ಪ ಪುರುಷನನ್ನು ಹಿಡಿಯುವದಕ್ಕೆ ಹೇಗೆ ಬರುವದಿಲ್ಲವೋ, ಹಾಗೇ ಈ ಅತಿ ಬಲವಾದ ಮೃತ್ಯುವಾದರೂ ಬ್ರಾಹ್ಮಣನನ್ನು ಕಂಡು ತನ್ನ ನೂರಾರು ಕೈಗಳಿಂದ ಅವನನ್ನು ಮುಟ್ಟುವದಕ್ಕೂ ಕೂಡಾ ಶಕ್ತಿಯುಳ್ಳದ್ದಾಗಲಿಲ್ಲ. ಅನಂತರ ಮೃತ್ಯುವು ಸಕಲ ಸಂಶಯಗಳನ್ನು ನಿರಸನಮಾಡುವಂಥಾ ಯಮರಾಜನನ್ನು

CC-0. Jangamwadi Math Collection. Digitized by eGangotri

ಕುರಿತು— "ಹೇ ವಿಭೋ! ಈ ಆಕಾಶಜ ಬ್ರಾಹ್ಮಣನನ್ನು ತಿನ್ನುವದಕ್ಕೆ ನಾನು ಯಾಕೆ ಶಕ್ತನಾಗವಲ್ಲೆನು?" ಎಂದು ಕೇಳಿತು. ಆಗ ಯಮನು "ಹೇ ಮೃತ್ಯುವೇ! ನೀನೊಂದೇ ಎಷ್ಟು ಸಾಮರ್ಥ್ಯದಿಂದ ಹೊಡೆಯುವದಕ್ಕೋಸ್ಕರ ಸಮರ್ಥವಾಗಲಾರಿ. ಅವನನ್ನು ಸಂಹಾರಮಾಡಬೇಕಾದರೆ ಅವನ ಕರ್ಮಗಳೇ ಕಾರಣಗಳಾಗಿರುತ್ತವೆ ಹೊರತು ಬೇರೆ ಏನೂ ಇಲ್ಲ. ಆದ್ದರಿಂದ ನೀನು ಈ ಬ್ರಾಹ್ಮಣನನ್ನು ಪ್ರಯತ್ನಗಂದ ಸಂಹಾರಮಾಡಬೇಕಾದರೆ, ಸಂಹಾರಮಾಡುವದಕ್ಕೆ ಮೂಲ ಕಾರಣಗಳಾದ ಅವನ ಕರ್ಮಗಳನ್ನು ಹುಡುಕು; ಆ ಕರ್ಮಗಳ ಸಹಾಯದಿಂದ ಬ್ರಾಹ್ಮಣನನ್ನು ಕೊಂದುಬಿಡುವಿ" ಎಂದು ಹೇಳಿದನು. ಬಳಿಕ ಮೃತ್ಯುವು, ಯಾವ ದೇಶದಲ್ಲಿ ಇವನ ಪ್ರಾಕ್ಕರ್ಮವಿರಬಹುದೆಂದು ಆಲೋಚಿಸುತ್ತಾ; ಮಂಡಲ, ದಿಕ್ಕು, ಕೆರೆ,ಹೊಳೆ, ಅಡವಿ, ಬೆಟ್ಟ, ಸಮುದ್ರ ದಂಡೆ,ದ್ವೀಪ,ನಗರ,ಪುರ, ಗ್ರಾಮ ಮೊದಲಾದವುಗಳನ್ನು ಕುರಿತು ತಿರುಗಿದರೂ, ಆ ಆಕಾಶಜ ಬ್ರಾಹ್ಮಣನ ಕರ್ಮಗಳು ಎಲ್ಲಿಯೂ ದೊರೆಯಲಿಲ್ಲ. ಹೇಗಂದರೆ, ಪ್ರಾಜ್ಞನು ವಂಧ್ಯಾ ಪುತ್ರನನ್ನೂ ಸಂಕಲ್ಪಾದ್ರಿಯನ್ನೂ ಹುಡುಕಿದರೆ ಹೇಗೆ ದೊರೆಯುವದಿಲ್ಲವೋ, ಹಾಗೆ ದೊರೆಯಲಿಲ್ಲ. ಆಗ ಮೃತ್ಯುವು ಸರ್ವಾರ್ಥಕೋವಿದನಾದ ಯಮರಾಜನನ್ನು— "ಹೇ ಪ್ರಭೋ! ಗಗನಜವಿಪ್ರನ ಕರ್ಮಗಳು ಎಲ್ಲಿ ಇರುವವು? ಹೇಳಿರಿ" ಎಂದು ಕೇಳಲು; ಧರ್ಮರಾಜನು ಕೆಲವು ಹೊತ್ತು ಚನ್ನಾಗಿ ಆಲೋಚನೆಯನ್ನು ಮಾಡಿ ಮುಂದೆ ಹೇಳುವ ಪ್ರಕಾರ ಉತ್ತರವನ್ನು ಕೊಡುವಂಥವನಾದನು. ಹೇಗಂದರೆ— "ಹೇ ಮೃತ್ಯುವೇ ಈ ಆಕಾಶಜ ಬ್ರಾಹ್ಮಣನ ಕರ್ಮಗಳು ಯಾವೂ ಇಲ್ಲ. ಈ ಬ್ರಾಹ್ಮಣನು ಕೇವಲ ಆಕಾಶದಿಂದಲೇ ಹುಟ್ಟಿರುತ್ತಾನೆ. ಯಾವನು ಆಕಾಶದಿಂದ ಹುಟ್ಟಿರುತ್ತಾನೋ ಅವನು ಆಕಾಶದಂತೆ ನಿರ್ಮಲನಾಗಿಯೇ ಇರುತ್ತಾನೆ. ಅವನನ್ನು ಕೊಲ್ಲೋಣದರಲ್ಲಿ ಸಹಕಾರಿಗಳಾದ ಅಭಿಮಾನ,ರಾಗ,ದ್ವೇಷಾದಿಗಳೂ ಕರ್ಮಗಳೂ ಯಾವವೂ ಇಲ್ಲ. ಯಾಕಂದರೆ ತತ್ವಜ್ಞಾನೋದಯಾನಂತರದಲ್ಲಿ ಪ್ರಾರಬ್ಧ ಕರ್ಮವು ಭೋಗದಿಂದ ನಿವೃತ್ತಿಯಾಗುತ್ತದೆ. ಸಂಚಿತಕರ್ಮಗಳು ಜ್ಞಾನದಿಂದ ದಹಿಸಿಹೋಗುತ್ತವೆ. ಆಗಾಮಿಕರ್ಮವು ಬೀಜಭೂತವಾಗಲಾರದು. ಈ ಕಾರಣದಿಂದ ಅವನ ಪ್ರಾಕ್ತನ ಕರ್ಮಸಂಬಂಧವು ವಂಧ್ಯಾಪುತ್ರನಂತೆ ಇಲ್ಲವೇ ಇಲ್ಲ. ಕೇವಲ ನಿರಾಕಾರ ಸ್ವರೂಪನಾಗಿರುತ್ತಾನೆ. ಕಾರಣವಿಲ್ಲದ್ದರಿಂದ ಅವನು ಆಕಾಶರೂಪನೇ ಆಗಿರುತ್ತಾನೆ. ಗಗನದಲ್ಲಿ ಗಿಡವಿರದಂತೆ ಅವನಲ್ಲಿ ಪೂರ್ವ ಕರ್ಮವಿಲ್ಲ. ಶರೀರವನ್ನು ಭಕ್ಷಿಸುವದಕ್ಕೆ ಯೋಗ್ಯವಾದ ಕರ್ಮವನ್ನು ವರ್ತಮಾನ ಕಾಲದಲ್ಲಿಯೂ ಮಾಡಿಲ್ಲ. ಆದ್ದರಿಂದ ಈತನು ಪರಬ್ರಹ್ಮ ಸ್ವಭಾವದವನಾಗಿರುತ್ತಾನೆ ಹೊರತು ದೃಶ್ಯಪ್ರಪಂಚದಸ್ವರೂಪನಲ್ಲ. ಅವನ ಪ್ರಾಣಸ್ಪಂದರೂಪಮಾದ ಯಾವ ಕರ್ಮವು ನಮ್ಮಗಳಿಂದ ಅವಿದ್ಯೆ ಮೂಲಕ ತೋರಲ್ಪಡುತ್ತದೆ. ಆದರೆ, ಅದರಲ್ಲಿ ಅವನಿಗೆ ಸತ್ಯತ್ವಬುದ್ಧಿಯಿಲ್ಲ. ಆದರೆ ಅವನ ದೇಹಾದಿಗಳೆಂಬ ಬುದ್ಧಿಯು

CC-0. Jangamwadi Math Collection. Digitized by eGangotri

ಹೇಗೆ ಆಗುವದು? ಅಂದರೆ ಕೇಳು, ಕಂಭದಲ್ಲಿ ಗೊಂಬೆಯನ್ನು ಕೆತ್ತಲು ಅದು ಕಂಭಕ್ಕಿಂತಲೂ ಭಿನ್ನವಾಗಿ ತೋರುವಂತೆ, ಚಿದ್ರೂಪೆಂಬ ಕಂಭದಲ್ಲಿ ಗೊಂಬೆಯಂತಿರುವ ಬ್ರಾಹ್ಮಣನು ಚಿದ್ರೂಪಕ್ಕೆ ವಿಲಕ್ಷಣವಾಗಿ ಕಂಡುಬಂದರೂ ಅದು ಭಾವನಾಮಾತ್ರವಾಗಿರುತ್ತದೆ ಹೊರತು ಸತ್ಯವಲ್ಲ. ನೀರಿನಲ್ಲಿ ದ್ರವತ್ವವು. ಆಕಾಶದಲ್ಲಿ ಶೂನ್ಯತ್ವವು. ವಾಯುವಿನಲ್ಲಿ ಚಲನತ್ವವು ಹೇಗೋ; ಹಾಗೇ ಈ ಗಗನಜ ವಿಪ್ರನು ಪರಮಪದದಲ್ಲಿರುವನು. ಈತನಲ್ಲಿ ಭೂತ, ವರ್ತಮಾನ, ಭಾವೀ ಕರ್ಮಗಳು ಯಾವೂ ಇಲ್ಲ. ಆದ್ದರಿಂದ ಸಂಸಾರಕ್ಕೆ ವಶಗತನಾಗಿಲ್ಲ. ಶುಕ್ತಿರಜತದಂತೆ ದೇಹಾದಿ ಪ್ರಪಂಚವು ಮಿಥ್ಯೆಯೆಂದು ನಿರ್ಣಯ ಮಾಡಲು ಮೃತ್ಯುವಿನಿಂದ ಗ್ರಸ್ತನಾಗಲಿಕ್ಕೆ ಕಾರಣನಾಗಲಾರನು. ಆದ್ದರಿಂದ ಸ್ವಯಂಭೂ ರೂಪನಾಗಿರುತ್ತಾನೆ.'' ಎಂದು ನುಡಿದನು. ಅದನ್ನು ಕೇಳಿ ಮೃತ್ಯು "ಸರ್ವ ಜೀವಿಗಳಾದರೂ ಹೀಗೆ ಇರುತ್ತಾರೆ ಅವರು ನಿನ್ನಿಂದ ಹೇಗೆ ಸಂಹಾರಮಾಡಲ್ಪಡುತ್ತಾರೆ" ಎಂದು ಕೇಳಲು; ಯಮನು— "ಯಾವ ಜೀವನು ಪೃಥಿವ್ಯಾದಿ ಪಂಚಭೂತಾತ್ಮಕ ದೇಹವೇ ನಾನೆಂದು ಅಭಿಮಾನ ಮಾಡುತ್ತಾನೋ; ಅಂಥಾ ಮೂಢನನ್ನು ಕುರಿತು ಬ್ರಹ್ಮನು ಸತ್ಯಸಂಕಲ್ಪ ರೂಪಮಾದ ಬುದ್ಧಿಯಿಂದ ಮರಣವಾಗಲಿ ಎಂದು ಕಲ್ಪನೆಯನ್ನು ಮಾಡುತ್ತಾನೆ." ಆಗ್ಯೆ ನಿನ್ನಿಂದ ಆ ಪ್ರಾಣಿಯು ಸಂಹರಿಸುವದಕ್ಕೆ ಶಕ್ಯವಾಗಲ್ಪಡುತ್ತದೆ. ಈ ಆಕಾಶಜವಿಪ್ರನು ಪೃಥಿವ್ಯಾದಿ ಪಂಚಭೂತಗಳ ಸಂಬಂಧಮಾದ ಶರೀರವಿಲ್ಲದವನಾದ್ದರಿಂದ ಇವನಿಗೆ ಆಕಾರವಿಲ್ಲ. ಆದ್ದರಿಂದ ದೃಢವಾದ ಹಗ್ಗದಿಂದ ಆಕಾಶವನ್ನು ಹೇಗೆ ಕಟ್ಟಲಿಕ್ಕೆ ಬರುವದಿಲ್ಲವೋ; ಹಾಗೆ ಗಗನಜವಿಪ್ರನಾದರೂ ನಿನ್ನಿಂದ ಗ್ರಹಿಸಲಿಕ್ಕೆ ಬರಲಾರನು." ಎಂದು ಹೇಳಿದನು. ಈ ವಿಷಯವನ್ನು ಶ್ರವಣ ಮಾಡಿ ಮೃತ್ಯು "ಹೇ ಭಗವನ್! ನಿರ್ವಿಕಾರವಾದ ಬ್ರಹ್ಮದಿಂದ ವಿಕಾರಾತ್ಮಕನಾದ ಪ್ರಜಾಪತಿಯು ಹೇಗೆ ಹುಟ್ಟುತ್ತಾನೆ. ಮತ್ತು ಪೃಥಿವ್ಯಾದಿ ಪಂಚಭೂತಗಳು ಉಂಟೋ? ಅಥವಾ ಇಲ್ಲೋ? ಎಂಬುದನ್ನು ಹೇಳು." ಎಂದು ಪ್ರಶ್ನೆಮಾಡಿದಳು. ಅದಕ್ಕೆ ಯಮರಾಜನು— "ಹೇ ಮೃತ್ಯುವೇ ಕೇಳು, ಪೃಥಿವ್ಯಾದಿಗಳು ಅಸತ್ಯವೆಂದು ಹೇಳಿದ್ದು ಶೂನ್ಯಾಭಿಪ್ರಾಯವಲ್ಲ. ಕಿಂತು ಕಾರ್ಯಕ್ಕೆ ಕಾರಣಕ್ಕಿಂತಲೂ ಬೇರೆ ಸತ್ತಾ ಇಲ್ಲೆಂಬ ಅಭಿಪ್ರಾಯದಿಂದ ಅಸತ್ತು ಎಂದು ಹೇಳಲ್ಪಟ್ಟಿರುತ್ತದೆ. ಪರವಸ್ತುವಿನಿಂದ ಅಜನ ಜನ್ಮೋಕ್ತಿಯಾದರೂ ವಿವರ್ತಾಭಿಪ್ರಾಯದಿಂದ ಹೇಳಿರುತ್ತದೆ. ಹೊರತು ಪರಣಾಮ ಅಭಿಪ್ರಾಯದಿಂದಲ್ಲ. ಮತ್ತು ಪ್ರಜಾಪತಿಯು ಎಂದೂ ಹುಟ್ಟಿಲ್ಲ. ಏನೂ ಆಗಿಲ್ಲ. ಕೇವಲ ವಿಜ್ಞಾನ ಮಾತ್ರ ಸ್ವರೂಪನು ಹೇಗೆ ಇದ್ದನೋ ಹಾಗೇ ಇದ್ದಾನೆ. ಮಹಾಪ್ರಳಯ ಕಾಲದಲ್ಲಾದರೂ ಏನೊಂದೂ ಉಳಿಯುವದಿಲ್ಲ. ಶಾಂತ ಅಜರ ಅನಂತಾತ್ಮಕ ಒಂದು ಬ್ರಹ್ಮವೇ ಉಳಿಯುತ್ತದೆ. ಸೃಷ್ಟಿ ಆರಂಭದಲ್ಲಿ ಯಾವ ವಾಸನಾ ಅದೃಷ್ಟಗಳಿಂದ ಕೂಡಿದ ಜೀವಿಗಳ

CC-0. Jangamwadi Math Collection. Digitized by eGangotri

ಅವಿದ್ಯಾ ಹೇತುವಿನಿಂದ ನಿರುಪಾಧಿಕವಾದ ಪರಬ್ರಹ್ಮನೆದುರಿಗೆ ಪರ್ವತ ಸಮಾನವಾದ ವಿರಾಡ್ರೂಪವಾಗಲಿ ಅಥವಾ ಚತುರ್ಮುಖನಾಗಲಿ ದೇಹವೇ ನಾನೆಂದು ಹೇಳುವದಕ್ಕೆ ಯೋಗ್ಯವಾದ ಒಂದು ಮಹತ್ತರವಾದ ಸ್ಥೂಲರೂಪು ಕಿಂಚಿತ್ ಚಲಿಸುತ್ತದೆ. ಅಂಥಾ ಅವಿದ್ಯೆಯಿಂದಲೇ ಕಾಕತಾಲೀಯ ನ್ಯಾಯದಂತೆ ಆಕಸ್ಮಾತ್ ತೋರುವ ಸ್ವಪ್ನದಂತೆ ನಮ್ಮಗಳಿಗೆಲ್ಲರಿಗೂ ಒಂದು ಭ್ರಾಂತ್ಯಾತ್ಮಕ ಮಿಥ್ಯಾಭೂತಮಾದ ತಮಾಕಾರವು ತೋರುತ್ತದೆ. ಇಂಥಾ ಸೃಷ್ಟಿಯ ಆರಂಭ ಕಾಲದಲ್ಲಿಯೇ ಆಕಾಶದ ಹೊಟ್ಟೆಯಲ್ಲಿ ಈ ಬ್ರಾಹ್ಮಣನು ನಿರ್ವಿಕಲ್ಪ ಚಿದಾಕಾಶ ರೂಪದಿಂದ ಸ್ಥಿತನಾಗಿದ್ದಾನೆ. ಆದ್ದರಿಂದ ಈತನಿಗೆ ದೇಹ, ಕರ್ಮ, ಕರ್ತೃತ್ವ, ವಾಸನಾ ಮೊದಲಾದವುಗಳು ಏನೂ ಇಲ್ಲ. ಕೇವಲ ಚಿದಾಕಾಶ ವಿಜ್ಞಾನಘನರೂಪನಾಗಿರುತ್ತಾನೆ. ಇವನ ಪ್ರಾಕ್ತನ ವಾಸನಾ ಜಾಲವು ಕಿಂಚಿತ್ತಾದರೂ ಇರುವದಿಲ್ಲ. ಕೇವಲ ವ್ಯಾಪಕ ಸ್ವಯಂಪ್ರಕಾಶನಾಗಿರುತ್ತಾನೆ. ಅಧಿಷ್ಠಾನ ತತ್ವಜ್ಞಾನದಿಂದ ಬಹಿರ್ಮುಖವಾದ ಮನಸ್ಸಿನ ಪ್ರವೃತ್ತಿಯು ಶಾಂತವಾಗುತ್ತಿರಲಿಕ್ಕೆ ಈಗ ಕಾಣುವಂತೆಯೂ ಕಾಣಲ್ಪಡುವದಿಲ್ಲ. ಕಿಂತು ಚಿದಾಕಾಶ ಹೇಗುಂಟೋ ಹಾಗೆ ಇದ್ದಾನೆಂದು ನಿಶ್ಚಯ ಮಾಡಶಕ್ಕದ್ದು. ಅವನಲ್ಲಿ ಚೇತನಯುಕ್ತ ಬುದ್ಧಿವೃತ್ತಿಗಳಾದರೂ ಪ್ರವೇಶ ಮಾಡುವದಿಲ್ಲ. ಅಂದುವೇಲೆ ಪೃಥಿವ್ಯಾದಿ ಭೂತಗಳು ಹೇಗೆ ಸಂಭವವಾದವು. ನೀನಾದರು ಅವನನ್ನು ಹೇಗೆ ಆಕ್ರಮಣ ಮಾಡುವಿ ? ಆದ್ದರಿಂದ ಹೇ ಮೃತ್ಯೋ! ನೀನು ಅವನನ್ನು ಹಿಡಿಯುವ ವಿಷಯದಲ್ಲಿ ಯತ್ನವನ್ನು ಮಾಡಬೇಡ. ಯಾವನಿಂದಾದರೂ ಯಾವ ಕಾಲಕ್ಕೂ ಆಕಾಶವು ಹೇಗೆ ಗ್ರಹಣ ಮಾಡುವದಕ್ಕೆ ಬರುವದಿಲ್ಲವೋ; ಹಾಗೇ ಈ ಬ್ರಾಹ್ಮಣನಾದರೂ ಬರುವದಿಲ್ಲ." ಎಂದು ಹೇಳಿದನು. ಮೃತ್ಯುವು ಈ ವಿಷಯವನ್ನು ಕೇಳಿ ಆಶ್ಚರ್ಯವುಳ್ಳದ್ದಾಗಿ ತನ್ನ ನಿಜಮಂದಿರಕ್ಕೆ ಹೊರಟುಹೋಯಿತು. ಇತ್ತ ಶ್ರೀರಾಮಚಂದ್ರನು ವಸಿಷ್ಠರನ್ನು ಕುರಿತು— "ಹೇ ದೇವಪ್ರಪಿತಾಮಹ! ಆಕಾಶಜ ದ್ವಿಜನೆಂಬ ನಾಮಾಂತರದಿಂದ ಪ್ರತಿಪಾದಿಸಲ್ಪಟ್ಟದ್ದು ಬ್ರಹ್ಮವೇ. ಈ ಆಖ್ಯಾನ ತಾತ್ಪರ್ಯವು ಜಗನ್ಮಿಥ್ಯೆಯೆಂದು ಹೇಳಲ್ಪಟ್ಟಂತೆ ಆಯಿತು; ಎಂದು ಶ್ರೀರಾಮನನ್ನಲು ಶ್ರೀವಸಿಷ್ಠ ಗುರುಗಳು— "ಹೇ ರಾಮ! ನಿನಗೋಸ್ಕರ ನನ್ನಿಂದ ಈ ಬ್ರಹ್ಮವೇ ನಿಶ್ಚಯವಾಗಿ ಪ್ರತಿಪಾದನ ಮಾಡಲ್ಪಟ್ಟಿತು. ಇದಕ್ಕೋಸ್ಕರವೆ ಪೂರ್ವದಲ್ಲಿ ಮೃತ್ಯುವು ಯಮನೊಡನೆ ವಾದವನ್ನು ಮಾಡಿರುತ್ತದೆ. ಸರ್ವವನ್ನು ಭಕ್ಷಣ ಮಾಡುವಂಥಾ ಮೃತ್ಯುವು ಮನ್ವಂತರದಲ್ಲಿ ಎಲ್ಲ ಪ್ರಜೆಗಳನ್ನು ಸಂಹರಿಸಿ ಬಲವನ್ನು ಹೊಂದಿ ಬ್ರಹ್ಮವನ್ನಾದರೂ ಸಂಹರಿಸಬೇಕೆಂದು ಪುನಃ ಪುನಃ ಯತ್ನವನ್ನು ಮಾಡುವಂಥಾದ್ದಾಯಿತು. ಆಗ್ಯೆ ಯಮಧರ್ಮರಾಜನಿಂದ ಚನ್ನಾಗಿ ಬೋಧಿಸಲ್ಪಟ್ಟಿತು. ಏನಂದರೆ? ಬ್ರಹ್ಮವು ಅಂದರೆ ಮಹಾಕಾಶ ಶರೀರವುಳ್ಳದ್ದು. ಹೇ ಮೃತ್ಯುವೇ ನಿನ್ನಿಂದ ಹೇಗೆ ಆಕ್ರಮಿಸಲ್ಪ

CC-0. Jangamwadi Math Collection. Digitized by eGangotri

ಟ್ಟೀತು ? ಪೃಥಿವ್ಯಾದಿ ಭೂತಗಳಿಂದ ರಚಿಸಲ್ಪಟ್ಟ ಆಕಾರವಾದ ಶರೀರವುಳ್ಳವನಲ್ಲ. ಆದ್ದರಿಂದ ಅವನಿಗೆ ಕಾರಣತ್ವವೂ ಕಾರ್ಯತ್ವವೂ ಎರಡೂ ಇಲ್ಲ ಕೇವಲ ಸ್ವಯಂಭೂ ಆಗಿರುತ್ತಾನೆ. ಕೇವಲ ಪರಮಾತ್ಮನಲ್ಲಿ ದೃಶ್ಯ ದ್ರಷ್ಟ್ರಾದಿಗಳೇನೂ ಇಲ್ಲ. ಸ್ವಯಂ ಚಿದ್ರೂಪನೇ ಆಗಿರುತ್ತಾನೆ ಹೀಗಿದ್ದರೂ ಕೂಡಾ ಇವನು ಸೃಷ್ಟಿಕರ್ತಾ, ಸ್ವಯಂಭೂ, ಬ್ರಹ್ಮ ಎಂದು ತೋರುತ್ತಾನೆ. ಸಂಕಲ್ಪ ಮಾತ್ರ ಈ ಮನವೇ ಬ್ರಹ್ಮವೆಂದು ಹೇಳಲ್ಪಡುತ್ತದೆ. ಚಿತ್ರದಲ್ಲಿ ಬರೆಯಲ್ಪಟ್ಟ ಗೊಂಬೆಯು ನಿರ್ದೇಹವಾಗಿದ್ದರೂ ದೇಹವುಳ್ಳಂತೆ ಹೇಗೆ ಕಂಡುಬರುತ್ತದೆಯೋ ಹಾಗೇ ಸ್ವಚ್ಛವಾದ ಚಿದಾಕಾಶದ ಪ್ರತಿಬಿಂಬವನ್ನು ಗ್ರಹಿಸುವಂಥಾ ಮನಸ್ಸಾದರೂ ಪ್ರಜಾಪತಿಯ ಶರೀರಾಕಾರವನ್ನು ಹೊಂದುತ್ತದೆ. ಆದಿ ಮಧ್ಯಗಳಿಲ್ಲದಂಥಾ ಅನಂತ ಕೇವಲ ಚಿದ್ವ್ಯೋಮವೇ ಮನೋಪಾಧಿಯಿಂದ ಆಕಾರವುಳ್ಳಂತೆ ಪುರುಷನಂತೆ ಬ್ರಹ್ಮ, ಸ್ವಯಂಭೂ ಎಂದು ತೋರುತ್ತದೆ. ವಸ್ತುತಃ ಅವನಿಗೆ ವಂಧ್ಯಾಪುತ್ರನಂತೆ ಶರೀರವೇ ಇಲ್ಲ'' ಎಂದು ಹೇಳಿದನು.

ಗಗನಜ ವಿಪ್ರನ ಕಥೆಯ ತಾತ್ಪರ್ಯವನ್ನು ವಿಚಾರ ಮಾಡುತ್ತಿರಲಿಕ್ಕೆ ಹೇಗೆ ಶರೀರಗಳು ಸಿದ್ಧವಾಗಲಿಲ್ಲೋ; ಹಾಗೇ ನಿನ್ನಲ್ಲಿ ಜಗತ್ತಾದರೂ ಸಿದ್ಧಿಸುವದಿಲ್ಲ ಅಂದರೆ, ಅಧಿಷ್ಠಾನದಲ್ಲಿ ಅಧ್ಯಸ್ತಗಳಾದ ಶರೀರಗಳು ಅಧಿಷ್ಠಾನವನ್ನು ಹೇಗೆ ಬಾಧೆಪಡಿಸಲಾರವೋ; ಹಾಗೇ ನಿನ್ನಲ್ಲಿ ಅಧ್ಯಾಸವಾದ ಜಗತ್ತು ನಿನಗೆ ಬಾಧಾಪಡಿಸಲಾರದು ಎಂಬ ತಾತ್ಪರ್ಯವು. ಮತ್ತು ಇದೇ ವಿಷಯವನ್ನು ಅನೇಕ ದೃಷ್ಟಾಂತಗಳಿಂದಾದರೂ ಹೇಳುತ್ತಾರೆ. ಆಕಾಶದಲ್ಲಿ ಮೇಘಗಳು ಗಮನಾಗಮನವನ್ನು ಮಾಡಿದಾಗ್ಯಾದರೂ ಆಕಾಶಕ್ಕೆ ಹೇಗೆ ಹಾನಿ ಇಲ್ಲವೋ; ಹಾಗೇ ವ್ಯಾಪಕರೂಪನಾದ ನಿನ್ನಲ್ಲಿ ಜಗತ್ತಿದ್ದರೂ ಅಸಂಗನಾದ ನಿನಗೆ ಬಾಧೆಯಿಲ್ಲ. ರಜ್ಜುವಿನಲ್ಲಿ ಕಲ್ಪಿತ ಸರ್ಪವಿದ್ದರೂ ಆ ರಜ್ಜುವಿಗೆ ಹೇಗೆ ಬಾಧೆ ಇಲ್ಲವೋ ಹಾಗೇ ನಿರ್ವಿಕಾರ ಸ್ವರೂಪನಾದ ನಿನ್ನಲ್ಲಿ ಭ್ರಾಂತ್ಯಾತ್ಮಕ ಜಗತ್ತು ತೋರಿದರೂ ನಿನಗೆ ಹಾನಿಯನ್ನುಂಟುಮಾಡಲಾರದು. ಇಲ್ಲಿ ವಿಚಾರವನ್ನು ಮಾಡಿ ನೋಡಿದರೆ, ಹೇ ಶಿಷ್ಯನೇ! ಮನಸ್ಸಿನ ವಿಕಾರಾತ್ಮಕವಾದ ಸಕಲ ಜೀವಿಗಳಿಗೆ ಮೋಹವನ್ನುಂಟುಮಾಡುವಂಥಾ ಮನಸ್ಸಿನ ಸ್ಥಿತಿಯನ್ನು ಈ ಪ್ರಕಾರ ನಿನಗೆ ಪ್ರತಿಪಾದನ ಮಾಡಿದೆವು. ಆದರೆ ಈ ಮನಸ್ಸಿನ ಸಂಬಂಧವೂ ಮತ್ತು ಇದರ ಕರ್ತೃತ್ವವೂ ನಿನಗೆ ಎಳ್ಳಷ್ಟಾದರೂ ಇಲ್ಲ. ಯಾಕಂದರೆ; ನೀನು ಅಸಂಗ ಚಿನ್ಮಾತ್ರ ನಿರ್ವಿಕಾರ ಸ್ವರೂಪನಾಗಿರುತ್ತೀ. ಎಂದು ಗುರುಗಳುಪದೇಶಿಸಲು; ಶಿಷ್ಯನು ಕೇಳಿ ಚಕಿತ ಹೃದಯನಾಗಿ ಭಯಭಕ್ತಿಗಳಿಂದೊಡಗೂಡಿ ಹೇ ಗುರುವೇ! ಈ ಮನಸ್ಸಿನ ವಿಕಾರತ್ವವನ್ನು ಹೇಳಿದಿರಿ. ಆದರೆ, ಇದರ ಸ್ವರೂಪವನ್ನು ತಿಳಿಸಬೇಕೆಂದು ವಿನಯದಿಂದ ಬೇಡಿಕೊಂಡನು.

CC-0. Jangamwadi Math Collection. Digitized by eGangotri

ಬಳಿಕ; ಮನಸ್ಸಿನ ಸ್ವರೂಪವು ಚಿಂತನಾತ್ಮಕವಾಗಿರುತ್ತದೆಂದೂ ಸಂಕಲ್ಪವೇ ಮನಸ್ಸು; ಮನಸ್ಸೇ ಸಂಕಲ್ಪವೆಂದೂ ಅದಕ್ಕೆ ಅನೇಕ ನಾಮುಗಳು ಕೊಡಲ್ಪಟ್ಟಿರುತ್ತವೆಂದೂ ಪ್ರತಿಪಾದನಮಾಡುತ್ತಾರೆ.

ಪೊಸತಿದು ಸುತ ಕೇಳ್ವೈ ಮನವೆಂದು।
ಪೆಸರುಗೊಳಲು ಬಾರದು ಇನಿತೆಂದು॥
ಊಹಿಸಿ ತೋರ್ಪೊಡೆ ಕುರುಹೊಂದಿಲ್ಲ।
ಆಹಾ ಬರಿಯ ಬಯಲೆ ಸತ್ತಲ್ಲ॥
ಸೂಂಟಿಸಿ ಜಗದೊಳಗೊಂದಾನೊಂದು।
ಉಂಟೆಂದಾಗಳೆ ಮೇಣಿಲ್ಲೆಂದು॥
ಆವಾವ ಪದಾರ್ಥಂಗಳ ರೂಪು।
ಭಾವಿಸುತಿಹುದದು ಮನವೇ ರೂಪು॥
ಮನವೆಂದೊಡೆ ಸಂಕಲ್ಪವದೈಸೆ।
ತನುಜನೆ ಸಂಕಲ್ಪವೆ ಮನವೈಸೆ॥
ಬಗೆಯುಲು ಪೆಸರೆರಡೊಂದೇ ವಡಲು।
ಜಗವೆಲ್ಲಂ ಸಂಕಲ್ಪದ ವಡಲು॥ ॥೧॥
ಚಿತ್ತೊಂವೇ ಮಾಯಾಮಯವೆಂದು।
ಮತ್ತಮವಿದ್ಯಾ ಸಂಸ್ಕೃತಿಯೆಂದು॥
ತಿಳಿ ಬಂಧಂ ಮೋಹಂ ತಮವೆಂದು।
ಘಳಿಲನೆ ಸಂಕಲ್ಪದ ಪೆಸರೆಂದು॥

ಟೀಕಾ:— ಸುತ=ಎಲೈ ಮಗನೇ! ಪೊಸತಿದು=(ನೀನು ಕೇಳಿದ ಪ್ರಶ್ನೆಯು) ನವೀನವಾದದ್ದು. ಕೇಳ್ವೈ=ಏಕಾಗ್ರಚಿತ್ತದಿಂದಾಲಿಸು, ಮನವೆಂದೂ=ಮನಸ್ಸೆಂದೂ, ಇನಿತೆಂದು=ಇಷ್ಟೇಯೆಂದೂ, ಪೆಸರುಗೊಳಲು ಬಾರದು=ಹೆಸರು ತಕ್ಕೊಳ್ಳಲಿಕ್ಕೆ ಬರಲಾರದು,ಊಹಿಸಿ=ಅನುಮಾನಿಸಿ, ತೋರ್ಪೊಡೆ=ನೋಡಿದರೆ, ಕುರುಹು, ಚಿನ್ಹವು. ಒಂದಿಲ್ಲ=ಒಂದಾದರೂ ಇರುವದಿಲ್ಲ. ಆಹಾ!=ಇದೇನು ಆಶ್ಚರ್ಯ! ಬರಿಯಬಯಲೆ=ನಿರಾಕಾಶವೇ, ಸತ್ತಲ್ಲ=ಸದ್ರೂಪವಲ್ಲ,ಜಗದೊಳಗೆ=ಜಗತ್ತಿನಲ್ಲಿ, ಒಂದಾನೊಂದು=ಯಾವದಾದರೊಂದನ್ನು, ಸೂಂಟಿಸಿ=ಗುರ್ತಿಸಿ, ಉಂಟೆಂದಾಗಳೆ=ಇರುತ್ತದೆಂದು ಅಂದಕೂಡಲೇ, ಮೇಣ್=ಮತ್ತು, ಇಲ್ಲೆಂದು=ಇರುವದಿಲ್ಲೆಂದು, ಆವಾವ=ಯಾವ ಯಾವ, ಪದಾರ್ಥಗಳ=ವಸ್ತುಗಳ, ರೂಪು=ಆಕಾರವನ್ನು,ಭಾವಿಸುತಿಹುದು=ಚಿಂತನೆಮಾಡುತ್ತಿರುವದು,ಅದು=ಅದೇ, ಮನವೇ ರೂಪು=ಮನಸ್ಸಿನ ಸ್ವರೂಪು, ತನುಜನೆ=ಎಲೈ ಮಗನೇ!, ಮನವೆಂದೊಡೆ=ಮನಸ್ಸು ಅಂದರೆ, ಸಂಕಲ್ಪವದೈಸೆ = ಮೊದಲನೆಯ ಸಂಕಲ್ಪವಾಗುವದು, ಸಂಕಲ್ಪವೆ=ಸಂಕಲ್ಪವೇ, ಮನವೈಸೆ=ಮನಸ್ಸಾಗುವದು, ಬಗೆಯುಲು=ವಿಚಾರ ಮಾಡಲು, ಪೆಸರೆರಡು=ಹೆಸರುಗಳು ಎರಡು, ಒಂದೇವಡಲು=ಒಂದೇ ಶರೀರವು, ಜಗವೆಲ್ಲ=ಸರ್ವಜಗತ್ತು, ಸಂಕಲ್ಪದ = ಮನಸ್ಸಿನ, ಒಡಲು= ಶರೀರವು,

CC-0. Jangamwadi Math Collection. Digitized by eGangotri

ಚಿತ್ತೊಂದೇ=ಈ ಮನಸ್ಸೊಂದೇ, ಮಾಯಾಮಯವೆಂದು=ಮಾಯೆಯ ಸ್ವರೂಪ ವೆಂದು, ಮತ್ತಂ=ಅನಂತರ, ಅವಿದ್ಯಾ=ಆವರಣವೆಂದೂ, ಸಂಸೃತಿಯೆಂದೂ= ಸಂಸಾರ ರೂಪವೆಂದು,ಬಂಧಂ=ಬಂಧವೆಂದೂ, ಮೋಹಂ=ಮೋಹಾತ್ಮಕವೆಂದೂ ತಮ ವೆಂದೂ=ಅಂಧಕಾರವೆಂದೂ, ಘಳಲನೆ=ಬೇಗನೆ, ಸಂಕಲ್ಪದ=ಮನಸ್ಸಿನ, ಪೆಸರೆಂದು=ಹೆಸರೆಂದು, ತಿಳಿ=ನಿಶ್ಚಯಮಾಡು.

ತಾತ್ಪರ್ಯ:—ಶಿಷ್ಯನು ಗುರುಗಳನ್ನು ಕುರಿತು "ಮನಸ್ಸಿನ ಸ್ವರೂಪ ವನ್ನು ಹೇಳಬೇಕು ಎಂದು ಪ್ರಶ್ನೆಮಾಡಿದನು. ಯಾಕಂದರೆ ಗುರುಗಳು ಮನ ಸ್ಸಿಗೆ ಯಾವ ರೂಪವನ್ನು ಹೇಳುತ್ತಾರೋ ಅದೇ ರೂಪು ಜಗತ್ತಿಗಾದರೂ ಇರು ತ್ತದೆ. ಅಂದಮೇಲೆ; ಜಗತ್ತು ನಿಸ್ತತ್ವ ರೂಪು ಆಗುವದಿಲ್ಲೆಂಬ ಅಭಿಪ್ರಾಯದಿಂದ ಪ್ರಶ್ನೆ ಮಾಡಿದ್ದಾನೆ. ಆಗ್ಯೆ ಗುರುಗಳು "ಹೇ ಶಿಷ್ಯನೇ, ಕೇಳು. ನಿನ್ನ ಪ್ರಶ್ನೆಯು ಹೊಸದಾಗಿರುತ್ತದೆ. ನಾಮಕ್ಕಿಂತಲೂ ಬೇರೆ ಆಕಾಶಕ್ಕೆ ಹೇಗೆ ರೂಪ ಇಲ್ಲವೋ; ಹಾಗೇ ಈ ಮನಸ್ಸಿಗಾದರೂ ರೂಪು ಇರುವುದಿಲ್ಲ. ಇಷ್ಟೇ ಅಲ್ಲ, ಇದಕ್ಕೆ ಹೆಸರು ಕೂಡಾ ಇರುವದಿಲ್ಲ. ಒಳ ಹೊರಗೆ ವಿಚಾರ ಮಾಡಿ ನೋಡು ತ್ತಿರಲು ಗುರ್ತುಗಳೇನೂ ತೋರುವದಿಲ್ಲ. ಸದ್ರೂಪವೂ ಅಲ್ಲ. ಕಿಂತು, ಆಕಾಶ ದಂತೆ ಎಲ್ಲ ಕಡೆಗೂ ನಿರಾಕಾರವಾಗಿರುತ್ತದೆ. ಮೃಗತೃಷ್ಣೆಯ ಜಲದಂತೆ, ನಮ್ಮಿಂದುತ್ಪನ್ನವಾದದ್ದು. ಮತ್ತು ಸಂಕಲ್ಪದ ಕ್ಷಣಕಾಲದಲ್ಲಿಯೇ ದ್ವಿತೀಯ ಚಂದ್ರನಂತೆ ಇದರ ರೂಪು ಭ್ರಮ ಮಾತ್ರವಾಗಿರುತ್ತದೆ. ಜಗತ್ತಿನೊಳಗಿನ ಸತ್ ಅಥವಾ ಅಸತ್ ಅಂದರೆ, ಪ್ರತ್ಯಕ್ಷ ಮತ್ತು ಪರೋಕ್ಷ ಯಾವ ಯಾವ ಪದಾರ್ಥ ಗಳ ರೂಪಗಳನ್ನು ಭಾವಿಸುತ್ತಿರುವದೋ; ಅಂದರೆ ಆಯಾಯ ಪದಾರ್ಥಗಳ ಆಕಾರವಾಗುತ್ತಿರುವದೋ; ಅದೇ ಮನಸ್ಸೆಂದು ಹೇಳಿಸಿಕೊಳ್ಳಲ್ಪಡುತ್ತದೆ. ಹೊರತು ಇದಕ್ಕಿಂತಲೂ ಬೇರೆ ಯಾವದೂ ಇಲ್ಲ. ದ್ರವತ್ವಕ್ಕಿಂತ ಜಲವು ಚಲನ ಕ್ಕಿಂತ ವಾಯು, ಹೇಗೆ ಬೇರೆಯಾಗಿರುವದಿಲ್ಲವೋ; ಹಾಗೇ ಸಂಕಲ್ಪಕ್ಕಿಂತಲೂ ಮನಸ್ಸು; ಮನಸ್ಸಿಗಿಂತಲೂ ಸಂಕಲ್ಪ ಬೇರೆಯಾಗಿರುವದಿಲ್ಲ. ಸಂಕಲ್ಪ ಮತ್ತು ಮನಸ್ಸು ಹೀಗೆಂದು ಎರಡು ಹೆಸರುಗಳಿರುತ್ತವೆ ಹೊರತು.ಸ್ವರೂಪವೇನೂ ಬೇರೆ ಯಾಗಿರುವದಿಲ್ಲ. ಸಂಕಲ್ಪ ಮೂಲಕ ಜಗತ್ತು ತೋರುವದರಿಂದ ಜಗತ್ತೆಲ್ಲವು ಸಂಕಲ್ಪಮಯವಾಗಿರುತ್ತದೆ. ಆದ್ದರಿಂದಲೇ ಜ್ಞಾನಿಗಳು ಸಂಕಲ್ಪರೂಪ ದೃಶ್ಯ ಜಗತ್ತಿಗೆ ಮಾಯಾಮಯ, ಅವಿದ್ಯಾ, ಸಂಸೃತಿ, ಚಿತ್ತ, ಮನಃ, ಬಂಧ, ಮಲ, ತಮಗಳೆಂಬ ಪರ್ಯಾಯ ನಾಮಗಳೆಂದು ತಿಳಿಯುತ್ತಾರೆ. ಈ ಅರ್ಥವು ಯೋಗ ವಾಸಿಷ್ಠ ಉತ್ಪತ್ತಿಪ್ರಕರಣ ನಾಲ್ಕನೇಸರ್ಗದಲ್ಲಿ ಹೇಳಲಟ್ಟಿರುತ್ತದೆ. ಹೇಗಂದರೆ:—

श्री राम उवाच.

भगवन्मनसो रूपं कीदृशं वद मे स्फुटम् ।
यस्मान्तेनयमाखिला तन्यते लोकमञ्जरी ॥ १ ॥

CC-0. Jangamwadi Math Collection. Digitized by eGangotri

श्री वासिष्ठ उवाच.

रामास्य मनसो रूपं न किंचिदपि दृश्यतेः ।
नाममात्रादृते व्योम्ना यथा शून्यजडाकृतेः ॥ २ ॥
न बाह्ये नापिहृदये सद्रपं विद्यते मनः ।
सर्वत्रैत्र स्थितं चैतद्विद्धि राम यथा नभः ॥ ३ ॥
इदमस्मात्समुत्पन्नं मृगतृष्णाम्बुसानिभम् ।
रूपं तु क्षणसंकल्पद्वितयिन्दुभ्रमोपमम् ॥ ४ ॥
मध्ये यदेतदर्थस्य प्रतिभानं प्रथां गतम् ।
सतो वाप्यसतो वापि तन्मनो विद्धि नेतरत् ॥ ५ ॥
यदर्थ प्रतिभानं तन्मन इत्यभिधीयते ।
अन्यत्र किंचिद्प्यास्ति मनो नाम कदाचन ॥ ६ ॥
संकल्पनं मनो विद्धि सकल्पात्तन्न भिद्यते ।
यथा द्रवत्वात्सालिलं तथा स्पंदो यथानिलात् ॥ ७ ॥
यत्र संकल्पनं तत्र तन्मनोऽङ्गं तथास्थितम् ।
संकल्पमनसी भिन्ने न कदाचन केचन ॥ ८ ॥
अविद्या संसृतिश्चित्तं मनो बन्धो मलस्तमः ।
इति पर्यायनामानि दृश्यस्य विदुरुत्तमाः ॥ ९ ॥

ಈ ಪ್ರಕಾರ ಶ್ರೀ ವಸಿಷ್ಠರು ಶ್ರೀರಾಮಚಂದ್ರನಿಗೆ ಮನಸ್ಸಿನ ರೂಪವನ್ನು ಬೋಧಿಸಿರುತ್ತಾರೆ.

ಕಂದ॥ ಗತಿಯೈದನೆಯದಿದಕ್ಕತಿ।
ಹಿತವೆನಿಸಿಪ ನಿರೂಪಣಂಗಳೇಕಾದಶವಂ॥
ತತಿಶಯ ಮಾಗಿರೆ ತಿಳಿಯ।
ಲ್ಪ್ರತಿಪಾದಿತವಿಲ್ಲಿ ವಿಶ್ವರಚನಾಭೇದಂ॥

ಟೀಕಾ:-ಗತಿ=ಸಂಧಿಯು, ಐದನೆಯದು=ಐದನೆಯದು, ಇದಕೆ=ಈ ಗತಿಗೆ ನಿರೂಪಣಂಗಳು, ಅತಿಶಯವಾಗಿರೆ=ಆಧಿಕ್ಯದಾಗಿದ್ದರೂ, ಅಂತು=ಒಟ್ಟಿಗೆ, ಏಕಾದಶವು=ಹನ್ನೊಂದು, ತಿಳಿಯಲ್=ವಿಚಾರಮಾಡಲಾಗಿ, ವಿಶ್ವ=ಜಗತ್ತಿನ, ರಚನಾ = ಹುಟ್ಟುವಿಕೆಯು, ಭೇದಂ = ಭೇದವು, ಇಲ್ಲಿ = ಈ ಗತಿಯಲ್ಲಿ, ಪ್ರತಿಪಾದಿತವು=ಹೇಳಲ್ಪಟ್ಟಿತು.

ಅಂತು ಗತಿ ೫ ಕ್ಕಂ ನಿರೂಪಣೆ ೫೫ ಕ್ಕಂ ಚರಣ ೬೮ ಕ್ಕಂ ಮಂಗಳವಾಸ್ತು

CC-0. Jangamwadi Math Collection. Digitized by eGangotri

ಶ್ರೀ ಶಂಭುಲಿಂಗಾಯನಮಃ

ಷಷ್ಠಮ ಗತಿ

ಸೂತ್ರ॥ ಅನುನಯದಿಂದೀ ತೆರದಿಂ।
ಮನದ ವಿಕಲ್ಪವನೆ ಪೇಳ್ದು ಬಳಿಕಂತದರಿಂ॥
ಜನಿಸಿದ ಸಂಸಾರದ ಹದ।
ನಿನಿತೆಂಬುದ ನೀಗಳರಿವತೆರದಿಂದುಸುರ್ವೆಂ॥

ಟೀಕಾ:— ಅನುನಯದಿಂದ=ಸಂತೋಷದಿಂದ, ಈ ತೆರದಿಂ=ಈ ಪ್ರಕಾರದಿಂದ, ಮನದ=ಮನಸ್ಸಿನ, ವಿಕಲ್ಪವನೆ=ವಿಕಲ್ಪವನ್ನು, ಪೇಳ್ದು=ಹೇಳಿ, ಬಳಿಕ=ಅನಂತರ, ಅಂತದರಿಂ=ಆ ವಿಕಲ್ಪನೆಯಿಂದ, ಜನಿಸಿದ=ಹುಟ್ಟಿದ, ಸಂಸಾರದ=ಜನನರೂಪ ಸಂಸಾರದ, ಹದನು=ರೀತಿಯನ್ನು, ಇನಿತೆಂಬುವನು = ಇಷ್ಟೇ ಉಂಟೆಂಬುದನ್ನು, ಈಗಳ್=ವರ್ತಮಾನಕಾಲದಲ್ಲಿ, ಅರಿವತೆರದಿಂ=ತಿಳಿಯುವ ಹಾಗೆ, ಉಸುರ್ವೆಂ=ಹೇಳುವೆನು.

ತಾತ್ಪರ್ಯ:— ಪೂರ್ವಗತಿಯಲ್ಲಿ ವಿಚಿತ್ರವಾದ ಜಗತ್ತೆಲ್ಲವು ಮನಸ್ಸಿನ ಕಲ್ಪನಾತ್ಮಕವೆಂದು ಹೇಳಿ; ಈಗ ಈ ಗತಿಯಲ್ಲಿ ಸಂಸಾರದ ರೀತಿಯು ಎಷ್ಟು ಹೇಗಿರುವದೆಂಬುದನ್ನು ಹೇಳುತ್ತೇವೆ ಎಂದು ಪ್ರತಿಜ್ಞಾ ಮಾಡುತ್ತಾರೆ. ಅಂದರೆ "ಮುನ್ನಿನ ಪರಿಭವಯೆಂತಾಯ್ತೆಂದು" ಕೇಳಿದ ಪ್ರಶ್ನಕ್ಕೆ ಈ ಗತಿಯಲ್ಲಿ ಸಂಸಾರ ಸ್ವರೂಪವನ್ನು ವರ್ಣಿಸುತ್ತಾ ಉತ್ತರವನ್ನು ಕೊಡುತ್ತಾರೆಂಬ ತಾತ್ಪರ್ಯವು.

ಬಳಿಕ; ಈಶ್ವರನು ಅವಿದ್ಯೋಪಾಧಿಯಿಂದ ಜೀವನೆನಿಸುವನೆಂದು ದೃಷ್ಟಾಂತಪೂರ್ವಕ ಪ್ರತಿಪಾದನ ಮಾಡುತ್ತಾರೆ.

ಚಿತ್ತೇ ಸಾಕ್ಷಾದೀಶನು ಕಂಡ್ಯಾ।
ಮತ್ತಾ ಈಶನೆ ಜೀವನು ಕಂಡ್ಯಾ॥
ಈಶ್ವರತೆಯೊಳಿಲ್ಲದ ಸಂಸಾರ।
ಶಾಶ್ವತ ದುಃಖವನುಃಣುತಿಹ ಘೋರ॥
ಘನತರ ಕರ್ಮಂಗಳ ಕಾಲಾಟ।
ಜನನ ಜರಾ ಮರಣದ ಕೊರಚಾಟ॥
ದೇವರಿಗೀಪರಿ ಬಂದಪುದೆಂದು।
ಭಾಪಿಸಿ ಕೇಳಿದ ಶಿಷ್ಯನಿಗಂದು॥
ಗುರುವೆಂದಂ ದುರ್ನೀತಿಗಳಿಂದ।
ವರವಿಪ್ರನು ಶೂದ್ರತೆ ಪಡೆದಂದ॥
ಈಶನು ತಾನೇ ಸಂಕೋಚತೆಯು।
ಲೇಶದಿ ಬಗೆವಡೆದನು ಜೀವತೆಯ ॥೧॥

CC-0. Jangamwadi Math Collection. Digitized by eGangotri

ಟೀಕಾ:— ಚಿತ್ತೇ=ಚಿದ್ರೂಪಬ್ರಹ್ಮವೇ, ಸಾಕ್ಷಾತ್=ಅಪರೋಕ್ಷಮಾಗಿ, ಈಶನು=ಪರಮೇಶ್ವರನು ಕಂಡ್ಯಾ=ನೋಡಿದಿಯಾ, ಮತ್ತೆ=ಅನಂತರ, ಆ ಈಶನೇ= ಆ ಪರಮಾತ್ಮನೇ, ಜೀವನು=ಜೀವಾತ್ಮನು, ಕಂಡ್ಯಾ=ನೋಡಿದಿಯಾ, ಈಶ್ವರತೆ ಯೊಳ್=ಈಶ್ವರತನದಲ್ಲಿ, ಇಲ್ಲದ=ಅಭಾವವಾದ, ಸಂಸಾರ=ಜನನಮರಣರೂಪ ಸಂಸಾರದ, ಶಾಶ್ವತ=ಯಾವಾಗಲೂ ತೋರುವ, ದುಃಖವನು=ಸಂಕಟವನ್ನು, ಉಣುತಿಹನು=ಅನುಭೋಗಿಸುತ್ತಿರುವನು, ಘೋರ=ಭಯಂಕರಗಳಾದ, ಘನತರ= ಮಹತ್ತರಗಳಾದ, ಕರ್ಮಂಗಳ=ಪುಣ್ಯಪಾಪರೂಪ ಕರ್ಮಗಳ, ಕಾಲಾಟ= ಸುಳಿದಾಟವು, ಜನನ ಜರಾ ಮರಣದ=ಹುಟ್ಟು ಮುಪ್ಪು ಮರಣಗಳ, ಕೊರ ಚಾಟ=ತಿಕ್ಕಾಟವು, ದೇವರಿಗೆ=ಪರಮಾತ್ಮನಿಗೆ, ಈಪರಿ=ಈರೀತಿ, ಬಂದವುದು= ಪ್ರಾಪ್ತಿಯಾಗಿರುವದು, ಎಂದಂ=ಹೀಗೆಂದು, ಭಾವಿಸಿ=ತಿಳಕೊಂಡು, ಕೇಳಿದ= ಪ್ರಶ್ನೆಮಾಡಿದ, ಶಿಷ್ಯನಿಗೆ=ಮಗನಿಗೆ, ಅಂದು=ಆ ಹೊತ್ತಿನಲ್ಲಿ, ಗುರುವು= ಉಪದೇಶಕರ್ತನು, ಎಂದಂ=ನುಡಿದನು, ದುರ್ನೀತಿಗಳಿಂದ=ಕೆಟ್ಟ ನಡತೆಗಳಿಂದ, ವರವಿಪ್ರನು=ಶ್ರೇಷ್ಠ ಬ್ರಾಹ್ಮಣನು, ಶೂದ್ರತೆ=ಶೂದ್ರತ್ವವನ್ನು, ವಡೆದಂದ= ಹೊಂದಿದಂತೆ, ಈಶನು=ಪರಮಾತ್ಮನು, ತಾನೆ=ಸ್ವಯಂ, ಸಂಕೋಚತೆಯ= ಪರಿಚ್ಛಿನ್ನತ್ವದ, ಲೇಶದಿ=ಸ್ವಲ್ಪದಿಂದ, ಜೀವತೆಯ=ಜೀವತ್ವದ, ಬಗೆವಡೆದನು= ಭಾವನೆಯನ್ನು ಹೊಂದಿದನು.

ತಾತ್ಪರ್ಯ:— ಸಚ್ಚಿದಾನಂದಸ್ವರೂಪವಾದ ಪರಬ್ರಹ್ಮವೇ ಅಚಿಂತ್ಯ ಅನಂತ ಶಕ್ತಿಯುಕ್ತವಾದ ಮಾಯೋಪಾಧಿಯಿಂದ ಈಶ್ವರನೆಂದು ಹೇಳಿಸಿ ಕೊಂಡಿತು. ಬಳಿಕ, ಮಾಯೋಪಾಧಿಯಾದ ಪರಮಾತ್ಮನೇ "ಜೀವೇನಾತ್ಮಾನು ಪ್ರವಿಶ್ಯ" ದೇಹಗಳಲ್ಲಿ ಜೀವರೂಪದಿಂದ ಪ್ರವೇಶಮಾಡುತ್ತೇನೆಂದು ಹೇಳಿರುವದ ರಿಂದ, ಆ ಈಶ್ವರನೇ ಜೀವನಾದಂತಾಯಿತು. ಆದರೆ ಈಶ್ವರತ್ವದಲ್ಲಿ ಸಂಸಾರ ಸಂಬಂಧವಾದ ಸುಖದುಃಖಗಳ ಭೋಕ್ತೃತ್ವವು ಪುಣ್ಯಪಾಪ ಕರ್ಮಗಳ ಸುಳಿ ದಾಟವು ಜನ್ಮಜರಾಮರಣಾದಿಗಳ ಉಪದ್ರವಗಳು ; ಯಾವೂ ಇಲ್ಲ. ಪರಂತು, ಅದೇ ಈಶ್ವರನು ಜೀವದೆಶೆಯಲ್ಲಿ ಹೇಳಲ್ಪಟ್ಟ ಉಪದ್ರವಗಳನ್ನೆಲ್ಲಾ ಅನುಭವಿಸು ತ್ತಾನೆ. ಆದ್ದರಿಂದ ಈಶ್ವರನಿಗೆ ಈ ಪ್ರಕಾರದ ಸಂಸಾರವು ಒಮ್ಮಿಂದೊಮ್ಮಿಲೇ ಹೇಗೆ ಪ್ರಾಪ್ತವಾಯಿತು? ಎಂದು ಶಿಷ್ಯನು ಪ್ರಶ್ನೆ ಮಾಡುತ್ತಿರಲು; ಆಗ್ಯೆ ಗುರು ಗಳು ಉತ್ತರವನ್ನು ಹೇಳಿದರು. ಏನಂದರೆ, ವೇದಾಧ್ಯಯನವನ್ನು ಮಾಡಿದ ಅಜಾಮಿಳನಾಮಕ ಬ್ರಾಹ್ಮಣನು ದರ್ಭಾದಿಗಳನ್ನು ತರುವದಕ್ಕೆ ಅರಣ್ಯಕ್ಕೆ ಹೋಗಿರಲು, ಅಲ್ಲಿ ಚಂಡಾಲ ಸ್ತ್ರೀಯಳು ಪರಪುರುಷನೊಡನೆ ಕ್ರೀಡಿಸುತ್ತಿದ್ದ ದ್ದನ್ನು ಕಂಡು, ತಾನೂ ಭ್ರಾಂತನಾಗಿ ಅವಳೊಡನೆ ಕ್ರೀಡೆಮಾಡಹತ್ತಿದನು. ಬಳಿಕ ಮದ್ಯಪಾನ, ಮಾಂಸಭಕ್ಷಣ ಇತ್ಯೇವಮಾದಿ ಕೆಟ್ಟ ನಡತೆಗಳಿಂದ

CC-0. Jangamwadi Math Collection. Digitized by eGangotri

ಶೂದ್ರತ್ವವನ್ನು ಹೇಗೆ ಹೊಂದಿದನೋ; ಹಾಗೇ ಪರಮಾತ್ಮನಾದರೂ ಅವಿದ್ಯಾ ಅಥವಾ ಅಂತಃಕರಣ ಇವುಗಳ ಉಪಾಧಿಯ ಪರಿಚ್ಛಿನ್ನತ್ವದಿಂದ ಜೀವತ್ವವನ್ನು ಹೊಂದಿರುತ್ತಾನೆ. ಅಂದರೆ,ಹೀಗೆ ಹೇಳೋಣದರಿಂದ ಜೀವನು ಪರಬ್ರಹ್ಮದ ಅಂಶನೋ ಅಥವಾ ಕಾರ್ಯನೋ? ಅಥವಾ ಆ ಬ್ರಹ್ಮನೋ? ಒಂದು ವೇಳೆ ಬ್ರಹ್ಮವೇ ಜೀವರೂಪನಾಗಿರುವನೆಂದು ಹೇಳಿದರೆ, ಪರಿಣಾಮದಿಂದ ಆಗಿರುವನೊ? (೧) ವಿವರ್ತದಿಂದ ಆಗಿರುವನೋ? (೨) ಮೊದಲನೆಯದಕ್ಕೆ ಒಡಂಬಟ್ಟರೆ, ಅನಿತ್ಯತಾ ದೋಷ ಬರುವದು. ಎರಡನೆಯದಕ್ಕೆ ಒಪ್ಪಿದರೆ, ಮಿಥ್ಯತ್ವ ದೋಷ ಬರುವದು. ಬ್ರಹ್ಮವು ಜೀವನಾಗಲಿಲ್ಲ ಎಂದು ಹೇಳಿದರೆ, ಭೋಕ್ತೃವೇ ಇಲ್ಲದಾಗಬೇಕಾಗುವದು. ಬ್ರಹ್ಮವೇ ಜೀವನೆಂದು ಹೇಳಿದರೆ, ಅಕರ್ತಾ ಅಭೋಕ್ತಾ ಎಂಬ ಶ್ರುತಿಗೆ ವಿರೋಧವಾಗುತ್ತದೆ. ಬ್ರಹ್ಮಕ್ಕಿಂತಲೂ ಬೇರೊಬ್ಬನು ಯಾವನೋ ಜೀವನಾಗಿರುವನೆಂದು ಹೇಳಿದರೆ, ಅವನು ಯಾರು? ಸಜಾತಿಯನೋ? ವಿಜಾತಿಯನೋ? ಮತ್ತು ಬೇರೊಬ್ಬನನ್ನು ಹೇಳಿದರೆ, ನಿಮ್ಮ ಅದ್ವೈತ ಸಿದ್ಧಾಂತಕ್ಕೆ ಹಾನಿ ಬರುತ್ತದೆ ಎಂಬ ಈ ವಿಕಲ್ಪಗಳೆಲ್ಲಾ ನಿರಾಕರಣ ಮಾಡಲ್ಪಟ್ಟವು ಎಂಬ ತಾತ್ಪರ್ಯವು.

ಬಳಿಕ; ಪೂರ್ವ ಶ್ಲೋಕದಲ್ಲಿ ಜನನ ಮರಣಗಳು ಹೇಗೆ ಪ್ರಾಪ್ತವಾದವು? ಎಂದು ಮಾಡಿದ ಪ್ರಶ್ನಕ್ಕೆ ಈ ಪದದಲ್ಲಿ ಕರ್ಮ ಮೂಲಕವಾಗಿಯೇ ಜನನ ಮರಣ ಸುಖ ದುಃಖಾದಿಗಳು ಪ್ರಾಪ್ತಗಳಾಗುತ್ತವೆಂದು ಪ್ರತಿಪಾದನಮಾಡುತ್ತಾರೆ.

ಭೂತಂಗಳಿಗಾಗುವ ಸಂಸರ್ಗ।
ಈ ತೆರನಹುದೈ ಮೊದಲಾ ಸರ್ಗ।
ನಳಿನ ಭವನ ಕಲ್ಪನೆಯಿಂದಹುದು।
ಬಳಿಕಿನ ಸೃಷ್ಟಿಯು ಕರ್ಮದಲಹುದು॥
ಕರ್ಮ ವ್ಯವಹಾರವೇ ಮುನ್ನವನು।
ಕರ್ಮವ ಮಾಡಿದನದರಿಂದವನು॥
ಜನನಾಂತರವನು ಬಿಡದೈದುವನು।
ಜನಿಸಿದ ಕರ್ಮ ಫಲವನುಣುತಿಹನು॥
ಅಂತಾ ಕರ್ಮವೆ ಕಾರಣವಾಗಿ।
ಮುಂತಿಹ ಸೃಷ್ಟಿಯೆ ಕಾರ್ಯವುದಾಗಿ॥
ಆ ಕಾರ್ಯವು ಕಾರಣ ವಶವಾಗಿ।
ಲೋಕಂ ಕೆಡುವುದು ದುಃಖಿತವಾಗಿ ॥೩॥

ಟೀಕಾ:– ಭೂತಂಗಳಿಗೆ=ಪೃಥ್ವ್ಯಾದಿ ಪಂಚಭೂತಗಳಿಗೆ, ಆಗುವ=ಪ್ರಾಪ್ತವಾಗುವ, ಸಂಸರ್ಗ=ಸಂಬಂಧವು, ಈತೆರನಹುದೈ=ಈ ಪ್ರಕಾರವಾಗುವದು, ಮೊದಲಾಸರ್ಗ=ಮೊದಲಿನ ಸೃಷ್ಟಿಯು, ನಳಿನಭವನ=ಬ್ರಹ್ಮನ, ಕಲ್ಪನೆಯಿಂದ=ಮನಸ್ಸಿನಿಂದ, ಅಹುದು=ಆಗುವದು, ಬಳಿಕಿನ=ಆ ಮೇಲಿನ, ಸೃಷ್ಟಿಯು=ಜಗತ್ತು

CC-0. Jangamwadi Math Collection. Digitized by eGangotri

ಕರ್ಮದಲಿ=ಕರ್ಮದಿಂದ, ಅಹುದು=ಆಗುವದು, ಕರ್ಮವ್ಯವಹಾರವೆ=ಪುಣ್ಯ ಪಾಪಾತ್ಮಕಕರ್ಮ ವ್ಯವಹಾರವೇ,ಮುನ್ನ=ಮೊದಲು(ಇತ್ತು),ಅವನು=ಜೀವನು, ಕರ್ಮವ=ಕರ್ಮದ,ಜನನಾಂತರವನು=ಜನನಮರಣಾದಿಗಳನ್ನು,ಬಿಡದೆ=ತಪ್ಪದೆ, ಐದುವನು=ಹೊಂದುವನು, ಜನಿಸಿದ=ಹುಟ್ಟಿದ, ಕರ್ಮ=ಫಲವನ್ನು, ಉಣುತಿಹನು=ಊಟಮಾಡುತ್ತಿರುವನು, ಅಂತಾ=ಆ ಪ್ರಕಾರದ, ಕರ್ಮವೇ=ಕರ್ಮವೇ ಕಾರಣವಾಗಿ=ಮೂಲವಾಗಿ, ಮುಂತಿಹ=ಮೊದಲಿಗಿರುವ, ಸೃಷ್ಟಿಯೆ=ಜಗತ್ತೇ ಕಾರ್ಯಮದಾಗಿ=ಕಾರ್ಯವಾಗಿ, ಆ ಕಾರ್ಯವು=ಆ ಜಗತ್ತು, ಕಾರಣ ವಶವಾಗಿ=ಕರ್ಮದ ಅಧೀನವಾಗಿ, ಲೋಕಂ=ಜಗತ್ತು, ದುಃಖಿತವಾಗಿ=ಶೋಕವುಳ್ಳದ್ದಾಗಿ, ಕೆಡುವುದು=ನಷ್ಟವಾಗುವದು.

ತಾತ್ಪರ್ಯ:—ಪಂಚಭೂತಗಳ ತತ್ವಗಳು ಒಂದಕ್ಕೊಂದು ಕೂಡಿ ಸ್ಥೂಲ ಶರೀರವಾಗುವ ಸೃಷ್ಟಿಯು ರಜಃಪ್ರಧಾನ ಮಾಯೋಪಹಿತನಾದ ಬ್ರಹ್ಮನ ಸಂಕಲ್ಪನೆಯಿಂದಲೇ ಆಗುತ್ತದೆ. ಆನಂತರದಲ್ಲಿ ಆಗುವ ದೇಹಗಳೆಲ್ಲಾ ಕರ್ಮ ರಚಿತಗಳಾಗಿರುತ್ತವೆ. ಅಂದರೆ, ಆಯಾಯ ಕರ್ಮಗಳಿಗನುಸಾರವಾಗಿ ದೇವ ನರ ತಿರ್ಯಗಾದಿ ಶರೀರಗಳನ್ನು ತಪ್ಪದೆ ಹೊಂದುವರೆಂಬ ಭಾವವು. ಮತ್ತು ಆ ಕರ್ಮಗಳ ಫಲಗಳಾದ ಸುಖದುಃಖಗಳನ್ನೂ ಸ್ವರ್ಗ ನರಕಗಳನ್ನೂ ಅನುಭವಿಸುತ್ತಾರೆ. ಆದ್ದರಿಂದ ಕರ್ಮವೇ ಕಾರಣ, ಸೃಷ್ಟಿಯೇ ಕಾರ್ಯವಾಗಿರುವದು. ಕಾರ್ಯರೂಪ ಜಗತ್ತೆಲ್ಲಾ ಕಾರಣ ರೂಪ ಕರ್ಮಕ್ಕೆ ಆಧೀನವಾದದ್ದಾಗಿ ಯಾವಾಗಲೂ ದುಃಖಪಡುತ್ತಿರುತ್ತದೆ.

ಬಳಿಕ ಜೀವರುಗಳಲ್ಲಿ ಕರ್ಮವು ಹೇಗೆ ಉಂಟಾಯಿತು? ಎಂದು ಪ್ರಶ್ನೆ ಮಾಡಿದರೆ, ಆ ಕರ್ಮೋತ್ಪತ್ತಿಯ ರೀತಿಯನ್ನು ಹೇಳುತ್ತಾರೆ.

ಅಜ ಕಲ್ಪನೆಯಿಂ ದೇಹಂ ತೋರ್ಕು।
ನಿಜವದರೊಳಗಹಮುದಿಸುತ್ತಿರ್ಕು॥
ಚಿತ್ತಂತದರೊಳಗಾಗಳೆ ಪೊಕ್ಕು।
ಮತ್ತಂ ಜೀವಂ ಪುರುಷನೆನಿಕ್ಕು॥
ಮೊದಲಜನೊಳುಕಲ್ಪನೆಯದು ಶಕ್ತಿ।
ಪುದಿದೆಂತಿಹುದಂತೆಯೆ ತಚ್ಛಕ್ತಿ॥
ಜೀವರೊಳುಂ ದೊರಕೊಂಬುದರಿಂದ।
ಭಾವಿಸು ಮತಿ ಸಂಕೋಚತೆಯಿಂದ॥
ಇದ ಮಹ ಮೆಂಬೀ ಕಲ್ಪನೆಯಕ್ಕು।
ಅದು ತಾನೇ ತಿಳಿ ಪೌರುಷ ಮಕ್ಕು॥
ಆ ಪೌರುಷವೇ ಕರ್ಮವದಕ್ಕು॥
ಈ ಪರಿಭವವು ಕರ್ಮದಿ ಬಕ್ಕು ॥೩॥

CC-0. Jangamwadi Math Collection. Digitized by eGangotri

ಟೀಕಾ:—ಅಜ=ಬ್ರಹ್ಮನ, ಕಲ್ಪನೆಯಿಂ=ಇಚ್ಛಾರೂಪ ಕಲ್ಪನೆಯಿಂದ, ದೇಹಂ=ಶರೀರವು, ತೋರ್ಕು=ಪ್ರತೀತಿಯಾಗುವದು, ನಿಜವು=ಸತ್ಯವು, ಅದರೊಳಗೆ=ಆ ಶರೀರದಲ್ಲಿ, ಅಹಮು=ಅಹಂಕಾರವು, ಉದಿಸುತ್ತಿರ್ಕು=ಹುಟ್ಟುತ್ತಿರುವದು, ಆದರೊಳಗೆ=ಆ ಅಹಂಕಾರದಲ್ಲಿ, ಚಿತ್ತು=ಚಿದ್ರೂಪು, ಆಗಳೆ=ತತ್ಕ್ಷಣವೇ, ಪೊಕ್ಕು=ಸೇರಿ, ಮತ್ತು=ಬಳಿಕ, ಜೀವಂ=ಜೀವನು, ಪುರುಷನು=ಪುರುಷನೆಂದು, ಎನಿಕ್ಕು=ಹೇಳಿಸಿಕೊಳ್ಳುವನು, ಮೊದಲು=ಪೂರ್ವದಲ್ಲಿ, ಅಜನೊಳು=ಬ್ರಹ್ಮನಲ್ಲಿ ಕಲ್ಪನೆಯು=ಕಲ್ಪನೆಯನ್ನು ಮಾಡುವ, ಅದು ಶಕ್ತಿ=ಆ ಶಕ್ತಿಯು, ಪುದಿದು=ಸೇರಿ, ಎಂತು=ಹೇಗೆ, ಇಹುದೋ=ಇರುವದೋ, ಅಂತೆಯೇ=ಹಾಗೆಯೇ, ತಚ್ಛಕ್ತಿ=ಆ ಶಕ್ತಿಯು, ಜೀವರೊಳುಂ=ಜೀವರುಗಳಲ್ಲಿಯೂ, ದೊರಕೊಂಬುದರಿಂದಂ=ಪ್ರಾಪ್ತಿಯಾಗುವದರಿಂದ, ಮತಿಸಂಕೋಚತೆಯಿಂದ=ಬುದ್ಧಿಯ ಪರಿಚ್ಛಿನ್ನತೆಯಿಂದ, ಇದಮಹಮೆಂಬ=ಇದಮಾಕಾರ ಅಹಮಾಕಾರಗಳೆಂಬ, ಈಕಲ್ಪನೆಯಕ್ಕು=ಈ ಕಲ್ಪನವಾಗುವದೆಂದು, ಭಾವಿಸು=ತಿಳಕೋ, ಅದು=ಆಕಲ್ಪನೆಯು, ತಾನೆ=ಸ್ವಯಂ, ಪೌರುಷ=ಪುರುಷತ್ವವು, ಆಕ್ಕು=ಆಗುವದೆಂದು, ತಿಳಿ=ಅರಿ, ಆ ಪೌರುಷವೇ=ಆ ಪ್ರಯತ್ನವೇ, ಕರ್ಮವದಕ್ಕು=ಕರ್ಮವೆನಿಸುತ್ತದೆ, ಈಪರಿ=ಈ ರೀತಿ, ಭವವು=ಜನನಮರಣ ರೂಪ ಸಂಸಾರವು, ಕರ್ಮದಿಬಕ್ಕು=ಕರ್ಮಂದ ಬರುವದು,

ತಾತ್ಪರ್ಯ:— ಎಲೈ ಶಿಷ್ಯನೇ ಕೇಳು! ಕುಂಬಾರನಿಂದ ಕೊಡ ಹುಟ್ಟಿದ ಮೇಲೆ ಆದರಲ್ಲಿ ನೀರನ್ನು ತುಂಬಲು; ಆ ನೀರಿನಲ್ಲಿ ಆಕಾಶದ ಪ್ರತಿಬಿಂಬವು ಹೇಗೆ ಬೀಳಬೇಕೋ ಹಾಗೇ ಮೊದಲು ಬ್ರಹ್ಮನ ಕಲ್ಪನೆಯಿಂದ ಶರೀರ ತೋರಿತು. ಅವರೊಳಗೆ ಅಹಂಕಾರವು ಉತ್ಪನ್ನವಾಯಿತು. ಆ ಅಹಂಕಾರದಲ್ಲಿ ಪೂರ್ಣವಾದ ಚಿತ್ತು ಪ್ರತಿಬಿಂಬಿಸಿ ಜೀವಾತ್ಮವೆನಿಸುವದು. ಮತ್ತು ಸೃಷ್ಟಿಕರ್ತನಾದ ಬ್ರಹ್ಮನಲ್ಲಿ ಮೊದಲು ಕಲ್ಪನಾ ಶಕ್ತಿಯು ಹೇಗೆ ಸೇರಿಕೊಂಡಿರುವದೋ ಹಾಗೇ ಆ ಕಲ್ಪನಾ ಶಕ್ತಿಯು ಜೀವರುಗಳಲ್ಲಿಯೂ ತುಂಬಿಕೊಂಡಿರುತ್ತದೆ. ಇದರಿಂದಲೂ ನಾನು ಹುಟ್ಟಿದುವೆನು. ಇರುವವನು, ಸಾಯುವವನು ಎಂಬ ಅರಿವುಳ್ಳ ಪರಿಚ್ಛಿನ್ನಾತ್ಮಕ ಭ್ರಾಂತಿಯಿಂದ ದೇಹಾದಿಗಳಲ್ಲಿ ನಾನೆಂದೂ, ವಿಷಯಾದಿಗಳಲ್ಲಿ ನನ್ನದೆಂದೂ ಹೀಗೆ ಅಹಂಕಾರ ಮಮಕಾರಗಳು ಕಲ್ಪನಾತ್ಮಕಗಳಾಗಿ ತೋರುತ್ತವೆ. ಈ ಕಲ್ಪನೆಯೇ ಪ್ರಯತ್ನವೆನಿಸಿತು, ಬಳಿಕ ಅದೇ ಕರ್ಮವಾಯಿತು. ಆ ಕರ್ಮದಿಂದಲೇ ಈ ಜನನ ಮರಣ ರೂಪ ಸಂಸಾರವು ಪ್ರಾಪ್ತವಾಯಿತು. ಎಂಬ ತಾತ್ಪರ್ಯವು.

ಬಳಿಕ:—ಕಲ್ಪನಾಶಕ್ತಿಯಿಂದ ಶರೀರದಲ್ಲಿ ತೋರಿದ ಅಹಂಕಾರವೇ ಹೊರಗೆ ವಿಷಯಗಳಲ್ಲಿ ಬಹಳ ಪ್ರಕಾರ ಇದಮಾಕಾರವಾಗಿ ತೋರುತ್ತದೆ.

CC-0. Jangamwadi Math Collection. Digitized by eGangotri

ಅಂಥಾ ಅಹಂಕಾರದಲ್ಲಿ ನಾನೆಂಬ ಅಧ್ಯಾಸವಾಗುವದೇ ಬಂಧವು. ಆ ಅನಾತ್ಮ ಅಹಂಕಾರದಲ್ಲಿದ್ದ ಆತ್ಮ ಬುದ್ಧಿಯನ್ನು ಬಿಟ್ಟರೆ, ತಾನೇ ಪರಮಾತ್ಮನಿರುವನು, ಎಂದು ಪ್ರತಿಪಾದಿಸುತ್ತಾರೆ.

ಅಹಮೆಂಬೀ ಬಗೆ ದೇಹದೊಳಿರ್ಕು।
ಬಹಿರಂಗದೊಳಿದಮೆಂಬುದು ತೋರ್ಕು॥

ಅದು ಕೇಳೀ ಸಕಲಾರ್ಥದೊಳಿರ್ಕು।
ಅದರಿಂ ಬಹು ಬಗೆ ನಿರವಧಿಯಕ್ಕು॥

ಕೆಲ ಕೆಲವೆಡೆಯೊಳು ಸೊಗಸಿಹುದಲ್ಲಿ।
ಕೆಲ ಕೆಲವೆಡೆಯೊಳಗಪ್ರಿಯವಲ್ಲಿ॥

ಹಿಡಿವ ಬಿಡುವ ಕರ್ಮಕ್ಕದು ಮೂಲ।
ತಡೆಯದೆ ತತ್ಕರ್ಮವೆ ಭವಮೂಲ॥

ಅದರಿಂದಭಿರುಚಿ ನಿನಗೆತ್ತಾನು।
ಉದಿಸಿತ್ತಾದೊಡೆ ಕೇಳದು ತಾನು॥

ವಿದಿತಂ ಬಂಧವೆನಿಪ ಸಂಸಾರ।
ಅದನುಳಿದಿರೆ ನೀನೀಶಂ ಧೀರ ॥೪॥

ಟೀಕಾ:— ಅಹಮೆಂಬ=ನಾನೆಂಬ, ಈ ಬಗೆ=ಈ ಭಾವನೆಯು, ದೇಹದೊಳು=ಶರೀರದಲ್ಲಿ, ಇರ್ಕು=ಇರುವದು, ಬಹಿರಂಗದೊಳು=ಹೊರಗಿರುವ ವಿಷಯದಲ್ಲಿ, ಇದಮೆಂಬುದು=ಮಮಕಾರವೆನ್ನುವದು, ತೋರ್ಕು=ತೋರುವದು, ಕೇಳ್=ಏಕಾಗ್ರ ಚಿತ್ತದಿಂದಾಲಿಸು, ಅದು=ಆ ಅಹಂಕಾರವು, ಸಕಲಾರ್ಥದೊಳು=ಎಲ್ಲಾ ವಿಷಯಗಳಲ್ಲಿ, ಇರ್ಕು=ಇದಂ ರೂಪದಿಂದಿರುವದು, ಅದರಿಂ=ಆದ್ದರಿಂದ, ಬಹುಬಗೆ=ಅನೇಕ ಭಾವನೆಗಳು, ನಿರವಧಿಯಕ್ಕು=ಸೀಮಾರಹಿತಗಳಾಗುವವು, ಕೆಲಕೆಲವೆಡೆಯೊಳು=ಕೆಲವು ಸ್ಥಾನಗಳಲ್ಲಿ, ಸೊಗಸಿಹುದು=ಆನಂದದಿಂದಿರುವದು, ಅಲ್ಲಿ=ಹೊರಭಾಗದಲ್ಲಿ, ಕೆಲಕೆಲವೆಡೆಯೊಳು=ಹಲವು ಸ್ಥಾನದಲ್ಲಿ, ಅಪ್ರಿಯವು=ದುಃಖವಾಗಿರುವುದು, ಅಲ್ಲಿ=ಆ ಸ್ಥಾನದಲ್ಲಿ, ಹಿಡಿವ=ಗ್ರಹಿಸುವ, ಬಿಡುವ=ತ್ಯಾಗ ಮಾಡುವ, ಕರ್ಮಕ್ಕೆ=ಕೆಲಸಕ್ಕೆ, ಅದು=ಆ ಅಹಂಕಾರವು, ಮೂಲ=ಕಾರಣವಾಗಿರುವದು, ತಡೆಯದೆ=ತಪ್ಪದೆ, ತತ್ಕರ್ಮವೆ=ಆ ಕರ್ಮವೇ, ಭವಮೂಲ=ಸಂಸಾರಕ್ಕೆ ಕಾರಣವಾಗಿರುವದು, ಅದರಿಂದ=ಆದ್ದರಿಂದ, ನಿನಗೆ=ನಿನಗೆ,

CC-0. Jangamwadi Math Collection. Digitized by eGangotri

ಅಭಿರುಚಿ=ಪ್ರೀತಿಯು, ಎತ್ತಾನು=ಎಲ್ಲಿಯದು, ಉದಿಸಿತ್ತಾದೊಡೆ=ಉತ್ಪನ್ನವಾದ ದ್ದಾದರೆ, ಕೇಳ್=ಆಲಿಸು, ಅದು ತಾನು=ಆ ಅಧ್ಯಾಸವು, ವಿದಿತಂ=ಪ್ರಸಿದ್ಧವಾಗಿ, ಬಂಧವೆನಿಪ ಸಂಸಾರ=ಬಂಧವೆಂದು ಹೇಳಲ್ಪಡುವ ಸಂಸಾರವು, ಅದನು=ಆ ಅಧ್ಯಾಸವನ್ನು, ಉಳಿದು=ಬಿಟ್ಟು, ಇರೆ=ಇರಲಾಗಿ, ಧೀರ=ಅಧಿಕಾರಿಯೇ, ನೀನು= ನೀನೇ, ಈಶಂ=ಪರಮಾತ್ಮನಿರುವಿ.

ತಾತ್ಪರ್ಯ:— ಹೇ ಧೀರ! ಅಂದರೆ, ಬ್ರಹ್ಮಚರ್ಯಾದಿ ಸಾಧನಗಳಿಂದ ಬುದ್ಧಿಯನ್ನು ನಿರ್ಮಲಮಾಡಿಕೊಂಡು, ವಿಷಯ ಚಿಂತನದಿಂದ ಅದನ್ನು ಕೆಡಿಸ ದಿರ್ದಾತನೇ ಧೀರನು. ಇಂಥಾ ಗುಣವುಳ್ಳ ಶಿಷ್ಯನೇ! ಕೇಳು, ಸಮುದ್ರದಲ್ಲಿ ತೆರೆಯುತ್ಪನ್ನವಾದಂತೆ, ನಿನ್ನ ಸಚ್ಚಿದಾನಂದ ಸ್ವರೂಪದಿಂದ ಅಹಂಕಾರವು ಜನಿಸಿ ಶರೀರದೊಳಗೆ ತೋರಿತು. ಆದ್ದರಿಂದ ನೀನು ನಿನ್ನ ಸ್ವರೂಪವನ್ನು ಮರೆತು ದೇಹವೇ ನಾನೆಂದು ಅಭಿಮಾನ ಪಡುವಂಥವನಾದಿ. ಬಳಿಕ ಆ ಶರೀರ ದೊಳಗಿರುವ ಅಹಂಕಾರವೇ, ಇಂದ್ರಿಯ ಮಾರ್ಗಗಳಿಂದ ವಿಷಯಪರ್ಯಂತರ ಹೋಗಿ ಇದಮಾಕಾರವಾಗಿ ತೋರಿತು. ಒಂದು ಎಣ್ಣೆಯ ತಟಕು ಜಲದಮೇಲೆ ಬಿದ್ದಕೂಡಲೇ ಜಲತುಂಬ ವ್ಯಾಪಿಸುವಂತೆ; ಈ ಇದಮಾಕಾರವೃತ್ತಿಯು ದೃಶ್ಯವಾದ ಸಕಲ ಪದಾರ್ಥಗಳಲ್ಲಿಯೂ ತುಂಬಿಕೊಂಡಿರುವದು. ಆದ್ದರಿಂದ ಇದಮಾಕಾರ ಭಾವನೆಗಳು ಅಸಂಖ್ಯಾತಗಳಾಗಿರುತ್ತವೆ. ಆ ಇದಮಾಕಾರ ವೃತ್ತಿಯು ಕೆಲಕೆಲವು (ಅನುಕೂಲ) ಇಷ್ಟವಿಷಯಗಳಿಗೆ ಸಂಬಂಧವಾದಾಗ್ಯೆ ರಾಗಮಾಡುತ್ತದೆ. (ಪ್ರತಿಕೂಲ) ಅನಿಷ್ಟ ವಿಷಯಕ್ಕೆ ಸಂಬಂಧವಾದಾಗ್ಯೆದ್ವೇಷ ಮಾಡುತ್ತದೆ. ಮತ್ತು ಯಾವ ಪದಾರ್ಥವು ತನಗೆ ಇಷ್ಟವೋ ಅದನ್ನು ಸ್ವೀಕರಿಸಿ ಅನಿಷ್ಟ ವಸ್ತುವನ್ನು ತ್ಯಾಗಮಾಡುತ್ತದೆ. ಆದ್ದರಿಂದ ಉಕ್ತರಾಗದ್ವೇಷ ಸುಖ ದುಃಖಾದಿಗಳಿಗೆಲ್ಲಾ ಇದಮಾಕಾರ ವೃತ್ತಿಯೇ ಕಾರಣವಾಗಿರುತ್ತದೆ. ರಾಗ ದಿಂದ ಹಿಡಿಯುವ ಕರ್ಮವೇ ಪುಣ್ಯವೆನಿಸುವದು. ದ್ವೇಷದಿಂದ ಬಿಡುವ ಕರ್ಮವೇ ಪಾಪವೆನಿಸುವುದು. ಈ ಪುಣ್ಯಪಾಪಗಳೇ ಮುಂದಿನ ಜನ್ಮಕ್ಕೆ ಕಾರಣಗಳಾಗುವವು. ಅಂದರೆ ದೇಹಪ್ರಾಪ್ತಿಗೆ ಪುಣ್ಯಾಪುಣ್ಯಗಳು ಕಾರಣ, ಪುಣ್ಯಪಾಪಗಳಿಗೆ ರಾಗದ್ವೇಷ ಕಾರಣ, ರಾಗದ್ವೇಷಗಳಿಗೆ ಇಷ್ಟಾನಿಷ್ಟ ವೃತ್ತಿ ಗಳೇ ಕಾರಣ, ಅವುಗಳಿಗೆ ಸಾಮಾನ್ಯವಾದ ಇದಮಾಕಾರ ವೃತ್ತಿಯೇ ಕಾರಣ, ಈ ಇದಮಾಕಾರ ವೃತ್ತಿಗೆ ದೇಹವೇ ನಾನೆಂಬ ಅಹಂಕಾರವೇ ಕಾರಣ, ಈ ಅಹಂಕಾರಕ್ಕೆ ಸ್ವರೂಪ ವಿಸ್ಮೃತಿ ಲಕ್ಷಣಾತ್ಮಕ ಅಜ್ಞಾನವೇ ಕಾರಣ, ಈ ರೀತಿ ಸಂಸಾರ ಚಕ್ರವು ತಿರುಗುತ್ತಿರುತ್ತದೆ. ಆದ್ದರಿಂದ ಈ ಅಹಮಾಕಾರ ಇದ ಮಾಕಾರ ವೃತ್ತಿಗಳೊಡನೆ ನಾನು ನನ್ನದು ಎಂದು ಅಭಿಮಾನರೂಪ ಪ್ರೀತಿ ಯುಳ್ಳವನಾಗಬೇಡ. ಒಂದು ವೇಳೆ ಪ್ರೀತಿಯುಳ್ಳವನಾದರೆ ಇದಕ್ಕೆ ಬಂಧ

CC-0. Jangamwadi Math Collection. Digitized by eGangotri

ವೆಂತಲೂ ಸಂಸಾರವೆಂತಲೂ ಅನ್ನುತ್ತಾರೆ. ಆದ್ದರಿಂದ ಅಹಂ ಇದಂ ಈ ಎರಡ ಭಾವನೆಗಳನ್ನು ಬಿಟ್ಟರೆ; ನೀನೆ ಸಚ್ಚಿದಾನಂದ ಸ್ವರೂಪನಿರುವಿ ಎಂಬ ತಾತ್ಪರ್ಯವು.

ಬಳಿಕ; ಅಧ್ಯಾಸಯುಕ್ತಗಳಾದ ಜೀವಿಗಳಿಗೆ ಭೋಕ್ತೃತ್ವವು ಹೇಗೆ ಆಗುತ್ತದೆಂಬ ಕ್ರಮುವನ್ನೂ ವಿಚಾರದಿಂದ ಅದು ಮಿಥ್ಯೆಯೆಂಬುವದನ್ನು ಪ್ರತಿಪಾದಿಸುತ್ತಾರೆ.

ಆ ಪರಿ ವಡೆದಿಹ ಜೀವರ ಬಾಳು ।
ಈ ಪರಿ ಭೋಗವನೀವುದು ಕೇಳು ॥

ಬೆಳಗುವದಿಂದ್ರಿಯ ತತಿ ವಿಷಯವನು ।
ಬಳಿವಿಡಿ ದಾರೈವುದು ಮನವದನು ॥

ಮತಿನಿಶ್ಚಯದಿಂದವರಾಕೃತಿಯ ।
ಪತಿಕರಿಸಲು ಚಿತ್ತವೆ ತನ್ಮತಿಯ ॥

ಧರಿಸಲದನು ಸಮ್ಮತವದು ತಾನು ।
ವರಿಸಿ ಮಗುಳೆ ಸುಖದುಃಖಿಯು ತಾನು ॥

ಎನಲೊಡ ನವನಧ್ಯಾಸಂ ಬಡೆದು ।
ಘನವಿಪರೀತ ಜ್ಞಾನವೆ ವಿಡಿದು ॥

ನೀನಿದನರಿವುದೆ ಭೋಗವೆನಿಕ್ಕು ।
ಸೂನು ತಿಳಿಯೆ ನಿನಗದು ಪುಸಿಯಕ್ಕು ॥೫॥

ಟೀಕಾ:— ಆಪರಿ=ಆ ರೀತಿ, ವಡೆದಿಹ=ಪಡೆದಿರುವಂಥಾ, ಜೀವರ=ಪ್ರಾಣಿಗಳ, ಬಾಳು=ಬದುಕುವಿಕೆಯು, ಈ ಪರಿ=ಈ ರೀತಿ, ಭೋಗವನು=ಸುಖದುಃಖಾನ್ಯತರವನ್ನು, ನೀವುದು=ಕೊಡುವಂಥಾದ್ದನ್ನು, ಕೇಳು=ಆಲಿಸು, ಇಂದ್ರಿಯತತಿ=ಇಂದ್ರಿಯಗಳ ಸಮೂಹವು, ವಿಷಯುವನು=ವನಿತಾದಿ ಭೋಗ್ಯ ಸಮೂಹವನ್ನು, ಬೆಳಗುವದು=ಪ್ರಕಾಶಮಾಡುವದು, ಮನವು=ಮನಸ್ಸು, ಅದನು=ವಿಷಯುವನ್ನು, ಬಳಿವಿಡಿದು=ಬೆನ್ನುಹತ್ತಿ, ಆರೈವುದು=ವಿಚಾರಮಾಡುವದು, ಮತಿ=ಬುದ್ಧಿಯು, ನಿಶ್ಚಯದಿಂದ=ಇಷ್ಟವೆಂಬ ನಿಶ್ಚಯದಿಂದ, ಅವರ=ಆ ವಿಷಯಗಳ, ಆಕೃತಿಯ=ರೂಪನ್ನು, ಪತಿಕರಿಸಲು=ಸ್ವೀಕಾರಮಾಡಲು, ಚಿತ್ತವೇ=ಚಿತ್ತು, ತನ್ಮತಿಯ=ಆ ಬುದ್ಧಿಯ ಅನುಭವವನ್ನು, ಧರಿಸಲ್=ಸಂಸಾರರೂಪದಿಂದ ಧರಿಸಲಾಗಿ, ಅದನು=ಆ ವಿಷಯುವನ್ನು, ಸಮ್ಮತವದು=ಸುಖರೂಪ

CC-0. Jangamwadi Math Collection. Digitized by eGangotri

ವಾಗಿರುವದೆಂದು, ತಾನು=ಅಹಂಕಾರವು, ವರಿಸಿ=ಸ್ವೀಕಾರಮಾಡಿ, ಮಗುಳೆ= ಅನಂತರ, ತಾನು=ಅಹಂಕಾರವು, ಸುಖದುಃಖಿಯು=ಸುಖಿದುಃಖಿಯೆಂದು ಅಭಿಮಾನಿಸುವದು, ಎನಲ್=ಅನ್ನಲು, ಒಡನೆ=ಬೇಗನೆ, ಅವನು=ಆತ್ಮನು, ಅಧ್ಯಾಸಂ=(ಅನಾತ್ಮವಾದ ಅಹಂಕಾರವೇ) ನಾನೆಂಬ ಬುದ್ಧಿಯನ್ನು, ಬಡೆದು= ಹೊಂದಿ, ಘನ=ಮಹತ್ತರವಾದ, ವಿಪರೀತಜ್ಞಾನವ=ಕರ್ತಾ ನಾನೆಂಬ ಜ್ಞಾನ ವನ್ನು, ವಿಡಿದು=ಗ್ರಹಿಸಿ, ನೀನು=ನೀನು, ಇದನು=ವಿಷಯವನ್ನು, ಅರಿವುದೇ= ತಿಳಿಯುವದೇ, ಭೋಗವೆನಿಕ್ಕು=ಭೋಗವೆನಿಸುವದು, ಸೂನು=ಎಲೈ ಮಗನೇ! ತಿಳಿಯೆ=ವಿಚಾರಮಾಡಲಾಗಿ, ಅದು=ಆ ಭೋಕ್ತೃತ್ವವು, ನಿನಗೆ=ಅಸಂಗನಾದ ನಿನಗೆ, ಪುಸಿಯಕ್ಕು=ಸುಳ್ಳಾಗಿರುವದು.

ತಾತ್ಪರ್ಯ:—ಪೂರ್ವಪದ್ಯದಲ್ಲಿ ಹೇಳಲ್ಪಟ್ಟ ಪ್ರಕಾರ ದೇಹಾದಿಗಳಲ್ಲಿ ಅಹಂಕಾರ, ವಿಷಯಗಳಲ್ಲಿ ಮಮಕಾರ, ಇವುಗಳಿಂದ ಯುಕ್ತಗಳಾದ ಜೀವಿಗಳಿಗೆ ಸುಖ ದುಃಖಗಳೆರಡರಲ್ಲಿ ಒಂದು ಪ್ರಾಪ್ತಿರೂಪ ಭೋಗವು ಹೇಗೆ ಆಗುತ್ತದೆ? ಅಂದರೆ ಕೇಳು, ಎಲೈ ಮಗನೆ! ಮೊದಲು ಅಂತಃಕರಣವೃತ್ಯಾತ್ಮಕವಾದ ಮನಸ್ಸು ನೇತ್ರಾದಿಂದ್ರಿಯಗಳಿಂದ ವಿಷಯಕ್ಕೆ ಹೋಗಿ, ಇದಂರೂಪ ಸಾಮಾನ್ಯ ಸಂಬಂಧಮಾಗಲು; ಬಳಿಕ ನೇತ್ರಶ್ರೋತ್ರಾದಿಂದ್ರಿಯಗಳು ಇದು ರೂಪು, ಇದು ಶಬ್ದ, ಇದು ಗಂಧಗಳೆಂದು ತಮ್ಮ ತಮ್ಮ ವಿಷಯಗಳನ್ನು ಬೆಳಗುತ್ತವೆ. ಸಾಮಾನ್ಯವಾಗಿ ಮನೋಸಂಬಂಧ ವಿಷಯಗಳನ್ನು ಇಂದ್ರಿಯಗಳು ಬೆಳಗು ತ್ತವೆ ಹೊರತು, ಮನೋ ಅಸಂಬಂಧ ವಿಷಯಗಳನ್ನು ಬೆಳಗಲಾರವೆಂಬ ತಾತ್ಪರ್ಯವು. ಈ ಪ್ರಕಾರ ಇಂದ್ರಿಯಗಳಿಗೆ ವಿಷಯಗಳು ಗೋಚರವಾಗಲು ಅನಂತರ ಮನಸ್ಸು ಈ ವಿಷಯವು ನನಗೆ ಅನುಕೂಲವೋ ಅಥವಾ ಪ್ರತಿಕೂ ಲವೋ ಎಂದು ಸಂಶಯ ಮಾಡುವದು; ಬಳಿಕ ಬುದ್ಧಿಯು ಈ ವಿಷಯವು ನನಗೆ ಸುಖಕರವಾದದ್ದೆಂದೇ ನಿಶ್ಚಯ ಮಾಡುವದು. ಚಿತ್ತು ಆ ವಿಷಯದ ಸಂಸ್ಕಾರ ವನ್ನು ಧರಿಸುತ್ತದೆ. ಅನಂತರ ಅಹಂಕಾರವು ಈ ವಿಷಯವು ನನಗೆ ಸಮ್ಮತ ವಾದದ್ದು. ನನ್ನಿಂದ ಅಂಗೀಕರಿಸಲಿಕ್ಕೆ ಯೋಗ್ಯವಾದದ್ದೆಂದು ಗ್ರಹಣ ಮಾಡು ತ್ತದೆ. ಈ ಅಹಂಕಾರಕ್ಕೆ ಸಾಕ್ಷಿಸ್ವರೂಪನಾದ ಆತ್ಮನು ಉಕ್ತ ಅಹಂಕಾರದೊ ಡನೆ ತಾದಾತ್ಮ್ಯಯುಕ್ತನಾಗಿ ನಾನೇ ಸುಖಿ ನಾನೇ ದುಃಖಿ ಎಂದು ಅಭಿಮಾನ ಪಡುತ್ತಾನೆ. ಅಲ್ಲದರಲ್ಲಿ ಹೌದು ಎಂಬ ಬುದ್ಧಿಯೇ ಅಧ್ಯಾಸವಾಗಿರುವದು. ಅಕರ್ತ ಅಭೋಕ್ತಾ ಸ್ವರೂಪನಾದ ತಾನು ಕರ್ತಾಭೋಕ್ತಾ ಎಂದು ಅಹಂಕಾರ ಧರ್ಮದ್ವಯಗಳಲ್ಲಿ ಕೂಡಿಕೊಂಡು, ನಾನು ಪುಣ್ಯ ಪಾಪವಂತನು, ಸುಖಿ, ದುಃಖಿ ಜೀವಿ ಎಂದು ನಿಶ್ಚಯಮಾಡುವದೇ ವಿಪರೀತ ಜ್ಞಾನವಾಗಿರುವದು. ಆತ್ಮನು ಸುಷುಪ್ತಿಯಲ್ಲಿ ಅಕರ್ತ ಅಭೋಕ್ತಾ ಸ್ವರೂಪನಾಗಿರುವನು.

CC-0. Jangamwadi Math Collection. Digitized by eGangotri

ಜಾಗ್ರತ್ಕಾಲದಲ್ಲಿ ಅಹಂಕಾರಾದಿಗಳೊಡನೆ ತಾದಾತ್ಮ್ಯಯುಕ್ತನಾಗಿ ಕರ್ತಾ ಭೋಕ್ತಾ ಎನಿಸುತ್ತಾನೆ. ಇದು ಸರ್ವರ ಅನುಭವಸಿದ್ಧವಾದ ವಿಷಯ ವಾಗಿರುತ್ತದೆ. ಮತ್ತು "ಆತ್ಮೇಂದ್ರಿಯ ಮನೋಯುಕ್ತಂ ಭೋಕ್ತೇತ್ಯಾಹು ರ್ಮನೀಷಿಣಃ" ಆತ್ಮನು ಮನೋಯಿಂದ್ರಿಯಗಳಿಂದ ಕೂಡಿಕೊಂಡರೇನೇ ಭೋಕ್ತಾ ಎನ್ನಿಸುತ್ತಾನೆ ಎಂದು ವಿದ್ವಾಂಸರು ಹೇಳುತ್ತಾರೆ ಎಂದು ಈ ಪ್ರಕಾರ ಶ್ರುತಿ ಪ್ರಮಾಣವೂ ಇರುತ್ತದೆ. ಮತ್ತು ಉಳಿ ಬಾಚಿ ಮೊದಲಾದ ಸಾಧನ ಗಳಿಂದ ಯುಕ್ತನಾಗಿದ್ದರೆ ಬಡಿಗನೆನಿಸುವನು ಇಲ್ಲದಿದ್ದರೆ ಬಡಿಗನೆನಿಸಲಾರನು. ಕಿಂತು, ಸಾಮಾನ್ಯ ಪುರುಷನೆನಿಸುತ್ತಾನೆ ಎಂಬ ಈ ದೃಷ್ಟಾಂತವೂ ಇರುತ್ತದೆ. ಈ ಪ್ರಕಾರ ಆತ್ಮನುಷ್ಟವಿಪರೀತ ಜ್ಞಾನಯುಕ್ತನಾಗಿ ಸುಖಿ ದುಃಖಿಯೆಂದು ತಿಳಕೊಳ್ಳುವದೇ ಭೋಗವೆನಿಸುತ್ತದೆ. ಪರಂತು ಆ ಭೋಕ್ತೃತ್ವವು ಉಕ್ತ ಶ್ರುತ್ಯನುಭವ ದೃಷ್ಟಾಂತಗಳಿಂದ ಮಿಥ್ಯೆಯೆನಿಸುತ್ತದೆಂಬ ತಾತ್ಪರ್ಯವು.

ಬಳಿಕ; ಕಬ್ಬಿಣದ ಬೇಡಿಯನ್ನು ಕಬ್ಬಿಣದ ಉಳಿಯಿಂದಲೇ ಕಡಿಯು ವಂತೆ ಕಾಮ ಕ್ರೋಧಾದಿಗಳಿಂದ ಅಶುದ್ಧವಾದ ಮನಸ್ಸನ್ನು, ವಿವೇಕರೂಪ ಶುದ್ಧ ಮನಸ್ಸಿನಿಂದಲೇ ತೆಗೆದುಹಾಕಲು; ನೀನು ಮೊದಲಿದ್ದಂತೆಯೇ ಇರುವಿ. ಎಂದು ಪ್ರತಿಪಾದನಮಾಡುತ್ತಾರೆ.

ಇಂದ್ರಿಯ ಗೋಚರವಾದ ವಿಷಯವಂ |
ಒಂದಿ ಪ್ರಿಯವುಂ ಮೋಣಪ್ರಿಯವುಂ ||

ಬಗೆಯಲು ದೇಹದೊಳುಂಡಿರ ಬೇಕು |
ಮಿಗೆ ಕಾಮಿಸಿ ಭೋಗಿಪುದದು ಸಾಕು ||

ಕಾಮಂ ಕ್ರೋಧಂ ಮೋಹಾದಿಗಳು |
ತಾಮಸವವು ಹೃದಯ ಗ್ರಂಥಿಗಳು ||

ಆಗಳು ಮವರಿಂದತ್ತಿತ್ತೊಳಿವ |
ಆ ಗಂಟಿನ ಭವಬಂಧನ ಮನವ ||

ಪುಟ್ಟುವ ಸುವಿವೇಕದ ಮನದಿಂದ |
ನೆಟ್ಟನೆ ಕಡಿವುದು ಮಸೆದುಳಿಯಿಂದ ||

ಜಡದಿಹ ಸಂಕಲೆಯಂ ಕಡಿವಂತೆ |
ಕಡಿದೊಡೆ ನೀನಹೆ ಮುನ್ನಿರ್ದಂತೆ ||೬||

CC-0. Jangamwadi Math Collection. Digitized by eGangotri

ಟೀಕಾ:— ಇಂದ್ರಿಯ = ಶ್ರೋತ್ರಾದಿಂದ್ರಿಯಗಳಿಗೆ, ಗೋಚರವಾದ = ಪ್ರತೀತಿಯಾದ, ವಿಷಯಮಂ=ಶಬ್ದಾದಿ ವಿಷಯಗಳನ್ನು, ಒಂದಿ=ಹೊಂದಿ, ಪ್ರಿಯಮಂ=ಸುಖವನ್ನು, ಮೇಣ್=ಮತ್ತು. ಅಪ್ರಿಯಮಂ=ದುಃಖವನ್ನು, ಬಗೆಯಲು=ವಿಚಾರಮಾಡಿ ನೋಡಲು, ದೇಹದೊಳು = ದೇಹದಿಂದ, ಉಂಡಿರ ಬೇಕು=ಭೋಗಿಸಿರಬಹುದು. ಮಿಗೆ=ವಿಶೇಷವಾಗಿ, ಕಾಮಿಸಿ=ಇಚ್ಛೈಸಿ, ಭೋಗಿಪುದದು=ಉಣ್ಣುವದಾದರೂ, ಸಾಕು=ಬೇಡ, ಕಾಮಂ=ರಾಗ, ಕ್ರೋಧಂ= ದ್ವೇಷ, ಮೋಹಾದಿಗಳು=ವಿಷಯಾಸಕ್ತಿಗಳು, ತಾಮಸವವು=ತಮೋಗುಣಾತ್ಮಕ ಗಳಾಗಿರುವವು, ಅವು ಹೃದಯ ಗ್ರಂಥಿಗಳು=ಅವೇ ಮನಸ್ಸಿನ ಗಂಟುಗಳು, ಆಗಳುಂ=ಯಾವಾಗಲೂ, ಅವರಿಂದ=ಆಕಾಮಕ್ರೋಧಾದಿಗಳಿಂದ,ಅತ್ತಿತ್ತೊಲಿವ= ಚಂಚಲವಾಗುತ್ತಿರುವ, ಆ ಗಂಟಿನ = ಆ ಕಾಮಾದಿಗಳಿಂದೊಡಗೂಡಿದ, ಭವಬಂಧನ=ಜನನಮರಣರೂಪಬಂಧನಕ್ಕೆ ಕಾರಣವಾದ,ಮನವ=ಮನಸ್ಸನ್ನು, ಪುಟ್ಟುವ=ಹುಟ್ಟುವಂಥಾ, ಸುವಿವೇಕದ=ಆತ್ಮಾನಾತ್ಮ ವಿಚಾರದ, ಮನದಿಂದ= ಮನಸ್ಸಿನಿಂದ, ನೆಟ್ಟನೆ = ಸರಳವಾಗಿ, ಕಡಿವುದು = ಛೇದನ ಮಾಡುವದು, ಮಸೆದುಳಿಯಿಂದ=ತೀಕ್ಷ್ಣವಾದ ಉಳಿಯಿಂದ, ಜಡದಿಹ=ಹಾಕಿದ, ಸಂಕಲೆಯಂ= ಬೇಡಿಯನ್ನು, ಕಡಿವಂತೆ=ತುಂಡು ಮಾಡುವಹಾಗೆ, ಕಡಿದೊಡೆ=ಇಬ್ಭಾಗ ಮಾಡಿದ್ದಾದರೆ, ಮುನ್ನ=ಮೊದಲು, ಇರ್ದಂತೆ=ಇದ್ದಕ್ಕಿದ್ದಹಾಗೆ, ನೀನಹೆ= ನೀನಿರುವಿ.

ತಾತ್ಪರ್ಯ:—ಎಲೈ ಶಿಷ್ಯನೇ! ಕೇಳು. ಜನ್ಮ ಜನ್ಮಾಂತರಗಳಲ್ಲಿ ಶ್ರೋತ್ರನೇತ್ರಾದಿಂದ್ರಿಯಗಳಿಂದ ಶಬ್ದ ರೂಪಾದಿ ವಿಷಯಗಳನ್ನು ಹೊಂದಿ, ಅನುಕೂಲವಾದರೆ ಸುಖವನ್ನಾಗಲಿ ಪ್ರತಿಕೂಲವಾದರೆ ದುಃಖವನ್ನಾಗಲಿ ವಿಚಾರ ಮಾಡಿ ನೋಡುತ್ತಿರಲಿಕ್ಕೆ ಅನುಭವಿಸಿರಲಿಕ್ಕೇ ಬೇಕು. ಆದ್ದರಿಂದ ಇನ್ನು ಮುಂದೆ ಆ ವಿಷಯಗಳನ್ನು ಇಚ್ಛೈಸಿ, ಯಜ್ಞಾದಿ ಕರ್ಮಗಳನ್ನು ಮಾಡಿ ಆ ವಿಷಯ ಸುಖವನ್ನು ಉಪಭೋಗಿಸುತ್ತೇನೆ ಎಂಬುವ ಕಾಮನೆಯನ್ನು ಮಾಡಬೇಡ. ಯಾಕಂದರೆ, ಜನ್ಮಾಂತರಗಳಲ್ಲಿ ಸಾರ್ವಭೌಮ ಇಂದ್ರಾದಿ ಪದವಿ ಯನ್ನು ಹೊಂದಿ; ಅನೇಕ ವಿಷಯ ಸುಖವನ್ನನುಭವಿಸಿದರೂ, ನೀನು ಮುಕ್ತ ನಾಗಿಲ್ಲ, ಇನ್ನುಮುಂದೆಯೂ ಹೀಗೆ ಮಾಡಿದರೆ ಮೋಕ್ಷವನ್ನು ಹೊಂದದೆ ಜನನ ಮರಣ ರೂಪ ಪ್ರವಾಹದಲ್ಲಿಯೇ ಬಿದ್ದುಹೋಗುವಿ. ಆದರೆ, ಅತ್ಯಂತ ದುಃಖ ನಿವೃತ್ತಿ ಪರಮಾನಂದ ಪ್ರಾಪ್ತಿ ಲಕ್ಷಣಾತ್ಮಕ ಮೋಕ್ಷವನ್ನು ಪಡೆಯಬೇಕಾದರೆ; ವಿಷಯದಿಚ್ಛೆಯನ್ನು ವಿಷದಂತೆ ತ್ಯಾಗಮಾಡಿ, ವಿವೇಕದೃಷ್ಟಿಯಿಂದ ನಿನ್ನ ಸ್ವರೂಪವನ್ನು ವಿಚಾರಮಾಡಿ ನೋಡು. ಹೇಗಂದರೆ, ಅಪ್ರಾಪ್ತ ವಿಷಯವನ್ನು ಪ್ರಾಪ್ತಿಮಾಡಿಕೋಳ್ಳಬೇಕೆಂಬುವದೇ ಕಾಮವು, ತನಗೂ ಅನ್ಯರಿಗೂ ಸಂತಾಪ

CC-0. Jangamwadi Math Collection. Digitized by eGangotri

ವನ್ನುಂಟುಮಾಡುವಂಥಾದ್ದೇ ಕ್ರೋಧವು, ಪ್ರಾಪ್ತಗಳಾದ ವಿಷಯಗಳು ಯಾವ ರೀತಿಯಿಂದಲೂ ನಾಶವಾಗಬಾರದೆಂಬ ಬುದ್ಧಿಯೇ ಮೋಹವು, ಈ ಕಾಮ ಕ್ರೋಧ ಮೋಹಾದಿಗಳೇ ಮನಸ್ಸಿನ ಗಂಟುಗಳಾಗಿರುತ್ತವೆ. ಈ ತಮೋಗುಣಾತ್ಮಕ, ಅಥವಾ ರಜೋಗುಣಾತ್ಮಕ ಕಾಮಾದಿಗಳಿಂದ ಮನಸ್ಸು ಯಾವಾಗಲೂ ವಾಯುವಿನಂತೆ ಚಲಿಸುತ್ತಿರುತ್ತದೆ. ಕೈಕಾಲುಗಳಿಗೆ ಹಾಕಿದ ಕಬ್ಬಿಣದ ಬೇಡಿಯನ್ನು ಹದನಾದ ಕಬ್ಬಿಣದ ಉಳಿಯಿಂದಲೇ ಕಡಿಯುವಂತೆ; ಈಕಾಮಕ್ರೋಧ ಮೋಹಾದಿಗಳಿಂದ ಮಲಿನಾತ್ಮಕವಾದ ಬಂಧನ ರೂಪ ಮನಸ್ಸನ್ನು ಆತ್ಮಾನಾತ್ಮ ವಿವೇಕವೆಂಬ ಶುದ್ಧ ಮನಸ್ಸಿನಿಂದ ನಾಶಮಾಡುತ್ತಿರಲಿಕ್ಕೆ; ಮೊದಲಿದ್ದಂತೆ ಈಗಾದರೂ ಅದ್ವಯಾನಂದ ಸ್ವರೂಪನೇ ಇರುವಿ ಎಂಬ ತಾತ್ಪರ್ಯವು.

ಬಳಿಕ; "ಮುನ್ನಿರ್ದಂತೆ ನೀನಹೆ" ಹೀಗೆನ್ನಲು ನಾನು ಮೊದಲಿಗೆ ಯಾವ ಸ್ವರೂಪದಿಂದಿರಬಹುದು? ನನ್ನ ನಿಜವು ಯಾವುದೆಂಬುದನ್ನು ತಿಳಿಯಬೇಕೆಂಬ ಕುತೂಹಲವುಳ್ಳವನಾಗಲು, ಸ್ಥೂಲ ಸೂಕ್ಷ್ಮ ಶರೀರಗಳೆರಡೂ ಅನಾತ್ಮಗಳೆಂತಲೂ, ಅವಕ್ಕೆ ಸಾಕ್ಷಿಯಾದ ಪರ ರೂಪೇ ನಿನ್ನ ನಿಜವೆಂತಲೂ ಹೇಳುತ್ತಾರೆ.

ನಿನಗಾ ಸ್ಥೂಲಂ ಸೂಕ್ಷ್ಮಂ ಪರವು |
ಎನಿಸುವ ತ್ರೈರೂಪಿನೊಳಾ ಪರವು ||

ಒಂದೇ ನಿತ್ಯವೆನಿಸಿಕೊಳುತಿರ್ಕು |
ಹಿಂದುಳಿದೆರಡುಮಸತ್ಯಂ ತೋರ್ಕು ||

ವಿದಿತಂ ಸ್ಥೂಲಂ ಭೋಗಾಯತನಂ |
ಅದನಿಡಿದಿಹುದೇ ಮನಮುಗುಳುತನಂ ||

ಆ ಸೂಕ್ಷ್ಮವೆ ಬಗೆಗೊಡಲಾಗಿಹುದು |
ಭಾಸುರದತಿಮಾಯಿಕವೆನಿಸಿಹುದು ||

ನಿರುತಂ ಬುದ್ಧಿಗೆ ಸಾಕ್ಷಿಕರೂಪು |
ಪರವೆನಿಸುವದದು ನಿಜಚಿದ್ರೂಪು ||

ಮೊದಲೆರಡರೊಳಾ ಭ್ರಮೆಯುಂ ಬಿಟ್ಟು |
ಪದುಳದೊಳಿರು ಚಿತ್ಪದವಳವಟ್ಟು ||೭||

ಟೀಕಾ:—ನಿನಗೆ=ನಿನಗೆ, ಆಸ್ಥೂಲಂ=ಸ್ಥೂಲದೇಹವು, ಸೂಕ್ಷ್ಮ=ಸೂಕ್ಷ್ಮದೇಹವು, ಆ ಪರವು=ಸಾಕ್ಷಿ ರೂಪವು, ಎನಿಸುವ=ಹೇಳಿಸಿಕೊಳ್ಳುವ, ತ್ರೈರೂಪಿ

CC-0. Jangamwadi Math Collection. Digitized by eGangotri

ನೊಳು=ಮೂರು ರೂಪುಗಳಲ್ಲಿ, ಆ ಪರವು=(ಆ ಸಾಕ್ಷಿಯಾದ) ಚೈತನ್ಯರೂಪು, ಒಂದೇ=ಏಕವೇ, ನಿತ್ಯವೆನಿಸಿಕೊಳುತಿರ್ಕು=ತ್ರಿಕಾಲ ಅಬಾಧ್ಯವೆನ್ನಿಸಿಕೊಳ್ಳುವದು, ಹಿಂದುಳಿದ=ಬಾಕಿ ಉಳಿದ, ಎರಡುಂ=ಸ್ಥೂಲಸೂಕ್ಷ್ಮಗಳೆರಡೂ, ಅಸತ್ಯಂ=ಸುಳ್ಳಾಗಿ, ತೋರ್ಕು=ತೋರುವವು, ವಿದಿತಂ=ಪ್ರಸಿದ್ಧವಾದ, ಸ್ಥೂಲಂ=ಸ್ಥೂಲ ಶರೀರವು, ಭೋಗಾಯತನಂ=ಭೋಗಕ್ಕೆ ಆಶ್ರಯವಾಗಿರುವದು, ಅದನು=ಸ್ಥೂಲ ತನುವನ್ನು, ಇಡಿದಿಹುದೇ = ನಾನೆಂದು ತಿಳಿಯುವದೇ, ಮನ=ಮನಸ್ಸಿನ, ಮರಳುತನಂ=ಹುಚ್ಚುತನವು, ಆ ಸೂಕ್ಷ್ಮವೇ=ಆ ಸೂಕ್ಷ್ಮಶರೀರವೇ, ಬಗೆಗೆ=ವಾಸನೆಗೆ, ಒಡಲಾಗಿಹುದು=ಶರೀರವಾಗಿರುವದು. ಭಾಸುರದ=ಪ್ರಕಾಶಮಾನವಾದ, ಅತಿಮಾಯಿಕವೆನಿಸುವದು=ಬಹಳೇ ಮಿಥ್ಯೆಯಾಗಿರುವದು, ನಿರುತಂ=ಯಾವಾಗಲೂ, ಬುದ್ಧಿಗೆ = ಅಂತಃಕರಣಕ್ಕೆ, ಸಾಕ್ಷಿಕರೂಪು = ಸಾಕ್ಷಿಯಾದ ಚೈತನ್ಯವೇ, ಪರವೆನಿಸುವದು=ಶ್ರೇಷ್ಠವೆನಿಸುವದು, ಅದು=ಅದುವೇ, ನಿಜ=ಯಥಾರ್ಥವಾದ, ಚಿದ್ರೂಪು=ಜ್ಞಾನಸ್ವರೂಪವು, ಮೊದಲೆರಡರೊಳ್=ಮೊದಲಿನ ಸ್ಥೂಲಸೂಕ್ಷ್ಮಗಳೆರಡರಲ್ಲಿಯ, ಆ ಭ್ರಮೆಯಂ=ಆ ಭ್ರಾಂತಿಯನ್ನು, ಬಿಟ್ಟು=ತ್ಯಾಗಮಾಡಿ, ಚಿತ್ಪದವ=ಚೇತನ ಸ್ವರೂಪವನ್ನು, ಅಳವಟ್ಟು=ಪ್ರಾಪ್ತಿಮಾಡಿಕೊಂಡು, ಪದುಳದೋಳ್=ಸಂತೋಷದಿಂದ, ಇರು=ವಾಸಿಸು.

ತಾತ್ಪರ್ಯ:— ಎಲೈ ಶಿಷ್ಯನೇ ! ನಿನಗೆ ಸ್ಥೂಲಶರೀರ, ಸೂಕ್ಷ್ಮಶರೀರ ಈ ಶರೀರದ್ವಯಗಳಿಗೆ ಅಧಿಷ್ಠಾನವಾದ ಕೂಟಸ್ಥ ಚೇತನ, ಈ ಪ್ರಕಾರ ಮೂರು ರೂಪಗಳು ಗೋಚರಗಳಾಗಿರುತ್ತದೆ. ಇವುಗಳಲ್ಲಿ ಉಕ್ತ ಎರಡು ಶರೀರಗಳಿಗೆ ಭಿನ್ನವಾದ ಯಾವ ಪರರೂಪು ಉಂಟೋ; ಅದು ತ್ರಿಕಾಲ ಅಬಾಧ್ಯವಾಗಿರೋಣದ ರಿಂದ ನಿತ್ಯವೆನಿಸುತ್ತದೆ. ಯಾಕಂದರೆ, ಈ ಸ್ಥೂಲಸೂಕ್ಷ್ಮ ಶರೀರಗಳು ಕೂಟಸ್ಥ ಚೈತನ್ಯದಲ್ಲಿ ಕಲ್ಪಿತವಾಗಿರುವಂತೆ, ಕೂಟಸ್ಥ ಚೈತನ್ಯವು ಬೇರೆ ಯಾವ ಅಧಿಷ್ಠಾನದಲ್ಲಿಯೂ ಕಲ್ಪಿತವಾಗಿರುವದಿಲ್ಲ. ಆದ್ದರಿಂದ ನಿತ್ಯವೆನಿಸುತ್ತದೆ. ಒಂದು ವೇಳೆ ಈ ನಿತ್ಯವಾದ ಪರಕ್ಕೂ ಬೇರೊಂದು ಅಧಿಷ್ಠಾನವು ಉಂಟೆಂದು ವಾದಮಾಡಿದರೆ; ಆ ವಾದಿಯನ್ನು ಕುರಿತು ಹೀಗೆ ಪ್ರಶ್ನೆ ಮಾಡಬೇಕು, ಹೇಗಂದರೆ; “ಈ ಪರವಸ್ತು ತನಗೆ ತಾನೇ ಆಶ್ರಯವಾಗಿರುವದೋ ? ಅಥವಾ ಬೇರೊಂದು ಪರವನ್ನು ಆಶ್ರಯಮಾಡಿಕೊಂಡಿರುವದೋ? ಹೇಳು. ಪ್ರಥಮ ಪಕ್ಷವನ್ನು ಒಪ್ಪಿದರೆ ತಾನೇ ಕರ್ತೃ ತಾನೇ ಕರ್ಮವಾಗೋಣದರಿಂದ ಆತ್ಮಾಶ್ರಯ ದೋಷ ಬರುವದು. ಇದನ್ನು ನಿರಾಕರಿಸುವದಕ್ಕಾಗಿ ದ್ವಿತೀಯ ಪಕ್ಷವನ್ನಂಗೀಕರಿಸಿದರೆ, ಆ ಎರಡನೇ ಪರವಸ್ತುವಾದರೂ ತನಗೆ ತಾನೇ ಆಶ್ರಯವಾಗಿರುವದೊ ? ಬೇರೆ ಒಂದನ್ನು ಆಶ್ರಯಮಾಡಿಕೊಂಡಿರುವದೋ ? ಹೇಳು ಎಂದು ಕೇಳಲು; ವಾದಿಯು ” ಪ್ರಥಮ ಪಕ್ಷವನ್ನು ಒಪ್ಪಿದರೆ ಆತ್ಮಾ

CC-0. Jangamwadi Math Collection. Digitized by eGangotri

ಶ್ರಯ ದೋಷ ಬರುತ್ತದೆ, ಎಂದು ತಿಳಕೊಂಡು, ಆ ದೋಷನಿವಾರಣಾರ್ಥ ಮೊದಲನೆ ಪರವಸ್ತುವಿಗೆ ಎರಡನೆ ಪರವಸ್ತುವಿನ ಆಶ್ರಯವುಂಟು. ಎರಡನೇ ಪರವಸ್ತುವಿಗೆ ಮೊದಲನೇ ಪರವಸ್ತುವಿನ ಆಶ್ರಯವುಂಟು" ಎಂದು ಹೀಗೆ ಹೇಳಲು; ಅನ್ಯೋನ್ಯಾಶ್ರಯ ದೋಷ ಬರುತ್ತದೆ. ಈ ದೋಷವನ್ನು ಕಳೆಯುವ ದಕ್ಕಾಗಿ ಮತ್ತೊಂದು ಮೂರನೇ ಪರವಸ್ತುವನ್ನು ಅಂಗೀಕರಿಸಿದರೆ, ಚಕ್ರಿಕಾಪತ್ತಿ ದೋಷಬರುತ್ತದೆ. ನಾಲ್ಕನೆಯದನ್ನು ಒಪ್ಪಿದರೆ, ಅನವಸ್ಥಾ ಮೊದಲಾದ ದೋಷಗಳು ಬರುತ್ತವೆ. ಆದ್ದರಿಂದ ಪರವಸ್ತುವಿಗೆ ಬೇರೊಂದು ಯಾವ ಅಧಿಷ್ಠಾನವೂ ಇಲ್ಲ. ಮತ್ತು ಶೃತಿಯಾದರೂ ತನ್ನ ಮಹಿಮೆಯಲ್ಲಿ ತಾನಿದ್ದಾನೆ. ಬೇರೊಂದಾಶ್ರಯವಿಲ್ಲೆಂದು ನಿರಾಕರಿಸುತ್ತದೆ. ಆದ್ದರಿಂದ ಪರವಸ್ತು ನಿತ್ಯ ವಾಗಿರುತ್ತದೆ. ಉಳಿದ ಸ್ಥೂಲ ಸೂಕ್ಷ್ಮ ಶರೀರಗಳೆರಡೂ ಸುಳ್ಳಾಗಿರುತ್ತವೆ. ಯಾಕಂದರೆ, ಪಂಚಭೂತಗಳ ಸಂಬಂಧವಾದ ಭೌತಿಕ ಶರೀರವು, (ಅನೇಕ ಭೋಗ್ಯ ಪದಾರ್ಥಗಳನ್ನಿಡುವದಕ್ಕೆ ಮನೆಯು ಆಶ್ರಯವಾದಂತೆ) ಭೋಗಾ ಯತನವಾಗಿರುತ್ತದೆ. ಭೋಗ ಅಂದರೆ, ಸುಖ ಮತ್ತು ದುಃಖ ಇವುಗಳ ಪೈಕಿ ಯಾವದಾದರೊಂದು ಅನುಭವಿಸುವದು. ಇದಕ್ಕೆ ಆಶ್ರಯವಾಗಿರೋಣದರಿಂದ ಭೋಗಾಯತನವೆನಿಸುತ್ತದೆ. ಪರಂತು, ಲೋಕದಲ್ಲಿ ತಾನಿರುವ ಮನೆಯನ್ನೇ ತಾನೆಂದು ತಿಳಕೊಂಡರೆ ಎಷ್ಟು ಹುಚ್ಚುತನವಿರುವದೋ; ಅಷ್ಟೇ ಹುಚ್ಚುತನವು ಸ್ಥೂಲಶರೀರ ನಾನೆಂದು ತಿಳಿದುಕೊಂಡಲ್ಲಿಯೂ ಇರುವುದು. ಆದ್ದರಿಂದ ಘಟ ದಂತೆ ದೃಶ್ಯವಾದ ಶರೀರವು ತಾನಲ್ಲ ಎಂಬ ತಾತ್ಪರ್ಯವು. ಮತ್ತು ಆ ಸೂಕ್ಷ್ಮ ಶರೀರವಾದರೆ ಅನೇಕ ಉತ್ತಮ, ಮಧ್ಯಮ, ಕನಿಷ್ಠ ವಾಸನೆಗಳಿಗೆಲ್ಲಕ್ಕೂ ತವರ ಮನೆಯಾಗಿರುತ್ತದೆ. ಆದ್ದರಿಂದ ಸ್ವಪ್ನಾವಸ್ಥೆಯಲ್ಲಿ ಇಂದ್ರಜಾಲಿಕ ಪುರುಷನಂತೆ ಅನೇಕ ಸ್ವಪ್ನಪ್ರಪಂಚವನ್ನು ಕಲ್ಪಿಸುತ್ತದೆ. ಲೋಕಾಂತರ ಜನ್ಮಾಂತರ ಗಮನಾಗಮನಗಳನ್ನು ಮಾಡಿಸುತ್ತದೆ. ಮತ್ತು ಸುಪ್ತಿಸಮಾಧಿಗಳಲ್ಲಿ ವಿಲೀನಾವಸ್ಥೆಯಿಂದಿದ್ದು ಪುನಃ ಪ್ರಕಟವಾಗುತ್ತದೆ. ಈ ಕಾರಣದಿಂದ ಹದಿನೇಳು ತತ್ವಾತ್ಮಕ ಲಿಂಗ ಶರೀರವಾದರೂ ಅತಿಮಾಯಿಕ ಅಂದರೆ, ಬಹಳ ಆಶ್ಚರ್ಯಕರವಾಗಿರುತ್ತದೆ. ಆದರೆ, ಆಶ್ಚರ್ಯ ಮತ್ತು ಅನಿರ್ವಚನೀಯ ಇವು ಯಾವ ಯಾವ ವಸ್ತುಗಳಲ್ಲಿ ಬರುತ್ತವೆಯೋ; ಆ ವಸ್ತುಗಳು ಮಿಥ್ಯೆಯೆಂದೇ ನಿಶ್ಚಯಿಸತಕ್ಕದ್ದು. ಬಳಿಕ ಈ ಸ್ಥೂಲ ಸೂಕ್ಷ್ಮ ಶರೀರಗಳಿಗೆ ಅಧಿಷ್ಠಾನವಾದ ಯಾವ ಸಾಕ್ಷಿ ಸ್ವಯಂಪ್ರಕಾಶ ಆನಂದ ಸ್ವರೂಪವುಂಟೋ; ಅದೇ ನೀನಾಗಿದ್ದಿ. ಆದ್ದರಿಂದ ಎರಡೂ ಶರೀರಗಳಲ್ಲಿರುವ ನಾನೆಂಬ ಭ್ರಾಂತಿಯನ್ನು ಬಿಟ್ಟು ನಿಶ್ಚಿಂತ ದಿಂದ ಸುಖವಾಗಿ ಚಿತ್ಸ್ವರೂಪದಲ್ಲಿರು.

CC-0. Jangamwadi Math Collection. Digitized by eGangotri

ಬಳಿಕ; ಎಲೈ ಶಿಷ್ಯನೇ! ನಿನ್ನ ಚಿನ್ಮಾತ್ರ ಸ್ವರೂಪವನ್ನು ಕುರಿತು, ಅನೇಕ ಮತವಾದಿಗಳು ತಮ್ಮ ತಮ್ಮ ಮನಸ್ಸಿಗೆ ಗೋಚರವಾದಂತೆ ಅನೇಕ ಹೆಸರುಗಳನ್ನು ಕೊಟ್ಟು ಕರೆಯುತ್ತಿದ್ದಾರೆ. ಪರಂತು ಎಲ್ಲ ಭಾವನೆಗಳನ್ನು ಕಳೆಯಲು ಯಾವದೊಂದು ಹೆಸರಿಲ್ಲದೆ ಕೇವಲ ಚಿನ್ಮಾತ್ರವೇ ಇರುತ್ತದೆ. ಎಂದು ಪ್ರತಿಪಾದನಮಾಡುತ್ತಾರೆ.

ಶ್ರುತಿಮತಿ ನಿಷ್ಕಳಬ್ರಹ್ಮವೆಯೆಂದು।
ನುತತಾಂತ್ರಿಕರಿದುಪರಶಿವನೆಂದು॥

ಮತ್ತೆ ಕೆಲರು ನಿಜಲಿಂಗವಿದೆಂದು।
ಮತ್ತೆ ಕೆಲರು ನಾರಾಯಣನೆಂದು॥

ಆಸಾಂಖ್ಯರುಗಳೆ ಪುರುಷನಿದೆಂದು।
ವೈಶೇಷಿಕರಿದನೀಶ್ವರನೆಂದು॥

ಕೆಲಬರು ಬೌದ್ಧರು ಶೂನ್ಯಮಿದೆಂದು।
ಕೆಲಬರೊಲಿದು ವಿಜ್ಞಾನಮಿದೆಂದು॥

ಸಂಕಲ್ಪದಭೇದವನುಳ್ಳಂತೆ।
ಶಂಕಿಸದುಸುರುವರವರರಿದಂತೆ॥

ಬಗೆಗೆಡಲಿಂತೆನಲಿಲ್ಲದೆಯೊಂದು।
ಮಿಗುತೆಯುನರಿಚಿನ್ಮಾತ್ರಮಿದೆಂದು ॥೮॥

ಟೀಕಾ:—ಶೃತಿಮತಿ=ವೇದಾಂತಿಯು, ನಿಷ್ಕಲ=ಹದಿನಾರು ಕಲೆಗಳಿಲ್ಲದ, ಬ್ರಹ್ಮವೆಯೆಂದು=ದೊಡ್ಡ ವಸ್ತುಯೆಂದು, ನುತ=ಸ್ತುತಿಸಲ್ಪಟ್ಟ, ತಾಂತ್ರಿಕರು=ತಂತ್ರ ಸಂಬಂಧಿಗಳಾದ ಶೈವರು, ಪರಶಿವನೆಂದು=ಸ್ವಯಂ ಪ್ರಕಾಶನೆಂದು, ಮತ್ತೆ=ಅನಂತರ, ಕೆಲರು=ವೀರಶೈವರು, ನಿಜ ಲಿಂಗವಿದೆಂದು=ಲಯೋತ್ಪತ್ತಿ ರಹಿತವಾದ ಯಥಾರ್ಥ ವಸ್ತುಯೆಂದು, ಮತ್ತೆ=ಬಳಿಕ, ಕೆಲರು=ವೈಷ್ಣವರು, ನಾರಾಯಣನೆಂದು=ಚರಾಚರ ಜಗತ್ತಿಗೆ ಆಧಾರವಾದವನೆಂದು, ಆಸಾಂಖ್ಯರುಗಳು=ಕಪಿಲ ಮತಾನುಯಾಯಿಗಳು, ಪುರುಷನಿದೆಂದು=ಪ್ರಕೃತಿಗೆ ಅಸಂಗನಾದ ಪುರುಷನೆಂದು, ವೈಶೇಷಿಕರು=ಕಣಾದ ಮತಸ್ಥರು, ಇದನ್ನು=ನಿನ್ನ ಸ್ವರೂಪವನ್ನು, ಈಶ್ವರನೆಂದು=ನಿತ್ಯಜ್ಞಾನೇಚ್ಛಾ ಪ್ರಯತ್ನವುಳ್ಳ ಈಶ್ವರನೆಂದು, ಕೆಲರು ಬೌದ್ಧರು=ಕೆಲರು ಬುದ್ಧನ ಶಿಷ್ಯರು, ಶೂನ್ಯಮಿದೆಂದು=ಏನೊಂದಿಲ್ಲದಂಥಾದ್ದೆಂದು, ಕೆಲಬರು=ಆ ಬುದ್ಧನ ಶಿಷ್ಯರಲ್ಲಿ ಕೆಲವರು, ವಿಜ್ಞಾನಮಿದೆಂದು=ಕ್ಷಣಿಕ

CC-0. Jangamwadi Math Collection. Digitized by eGangotri

ಬುದ್ಧಿಯಿಂದು, ಸಂಕಲ್ಪದ=ಮನಸ್ಸಿನ, ಭೇದವನುಳ್ಳಂತೆ=ಭಿನ್ನ ಭಿನ್ನ ವಿಚಾರ ವಿದ್ದಂತೆ, ಶಂಕಿಸದೆ=ಸಂಶಯ ತಕ್ಕೊಳ್ಳದೆ, ಅವರು=ಉಕ್ತಜನರು, ಅರಿದಂತೆ= ತಿಳುಕೊಂಡ ಹಾಗೆ, ಉಸುರುವರು=ಹೇಳುವರು, ಬಗೆ=ಭಾವನೆಯು, ಕೆಡಲ್= ನಾಶವಾಗಲು, ಇಂತು=ಈ ಪ್ರಕಾರ, ಎನಲಿಲ್ಲದೆ=ಹೇಳಲಿಲ್ಲದೇ, ಒಂದು ಮಿಗು ತೆಯನು=ಎಲ್ಲಾನು ಅತಿಕ್ರಮಿಸಿದೊಂದನ್ನು, ಚಿನ್ಮಾತ್ರಮಿದೆಂದು=ಕೇವಲ ಚೈತನ್ಯ ಸ್ವರೂಪವೆಂದು, ಅರಿ=ತಿಳಿ.

ತಾತ್ಪರ್ಯಃ— ಉಪನಿಷತ್ತು ವಿಚಾರವನ್ನು ಮಾಡುವಂಥಾ ವೇದಾಂತಿ ಗಳು, ನಿನ್ನ ಚಿತ್ ಸ್ವರೂಪವನ್ನು ಕುರಿತು, ಅವಿದ್ಯಾ ತತ್ಕಾರ್ಯಗಳಿಂದ ರಹಿತ ವಾದ, ದೇಶಕಾಲಾದಿ ಪರಿಚ್ಛಿನ್ನ ರಹಿತ, ಸ್ವಗತಾದಿ ಭೇದ ಶೂನ್ಯವಾದ, ಪೂರ್ಣ ಪರಬ್ರಹ್ಮವೆಂದು ಹೇಳುತ್ತಾರೆ. ವಾತುಲಾದಿ ಆಗಮ ಗ್ರಂಥಗಳನ್ನು ವಿಚಾರಿ ಸುವಂಥಾ ತಾಂತ್ರಿಕರು ಮಲ, ಕರ್ಮ, ಮೋಹ ಪಾಶಾದಿಗಳಿಂದ ರಹಿತವಾದ ಸ್ವತಂತ್ರ ಶಕ್ತಿಯುಳ್ಳ ಪರಶಿವನೆಂದು ಹೇಳುತ್ತಾರೆ. ಅವರುಗಳಲ್ಲಿಯೇ ಕೆಲ ವರು ಷಟ್‌ಸ್ಥಳ ಭಕ್ತ, ಮಹೇಶ್ವರಾದಿ ಆಚಾರಲಿಂಗ, ಗುರುಲಿಂಗ, ಶಿವಲಿಂಗಾದಿ ಗಳ ವಿಚಾರ ಮಾಡುತ್ತಾ, ಕಡೆಯಲ್ಲಿ ಅವಶೇಷವಾಗಿ ಇದ್ದದ್ದಕ್ಕೆ ನಿಜಲಿಂಗ ವೆಂದು ಕರೆಯುತ್ತಾರೆ, ಭಾಗವತ ಸಾಂಪ್ರದಾಯಕರಾದ ವೈಷ್ಣವರು ಅಂತ ರ್ಯಾಮಿಯಾದ (ನಾರ) ಚರಾಚರ ಜಗತ್ತಿಗೆ (ಅಯನ) ಅಧಿಷ್ಠಾನನಾಗಿರುವ ನಾರಾಯಣನೆಂದೂ ಹೇಳುತ್ತಾರೆ. ಕಪಿಲ ಮತಾನುಯಾಯಿಗಳಾದ ಸಾಂಖ್ಯರು ಸತ್ವ, ರಜ, ತಮೋ ಗುಣಗಳ ಸ್ವರೂಪವಾದ ಪ್ರಕೃತಿಗೆ ಸಾಕ್ಷಿ ಅಸಂಗನಾದ ಪುರುಷನೆಂದು ಹೇಳುತ್ತಾರೆ. ಕಣಾದ ಮುನಿಯ ಮತಾನುಯಾಯಿಗಳಾದ ವೈಶೇಷಿಕರು ನಿತ್ಯಗಳಾದ ಜ್ಞಾನ, ಇಚ್ಛಾ, ಪ್ರಯತ್ನಗಳುಳ್ಳವನೂ, ಸತ್ಯಸಂಕ ಲ್ಪಾದಿ ಗುಣಗಳುಳ್ಳವನೂ ಆದವನೇ ಈಶ್ವರನೆಂದು ಹೇಳುತ್ತಾರೆ. ಬುದ್ಧನ ನಾಲ್ವರ ಶಿಷ್ಯರಲ್ಲಿ ಒಬ್ಬನು ಜಗದುತ್ಪತ್ತಿಗಿಂತ ಪೂರ್ವದಲ್ಲಿ ಶೂನ್ಯವುಂಟು, ಜಗತ್ತು ನಾಶವಾದನಂತರ ಶೂನ್ಯವೇ ಉಂಟು. ಅಂದಮೇಲೆ; ಮಧ್ಯಕಾಲದಲ್ಲಿ ತೋರುವುದೆಲ್ಲವೂ ಶೂನ್ಯವೇ ಇರುತ್ತದೆ. ಹೀಗೆ ನಿಶ್ಚೈಸಿ ನಿನ್ನ ನಿಜವನ್ನು ಶೂನ್ಯವೆಂದು ಕರೆಯುತ್ತಾನೆ. ಮತ್ತೊಬ್ಬನು ಈ ಪರಿದೃಶ್ಯಮಾನಗಳಾಗಿ ತೋರುವ ಪದಾರ್ಥಗಳು ಯಾವೂ ಇಲ್ಲ. ಕಿಂತು; ನಮ್ಮ ಶರೀರದೊಳಗಿರುವ ಬುದ್ಧಿಯೇ ಹೊರಗೆ ಹೋಗಿ ಆಯಾಯ ಪದಾರ್ಥಗಳಾಗಿರುತ್ತದೆ. ಆದ್ದರಿಂದ ಕ್ಷಣಿಕ:ವಿಜ್ಞಾನರೂಪ ಬುದ್ಧಿಯೇ ಆತ್ಮವೆಂದು ಹೇಳುತ್ತಾರೆ. ಈ ಪ್ರಕಾರ ಸಕಲ ಮತವಾದಿಗಳು ತಮ್ಮ ತಮ್ಮ ಮನಸ್ಸಿನ ಭಾವನೆಗಳಂತೆ, (ತಾವು ನಿಶ್ಚಯ ಮಾಡಿಕೊಂಡಂತೆ,) ಸಂಶಯವಿಲ್ಲದೆ ಹೇಳುವರು. ಆದರೆ ಈ ಯಾವತ್ತು ಭಾವನೆಗಳು ಕೆಡಲು ಹೀಗೆ ಕರೆದಂತೆ ಕರೆಯಲಿಕ್ಕೆ ಬರುವುದಿಲ್ಲ. ಎಲ್ಲಾ

CC-0. Jangamwadi Math Collection. Digitized by eGangotri

ಭಾವನೆಗಳನ್ನು ಕಳೆಯುತ್ತಿರಲು ಕಳೆಯಲಿಕ್ಕೆ ಬಾರದ ಅವಶೇಷವಾಗಿರುವ ಚಿನ್ಮಾತ್ರವೇ ನನ್ನ ಸ್ವರೂಪವೆಂದು ನಿಶ್ಚಯಮಾಡು.

ಬಳಿಕ; ನಿನ್ನ ಚಿನ್ಮಾತ್ರಸ್ವರೂಪವೇ ಜಾಗ್ರತ್ಸ್ವಪ್ನ ಸುಪ್ತಿಗಳಿಗೆ ಮೀರಿ ತುರ್ಯವೆನಿಸಿರುವುದು. ಅದೇ ನಾನೆಂದು ನಿಶ್ಚಯವುಳ್ಳವನಾದರೆ ನಿನಗೆ ಮೋಕ್ಷ ವಾಗುತ್ತದೆ. ಎಂದು ಪ್ರತಿಪಾದನ ಮಾಡುತ್ತಾರೆ.

ಉಳಿದ ನಿಜದೊಳಾಬಗೆಯಿಲ್ಲಾಗಿ ।
ತಿಳಿ ಯುದಯವುಲಯವದಕಿಲ್ಲಾಗಿ ॥

ಅದು ತನ್ನಿಂ ತಾಂ ತೋರುವುದಾಗಿ ।
ಅದು ನಿರ್ಲಕ್ಷಣ ನಿರ್ಗುಣವಾಗಿ ॥

ನಿರಘ ನಿರಂಜನ ನಿಷ್ಕ್ರಿಯವಾಗಿ ।
ನಿರುಪಾಧಿಕ ನಿರ್ದ್ವಂದ್ವವುದಾಗಿ ॥

ಅದು ತಾನಿಹುದದರೊಳುಮನವಿಲ್ಲ ।
ಅದರಿಂ ಕನಸು ನೆನಸು ಮುನ್ನಿಲ್ಲ ॥

ಬರಿಯರಿವಲ್ಲದೆ ಮೂಢತೆಯಿಲ್ಲ ।
ಅರಿಯದರಿಂದದು ಸುಪ್ತಿಯುಮಲ್ಲ ॥

ಆ ಚಿತ್ಪದವೇ ತುರ್ಯವೆನಿಕ್ಕು ।
ಯೋಚಿಸಿ ತಿಳಿ ಕೈವಲ್ಯಮದಕ್ಕು ॥೯॥

ಟೀಕಾ:— ಉಳಿದ=ಅವಶೇಷವಾದ, ನಿಜದೊಳು=ಚಿನ್ಮಾತ್ರ ಸ್ವರೂಪ ದಲ್ಲಿ, ಬಗೆಯಿಲ್ಲಾಗಿ=ಭಾವನೆಗಳಿಲ್ಲಾಗಿ, ಅದಕೆ=ಆ ನಿಜಕ್ಕೆ, ಉದಯವು=ಉತ್ಪ ತ್ತಿಯು, ಲಯವು=ನಾಶವು, ಇಲ್ಲಾಗಿ=ರಹಿತವಾಗಿ, ಅದು=ನಿಜರೂಪವು, ತನ್ನಿಂತಾಂ=ಸ್ವಯಂ ಸಿದ್ಧತೆಯಿಂದ, ತೋರುವುದಾಗಿ=ಪ್ರತೀತಿಯಾಗುವಂಥಾ ದ್ದಾಗಿ, ಅದು=ನಿನ್ನ ಸ್ವರೂಪು, ನಿರ್ಲಕ್ಷಣ=ಲಕ್ಷಣರಹಿತವಾಗಿ, ನಿರ್ಗುಣ=ಗುಣ ತ್ರಯ ರಹಿತವಾಗಿ, ನಿರಘ=ನಿಷ್ಪಾಪ, ನಿರಂಜನ=ಮಾಯಾಶೂನ್ಯ, ನಿಷ್ಕ್ರಿಯ ವಾಗಿ=ಕ್ರಿಯಾಶೂನ್ಯವಾಗಿ, ನಿರುಪಾಧಿಕವಾಗಿ=ಉಪಾಧಿಯಿಲ್ಲದ್ದಾಗಿ ನಿರ್ದ್ವಂ ದವುದಾಗಿ=ಸುಖದುಃಖಾದಿ ದ್ವಂದಾತೀತವಾಗಿ, ಅದು=ನಿನ್ನ ನಿಜರೂಪು, ತಾನಿ ಹುದು=ಸ್ವಯಂವಾಗಿರುವುದು, ಅದರೊಳು=ಚಿನ್ಮಾತ್ರದಲ್ಲಿ, ಮನವಿಲ್ಲ=ಸಂಕಲ್ಪ

CC-0. Jangamwadi Math Collection. Digitized by eGangotri

ವಿಲ್ಲ, ಅದರಿಂ=ಆದ್ದರಿಂದ, ಕನಸು=ಸ್ವಪ್ನಾವಸ್ಥೆಯು, ನೆನಸು=ಜಾಗ್ರದವಸ್ಥೆಯು, ಮುನ್ನಿಲ್ಲ=ಮೊದಲೇ ಇಲ್ಲ, ಬರಿಯರಿವಲ್ಲದೆ=ಶುದ್ಧಚೇತನವಲ್ಲದೆ, ಮೂಢತೆಯಿಲ್ಲ=ಅಜ್ಞಾನವಿಲ್ಲ, ಅದರಿಂದ=ಈ ಕಾರಣದಿಂದ, ಅದು=ಚಿನ್ಮಾತ್ರವು, ಸುಷುಪ್ತಿಯುಮಲ್ಲ=ನಿದ್ರೆಯು ಅಲ್ಲ,ಅರಿ=ತಿಳಿ,ಆ ಚಿತ್ಪದವೇ=ಆ ಜ್ಞಾನಸ್ವರೂಪವೇ, ತುರ್ಯಮೆನಿಕ್ಕು=ಪ್ರತ್ಯಗಾತ್ಮವೆನಿಸುವುದು, ಯೋಚಿಸಿ=ಮನನಮಾಡಿ, ಅರಿ=ನಿಶ್ಚೈಸು, ಅದು=ಆ ಸ್ವರೂಪವು, ಕೈವಲ್ಯಂ=ಮೋಕ್ಷವೇ, ಅಕ್ಕು=ಆಗುವದು.

ತಾತ್ಪರ್ಯ:— ಹೇ ಶಿಷ್ಯನೇ! ನಿನ್ನ ನಿಜವಾದ ಚಿನ್ಮಾತ್ರ ಸ್ವರೂಪವಲ್ಲಿ ಮೇಲೆ ಹೇಳಿದ ಯಾವತ್ತು ಭಾವನೆಗಳೂ ಇರುವದಿಲ್ಲ; ಭಾವನಾತೀತವಾದ್ದರಿಂದಲೇ ಅದಕ್ಕೆ ಉತ್ಪತ್ತಿ ನಾಶಗಳೂ ಇಲ್ಲ. ಉತ್ಪತ್ತಿ ನಾಶಗಳಿಲ್ಲದ್ದರಿಂದಲೇ ನಿನ್ನ ನಿಜಕ್ಕೆ ಬೇರೊಂದು ಆಶ್ರಯವಿಲ್ಲ; ಅದು ತನ್ನ ಮಹಿಮೆಯಲ್ಲಿದ್ದು ಸ್ವಯಂ ಪ್ರಕಾಶಮಾನವಾಗಿರುತ್ತದೆ. ಮಾಯೋಪಾಧಿರಹಿತ ಕೇವಲ ಶುದ್ಧ ಚೇತನ ವಿರೋಣದರಿಂದ ನಿನ್ನ ಸ್ವರೂಪವು ಯಾವ ಲಕ್ಷಣಗಳಿಂದಲೂ ಸತ್ವಾದಿ ಗುಣಗಳಿಂದಲೂ ರಹಿತವಾಗಿರುತ್ತದೆ. ಸೂಕ್ಷ್ಮ ಶರೀರಕ್ಕೆ ಅತೀತವಾದ್ದರಿಂದ ಪಾಪವಿಲ್ಲದ್ದಾಗಿರುತ್ತದೆ. ನಿನ್ನ ನಿಜವು ಅವಿದ್ಯೆಯಿಲ್ಲದ್ದರಿಂದ ನಿರಂಜನವಾಗಿರುತ್ತದೆ. ಕರ್ಮೇಂದ್ರಿಯಗಳಿಲ್ಲದ್ದರಿಂದ ನಿಷ್ಕ್ರಿಯವಾಗಿರುತ್ತದೆ. ಅಂತಃಕರಣಾದಿ ಯಾವುದೊಂದು ಉಪಾಧಿಯಿಲ್ಲದ್ದಾದ್ದರಿಂದನಿರುಪಾಧಿಕವೆನಿಸುವದು. ಸುಖ, ದುಃಖ, ರಾಗ, ದ್ವೇಷ ಮೊದಲಾದ ದ್ವಂದ್ವಗಳಿಲ್ಲದ್ದರಿಂದ ನಿರ್ದ್ವಂದವೆನಿಸುವುದು. ಈ ರೀತಿಯಿಂದ ನಿನ್ನ ನಿಜವಿರುವುದು. ಅದರಲ್ಲಿ ಸಂಕಲ್ಪ ವಿಕಲ್ಪಾತ್ಮಕವಾದ ಮನವೇ ಇಲ್ಲ. ಆದ್ದರಿಂದ ಜಾಗ್ರತ್ಸ್ವಪ್ನಾವಸ್ಥೆಗಳೆರಡೂ ಮೊದಲಿಗೇ ಇಲ್ಲ. ಕೇವಲ ಶುದ್ಧಚೇತನವಿರೋಣದರಿಂದ ಅಜ್ಞಾನವಿಲ್ಲ. ಆದ್ದರಿಂದಲೇ ಸುಷ್ಪ್ತಾವಸ್ಥೆಯೂ ಇಲ್ಲ. ಈ ಮೂರು ಅವಸ್ಥೆಗಳಿಗೂ ಉಕ್ತ ದೃಶ್ಯ ಅನಾತ್ಮ ಪದಾರ್ಥಗಳಿಗೂ ಸಾಕ್ಷಿಯಾದ ಯಾವ ಚಿದ್ರೂಪವುಂಟೋ, ಅದು ತುರ್ಯಾತ್ಮ ಅಂದರೆ, ನಾಲ್ಕನೇ ಪ್ರತ್ಯಗಾತ್ಮವೆನಿಸುವುದು. ಅದೇ ನಿನ್ನ ನಿಜವಾದ ಸ್ವರೂಪವು. ಇದೇ ನಾನೆಂದು ಶ್ರವಣ ಮನನ ನಿಧಿಧ್ಯಾಸನಗಳಿಂದ ನಿಶ್ಚಯಿಸಲ್ಪಟ್ಟರೆ ನಿನಗೆ ಮೋಕ್ಷವಾಗುತ್ತದೆ. ಅಂದರೆ, ಮೋಕ್ಷವೆಂಬುವದು ಲೋಕಾಂತರದಂತೆ ಭಿನ್ನವಿಲ್ಲ, ಕಿಂತು ಸ್ವರೂಪ ಪ್ರಾಪ್ತಿಯೇ ಮೋಕ್ಷವಾಗಿರುತ್ತದೆ.

ಬಳಿಕ; ತನ್ನ ನಿಜ ಸ್ವರೂಪ ಜ್ಞಾನವಾದಮೇಲೆ ವಾಸನೆಗಳು, ಹೃದಯ ಗ್ರಂಥಿಗಳು, ಸಂಶಯಗಳು, ಕರ್ಮಗಳು ನಾಶವಾಗಿ ದಗ್ಧಪಟದಂತೆ ಕರ್ತೃತ್ವವಿಲ್ಲದೆ, ಬದಿಕಿರುವಾತನೇ ಜೀವನ್ಮುಕ್ತನೆಂದು ಹೇಳುತ್ತಾರೆ.

CC-0. Jangamwadi Math Collection. Digitized by eGangotri

ಉಳಿದಿಹುದೊಂದೇ ಸದ್ರೂಪಾಗಿ ।
ಬಳಿಕದರೊಳಗಾಬಗೆಪುಸಿಯಾಗಿ ॥

ತಿಳಿವಡೆ ಮೃಗತೃಷ್ಣೆಯ ಜಲದಂತೆ ।
ಅಳಿವವು ಬಗೆಗಳು ನಿಜವರಿದಂತೆ ॥

ಬಿಡುವವು ಹೃದಯ ಗ್ರಂಥಿಗಳೆಲ್ಲ ।
ಕೆಡುವವು ತೋರುವ ಸಂಶಯವೆಲ್ಲ ।

ತನುಜನೆ ಕರ್ಮಾವಳಿಲಯವೆಲ್ಲ ।
ಪುನರಾವೃತ್ತಿ ಭ್ರಮೆ ತನಗಿಲ್ಲ ॥

ಪ್ರಾರಬ್ಧದ ವಾಸನೆ ಯುಳ್ಳನ್ನ ।
ಶಾರೀರ ವ್ಯವಹೃತಿ ಯಿರ್ಪನ್ನ ॥

ಭಾವಿಸಲಾತಂ ಬದುಕಿಹನಾಗಿ ।
ಜೀವನ್ಮುಕ್ತ ನೆನಿಪನಾಯೋಗಿ ॥೧೦॥

ಟೀಕಾ:— ಒಂದೇ = ಸ್ವಗತಾದಿಭೇದ ಶೂನ್ಯಮಾದ ವಸ್ತುವೇ, ಸದ್ರೂಪಾಗಿ=ತ್ರಿಕಾಲಾಬಾಧ್ಯಮಾಗಿ, ಉಳಿದಿಹುದು=ಅವಶೇಷಮಾಗಿರುವದು, ಬಳಿಕ=ಅನಂತರ, ಅದರೊಳಗೆ=ಆ ನಿಜದಲ್ಲಿ, ಆ ಬಗೆ=ಆ ಮನಸ್ಸು, ಪುಸಿಯಾಗಿ=ಮಿಥ್ಯೆಯಾದ್ದರಿಂದ, ತಿಳಿವಡೆ=ವಿಚಾರ ಮಾಡಿನೋಡಿದರೆ, ಮೃಗತೃಷ್ಣೆಯ=ಬಿಸಲ್ಗುದುರೆಯ, ಜಲದಂತೆ=ನೀರಿನಂತೆ, ಬಗೆಗಳು=ವಾಸನೆಗಳು, ಅಳಿವವು=ನಾಶವಾಗುವವು, ನಿಜವರಿದಂತೆ=ತನ್ನ ಸ್ವರೂಪವನ್ನು ತಿಳಿದಹಾಗೆ, ಎಲ್ಲ=ಸರ್ವ, ಹೃದಯ=ಮನಸ್ಸಿನ, ಗ್ರಂಥಿಗಳು=ಗಂಟುಗಳು, ಬಿಡುವವು=ಸಡಿಲಾಗುವವು, ತೋರುವ=ಪ್ರತೀತಿಯಾಗುವ, ಸಂಶಯವೆಲ್ಲ=ಸಕಲ ಸಂಶಯಗಳು, ಕೆಡುವವು=ನಾಶವಾಗುವವು, ತನುಜನೇ=ಎಲೈ ಮಗನೇ, ಕರ್ಮಾವಳಿ=ಕರ್ಮದಸಾಲು, ಲಯವೆಲ್ಲ=ಸಂಪೂರ್ಣ ನಾಶವಾಗುವದು, ತನಗೆ=ಜ್ಞಾನವುಳ್ಳ ತನಗೆ ಪುನರಾವೃತ್ತಿ=ಜನ್ಮಾಂತರದ, ಭ್ರಮೆ=ಭ್ರಾಂತಿಯು, ಇಲ್ಲ=ಇರುವದಿಲ್ಲ, ಪ್ರಾರಬ್ಧದ=ವರ್ತಮಾನ ಕರ್ಮದ, ವಾಸನೆ=ಗಂಧವು, ಉಳ್ಳನ್ನ=ಇರುವವರೆಗೆ, ಶಾರೀರ=ಶರೀರ ಸಂಬಂಧದ, ವ್ಯವಹೃತಿ=ವ್ಯವಹಾರವು, ಇರ್ಪನ್ನ=ಇರುವವರೆಗೆ, ಭಾವಿಸಲ್=ವಿಚಾರ ಮಾಡಲಾಗಿ, ಆತಂ=ಅವನು, ಬದುಕಿಹನಾಗಿ=ಜೀವಿಸಿರುವಂಥವನಾಗಿ, ಆಯೋಗಿ=ವಾಸನಕ್ಷಯವನ್ನು ಮಾಡಿಕೊಂಡ ಯೋಗಿಯು, ಜೀವನ್ಮುಕ್ತನು=ಜೀವತ್ಸ್ವರಹಿತನು, ಎನಿಪನು=ಎನಿಸುವನು.

CC-0. Jangamwadi Math Collection. Digitized by eGangotri

ತಾತ್ಪರ್ಯ:—ಪೂರ್ವ ಶ್ಲೋಕದಲ್ಲಿ ಯಾವ ನಿನ್ನ ಸ್ವರೂಪವು ಚಿದ್ರೂಪವೆಂದು ಹೇಳಲ್ಪಟ್ಟಿರುವದೋ; ಅದೇ ಸ್ವಗತ, ಸಜಾತಿ, ವಿಜಾತಿ ಭೇದತ್ರಯುಗಳಿಂದ ರಹಿತವಾಗಿ ಒಂದೇ ಅಖಂಡೈಕರಸವಾಗಿರುತ್ತದೆ. ಇಂಥಾ ವಸ್ತುವಿನ ಜ್ಞಾನವಾದಕೂಡಲೆ ಮನಸ್ಸು ಮಿಥ್ಯೆಯಾಗುತ್ತದೆ. ಮರಳು ಭೂಮಿಯಲ್ಲಿ ಸೂರ್ಯನ ಬಿಸಿಲಿನಿಂದ ತೋರುವ ಮೃಗಜಲವು ದೂರದಿಂದ ಸತ್ಯವಾಗಿ ತೃಷಾತುರನಿಗೆ ಜಲದಂತೆ ಕಂಡುಬಂದರೂ; ಅವನು ಸಮೀಪಕ್ಕೆ ಹೋಗಿ ನೋಡಲು; ಜಲವೇನೂ ತೋರುವದಿಲ್ಲ. ಈ ದೃಷ್ಟಾಂತದಂತೆ, ತನ್ನ ಸ್ವರೂಪ ಜ್ಞಾನವಾದ ಕೂಡಲೇ ಮನೋಸಹಿತ ಸಕಲ ವಾಸನೆಗಳು ಲಯವಾಗುತ್ತವೆ. ಮತ್ತು ಚೇತನನಾದ ಆತ್ಮನಿಗೂ ಜಡವಾದ ಅಹಂಕಾರಕ್ಕೂ ತಪ್ತಲೋಹದಂತೆ ಅನ್ಯೋನ್ಯ ಅಧ್ಯಾಸವಾಗಿರುವದೇ ಹೃದಯ ಗ್ರಂಥಿಯು. ಕಾಮ, ಕ್ರೋಧ, ಮೋಹಾದಿಗಳೂ ಹೃದಯಗ್ರಂಥಿಗಳು. ಯಾಕಂದರೆ, ಅನಾದಿಯಿಂದಲೂ ಇವು ಬೆನ್ನಹತ್ತಿದ್ದರಿಂದ ಹೆಗ್ಗಂಟ್ಟಿನಂತೆ ಗಂಟುಗಳಾಗಿರುವವು. ಈ ಗಂಟುಗಳೆಲ್ಲಾ ಹರಿದುಹೋಗುವವು. ಎಲ್ಲ ಸಂಶಯಗಳು ನಿವೃತ್ತಿಯಾಗುತ್ತವೆ. ಅವು ಯಾವವು? ಅಂದರೆ, ಆತ್ಮನು ದೇಹಾದಿಗಳಿಗೆ ಭಿನ್ನನೋ? ಅಭಿನ್ನನೋ? ಭಿನ್ನನೆಂದು ಹೇಳಿದರೆ, ಅಣು, ಮಧ್ಯಮ, ವಿಭು ಈ ಮೂರು ಆಳತೆಯಲ್ಲಿ ಯಾವರೂಪದಿಂದ ಇರುವನು? ವಿಭುವೆಂದು ಹೇಳಿದರೆ, ಕರ್ತನೋ? ಅಥವಾ ಅಕರ್ತನೋ? ಅಕರ್ತನಾದರೆ, ಪರಸ್ಪರ ಭಿನ್ನ ಅನೇಕ? ರೂಪನೋ ಏಕರೂಪನೋ? ಇವು ತ್ವಂಪದದ ಸಂಶಯಗಳು,ಕೈಲಾಸವಾಸಿಯಾದ ಈಶ್ವರನು ಹಸ್ತ ಮಸ್ತಕಪಾದಾದಿ ಅವಯವಗಳಿಂದ ಸಹಿತನೋ? ಅಥವಾ ಶರೀರ ರಹಿತವ್ಯಾಪಕನೋ? ಶರೀರ ರಹಿತ ವ್ಯಾಪಕನೆಂದು ಹೇಳಿದರೆ, ಪರಮಾಣು ಮೊದಲಾದವುಗಳಿಂದ ಜಗತ್ತಿಗೆ ಸಾಪೇಕ್ಷ ಕರ್ತನೋ? ಅಥವಾ ನಿರಪೇಕ್ಷ ಕರ್ತನೋ? ನಿರಪೇಕ್ಷ ಕರ್ತನೆಂದು ಹೇಳಿದರೆ; ಕೇವಲ ಕರ್ತನಿರುವನೋ? ಅಭಿನ್ನೋಪಾದಾನರೂಪ ಕರ್ತನಿರುವನೋ? ಅಭಿನ್ನೋಪಾದಾನಕರ್ತನೆಂದು ಹೇಳಿದರೂ; ಪ್ರಾಣಿಗಳ ಕರ್ಮಗಳಿಂದ ನಿರಪೇಕ್ಷ ಕರ್ತನಾಗುವದರಿಂದ ವಿಷಮಕಾರಿತ್ವ ಮೊದಲಾದ ದೋಷಗಳುಳ್ಳವನೋ? ಅಥವಾ ಪ್ರಾಣಿಗಳ ಕರ್ಮಗಳಿಂದ ಸಾಪೇಕ್ಷ ಕರ್ತನಾಗುವದರಿಂದ ವೈಷಮ್ಯ ನೈರ್ಘಣ್ಯ ಮೊದಲಾದ ದೋಷರಹಿತನೋ? ಇವು ತತ್ಪದದ ಸಂಶಯಗಳು. ಆತ್ಮನು ಬ್ರಹ್ಮದಿಂದ ಭಿನ್ನನೋ? ಅಭಿನ್ನನೋ?ಅಭಿನ್ನನಾದರೂ ಯಾವಾಗಲೂ ಅಭಿನ್ನನೋ? ಅಥವಾ ಮೋಕ್ಷಕಾಲದಲ್ಲಿಯೇ ಅಭಿನ್ನನೋ? ಯಾವಾಗಲೂ ಅಭಿನ್ನನಿದ್ದರೆ, ಆನಂದಾದಿಕ ಐಶ್ವರ್ಯವಂತನಾಗಿರುವನೋ? ಅಥವಾ ಆನಂದಾದಿಕರಹಿತನಾಗಿರುವನೋ? ಆನಂದಾದಿಕ ಐಶ್ವರ್ಯವಂತನಾದರೆ, ಆನಂದಾದಿಗಳು ಗುಣಗಳಾವವೋ? ಅಥವಾ ಬ್ರಹ್ಮಾತ್ಮನ ಸ್ವರೂಪಗಳಾಗುವವೋ? ಇವು ಅಸಿಪದದ ಸಂಶಯಗಳು ಇವೆಲ್ಲಾ ಸಂಶಯಗಳು.

CC-0. Jangamwadi Math Collection. Digitized by eGangotri

ನಾಶವಾಗುತ್ತವೆ. ಸಂಚಿತ, ಪ್ರಾರಬ್ಧ, ಆಗಾಮಿಗಳೆಂಬ ಮೂರು ಕರ್ಮಗಳಿರುತ್ತವೆ. ಸೂರ್ಯೋದಯವಾದಕೂಡಲೇ ಕತ್ತಲೆ ಕೆಡುವಂತೆ, ಎಚ್ಚರಿಕೆಯಾದ ಕೂಡಲೇ ಕನಸು ಸುಳ್ಳಾದಂತೆ, ಜ್ಞಾನವಾದಕೂಡಲೇ ಸಂಚಿತ ಕರ್ಮಗಳು ನಾಶವಾಗುತ್ತವೆ. ಜ್ಞಾನೋತ್ತರಕಾಲದಲ್ಲಿ ಕರ್ತೃತ್ವವಿಲ್ಲದೆ ಅಕಸ್ಮಾತ್ ಸಂಭವಿಸಿದ ಆಗಾಮಿ ಪುಣ್ಯ ಪಾಪಗಳು ಸ್ತುತಿಸಿ ನಿಂದಿಸಿದವರಿಗೆ ಹೋಗುತ್ತವೆ. ವರ್ತಮಾನದಲ್ಲಿ ಭೋಗ ಕೊಡುವದಕ್ಕೆ ಉದ್ಯುಕ್ತವಾದ ಪ್ರಾರಬ್ಧ ಕರ್ಮವು ಶರೀರ ಯಾತ್ರಾರೂಪ ನಿರ್ವಾಹದಿಂದ ನಾಶವಾಗುತ್ತದೆ. ಈ ರೀತಿ ಕರ್ಮಾವಳಿಯು ನಾಶವಾಗುತ್ತದೆ. ಅವಿದ್ಯಾ, ಅಧ್ಯಾಸ, ಸಂಶಯ, ಕರ್ಮಗಳೆಲ್ಲಾ ನಾಶವಾದ್ದರಿಂದ ಮುಂದೆ ನಾನು ಜನ್ಮಾಂತರವನ್ನು ಪಡೆಯುವೆನೆಂಬ ಭ್ರಾಂತಿಯು ಅವನಿಗಿರುವದಿಲ್ಲ. ಕಿಂತು ದೇಹವೇ ನಾನೆಂಬ ಜ್ಞಾನದಂತೆ ಸಂಶಯರಹಿತ ನಿಶ್ಚಯ ಜ್ಞಾನವುಳ್ಳವನಾಗಿರುತ್ತಾನೆ. ಆದರೆ ಉಪಾದಾನಕಾರಣವಾದ ಅಜ್ಞಾನವು ನಾಶವಾದಕೂಡಲೇ, ಕಾರ್ಯರೂಪವಾದ ಶರೀರವೂ ಕೂಡಾ ನಾಶವಾಗಬೇಕಾಗಿತ್ತು, ಪರಂತು, ಹಾಗಾಗುವದಿಲ್ಲ. ಯಾಕಂದರೆ, ಪೆಟ್ಟಿಗೆಯೊಳಗಿನ ಕಪ್ಪುರವನ್ನು ತೆಗೆದರೂ ಕೆಲವು ಕಾಲ ಅದರ ವಾಸನೆಯು ಪೆಟ್ಟಿಗೆಯೊಳಗೆ ಇರ್ಪ್ಪಂತೆ ಅವಿದ್ಯಾನಾಶವಾದರೂ ಅದರ ಲೇಶರೂಪ ಅವಿದ್ಯೆಯು ಇರುತ್ತದೆ. ಇದೇ ಪ್ರಾರಬ್ಧವು. ಇದರ ಮೂಲಕ ಜೀವಿಸಿರುವಂಥವನಾಗಿ ಶರೀರ ವ್ಯವಹಾರಗಳನ್ನು ಮಾಡಿದವನಂತೆ ಕಂಡುಬರುತ್ತಾನೆ. ವಸ್ತುತಃ ಅಕರ್ತಾ ಅಭೋಕ್ತಾ ಆಗಿರುತ್ತಾನೆ. ಆದ್ದರಿಂದ ಅಂಥಾ ಯೋಗಿಯು ಜೀವನ್ಮುಕ್ತನೆನಿಸುವನು.

ಬಳಿಕ, ಮುಕ್ತನಾದ ಪುರುಷನಿಗೆ ಲಭ್ಯವಾಗಿರುವ ಸಪ್ತ ಜ್ಞಾನಭೂಮಿಕೆಗಳನ್ನು ನಿನಗೋಸುಗ ಉದ್ದೇಶಮಾತ್ರದಿಂದ ಹೇಳುತ್ತೇವೆಂದು ಮುಂದಿನ ಗತಿಗೆ ಬೀಜಭೂತವಾದ ಪ್ರತಿಜ್ಞೆಯನ್ನು ಮಾಡುತ್ತಾರೆ.

ಮುಕ್ತ್ತಂಗಾದರಿವಿನಭೂಮಿಗಳು ।
ಮುಕ್ತಿ ಪಥದೊಳುಂಟವನೆರೆಕೇಳು ॥

ವಿರತನು ಮೋಕ್ಷವ ಬಯಸುವದೊಂದು ।
ಗುರುಗಳನೈದಿ ವಿಚಾರಿಪುದೊಂದು ॥

ನಿಸ್ಸಂಗತೆಯಂ ಪಡೆಯುವದೊಂದು ।
ನಿಸ್ಸಂಶಯ ಸುಖವಿಡಿದಿಹುದೊಂದು ॥

ವಾಸನೆ ವಿಲಯವನೈದುದೊಂದು ।
ಭಾಸುರವೆನಿಸುವ ತುರ್ಯವದೊಂದು ॥

CC-0. Jangamwadi Math Collection. Digitized by eGangotri

ಮೇಲಣ ತುರ್ಯಾತೀತವದೊಂದು।
ಕೇಳಿಂತಿವೆ ಸುತಭೂಮಿಗಳೆಂದು॥

ತಿಳಿದಾಮುಕ್ತಿ ಪಥದೊಳಿಹುದೆಂದು।
ಬಳಿಕೊರೆದಂ ಸದ್ಗುರುವರನಂದು ॥೧೧॥

ಟೀಕಾ:—ಮುಕ್ತಂಗೆ=ಮುಕ್ತನಾದವನಿಗೆ, ಅದ=ಪ್ರಾಪ್ತಿಯಾದ, ಅರಿವಿನ= ಜ್ಞಾನದ, ಭೂಮಿಗಳು=ಸಪ್ತ ಭೂಮಿಕೆಗಳು, ಮುಕ್ತಿಪಥದೊಳು=ಮೋಕ್ಷ ಮಾರ್ಗದಲ್ಲಿ, ಉಂಟು=ಇರುವವು, ಅವ=ಅವುಗಳನ್ನು, ನೆರೆ=ಚನ್ನಾಗಿ, ಕೇಳು= ಏಕಾಗ್ರದಿಂದಾಲಿಸು, ವಿರತನು=ವೈರಾಗ್ಯವಂತನು, ಮೋಕ್ಷವ=ಮುಕ್ತಿಯನ್ನು, ಬಯಸುವುದು=ಇಚ್ಛಿಸುವದು, ಒಂದು=ಮೊದಲನೆಯದು, ಗುರುಗಳನು=ಸದ್ಗು ರುಗಳನ್ನು, ಐದಿ=ಹೊಂದಿ, ವಿಚಾರಿಪುದು=ತನ್ನನ್ನು ವಿಚಾರಮಾಡುವದು, ಒಂದು=ಮತ್ತೊಂದು, ನಿಸ್ಸಂಗತೆಯಂ=ಅಸಂಗತ್ವವನ್ನು, ಪಡೆಯುವದು= ಹೊಂದುವದು, ಒಂದು=ಮೂರನೆಯದು, ವಾಸನೆ=ಜಗದ್ವಾಸನೆಯ, ವಿಲಯ ವನು=ಲೀನತೆಯನ್ನು, ಐದುವದು=ಹೊಂದುವದು, ಒಂದು=ನಾಲ್ಕನೆಯದು, ನಿಸ್ಸಂಶಯ=ಸಂಶಯರಹಿತವಾಗಿ, ಸುಖವಿಡಿದಿಹುದ=ಸುಖವನ್ನು ಗ್ರಹಿಸಿರುವದು, ಒಂದು=ಐದನೆಯದು, ಭಾಸುರವೆನಿಸುವ=ಸ್ವಯಂಪ್ರಕಾಶ ವಸ್ತುವೇ ನಾನೆಂದು ಹೇಳಿಸಿಕೊಳ್ಳುವ, ತುರ್ಯವದು=ತುರ್ಯಾವಸ್ಥೆಯು, ಒಂದು=ಆರನೆಯದು, ಮೇಲಣ=ಮೇಲೆ ಸಂಭವಿಸುವ, ತುರ್ಯಾತೀತವದು=ನಿವೃತ್ತಿಕಚೈತನ್ಯಸ್ವರೂ ಪಾವಸ್ಥೆಯು, ಒಂದು=ಏಳನೆಯದು, ಹೇ ಸುತ=ಎಲೈ ಮಗನೇ, ಇಂತು=ಈ ಪ್ರಕಾರ, ಇವೆ=ಈಗ ಹೇಳಿರುವವೇ, ಭೂಮಿಗಳೆಂದು=ಸಪ್ತಭೂಮಿಕೆಗಳೆಂದು, ಕೇಳಿ=ಏಕಾಗ್ರದಿಂದಾಲಿಸಿ, ತಿಳಿದು=ನಿಶ್ಚಯವಾಗಿ, ಆ ಮುಕ್ತಿಪಥದೋಳ್= ಮುಕ್ತಿ ಮಾರ್ಗದಲ್ಲಿ, ಇಹುದೆಂದು=ಇರಬೇಕೆಂದು, ಬಳಿಕ=ಅನಂತರ, ಅಂದು= ಆ ಹೊತ್ತಿನಲ್ಲಿ, ಸದ್ಗುರುವರನು=ಉತ್ತಮಗುರುವು, ಒರೆದಂ=ಹೇಳಿದನು.

ತಾತ್ಪರ್ಯ:— ಬಳಿಕ ಸದ್ಗುರುನಾಥನು ಸಚ್ಛಿಷ್ಯನನ್ನು ಕುರಿತು-ಹೇ ಶಿಷ್ಯನೇ! ಉಕ್ತ ಮುಕ್ತನಿಗೆ ಏಳು ಅರುವಿನ ಭೂಮಿಕೆಗಳು ಸಂಭವಿಸಿರುತ್ತವೆ. ಅವು ಸೋಪಾನ ಪಂಕ್ತಿಯಂತೆ ಮೋಕ್ಷಕ್ಕೆ ಸಾಧನಗಳಾಗಿರುತ್ತವೆ. ಆದ್ದರಿಂದ ನಿನಗೋಸ್ಕರ ಅವುಗಳನ್ನು ಉದ್ದೇಶಮಾತ್ರ ಹೇಳುತ್ತೇನೆ. ಏಕಾಗ್ರಚಿತ್ತದಿಂದಾ ಲಿಸು. ಇಹಪರವಿಷಯಗಳಲ್ಲಿ ದುಃಖವನ್ನು ಕಂಡು ವೈರಾಗ್ಯವಂತನಾಗಿ, ಅರ್ಥಾತ್ ಸಾಧನಚತುಷ್ಟಯಸಂಪನ್ನನಾಗಿ ನಿತ್ಯ ಸುಖವನ್ನು ನನಗೆ ಕೊಡು ವವರ್‍ಯಾರು? ಹೀಗೆಂದು ಗುರುಶಾಸ್ತ್ರಗಳಿಂದ ತನ್ನನ್ನು ತಿಳಿಯಬೇಕೆಂಬ ಇಚ್ಛೆಯೇ ಮೊದಲನೆಯ ಸುಖೇಚ್ಛೆಯೆಂಬ ಭೂಮಿಕೆಯನಿಸುವದು. ಸಾಧನ

CC-0. Jangamwadi Math Collection. Digitized by eGangotri

ಚತುಷ್ಟಯ ಪೂರ್ವಕ ಗುರುಶಾಸ್ತ್ರಗಳಿಂದೊಡಗೂಡಿ ಗುರುಸೇವೆ, ಭಿಕ್ಷಾಶನ, ಶೌಚಾದ ಯತಿಧರ್ಮಪಾಲನದಲ್ಲಿ ಯುಕ್ತನಾಗಿ; ನಾನಾರು? ಬಹ್ಮ ಯಾವುದು? ಬಂಧ ಮೋಕ್ಷಗಳ ಸ್ವರೂಪವೇನು? ಜೀವ ಈಶ್ವರರು ಅಂದರೆ ಯಾರು? ಇವೇ ಮೊದಲಾದ ಪ್ರಶ್ನೆಗಳನ್ನು ಮಾಡಿ, ಶ್ರವಣ ಮನನಗಳನ್ನು ಮಾಡುತ್ತಿರುವುದೇ ವಿಚಾರಣೆಯೆಂಬ ಎರಡನೇ ಭೂಮಿಕೆಯು. ಬಳಿಕ ದೇಹಾದಿ ಪ್ರಪಂಚಕ್ಕೆ ಸಾಕ್ಷಿ ಸ್ವರೂಪವೇ ನಾನಿರುವೆನೆಂದು ನಿಶ್ಚಯಿಸುವದೇ ಅಸಂಗವೆಂಬ ಮೂರನೆ ಭೂಮಿಕೆಯು, ಅರ್ಥಾತ್ ಇದು ನಿಧಿಧ್ಯಾಸನವೆಂದು ತಿಳಿಯತಕ್ಕದ್ದು. ವಿಷಯಚಿಂತನೆಯಿಂದ ರಹಿತವಾದಂಥಾ ಶುದ್ಧ ಮನಸ್ಸು, ಮಾಯಾ ತತ್ಕಾರ್ಯಕ್ಕೂ ಅವಸ್ಥಾತ್ರಯಗಳಿಗೂ ಅಧಿಷ್ಠಾನವಾದ ಬ್ರಹ್ಮಾಭಿನ್ನ ಪ್ರತ್ಯಗಾತ್ಮ ಸ್ವರೂಪವೇ ನಾನೆಂದು ಚಿಂತಿಸುವುದರಿಂದ ಎಲ್ಲ ವಾಸನೆಗಳು ಲಯವಾಗುತ್ತವೆ. ಇದೇ ವಾಸನಾಕ್ಷಯವೆಂಬ ನಾಲ್ಕನೆಯ ಭೂಮಿಕೆಯು, ಚಿತ್ತು ಒಳಹೊರಗಿನ ವಿಷಯಚಿಂತನ ತತ್ಸಂಸ್ಕಾರ ಇವುಗಳಿಂದ ರಹಿತವಾಗಿ, ಸಮಾಧಿ ಪರಿಪಾಕದಿಂದ ಸ್ವರೂಪದಲ್ಲಿ ಧೃಢವಾಗಿರಲು, ನಿತ್ಯಾಪರೋಕ್ಷ ಬಹ್ಮಾತ್ಮ ಸ್ವರೂಪಭೂತವಾದ ನಿರತಿಶಯ ಆನಂದವು ಸಾಕ್ಷಾತ್ಕಾರವಾಗಿರುತ್ತದೆ. ಇದು ಆನಂದನಿಯೆಂಬ ಐದನೆಯ ಭೂಮಿಕೆಯು, ದೃಶ್ಯಪ್ರಪಂಚವೇನೊಂದು ತೋರದೆ ಆತ್ಮಾರಾಮನಾಗಿರುವದೇ ತುರ್ಯವೆನಿಪ ಆರನೆಯ ಭೂಮಿಕೆಯು. ಕೇವಲ ಸ್ವರೂಪಸ್ಥಿತಿಯಿಂದಿರುವದೇ ತುರ್ಯಾತೀತವೆಂಬ ಏಳನೆಯ ಭೂಮಿಕೆಯು. ಇವೇ ಸಪ್ತಭೂಮಿಕೆಗಳೆನಿಸುವವು. ಇವುಗಳನ್ನು ಚನ್ನಾಗಿ ತಿಳಿದುಕೊಂಡು ಮುಕ್ತಿ ಮಾರ್ಗದಲ್ಲಿರು ಎಂದು ಸದ್ಗುರುವರನು ಉಪದೇಶಿಸುವಂಥವನಾದನು.

ಬಳಿಕ; ಶಿಷ್ಯನು ಗುರುಗಳನ್ನು ಕುರಿತು ಪ್ರಶ್ನೆಮಾಡುತ್ತಾನೆ.

ಭೂಮಿಗೆ ಯೋಗ್ಯನ ಚಿನ್ಹಮಿದೆಂತು|
ಭೂಮಿಗಳಭ್ಯಾಸ ಕ್ರಮವೆಂತು||

ಕರುಣಿಸು ತಿಳಿವಂತೆನಗೆನೆ ಸೂನು|
ಹರುಷದೊಳೊರೆದಂ ಗುರುಕುಲಭಾನು||

ಟೀಕಾ:— ಭೂಮಿಗೆ=ಸಪ್ತಭೂಮಿಗಳಿಗೆ, ಯೋಗ್ಯನ=ಅಧಿಕಾರಿಯ, ಚಿನ್ಹಮಿದು=ಈ ಗುರ್ತುವು, ಎಂತು=ಹೇಗೆ, ಭೂಮಿಗಳ=ಭೂಮಿಕೆಗಳ, ಅಭ್ಯಾಸ ಕ್ರಮವು= ಕಲಿಯುವ ರೀತಿಯು, ಎಂತು=ಹೇಗೆ, ಎನಗೆ= ಶಿಷ್ಯನಾದೆನಗೆ, ತಿಳಿವಂತೆ=ಅರಿಯುವಹಾಗೆ, ಕರುಣಿಸು=ಕೃಪೆಮಾಡು, ಎನೆ=ಎನ್ನಲು, ಗುರು

CC-0. Jangamwadi Math Collection. Digitized by eGangotri

ಕುಲಭಾನು = ಗುರುಕುಲೋತ್ತಮನು, ಹರುಷದೊಳು = ಸಂತೋಷದಿಂದ, ಒರೆದಂ=ಹೇಳಿದನು.

ತಾತ್ಪರ್ಯ:—ಹೇ ಸದ್ಗುರುನಾಥನೇ? ಉಕ್ತ ಸಪ್ತ ಭೂಮಿಕೆಗಳನ್ನು ಅಭ್ಯಾಸ ಮಾಡುವಂಥಾ ಅಧಿಕಾರಿ ಪುರುಷನ ಗುರ್ತೇನು? ಅವನನ್ನು ಜಗತ್ತಿನ ಜನರ ಮಧ್ಯದಲ್ಲಿ ನಾವು ಹೇಗೆ ಹುಡುಕಬೇಕು? ಇದರಿಂದ ನಾನು ಅಧಿಕಾರಿ ಇದ್ದೇನೋ ಇಲ್ಲೋ ಎಂಬುದನ್ನು ತಿಳಿಯುತ್ತೇನೆಂಬ ಭಾವವು ಮತ್ತು ಭೂಮಿಕೆಗಳ ಅಭ್ಯಾಸವನ್ನು ಯಾವರೀತಿ ಮಾಡಬೇಕು? ಇದನ್ನು ಕೃಪೆಮಾಡಿ ಹೇಳಬೇಕು. ಎಂದು ಶಿಷ್ಯನು ಬೇಡಿಕೊಳ್ಳಲು, ಗುರುಗಳು ಸಂತೋಷದಿಂದ ಶಿಷ್ಯನ ಮಸ್ತಕದ ಮೇಲೆ ಅಭಯ ಹಸ್ತವನ್ನಿಟ್ಟು ಯಥಾಪ್ರಕಾರ ಉಪದೇಶಿಸಿದರು.

ಬಳಿಕ; ಈ ಗತಿಯಲ್ಲಿ ಮುಖ್ಯವಾಗಿ ಯಾವ ವಿಷಯವು ಹೇಳಲ್ಪಟ್ಟಿರುತ್ತದೆ ಎಂಬುದನ್ನು ಈ ಕಂದದಿಂದ ಪ್ರತಿಪಾದನ ಮಾಡುತ್ತಾರೆ.

ಗತಿಯಾರನೆಯದಿದಕ್ಕತಿ।
ಹಿತಮೆನಿಪ ನಿರೂಪಣಂಗಳೇಕಾದಶವಂ॥

ತತಿಶಯಮಾಗಿರೆ, ತಿಳಿಯ।
ಲ್ಪ್ರತಿಪಾದಿತವಿಲ್ಲಿ ಬಂಧಮೋಕ್ಷದ್ವಿತಯಂ॥

ಟೀಕಾ:— ಗತಿಯ=ಪ್ರಕರಣವು, ಆರನೆಯದು=ಆರನೆಯದು, ಇದಕ್ಕೆ=ಈ ಗತಿಗೆ, ಅತಿಹಿತಮೆನಿಪ=ಬಹಳ ಯೋಗ್ಯಂಗಳಾದ, ನಿರೂಪಣಂಗಳು=ಪದ್ಯಂಗಳು, ಅಂತು=ಒಟ್ಟಿಗೆ, ಅತಿಶಯಮಾಗಿರೆ=ಹೆಚ್ಚಿಗಿದ್ದರೂ, ಏಕಾದಶವು=ಹನ್ನೊಂದು, ತಿಳಿಯಲ್=ವಿಚಾರಮಾಡಲಾಗಿ, ಇಲ್ಲಿ=ಈ ಗತಿಯಲ್ಲಿ, ಬಂಧಮೋಕ್ಷದ್ವಿತಯಂ=ಬಂಧಮೋಕ್ಷಗಳೆರಡು, ಪ್ರತಿಪಾದಿತವು=ಹೇಳಲ್ಪಟ್ಟಿರುವವು.

ತಾತ್ಪರ್ಯ:—ಇದು ಆರನೇ ಗತಿಯು. ಈ ಗತಿಗೆ ಒಳ್ಳೇ ಯೋಗ್ಯಗಳಾವ ಪದ್ಯಗಳು ಹೆಚ್ಚಿಗಿದ್ದರೂ ಕೂಡಾ ಹನ್ನೊಂದೇ ಇರುವವು. ವಿಚಾರಮಾಡಿ ನೋಡಿದರೆ, ಈ ಗತಿಯಲ್ಲಿ ಬಂಧ ಮೋಕ್ಷಗಳೆರಡು ಪ್ರತಿಪಾದಿಸಲ್ಪಟ್ಟಿರುತ್ತದೆ.

ಅಂತು ಗತಿ ೬ ಕ್ಕಂ ನಿರೂಪಣ ೬೬ ಕ್ಕೆ
ಚರಣ ೮೧೬ ಕ್ಕಂ ಮಂಗಳಮಸ್ತು.

CC-0. Jangamwadi Math Collection. Digitized by eGangotri

ಶ್ರೀ ಗುರುಶಂಭುಲಿಂಗಾಯನಮಃ

ಸಪ್ತಮ ಗತಿ

ಮೊದಲನೇ ಗತಿಯಲ್ಲಿ ಶಿಷ್ಯನು— "ಇನ್ನಿದು ಪರಿವದುಪಾಯಮಿದೆಂದು" ಈ ಸಂಸಾರ ನಿವೃತ್ತಿಗೆ ಉಪಾಯವು ಯಾವದಿರುವದೋ ಅದನ್ನು ನನಗೆ ಅರುಹಬೇಕೆಂದು ಕೇಳಿಕೊಂಡಿದ್ದನು. ಆ ಪ್ರಶ್ನಕ್ಕೆ ಗುರುಗಳು ಈ ಗತಿಯಲ್ಲಿ ಸಪ್ತ ಭೂಮಿಕೆಗಳೇ ಸಂಸಾರ ನಿವೃತ್ತಿಗೆ ಸಾಧನಗಳಾಗಿರುವವೆಂದು ವಿಸ್ತಾರವಾಗಿ ಪ್ರತಿಪಾದನಮಾಡುತ್ತಾರೆ.

ಗ್ರಂಥಕರ್ತರು ಹಿಂದಿನ ಗತಿಯಲ್ಲಿ ನಡೆದ ವಿಷಯದ ಅನುವಾದ ಪೂರ್ವಕ; ಈ ಗತಿಯಲ್ಲಿ, ಸಾಧಕರ ಲಕ್ಷಣವನ್ನೂ ಸಾಧನವನ್ನೂ ಚನ್ನಾಗಿ ಹೇಳುತ್ತೇವೆ. ಎಂದು ಪ್ರತಿಜ್ಞಾಮಾಡುತ್ತಾರೆ.

ಇಂತೀನಿಜಸಾಧ್ಯವನೊಲಿ ।
ವಿಂ ತಿಳುಪಿದೆನೀಗಳೆಸೆವಸಾಧಕರುಗಳಿರ ॥

ವಂ ತತ್ಸಾಧನತತಿ ಯಂ ।
ಸಂತರೊಡಂಬಟ್ಟು ಕೇಳ್ವತೆರದಿಂದುಸುರ್ವೆಂ ॥

ಟೀಕಾ:—ಇಂತು=ಈ ಪ್ರಕಾರ, ಈ ನಿಜಸಾಧ್ಯವನು=ಅಪರೋಕ್ಷವಾಗಿ ಪ್ರಾತ್ಮ ಸ್ವರೂಪವನ್ನೇ, ಒಲವಿಂ=ಪ್ರೀತಿಯಿಂದ, ತಿಳುಪಿದೆನು=ಹೇಳಿದೆನು, ಈಗಳ್=ಸದ್ಯಕ್ಕೆ, ಎಸೆವ=ಶೋಭಿಸುವ ಸಾಧಕರುಗಳು=ಮೋಕ್ಷಾಪೇಕ್ಷಿಗಳ, ಇರವಂ=ಸ್ವರೂಪವನ್ನು, ತತ್=ಆ, ಸಾಧನತತಿಯಂ=ಸಾಧನಗಳ ಸಮೂಹವನ್ನು, ಸಂತರು=ಜ್ಞಾನವಂತರು, ಒಡಂಬಟ್ಟು=ಸಮ್ಮತಿಸಿ, ಕೇಳ್ವ=ಆಲಿಸುವ, ತೆರದಿಂದ=ರೀತಿಯಿಂದ, ಉಸುರ್ವೆಂ=ಹೇಳುವೆನು.

ತಾತ್ಪರ್ಯ:—ಪೂರ್ವಗತಿಯಲ್ಲಿ ಸ್ಥೂಲ, ಸೂಕ್ಷ್ಮ ಶರೀರ ದ್ವಯಗಳಿಗೆ ಅಧಿಷ್ಠಾನವಾಗಿಯೂ, ಜಾಗ್ರತ್ಸ್ವಪ್ನಸುಪ್ತಿಗಳೆಂಬ ಮೂರು ಅವಸ್ಥೆಗಳಿಗೆ ಸಾಕ್ಷಿಯಾಗಿಯೂ, ಇರುವ ಚಿದ್ವಸ್ತುವೇ ನಿನ್ನ ನಿಜರೂಪವೆಂದೂ, ಆ ಸ್ವರೂಪವನ್ನು ವಾದಿಗಳು ಹಲವು ನಾಮಗಳಿಂದ ಕರೆಯುತ್ತಾರೆಂಬೂ ಪ್ರತಿಪಾದನಮಾಡಿದೆವು. ಈಗ ಈ ಗತಿಯಲ್ಲಿ ಇಹಪರ ಭೋಗಗಳಲ್ಲಿ ನಿಸ್ಪೃಹರಾದ ಸಾಧಕರ ಲಕ್ಷಣಗಳನ್ನೂ, ಸುಖೇಚ್ಛೆ ಮೊದಲಾದ ಭೂಮಿಕೆಗಳನ್ನೂ ಹೇಳುತ್ತೇವೆ; ವಿಷಯಗಳನ್ನು ನಮ್ಮ ಸ್ವಕಪೋಲಕಲ್ಪಿತವಾಗಿ ಹೇಳುವದಿಲ್ಲ. ಮತ್ತೇನಂದರೆ

CC-0. Jangamwadi Math Collection. Digitized by eGangotri

ವೇದಾಂತಾರ್ಥವನ್ನು ಬಲ್ಲಂಥಾ ಮಹಾತ್ಮರು, ಒಡಂಬಟ್ಟು ಪ್ರೀತಿಯಿಂದ ಕೇಳುವ ಹಾಗೆ ಪ್ರತಿಪಾದನಮಾಡುತ್ತೇವೆ ಎಂದು ಹೀಗೆ ಹೇಳುವದರಿಂದ ನಾವು ಪ್ರಮಾಣಪೂರ್ವಕ ಪ್ರತಿಪಾದನಮಾಡುತ್ತೇವೆಂಬ ತಾತ್ಪರ್ಯವು.

ಬಳಿಕ; ಈ ಪದ್ಯದಲ್ಲಿ ಶಿಷ್ಯನ ಪ್ರಶ್ನವನ್ನು ಶ್ಲಾಘಿಸಿ, ಮೋಕ್ಷಕ್ಕೆ ಅನಧಿಕಾರಿಗಳಾದ ರಾಗಿಗಳ ಭಾಷಣಗಳನ್ನು ವರ್ಣಿಸುತ್ತಾರೆ.

ಸಾಧು ಸುತನೇ ನೀ ಕೇಳ್ದೀಯರ್ಥ |
ಸಾಧಕ ಜನಕತ್ಯಂತ ಹಿತಾರ್ಥ ||

ರಾಗಿ ವಿರಾಗಿಗಳೆಂದಿಳೆಯೊಳಗೆ |
ಅಗಳೆ ತೋರುತ್ತಿಹರವರೊಳಗೆ ||

ಭುಕ್ತಿ ಸುಖಂ ಸಂಸಾರದೊಳುಂಟು |
ಮುಕ್ತಿಯನೈದ ಲದರೊಳೇನುಂಟು ||

ಕಲ್ಮರ ನಂತಿರೆ ನಿದ್ರಿತನಂತೆ |
ಪಾಳ್ಮನೆಯೊಳಗಣ ದೀವಿಗೆಯಂತೆ ||

ಎನಗದು ಬೇಡಿಹ ಪರವೇ ಸಾಕು |
ಎನಗದರಿಂ ಸತ್ಕರ್ಮವೇ ಬೇಕು ||

ಎಂದೆನುತಿರ್ಪರೆ ರಾಗಿಗಳೆಲ್ಲ |
ಅಂದಾ ಭೂಮಿಗೆ ಯೋಗ್ಯರೆಯಲ್ಲ || ||೧||

ಟೀಕಾ:— ಸಾಧು=ಸದ್ಗುಣಶಾಲಿಯಾದ, ಸುತನೆ=ಎಲೈ ಮಗನೆ, ನೀ=ನೀನು, ಕೇಳ್ದ=ಪ್ರಶ್ನೆಮಾಡಿದ, ಈ ಅರ್ಥವು=ಈ ವಿಷಯವು, ಸಾಧಕ ಜನಕೆ=ಮುಮುಕ್ಷುಗಳಿಗೆ, ಅತ್ಯಂತ=ಬಹಳ, ಹಿತಾರ್ಥ=ಪ್ರಯೋಜನಕರವಾದದ್ದು, ಇಳೆಯೊಳಗೆ=ಭೂಮಿಯಲ್ಲಿ, ರಾಗಿ=ಕಾಮಿ, ವಿರಾಗಿ=ನಿಷ್ಕಾಮಿ, ಎಂದು=ಹೀಗೆಂದು, ಅಗಳೆ=ತತ್ಕ್ಷಣದಲ್ಲಿಯೇ, ಅವರೊಳಗೆ=ಜನಸಮೂಹದಲ್ಲಿಯೇ, ತೋರುತ್ತಿಹರು=ಚನ್ನಾಗಿ ಕಾಣುತ್ತಿಹರು, ಭುಕ್ತಿಸುಖಂ=ಭೋಗದಸುಖವು, ಸಂಸಾರದೊಳುಂಟು=ಸಂಸಾರದಲ್ಲಿರುವದು, ಮುಕ್ತಿಯನು=ಮೋಕ್ಷವನ್ನು, ಐದಲ್=ಹೊಂದಲು, ಅದರೊಳು=ಅದರಲ್ಲಿ, ಏನುಂಟು=ಏನಿರುವದು, ಕಲ್ಮರ ನಂತೆ=ಪಾಷಾಣ ವೃಕ್ಷಗಳಂತೆ, ನಿದ್ರಿತನಂತೆ=ಸುಪ್ತನಂತೆ, ಪಾಳ್ಮನೆಯೊಳಗಣ=

CC-0. Jangamwadi Math Collection. Digitized by eGangotri

ಪಾಳು ಮನೆಯೊಳಗಿನ, ದೀವಿಗೆಯಂತೆ=ದೀಪದಂತೆ, ಇರೆ=ಇರಲಾಗಿ, ಎನಗೆ=ನನಗೆ, ಅದುಬೇಡ=ಆ ಮೋಕ್ಷವು ಬೇಡ, ಇಹಪರವೇ=ಈ ಲೋಕ ಸ್ವರ್ಗಲೋಕಗಳೇ, ಸಾಕು=ದೊರಕಿದರಾಯಿತು, ಅದರಿಂದ=ಈ ಲೋಕಗಳು ಬೇಕಾದ್ದರಿಂದ, ಎನಗೆ=ನನಗೆ, ಸತ್ಕರ್ಮವೇ=ವೇದೋಕ್ತ ಕರ್ಮಗಳೇ, ಬೇಕು=ಬೇಕಾಗಿರುವವು, ಎಂದು=ಹೀಗೆಂದು, ಎನುತಿರ್ಪರೆ=ಅನ್ನುವಂಥವರೆಲ್ಲಾ, ರಾಗಿಗಳೆಲ್ಲಾ=ಸರ್ವರು ಕಾಮಿಗಳು, ಅಂದು=ಆ ಹೊತ್ತಿನಲ್ಲಿ, ಆ ಭೂಮಿಗೆ=ಉಕ್ತ ಭೂಮಿಕೆಗಳಿಗೆ, ಯೋಗ್ಯರೆಯಲ್ಲ=ಅಧಿಕಾರಿಗಳಲ್ಲ.

ತಾತ್ಪರ್ಯ:— ಎಲೈ ಸದ್ಗುಣಗಳೆಂಬ ಮಣಿಗಳಿಂದ ಅಲಂಕೃತನಾದ ಸುಪುತ್ರನೇ ಕೇಳು! ಭೂಮಿಕೆಗೆ ಯೋಗ್ಯನಾದ ಅಧಿಕಾರಿಯ ಲಕ್ಷಣವೇನು? ಎಂದು ಕೇಳಿದ ನಿನ್ನ ಪ್ರಶ್ನೆಯು ಸಾಧಕರಿಗೆ ಬಹಳ ಹಿತಕರವಾಗಿರುವುದು. ಯಾಕಂದರೆ, ಅವರಿಗೆ ಸುಲಭದಿಂದ ಅಧಿಕಾರಿಯ ಲಕ್ಷಣಗಳನ್ನು ಸಾಧಿಸಿಕೊಳ್ಳಲಿಕ್ಕೆ ಅನುಕೂಲವಾಗುವುದು. ಆದರೆ ಮೊದಲು ನಿನಗೆ ಅಧಿಕಾರಿಯ ಲಕ್ಷಣವನ್ನು ಹೇಳುತ್ತೇನೆ. ಹೇಗಂದರೆ, ಜಗತ್ತಿನಲ್ಲಿ ಅನೇಕ ಜನರಿದ್ದರೂ ಆ ಜನಸಮುದಾಯದಲ್ಲಿ ಎರಡೇ ಪ್ರಕಾರದ ಜನರು ಇರುವರು. ಯಾರು ಅಂದರೆ, ರಾಗಿಯೆಂತಲೂ ವಿರಾಗಿಯೆಂತಲೂ ಹೀಗೆ ಇಬ್ಬರೇ ಇರುತ್ತಾರೆ. ಇವನೇ ರಾಗಿ, ಇವನು ವಿರಾಗಿ ಎಂದು ನಾವು ಹೇಗೆ ತಿಳಿಯೋಣ? ಎಂದು ಕೇಳಬಹುದು. ಆದರೆ ಇದೇನು ಆಶ್ಚರ್ಯವಲ್ಲ. ಕಿಂತು, ಅವರವರ ಭಾಷಣಗಳ ಮೇಲಿಂದಲೇ ಕಂಡುಹಿಡಿಯಬಹುದು, ರಾಗಿಯ ಭಾಷಣಗಳು ಹೇಗಿರುತ್ತವೆಂಬುದನ್ನು ಕೇಳು. ರಾಗಿಯು "ಶಬ್ದ, ಸ್ಪರ್ಶ, ರೂಪ, ರಸ, ಗಂಧ ಈ ಪಂಚ ವಿಷಯಗಳಿಂದ ಯುಕ್ತವಾದ ಅನೇಕ ಭೋಗ್ಯ ಪದಾರ್ಥಗಳಿರುತ್ತವೆ. ಅಂದರೆ, ಮಧುರವಾದ ನಾನಾತರದ ಪಕ್ವಾನ್ನಗಳು, ರಂಭಾ ತಿಲೋತ್ತಮರಂತಿರುವ ಸುಂದರ ಸ್ತ್ರೀಯರು, ವಸ್ತ್ರ, ವಾಹನ, ಭೂಷಣ, ಧನ, ಧಾನ್ಯಾದಿ ಸಂಪತ್ತುಗಳು, ಇವುಗಳಿಂದ ನಮಗೆ ಈ ಸಂಸಾರದಲ್ಲಿ ಪ್ರತ್ಯಕ್ಷ ಸುಖವಾಗುತ್ತದೆ. ವಿಷಯೇಂದ್ರಿಯಗಳ ಸಂಯೋಗದಿಂದ ಜನ್ಯವಾಗಿರುವ ಸುಖವನ್ನು ತ್ಯಾಗಮಾಡಿ ಮೋಕ್ಷವನ್ನು ಹೊಂದಿದರೆ, ಅದರಲ್ಲಿ ಏನು ಇರುವುದು? ಏನೂ ಇಲ್ಲ. ಯಾಕಂದರೆ ಆ ಮೋಕ್ಷವು ಮನವಾಣಿಗಳಿಗೆ ಅತೀತವಾಗಿರುವುದು. ಶಬ್ದಾದಿ ವಿಷಯಗಳಂತೆ ಗೋಚರ

CC-0. Jangamwadi Math Collection. Digitized by eGangotri

ವಾಗುವುದಿಲ್ಲ. ತ್ರಿಪುಟಿಗೆ ವಿಲಕ್ಷಣವಾದದ್ದು. ಇಂಥಾ ಮುಕ್ತಿಯು ಒಂದು ವೇಳೆ ಇದ್ದಾಗ್ಯಾದರೂ ಅದು ನಮಗೇನು ಉಪಯೋಗವಾದದ್ದಲ್ಲ. ಹೇಗಂದರೆ, ಕಲ್ಲು, ಮರ, ನಿದ್ರೆ ಮಾಡುವ ಪುರುಷ, ಹಾಳು ಮನೆಯೊಳಗಿನ ದೀವಿಗೆ ಈ ದೃಷ್ಟಾಂತಗಳಂತೆ ಮುಕ್ತಿಯು ನಿಷ್ಪ್ರಯೋಜನವಾಗಿರುತ್ತದೆ. (ಕಲ್ಲು ಮರ ಗಳಂತೆ ಜ್ಞಪ್ತಿ ಶೂನ್ಯವಾಗಿ ಜಡಪ್ರಾಯವಾಗಿರುವುದೇ ಮುಕ್ತಿಯು ಎಂದು ಶಂಕೆ ಮಾಡಲು, ಅದಕ್ಕೆ ಸಿದ್ಧಾಂತಿಗಳು "ಹಾಗಲ್ಲ. ಕಿಂತು ಅತ್ಯಂತ ದುಃಖ ನಿವೃತ್ತಿ ಪರಮಾನಂದ ಪ್ರಾಪ್ತಿರೂಪ ಚೈತನ್ಯಸ್ವರೂಪವೇ ಮೋಕ್ಷವಾಗಿರುತ್ತದೆ." ಎಂದು ಹೇಳಲು ವಾದಿಯು "ಹಾಗಾದರೆ, ಆ ಮೋಕ್ಷವು ನಿದ್ರೆ ಮಾಡುವಂಥಾ ಚೇತನ ಪುರುಷನಂತೆ ಇದ್ದಂತಾಯಿತು. ಪುರುಷನು ನಿದ್ರೆಯಲ್ಲಿ ಸುಖರೂಪನೂ ಚೇತ ನನೂ ಇದ್ದಾಗ್ಯಾದರೂ, ವಿಷಯವನ್ನು ಇಂದ್ರಿಯಗಳಿಂದ ಅನುಭವಿಸಿದಂತೆ ಅನುಭವಿಸಲಿಕ್ಕೆ ಬರುವುದಿಲ್ಲ. ನಿದ್ರೆಯಲ್ಲಿ ಬಾಲಕನು ಉಂಡಂತೆ; ಪುರುಷನು ನಿದ್ರೆಯಲ್ಲಿ ಅಜ್ಞಾತ ಸುಖವನ್ನು ಅನುಭವಿಸಿದಂತೆ; ಇರುವ ಆ ಮುಕ್ತಿಯು ನಮಗೆ ಬೇಡ." ಎಂದು ಶಂಕಿಸಲು; ಸಿದ್ಧಾಂತಿಯು-"ಹಾಗಲ್ಲ. ಯಾವ ಸುಖವು ಇಂದ್ರಿಯಗಳಿಗೆ ವಿಷಯವಾಗುವುದೋ ಆ ಸುಖವು ನಿತ್ಯವಾದದ್ದಲ್ಲ. ಕಿಂತು ಅನಿತ್ಯವಾಗುತ್ತದೆ. ಯಾವ ಸುಖವು ಅತೀಂದ್ರಿಯವಾಗಿರುವುದೋ ಅದೇ ನಿತ್ಯವು. ಅಂಥಾ ಅತೀಂದ್ರಿಯ ಸುಖವೇ ಮೋಕ್ಷವಾಗಿರುತ್ತದೆ." ಎಂದು ನುಡಿಯಲು; ಅದನ್ನು ಕೇಳಿ ವಾದಿಯು— "ಪ್ರತ್ಯಕ್ಷವಾಗಿ ನಮ್ಮ ಮನೆಯೊಳಗಿರುವ ದೀಪವು ನಮಗೆ ಪ್ರಯೋಜನವಾಗಿರುವಂತೆ, ಹಾಳು ಮನೆಯೊಳಗಿನ ದೀಪವು ಪ್ರಯೋ ಜನವಾಗಲಾರದು, ಹೇಗೋ ಹಾಗೇ ಇಂದ್ರಿಯಗಳಿಂದ ವೇದ್ಯವಾದ ಸುಖವು ನಮಗೆ ಪ್ರಯೋಜನವಾದಂತೆ, ಅತೀಂದ್ರಿಯವಾದ ಮುಕ್ತಿಯ ಸುಖವು ನಮಗೆ ಪ್ರಯೋಜನವಾಗಿಲ್ಲ. ಅದ್ದರಿಂದ ನಮಗೆ ಮುಕ್ತಿಯು ಬೇಕಾಗಿಲ್ಲ. ಎಂಬ ತಾತ್ಪರ್ಯವು.) ಆದ್ದರಿಂದ ನಮಗೆ ಇಹಲೋಕ ಮತ್ತು ಪರಲೋಕ ಭೋಗ ಗಳಿದ್ದರೆ ಸಾಕು. ಇಹಪರ ಭೋಗಗಳು ವೇದೋಕ್ತ ಯಜ್ಞಯಾಗಾದಿ ಸತ್ಕರ್ಮಗಳನ್ನು ಮಾಡುವುದರಿಂದ ಪ್ರಾಪ್ತಗಳಾಗುತ್ತವೆ. ಈ ಕಾರಣದಿಂದ ಯಜ್ಞಾದಿಗಳನ್ನು ಅವಶ್ಯ ಮಾಡಬೇಕು. ಇದೇ ಪುರುಷಾರ್ಥವಿರುವುದು. ಇದನ್ನು ತ್ಯಾಗಮಾಡಿ ಮೋಕ್ಷವನ್ನು ಬಯಸುವರೆಲ್ಲರು ಆಲಸ್ಯವುಳ್ಳವರು. ನಪುಂಸಕರು ಆಗಿರುತ್ತಾರೆಂದು ಹೇಳುವರೆಲ್ಲರು ರಾಗಿಗಳಾಗಿರುತ್ತಾರೆ. ಇವರು

CC-0. Jangamwadi Math Collection. Digitized by eGangotri

ನಾವು ಮುಂದೆ ಹೇಳುವಂಥಾ ಭೂಮಿಕೆಗಳಿಗೆ ಅಧಿಕಾರಿಗಳಲ್ಲ ಎಂದು ತಿಳಿಯತಕ್ಕದ್ದು.

ಬಳಿಕ; ಕರ್ಮವು ಆರು ಪ್ರಕಾರವಾಗಿರುವದೆಂಬುದನ್ನೂ ಅವುಗಳ ಫಲಗಳನ್ನೂ ಈ ಪದ್ಯದಲ್ಲಿ ಚನ್ನಾಗಿ ಪ್ರತಿಪಾದಿಸುತ್ತಾರೆ.

ಕರ್ಮವದಾರು ತೆರದೊಳೆಸೆದಿರ್ಕು ।
ಧರ್ಮವನರಿಯದು ವಿಧಿವಿಡಿದಿರ್ಕು ॥

ಸುರಪದವೀವುದೆ ಕಾಮ್ಯವೆನಿಕ್ಕು ।
ನರಕಪ್ರದವೆ ನಿಷಿದ್ಧಮೆನಿಕ್ಕು ॥

ನೇಮದ ನಿತ್ಯಂ ಜಾತಿಪ್ರದವು ।
ನೈಮಿತ್ತಿಕವದು ಪುತ್ರಪದವು ।

ದುರಿತಹರವು ಹರಪೂಜನಮುಕ್ಕು ।
ಪರಪದವೀವುದೆ ವಾಸನೆಯುಕ್ಕು ॥

ಇವರೊಳಕ್ಕಾಮ್ಯ ನಿಷಿದ್ಧವೆನುಳಿದು ।
ತವಕಂ ಮಿಕ್ಕುಳಿದವನೆರೆ ತಿಳಿದು ॥

ಆಯಾ ಕರ್ಮವ ನೊಲವಿಂ ಮಾಡೆ।
ಆಯಾ ಫಲವಹುದವರಿಗೆ ಕೂಡೆ ॥೨॥

ಟೀಕಾ:— ಕರ್ಮವು=ಕರ್ಮಕಾಂಡವು, ಆರುತೆರದೊಳು=ಆರು ರೀತಿಯಿಂದ, ಎಸೆದಿರ್ಕು=ಶೋರುತ್ತಿರುವುದು, ಧರ್ಮವನು=ಧರ್ಮವನು, ಅರಿ=ತಿಳಿ, ಅದು=ಆ ಪುಣ್ಯ ಕರ್ಮವು, ವಿಧಿವಿಡಿದಿರ್ಕು=ವೇದೋಕ್ತ ಕ್ರಿಯೆಗಳನ್ನು ಅವಲಂಬಿಸಿರುವದು, ಸುರಪದವ=ಸ್ವರ್ಗಲೋಕವನ್ನು, ಈವುದೆ=ಕೊಡುವುದೇ, ಕಾಮ್ಯವೆನಿಕ್ಕು=ಕಾಮ್ಯವೆನಿಸುವುದು,ನರಕಪ್ರದವೇ=ನರಕಲೋಕವನ್ನು ಕೊಡುವಂಥಾದ್ದು, ನಿಷಿದ್ಧವೆನಿಕ್ಕುಂ=ಪಾಪಕರ್ಮವೆನಿಸುವುದು, ಜಾತಿಪ್ರದವು=ಜಾತಿಯನ್ನು ಕೊಡುವಂಥಾದ್ದು, ನೈಮಿತ್ತಕವದು=ಒಂದು ನಿಮಿತ್ಯದಿಂದಾಗುವಂಥಾ ನೈಮಿತ್ಯ ಕರ್ಮವು, ದುರಿತ=ಪಾಪವನ್ನು, ಹರಿವು=ಪರಿಹರಿಸುವಂಥಾದ್ದು, ಹರಪೂಜನವು=ಪರಮಾತ್ಮನ ಪೂಜೆಯು, ಅಕ್ಕು=ಆಗುವದು, ಪರಪದವ=ಸ್ವರ್ಗ

CC-0. Jangamwadi Math Collection. Digitized by eGangotri

ಲೋಕವನ್ನು, ಈವುದೆ=ಕೊಡುವಂಥಾದ್ದು, ವಾಸನೆಯುಕ್ಕ=ಅಂತಃಕರಣಾಶ್ರಿತ ಸಂಸ್ಕಾರ ಜನ್ಯ ಸ್ಮೃತಿಯಾಗಿರುವುದು, ಇವರೊಳ್ = ಈ ಆರು ಕರ್ಮಗಳಲ್ಲಿ, ಕಾಮ್ಯ ನಿಷಿದ್ಧವನು=ಕಾಮ್ಯ ನಿಷಿದ್ಧ ಕರ್ಮಗಳನ್ನು, ಉಳಿದು=ಬಿಟ್ಟು, ತವಕಂ= ಜಾಗ್ರತೆಯಾಗಿ, ಮಿಕ್ಕುಳಿದನು=ಹೆಚ್ಚಾಗಿರುವುಗಳನ್ನು, ನೆರೆ=ಚೆನ್ನಾಗಿ, ತಿಳಿದು=ಅರಿತುಕೊಂಡು, ಆಯಾ ಕರ್ಮವನು = ಬೇರೆ ಬೇರೆ ಕರ್ಮಗಳನ್ನು, ಒಲವಿಂ=ಪ್ರೀತಿಯಿಂದ, ಮಾಡೆ=ಮಾಡಲು, ಆಯಾ ಫಲವು=ತತ್ಕರ್ಮಗಳ ಫಲವು, ಅವರಿಗೆ=ಮಾಡಿದವರಿಗೆ, ಕೂಡೆ=ಬೇಗನೆ, ಅಹುದು=ಆಗುವುದು.

ತಾತ್ಪರ್ಯ:—ಪೂರ್ವ ಪದ್ಯದಲ್ಲಿ ರಾಗಿಯು "ನನಗೆ ಮೋಕ್ಷವು ಬೇಡ ಇಹಪರ ಭೋಗಗಳಿದ್ದರೆ ಸಾಕು. ಆ ಇಹಪರ ಭೋಗಗಳಿಗೆ ಕಾರಣಗಳಾದ ಸತ್ಕರ್ಮಗಳೇ ನನಗೆ ಅವಶ್ಯ ಬೇಕಾಗುವವು" ಎಂದು ನುಡಿಯುವಂಥವನಾದನು. ಆದ್ದರಿಂದ ಆ ಕರ್ಮವು ಎಷ್ಟು ಪ್ರಕಾರವಾಗಿರುವುದು ಎಂಬುದನ್ನು ಈ ಪದ್ಯ ದಲ್ಲಿ ವಿಸ್ತಾರವಾಗಿ ಹೇಳಬೇಕಾಯಿತು. ಆ ಕರ್ಮವು ಫಲ ಭೇದಗಳ ಮೂಲಕ ಅನೇಕ ಪ್ರಕಾರವಾಗಿರುತ್ತದೆ. ಅವು ಯಾವವು?- ಪುರುಷ ಪ್ರವೃತ್ತಿ ಉದ್ದೇಶಾರ್ಥ ವೇದಾದಿಗಳಿಂದ ಬೋಧಿಸಲ್ಪಟ್ಟ ಇಷ್ಟ, ಪೂರ್ತ, ದತ್ತ, ಮೊದಲಾದ ಕ್ರಿಯಾ ವಿಶೇಷಗಳೇ ವಿಹಿತ ಕರ್ಮಗಳೆನ್ನಲ್ಪಡುವವು. ಪುರುಷನ ನಿವೃತ್ಯರ್ಥ ವೇದಾದಿಗಳಿಂದ ಬೋಧಿಸಲ್ಪಟ್ಟ ಬ್ರಾಹ್ಮಣವಧ, ಪರಸ್ತ್ರೀಗಮನ, ಇವುಗಳನ್ನು ಮಾಡಬೇಡ. ಮಾಡಿದರೆ, ನಿನಗೆ ನರಕಲೋಕ ಪ್ರಾಪ್ತಿಯಾಗುತ್ತದೆ. ಆ ನರಕ ದಲ್ಲಿ ಅನೇಕ ಪ್ರಕಾರದ ಯಾತನಕ್ಕೆ ಗುರಿಯಾಗಬೇಕಾಗುತ್ತದೆ. ಹೀಗೆ ಹೇಳು ವುದೇ ನಿಷಿದ್ಧಕರ್ಮವು. ಸ್ವರ್ಗಲೋಕವನ್ನು ಕೊಡುವಂಥಾದ್ದು ಕಾಮ್ಯಕರ್ಮ ವಾಗಿರುತ್ತದೆ. ಅಂಥಾ ಕರ್ಮಗಳು ಯಜ್ಞಾದಿಗಳಾಗಿರುತ್ತವೆ. ಮತ್ತು ಕಾರೀರಿ ಯಾಗವು ಮಳೆಯನ್ನು ಕೊಡೋಣದರಿಂದ ಕಾಮ್ಯಕರ್ಮವೆಂದು ಹೇಳಿಸಿ ಕೊಳ್ಳುವುದು. ಜಾತಿಯನ್ನು ಕೊಡುವಂಥಾ ನಿಯಮವಾಗಿ ಮಾಡುವಂಥಾ ಸ್ನಾನಸಂಧ್ಯಾವಂದನಾದಿ ನಿತ್ಯಕರ್ಮಗಳಾಗಿರುತ್ತವೆ. ಪುತ್ರಫಲವನ್ನುಂಟು ಮಾಡುವಂಥಾದ್ದು ನೈಮಿತ್ಯ ಕರ್ಮವಾಗಿರುತ್ತವೆ. ಮತ್ತು ಯಾವದಾದರೊಂದು ವಿಶೇಷನಿಮಿತ್ತದಿಂದಮಾಡತಕ್ಕದಾನಶ್ರಾದ್ಧಾದಿಗಳು ನೈಮಿತ್ಯಕಗಳಾಗಿರುತ್ತವೆ. ಸಾಧಾರಣ ಪಾಪಗಳನ್ನು ನಿವೃತ್ತಿಮಾಡುವಂಥಾ ಈಶ್ವರಪೂಜಾ, ಗಂಗಾಸ್ನಾನ, ಮೊದಲಾದ ಕರ್ಮಗಳಿರುತ್ತವೆ. ಈ ಕರ್ಮಕ್ಕೆ ಪ್ರಾಯಶ್ಚಿತ್ ಕರ್ಮವೆನ್ನು

CC-0. Jangamwadi Math Collection. Digitized by eGangotri

ತ್ತಾರೆ. ಆದರೆ ಸ್ವರ್ಗಲೋಕವನ್ನು ಕೊಡುವಂಥಾದ್ದು ಯಜ್ಞವಲ್ಲ. ಯಾಕಂದರೆ, ಯಜ್ಞವು ಮಾಡುತ್ತಿರುವಾಗ್ಯೆ ನಷ್ಟವಾಗಿಹೋಗುತ್ತದೆ. ಆದ್ದರಿಂದ ನಷ್ಟವಾದ ಯಜ್ಞಕರ್ಮವು ಸ್ವರ್ಗಫಲವನ್ನು ಕೊಡಲಾರದು. ಕಿಂತು ಆ ಯಜ್ಞಕರ್ಮಗಳನ್ನು ಮಾಡಿದ ಸಂಸ್ಕಾರವು ಅಂತಃಕರಣದಲ್ಲಿ ಸಂಸ್ಕಾರರೂಪದಿಂದಿದ್ದು; ಮರಣಕಾಲದಲ್ಲಿ ವಾಸನಾರೂಪದಿಂದ ಉದ್ಬುದ್ಧವಾಗಲು; ಅಂತರ್ಯಾಮಿ ಪ್ರೇರಣೆಯಿಂದೊಡಗೂಡಿ ಸ್ವರ್ಗಫಲವನ್ನು ಕೊಡುತ್ತದೆ. ಆದರೆ, ಈಗ ಹೇಳ್ಪಲ್ಪಟ್ಟ ಆರು ವಿಧಗಳಾದ ಕರ್ಮಗಳಲ್ಲಿ ಕಾಮ್ಯ ಮತ್ತು ನಿಷಿದ್ಧ ಈ ಕರ್ಮಗಳನು ಮೋಕ್ಷಾಪೇಕ್ಷಿಯು ತ್ಯಾಗಮಾಡತಕ್ಕದ್ದು. ಯಾಕಂದರೆ, ಈ ಕರ್ಮಫಲಗಳಾದ ಸ್ವರ್ಗ ನರಕ ಭೋಗಗಳನ್ನು ಅನುಭವಿಸುವುದಕ್ಕಾಗಿ ಜನ್ಮಗಳನ್ನು ತಾಳಬೇಕಾಗುವದು. ಆದ್ದರಿಂದಲೇ ಈ ಕರ್ಮಗಳನ್ನು ಬಿಟ್ಟು ಉಳಿದ ನಿತ್ಯ ನೈಮಿತ್ಯಕ ಪ್ರಾಯಶ್ಚಿತ್ತಾದಿ ಕರ್ಮಗಳನ್ನು ಗುರುಮುಖದಿಂದ ತಿಳಿದು, ಶ್ರದ್ಧೆಯಿಂದ ಆ ಕರ್ಮಗಳನ್ನು ಮಾಡಿದ್ದಾದರೆ; ಅವರಿಗೆ ಆಯಾಯ ಕರ್ಮಗಳ ಫಲಗಳು ಪ್ರಾಪ್ತಗಳಾಗುತ್ತವೆ. ಅರ್ಥಾತ್ ನಿಷ್ಕಾಮ ಬುದ್ಧಿಯಿಂದ ಉಕ್ತ ಕರ್ಮಗಳನ್ನು ಮಾಡುವದರಿಂದ ಚಿತ್ತಶುದ್ಧಿ ರೂಪ ಫಲವು ಪ್ರಾಪ್ತಿಯಾಗುತ್ತದೆಂಬ ತಾತ್ಪರ್ಯವು.

ಬಳಿಕ; ನಿಷಿದ್ಧ ಕರ್ಮವು ನರಕದಲ್ಲಿ ದುಃಖವನ್ನು ಕೊಡುವುದರಿಂದ, ಅದನ್ನು ಮಾತ್ರ ಬಿಡಬಹುದು. ಕಾಮ್ಯ ಕರ್ಮವು ಸ್ವರ್ಗಲೋಕದಲ್ಲಿರುವ ಸುಖ ಭೋಗಗಳನ್ನು ಕೊಡುವುದರಿಂದ ತ್ಯಾಗಮಾಡತಕ್ಕದ್ದಲ್ಲ. ಎಂದು ಶಂಕೆ ಮಾಡಿದರೆ; ಕಾಮ್ಯಕರ್ಮದಿಂದ ಪ್ರಾಪ್ತವಾದ ಸ್ವರ್ಗಸುಖವಾದರೂ ಅನೇಕ ದುಃಖಗಳಿಂದ ಕೂಡಿಕೊಂಡಿರುತ್ತದೆ. ಆದ್ದರಿಂದ ಬಿಡಲಿಕ್ಕೆ ಯೋಗ್ಯವಾದದ್ದೆಂದು ಹೇಳುತ್ತಾರೆ.

ಕರ್ಮಫಲದ ಸಗ್ಗದ ಸುಖದೊಡನೆ |
ನಿರ್ಮಿಸಿಹುದು ದುಃಖಂ ತನ್ನೊಡನೆ ||

ಒದವಿದ ಸಿರಿ ತೋರುತ್ತಿಹುದೊಂದು |
ಅದರ ವಿಶಿಷ್ಟತೆ ಗೆಳಸುವದೊಂದು ||

CC-0. Jangamwadi Math Collection. Digitized by eGangotri

ಆ ಪದವಳಿದರೆ ನೀಕ್ಷಿಪುದೊಂದು ।
ಈ ಪರಿಯೊಳು ತಾಪತ್ರಯ ಬಂದು ॥

ಅಡಿಗಡಿಗಾಸುಖಮಂ ಕೆಡಿಸುತ್ತ ।
ಬಿಡದೂಡಿಪುದೆಲೆ ದುಃಖದವೊತ್ತ ॥

ಅಲ್ಲಿಂ ಪುನರಾವೃತ್ತಿಯ ನೈದಿ ।
ತೊಳಲುತ್ತಿಹುದು ದಿಂತೀಭವದಲ್ಲಿ ।
ನಿಲುವೆಡೆಯಾವುದು ಕರ್ಮಗಳಲ್ಲಿ ॥೩॥

ಟೀಕಾ:—ಕರ್ಮಫಲದ=ವಿಹಿತಕರ್ಮಗಳ ಫಲವಾದ, ಸಗ್ಗದ=ಸ್ವರ್ಗದ, ಸುಖದೊಡನೆ=ಸುಖದ ಬೆಂಬಳಿಗೊಂಡು, ತನ್ನೊಡನೆ=ತನ್ನ ಬೆನ್ನಹತ್ತಿ, ದುಃಖಂ=ದುಃಖವು, ನಿರ್ಮಿಸಿಹುದು=ಹುಟ್ಟಿಸಲ್ಪಟ್ಟಿರುವುದು, ಒದವಿದ=ಪ್ರಾಪ್ತಿಯಾದ, ಸಿರಿ=ಐಶ್ವರ್ಯವು, ತೀರುತ್ತಿದೊಂದು=ಕಡಿಮೆಯಾಗುತ್ತಿರುವುದೊಂದು ದುಃಖವು, ಅದರ=ಸ್ವರ್ಗಭೋಗಕ್ಕಿಂತಲೂ, ವಿಶಿಷ್ಟತೆಗೆ=ಹೆಚ್ಚಿಗಿರುವ, ಬ್ರಹ್ಮಾದಿ ಲೋಕಭೋಗಗಳಿಗೆ, ಎಳಸುವದೊಂದು=ಇಚ್ಛೆಯನ್ನು ಮಾಡುವಂಥಾದ್ದೊಂದು ದುಃಖವು, ಆ ಪದವಳಿದರನು=ಆ ಸ್ವರ್ಗದಿಂದ ಭೂಮಿಗೆ ಬಿದ್ದವರನ್ನು, ಈಕ್ಷಿಪುದೊಂದು=ನೋಡುವಂಥಾದ್ದೊಂದು ದುಃಖವು, ಈ ಪರಿಯೊಳು=ಈ ರೀತಿಯಿಂದ, ತಾಪತ್ರಯ=ಮೂರು ದುಃಖಗಳು, ಬಂದು=ಪ್ರಾಪ್ತಗಳಾಗಿ, ಅಡಿಗಡಿಗೆ=ಹೆಜ್ಜೆಜ್ಜೆಗೆ, ಆ ಸುಖಮಂ=ಸ್ವರ್ಗ ಸುಖವನ್ನು, ಕೆಡಿಸುತ್ತ=ನಾಶಮಾಡುತ್ತಾ, ದುಃಖದವೊತ್ತ=ದುಃಖದ ಸಮೂಹವು, ಎಲೆ=ಎಲೈ ಶಿಷ್ಯನೇ! ಬಿಡದೂಡಿಪುದು=ಬಿಡದಲೆ ಉಣ್ಣಿಸುತ್ತಿರುವುದು, ಅಲ್ಲಿಂ=ಸ್ವರ್ಗಲೋಕದಿಂದ, ಪುನರಾವೃತ್ತಿಯನು=ಹಿಂದಿರುಗುವಿಕೆಯನ್ನು, ಐದಿ=ಹೊಂದಿ, ಇಲ್ಲಿ=ಈ ಲೋಕದಲ್ಲಿ, ಜೀವತ್ವವನ್ನೈದಿ=ದೇಹಾದಿಗಳಲ್ಲಿ ಆತ್ಮಬುದ್ಧಿಯನ್ನು ಮಾಡಿಕೊಂಡು, ಈ ಭವದಲ್ಲಿ=ಈ ಸಂಸಾರದಲ್ಲಿ, ತೊಳಲುತ್ತಿಹುದು=ಭ್ರಮಣ ಮಾಡಬೇಕಾಗಿರುವುದು, ಕರ್ಮಗಳಲ್ಲಿ=ಕರ್ಮಫಲಗಳಲ್ಲಿ, ನಿಲುವೆಡೆ=ನಿಲ್ಲುವ ಸ್ಥಾನವು, ಆವುದು=ಯಾವದಿರುವುದು? (ಇಲ್ಲೆಂಬ ಭಾವವು.)

ತಾತ್ಪರ್ಯ:— ಎಲೈ ಶಿಷ್ಯನೇ! ಕೇಳು, ಸಕಾಮ ಬುದ್ಧಿಯಿಂದ ಯಜ್ಞಾದಿ ವಿಹಿತ ಕರ್ಮಗಳನ್ನು ಮಾಡಲು; ಆವನಿಗೆ ವಾಸನಾನುಸಾರದಿಂದಲೂ

CC-0. Jangamwadi Math Collection. Digitized by eGangotri

ಈಶ್ವರನ ಪ್ರೇರಣೆಯಿಂದಲೂ ಸ್ವರ್ಗಲೋಕ ಪ್ರಾಪ್ತಿಯಾಗುತ್ತದೆ. ಆ ಸ್ವರ್ಗ ಲೋಕದಲ್ಲಿ ರಂಭಾ, ತಿಲೋತ್ತಮಾ, ಮೊದಲಾದ ಸುಂದರ ಸ್ತ್ರೀಯರೊಡನೆ ಕ್ರೀಡಿಸುವುದು, ನಂದನವನದಲ್ಲಿ ವಿಹಾರ ಮಾಡುವುದು, ಅಮೃತಪಾನ ಮಾಡು ವುದು, ಇವೇ ಮೊದಲಾದ ಸುಖೋಪಭೋಗಗಳಿರುತ್ತವೆ. ಈ ಭೋಗಗಳನ್ನು ಪುಣ್ಯಪುರುಷನು ಉಪಭೋಗ ಮಾಡುವಂಥವನಾಗಲು; ಆಗ ಈ ಸ್ವರ್ಗಭೋಗ ಸುಖದೊಡನೆ ದುಃಖಗಳೂ ಬೆನ್ನ ಹತ್ತುತ್ತವೆ. ಅವು ಯಾವುವು? ಅಂದರೆ, ಕ್ಷಯ, ಸಾತಿಶಯ, ಪತನಗಳೆಂಬ ಮೂರು ದುಃಖಗಳಾಗಿರುತ್ತವೆ. ಒಬ್ಬಾತನಿಗೆ ಐದು ವರ್ಷಗಳ ಪರ್ಯಂತರ ಮಂತ್ರಿ ಪದವಿಯು ದೊರೆಯಿತು. ಆದರೆ, ಅದು ಹೇಗೆ, ಹೇಗೆ ವರ್ಷಗಳು ಕಳೆದು ಹೋಗುತ್ತವೆಯೋ; ಹಾಗೆ ಹಾಗೆ ಅವನ ಮನಸ್ಸಿನಲ್ಲಿ "ಅಧಿಕಾರವು ಕಡಿಮೆಯಾಗುತ್ತಾ ಹೋಗಿ ಇನ್ನು ಸ್ವಲ್ಪ ದಿವಸಗಳಲ್ಲಿ ನಾನು ಇದನ್ನು ಬಿಡಬೇಕಾಗುತ್ತದೆ" ಎಂಬ ಚಿಂತೆಯಿಂದ ಕೂಡಿಕೊಂಡಿರುವಂತೆ ಸ್ವರ್ಗ ಪ್ರಾಪ್ತಿ ಮಾಡಿಕೊಂಡವನು ಸ್ವರ್ಗಸುಖವನ್ನು ಉಪಭೋಗಿಸುವಾಗಲೆ ತನ್ನ ಆಯುಷ್ಯವು ಕಡಿಮೆಯಾಗುವುದೆಂಬ; ಭೋಗಗಳು ತೀರುತ್ತವೆಂಬ ಚಿಂತೆಯಿಂದ ಕೂಡಿಕೊಂಡೇ ಇರುತ್ತಾನೆ. ಇದೊಂದು ದುಃಖವು. ಮತ್ತು ಆ ಸ್ವರ್ಗಭೋಗಕ್ಕಿಂತಲೂ ಎಷ್ಟೋ ಪಾಲ ಶ್ರೇಷ್ಠಗಳಾದ ಬ್ರಹ್ಮಲೋಕಗಳನ್ನು ಇಚ್ಛೆ ಮಾಡುವುದೊಂದು ದುಃಖವು. ಮತ್ತು ಆ ಸ್ವರ್ಗಲೋಕದಿಂದ ಚ್ಯುತ ರಾದವರನ್ನು ನೋಡಿ ನಾನೂ ಚ್ಯುತನಾಗಬೇಕಾಗುವುದೆಂಬುದೊಂದು ದುಃಖವು. ಯಾಕಂದರೆ; ಪುಣ್ಯ ತೀರಿದ ಬಳಿಕ ಅಲ್ಲಿರುವಂತಿಲ್ಲ. ಈ ಪ್ರಕಾರಗಳಾದ ಮೂರು ದುಃಖಗಳು ಮೇಲಿಂದ ಮೇಲೆ ಬಂದು ಆ ಸ್ವರ್ಗ ಸುಖವನ್ನು ಕೆಡಿಸಿಬಿಡುತ್ತವೆ. ಆಗ ಸ್ವರ್ಗಾಧಿಪತಿಯಾದವನು ಅನೇಕ ಚಿಂತೆಗಳಿಂದೊಡಗೂಡಿರುತ್ತಾನೆ. ಹೀಗೆ ಕೆಲವು ಕಾಲಗಳು ಕಳೆಯುತ್ತಿರಲಿಕ್ಕೆ ಪುಣ್ಯವು ಕ್ಷಯವಾಗುತ್ತದೆ. ಆ ಕಾಲದಲ್ಲಿ ಸನ್ಮಾನ ವಂದನೆಗಳನ್ನು ಮಾಡುವಂಥವರು ಅಪಮಾನ ನಿಂದೆಗಳನ್ನು ಮಾಡು ತ್ತಾರೆ- ಐರಾವತವು ಇವನನ್ನು ಆರೋಹಣ ಮಾಡಿಸಿಕೊಳ್ಳುವುದಿಲ್ಲ. ರಂಭಾ ತಿಲೋತ್ತಮಾ ಮೊದಲಾದ ಸ್ತ್ರೀಯರು ಇವನನ್ನು ಎಡಗಾಲಿನಿಂದ ಒದೆ ಯುತ್ತಾರೆ. ಆಗ ಇವನನ್ನು ತಲೆ ಕೆಳಗಾಗಿ ಕಾಲು ಮೇಲಕ್ಕೆ ಮಾಡಿ ಆ ಲೋಕ ದಿಂದ ಒಗೆಯುತ್ತಾರೆ. ಆ ಕಾಲಕ್ಕೆ ಇವನು ಆಕಾಶ, ವಾಯು, ಮೇಘ, ಮಳೆ, ಸಸಿ,ಧಾನ್ಯ, ವೀರ್ಯ ಮೊದಲಾದ ರೂಪಾಂತರಗಳನ್ನು ಹೊಂದುತ್ತಾ, ತಾಯಿಯ

CC-0. Jangamwadi Math Collection. Digitized by eGangotri

ಗರ್ಭದಲ್ಲಿ ನವಮಾಸವಿದ್ದು ಕ್ರಮದಿಂದ ಶರೀರ ಬೆಳೆದು, ತಾಯಿಯ ಯೋನಿಯಿಂದ ತಲೆ ಕೆಳಗಾಗಿಯೇ ಹುಟ್ಟಬರುತ್ತಾನೆ. ಬಳಿಕ ಈ ಮೃತ್ಯುಲೋಕದಲ್ಲಾದರೂ ಅನಾತ್ಮ ದೇಹಾದಿಗಳಲ್ಲಿ ಆತ್ಮ ಬುದ್ಧಿಯುಳ್ಳವನಾಗಿ ಜಾತಿ ವರ್ಣಾಶ್ರಮ ಧರ್ಮಗಳನ್ನು ಸ್ವೀಕರಿಸಿ, ತತ್ತದುಚಿತ ಕರ್ಮಗಳನ್ನು ಮಾಡುತ್ತಾ, ಕರ್ಮಫಲಗಳನ್ನು ಉಪಭೋಗಿಸುವುದಕ್ಕೋಸ್ಕರ ಇಹಕ್ಕೂ ಪರಕ್ಕೂ ಗಮನಾಗಮನಗಳನ್ನು ಮಾಡುತ್ತಿರುತ್ತಾರೆ. ಆದ್ದರಿಂದ ಕರ್ಮ ಫಲಗಳಲ್ಲಿ ಪುನರಾವೃತ್ತಿರಹಿತವಾದ ಆನಂದಸ್ವರೂಪಭೂತಮೋಕ್ಷವಿಲ್ಲೆಂಬ ತಾತ್ಪರ್ಯವು.

ಕರ್ಮಿಯು ಕರ್ಮಗಳನ್ನು ಮಾಡಬೇಕಾದರೆ, ಸೂಕ್ಷ್ಮ ಶರೀರದಿಂದ ಕರ್ಮಗಳ ಸಂಕಲ್ಪವನ್ನು; ಸ್ಥೂಲ ಶರೀರದಿಂದ ಕರ್ಮಗಳನ್ನು ಮಾಡಿರುವನು. ಈ ಕಾರಣದಿಂದ ಪುಣ್ಯ ಪುರುಷನು ನರದೇಹವನ್ನು ತ್ಯಾಗಮಾಡಿ, ವಾಸನಾನುಸಾರ ಸ್ವರ್ಗ ಲೋಕದಲ್ಲಿ ಆಣೆಕಲ್ಲಿನಂತೆ ಸೂಕ್ಷ್ಮವಾಗಿರುವದೊಂದು ದೇವ ಶರೀರವನ್ನು ಪಡೆದು, ಶೂಕ್ಷ್ಮ ಶರೀರದಿಂದ ಮಾಡಿದ ಕರ್ಮಗಳ ಸಂಕಲ್ಪ ರೂಪ ಫಲವನ್ನು ಭೋಗಿಸುತ್ತಾನೆ. ಮಗಿಯೊಳಗಿರುವ ಎಲ್ಲ ಎಣ್ಣೆಯನ್ನು ಸುರುವಿದರೂ ಮಗಿಯ ತಳಕ್ಕೆ ಬಸಿ ಎಣ್ಣೆಯು ಇರುವಂತೆ, ಪುಣ್ಯ ಪುರುಷನು ಸ್ವರ್ಗದಲ್ಲಿ ಎಲ್ಲ ಪುಣ್ಯ ಕರ್ಮಗಳ ಫಲವನ್ನು ಅನುಭವಿಸಿದರೂ, ಕಿಂಚತ್ ಕರ್ಮಶೇಷವು ಇರುವುದರಿಂದಲೂ; ಸ್ಥೂಲ ಶರೀರದಿಂದ ಕರ್ಮಗಳನ್ನು ಮಾಡಿದ್ದರಿಂದಲೂ,ಈ ಲೋಕದಲ್ಲಿ ನರಜನ್ಮವನ್ನು ತಾಳಿ,ಉಳಿದ ಕರ್ಮಗಳ ಫಲಗಳನ್ನು ಉಪಭೋಗಿಸುತ್ತಾ,ಮತ್ತೂ ಮುಂದೆತನಗೆಭೋಗಗಳುಬೇಕೆಂದು ಕರ್ಮಗಳನ್ನು ಮಾಡುತ್ತಾನೆ.ಆದ್ದರಿಂದ ಕತ್ತೆಯಂತೆಪರಲೋಕಕ್ಕೂ ಈಲೋಕಕ್ಕೂಹೋಗುವ ಬರುವ ಫಲವೇ ಕರ್ಮಫಲವಾಗಿರುತ್ತದೆ, ಈಕಾರಣದಿಂದ ಕರ್ಮಫಲಗಳಲ್ಲಿ ಅತ್ಯಂತ ದುಃಖ ನಿವೃತ್ತಿ ಪರಮಾನಂದ ಪ್ರಾಪ್ತಿರೂಪ ಮೋಕ್ಷ ಫಲ ವಿರುವುದಿಲ್ಲ.

ಈ ಪ್ರಕಾರ ರಾಗಿ ಪುರುಷನಿಗೆ ಕರ್ಮ ಫಲಗಳಲ್ಲಿ ದುಃಖವನ್ನು ತೋರಿಸಿ, ಬಳಿಕ ಅವನಿಗೆ ನಿಷ್ಕಾಮ ಪುಣ್ಯಪ್ರಭಾವದಿಂದ ವಿವೇಕೋದಯವಾಗಲು, ವಿಷಯಗಳಲ್ಲಿ ದುಃಖ, ಅಶುಚಿ, ಅನಿತ್ಯಗಳನ್ನು ಕಂಡು, ನಿತ್ಯ ಸುಖವನ್ನು ಹುಡುಕುತ್ತಾನೆಂದು ವಿರಾಗಿಯ ಲಕ್ಷಣವನ್ನು ತೋರಿಸುತ್ತಾರೆ.

CC-0. Jangamwadi Math Collection. Digitized by eGangotri

ಬಳಿಕಾಭವದೊಳು ಸುಕೃತವನೇಕ ।
ಫಲಿಸಲು ಪುರುಷಂಗಹುದು ವಿವೇಕ ॥

ಅವನೀ ಭವದುಃಖಂಗಳ ನೋಡಿ ।
ಅವನೆಲ್ಲವನತಿ ಗಳದೀಡಾಡಿ॥

ದುಃಖದ ಕಾಟಕ್ಕಂದತಿ ಬಾಡಿ ।
ದುಃಖಂ ಬೆರಸದ ಸುಖಮಂ ನೋಡಿ ॥

ಪೊರಗೀ ಸತಿ ಪುತ್ರಾದಿಗಳಲ್ಲಿ ।
ಅರಸಿಯು ಕಾಣದೆ ಲೇಸುವನಲ್ಲಿ ॥

ಪಡವೆಡೆಯೊಳು ಮೊದಲತ್ಯಾಯಾಸ ।
ನಡುವಿನಿತಿಹುದೆಲೆ ಸುಖದಾಭಾಸ ॥

ಕಡೆಯೊಳು ಹೇಸಿಕೆ ಮುಸುಗುತ್ತಿಹುದು ।
ಸಿಡಿಮಿಡಿಯಾಗಳಿ ಮನಸಿಂಗಹುದು ॥ ॥೪॥

ಟೀಕಾ:— ಬಳಿಕ=ಅನಂತರ, ಆ ಭವದೊಳು=ಆ ಜನನ ಮರಣ ರೂಪ ಸಂಸಾರದಲ್ಲಿ, ಪುರುಷಂಗೆ=ಪುರುಷನಿಗೆ, ಸುಕೃತವನೇಕ=ಅನೇಕ ಪುಣ್ಯಗಳು, ಫಲಿಸಲು=ಪ್ರಾಪ್ತವಾಗಲು, ವಿವೇಕ=ನಿತ್ಯಾನಿತ್ಯ ವಸ್ತು ವಿಚಾರವು, ಅಹುದು= ಆಗುವುದು, ಅವನು=ಆ ವಿವೇಕಿಯು, ಈ ಭವದುಃಖಗಳ=ಪ್ರತ್ಯಕ್ಷ ಕಾಣುವ ಸಂಸಾರ ದುಃಖಗಳನ್ನು, ನೋಡಿ=ತಿಳಿದು, ಅವನ್ನೆಲ್ಲವನು=ಈ ಭವದುಃಖಗಳನ್ನು ಅತಿಗಳೆದು=ತಿರಸ್ಕಾರಮಾಡಿ, ಈಡಾಡಿ=ತೂರಾಡಿ, ಅಂದು=ಆ ಹೊತ್ತಿನಲ್ಲಿ, ದುಃಖದ ಕಾಟಕ್ಕೆ=ದುಃಖದ ಉಪದ್ರವಕ್ಕೆ, ಅತಿಬಾಡಿ=ಬಹಳನೊಂದು, ದುಃಖ= ದುಃಖವು, ಬೆರಸದ=ಕೂಡಿದ, ಸುಖಮಂ=ಸುಖವನ್ನು, ನೋಡಿ=ವಿಚಾರಿಸಿ, ಪೊರಗೆ=ಹೊರಗಿರುವ, ಈ ಸತಿಪುತ್ರಾದಿಗಳಲ್ಲಿ=ಹೆಂಡರು ಮಕ್ಕಳು ಮೊದಲಾದ ಭೋಗ್ಯ ಪದಾರ್ಥಗಳಲ್ಲಿ, ಅರಸಿಯು=ಹುಡುಕಿದರೂ, ಲೇಸುವನು=ಒಳ್ಳೆಯ ಸುಖವನ್ನು, ಕಾಣದೆ=ನೋಡದೆ, ಅಲ್ಲಿ=ವಿಷಯಗಳಲ್ಲಿ, ಪಡೆವ=ಹೊಂದುವ, ಎಡೆಯೊಳು=ಸ್ಥಾನದಲ್ಲಿ, ಮೊದಲು=ಪ್ರಥಮದಲ್ಲಿ, ಅತ್ಯಾಯಾಸ=ಬಹಳ ಕಷ್ಟವು, ನಡುವೆ=ಅನುಭೋಗಿಸುವ ಮಧ್ಯಕಾಲದಲ್ಲಿ, ಸುಖದಾಭಾಸ=ಸುಖದ ಪ್ರತಿಬಿಂಬವು, ಇನಿತಿಹುದು=ಕಿಂಚಿತ್ತಿರುವದು, ಎಲೆ=ಎಲೈ ಶಿಷ್ಯನೇ!,

CC-0. Jangamwadi Math Collection. Digitized by eGangotri

ಕಡೆಯೊಳು=ಭೋಗಿಸಿದ ಅಂತ್ಯದಲ್ಲಿ, ಹೇಸಿಕೆ=ಜಿಗುಪ್ಸುವಿಕೆಯು, ಮುಸುಕುತ್ತಿಹುದು=ಮುಚ್ಚುತ್ತಿರುವದು, ಆಗಲೆ=ತತ್ಕಾಲದಲ್ಲಿ, ಮನಸಿಂಗೆ=ಮನಸ್ಸಿಗೆ, ಸಿಡಿಮಿಡಿಯು=ಕಸವಿಸಿಯು; ಅಹುದು=ಆಗುವದು.

ತಾತ್ಪರ್ಯ:— ಈ ಪ್ರಕಾರ ಪುರುಷನು ಕರ್ಮಗಳಿಂದ ಅನೇಕ ಜನ್ಮಗಳನ್ನು ಪಡೆಯುತ್ತಾನೆ. ಆ ಜನ್ಮಗಳಲ್ಲಿ ನಿತ್ಯ, ನೈಮಿತ್ಯಕ, ನಿಷ್ಕಾಮ್ಯ, ಪುಣ್ಯ ಕರ್ಮಗಳನ್ನು ಮಾಡುತ್ತಿರಲಿಕ್ಕೆ, ಆ ಪುಣ್ಯ ರಾಶಿಯು ಪರಿಪಕ್ವವಾಗಲು ಅವನಿಗೆ ಅಂತಃಕರಣ ಶುದ್ಧಿದ್ವಾರಾ ವಿವೇಕವು ಉತ್ಪನ್ನವಾಗುತ್ತದೆ. ಹೇಗೆ ಸ್ವಚ್ಛವಾದ ಕನ್ನಡಿಯಲ್ಲಿ ಮುಖಾವಿರ್ಭಾವವಾಗುವದೋ ಹಾಗೆ ವಿಷಯ ವಾಸನೆಗಳಿಂದ ರಹಿತವಾದ ಸ್ವಚ್ಛ ಅಂತಃಕರಣದಲ್ಲಿ ವಿವೇಕವು ಉತ್ಪನ್ನ ವಾಗುತ್ತದೆ. ಅನಂತರ ಅವನು ಪುನಃ ಪುನಃ ಜನ್ಮ, ಜರಾ, ಮರಣಾದಿ ಸಂಸಾರ ದುಃಖಗಳನ್ನು ಕಂಡು; ದುಃಖಗಳನ್ನು ದುಃಖಕ್ಕೆ ಕಾರಣಗಳಾದ ಕರ್ಮಗಳನ್ನು ತಿರಸ್ಕರಿಸುತ್ತಾನೆ. ಮತ್ತು ಆಧ್ಯಾತ್ಮಿಕ, ಆದಿ ಭೌತಿಕ, ಆದಿ ದೈವಿಕಗಳೆಂಬ ತಾಪತ್ರಯ ದುಃಖಗಳಿಂದ ಬಾಡಿದ ಮುಖವುಳ್ಳವನಾಗಿರುತ್ತಾನೆ. ವಿಷ ಮಿಶ್ರಿತವಾದ ಅನ್ನದಂತೆ, ಖಡ್ಗದ ಧಾರೆಗೆ ಜೇನು ತುಪ್ಪವನ್ನು ಹಚ್ಚಿ ನೆಕ್ಕಿದಂತೆ, ವಿಶ್ವಾಸಘಾತಕನ ಸವಿ ಮಾತಿನಂತೆ, ಎಲ್ಲ ವಿಷಯ ಸುಖಗಳು ದುಃಖಗಳಿಂದ ಕೂಡಿಕೊಂಡಿರುತ್ತವೆ. ಹಾಗಾದರೆ ದುಃಖಗಳಿಂದ ಕೂಡದಿರುವಂಥಾ ನಿತ್ಯ ಸುಖಗಳು ಎಲ್ಲಿರಬಹುದು? ಅದು ನನಗೆ ಹೇಗೆ ಪ್ರಾಪ್ತಿಯಾದೀತು? ಅದನ್ನು ನನಗೆ ತೋರಿಸುವವರು ಯಾರು" ಎಂದು ತನ್ನ ಮನಸ್ಸಿನಲ್ಲಿ ಆಲೋಚನೆಯನ್ನು ಮಾಡುತ್ತಾ, ಪ್ರತ್ಯಕ್ಷವಾಗಿ ಕಾಣುವಂಥಾ ಸ್ತ್ರೀ ಪುತ್ರಾದಿಗಳಲ್ಲಿಯಾದರೂ ದುಃಖದಿಂದ ಬೆರಸದಿದ್ದ ಅಚ್ಚ ಸುಖವೇನಾದರೂ ಇರಬಹುದೆಂದು ವಿಚಾರ ಮಾಡುತ್ತಾನೆ. ವಿಚಾರಮಾಡಿ ನೋಡಿದರೂ ಸ್ತ್ರೀ ಪುತ್ರ ಧನಾದಿ ವಿಷಯಗಳಲ್ಲಿ ಸುಖವು ಕಂಡುಬಾರದೆ, ಕೇವಲ ದುಃಖವೇ ತೋರಹತ್ತಿತು. ಹೇಗೆಂದರೆ, ಸ್ತ್ರೀ ಪುತ್ರ ಧನಾದಿಗಳನ್ನು ಸಂಪಾದನಮಾಡಬೇಕಾದರೆ, ಮೊದಲು ತನುಮನಗಳಿಗೆ ಬಹಳ ತ್ರಾಸವಾಗಿರುತ್ತದೆ. ಪ್ರಾಪ್ತಿಯಾದ ಕಾಲದಲ್ಲಿ ಮಾತ್ರ ಸಿನೇಮಾದಲ್ಲಿ ಛಾಯಾ ಗೊಂಬೆಗಳು ತೋರಿದಂತೆ, ಆಭಾಸ ಸುಖವು ತೋರುತ್ತದೆ. ಉಪಭೋಗ ಅಂತ್ಯ ಕಾಲದಲ್ಲಿ ವಿಷಯಗಳಲ್ಲಿ ಜಿಗುಪ್ಸೆ ಬಂದು, ಈ ವಿಷಯ

CC-0. Jangamwadi Math Collection. Digitized by eGangotri

ಗಳನ್ನಾದರೂ ನಾನು ಯಾಕೆ ಸಂಪಾದನೆ ಮಾಡಿಕೊಂಡೆನೋ, ಎಂದು ಚಿಂತಿಸುತ್ತಾ ನೀರೊಳಗಿಂದ ಹೊರಗೆ ತೆಗೆದುಹಾಕಿದ ಮೀನದಂತೆ, ಅವನ ಮನಸ್ಸು ಚಡಪಡಿಸುತ್ತಿರುವುದು. ಗ್ರಂಥ ವಿಸ್ತಾರವಾಗುವುದರಿಂದ ಸ್ತ್ರೀಪುತ್ರ ಧನಾದಿಗಳ ವಿಷಯಗಳ ದುಃಖವನ್ನು ಇಲ್ಲಿ ವರ್ಣಿಸಲಿಲ್ಲ. ಕೈವಲ್ಯ ಪದ್ಧತಿ ಜೀವಸಂಬೋಧನ ಸ್ಥಳದಲ್ಲಿ ಹೇಳಿರುತ್ತಾರೆ ಅಲ್ಲಿ ನೋಡಿರಿ.

ಬಳಿಕ; ವಿಷಯಗಳು ಕ್ಷಣಭಂಗುರಗಳಾದರೂ ಪ್ರಾಣಿಗಳಿಗೆ ಮೋಹವನ್ನುಂಟುಮಾಡುತ್ತವೆಂದೂ ಮತ್ತು ತಮ್ಮಷ್ಟಕ್ಕೆ ತಾವೇ ನಷ್ಟಗಳಾಗುತ್ತವೆಂದೂ, ಅನೇಕ ದೃಷ್ಟಾಂತಗಳನ್ನು ಕೊಟ್ಟು ಅವುಗಳಲ್ಲಿ ತನ್ನ ಪ್ರೀತಿಯಿಲ್ಲೆಂದು ತೋರಿಸುತ್ತಾನೆ.

ಬಳಿಕಿಂತೀ ವಿಷಯಂಗಳ ನೋಡೆ ।
ಘಳಿಲನೆ ಮೋಹಿಸಿ ಕೆಡುವವು ಕೂಡೆ ॥

ಮುಗಿಲೊಡ್ಡಣ ಮಿಂಚಿನ ಕಳೆಯಂತೆ ।
ಮೃಗತೃಷ್ಣೆಯ ಕನಸಿನ ಸಿರಿಯಂತೆ ॥

ಸುರಧನು ಬೊಬ್ಬುಳಿಕೆಯ ಬಗೆಯಂತೆ ।
ತೆರೆ ದೀಪ ಜ್ವಾಲೆಯ ತೆರನಂತೆ ॥

ಸುಳಿಗಾಳಿಯ ಮಣ್ಣಿನ ಪರಿಯಂತೆ ।
ಮಳೆಗಲ್ಲಿನ ನೆಳಲಂಚೆಗಳಂತೆ ॥

ಯುವತಿಯ ಚಿತ್ತದ ಕಾಹುರದಂತೆ ।
ವಿವಿಧ ವಿಷಯವೆಲ್ಲವು ತಾವಿಂತೆ ॥

ಅದರಿಂ ದೃಢಮತಿಯುದರೊಳ್ಸಲ್ಲ ।
ಮುದವಣು ಮಾತ್ರವನಿತು ಮಲ್ಲಿಲ್ಲ ॥ ೫ ॥

ಟೀಕಾಃ—ಬಳಿಕ=ಅನಂತರ, ಇಂತು=ಈ ಪ್ರಕಾರಗಳಾದ, ಈ ವಿಷಯಂಗಳ=ಈ ವಿಷಯಗಳನ್ನು, ನೋಡೆ=ನೋಡಲಾಗಿ, ಘಳಿಲನೆ=ಬೇಗನೆ, ಮೋಹಿಸಿ=ಪ್ರೀತಿಮಾಡಿ, ಕೂಡೆ=ತಕ್ಷಣವೇ, ಕೆಡುವವು=ನಾಶವಾಗುವವು,ಮುಗಿಲ=ಮೋಡಗಳ, ಒಡ್ಡಣ=ಸಮೂಹದಂತೆ, ಮಿಂಚಿನ=ವಿದ್ಯುತ್ತಿನ, ಕಳೆಯಂತೆ=ಪ್ರಕಾಶದ

CC-0. Jangamwadi Math Collection. Digitized by eGangotri

ಹಾಗೆ, ಮೃಗತೃಷ್ಣೆಯ=ಬಿಸಿಲ್ಗುದುರೆಯಂತೆ, ಕನಸಿನ=ಸ್ವಪ್ನದ, ಸಿರಿಯಂತೆ= ಐಶ್ವರ್ಯದಂತೆ, ಸುರಧನು=ಕಾಮನಬಿಲ್ಲಿನಂತೆ, ಬೊಬ್ಬುಳಿಕೆಯ=ನೀರಮೇಲಿನ ಬುರುಗಿನ, ಬಗೆಯಂತೆ=ಭಾವನೆಯಂತೆ, ತೆರೆ=ತೆರೆಯಂತೆ, ದೀಪಜ್ವಾಲೆಯ= ದೀಪದುರಿಯ, ತೆರನಂತೆ=ರೀತಿಯಂತೆ, ಸುಳಿಗಾಳಿಯ=ದುಂಡಗೆ ತಿರುಗುವಗಾಳಿ ಯಲ್ಲಿದ್ದ, ಮಣ್ಣಿನ=ಧೂಳಿನ, ಪರಿಯಂತೆ= ರೀತಿಯಂತೆ, ಮಳೆಗಲ್ಲಿನ=ಆಣೇ ಕಲ್ಲಿನಂತೆ, ನೆಳಲಂಚೆಗಳಂತೆ=ಪ್ರತಿಬಿಂಬ ಹಂಸಪಕ್ಷಿಗಳಂತೆ, ಯುವತಿಯ= ತರುಣಿಯ, ಚಿತ್ತದ=ಮನಸ್ಸಿನ, ಕಾಹುರದಂತೆ=ಆತುರತೆಯಂತೆ, ವಿವಿಧವಿಷಯ ವೆಲ್ಲವು=ಅನೇಕ ಪ್ರಕಾರಗಳಾದ ವಿಷಯಗಳು, ತಾವಿಂತೆ=ಈ ದೃಷ್ಟಾಂತಗಳಂತಿ ರುವವು, ಅದರಿಂ=ಈ ಕಾರಣದಿಂದ, ಅದರೋಳ್=ವಿಷಯಗಳಲ್ಲಿ, ದೃಢಮ ತಿಯು=ನಿಶ್ಚಯ ಬುದ್ಧಿಯು, ಸಲ್ಲ=ಬರಲಾರದು, ಮುದವಣುಮಾತ್ರವು=ಕಿಂಚಿ ನ್ಮಾತ್ರವಾದ ಪ್ರೀತಿಯು, ಅನಿತು=ಆಷ್ಟಾದರೂ, ಅಲ್ಲಿಲ್ಲ=ವಿಷಯಗಳಲ್ಲಿರುವುದಿಲ್ಲ.

ತಾತ್ಪರ್ಯ:— ಅನಂತರ ಈ ವಿಷಯಗಳು ಮೂರು ಕಾಲಗಳಲ್ಲಿ ದುಃಖ ಗಳನ್ನು ಕೊಡುವಂಥವುಗಳಾದರೂ, ಅವುಗಳನ್ನು ವಿಚಾರಮಾಡಿ ನೋಡುತ್ತಿರ ಲಿಕ್ಕೆ; ವಿಷಯಗಳು ಸಕಲ ಪ್ರಾಣಿಗಳಿಗೆ ಮೋಹವನ್ನುಂಟುಮಾಡಿ ಬೇಗನೆ ತಾವೂ ನಷ್ಟಗಳಾಗುತ್ತವೆ. ಹೇಗಂದರೆ, ಮುಂದೆ ಹೇಳಿದ ದೃಷ್ಟಾಂತ ಗಳಂತೆ, ಎಂದು ಹೀಗೆ ಅರ್ಥವನ್ನು ಮಾಡಬಹುದು. ಅಥವಾ ವಿಷಯಗಳು ಸಂಪಾದಿಸುವ ಆದಿಯಲ್ಲಿ ಮಧ್ಯದಲ್ಲಿ ಅಂತ್ಯದಲ್ಲಿ ದುಃಖಗಳನ್ನು ಕೊಟ್ಟರೂ ಪ್ರಾಣಿಗಳು ಅವನ್ನು ಲಕ್ಷ್ಯಕ್ಕೆ ತಾರದೆ, ವಿಷಯಗಳನ್ನು ಕಂಡಕೂಡಲೇ ಮೋಹಿಸಿ ನಷ್ಟರಾಗುತ್ತಾರೆ. (ಪುರುಷಾರ್ಥ ಹೀನರಾಗುತ್ತಾರೆಂಬ ಭಾವವು.) ಆದರೆ ಈ ವಿಷಯಗಳಾದರೂ ನಿತ್ಯಗಳಲ್ಲ. ಕಿಂತು, ಅನಿತ್ಯಗಳಾಗಿರುತ್ತವೆ. ಹೇಗಂದರೆ, ಮುಂದೆ ಹೇಳುವ ದೃಷ್ಟಾಂತಗಳಂತೆ; ಎಂದು ಅರ್ಥವನ್ನು ಮಾಡ ಬಹುದು. ಆದರೆ, ಇಹಪರಲೋಕಗಳ ವಿಷಯಗಳು ಮೇಘಗಳರಾಸಿ ಮಿಂಚಿನ ಹೊಳವು ಮೃಗಜಲ, ಸ್ವಪ್ನದ ಸಿರಿ, ಕಾಮನಬಿಲ್ಲು, ನೀರಮೇಲಿನ ಗುರುಳಿ, ನದಿ ಯೊಳಗಿನ ತೆರೆ,ದೀಪದಕುಡಿ, ಸುಳಿಗಾಳಿಯು ಕಂಭದಂತೆ ನಿಲ್ಲಲು ಅದರಲ್ಲಿ ಕಾಣಿ ಸುವ ಮಣ್ಣು ಅಥವಾ ಸುಳಿಗಾಳಿ ಮತ್ತು ಅದರಲ್ಲಿ ತೋರುವ ಮಣ್ಣು, ಆಣೇಕಲ್ಲು ಹಂಸಪಕ್ಷಿಗಳ ಪ್ರತಿಬಿಂಬಗಳು ದೀಪದ ಪ್ರಕಾಶದಲ್ಲಾಗಲಿ ಸಿನೆಮಾದಲ್ಲಾಗಲಿ

CC-0. Jangamwadi Math Collection. Digitized by eGangotri

ತೋರಿಸುವ ನೆರಳ ರೂಪ ಹಂಸಗಳು, ತರುಣ ಸ್ತ್ರೀಯರ ಚಿತ್ತದಲ್ಲಿರುವ ಕಾಮಾತುರತೆ ಇವುಗಳಂತೆ ಅನಿತ್ಯಗಳಾಗಿರುವವು. ಈ ಕಾರಣದಿಂದ ತೋರಿ ಅಡಗುವಂಥಾ ಕಪಟ ವಿಷಯಗಳಲ್ಲಿ ನನಗೆ ವಿಶ್ವಾಸವಿಲ್ಲ ಮತ್ತು ಅವುಗಳಲ್ಲಿ ಸ್ವಲ್ಪಾದರೂ ಪ್ರೀತಿಯಿಲ್ಲ ಎಂದು ಹೀಗೆ ನುಡಿಯುವಂಥಾ ಪುರುಷನು ವಿರಾಗಿಯಾಗಿರುವನು.

೪-೫ನೇ ಪದ್ಯಗಳಿಂದ ವೈರಾಗ್ಯಕ್ಕೆ ಕಾರಣಗಳಾದ ದುಃಖ, ಅಶುಚಿ, ಅನಿತ್ಯ ಇವುಗಳನ್ನು ವಿಷಯಗಳಲ್ಲಿ ತೋರಿಸಿದರೆಂಬ ಭಾವವು.

ಬಳಿಕ; ಉಕ್ತ ವಿಷಯಗಳನ್ನು ಇಚ್ಛಿಸುವಂಥಾ ಮನ ಇಂದ್ರಿಯಗಳನ್ನು ಶಮದಮಾದಿಗಳಿಂದ ನಿಗ್ರಹಿಸುತ್ತಾ, ಸನ್ಮಾರ್ಗ ಪ್ರವರ್ತನಾಗಿ, ಸುಖದಿಚ್ಛೆಯನ್ನು ಮಾಡುವವನೇ ಮೊದಲನೇ ಭೂಮಿಕಾಧಿಕಾರಿಯೆಂದು ಪ್ರತಿಪಾದನ ಮಾಡುತ್ತಾರೆ.

ಇಂತೆಲ್ಲಾ ವಿಷಯದೊಳಾರೈದು ।
ಮುಂತವನೆಳಸುವ ಮನವಂ ಬೈದು ॥

ಕೆಡೆನೆಟ್ಟುತ್ತದ ನುರೆ ಬೋಧಿಸುತ ।
ಜಡಿದು ನಿಲಿಸಿ ಬಲುಹಿಂಬಂಧಿಸುತ ॥

ವಿಷಯದೊಳೆರಕವನುಳ್ಳವನೆಂದ ।
ಭಷಕನೆಲುವಿನೊಳು ರಮಿಇಪ್ಪಂದ ॥

ಎಂದೀ ವಿಶ್ವದ ವಿಷಯವ ನೋಡಿ ।
ಮುಂದೆ ಮನಂ ತರಹರದೊಡಗೂಡಿ ॥

ಮೆಲ್ಲನೆ ಮೆಲ್ಲನೆ ವಳಸರಿಯುತ್ತ ।
ಒಳ್ಳಿಯ ಬಟ್ಟೆಯ ಸಾರ್ಕೈವುತ್ತ ॥

ಇಹ ಮನುಜನೆ ಕೇಳ್ಭೋಗವಿರಾಗಿ ।
ಅಹನಾತನೆ ಸುಖದಿಚ್ಛೆಯ ಯೋಗಿ ॥ ೬ ॥

ಟೀಕಾ:— ಇಂತು=ಈ ಪ್ರಕಾರ, ಎಲ್ಲಾ ವಿಷಯದೊಳು=ಸರ್ವವಿಷಯಗಳಲ್ಲಿ, ಆರೈದು=ವಿಚಾರಮಾಡಿ, ಮುಂತೆ=ಮೊದಲು, ಅವನು=ಆ ವಿಷಯ

CC-0. Jangamwadi Math Collection. Digitized by eGangotri

ಗಳನ್ನು, ಎಳಸುವ=ಇಚ್ಛಿಸುವ, ಮನವಂ=ಮನಸ್ಸನ್ನು, ಬೈದು=ಹಳಿದು, ಕೆಡೆ=ಕೆಡವಿ, ಮೆಟ್ಟುತ್ತ=ತುಳಿಯುತ್ತ, ಅದನು=ಮನಸ್ಸನ್ನು, ಉರೆ=ಚನ್ನಾಗಿ, ಬೋಧಿಸುತ=ಉಪದೇಶಿಸುತ್ತ, ಬಡಿದು=ಹೊಡೆದು, ನಿಲಿಸಿ=ಗತಿಕುಂಠಿತಮಾಡಿ, ಬಲು=ಬಲಾತ್ಕಾರದಿಂದ, ಹಿಂಬಂಧಿಸುತ=ಪ್ರತಿಬಂಧಕ ಮಾಡುತ್ತ, ವಿಷಯದೊಳು=ವಿಷಯುಗಳಲ್ಲಿ, ಎರಕವನುಳ್ಳವನಂದು=ತತ್ಪರವಾಗಿರುವ ಕಾಲದಲ್ಲಿ, ಭಷಕನು=ನಾಯಿಯು, ಎಲುವಿನೊಳು=ಅಸ್ಥಿಯಲ್ಲಿ, ರಮಿಯಿಪ್ಪಂದ=ಪ್ರೀತಿಸುವ ಹಾಗೆ, ಎಂದು=ಹೀಗೆಂದು, ಈ ವಿಶ್ವದ=ಈ ಜಗತ್ತಿನ, ವಿಷಯುವ=ವಿಷಯಗಳನ್ನು, ನೋಡಿ=ಕಂಡು, ಮುಂದೆ=ನಂತರ, ಮನಂ=ಮನಸ್ಸನ್ನು, ತರಹರದೊಡಗೂಡಿ=ಸ್ವಲ್ಪ ತಡಕೊಂಡು, ಮೆಲ್ಲನೆಮೆಲ್ಲನೆ=ಸಾವಕಾಶ ಸಾವಕಾಶವಾಗಿ, ವಳಸರಿಯುತ್ತ=ಅಂತರ್ಮುಖನಾಗುತ್ತ, ಒಳ್ಳೆಯ=ಉತ್ತಮವಾದ, ಬಟ್ಟೆಯನು=ಮಾರ್ಗವನು, ಆರೈವುತ್ತ=ಹುಡುಕುತ್ತ, ಇಹಮನುಜನೆ=ಇರುವಂಥಾ ಮನುಷ್ಯನೇ, ಭೋಗವಿರಾಗಿ=ಭೋಗಗಳಲ್ಲಿ ವೈರಾಗ್ಯವುಳ್ಳವನು, ಕೇಳ್=ವಿಚಾರಿಸು, ಆತನೇ=ಅವನೇ, ಸುಖದಿಚ್ಛೆಯ ಯೋಗಿ=ಸುಖದ ಇಚ್ಛೆಯನ್ನು ಮಾಡುವಂಥಾ ಯೋಗಿಯು, ಅಹನು=ಆಗುವನು.

ತಾತ್ಪರ್ಯ:— ಎಲೈ ಶಿಷ್ಯನೇ! ಆ ವೈರಾಗ್ಯವುಳ್ಳವನ ಸ್ಥಿತಿಯು ಹೇಗೆ ಇರುತ್ತದೆಂಬುದನ್ನು ಹೇಳುತ್ತೇನೆ ಕೇಳು. ವಿವೇಕಿಯು ಇಹಪರ ಭೋಗಗಳನ್ನೆಲ್ಲಾ ಅನಿತ್ಯ ಅಶುಚಿ, ದುಃಖಗಳೆಂದು ತಿಳಿದಿರುವನು. ಮತ್ತೂ ಆ ಅನಿತ್ಯ ವಿಷಯುಗಳನ್ನು ಬಯಸುವಂಥಾ ಮನಸ್ಸನ್ನು ಕುರಿತು ಬೈಯುತ್ತಾನೆ. ಹೇಗಂದರೆ,-ಹೇ ಮನವೇ! ಕಪಿಯಂತೆ ಒಂದು ವಿಷಯುವನ್ನು ಬಿಟ್ಟು ಮತ್ತೊಂದು ವಿಷಯಕ್ಕೆ ಹರಿದಾಡಬೇಡ. ಹೇ ಮೂರ್ಖ ಮನವೇ! ಈ ಸಂಸಾರ ವಿಷಯುಗಳಿಂದ ನಿನಗೇನು ಪ್ರಯೋಜನವಿರುವದು? ನಿನ್ನಂತೆ ದುಃಖವನ್ನು ಕೊಡುವಂಥಾ ಕ್ರಿಯೆಯುನ್ನು ಬುದ್ಧಿವಂತರು ಯಾರೂ ಮಾಡರು. ಕಲ್ಪವೃಕ್ಷಗಳಿರುವ ವನವನ್ನು ತ್ಯಾಗಮಾಡಿ ವಿಷವೃಕ್ಷಗಳಿರುವ ಜಂಗಲವನ್ನು ಸೇರಿದಂತೆ,ಅಮೃತ ಸಮಾನವಾದ ಶಮವನ್ನು ತ್ಯಜಿಸಿ ದುಃಖರೂಪ ವಿಷಯುಗಳನ್ನು ಕುರಿತು ಓಡಿಹೋಗುವಿಯಲ್ಲಾ? ನೀನು ಭೋಗಾಪೇಕ್ಷೆಯಿಂದ ಪಾತಾಳ ಬ್ರಹ್ಮಲೋಕಗಳಿಗೆ ಹೋದರೂ ಶಮದ ವಿನಹಾ ನಿನಗೆ ಸುಖ ದೊರೆಯುಲಾರದು. ನೂರಾರು

CC-0. Jangamwadi Math Collection. Digitized by eGangotri

ಭೋಗಗಳ ಆಶೆಗಳಿಂದ ನಿನಗೆ ದುಃಖವೇ ಆಗುತ್ತದೆ. ಆದ್ದರಿಂದ ಆಶೆಗಳನ್ನು ಬಿಟ್ಟು ಪರಮ ಪ್ರಯೋಜನವಾದ ಮೋಕ್ಷವನ್ನು ಹೊಂದಬಾರದೆ? ಇಷ್ಟಾನಿಷ್ಟ ಗಳಾದ ವಿಚಿತ್ರ ವಿಷಯಗಳು ನಿನಗೆ ಭಯಂಕರ ದುಃಖಕ್ಕೆ ಕಾರಣಗಳಾಗಿ ರುತ್ತವೆ ಹೊರತು ಸುಖಕ್ಕೆ ಸಾಧನಗಳಾಗಿರುವುದಿಲ್ಲ. ಹೇ ಮನವೇ! ನೀನು ಶ್ರೋತ್ರೇಂದ್ರಿಯದೊಡನೆ ಕೂಡಿಕೊಂಡು ಶಬ್ದ ವಿಷಯಕ್ಕೆ ಮೋಹಿಸಿ ಹರಿಣ ದಂತೆ ನಾಶವನ್ನು ಹೊಂದಬೇಡ. ತ್ವಗಿಂದ್ರಿಯದೊಡನೆ ಕೂಡಿ ಸ್ಪರ್ಶಕ್ಕೆ ಮೋಹಿಸಿ ಗಜೇಂದ್ರನಂತೆ ಬಂಧನಕ್ಕೆ ಒಳಗಾಗಬೇಡ. ರಸನೇಂದ್ರಿಯದೊಡನೆ ಕೂಡಿ ರಸ ವಿಷಯಕ್ಕೆ ಮೋಹಿಸಿ ಮೀನದಂತೆ ಬಲೆಯಲ್ಲಿ ಬಿದ್ದು ಒದ್ದಾಡ ಬೇಡ. ನೇತ್ರದೊಡನೆ ಕೂಡಿ ರೂಪಕ್ಕೆ ಮೋಹಿಸಿ ಪತಂಗದಂತೆ ಸುಟ್ಟುಕೊಳ್ಳ ಬೇಡ. ನಾಸಿಕವನ್ನು ಹೊಂದಿ ಗಂಧಕ್ಕೆ ಮೋಹಿಸಿ ಭೃಂಗದಂತೆ ಬಂಧನಕ್ಕೆ ಒಳಗಾಗಬೇಡ. ಹೇ ಮನವೇ! ಒಂದೊಂದೇ ವಿಷಯಗಳನ್ನು ಮೋಹಿಸಿದ ಪ್ರಾಣಿಗಳು ಸತ್ತಮೇಲೆ ಪಂಚ ವಿಷಯಗಳಿಗೆ ಮೋಹಿಸುವಂಥಾ ನೀನು ಉಳಿಯುವ ಬಗೆ ಹೇಗೆ? ನಿನಗೆ ಸುಖವಾದರೂ ಹೇಗೆ ದೊರೆಯುವದು? ಅನಂತ ಸಾರೆ ದುಃಖಗಳನ್ನು ಕೊಟ್ಟಾಗ್ಯಾದರೂ ಆವುಗಳನ್ನೇ ಇಚ್ಛಿಸುವಿ. ಅಂದಮೇಲೆ ನಿನ್ನ ಮೂರ್ಖತನವು ಎಷ್ಟಿರಬಹುದು. ಹೀಗೆಂದು ಬಯ್ಯುತ್ತಾ ಉಪದೇಶಿ ಸುತ್ತಾ ಪ್ರಾಣಾಯಾಮ ಧ್ಯಾನಾದಿಗಳಿಂದ ನಿರೋಧಿಸುತ್ತಾ, ಯಾವಾಗಲೂ ಮನಸ್ಸಿನ ಹಿಂದಿಂದೆ ಬೆನ್ನು ಹತ್ತಿರಲಿಕ್ಕೇಬೇಕು. ಯಾವರೀತಿಯಿಂದಾದರೂ ಮನಸ್ಸನ್ನು ತನ್ನ ವಶದಲ್ಲಿಟ್ಟುಕೊಂಡಿರಬೇಕು. ಹೀಗೆ ಮಾಡಿದರೂ ಕೂಡಾ ಒಂದುವೇಳೆ ಮನಸ್ಸು ವಿಷಯಗಳಲ್ಲಿ ಮಗ್ನವಾದದ್ದಾದರೆ, ಹೇ ಮನಸ್ಸೇ! ನಾಯಿಯು ಎಲಬುಗಳಲ್ಲಿ ಪ್ರೀತಿಯನ್ನು ಮಾಡುವಂತೆ, ನೀನು ವಿಷಯಗಳಲ್ಲಿ ಪ್ರೀತಿಮಾಡುವೆ. ಆದ್ದರಿಂದ ನೀನು ನಾಯಿಯ ಸಮಾನ ಆಗಿರುವಿ. ಯಾಕಂದರೆ ನಿರಸವಾದ ಎಲಬುಗಳಲ್ಲಿ ರುಚಿಯಿಲ್ಲದಿದ್ದರೂ ನಾಯಿಯು ಎಲಬುಗಳನ್ನು ಕಡಿಯುತ್ತದೆ. ಆಗ ಅದರ ಹಲ್ಲುಗಳ ಸಂಧಿಯೊಳಗಿಂದ ರಕ್ತವು ನಾಲಿಗೆಯ ಮೇಲೆ ಬೀಳುತ್ತದೆ. ನನ್ನ ರಕ್ತವು ನನ್ನ ನಾಲಿಗೆಯ ಮೇಲೆ ಬೀಳೋಣದರಿಂದ ರುಚಿಯಾಗಿರುವದೆಂಬುದನ್ನು ತಿಳಿಯಲಾರದೆ, ಎಲುಬುಗಳಿಂದಲೇ ಈ ರುಚಿಯು ಪ್ರಾಪ್ತವಾಗಿರುವದೆಂದು ತಿಳಕೊಂಡು, ಎಲಬುಗಳನ್ನು ಮುಖದಲ್ಲಿ ಹಿಡಿದು ತಿರಗುತ್ತಿರುತ್ತದೆ. ಈ ದೃಷ್ಟಾಂತದಂತೆ ನೀನಾದರೂ ಸ್ತ್ರೀಪುತ್ರ ಧನಾದಿ ವಿಷಯ

CC-0. Jangamwadi Math Collection. Digitized by eGangotri

ಗಳು ಪ್ರಾಪ್ತಿಯಾಗಬೇಕೆಂಬ ಇಚ್ಛೆ ಮಾಡೋಣದರಿಂದ ನಿನಗೆ ದುಃಖ ವಾಗುತ್ತದೆ, ವಿಷಯಗಳು ಪ್ರಾಪ್ತವಾದಕೂಡಲೇ ಇಚ್ಛಾ ಅಭಾವವಾಗೋಣದ ರಿಂದ ಸ್ವಲ್ಪ ಹೊತ್ತು ನಿನ್ನ ಅಂತಃಕರಣವು ಸ್ಥಿರವಾಗುತ್ತದೆ. ಆಗ ನಿನಗೆ ಸಾಕ್ಷಿ ಯಾದ ಆತ್ಮನ ಪ್ರತಿಬಿಂಬವು ಅಂತಃಕರಣದಲ್ಲಿ ಬೀಳೋಣದರಿಂದ ನಿನಗೆ ಸುಖವಾಗುತ್ತದೆ. ಇದನ್ನು ನೀನು ತಿಳಿಯಲಾರದೆ, ವಿಷಯಗಳಿಂದಲೇ ನನಗೆ ಸುಖವಾಗುವದು ಎಂದು ಭ್ರಾಂತಿಗೊಂಡಿರುವಿ.. ಹೀಗೆಂದು ಬೋಧಿಸಿ ಜಗತ್ತಿನ ವಿಷಯಗಳನ್ನು ಮನಸ್ಸು ನೋಡಿದಾಗ್ಯೂ ವಿಷಯಕ್ಕೆ ಹೋಗಗೊಡದೆ ಸಮಾಧಾನದಿಂದಿಟ್ಟುಕೊಂಡು; ಮುಗ್ಧ ಸ್ತ್ರೀಯಳನ್ನು ಮೆಲ್ಲಮೆಲ್ಲನೆ ತನ್ನ ವಶಕ್ಕೆ ತೆಗೆದುಕೊಳ್ಳುವಂತೆ; ಈವತ್ತಷ್ಟು ನಾಳೆಯಷ್ಟು ಆ ಮನಸ್ಸನ್ನು ವಶಕ್ಕೆ ತಕ್ಕೊಂಡು; ಸಜ್ಜನರು ವರ್ತಿಸುವಂಥಾ ಸದಾಚಾರ ಮಾರ್ಗದಲ್ಲಿ ನಡೆಯು ವಂಥಾ ಮನುಷ್ಯನೇ ವಿರಾಗಿಯೆಂದು ಹೇಳಿಸಿಕೊಳ್ಳುವನು. ಇವನೇ ಸುಖೇಚ್ಛೆ ಯೆಂಬ ಮೊದಲನೆಯ ಭೂಮಿಕೆಗೆ ಅಧಿಕಾರಿಯಾಗಿರುವನು.

ಬಳಿಕ; ಬೀಜ, ರೂಪ, ಕಾರ್ಯಗಳೆಂದು ಮೂರು ಅವಯವಗಳಿಂದ ಒಡಗೂಡಿರುವುದೇ ವಿರಕ್ತಿಗೆ ಲಕ್ಷಣವಾಗಿರುವುದು. ಇಂಥಾ ವಿರತಿಯಿಂದ ಕೂಡಿದವನೇ ವಿರಾಗಿಯೆಂದು ಹೇಳಿಸಿಕೊಳ್ಳುವನೆಂದು ಪ್ರತಿಪಾದಿಸುತ್ತಾರೆ.

ವಿರತಿಗೆ ಬೀಜಂ ರೂಪಂ ಕಾರ್ಯ ।
ಪರಿವಿಡಿದುಂಟವನರಿ ನಿಜ ಧೈರ್ಯ ॥

ಅಲ್ಲಿ ವಿಷಯ ದೋಷವ ನೂಹಿಪುದು ।
ಬಲ್ಲನೆ ಕೇಳದು ಬೀಜವೆನಿಪುದು ॥

ಬಳಿಕಾ ವಿಷಯುವನುರೆ ತೊರೆದಿಹುದು ।
ತಿಳಿಯದು ರೂಪಂ ತಾನೆನಿಸಿಹುದು ॥

ಬಳಿಕವರಯಾ ವಾಸನೆಯಿಂದ ।
ಘಳಿಲನೆ ಮನವಲ್ಲೆಳಗಿದೊಡಂದ ॥

ಛಲಮಂ ಬಲಿದೊಲ್ಲದೆ ಬಿಟ್ಟಹುದು ।
ಕುಳವಾಗಿರಲದು ಕಾರ್ಯವೆನಿಪುದು ॥

CC-0. Jangamwadi Math Collection. Digitized by eGangotri

ಇದು ವಿರತಿಗೆ ನಿಜ ಲಕ್ಷಣವಾಗಿ ।
ಇದನುಳ್ಳಾತನೆ ಸಹಜವಿರಾಗಿ ॥ ೭ ॥

ಟೀಕಾ:—ವಿರತಿಗೆ=ವೈರಾಗ್ಯಕ್ಕೆ, ಬೀಜಂ=ಹೇತುವೆಂದೂ, ರೂಪಂ=ಸ್ವರೂಪವೆಂದೂ, ಕಾರ್ಯ=ಫಲವೆಂದೂ, ಪರಿವಿಡಿದುಂಟು=ಕ್ರಮವಾಗಿರುವವು, ನಿಜಧೈರ್ಯ=ಸಾಮರ್ಥ್ಯವುಳ್ಳ ಶಿಷ್ಯನೇ! ಅವನು=ಆ ಬೀಜಾದಿಗಳನ್ನು, ಅರಿ = ತಿಳಿ, ಅಲ್ಲಿ = ವಿಷಯದಲ್ಲಿರತಕ್ಕ, ವಿಷಯದೋಷವನು = ದುಃಖ, ಅಶುಚಿ=ಅನಿತ್ಯದೋಷಗಳನ್ನು, ಊಹಿಪುದು=ತಿಳಿಯುವುದು, ಬಲ್ಲನೆ=ಜಾಣನೆ, ಕೇಳ್=ಆಲಿಸು, ಅದು ಬೀಜವೆನಿಪುದು=ಹೇತುವೆಂದು ಹೇಳಿಸಿಕೊಳ್ಳುವುದು, ಬಳಿಕ=ಅನಂತರ, ಆ ವಿಷಯವನು=ಆ ದೋಷಯುಕ್ತವಿಷಯಗಳನ್ನು, ಉರೆ=ಚನ್ನಾಗಿ, ತೊರೆದಿಹುದು=ತ್ಯಾಗಮಾಡಿರುವುದು, ಅದು ರೂಪಂ=ಅದು ಸ್ವರೂಪವೆಂದು, ತಾನೆನಿಸಿಹುದು=ತಾನೆ ಹೇಳಿಸಿಕೊಳ್ಳುತ್ತಿರುವದು, ತಿಳಿ=ಅರಿ, ಬಳಿಕ=ಅನಂತರ, ಅದರ=ಆ ವಿಷಯಗಳ, ಆಯಾವಾಸನೆಯಿಂದ=ಭಿನ್ನಭಿನ್ನ ಸಂಸ್ಕಾರಗಳಿಂದ, ಮನವಲ್ಲೆರಗಿದೊಡಂ=ಮನವು ವಿಷಯಗಳಿಗೆ ಹೋದಾಗ್ಯಾದರೂ, ಫಲವಂ ಬಲಿದು=ಹಠವಿಡಿದು, ಘಳಿಲನೆ=ಬೇಗನೆ, ಬಿಟ್ಟಿಹುದು=ತ್ಯಾಗಮಾಡಿರುವದು, ಕುಳವಾಗಿರಲ್=ಸ್ವಭಾವವಾಗಿರಲಿಕ್ಕೆ, ಅದು ಕಾರ್ಯವೆನಿಪುದು=ಅದುಫಲವೆಂದು ಹೇಳಿಸಿಕೊಳ್ಳುವದು, ಇದು=ಈಗ ಹೇಳಿರುವದು, ವಿರತಿಗೆ=ವೈರಾಗ್ಯಕ್ಕೆ, ನಿಜಲಕ್ಷಣವಾಗಿ = ನಿರ್ದೋಷವಾದ ಲಕ್ಷಣವಾಗಿರುವದು, ಇದನ್ನುಳ್ಳಾತನೆ=ಈ ಲಕ್ಷಣದಿಂದ ಕೂಡಿಕೊಂಡವನೆ, ಸಹಜವಿರಾಗಿ=ಸ್ವಭಾವಸಿದ್ಧ ವೈರಾಗ್ಯವುಳ್ಳವನು.

ತಾತ್ಪರ್ಯ:— ಶಮದಮಾದಿ ಸಾಧನಗಳಿಂದ ಮನೋ ಸಹಿತ ಇಂದ್ರಿಯಗಳನ್ನು ನಿರೋಧಿಸುವಲ್ಲಿ ಧೈರ್ಯವುಳ್ಳ ಎಲೈ ಶಿಷ್ಯನೇ ಕೇಳು. ಅನಿತ್ಯತ್ವಾದಿ ದೋಷಗಳಿಂದ ಉತ್ಪನ್ನವಾದ ದ್ವೇಷ ಮೂಲಕ ಆ ವಿಷಯಗಳನ್ನು ತ್ಯಾಗ ಮಾಡುವುದೇ ವೈರಾಗ್ಯಕ್ಕೆ ಲಕ್ಷಣವಾಗಿರುವದು, ಯಾವುದಾದರೊಂದು ವೃಕ್ಷದ ಉತ್ಪತ್ತಿಗೆ ಬೀಜವು ಹೇತುವಾಗಿರುವದು. ಶಾಖಾಪತ್ರ ಪುಷ್ಪಗಳಿಂದೊಡಗೂಡಿರುವುದೇ ಸ್ವರೂಪವೆನಿಸುವುದು. ಫಲಗಳಿಂದ ಭರಿತವಾಗಿರೋಣವೇ ಕಾರ್ಯವೆನಿಸುವುದು. ಹೇಗೋ ಹಾಗೆ ವಿರತಿಗೆ ಪೂರ್ವದಲ್ಲಿ ಹೇಳಲ್ಪಟ್ಟ

CC-0. Jangamwadi Math Collection. Digitized by eGangotri

ಪ್ರಕಾರ ಇಹಪರ ಭೋಗ ವಿಷಯಗಳಲ್ಲಿ ಅನಿತ್ಯತ್ವಾದಿ ದೋಷಗಳನ್ನು ಕಂಡು ಹಿಡಿಯುವುದೇ ಬೀಜವೆನಿಸುವುದು. ಅನಂತರ ಯಾವದಾದರೊಂದು ನೆವನ ದಿಂದ ಆ ವಿಷಯವನ್ನು ಬಿಟ್ಟಿರುವುದೇ ರೂಪವೆನಿಸುವುದು. ಹೇಗಂದರೆ, ರಾಮ ದಾಸರು ಲಗ್ನದಲ್ಲಿ ಸಾವಧಾನ ಎಂಬ ಮಂತ್ರಾರ್ಥದ ನಿಮಿತ್ಯದಿಂದಲೂ, ಗ್ರಂಥ ಕರ್ತರಾದ ನಿಜಗುಣರು ಭಿಕ್ಷುಕನಿಗೆ ಅನ್ನ ನೀಡದ ನಿಮಿತ್ಯದಿಂದಲೂ, ಯಾಜ್ಞ ವಾಲ್ಕ್ಯರ ಜೀವನ್ಮುಕ್ತಿ ಸುಖದ ನಿಮಿತ್ಯವಾಗಿಯೂ, ಸಕಲ ವಿಷಯಗಳನ್ನು ತ್ಯಾಗ ಮಾಡಿರುವರು. ಇದೇ ರೀತಿ ಊಹೆಯನ್ನು ಮಾಡತಕ್ಕದ್ದು. ಬಳಿಕ ಆ ಬಿಟ್ಟ ವಿಷಯಗಳ ಸಂಸ್ಕಾರ ಮೂಲಕ ಮನಸ್ಸು ಮತ್ತೆ ವಿಷಯಗಳ ಚಿಂತನೆ ಯನ್ನು ಮಾಡಲಿಕ್ಕೆ ಹತ್ತಿದರೆ, ಅಥವಾ ಪ್ರತ್ಯಕ್ಷ ವಿಷಯವನ್ನು ಕಂಡು ಕಡಿದ ರೆಕ್ಕೆಯ ಪಕ್ಷಿಯಂತೆ ವಿಷಯದಲ್ಲಿ ಮೋಹಯುಕ್ತವಾದರೂ, ರಾವಣನು ಸೀತೆ ಯನ್ನು ತರುವೆನೆಂಬ ಹಠವನ್ನು ಹಿಡಿದಂತೆ; ಹಠಹಿಡಿದು ಮನಸ್ಸನ್ನು ತನ್ನ ವಶಕ್ಕೆ ತಕ್ಕೊಂಡು ಆ ವಿಷಯಗಳನ್ನು ಬಿಟ್ಟಿರುವುದೇ ಕಾರ್ಯವಾಗಿರುವದು- ಇದೇ ವೈರಾಗ್ಯದ ಲಕ್ಷಣವು, ಈ ಲಕ್ಷಣವುಳ್ಳವನೇ ವಿರಾಗಿಯೆಂದು ಹೇಳಿಸಿ ಕೊಳ್ಳುವನು.

ಬಳಿಕ; ಯಾವ ಉಪಾಯದಿಂದ ವಿಷಯಗಳಿಗೆ ಹೋದ ಮನಸ್ಸನ್ನು ಹಿಂದಿರುಗಿಸಬೇಕು ? ಎಂದು ಪ್ರಶ್ನೆ ಮಾಡಿದರೆ, ಆ ಉಪಾಯವನ್ನು ಎರಡು ಪದ್ಯಗಳಿಂದ ವರ್ಣಿಸುತ್ತಾರೆ.

ಆತಂ ಬಳಿಕೀ ಸಂಸೃತಿಯಲ್ಲಿ ।
ನೂತನಮಂ ಕಾಣೆನು ನಾನಲ್ಲಿ ॥

ಕೇಳಿದುದನೆ ಮಗುಳೆಯು ಕೇಳುತ್ತ ।
ಮೇಳೈಸಿದುದನೆ ಮೇಳವಿಸುತ್ತ ॥

ಕಂಡುದನೇ ಬಳಿಕಂ ಕಾಣುತ್ತ ।
ಉಂಡರಸವನೇ ಮಗುಳೆಯುಣುತ್ತ ॥

ವಾಸಿಸಿದುದನೇ ಮೇಣ್ವಾಸಿಸುತ ।
ಈ ಸಕಲವನಿಂತರಿದರಿವುತ ॥

CC-0. Jangamwadi Math Collection. Digitized by eGangotri

ಪಿಷ್ಟ ವಿಪೀಷಣ ವಿಧಿಯಂತೆಲ್ಲ।
ಕಷ್ಟಮಿದುಂಡುಳಿದುದೆ ಬೇರಿಲ್ಲ ॥

ಎಂದವನೆಲ್ಲವನುರೆ ಬಿಟ್ಟವನು।
ಅಂದಾ ವಿರತಿಯೊಳಳವಟ್ಟವನು ॥ ೮ ॥

ಟೀಕಾ:—ಆತಂ=ಆ ವಿರಾಗಿಯು, ಬಳಿಕ=ಆ ನಂತರ, ಈ ಸಂಸೃತಿಯಲಿ=ಈ ಸಂಸಾರದಲ್ಲಿ, ನೂತನಮಂ=ಹೊಸದಾಗಿರುವದನ್ನು, ಕಾಣೆನು=ನೋಡೆನು, ನಾನು=ನಾನು, ಅಲ್ಲಿ=ಸಂಸಾರದಲ್ಲಿ, ಕೇಳಿದುದನೇ=ಕೇಳಿದ್ದನ್ನೇ, ಮಗುಳೆಯು=ಮತ್ತಾದರೂ, ಕೇಳುತ್ತ=ಶ್ರವಣ ಮಾಡುತ್ತ, ಮೇಳೈಸಿದುದನೆ=ಸ್ಪರ್ಶಮಾಡಿದ್ದನ್ನೆ, ಮೇಳವಿಸುತ್ತ=ಸ್ಪರ್ಶಮಾಡುತ್ತ, ಕಂಡುದನೆ=ನೋಡಿದ್ದನ್ನೇ, ಬಳಿಕಂ=ಮತ್ತಾದರೂ, ಕಾಣುತ್ತ=ನೋಡುತ್ತ, ಉಂಡರಸವನೇ=ಊಟ ಮಾಡಿದ ಮಾಧುರ್ಯಾದಿ ರಸವನ್ನೇ, ಮಗುಳೆಯು=ಮತ್ತಾದರೂ, ಉಣುತ್ತ=ಭುಂಜಿಸುತ್ತ, ವಾಸಿಸಿದುದನೆ=ಮೂಸಿ ನೋಡಿದ್ದನ್ನೇ, ಮೇಣ್=ಮತ್ತು, ವಾಸಿಸುತ=ಮೂಸಿ ನೋಡುತ್ತ, ಈ ಸಕಲವನು=ಯಾವತ್ತು ಪ್ರಪಂಚವನ್ನು, ಇಂತು=ಈ ಪ್ರಕಾರ, ಅರಿದು=ತಿಳಿದು, ಅರಿಯುತ್ತ=ಮತ್ತು ತಿಳಿಯುತ್ತ, ಪಿಷ್ಟ=ಹಿಟ್ಟನ್ನು, ವಿಪೀಷಣ=ಬೀಸಿದ, ವಿಧಿಯಂತೆ=ಕರ್ಮದಂತೆ, ಎಲ್ಲ ಕಷ್ಟಮಿದು=ಸರ್ವವೂ ದುಃಖಮಯವಾಗಿರುವದು, ಉಂಡುಳಿದುದೆ=ಊಟಮಾಡಿಯೇ ಬಿಟ್ಟಿರುವದು, ಬೇರಿಲ್ಲ=ಹೊಸದಾಗಿರುವದೇನೂ ಇಲ್ಲ, ಎಂದು=ಹೀಗೆಂದು, ಅವನು=ವಿರತನು, ಎಲ್ಲವನ್ನು=ಸರ್ವವನ್ನು, ಉರೆ=ಚೆನ್ನಾಗಿ, ಬಿಟ್ಟವನು=ತ್ಯಾಗ ಮಾಡಿದವನು, ಅದು=ಆ ಹೊತ್ತಿನಲ್ಲಿ, ಆ ವಿರತಿಯೊಳು=ಉಕ್ತ ಲಕ್ಷಣಾತ್ಮಕ ವಿರತಿಯಲ್ಲಿ, ಅಳವಟ್ಟವನು=ದೃಢವಾಗಿ ನಿಂತವನು.

ತಾತ್ಪರ್ಯ:—ಎಲೈ ಶಿಷ್ಯನೇ! ಕೇಳು. ವಿಷಯುಗಳನ್ನು ತ್ಯಾಗ ಮಾಡಿದ ವೈರಾಗ್ಯಶಾಲಿಯ ಮನಸ್ಸು ಈ ಪ್ರಕಾರ ಬೋಧೆ ಮಾಡಿ ತನ್ನ ಕಡೆಗೆ ಎಳೆದುಕೊಳ್ಳುತ್ತಾನೆ. ಹೇಗಂದರೆ, ಈ ಸಂಸಾರದಲ್ಲಿ ನಾನು ಅನುಭವಿಸದೇ ಇರುವ ಹೊಸ ವಿಷಯುಗಳು ಯಾವವೂ ಕಂಡು ಬರುವುದಿಲ್ಲ. ಕಿಂತು, ಅನುಭವಿಸಿದ ಹಳೇ ವಿಷಯುಗಳೇ ಎತ್ತನೋಡಿದತ್ತ ಕಾಣುತ್ತವೆ. ನಾನು ಜನ್ಮ ಜನ್ಮಾಂತರ

CC-0. Jangamwadi Math Collection. Digitized by eGangotri

ಗಳಲ್ಲಾಗಲಿ ಕಿವಿಯಿಂದ ಕೇಳಿದ ಶಬ್ದ ಗಾಯನಾದಿಗಳನ್ನೇ ಈ ಜನ್ಮದಲ್ಲಾಗಲಿ ಕೇಳುತ್ತಿದ್ದೇನೆ. ತ್ವಗೇಂದ್ರಿಯಿಂದ ಮುಟ್ಟಿದ ಮೃದು ಕಠಿಣಾದಿ ವಿಷಯಗಳನ್ನೇ ಮುಟ್ಟುತ್ತಿದ್ದೇನೆ. ಕಣ್ಣಿನಿಂದ ನೋಡಿದ ಸುರೂಪ ಕುರೂಪಾದಿ ವಿಷಯಗಳನ್ನೇ ನೋಡುತ್ತಿದ್ದೇನೆ. ನಾಲಿಗೆಯಿಂದ ಊಟಮಾಡಿದ ಸೀ, ಹುಳಿ, ಕಾರ, ಉಪ್ಪು ಮೊದಲಾದ ಆರು ರಸಗಳನ್ನೇ ಉಣ್ಣುತ್ತಿದ್ದೇನೆ. ನಾಶಿಕದಿಂದ ಗ್ರಹಿಸಿದ ಸುಗಂಥ ದುರ್ಗಂಥ ವಿಷಯಗಳನ್ನೇ ಮೂಸಿನೋಡುತ್ತಿದ್ದೇನೆ.ಇದೇ ಪ್ರಕಾರ ಮನಸ್ಸಿನಿಂದ ಯಾವ ಯಾವ ಪದಾರ್ಥಗಳನ್ನು ತಿಳಿಯುತ್ತಿದ್ದೇನೋ ಅವೇ ವಿಷಯಗಳನ್ನು ತಿಳಿಯುತ್ತಿರುವೆನು. ಆದ್ದರಿಂದ ಇದೆಲ್ಲವು ಬೀಸಿದ ಹಿಟ್ಟನ್ನೇ ಪುನಃ ಪುನಃ ಬೀಸಿದಂತೆ ಕೇವಲ ದುಃಖಕ್ಕೇ ಕಾರಣವಾಗಿರುವದು. ಈ ಪ್ರಪಂಚವೆಲ್ಲವು ನಾನು ಊಟ ಮಾಡಿಬಿಟ್ಟ ಮುಸರಿಯಾಗಿರುವದು. ನನ್ನಿಂದ ಆರಿಸಿಕೊಳ್ಳುದ್ದು ಯಾವುದು ಇಲ್ಲ. ಹೀಗೆಂದು ತಿಳಿದುಕೊಂಡು ವಾಸನಾ ವಿಷಯಗಳನ್ನು ತ್ಯಾಗ ಮಾಡಿದವನೇ ದೃಢವಾದ ವಿರತಿಯುಳ್ಳವನು.

ಬಳಿಕ; ಇಹಲೋಕದಲ್ಲಿರುವ ವಿಷಯಗಳನ್ನು ಕುರಿತು ಅನಾದರತ್ವವನ್ನು ತೋರಿಸಿ, ಈಗ ಅಜ, ಹರಿ, ಹರ, ಸುರರ, ಪದವಿಗಳಲ್ಲಾಯ್ದರೂ ತುಚ್ಛತ್ವವನ್ನು ತೋರಿಸುತ್ತಾರೆ.

ಇಹಪರ ಭೋಗದೊಳಹ ಸುಖವೇನು ।
ಬಹು ವಿಭವಂ ಬಡೆದೊಡೆ ತಾನೇನು ॥

ಸುರ ನರ ವಂದ್ಯತೆಯಿಂದಹುದೇನು ।
ಸರಸಾಲಂಕೃತಿ ರೂಪಿಂದೇದು ॥

ಬಹು ಸಿದ್ಧಿಗಳಂ ಪಡೆಯಲದೇನು ।
ಮಹಿಯೊಳಗಿಹುದೆಲ್ಲವ ನರಿದೇನು ॥

ಅಜ ಹರಿ ಪದವಿಗಳಿಂದಹುದೇನು ।
ನಿಜಸುಖವಿಲ್ಲದೊಡಿವರಿಂದೇದು ॥

ಕಂಡಾಕ್ಷಣ ರಮಣೀಯಮಿವೆಲ್ಲ ।
ಉಂಡಾಗಳೆ ನಿರಸನವಿಂತೆಲ್ಲ ॥

CC-0. Jangamwadi Math Collection. Digitized by eGangotri

ಸುಡುಗವನೊಲ್ಲೆನು ತಾನೆಂದವನು।
ಬಿಡುವಂ ಕಾಮ್ಯ ನಿಷಿದ್ಧ ವ್ಯಸನವನು ॥ ೯ ॥

ಟೀಕಾ:— ಇಹಪರ ಭೋಗದೊಳ್=ಇಹಪರ ಸ್ತ್ರೀ, ಸ್ರಕ್, ಚಂದನಾದಿ ಭೋಗಗಳಲ್ಲಿ, ಅಹ=ಇರುವಂಥಾ, ಸುಖವೇನು=ಸುಖದಿಂದೇನು ಪ್ರಯೋಜನ, ಬಹು = ಬಹಳ, ವಿಭವಂ = ಐಶ್ವರ್ಯವನ್ನು, ಬಡೆದೊಡೆ= ಹೊಂದಿದರೂ, ತಾನೇನು=ಅದರಿಂದೇನು ಪ್ರಯೋಜನ, ಸುರ=ದೇವತೆಗಳ, ನರ=ಮನುಷ್ಯರುಗಳ, ವಂದ್ಯತೆಯಿಂದ=ನಮಸ್ಕಾರದಿಂದ, ಅಹುದೇನು=ಆಗುವದೇನು, ಸರಸ=ಮನೋಹರವಾದ, ಅಲಂಕೃತ=ಆಭರಣಗಳಿಂದೊಡಗೂಡಿದ, ರೂಪಿಂದೇನು=ರೂಪದಿಂದ ಆಗುವದೇನು, ಬಹುಸಿದ್ಧಿಗಳಂ=ಬಹಳ ಸಿದ್ಧಿಗಳನ್ನು, ಪಡೆಯಲದೇನು=ಪ್ರಾಪ್ತಮಾಡಿಕೊಳ್ಳುವದರಿಂದಾಗುವದೇನು, ಮಹಿಯೊಳಗೆ=ಭೂಮಿಯೊಳಗೆ, ಇಹುದನೆಲ್ಲವನು=ಇರುವಂಥಾದ್ದೆಲ್ಲವನ್ನು, ಅರಿದೇನು=ಅರಿಯುವದರಿಂದಾಗುವದೇನು, ಅಜಹರಿ=ಬ್ರಹ್ಮ ವಿಷ್ಣುಗಳ, ಪದವಿಗಳಿಂದ=ಐಶ್ವರ್ಯದಿಂದೊಡಗೂಡಿದ ಲೋಕಗಳಿಂದ, ಅಹುದೇನು=ಆಗುವದೇನು, ನಿಜಸುಖಂ=ನಿತ್ಯಸುಖವು, ಇಲ್ಲದೊಡೆ=ಇಲ್ಲದಿದ್ದರೆ, ಅವರಿಂದೇನು=ಆ ಲೋಕ ಭೋಗಗಳಿಂದಾಗುದೇನು, ಕಂಡಾಕ್ಷಣ=ನೋಡಿದ ಕೂಡಲೆ, ರಮಣೀಯಮವೆಲ್ಲ=ಎಲ್ಲ ವಿಷಯಗಳು ಸುಂದರವಾಗಿರುವವು, ಉಂಡಾಗಲೆ = ಉಪಭೋಗಮಾಡಿದ ಕೂಡಲೆ, ನಿರಸನಮಿಂತಿಲ್ಲ=ಸುಖಹೀನಗಳಾದವುಗಳು, ಸುಡುಗವನೊಲ್ಲೆನು=ಸುಟ್ಟು ಹಾಳಾಗಿ ಹೋಗಲಿ ನನಗೆ ಬೇಡ, ತಾನೆಂದವನು=ಹೀಗನ್ನುವಂಥಾ, ಅವನು=ಆ ಪುರುಷನು, ಕಾಮ್ಯ ನಿಷಿದ್ಧನು=ಸಕಾಮಪುಣ್ಯ ಮತ್ತು ಪಾಪಕರ್ಮಗಳನ್ನು, ಬಿಡುವಂ=ತ್ಯಾಗಮಾಡುವನು.

ತಾತ್ಪರ್ಯ:—ಎಲೈ ಶಿಷ್ಯನೇ! ಕೇಳು, ಆ ವಿರಕ್ತನಾದ ಪುರುಷನು ಹೀಗೆ ನಿಶ್ಚಯ ಮಾಡಿರುವನು. ಹೇಗಂದರೆ, ಇಹಲೋಕ, ಪರಲೋಕ ಭೋಗ ಸುಖಗಳೆಲ್ಲಾ ದುಃಖಗಳಿಂದ ಕೂಡಿರುವುದರಿಂದಲೂ, ಅನಿತ್ಯಗಳಾಗಿದ್ದರಿಂದಲೂ, ಅವುಗಳಿಂದೇನು ಪ್ರಯೋಜನ ? ಪ್ರಥು ಮರುತ್ತ ಮೊದಲಾದ ಚಕ್ರವರ್ತಿಗಳ ಮಹಾ ವಿಭವಗಳೂ ವನಿತಾದಿ ಭೋಗಗಳೂ ಸದ್ಗುಣಯುಕ್ತರಾದ

CC-0. Jangamwadi Math Collection. Digitized by eGangotri

ಬಾಂಧವರೂ ಮೊದಲಾದವರೇ ಹಾಳಾಗಿ ಹೋಗಿರುವರು. ಅಂದಮೇಲೆ, ಮಹತ್ತರ ಸಂಪತ್ತುಗಳಿಂದಾದರೂ ಏನು ಪ್ರಯೋಜನ ? ತಪಸ್ಸುಮಾಡಿ ಕೀರ್ತಿ ಪಡೆದು ಲೋಕದಲ್ಲಿ ಪ್ರಸಿದ್ಧನಾಗಿ ದೇವತೆಗಳಿಂದಲೂ ಮನುಷ್ಯರಿಂದಲೂ ನಮಸ್ಕಾರ ಮಾಡಿಸಿಕೊಂಡರೇನಾಯಿತು. ಯಾಕಂದರೆ, ಕಟ್ಟದ ಬುತ್ತಿಯಂತೆ ತಪೋರೂಪ ಪುಣ್ಯವು ನಾಶವಾಗುತ್ತವೆಂಬ ಭಾವವು. ಮನ್ಮಥನಂತೆ, ಅಶ್ವಿನಿ ಕುಮಾರನಂತೆ ಮನೋಹರವಾದ ರೂಪವನ್ನು ಪಡೆದರೆ ಏನಾಯಿತು? ಯಾಕಂದರೆ, ಆ ಸುಂದರ ರೂಪವಾದರೂ ಮುಪ್ಪಿನಿಂದ ಕೂಡಿಕೊಂಡು ನಾಶವಾಗುವಂಥಾದ್ದಾಗಿರುತ್ತದೆ. ಅಣಿಮಾದಿ ಅಷ್ಟ ಸಿದ್ಧಿಗಳನ್ನು ಪಡೆದಾಗ್ಯಾದರೂ ಏನೂ ಪ್ರಯೋಜನವಿಲ್ಲ. ಯಾಕಂದರೆ, ಅಣಿಮಾದಿಗಳು ಮಾಯಿಕವಾಗಿರೋಣದರಿಂದ ಮತ್ತು ಭೂಲೋಕದೊಳಗಿರುವಂಥಾ ಭೂತ ವರ್ತಮಾನ ಭವಿಷ್ಯಗಳನ್ನು ತಿಳಿದು ಹೇಳಿದರೂ ಕೂಡಾ ಏನಾಯಿತು? ಬ್ರಹ್ಮ, ವಿಷ್ಣು, ಮೊದಲಾದವರ ಪದವಿಗಳಿಂದಾದರೂ ಆಗುವದೇನು? ಯಾಕಂದರೆ, ಕೋಟ್ಯಾವಧಿ ಬ್ರಹ್ಮರು ಮಾರ್ಗದೊಳಗಿನ ಹುಡಿಯಂತೆ ಹಾರಿಹೋಗಿರುವರು. ಅಂದಮೇಲೆ ಆ ಬ್ರಹ್ಮಾದಿಗಳ ಪದವಿಗಳಿಂದೇನು ಪ್ರಯೋಜನ? ಇವೆಲ್ಲವುಗಳೂ ಬೇಡ ಅನ್ನುವದಕ್ಕೆ ಮುಖ್ಯಕಾರಣವೇನಂದರೆ, ಉಕ್ತ ವಿಷಯಗಳಲ್ಲಿ ನಿತ್ಯವಾದ ಸುಖವಿಲ್ಲ ಆದ್ದರಿಂದ ಅವುಗಳಿಂದೇನೂ ಪ್ರಯೋಜನವಿಲ್ಲ ಮತ್ತು ವಿಷಯೇಂದ್ರಿಯ ಸಂಯೋಗವಾದ ಕಾಲಕ್ಕೆ ವಿಷಯಗಳು ಮನೋಹರಗಳಾಗಿಯೂ ಉಪಭೋಗಮಾಡಿದ ತರುವಾಯ ದುಃಖ ರೂಪಗಳಾದ್ದರಿಂದಲೂ ಉಕ್ತ ವಿಷಯಗಳನ್ನು ಸುಡು. "ನನಗೆ ಬೇಡ" ಹೀಗೆಂದು ಅನ್ನುವಂಥಾ ಪುರುಷನು ಕಾಮ್ಯ ನಿಷಿದ್ಧ ಕರ್ಮಗಳನ್ನು ಬಿಟ್ಟುಬಿಡುತ್ತಾನೆ.

ಮತ್ತು ವಿರಕ್ತಿಯ ಪರಿಪಾಕತೆಯನ್ನು ಪಡೆದವನ ಆಲೋಚನೆಯು ಹೇಗಿರುತ್ತದೆಂಬುದನ್ನು ತೋರಿಸುತ್ತಾರೆ.

ಬಿಡಬೇಕೆನಿತನಿತಂ ಬಿಡುವನ್ನಂ ।
ಕಡುಚಪಲತೆ ಚಿತ್ತ ದೊಳಳಿವನ್ನ ॥

ವಿವಿಧವೆನಿಪ ವಾಸನೆಯುಳಿವನ್ನ ।
ಭವಮಾಲೆಯ ಕಡೆಯಂ ಕಾಂಬನ್ನ ॥

CC-0. Jangamwadi Math Collection. Digitized by eGangotri

ಕ್ರಮದಿಂ ನಿಜವನಿದೆಂದರಿವನ್ನ ।
ಸುಮತೆಯು ನೆಟ್ಟನೆ ನೆಲೆಗೊಂಬನ್ನ ॥

ಬಹುದುಃಖ ವಿಷೂಚಿಕೆ ಮಾಣ್ಬನ್ನ ।
ಸಹಜಾರೋಗ್ಯತೆ ದೊರಕೊಂಬನ್ನ ॥

ಲೇಸೆಲ್ಲಿಯುದಕಟಾ ತನಗೆಂದು ।
ಲೇಸಂ ಕೊಡುವವರಾರ್ತನಗೆಂದು ॥

ಚಿರತರವಹ ಯೋಚನೆ ವಿಡಿದವನು ।
ವಿರತಿಯ ಪರಿಪಾಕಂ ಬಡೆದವನು ॥ ॥೧೦॥

ಟೀಕಾ:—ಎನಿತುಂ=ಎಷ್ಟನ್ನು, ಬೀಡಬೇಕೋ=ತ್ಯಾಗಮಾಡಬೇಕೋ, ಅನಿತಂ=ಅಷ್ಟನ್ನು, ಬಿಡುವನ್ನ=ತ್ಯಜಿಸಿದವರಿಗೂ, ಕಡುಚಪಲತೆ=ವಿಶೇಷವಾದ ಚಂಚಲವು, ಚಿತ್ತದೊಳುಂ=ಮನಸ್ಸಿನಲ್ಲಿ, ಅಳಿವನ್ನ=ನಾಶವಾಗುವವರೆಗೆ, ವಿವಿಧ ಮೆನಿಪ=ಅನೇಕತರವಾದ, ವಾಸನೆಯು=ಮನೋಭಾವನೆಯು, ಅಳಿವನ್ನ=ನಾಶವಾಗುವ ವರೆಗೆ, ಭವಮಾಲೆಯ=ಜನನ ಮರಣ ರೂಪಮಾಲೆಯ, ಕಡೆಯಂ=ಪಾರವನ್ನು, ಕಾಂಬನ್ನ=ಕಾಣದವರೆಗೆ, ಕ್ರಮದಿಂ=ಕ್ರಮವಾಗಿ, ನಿಜವನು=ಯಥಾರ್ಥ ಸ್ವರೂಪವನ್ನು, ಇದೆಂದು=ಅಪರೋಕ್ಷವಾಗಿ, ಅರಿವನ್ನ=ತಿಳಿಯುವ ವರೆಗೆ, ಸಮತೆಯು=ಶಾಂತಿಯು, ನೆಟ್ಟನೆ=ಚನ್ನಾಗಿ, ನೆಲೆಗೊಂಬನ್ನ=ಸ್ಥಿರವಾಗದ ವರೆಗೂ, ಬಹುದುಃಖ=ಅತಿ ದುಃಖರೂಪವಾದ, ವಿಷೂಚಿಕೆ=(ಸೂಜಿಯಂತೆ ಚುಚ್ಚುತ್ತಿರುವ) ರೋಗವು, ಮಾಣ್ಬನ್ನ=ಹೋಗದ ವರೆಗೂ, ಸಹಜ=ಯಥಾರ್ಥ ಮಾದ, ಆರೋಗ್ಯತೆ=ನಿರೋಗತನವು, ದೊರಕೊಂಬನ್ನ=ಪ್ರಾಪ್ತಿಯಾಗದವರೆಗೆ, ಅಕಟಾ=ಅಯ್ಯೋ, ತನಗೆ=ತನಗೆ, ಲೇಸು=ನಿತ್ಯಸುಖವು, ಎಲ್ಲಿಯದು=ಎಲ್ಲಿಂದ ಪ್ರಾಪ್ತಿಯಾಗುವದು, ಎಂದು=ಹೀಗೆಂದು, ತನಗೆ=ತನ್ನನ್ನು ಕುರಿತು, ಲೇಸಂ=ಸುಖವನ್ನು, ಕೊಡುವವರು=ಉಂಟುಮಾಡುವವರಾರು, ಎಂದು=ಹೀಗೆಂದು, ಚಿರತರವಹ=ಅತ್ಯಧಿಕವಾದ, ಯೋಚನೆ=ವಿಚಾರವನ್ನು, ವಿಡಿದವನು=ಗ್ರಹಿಸಿದವನು, ವಿರತಿಯ=ವಿರಕ್ತಿಯ, ಪರಿಪಾಕಂ=ಪೂರ್ಣದೆಶೆಯನ್ನು, ಬಡೆದವನು=ಹೊಂದಿದವನು,

CC-0. Jangamwadi Math Collection. Digitized by eGangotri

ತಾತ್ಪರ್ಯ:-ವೈರಾಗ್ಯಶಾಲಿಯಾದ ಪುರುಷನು ಹೀಗೆ ತನ್ನ ಮನಸ್ಸಿನಲ್ಲಿ ಆಲೋಚನೆಯನ್ನು ಮಾಡುತ್ತಿರುತ್ತಾನೆ. ಹೇಗಂದರೆ, ತನಗೆ ದುಃಖವನ್ನುಂಟು ಮಾಡುವಂಥಾ ಯಾವ ಅಸದ್ವಿಷಯಗಳುಂಟೋ; ಅವುಗಳನ್ನು ಬಿಡದವರೆಗೆ, ಕಾಮಕ್ರೋಧಾದಿ ಗುಣಗಳಿಂದ ಮನಸ್ಸಿನ ಯಾವ ಚಂಚಲತೆಯುಂಟೋ; ಅದು ಹೋಗದ ವರೆಗೂ, ದೇಹವಾಸನೆ, ಲೋಕವಾಸನೆ, ಶಾಸ್ತ್ರವಾಸನೆಗಳು ನಾಶ ವಾಗದವರೆಗೂ, ದೇಹವನ್ನು ಧರಿಸುವುದಕ್ಕೆ ಪುಣ್ಯಪಾಪಕಾರಣ, ಇವುಗಳಿಗೆ ರಾಗದ್ವೇಷಗಳು ಕಾರಣ, ರಾಗದ್ವೇಷಗಳಿಗೆ ಅನುಕೂಲ ಪ್ರತಿಕೂಲ ಜ್ಞಾನ ಗಳೇ ಕಾರಣ, ಅನುಕೂಲ ಪ್ರತಿಕೂಲ ಜ್ಞಾನಗಳಿಗೆ ಇಷ್ಟಾನಿಷ್ಟ ವೃತ್ತಿಗಳೇ ಕಾರಣ, ಇಷ್ಟಾನಿಷ್ಟ ವೃತ್ತಿಗಳಿಗೆ ಭೇದಬುದ್ಧಿಯೇ ಕಾರಣ, ಭೇದಬುದ್ಧಿಗೆ ಅವಿದ್ಯೆಯೇ ಕಾರಣ. ಈ ರೀತಿ ಪರಂಪರಾ ಕಾರ್ಯ ಕಾರಣಗಳಿಂದ ಜನನ ಮರಣ ರೂಪ ಭವಮಾಲೆಯು ಇರುತ್ತದೆ. ಈ ಭವಮಾಲೆಯ ಕಡೆಯಾದ ಬ್ರಹ್ಮಾಭಿನ್ನ ಪ್ರತ್ಯಗಾತ್ಮವನ್ನು ಕಾಣದ ವರೆಗೂ, ಈ ಭವಮಾಲೆಯ ತೊಡಕು ಬಿಡುವದಿಲ್ಲ. ಮತ್ತು ವೈರಾಗ್ಯ, ಶಮೆ, ಮುಮುಕ್ಷತ್ವ, ಗುರುಸನ್ನಿಧಾನಪ್ರಾಪ್ತಿ, ಗುರುಸೇವೆ, ಮಹಾವಾಕ್ಯಾರ್ಥ ವಿಚಾರ, ಅನಾತ್ಮವಸ್ತುಗಳಾದ ಶರೀರಾದಿ ಗಳನ್ನು ನೇತಿಗಳೆಯೋಣ. ತಾನು ಯಾರೆಂದು ವಿಚಾರಮಾಡೋಣ, ಅನಂತರ ಸಚ್ಚಿದಾನಂದ ಸ್ವರೂಪ ಬ್ರಹ್ಮವೇ ನಾನೆಂದು ನಿಶ್ಚಯಮಾಡೋಣ ಆಮೇಲೆ ನಿತ್ಯಸುಖವಾದ ಆತ್ಮಸ್ವರೂಪವಾಗಿರೋಣ ಈ ಕ್ರಮದಿಂದ ತನ್ನ ನಿಜವನ್ನು ತಿಳಿಯದವರೆಗೂ, ಶಾಂತಿಯು ಸ್ಥಿರವಾಗದವರೆಗೂ, ಆಧ್ಯಾತ್ಮಿಕ, ಆದಿ ಭೌತಿಕ, ಆದಿ ದೈವಿಕಗಳೆಂಬ ದುಃಖರೂಪ ವಿಷೂಚಿನಾಮಕ ರೋಗವು ನಾಶವಾಗುವ ವರೆಗೂ, ಸ್ವರೂಪದಲ್ಲಿ ಸಹಜ ಸ್ಥಿತಿಯಿಂದಿರುವಂಥಾ ಆರೋಗ್ಯತೆಯು ಪ್ರಾಪ್ತಿ ಯಾಗುವ ವರೆಗೂ, ಅಯ್ಯೋ! ನನಗೆಲ್ಲಿ ಸುಖವಾದೀತು? ಎಂದೂ ಆಗಲಾರದು. ಮತ್ತು ನನಗೆ ಅಂಥಾ ನಿತ್ಯಸುಖವನ್ನುಂಟುಮಾಡಿ ಕೊಡುವವರು ಎಲ್ಲಿ ದೊರೆ ತಾರು? ಹೀಗೆಂದು ಅಧಿಕವಿಚಾರದ ಚಿಂತನೆಯನ್ನು ಮಾಡುವಂಥವನೇ ವೈರಾಗ್ಯದ ಪೂರ್ಣಸ್ಥಿತಿಯನ್ನು ಪಡೆದವನೆಂದು ತಿಳಿಯತಕ್ಕದ್ದು.

ಈ ವಿಷಯವು ಯೋಗವಾಸಿಷ್ಠ ಉಪಶಮ ಪ್ರಕರಣದ ಅರವತ್ತಾರನೆಯ ಸರ್ಗದಲ್ಲಿ ಮಿತ್ರರಾದ ಭಾಸ ವಿಲಾಸರೆಂಬಿಬ್ಬರ ಕಥೆಯಲ್ಲಿರುತ್ತದೆ.

CC-0. Jangamwadi Math Collection. Digitized by eGangotri

ಮತ್ತೂ ಸಾಧಕನಾದ ಪುರುಷನ ನಡೆನುಡಿಗಳು ಹೇಗಿರುತ್ತವೆ ಎಂಬುದನ್ನು ವರ್ಣಿಸುತ್ತಾರೆ.

ತಡೆಯದೆ ಸುಕೃತವನಾಚರಿಪವನು ।
ಬಿಡುವಂ ದುಷ್ಕೃತವೆಲ್ಲವನವನು ॥

ಧರ್ಮಂಗಳ ನೆಡೆವಿಡದಾಚರಿಪ ।
ಧರ್ಮ ಫಲಂಗಳನುರೆಧಿಕ್ಕರಿಪ ॥

ಪರರ ಸಿರಿಗೆ ಮತ್ಸರವಂ ಮಾಡ ।
ಪರ ಪೀಡೆಯ ನೆನಹಿನೊಳೊಡಗೂಡ ॥

ದೇಶೋಚಿತ ಕಾಲೋಚಿತವಾಗಿ ।
ಆಸುರ ಗತಿಯಳಿದನುಗುಣವಾಗಿ ॥

ಒಂದೆರಡಿನಿವಾತುಗಳಂ ನುಡಿವ ।
ಕುಂದದಿಳೆಗೆ ಸೊಗಸಾಗಿರೆ ನಡೆವ ॥

ಇಂತೆಸಗುವ ಯೋಗವನುಳ್ಳವನು ।
ಇಂತಾದಿಯಭೂಮಿಕೆಯುಳ್ಳವನು ॥ ೧೧ ॥

ಟೀಕಾ:— ಅವನು = ವಿರಕ್ತನು, ತಡೆಯದೆ = ಪ್ರತಿಬಂಧಕವಿಲ್ಲದಲೆ, ಸುಕೃತವನು=ಪುಣ್ಯವನ್ನು, ಆಚರಿಪ=ಮಾಡುವನು, ಅವನು=ಅಧಿಕಾರಿಯು, ದುಷ್ಕೃತವೆಲ್ಲವನು=ಸಕಲ ಪಾಪಕರ್ಮಗಳನ್ನು, ಬಿಡುವಂ=ತ್ಯಾಗ ಮಾಡುವನು, ಧರ್ಮಂಗಳನು = ಪುಣ್ಯ ಕರ್ಮಗಳನ್ನು, ಎಡೆವಿಡದೆ = ಅವಕಾಶವಿಲ್ಲದಲೆ, ಆಚರಿಪ=ಮಾಡುವನು, ಧರ್ಮಫಲಂಗಳನು=ಪುಣ್ಯ ಕರ್ಮಗಳ ಫಲಗಳನ್ನು, ಉರೆ=ಚೆನ್ನಾಗಿ, ಧಿಕ್ಕರಿಪ=ತಿರಸ್ಕಾರ ಮಾಡುವನು, ಪರರ=ಎರಡನೆಯವರ, ಸಿರಿಗೆ=ಐಶ್ವರ್ಯಕ್ಕೆ, ಮತ್ಸರವಂ=ಹೊಟ್ಟೆಕಿಚ್ಚನ್ನು, ಮಾಡ=ಮಾಡನು, ಪರ ಪೀಡೆಯ=ಎರಡನೆಯವರಿಗೆ ಉಪದ್ರವವನ್ನು, ನೆನಹಿನೊಳಗೆ=ಮನಸ್ಸಿನಲ್ಲಿ, ಒಡಗೂಡ=ಸೇರನು, ದೇಶೋಚಿತ=ದೇಶಾನುಗುಣವಾಗಿ, ಕಾಲೋಚಿತ= ಕಾಲಾನುಗುಣವಾಗಿ, ಆಸುರಗತಿಯ=ದಂಭ ಅಹಂಕಾರಾದಿ ಆಸುರ=ಕರ್ಮ ಗಳನ್ನು, ಉಳಿದು = ಬಿಟ್ಟು, ಅನುಗುಣವಾಗಿ = ಪ್ರಸಂಗಾನುಸಾರವಾಗಿ,

CC-0. Jangamwadi Math Collection. Digitized by eGangotri

ಒಂದೆರಡು=ಒಂದೆರಡು, ಇನಿವಾತುಗಳ=ಸವಿ ಮಾತುಗಳನ್ನು, ನುಡಿವ= ಮಾತಾಡುವನು, ಕುಂದದೆ=ಕೊರತೆವಡೆಯದೆ, ಇಳೆಗೆ=ಭೂಮಿಗೆ, ಸೊಗಸಾಗಿರೆ= ಸಂತೋಷವಾಗುವ ಹಾಗೆ, ನಡೆವ=ನಡೆಯುವನು, ಇಂತು=ಈ ಪ್ರಕಾರ, ಎಸಗುವ=ಮಾಡುವ, ಯೋಗವನುಳ್ಳವನು=ಸದ್ಗುಣಗಳುಳ್ಳವನು, ಇಂತು=ಈ ಪ್ರಕಾರ, ಆದಿಯ=ಮೊದಲನೆಯ, ಭೂಮಿಕೆಯುಳ್ಳವನು=ಸುಭೇಚ್ಛೆಯೆಂಬ ಭೂಮಿಕೆಯಿಂದೊಡಗೂಡಿದವನು.

ತಾತ್ಪರ್ಯ:—ಎಲೈ ಶಿಷ್ಯನೇ ಕೇಳು. ಉಕ್ತ ರೀತಿಯಂತೆ ಆಲೋಚನೆಯನ್ನು ಮಾಡುವ ವಿರಕ್ತ ಪುರುಷನು ಯಾವ ಪ್ರತಿಬಂಧಕವಿಲ್ಲದಲೆ ಪುಣ್ಯ ಕರ್ಮಗಳನ್ನೆ ಮಾಡುತ್ತಿರುತ್ತಾನೆ. ಅಭಕ್ಷ್ಯ ಭಕ್ಷಣ, ಪರ ಸ್ತ್ರೀ ಗಮನ, ಪರ ದ್ರವ್ಯಾಪಹರಣ ಮುಂತಾದ ಪಾಪ ಕರ್ಮಗಳನ್ನು ಬಿಟ್ಟು ಬಿಡುವನು. ಸತ್ಪಾತ್ರಾನುಗುಣವಾಗಿ ಧನ, ಕನಕ, ವಾಹನ, ವಸ್ತ್ರ, ಅನ್ನ ಮೊದಲಾದ ಪುಣ್ಯಗಳನ್ನೂ, ನಿತ್ಯ ನೈಮಿತ್ಯಕಾದಿ ಕರ್ಮಗಳನ್ನು ಮಾಡಿದರೂ ಅವುಗಳ ಫಲಾಪೇಕ್ಷೆಯಿಂದ ಮಾಡದೆ, ಅಂತಃಕರಣ ಶುದ್ಧ್ಯರ್ಥ ಈಶ್ವರನ ಪ್ರೀತಿಗೋಸುಗ ಸತ್ಕರ್ಮಗಳನ್ನು ಮಾಡುತ್ತಿರುತ್ತಾನೆ. ಆ ಪುಣ್ಯ ಕರ್ಮಗಳ ಫಲವಾದರೂ ಜನ್ಮವನ್ನು ಕೊಡುವುದರಿಂದ ಆ ಪುಣ್ಯ ಫಲವನ್ನು ಮಾತ್ರ ತಿರಸ್ಕರಿಸುತ್ತಾನೆ. ಎರಡನೆಯವರ ಧನ, ಧಾನ್ಯ, ಸ್ತ್ರೀಪುತ್ರಾದಿ ಸಂಪತ್ತುಗಳಿಂದ ಯುಕ್ತವಾಗಿರುವುದನ್ನು ಕಂಡು, ಮನದಲ್ಲಿ ಚಡಪಡಿಸಿ ಅವರ ಸಂಪತ್ತು ಹೇಗೆ ಹಾಳಾದೀತೆಂಬ ಕಲ್ಪನಾತ್ಮಕ ಹೊಟ್ಟೆಕಿಚ್ಚನ್ನು ಮಾಡುವದಿಲ್ಲ. ಪರರಿಗೆ ಕೇಡಾಗಲೆಂದು ಮನಸ್ಸಿನೊಳಗೆ ಕೂಡಾ ಚಿಂತೆಯನ್ನು ಮಾಡುವದಿಲ್ಲ. ಅಂದಮೇಲೆ, ಶರೀರದಿಂದ ಪರಪೀಡನೆಯನ್ನು ಮಾಡುವದಿಲ್ಲೆಂಬುದನ್ನು ಏನು ಹೇಳತಕ್ಕದ್ದು. ಭಗವದ್ಗೀತೆಯಲ್ಲಿ ಹೇಳಲ್ಪಟ್ಟ ಡಂಭ ಅಹಂಕಾರಾದಿ ಯಾವ ಅಸುರೀ ಗುಣಗಳುಂಟೋ, ಅವುಗಳನ್ನೆಲ್ಲಾ ಬಿಟ್ಟು ದೇಶ ಕಾಲಾನುಗುಣವಾಗಿ ಒಂದೆರಡು ಸವಿಮಾತುಗಳನ್ನೇ ಆಡುತ್ತಾನೆ. ಮತ್ತು ವೇದಕ್ಕೂ ಲೌಕಿಕಕ್ಕೂ ವಿರೋಧವಾಗದಂತೆ ನಡೆಯುವನು. ಅಂದರೆ ಮಹಾತ್ಮರಿಗೆ ಯೋಗ್ಯ ಕಾಣುವ ಹಾಗೆ ಸರ್ವರಿಗೂ ಸುಖವಾಗುವಂತೆ ಸದಾಚಾರದಲ್ಲಿ ನಡೆಯುವನು. ಈ ಪ್ರಕಾರ ಸದ್ಗುಣ ಸದಾಚಾರಗಳಿಂದ ನಡಿಯುವನೇ ಮೊದಲನೆಯದಾದ ಸುಭೇಚ್ಛೆ.

CC-0. Jangamwadi Math Collection. Digitized by eGangotri

ಯೆಂಬ ಭೂಮಿಕೆಯುಳ್ಳವನು, ಅರ್ಥಾತ್ ಮೊದಲನೆಯ ಭೂಮಿಕೆಯಲ್ಲಿ ಇಹ ಪರ ಭೋಗ ವೈರಾಗ್ಯವನ್ನು ತೋರಿಸಿದಂತಾಯಿತು.

ಬಳಿಕ; ಮುಂದಿನ ಗತಿಯಲ್ಲಿ ಪ್ರತಿಪಾದಿಸುವ ಯೋಗ ಮತ್ತು ಜ್ಞಾನ ಇವೆರಡನ್ನು ಈ ಎರಡು ಪದಗಳಿಂದ ಸೂಚಿಸುತ್ತಾರೆ.

ಜೀವೇಶ್ವರಯೋಗವನರಿದಂದು।
ಭಾವಾಧ್ಯಾಸಕೆ ಹರವಾದಂದು॥

ಭವದ ಲತೆಯ ಬೇರಂ ಕೊಯ್ದವನು।
ತವೆ ಪರಮಾನಂದವ ನೈದುವನು॥

ಟೀಕಾ:— ಜೀವೇಶ್ವರ = ಜೀವಪರಮರ, ಯೋಗವನು = ಐಕ್ಯವನ್ನು, ಅರಿದಂದು=ತಿಳಿದಾಗ್ಯೆ, ಭಾವಾಧ್ಯಾಸಕೆ=ಪ್ರತ್ಯಕ್ಷ ರೂಪ ಅಧ್ಯಾಸಕ್ಕೆ, ಹರ ವಾದಂದು=ನಾಶಬಂದಾಗ್ಯೆ, ಭವದ=ಸಂಸಾರವೆಂಬ, ಲತೆಯ=ಬಳ್ಳಿಯ, ಬೇರಂ= ಮೂಲವನ್ನು, ಕೊಯ್ದು=ಕತ್ತರಿಸಿ, ಅವನು=ಆ ಪುರುಷನು, ತವೆ=ಚನ್ನಾಗಿ, ಪರಮಾನಂದವನು=ನಿತ್ಯ ಸುಖವನ್ನು, ಐದುವನು=ಹೊಂದುವನು.

ತಾತ್ಪರ್ಯ:—ಪ್ರಥಮ ಭೂಮಿಕೆಯಿಂದೊಡಗೂಡಿದ ಸಾಧಕನು ಶ್ರುತಿ ಗುರುಗಳಿಗೆ ಶರಣಾಗತನಾಗಿ, ಜೀವ ಮತ್ತು ಈಶ್ವರ ಇವರ ಸ್ವರೂಪವನ್ನು ವಿಚಾರಮಾಡಿ, ಐಕ್ಯತ್ವ ಜ್ಞಾನವನ್ನು ಯಾವಾಗ್ಯೆ ಪಡೆಯುವನೋ ಆಗ್ಯೆ ಅವಿದ್ಯೆಯಿಂದ ತೋರುವ ಭೇದ ರೂಪ ಭ್ರಾಂತಿಯೆಲ್ಲಾ ಹೊರಟುಹೋಗುವದು. ಜನನ ಮರಣ ರೂಪ ಸಂಸಾರವೆಂಬ ಬಳ್ಳಿಗೆ ಬೇರಂತಿರುವ ಅವಿದ್ಯೆಯನ್ನು ಜ್ಞಾನ ಖಡ್ಗದಿಂದ ಛೇದನ ಮಾಡುವನು. ಬಳಿಕ ನಿತ್ಯ ಸುಖರೂಪವಾದ ಬ್ರಹ್ಮವನ್ನು ಹೊಂದುವನು. ಅರ್ಥಾತ್ ಜ್ಞಾನದಿಂದ ಅತ್ಯಂತ ದುಃಖನಿವೃತ್ತಿ ಪರಮಾನಂದ ಪ್ರಾಪ್ತಿರೂಪ ಮೋಕ್ಷವನ್ನು ಹೊಂದುವನೆಂಬ ತಾತ್ಪರ್ಯವು.

ಬಳಿಕ; ಈ ಗತಿಯಲ್ಲಿ ಯಾವ ವಿಷಯವು ಪ್ರತಿಪಾದಿಸಿತೆಂಬುವದನ್ನು ಸಂಕ್ಷೇಪವಾಗಿ ತಿಳಿಸಿ ಗತಿಯನ್ನು ಮುಗಿಸುತ್ತಾರೆ.

CC-0. Jangamwadi Math Collection. Digitized by eGangotri

ಕಂದ॥ ಗತಿಯೇಳನೆಯುದಿದಕ್ಕತಿ
ಹಿತಮೆನಿಪ ನಿರೂಪಣಂಗಳೇಕಾದಶವಂ ॥

ತತಿಶಯಮಾಗಿರೆ ತಿಳಿಯ।
ಲ್ಪ್ರತಿ ಪಾದಿತವಿಲ್ಲಿ ಸಾಧಕಸ್ಥಿತಿನಲವಿಂ ॥

ಟೀಕಾ:—ಗತಿ=ಪ್ರಕರಣವು, ಏಳನೆಯದು=ಏಳನೆಯದು, ಇದಕೆ=ಇದಕ್ಕೆ ಅತಿಹಿತಮೆನಿಪ=ಬಹಳ ಯೋಗ್ಯಂಗಳಾದ, ನಿರೂಪಣಂಗಳು=ಪದ್ಯಗಳು, ಅತಿಶಯವಾಗಿರೆ=ಆಧಿಕ್ಯವಾಗಿದ್ದರೂ, ಅಂತು=ಒಟ್ಟಿಗೆ, ಏಕಾದಶವು=ಹನ್ನೊಂದು, ತಿಳಿಯಲ್=ವಿಚಾರ ಮಾಡಲಾಗಿ, ಇಲ್ಲಿ=ಈಗತಿಯಲ್ಲಿ,ನಲವಿಂ=ಸಂತೋಷದಿಂದ ಸಾಧಕಸ್ಥಿತಿ=ಸಾಧಕನಿರುವಿಕೆಯು, ಪ್ರತಿಪಾದಿತವು=ಹೇಳಲ್ಪಟ್ಟಿತು.

ಇಂತು ಗತಿ ೭ಕ್ಕಂ ನಿರೂಪಣೆ ೭೭ಕ್ಕಂ

ಚರಣ ೯೩೬ಕ್ಕಂ ಮಂಗಳಮಸ್ತು

ಶ್ರೀಗುರು ಶಂಭುಲಿಂಗಾಯನಮಃ

ಅಷ್ಟಮ ಗತಿ

ಬಳಿಕ; ಹಿಂದಿನ ಗತಿಯಲ್ಲಿ ಹೇಳಿರುವ ವಿಷಯವನ್ನು ಅನುವಾದ ಮಾಡಿ ಈ ಗತಿಯಲ್ಲಿ ಹೇಳುವ ವಿಷಯವನ್ನು ಪ್ರತಿಜ್ಞಾ ಮಾಡುತ್ತಾರೆ.

ಕಂದ॥ ಇಂತಾದಿಯ ಭೂಮಿಕೆಯೋಳ್।
ಸಂತಸದಿಂ ಮುಕ್ತಿ ಸಾಧನಂ ನಿಜವೈರಾ ॥

ಗ್ಯಂ ತಾನೊಂದೊರೆದೊಲವಿಂ ॥
ದಂ ತಿಳಪುವೆ ನೀಗಳಿನ್ನು ಯೋಗಕ್ರಮಮಂ ॥

CC-0. Jangamwadi Math Collection. Digitized by eGangotri

ಟೀಕಾ:—ಇಂತು=ಈ ಪ್ರಕಾರ, ಆದಿಯ ಭೂಮಿಕೆಯೊಳ್=ಮೊದಲನೆಯ ಭೂಮಿಕೆಯಲ್ಲಿ, ಸಂತಸದಿ=ಸಂತೋಷದಿಂದ, ಮುಕ್ತಿ ಸಾಧನಂ=ಮೋಕ್ಷಕ್ಕೆ ಸಾಧನವಾದದ್ದು, ನಿಜವೈರಾಗ್ಯಂ=ಖರೇ ವೈರಾಗ್ಯವು, ತಾನೆಂದು=ಅದೇ ಆಗಿರುವದೆಂದು, ಒರೆದು=ಹೇಳಿ, ಇನ್ನು=ಬಳಿಕ, ಈಗಳ್=ವರ್ತಮಾನ ಕಾಲದಲ್ಲಿ, ಒಲವಿಂದಂ=ಕೃಪೆಯಿಂದ, ಯೋಗಕ್ರಮವಂ=ಕ್ರಮವಾದ ಯೋಗರೀತಿಯನ್ನು, ತಿಳುಪುವೆನು=ತಿಳಿಸುವೆನು.

ತಾತ್ಪರ್ಯ:—ಈ ಪ್ರಕಾರ ಮೊದಲನೆಯ ಭೂಮಿಕೆಯಲ್ಲಿ ಮೋಕ್ಷವನ್ನು ಹೊಂದುವಂಥಾ ಪುರುಷನಿಗೆ ವಾಸನಾ ಸಹಿತ ವಿಷಯ ತ್ಯಾಗರೂಪ ನಿಜವೈರಾಗ್ಯವನ್ನು ತೋರಿಸಿ; ಈ ಗತಿಯನ್ನು ಯೋಗವು ಅಂದರೇನು? ಯೋಗಕ್ಕೆ ಎಷ್ಟು ಅಂಗಗಳಿರುತ್ತವೆ? ಯೋಗವು ಎಷ್ಟು ಪ್ರಕಾರವಾಗಿರುತ್ತದೆ? ಯೋಗಕ್ಕೆ ಬೀಜ, ರೂಪ, ಕಾರ್ಯಗಳು ಯಾವವು? ಗುರು ಶಿಷ್ಯರ ಲಕ್ಷಣವೇನು? ಜೀವ ಬ್ರಹ್ಮರ ಐಕ್ಯತ್ವವು ಹೇಗೆ? ಜ್ಞಾನಕ್ಕೆ ಬೀಜ, ರೂಪ, ಕಾರ್ಯಗಳು ಯಾವುವು? ಎಂಬುದನ್ನು ಪ್ರತಿಪಾದನ ಮಾಡುತ್ತೇವೆಂದು ಪ್ರತಿಜ್ಞಾ ಮಾಡುತ್ತಾರೆ. ಅರ್ಥಾತ್ ವಿಚಾರಣಾ ಅಸಂಗವೆಂಬೆರಡು ಭೂಮಿಕೆಗಳನ್ನು ಹೇಳುತ್ತಾರೆಂಬ ಭಾವವು.

ಬಳಿಕ; ಮೊದಲನೆಯ ಪದದಲ್ಲಿ ಯೋಗಕ್ಕಿರುವ ಬೀಜ, ರೂಪ, ಕಾರ್ಯಗಳನ್ನು ತೋರಿಸುತ್ತಾರೆ.

ಯೋಗಕೆ ಬೀಜಂ ರೂಪಂ ಕಾರ್ಯ ।
ಆಗಳು ಮೂಂಟವನರಿ ಸುವಿಚಾರ್ಯ ॥

ಯಮಮಾದ್ಯಂಗವೆ ಬೀಜವೆನಿಕ್ಕು ।
ಕ್ರಮದೊಳವಂ ಮೇಣರಿಯಲ್ಪಕ್ಕು ॥

ಫಲ ವಂದದ ಸದುಪಾಯಗಳಿಂದ ।
ಫಲವನುಭವಿಗಳ ಸಂಗತಿಯಿಂದ ॥

ಚಲಿಸುವ ಮನವದು ಸುಸ್ಥಿರದಿಂದ ।
ನಿಲಲದು ರೂಪವೆನಿಸುವದೆಲೆ ಕಂದ ॥

CC-0. Jangamwadi Math Collection. Digitized by eGangotri

ಮಗುಳೆ ಬಹಿರ್ವ್ಯಾಪಾರಂಗಳನು ।
ಮಿಗೆ ದುಃಖಪ್ರದ ಕರ್ಮಂಗಳನು॥

ಒಲ್ಲದೆ ಬಿಡುವದು ಕಾರ್ಯಮದಾಗಿ।
ಬಲ್ಲನೆ ತಿಳಿಯವನುಳ್ಳನೆ ಯೋಗಿ ॥೧॥

ಟೀಕಾ:—ಯೋಗಕ್ಕೆ=ಚಿತ್ತೈಕಾಗ್ರ್ಯ ಲಕ್ಷಣಾತ್ಮಕ ಯೋಗಕ್ಕೆ, ಬೀಜಂ=ಕಾರಣವೆಂದೂ, ರೂಪಂ=ಸ್ವರೂಪವೆಂದೂ, ಕಾರ್ಯ=ಫಲವೆಂದೂ, ಆಗಳುಂ=ಯಾವಾಗಲೂ, ಉಂಟು=ಇರುವವು, ಸುವಿಚಾರ್ಯ=ಎಲೈ ವಿಚಾರವುಳ್ಳಶಿಷ್ಯನೆ, ಅವನು=ಆ ಬೀಜಾದಿಗಳನ್ನು, ಅರಿ=ತಿಳಿ,ಯಮವಾದ್ಯಂಗವೆ=ಯಮನಿಯಮಾದಿ ಅಂಗಗಳೇ, ಬೀಜವೆನಿಕ್ಕುಂ=ಹೇತುಗಳೆನಿಸುವವು, ಮೇಣ್=ಮತ್ತು, ಅವಂ=ಆ ಅಂಗಗಳನ್ನೆ, ಕ್ರಮದೋಳ್=ಕ್ರಮದಿಂದ, ಅರಿಯಲ್ಬೇಕ್ಕು=ತಿಳಿಯಲಿಕ್ಕೆ ಬೇಕಾಗುವದು, ಪಲವಂದದ=ಹಲವು ಪ್ರಕಾರದ, ಸದುಪಾಯಗಳಿಂದ=ಉತ್ತಮ ಸಾಧನಗಳಿಂದ, ಪಲವು=ಅನೇಕವನ್ನು, ಅನುಭವಿಗಳ=ಜ್ಞಾನಿಗಳ, ಸಂಗತಿಯಿಂದ=ಸಹವಾಸದಿಂದ, ಚಲಿಸುವ=ಚಂಚಲವಾಗುವ, ಮನವದು=ಆಮನಸ್ಸು, ಸುಸ್ಥಿರದಿಂದ=ಅಚಲ ರೂಪದಿಂದ, ನಿಲಲ್=ನಿಂದಿರಲಾಗಿ, ಎಲೆ ಕಂದ=ಎಲೈ ಮಗುವೇ, ಅದು=ಹೇಳಿದ್ದು, ರೂಪವೆನಿಸುವುದು=ಸ್ವರೂಪ ಅಥವಾ ಆಕಾರವೆನಿಸುವುದು, ಮಗುಳೆ=ಅನಂತರ, ಬಹಿರ್ವ್ಯಾಪಾರಂಗಳನ್ನು=ಹೊರಗಿನ ಉದ್ಯೋಗಗಳನ್ನು, ಮಿಗೆ=ವಿಶೇಷವಾಗಿ, ದುಃಖಪ್ರದ=ದುಃಖಗಳನ್ನು ಕೊಡುವಂಥಾ, ಕರ್ಮಂಗಳನು=ಕರ್ಮಗಳನ್ನು, ಒಲ್ಲದೆ=ಇಚ್ಛಿಸದೆ, ಬಿಡುವದು=ತ್ಯಾಗ ಮಾಡುವದು, ಕಾರ್ಯಮದಾಗಿ=ಫಲವಾಗಿರುವದು, ಬಲ್ಲನೇ=ಜಾಣನಾದ, ಶಿಷ್ಯನೇ!, ಅವನುಳ್ಳವನೇ=ಆ ಬೀಜಾದಿಗಳುಳ್ಳವನೇ, ಯೋಗಿ=ಯೋಗೀಶ್ವರನೆಂದು, ತಿಳಿ=ಅರಿ.

ತಾತ್ಪರ್ಯ:—ಎಲೈ ಶಿಷ್ಯನೇ ಕೇಳು. ಚಿತ್ತ ವೃತ್ತಿ ನಿರೋಧ ಲಕ್ಷಣಾತ್ಮಕವಾದ ಯೋಗಕ್ಕೆ ಹೇತು, ಸ್ವರೂಪ, ಕಾರ್ಯಗಳೆಂದು ಮೂರು ಭಾಗಗಳು ಯಾವಾಗಲೂ ಇರುತ್ತವೆ. ಅವು ಯಾವವು? ಅಂದರೆ ಯಮ, ನಿಯಮ,

CC-0. Jangamwadi Math Collection. Digitized by eGangotri

ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿಗಳೆಂಬ ಎಂಟು ಅಂಗಗಳೇ ಬೀಜಗಳೆನಿಸುವವು. ಮತ್ತು ಇವುಗಳನ್ನು ಕ್ರಮದಿಂದ ಶಾಸ್ತ್ರ ಗುರುಗಳ ಮೂಲಕ ತಿಳಿದು ಅಭ್ಯಾಸ ಮಾಡಬೇಕು. ಸದುಪದೇಶ, ಸಾತ್ವಿಕಾನ್ನ, ಮಿತಾಹಾರ, ಏಕಾಂತವಾಸ, ಧ್ಯಾನ, ಸಜ್ಜನ ಸಹವಾಸ ಮೊದಲಾದ ಉಪಾಯಗಳಿಂದ, ಚಂಚಲವಾದ ಮನಸ್ಸು ಸ್ಥಿರವಾಗಲು, ಅದಕ್ಕೆ ಸ್ವರೂಪವೆಂದು ಹೇಳುತ್ತಾರೆ. ಆದರೆ ಮನಸ್ಸು, ದುರ್ಗುಣ, ಸಂಶಯ, ವಿಷಯ ವಾಸನೆ, ಸ್ವಭಾವತ, ಹೀಗೆಂದು ನಾಲ್ಕುರೀತಿಯಿಂದಲೂ ಚಂಚಲವಾಗಿರುತ್ತದೆ. ದುರ್ಗುಣಗಳಮೂಲಕ ಚಂಚಲವಾಗಿದ್ದರೆ, ಆ ಚಂಚಲತೆಯನ್ನು ಸದ್ಗುಣ ಗಳಿಂದ ಕಳೆಯಬೇಕು. ಸಂಶಯದಿಂದ ಚಂಚಲವಾದರೆ ಅದನ್ನು ಶ್ರವಣದಿಂದ ಕಳೆಯಬೇಕು. ವಿಷಯವಾಸನೆಯಿಂದ ಚಂಚಲವಾಗಿದ್ದರೆ ಅದನ್ನು ವೈರಾಗ್ಯ ದಿಂದ ಕಳೆಯಬೇಕು. ಮನಸ್ಸು ವಾಯುವಿನಿಂದ ಉತ್ಪನ್ನವಾದ ಕಾರಣ ಸ್ವಭಾವ ಸಿದ್ಧವಾದ ಚಂಚಲತೆ ಇದ್ದರೆ; ಅದನ್ನು ಪ್ರಾಣಾಯಾಮದಿಂದ ಕಳೆಯಬೇಕು. ಈ ರೀತಿ ಚಂಚಲತೆಯನ್ನು ನಿವಾರಣೆ ಮಾಡಿಕೊಂಡು ಸ್ಥಿರ ಮನಸ್ಸು ಮಾಡಿರುವುದೇ ರೂಪವೆನಿಸಿರುತ್ತದೆ. ಬಳಿಕ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳಿಂದ ಹೊರಗಿನ ನೋಡೋಣ, ಕೊಡೋಣ, ಮೊದಲಾದ ವ್ಯವಹಾರಗಳನ್ನೂ ತನಗೆ ದುಃಖಗಳನ್ನು ಕೊಡುವಂಥಾ ವ್ಯವಹಾರಗಳನ್ನೂ ಬಿಡುವುದೇ ಕಾರ್ಯವಾಗಿರುವುದು. ಸುಪ್ತಿಯಂತೆ ಸಕಲ ಕಾರ್ಯ ಸ್ಮೃತಿ ಹೀನನು ಆಗಿರುವುದೇ ಉಪರತಿ ಅವಧಿಯಾಗಿರುತ್ತದೆ. ಈ ರೀತಿ ಬೀಜ, ರೂಪ, ಕಾರ್ಯಗಳಿಂದ ಯುಕ್ತವಾದ ಯೋಗವನ್ನು ಸಾಧಿಸಿಕೊಂಡವನೇ ಯೋಗಿಯೆಂದು ಹೇಳಿಸಿಕೊಳ್ಳುವನು.

ಬಳಿಕ; ಯೋಗದ ಅಂಗಗಳಾದ ಯಮನಿಯಮಾದಿಗಳು ಎಷ್ಟು ಪ್ರಕಾರ ಗಳಾಗಿರುವವೆಂಬುದನ್ನು ಹೇಳುತ್ತಾರೆ.

ಯೋಗಾಂಗಂ ಬಹುವಿಧಮಾಗಿರ್ಕು।
ಯೋಗಿಗವೆಲ್ಲಂ ವಿಧಿಯಾಗಿರ್ಕು॥

ಯಮವೆಂಬುದು ತಿಳಿಯಲು ದಶಭೇದ।
ಕ್ರಮದಿಂದಂ ನಿಯಮಂ ದಶಭೇದ

CC-0. Jangamwadi Math Collection. Digitized by eGangotri

ಎಸೆವಾಸನವದು ಪಲವಾಗಿಹುದು।
ಅಸುರೋಧನವೇಳುಂ ತೆರನಹುದು ॥

ಅನ್ನವನುಂಬುದು ಪ್ರತ್ಯಾಹಾರ।
ಉನ್ನಿಸೆ ಧಾರಣೆ ಹೃದಯ ವಿಚಾರ ॥

ಸಲೆ ಶಿವ ಮೂರ್ತಿಯೆ ನೆನಹು ಧ್ಯಾನ।
ನಿಲಲಲ್ಲಿಯೆ ಮನವದು ತಿಳಿ ಮೌನ ॥

ಇವು ಸಗುಣಾಷ್ಟಾಂಗದ ಸೌಂಜ್ಞೆಗಳು।
ಇವರ ಸುಲಕ್ಷಣವರಿ ಶಾಸ್ತ್ರದೊಳು ॥೨॥

ಟೀಕಾ:— ಯೋಗಾಂಗವು=ಯೋಗದ ಅಂಗವು, ಬಹುವಿಧಮಾಗಿರ್ಕು= ಅನೇಕಪ್ರಕಾರವಾಗಿರುವುದು, ಅವೆಲ್ಲಂ=ಅವುಗಳೆಲ್ಲವು, ಯೋಗಿಗೆ=ಯೋಗೀಶನಿಗೆ, ವಿಧಿಯಾಗಿರ್ಕು=ನಿತ್ಯಕರ್ಮಗಳೆನಿಸಿರುವವು, ತಿಳಿಯಲ್=ವಿಚಾರಮಾಡಲಾಗಿ, ಯಮವೆಂಬುದು=ಯಮವೆಂಬ ಒಂದು ಅಂಗವು, ದಶಭೇದ=ಹತ್ತು ಪ್ರಕಾರ ವಾಗಿರುವದು, ಕ್ರಮದಿಂದಂ=ಕ್ರಮದಿಂದ, ನಿಯಮಂ=ನಿಯಮಾಂಗವು, ದಶ ಭೇದ=ಹತ್ತುಪ್ರಕಾರವಾಗಿರುವದು, ಎಸೆವ=ಶೋಭಿಸುವ, ಆಸನವದು=ಆಸನವು ಪಲವಾಗಿಹುಧು=ಅನೇಕ ಪ್ರಕಾರವಾಗಿರುವದು, ಅಸುರೋಧನವು=ಪ್ರಾಣಾಯಾ ಮವು, ಏಳುಂತೆರನಹುದು=ಏಳುಪ್ರಕಾರವಾಗಿರುವದು, ಅನ್ನವನು=ಅನ್ನವನ್ನು, ಉಂಬುದು=ಊಟಮಾಡುವದು, ಪ್ರತ್ಯಾಹಾರ=ಪ್ರತ್ಯಾಹರಣವು, ಉನ್ನಿಸೆ= ವಿಚಾರ ಮಾಡಲಾಗಿ, ಹೃದಯ ವಿಚಾರ=ಹೃದಯದ ಶೋಧನೆಯು, ಧಾರಣೆ= ಧಾರಣಾಂಗವೆನ್ನಿಸುವದು, ಸಲೆ=ಚನ್ನಾಗಿ, ಶಿವಮೂರ್ತಿಯ=ಶಿವನ ರೂಪದ, ನೆನಹು=ಸ್ಮರಣವು, ಧ್ಯಾನ=ಧ್ಯಾನಾಂಗವೆನ್ನಿಸುವದು, ಅಲ್ಲಿಯೆ=ಶಿವನಲ್ಲಿಯೇ, ಮನವದು=ಆ ಮನಸ್ಸು, ನಿಲಲ್=ನಿಲ್ಲಲಾಗಿ, ಮೌನ=ಸಮಾಧಿಯೆಂದು, ತಿಳಿ= ಅರಿ, ಇವು=ಈಗ ಹೇಳಿದವು, ಸಗುಣಾಷ್ಟಾಂಗದ=ಸಗುಣಗಳಾದೆಂಟು ಅಂಗಗಳ, ಸಂಜ್ಞೆಗಳು=ಹೆಸರುಗಳು, ಇವರ=ಈ ಎಂಟು ಅಂಗಗಳ, ಸುಲಕ್ಷಣವ=ಉತ್ತಮ ವಾದ ಲಕ್ಷಣವನ್ನು, ಶಾಸ್ತ್ರದೊಳು=ಶಾಸ್ತ್ರದಲ್ಲಿ, ಅರಿ=ತಿಳಿ.

CC-0. Jangamwadi Math Collection. Digitized by eGangotri

ತಾತ್ಪರ್ಯ:—ಯೋಗಕ್ಕೆ (ಅಂಗಗಳಾದ) ಸಾಧನಗಳಾದ ಯಮನಿಯಮಾದಿಗಳು ಒಂದೊಂದೇ ಅನೇಕ ಪ್ರಕಾರ ಭೇದಗಳಾಗಿರುವವು. ಅವೆಲ್ಲವು ಯೋಗೀಶನಿಂದ ಸ್ವೀಕರಿಸಲಿಕ್ಕೆ ಯೋಗ್ಯಗಳಾಗಿರುತ್ತವೆ. ಅವು ಯಾವವು? ಅಂದರೆ ಯಮವೆಂಬ ಅಂಗವು ಹತ್ತು ಪ್ರಕಾರವಾಗಿರುವದು. ತ್ರಿಕರಣಗಳಿಂದ ಅನ್ಯರಿಗೆ ಪೀಡೆಯನ್ನು ಮಾಡದಿರುವದೇ ಅಹಿಂಸೆಯೆನಿಸುವದು. ತಾನು ಕಂಡು ಕೇಳಿದ್ದನ್ನು ಹೇಳುವದೇ ಸತ್ಯವೆನಿಸುವದು. ಅನ್ಯರ ತೃಣಾದಿಗಳಲ್ಲಿಯೂ ಕೂಡಾ ಮನಸ್ಸಿನಿಂದ ಆಶಾ ರಹಿತವಾಗಿರುವದೇ ಅಸ್ತೇಯವೆನಿಸುವದು. ತ್ರಿಕರಣಗಳಿಂದ ಸ್ತ್ರೀ ಸಂಗ ರಹಿತನಾಗಿರುವದೂ ಅಥವಾ ಋತುಮತಿಕಾಲದಲ್ಲಿ ಸಂಗ ಮಾಡುವದೂ ಬ್ರಹ್ಮಚರ್ಯವೆನಿಸುವದು. ತನ್ನಂತೆ ಸಕಲ ಪ್ರಾಣಿಗಳೂ ತ್ರಿಕರಣಗಳಿಂದ ಪ್ರೀತಿಯನ್ನು ಮಾಡುವದೇ ದಯೆ ಯೆನಿಸುವದು, ಸ್ತ್ರೀ ಪುತ್ರ ಮಿತ್ರ ಶತೃಗಳಲ್ಲಿ ಸಮಭಾವದಿಂದಿರುವದೇ ಆರ್ಜವವೆನಿಸುವದು. ಶತ್ರುಗಳು ತ್ರಿಕರಣಗಳಿಂದ ಪರಿಪೀಡಿಸಿದರೂ ಕ್ಷೋಭ ಬುದ್ಧಿಯುಳ್ಳವನಾಗದಿರುವದೇ ಕ್ಷಮೆ ಯೆನಿಸುವದು. ಜ್ಞಾನದಿಂದಲೇ ಸಂಸಾರ ನಿವೃತ್ತಿಯಾಗುವದಲ್ಲದೆ ಬೇರೆ ಉಪಾಯದಿಂದಾಗದು ಎಂಬ ನಿಶ್ಚಯವೇ ಧೃತಿಯೆನಿಸುವದು. ಹಸಿವೆಯಲ್ಲಿ ನಾಲ್ಕು ಭಾಗ ಮಾಡಿ ಎರಡು ಭಾಗಗಳನ್ನು ಹಗುರ ಮತ್ತು ಪರಿಶುದ್ಧವಾದ ಅನ್ನದಿಂದ, ಮೂರನೆಯ ಭಾಗವನ್ನು ನೀರಿನಿಂದ ತುಂಬಿ, ನಾಲ್ಕನೆಯ ಭಾಗವನ್ನು ವಾಯು ಸಂಚಾರಾರ್ಥ ಬಿಡುವದೇ ಮಿತಾಹಾರವೆನಿಸುವದು. ಮಣ್ಣು ನೀರುಗಳಿಂದ ಶರೀರದ ಮಲವನ್ನು ತೊಳೆಯುವದು ಬಾಹ್ಯಶೌಚವೆನಿಸುವದು. ಧ್ಯಾನದಿಂದ ಮನಸ್ಸಿನ ಪಾಪವನ್ನು ಬಿಡುವದೇ ಅಂತರಶೌಚವೆನಿಸುವದು. ಈಗ ಹೇಳಿದ ಹತ್ತೂ ಗುಣಪರಗಳಾದವು. ಇವು ಮನುಷ್ಯನನ್ನು ದುರ್ಗುಣದಿಂದ ಹಿಂದಿರುಗಿಸುತ್ತವೆ. (ಇನ್ನುಮೇಲೆ, ಜ್ಞಾನಪರವಾದ ಯಮದಶಕವನ್ನು ಹೇಳುತ್ತೇವೆ ಕೇಳು.) ಆತ್ಮನು ವ್ಯಾಪಕನಾದ್ದರಿಂದ ಭೇದಿಸಲಿಕ್ಕೂ ಹಿಡಿಯಲಿಕ್ಕೂ ಬಾರದವನೆಂದು ತಿಳಿಯುವದೇ ಅಹಿಂಸೆಯೆನಿಸುವದು. ಪರಬ್ರಹ್ಮವೇ ಸತ್ಯವಾದದ್ದು ಅನ್ಯವಲ್ಲ ಹೀಗೆಂದು ತಿಳಿಯುವದೇ ಸತ್ಯವೆನಿಸುವದು. ಆತ್ಮಸ್ವರೂಪದಲ್ಲಿ ಅನಾತ್ಮ ದೇಹಾದಿಗಳ ಅಧ್ಯಾಸವನ್ನು ಮಾಡದಿರುವದೇ ಅಸ್ತೇಯವೆನಿಸುವದು; ಬ್ರಹ್ಮಸ್ವರೂಪದಲ್ಲಿಯೇ ಮನಸ್ಸು ಸಂಚರಿಸುತ್ತಿದ್ದರೆ, ಬ್ರಹ್ಮಚರ್ಯವೆನಿಸುವದು. ಉಪಾಧಿಗಳಿಂದ ಆತ್ಮನು ಅನೇಕವಾದಂತೆ ಕಂಡುಬಂದರೂ

CC-0. Jangamwadi Math Collection. Digitized by eGangotri

ಎಲ್ಲಾತ್ಮರೂ ನಾನೇ ಇರುವೆನು ಎಂಬ ಭಾವವೇ ದಯೆಯೆನಿಸುವದು. ಸರ್ವತ್ರ ಆತ್ಮನು ಹೆಚ್ಚು ಕಡಿಮೆಯಿಲ್ಲದೆ ಸಮನಾಗಿರುವನೆಂಬ ಬುದ್ಧಿಯೇ ಆರ್ಜವವೆನಿಸುವದು. ಆಧ್ಯಾತ್ಮಕಾದಿ ತಾಪಗಳು ಅಹಂಕಾರಕ್ಕೆ ಉಂಟು. ಸಾಕ್ಷಿ ಅಸಂಗನಾದ ನನಗೆ ಇಲ್ಲೆಂದು ತಿಳಿಯುವುದೇ ಕ್ಷಮೆಯೆನಿಸುವದು. ನಾನು ಸಚ್ಚಿದಾನಂದಾತ್ಮನಿದ್ದೇನೆ ಅನ್ಯನಲ್ಲ. ಹೀಗೆಂಬ ದೃಢವಾದ ಬುದ್ಧಿಯೇ ಧೈರ್ಯವೆನಿಸುವದು. ಕಾರ್ಯಕಾರಣ ಪ್ರಪಂಚವು ನನ್ನಲ್ಲಿಯೇ ನಾಶವಾಗುವದು ನಾನೇ ಅಧಿಷ್ಠಾನನೆಂಬ ನಿಶ್ಚಯವೇ ಮಿತಾಹಾರವೆನಿಸುವದು. ನಾನು ಶುದ್ಧನೆಂಬ ಬುದ್ಧಿಯೇ ಶೌಚವೆನಿಸುವದು. (ಜ್ಞಾನಪರಗಳಾದ ಈ ಹತ್ತು ಗುಣಗಳು ಪ್ರಸಂಗವಶಾತ್ ಹೇಳಲ್ಪಟ್ಟಿರುತ್ತವೆಂದು ತಿಳಿಯತಕ್ಕದ್ದು.)

ಬಳಿಕ; ನಿಯಮವಾದರೂ ಹತ್ತು ಪ್ರಕಾರವಾಗಿರುವದು. ಉಪವಾಸ ಕೃಚ್ಛ ಚಾಂದ್ರಾಯಣಾದಿಗಳಿಂದ ಶರೀರವನ್ನು ಒಣಗಿಸುವದೇ ತಪಸ್ಸೆನಿಸುವದು. ತನಗೆ ಎಷ್ಟು ಪ್ರಾಪ್ತಿಯಾಗುತ್ತದೆಯೋ ಅಷ್ಟರಲ್ಲಿಯೇ ಪರಿಣಾಮ ರೂಪ ಬುದ್ಧಿಯು ಸಂತೋಷವೆನಿಸುವದು. ಶ್ರೌತಸ್ಮಾರ್ತಗಳಲ್ಲಿರುವ ವಿಶ್ವಾಸವೇ ಆಸ್ತಿಕ್ಯವೆನಿಸುವುದು. ನ್ಯಾಯದಿಂದ ಸಂಪಾದಿಸಿದ ಧನವನ್ನು ಸತ್ಪಾತ್ರಕ್ಕೆ ಕೊಡುವದೇ ದಾನವೆನಿಸುವದು. ರಾಗದ್ವೇಷಾದಿಗಳಿಂದ ರಹಿತವಾದ ಮನುಸ್ಸು ಕೆಟ್ಟ ಸುಳ್ಳು ಭಾಷಣಗಳಿಂದ ರಹಿತವಾದ ವಾಕ್ಕು, ಹಿಂಸಾದಿ ಕರ್ಮಗಳಿಂದ ರಹಿತವಾದ ಶರೀರ, ಈ ರೀತಿ ತ್ರಿಕರಣ ಶುದ್ಧದಿಂದಿರುವುದೇ ಈಶ್ವರ ಪೂಜನವು. ಸತ್ಯ ಜ್ಞಾನಾನಂತ ಲಕ್ಷಣವಾದ ಬ್ರಹ್ಮವು ನನ್ನ ಪ್ರತ್ಯಗಾತ್ಮ ಸ್ವರೂಪವಾಗಿರುವದೆಂದು ತಿಳಿಯುವದೇ ಸಿದ್ಧಾಂತ ಶ್ರವಣವು. ವೈದಿಕ ಲೌಕಿಕ ಮಾರ್ಗಗಳಲ್ಲಿ ನಿಂದ್ಯವಾದ ವರ್ತನದಲ್ಲಿ ಪ್ರೀತಿ ಇಲ್ಲದಿರುವುದೇ ಲಜ್ಜೆಯೆನಿಸುವುದು. ವೈದಿಕಗಳಲ್ಲಿರುವ ಶ್ರದ್ಧೆಯೇ ಮತಿಯೆನಿಸುವುದು. ವೇದೋಕ್ತ ರೀತಿಯಂತೆ ಮಂತ್ರಾಭ್ಯಾಸವನ್ನು ಮಾಡುವುದೇ ಜಪವೆನಿಸುವುದು. ಆ ಜಪವು ವಾಚಕ, ಉಪಾಂಶುಕ, ಮಾನಸಿಕವೆಂದು ಮೂರುಪ್ರಕಾರವಾಗಿರುವುದು. ವೇದ ರಹಸ್ಯವನ್ನು ಭಕ್ತಿಯಿಂದ ಅವಧರಿಸುವುದೇ ಸ್ವಾಧ್ಯಾಯವೆನಿಸುವುದು. ಈ ಪ್ರಕಾರ ನಿಯಮ ದಶಕವಿರುತ್ತದೆ. ಇದು ಮನುಷ್ಯನನ್ನು ಸದ್ಗುಣಗಳಲ್ಲಿ ಪ್ರವೃತ್ತಿಮಾಡುತ್ತದೆ.

ಆಸನವು ಎಂಭತ್ತುನಾಲ್ಕು ಪ್ರಕಾರವಿರುತ್ತದೆ. ಅವುಗಳಲ್ಲಿ ಕೆಲವು ಮುಖ್ಯವಾದವುಗಳನ್ನು ಹೇಳಿ ವಿಸ್ತಾರ ಭಯದಿಂದ ಉಳಿದವುಗಳನ್ನು ಬರಿಯುವ

CC-0. Jangamwadi Math Collection. Digitized by eGangotri

ದಿಲ್ಲ. ಅವು ಯಾವುವೆಂದರೆ—ಎರಡೂ ಕಿರಿದೊಡೆಗಳ ಮಧ್ಯದಲ್ಲಿ ಎರಡೂ ಪಾದಗಳನ್ನು ಅಡಗಿಸಿ, ಕಂಠ, ಶಿರಸ್ಸು, ಶರೀರಗಳಿಂದ ಸಮಾನವಾಗಿ ಕೂಡ್ರಲು ಸ್ವಸ್ತಿಕಾಸನವೆನಿಸುವುದು. ಬಲಗಾಲಿನ ಹಿಮ್ಮಡವನ್ನು ಎಡಗಡೆಯ ಪೃಷ್ಠಪಾರ್ಶ್ವದವರೆಗೂ, ಎಡಗಾಲಿನ ಹಿಮ್ಮಡವನ್ನು ಬಲಗಡೆಯ ಪೃಷ್ಠಪಾರ್ಶ್ವದವರೆಗೂ, ಇಟ್ಟು ರುಜು ಶರೀರದಿಂದಿದ್ದರೆ, ಅದು ಗೋಮುಖಾಸನವೆನಿಸುವುದು. ಎರಡೂ ತೊಡೆಗಳಮೇಲೆ ಎರಡೂ ಪಾದಗಳನ್ನು ಎಡಬಲವಾಗಿರಿಸಿ, ಎರಡು ಕಾಲಿನ ಹೆಬ್ಬೆರಳುಗಳನ್ನು ಎರಡು ಕೈಗಳಿಂದ ಹಿಡಿದು ನೀಟಾದ ಶರೀರದಿಂದ ಕೂಡುವುದೇ ಪದ್ಮಾಸನವೆನಿಸುವುದು. ಇದು ಸರ್ವ ರೋಗವನ್ನು ನಿವೃತ್ತಿ ಮಾಡುತ್ತದೆ. ಎಡಗಡೆಯ ಪಾದವನ್ನು ಮಡಿಚಿ ಅದರಮೇಲೆ ಬಲಗಡೆಯ ಪಾದವನ್ನು ಇರಿಸಿ ರುಜು ಶರೀರದಿಂದ ಕೂಡ್ರುವುದೇ ವೀರಾಸನವೆನಿಸುವುದು. ಎಡದ ಹಿಮ್ಮಡವನ್ನು ಶಿವನಿಯ ಸ್ಥಾನಕ್ಕೆ ಇರಿಸಿ, ಬಲದ ಹಿಮ್ಮಡವನ್ನು ಮೇಢ್ರದ ಮೇಲಿರಿಸಿ, ಏಕಾಗ್ರ ಚಿತ್ತದಿಂದ ಊರ್ಧ್ವ ದೃಷ್ಟಿಯುಳ್ಳವನಾಗಿರುವುದೇ ಸಿದ್ಧಾಸನವೆನಿಸುವುದು. ಎರಡು ಹಿಮ್ಮಡಗಳನ್ನು ವೃಷಣದ ಕೆಳಗೆ ಶಿವನಿಯ ಎಡಬಲವಾಗಿರಿಸಿ, ಎರಡು ತೊಡೆಗಳನ್ನು ಎರಡೂ ಕೈಗಳಿಂದ ಬಂಧಿಸುವುದೇ ಭದ್ರಾಸನವೆನಿಸುವುದು. ಈ ಆಸನವು ವಿಷ ಮತ್ತು ರೋಗ ಇವುಗಳನ್ನು ನಾಶ ಮಾಡುತ್ತದೆ. ಮೇಢ್ರದ ಮೇಲೆ ಎಡಪಾದವನ್ನು ಇರಿಸಿ, ಅದರ ಮೇಲೆ ಬಲ ಪಾದವನ್ನು ಹೇರಿ, ರುಜು ಶರೀರದಿಂದಿರುವುದೇ ಮುಕ್ತಾಸನವೆನಿಸುವುದು. ಎರಡು ಮೊಳಕೈಯನ್ನು ನಾಭಿಗೆ ಹಚ್ಚಿ ಎರಡು ಅಂಗೈಗಳನ್ನು ನೆಲಕ್ಕೆ ಹಚ್ಚಿ, ಏಕಾಗ್ರ ಮನಸ್ಸಿನಿಂದ ಶಿರಪಾದಗಳು ಭೂಮಿಯನ್ನು ಮುಟ್ಟದೆ ದಂಡದಂತೆ ನಿಂದಿರಲು ಮಯೂರಾಸನವೆನಿಸುವುದು. ಇದು ಸರ್ವ ಪಾಪಗಳನ್ನು ನಾಶ ಮಾಡುತ್ತದೆ. ಉಕ್ತ ಆಸನಗಳನ್ನು ಮಾಡುವುದು ತನಗೆ ಅಸಾಧ್ಯವಾಗಿ ಕಂಡು ಬಂದರೆ, ತನಗೆ ಯಾವ ರೀತಿ ಸುಖ ಮತ್ತು ಧೈರ್ಯ ಪ್ರಾಪ್ತಿಯಾಗುವುದೋ ಆ ರೀತಿಯಿಂದ ಕೂಡ್ರುವುದೇ ಸುಖಾಸನವೆನಿಸುವುದು. ಗೃಹಸ್ಥರಿಗೆ ಪದ್ಮಾಸನವು ಯೋಗ್ಯವು, ಬ್ರಹ್ಮಚಾರಿ ಯತಿಗಳಿಗೆ ಸಿದ್ಧಾಸನ ಯೋಗ್ಯವು, ಉಳಿದವರಿಗೆ ಸುಖಾಸನ ಯೋಗ್ಯವೆಂದು ತಿಳಿಯತಕ್ಕದ್ದು. ಮತ್ತು ರೋಗ ನಿವೃತ್ತಿ ಶರೀರಾರೋಗ್ಯವನ್ನು ಮಾಡುವುದೇ ಆಸನಗಳ ದೃಷ್ಟ ಪ್ರಯೋಜನವಾಗಿರುತ್ತದೆ.

CC-0. Jangamwadi Math Collection. Digitized by eGangotri

ಪ್ರಾಣಾಯಾಮವು ಏಳು ಪ್ರಕಾರವಾಗಿರುತ್ತದೆ. ಹೇಗೆಂದರೆ, ಒಂದು ಲಘು ಅಕ್ಷರವನ್ನು ಉಚ್ಚಾರ ಮಾಡುವ ಕಾಲ ಅಥವಾ ಮೊಣಕಾಲ ಸುತ್ತಲೂ ಕೈಯನ್ನು ಪ್ರದಕ್ಷಿಣ ಮಾಡಿಸಿ ಚಿಟಕಿಯನ್ನು ಹೊಡೆಯುವ ಕಾಲಕ್ಕೆ ಒಂದು ಮಾತ್ರೆಯೆನ್ನುತ್ತಾರೆ. ಇಂಥಾ ಹನ್ನೆರಡು, ಇಪ್ಪತ್ತನಾಲ್ಕು, ಮೂವತ್ತಾರು, ಮಾತ್ರೆಗಳ ಪರ್ಯಂತರ ವಾಯುವನ್ನು ಈ ನಾಡಿಯಿಂದ ಭ್ರೂಮಧ್ಯಕ್ಕೆ ಏರಿಸುವುದೇ ಪೂರಕವೆನಿಸುವುದು. ಅಷ್ಟೇ ಮಾತ್ರೆಗಳ ಪರ್ಯಂತರ ಭ್ರೂಮಧ್ಯ ದಲ್ಲಿ ವಾಯುವನ್ನು ತಡೆಯುವುದು ಕುಂಭಕವೆನಿಸುವುದು. ಅಷ್ಟೇ ಮಾತ್ರೆಗಳ ಪರ್ಯಂತರ ವಾಯುವನ್ನು ಬಿಡುವುದು ರೇಚಕವೆನಿಸುವುದು. ಮೂಲಾಧಾರ ದಲ್ಲಿದ್ದ ಅಗ್ನಿಯನ್ನು ವಾಯುವನ್ನು ಸುಷುಮ್ನಾ ಮಾರ್ಗದಿಂದ ಬ್ರಹ್ಮರಂಧ್ರಕ್ಕೆ ಒಯ್ಯುವುದೇ ಉತ್ಕರ್ಷವೆನಿಸುವುದು. ಆ ಅಗ್ನಿಸಹಿತ ವಾಯುವನ್ನು ಮೂಲಾ ಧಾರಕ್ಕೆ ಇಳಿಸುವುದೇ ಅಪಕರ್ಷವೆನಿಸುವುದು. ಆ ವಾಯುವನ್ನು ಮೂಲಾಧಾರ ದಲ್ಲಿ ನಿರೋಧಿಸುವುದೇ ಶೂನ್ಯವೆನಿಸುವುದು. ಪರಕಾಯ ಪ್ರವೇಶಾರ್ಥ ಮೂಲಾಗ್ನಿ ಸಮೇತ ವಾಯುವನ್ನು ಸುಷುಮ್ನಾ ಮಾರ್ಗದಿಂದ ಒಯ್ದು ಕಪಾಲ ರಂಧ್ರವನ್ನು ಭೇದಿಸಿ ಹೋಗುವುದೇ ಉತ್ಕ್ರಾಂತಿಯೆನಿಸುವುದು. ಈ ರೀತಿ ಪ್ರಾಣಾಯಾಮವು ಏಳು ಪ್ರಕಾರವಿರುತ್ತದೆ. ಪ್ರಾಣಾಯಾಮದ ಅಂಗೋ ಪಾಂಗಗಳನ್ನು ಗುರು ಮುಖದಿಂದರಿದು ಗುರು ಸನ್ನಿಧಾನದಲ್ಲಿದ್ದುಕೊಂಡು ಪ್ರಾಣಾಯಾಮ ಅಭ್ಯಾಸವನ್ನು ಮಾಡತಕ್ಕದ್ದು. ಇಲ್ಲದೆ ತನ್ನ ಮನಬಂದಂತೆ ಮಾಡಿದರೆ ಶರೀರವು ರೋಗಕ್ಕೆ ಈಡಾಗುವುದು. ಇದರಿಂದ ಚಿತ್ತಸ್ಥೈರ್ಯವೂ ರೋಗಾದಿಗಳ ನಾಶವೂ ಫಲವಾಗಿರುತ್ತವೆ.

ಇಂದ್ರಿಯಗಳು ಸ್ವಭಾವ ಸಿದ್ಧವಾಗಿ ವಿಷಯಗಳಲ್ಲಿ ಸಂಚರಿಸುತ್ತಿರಲು ಅವುಗಳನ್ನು ಬಲಾತ್ಕಾರವಾಗಿ ಪ್ರಿತಾನ್ನದಿಂದ ಹಿಂದಕ್ಕೆ ತಿರುಗಿಸಿ ತನ್ನ ವಶಕ್ಕೆ ತೆಗೆದುಕೊಳ್ಳುವುದೇ ಪತ್ಯಾಹಾರವೆನಿಸುವುದು. ಅರ್ಥಾತ್ ಮನೋ ಇಂದ್ರಿಯ ಗಳನ್ನು ವಿಷಯ ಚಿಂತನಾದಿಗಳಿಂದ ಬಿಡಿಸಿ, ಆತ್ಮನ ಕಡೆಗೆ ಅಭಿಮುಖ ಮಾಡುವುದೇ ಪ್ರತ್ಯಾಹಾರವೆನಿಸುವುದು.

CC-0. Jangamwadi Math Collection. Digitized by eGangotri

ಮನ ಮತ್ತು ಇಂದ್ರಿಯಗಳು ತನ್ನಾಧೀನಗಳಾಗಿ ನಾಭಿ, ಹೃದಯ, ಭ್ರೂಮಧ್ಯ, ಬ್ರಹ್ಮರಂಧ್ರ, ಪಶ್ಚಿಮಸ್ಥಾನ, ಇವುಗಳಲ್ಲಿ ಇರಿಸಲು ಧಾರಣವೆಂದು ಹೇಳಿಸಿಕೊಳ್ಳುವುದು.

ಉಕ್ತ ಸ್ಥಾನಗಳಲ್ಲಿ ನಿರೋಧಿಸಲ್ಪಟ್ಟ ಮನಸ್ಸು ವಿಷಯ ಚಿಂತನೆ ಮಾಡದೆ ಸ್ವಪ್ರಕಾಶ ಶಿವಸ್ವರೂಪವನ್ನು ಚಿಂತನ ಮಾಡುತ್ತಿರುವುದೇ ಧ್ಯಾನವೆನಿಸುವುದು.

ಬಳಿಕ; ಆ ಮನಸ್ಸು ಶಿವಚಿಂತನವನ್ನು ಕೂಡಾ ಬಿಟ್ಟು ಶಿವಸ್ವರೂಪವೇ ಆಗಿ ಆನಂದ ರೂಪದಿಂದಿರಲು ಸಮಾಧಿಯೆನಿಸುವುದು. ಜೀವಬ್ರಹ್ಮರ ಭೇಡ ವಳಿದು ಅಭೇದದಿಂದಿರುವೆನೆಂಬ ಮತಿ ಕೂಡಾ ಹೋಗಿ ಸ್ವರೂಪ ಸ್ಥಿತಿಯಿಂದಿರುವುದೇ ಸಮಾಧಿಯೆನಿಸುವುದು. ಇವು ಸಗುಣಾಷ್ಟಾಂಗದ ನಾಮಗಳನ್ನು ಮಾತ್ರ ಹೇಳಿದ್ದೇವೆ. ಇವುಗಳ ಲಕ್ಷಣ ಪರೀಕ್ಷೆ ಮೊದಲಾದವುಗಳನ್ನು ಪರಮಾರ್ಥ ಪ್ರಕಾಶಿಕೆ,ಪರಮಾನುಭವ ಬೋಧೆ,ಜಾಬಾಲ ದರ್ಶನೋಪನಿಷತ್ತು ಮೊದಲಾದ ಗ್ರಂಥಗಳಲ್ಲಿ ನೋಡಿ ತಿಳಕೊಳ್ಳತಕ್ಕದ್ದು

ಬಳಿಕ; ನಿರ್ಗುಣಾಷ್ಟಾಂಗದ ರೀತಿಯನ್ನು ಪ್ರತಿಪಾದಿಸುತ್ತಾರೆ.

ಅಗುಣಾಷ್ಟಾಂಗಂ ತಿಳಿ ಬಳಿಕೆಂಟು ।
ಮಿಗಿಲೆನಿಸುತ್ತವು ಶಾಸ್ತ್ರದೊಳುಂಟು ॥

ತನು ಮುಖ್ಯದ ವಿರತಿಯೆ ಯಮವಕ್ಕು ।
ಘನನಿಜಪದರತಿ ನಿಯಮವೆನಿಕ್ಕು ॥

ಬಾಹ್ಯದುದಾಸೀನವೆ ಯಾಸನವು ।
ಬಾಹ್ಯಕರಣದಳಿವಸುರೋಧನವು ॥

ಜಡ ವಿಮುಖತೆಯದು ಪ್ರತ್ಯಾಹಾರ ।
ಪಡೆದ ನಿಜಸ್ಥಿತಿ ಧಾರಣೆ ಶೂರ ॥

CC-0. Jangamwadi Math Collection. Digitized by eGangotri

ಪರಮಂ ತಾನೆಂಬುದೆ ತದ್ಧ್ಯಾನ ।
ಪಿರಿದಲ್ಲಿಯೆ ಮನ ಮುಳುಗಲು ಮೌನ ॥
ಸುತನಿರ್ಗುಣಮಿವರೊಳಗನುವಾಗಿ ।
ಮತಿ ನಿರ್ಮಳತೆಯೊಳಿಹನಾಯೋಗಿ ॥೩॥

ಟೀಕಾ:—ಬಳಿಕ=ಅನಂತರ, ಅಗುಣಾಷ್ಟಾಂಗಂ=ನಿರ್ಗುಣಾಷ್ಟಾಂಗಗಳು, ಎಂಟು=ಅಷ್ಟ ವಿಧಗಳಾಗಿ, ಮಿಗಿಲೆನಿಸುತ್ತ=ಶ್ರೇಷ್ಠಗಳೆಂದು ಹೇಳಿಸಿಕೊಳ್ಳುತ್ತ, ಅವು=ಅಂಗಗಳು, ಶಾಸ್ತ್ರದೊಳು=ಗ್ರಂಥದಲ್ಲಿ, ಉಂಟು=ಇರುವುವು, ತನು ಮುಖ್ಯದ=ಶರೀರವೇ ಮೊದಲಾಗಿ ಅಹಂಕಾರ ಪರ್ಯಂತರಗಳ, ವಿರತಿಯೇ= ಪ್ರೀತಿತ್ಯಾಗವೇ, ಯಮವಕ್ಕು=ಯಮಾಂಗವೆನಿಸುವುದು, ಘನನಿಜಪದರತಿ= ವ್ಯಾಪಕವಾದ ಸಾಕ್ಷಿಸ್ವರೂಪದಲ್ಲಿರುವ ಪ್ರೀತಿಯು, ನಿಯಮವೆನಿಕ್ಕು=ನಿಯಮ ವೆನಿಸುವುದು, ಬಾಹ್ಯದ=ಹೊರಗಿನ ಜಗತ್ತಿನ, ಉದಾಸೀನವೆ=ರಾಗದ್ವೇಷ ರಹಿತ ಸ್ಥಿತಿಯೇ, ಆಸನವು=ಆಸನವೆನಿಸುವುದು, ಬಾಹ್ಯ=ಹೊರಗಿನ, ಕರಣದ=ಇಂದ್ರಿಯ ಗಳ, ಅಳಿವು=ನಾಶವು, ಅಸುರೋಧನವು=ಪ್ರಾಣಾಯಾಮವೂ, ಜಡವಿಮುಖತೆ ಯದು=ಜಡವಾದ ಜಗತ್ತಿನಿಂದ ವೃತ್ತಿಯನ್ನು ಹಿಂದಿರುಗಿಸುವಿಕೆಯು, ಪ್ರತ್ಯಾ ಹಾರ=ಪ್ರತ್ಯಾಹಾರವು, ಪಡೆದ=ಹೊಂದಿದ, ನಿಜಸ್ಥಿತಿ=ನಿಜಸ್ವರೂಪು, ಧಾರಣೆ= ಧಾರಣಾಂಗವೆನಿಸುವುದು, ಶೂರ=ಮನೋನಿಗ್ರಹ ಶಕ್ತಿಯುಳ್ಳಾತನೇ, ಪರಮಂ= ಪರಮಾತ್ಮನು, ತಾನೆಂಬುದೆ=ನಾನೇಇರುವೆನೆಂದು ತಿಳಿಯುವುದೇ, ಧ್ಯಾನ= ಧ್ಯಾನವು, ಪಿರಿದು=ಧ್ಯಾನವು ಹೆಚ್ಚಾಗಿ, ಅಲ್ಲಿಯೆ=ಆ ಸ್ವರೂಪದಲ್ಲಿಯೇ, ಮನ= ಮನಸ್ಸು, ಮುಳುಗಲು=ಐಕ್ಯವಾಗಲು, ಮೌನ=ಸಮಾಧಿಯೆನಿಸುವುದು, ನುತ= ಸ್ತುತಿಸಲ್ಪಟ್ಟ, ನಿರ್ಗುಣ=ನಿರ್ಗುಣ ಯೋಗವು, ಇವರೊಳು=ಈ ಅಂಗಗಳಲ್ಲಿ ಅನುವಾಗಿ=ಕೂಡಿ, ಆ ಯೋಗಿ= ಆ ಯೋಗೀಶ್ವನು, ಮತಿ ನಿರ್ಮಳತೆಯೋಳ್= ಸ್ವಚ್ಛ ಬುದ್ಧಿಯಿಂದ, ಇಹನು=ಇರುವನು.

ತಾತ್ಪರ್ಯ:—ಎಲೈ ಶಿಷ್ಯನೇ ಕೇಳು ! ಬಳಿಕ ನಿರ್ಗುಣಾಷ್ಟಾಂಗಗಳೆಂದು ಎಂಟು ಇರುವವು. ಅವು ಸಗುಣಾಷ್ಟಾಂಗಗಳಿಗಿಂತಲೂ ಶ್ರೇಷ್ಠಗಳಾಗಿರುವವು.

CC-0. Jangamwadi Math Collection. Digitized by eGangotri

ಅವು ಯಾವವು? ಅಂದರೆ, ಶರೀರ, ಮನಸ್ಸು, ಇಂದ್ರಿಯ ಪ್ರಾಣ ವಿಷಯಗಳು ಅನಾತ್ಮಗಳೆಂದು ತಿಳಿದು, ಅವುಗಳಲ್ಲಿ ವಿರಕ್ತಿಯುಂಟಾಗಲು ಅದೇ ಯಮವೆಂದು ಹೇಳಲ್ಪಡುವುದು. ಅಹಂಕಾರ ಮೊದಲು ಶರೀರ ಪರ್ಯಂತರವಾದ ವಸ್ತುಗಳಲ್ಲಿ ಜನಿಸಿದ ವೈರಾಗ್ಯವು ಮನಸ್ಸಿನಲ್ಲಿ ದೃಢವಾಗಿ ನಿಲ್ಲಲು; ಅದು ನಿಯಮವೆಂದು ಹೇಳಲ್ಪಡುವುದು. ಬಳಿಕ ಅಹಂಕಾರಾದಿ ದೃಶ್ಯಪದಾರ್ಥಗಳಲ್ಲಿ ರಾಗ ಮತ್ತು ವಿರಾಗಗಳೆರಡೂ ಕಳೆದು ಉದಾಸೀನ ಸ್ಥಿತಿಯಾಗಲು ಆಸನವೆನಿಪುದು. ಶರೀರ ಮೊದಲಾಗಿ ತನಗೆ ಎಷ್ಟು ವಿಷಯಗಳಾಗುವವೋ ಅಷ್ಟೆಲ್ಲಾ ಮಿಥ್ಯೆ ಗಳಾಗಿರುವವೆಂದು ತಿಳಿಯುತ್ತಿರಲಿಕ್ಕೆ; ಅವುಗಳ ಸಂಬಂಧದಿಂದಾಗುವ ಜೇಷ್ಟಾ ರೂಪ ವ್ಯವಹಾರವು ನಿಲ್ಲಲು ಅದೇ ಪ್ರಾಣಾಯಾಮವೆನಿಸುವುದು. ಮತ್ತು ಈ ಜಡ ವಾದ ಜಗತ್ತು ಮಿಥ್ಯೆಯಾಗಿದ್ದರೂ ಸುಮ್ಮನೆ ದುಃಖವನ್ನು ಮಾಡುವಂಥಾದ್ದಾಗಿ ರುತ್ತದೆಂದು ತಿಳಿದುಕೊಂಡು; ಬಾಹ್ಯ ಜಗತ್ತಿನ ಕಡೆಗೆ ದೃಷ್ಟಿಯನ್ನು ಹಾಕದೆ, ಅಂತರದಲ್ಲಿರುವ ಆತ್ಮನ ಕಡೆಗೆ ದೃಷ್ಟಿಯನ್ನಿಡಲು ಪ್ರತ್ಯಾಹಾರವೆನಿಸುವುದು. ಅಂತರ ಮುಃಖವಾದ ಮನಸ್ಸು ಹೊರಗಿರುವ ಜಗತ್ತನ್ನು ಕುರಿತು, ಏನೊಂದು ವಿಚಾರ ಮಾಡದೆ ಆತ್ಮಸ್ವರೂಪದಲ್ಲಿಯೇ ಸ್ಥಿರವಾಗಿರಲು ಧಾರಣೆಯೆನಿಸುವುದು. ಬಳಿಕ ಮನದೊಳಗೆ ಬೇರೊಂದು ಭಾವನೆಯನ್ನು ತೋರದೆ, ಅಸಂಗಾದ್ವಯ ರೂಪ ಕೇವಲ ಚೈತನ್ಯವೇ ನಾನೆಂದು ಚಿಂತಿಸುತ್ತಿರಲು ಧ್ಯಾನವೆನಿಸುವುದು. ಅನಂತರ ಏನೊಂದು ಉಪಾಧಿಯಿಲ್ಲದ ಚಿದ್ವಸ್ತುವೇ ನಾನೆಂಬ ಚಿಂತನವು ಕೂಡಾ, ಲಯವಾಗಿ ಅಖಂಡ ಸ್ವರೂಪದಿಂದಿರುವುದೇ ಸಮಾಧಿಯೆನಿಪುದು. ಇವೇ ನಿರ್ಗುಣಾಂಗಗಳೆಂದು ಹೇಳಿಸಿಕೊಳ್ಳುವವು. ಇವುಗಳ ಅಭ್ಯಾಸವನ್ನು ಮಾಡುತ್ತಾ ಯೋಗಿಯು ನಿರ್ಮಲಾತ್ಮಕರಣದಿಂದಿರುವನು.

ಬಳಿಕ; ಗುರುಗಳ ಲಕ್ಷಣವನ್ನೂ ಗುರುಗಳ ಸನ್ನಿಧಿಯಲ್ಲಿದ್ದು ಶಿಷ್ಯನು ಮಾಡತಕ್ಕ ಕರ್ತವ್ಯವನ್ನೂ ಎರಡನೆಯದಾದ ಸುವಿಚಾರ ಭೂಮಿಕೆಯನ್ನೂ ಪ್ರತಿಪಾದನೆ ಮಾಡುತ್ತಾರೆ.

ವೈರಾಗ್ಯದ ನಿಜಸುಖಮಂ ಬಲ್ಲ।
ಸಾರಶ್ರುತಿ ಪಥಮಂ ನೆರೆ ಬಲ್ಲ॥

CC-0. Jangamwadi Math Collection. Digitized by eGangotri

ದೇಹಾದಿಗಳಾತ್ಮತೆಯಂ ಕಳೆವ ।
ಊಹಿಸಲಾತ್ಮ ವಿಚಾರದೊಳುಳಿವ ॥

ಗುರುಗಳನೈದಿ ಬಿಡದೆ ಸೇವಿಸುತ ।
ನಿರುತಂ ಮನಮುಟ್ಟಿ ವಿಚಾರಿಸುತ ॥

ಸಾರತರದ ಶಾಸ್ತ್ರವ ಕೇಳುತ್ತ ।
ಘೋರಭವದ ಕೇಡಂ ಕಾಣುತ್ತ ॥

ಇರಲೆರಡನೆಯ ಪವಸ್ಥಿತನವನು ।
ಪರಮ ವಿಚಾರದ ಭೂಮಿಕೆಯವನು ॥

ಇಂತೆಲ್ಲವನ ವಿಚಾರಣವೆಲ್ಲ ।
ಮುಂತೆ ವಿಕಲ್ಪಂ ಘಟಿಕದು ಸಲ್ಲ ॥೪॥

ಟೀಕಾ:—ವೈರಾಗ್ಯದ=ವಿರತಿಯ, ನಿಜಸುಖಮಂ=ಖರೇ ಸುಖವನ್ನು, ಬಲ್ಲ=ಅರಿತಂಥಾ, ಸಾರ=ಶ್ರೇಷ್ಠವಾದ, ಶ್ರುತಿಪಥಮಂ=ಜ್ಞಾನಮಾರ್ಗವನ್ನು, ಚೆನ್ನಾಗಿಬಲ್ಲ=ತಿಳಿದಂಥಾ, ದೇಹಾದಿಗಳ=ಶರೀರ ಮೊದಲು ಅಹಂಕಾರ ಪರ್ಯಂತರ ಅನಾತ್ಮವಸ್ತುಗಳ, ಆತ್ಮತೆಯಂ=ನಾನೆಂಬ ಬುದ್ಧಿಯನ್ನು, ಕಳೆವ=ನಿವಾರಿಸುವಂಥಾ, ಊಹಿಸಲ್=ವಿಚಾರಮಾಡಲಾಗಿ, ಆತ್ಮ ವಿಚಾರದೊಳು=ಜೀವಬ್ರಹ್ಮೈಕ್ಯ ವಿಚಾರದಲ್ಲಿ, ಉಳಿವ=ಇರುವಂಥಾ, ಗುರುಗಳನು=ಸದ್ಗುರುಗಳನ್ನು, ಐದಿ=ಹೊಂದಿ, ಬಿಡದೆ=ತ್ಯಾಗಮಾಡದೆ, ಸೇವಿಸುತ=ಸೇವೆಯಂಮಾಡುತ್ತಾ. ನಿರುತಂ=ಯಾವಾಗಲೂ, ಮನಮುಟ್ಟಿ=ಮನಃಪೂರ್ವಕವಾಗಿ, ವಿಚಾರಿಸುತ=ವಿಚಾರಮಾಡುತ್ತ, ಸಾರತರದ=ಅತಿ ಶ್ರೇಷ್ಠಗಳಾದ, ಶಾಸ್ತ್ರವ=ವೇದಾಂತ ಶಾಸ್ತ್ರಗಳನ್ನು, ಕೇಳುತ್ತ=ಶ್ರವಣಮಾಡುತ್ತ, ಘೋರ=ಭಯಂಕರವಾದ, ಭವದ=ಸಂಸಾರದ, ಕೇಡು=ಹಾನಿಯನ್ನು ಕಾಣುತ್ತ=ನೋಡುತ್ತ, ಇರಲ್=ಇರಲಾಗಿ, ಎರಡನೆಯ=ದ್ವಿತೀಯವಾದ, ವಿಚಾರದ=ಜೀವ ಪರಮ ವಿಚಾರದ, ಭೂಮಿಕೆಯವನು=ಭೂಮಿಕೆಯುಳ್ಳವನು, ಇಂತೆ=ಹೀಗೆಲ್ಲ, ಅವನ=ಸಾಧಕನ, ವಿಚಾರಣವೆಲ್ಲ=ವಿವೇಕವಿರುವುದು, ಮುಂಚೆ=ಮೊದಲಿನ, ವಿಕಲ್ಪಂ=ಕಲ್ಪನೆಯ, ಘಟಕೆ=ಸತ್ಯಕ್ಕೆ, ಅದು ಸಲ್ಲ=ವಿಕಲ್ಪ ಯೋಗ್ಯವಾಗಲಾರದು.

CC-0. Jangamwadi Math Collection. Digitized by eGangotri

ತಾತ್ಪರ್ಯ:—ಎಲೈ ಶಿಷ್ಯನೇ! ಕೇಳು. ಉಕ್ತಸಾಧಕನು ವೈರಾಗ್ಯಶಾಲಿಯಾಗಿಯೂ ಯೋಗದಿಂದ ಚಿತ್ತಸ್ಥೈರ್ಯವುಳ್ಳವನಾಗಿಯೂ ಗುರುಗಳನ್ನು ಹೊಂದಿ ಆತ್ಮವಿಚಾರ ಮಾಡುವಂಥವನಾಗುವನು. ಆ ಗುರುಗಳ ಲಕ್ಷಣವೇನಂದರೆ? ಸಂಸಾರ ಸಂಬಂಧಿ ವಿಷಯ ಸುಖಗಳೆಲ್ಲವೂ ದುಃಖದಿಂದ ಕೂಡಿರುವುದರಿಂದ ಅವುಗಳನ್ನು ತ್ಯಜಿಸಿ, ವೈರಾಗ್ಯಸುಖವನ್ನು ಬಲ್ಲವನಾಗಿಯೂ, ಅರ್ಥಾತ್ ಸಾಧಕರು ಯತ್ನದಿಂದ ಸಂಪಾದಿಸುವ ವಿವೇಕಾದಿ ಸಾಧನಗಳು ಜ್ಞಾನಿಗಳಲ್ಲಿ ಸ್ವಭಾವ ಸಿದ್ಧವಾಗಿರುವವೆಂಬ ತಾತ್ಪರ್ಯವು. ಮತ್ತು ಅನೇಕ ಉಪನಿಷತ್ ವಾಕ್ಯಗಳಿಗೆ ಅದ್ವೈತರೂಪ ಅರ್ಥವಾಗುವುದನ್ನು ಚನ್ನಾಗಿ ತಿಳಿದವನು. ಹೀಗೆಂದುಹೇಳುವುದರಿಂದ ಶ್ರೋತ್ರೀಯತ್ವವು ಹೇಳಲ್ಪಟ್ಟಿತು. ಮತ್ತು ಗುರುಗಳು ತಮಗೆ ಶರಣಾಗತರಾದ ಶಿಷ್ಯರಿಗೆ ಆತ್ಮಾನಾತ್ಮ ವಿವೇಕವನ್ನು ಬೋಧಿಸಿ; ಅನಾತ್ಮಗಳಾದ ದೇಹಾದಿ ಅಹಂಕಾರ ಪರ್ಯಂತರವಾಗಿರುವ ಅನಾತ್ಮ ವಸ್ತುಗಳಲ್ಲಿರುವ ಆತ್ಮ ಭಾವನೆಯನ್ನು ಕಳೆದು ಅರ್ಥಾತ್, ಈಶ ಜೀವ, ಜೀವಜಡ ಈಶಜಡ,ಜಡಜಡ, ಜೀವಜೀವಗಳೆಂಬ ಪಂಚಪ್ರಕಾರ ಭೇದವನ್ನು ನಿರಾಕರಿಸಿ; ಅಸಂಗಾದ್ವಯ ನಿತ್ಯ ಮುಕ್ತನಾದ ಆತ್ಮನ ಸ್ಥಿತಿಯಲ್ಲಿ ನಿಷ್ಠಾಪರನಾದವನು, ಅಂದರೆ ಶ್ರೋತ್ರಿಯ ಬ್ರಹ್ಮನಿಷ್ಠ ಲಕ್ಷಣಾತ್ಮಕ ಗುರುಗಳೆಂಬ ಭಾವವು ಇಂಥಾ ಗುರುಗಳನ್ನುಹೊಂದಿ ಶಿಷ್ಯನು ಸೇವೆಯಲ್ಲಿ ತತ್ಪರನಾಗಬೇಕು. ಯಾಕೆಂದರೆ ಗುರುಗಳು ಈಶ್ವರನಿಗಿಂತಲೂ ಅಧಿಕರಾಗಿರುವರು. ತನುಮನಧನಗಳಿಂದ ಗುರುಗಳ ಸೇವೆಯನ್ನು ಮಾಡುವುದರಿಂದ ಗುರುಗಳು ಪ್ರಸನ್ನಮುಖರಾಗುವರು. ಈಶ್ವರನು ಅದೃಷ್ಟಫಲವನ್ನು ಕೊಡುತ್ತಾನೆ. ಗುರಗಳು ದೃಷ್ಟಫಲವನ್ನು ಕೊಡುತ್ತಾರೆ. ಆದರಿಂದ ಗುರುಗಳು ಪ್ರಸನ್ನಮುಖರಾಗಿರುವುದರಿಂದ ಕಂಡು ವಿನಯದಿಂದ ಕೊಂಡಾಡಿ ಹೇ ಗುರುನಾಥ! ನಾನು ಯಾರು? ಎನಗೆ ಈ ಜನನಮರಣ ರೂಪ ಬಂಧವು ಏನುಕಾರಣ ಬಂದಿರುವುದು? ಮುಕ್ತಿಯು ಹೇಗೆ ಪ್ರಾಪ್ತಿಯಾಗುವದು? ಮುಕ್ತಿಗೆ ಸಾಧನವೇನು? ಜೀವನು ಯಾರು? ಈಶನು ಯಾರು? ಇವರು ಪರಸ್ಪರ ಭೇದವಾಗಿರುವರೋ ಅಭೇದವಾಗಿರುವರೋ ಎಂಬ ಅನೇಕ ಪ್ರಶ್ನೆಗಳನ್ನು ಮಾಡುತ್ತ; ಆತ್ಮಸ್ವರೂಪವನ್ನು ವಿಚಾರಮಾಡುತ್ತಿರಬೇಕು. ಮತ್ತು ಗುರುಗಳ ಮುಖದಿಂದ ಅದ್ವೈತ ತಾತ್ಪರ್ಯವನ್ನು ಬೋಧಿಸುವಂಥಾ ವೇದಾಂತ ಶಾಸ್ತ್ರವನ್ನು ಶ್ರವಣ ಮಾಡುತ್ತಿರಬೇಕು. ಈ ಭಯಂಕರವಾದ ಜನ್ಮ

CC-0. Jangamwadi Math Collection. Digitized by eGangotri

ಜರಾಮರಣ ಮೊದಲಾದ ಸಂಸಾರ ದುಃಖಗಳನ್ನು ಕಾಣುತ್ತ, ಮನದೊಳಗೆ ಆಯುಷ್ಯವು ಕ್ಷಣಿಕವಾದದ್ದೆಂದು ತಿಳಿದು, ಆತ್ಮ ವಿಚಾರದಲ್ಲಿಯೆ ಕಾಲವನ್ನು ಕಳೆಯುವವನು. ಈ ಪ್ರಕಾರ ವಿಚಾರಶೀಲನಾದ ಪುರುಷನು ಸುವಿಚಾರವೆಂಬ ಎರಡನೆಯ ಭೂಮಿಕೆಯಲ್ಲಿ ಇದ್ದವನು; ಇವನು ಸಾಧನ ಹೀನನಾಗಿರುವಾಗ್ಯೆ ತನ್ನ ಯೋಗಕ್ಷೇಮದ ಬಗ್ಯೆ ಯಾವ ಪ್ರಕಾರ ವಿಕಲ್ಪಗಳನ್ನು ಮಾಡುತ್ತಿದ್ದನೋ ಹಾಗೆ ಈಗ ಸಾಧನಗಳಿಂದ ಯುಕ್ತನಾದ ಮೇಲೆ ಮಾಡುವುದಿಲ್ಲ. ಕಿಂತು, ಈಶ್ವರ ಅಥವಾ ಪ್ರಾರಬ್ಧದ ಮೇಲೆ ಹಾಕಿ ತಾನು ಆತ್ಮ ವಿಚಾರದಲ್ಲಿಯೇ ಸ್ಥಿತನಾಗಿರುವನು. ಅರ್ಥಾತ್ ಎರಡನೆಯ ಭೂಮಿಕೆಯುಳ್ಳವನು ಶ್ರವಣ ಮನನಗಳಿಂದ ಕೂಡಿಕೊಂಡಿರುವನೆಂಬ ತಾತ್ಪರ್ಯವು.

ಬಳಿಕ; ಸಾಧಕನು ಗುರುಗಳನ್ನು ಹೊಂದಿ ಆತ್ಮ ವಿಚಾರವನ್ನು ಹೇಗೆ ಮಾಡುತ್ತಾನೆ? ಎಂಬುದರ ಸ್ವರೂಪವನ್ನು ಬೋಧಿಸುತ್ತಾರೆ.

ಸಕಲಾರ್ಥಂಗಳ ಬಿಡುವಂತೊರೆವ ।
ಸಕಲಸುಖಂ ದೊರೆವಂತಿರಲೊರೆವ ॥

ಸಾದರದಿಂ ಮಿಗೆ ಸದ್ಗುರುವಿಂದ ।
ವೇದರಹಸ್ಯಾರ್ಥವ ನೊಲವಿಂದ ॥

ಕೇಳುವ ಹೊತ್ತೀಶ್ವರ ಲಕ್ಷಣೆಯ ।
ಮೇಲಾಜೀವನ ನಿಜ ಲಕ್ಷಣೆಯ ॥

ಒಂದರೊಳಾದು ಭಯಾಧ್ಯಾಸವನು ।
ಮುಂದಾ ಬಹು ವಿಧದಧ್ಯಾಸವನು ॥

ಜೀವೇಶ್ವರರೇಕತ್ವದ ನಿಲವ ।
ಭಾವಿಸುತಾ ಸಹಜಾತ್ಮನ ನಿಜವ ॥

ತಿಳಿವನ್ನೆಗ ಮೂರೈವುತ್ತಿಹುದು ।
ತಿಳಿಯಧ್ಯಾತ್ಮ ವಿಚಾರವೆನಿಪುದು ॥೩॥

CC-0. Jangamwadi Math Collection. Digitized by eGangotri

ಟೀಕಾ:—ಸಕಲ=ಎಲ್ಲ, ಅರ್ಥಗಳ=ವಿಷಯಗಳನ್ನು, ಬಿಡುವಂತೆ=ತ್ಯಾಗ ಮಾಡುವಂತೆ, ಒರೆವ=ಬೋಧಿಸುವ, ಸಕಲಸುಖಂ=ಸಕಲ ವಿಷಯಗಳ ಸುಖವು, ದೊರೆವಂತೆ=ಪ್ರಾಪ್ತಿಯಾಗುವಂತೆ, ಇರಲೊರೆವ=ಇರುವಹಾಗೆ ಬೋಧಿಸುವಂಥಾ, ಮಿಗೆ=ಉತ್ಕೃಷ್ಟನಾದ, ಸದ್ಗುರುವಿಂದ=ಗುರುಗಳಿಂದ, ಸಾದರದಿಂ=ಪ್ರೀತಿಯಿಂದ, ವೇದರಹಸ್ಯಾರ್ಥವನು=ವೇದ ತಾತ್ಪರ್ಯವನ್ನು, ಒಲವಿಂದ=ಗುರುಕೃಪೆಯಿಂದ, ಕೇಳುವಹೊತ್ತು=ಶ್ರವಣಮಾಡುವ ಕಾಲದಲ್ಲಿ, ಈಶ್ವರಲಕ್ಷಣೆಯ=ಈಶ್ವರ ಲಕ್ಷಣ ವನ್ನು, ಮೇಲೆ=ಅನಂತರ, ಆ ಜೀವನ=ಜೀವಾತ್ಮನ, ನಿಜ=ಯಥಾರ್ಥವಾದ, ಲಕ್ಷಣೆಯ=ಲಕ್ಷಣೆಯನ್ನು,ಒಂದರೊಳು=ಬ್ರಹ್ಮದಲ್ಲಿ,ಅದ=ಉಂಟಾದ, ಉಭಯಾ ಧ್ಯಾಸವನ್ನು=ಜೀವೇಶ್ವರರೆಂಬ ಎರಡು ಅಧ್ಯಾಸಗಳನ್ನು, ಮುಂದೆ=ಅನಂತರ, ಬಹು ವಿಧದ=ಅನೇಕ ಪ್ರಕಾರಗಳಾದ, ಅಧ್ಯಾಸವನು=ಭ್ರಾಂತಿಯನ್ನು, ಜೀವೇಶ್ವರರ=ಜೀವಪರಮರ, ಏಕತ್ವದ=ಐಕ್ಯದ, ನಿಲವ=ಸ್ವರೂಪವನ್ನು, ಭಾವಿಸುತ=ವಿಚಾರಮಾಡುತ್ತ, ಸಹಜಾತ್ಮನ=ಯಥಾರ್ಥಾತ್ಮನ, ನಿಜವ= ಸ್ವರೂಪವನ್ನು, ತಿಳಿವನ್ನೆಗಂ=ತಿಳಿಯುವವರೆಗೂ, ಆರೈವುತ್ತಿಹುದು=ವಿಚಾರ ಮಾಡುತ್ತಿರುವದು, ಅಧ್ಯಾತ್ಮ ವಿಚಾರನೆನಿಪುದು=ಪ್ರತ್ಯಗಾತ್ಮವಿಚಾರವೆನಿಸುವ ದೆಂದು, ತಿಳಿ=ಅರಿ.

ತಾತ್ಪರ್ಯ:—ಎರಡನೆಯ ಭೂಮಿಕೆಯಲ್ಲಿದ್ದ ಸಾಧಕನು ಮತ್ತು ಎಂಥಾ ಗುರುಗಳನ್ನು ಕುರಿತು ಶರಣಾಗತನಾಗುತ್ತಾನೆ? ಅಂದರೆ, ಹೇಳುತ್ತಾರೆ, ಈ ಮನುಷ್ಯ ಲೋಕವೇ ಮೊದಲುಮಾಡಿ ಬ್ರಹ್ಮಲೋಕ ಪರ್ಯಂತರವಾಗಿರುವ ಭೋಗಗಳು ಅನಿತ್ಯಗಳಾಗಿರೋಣದರಿಂದ, ನಾಯಿಯು ವಮನಮಾಡಿಕೊಂಡ ಅನ್ನದಂತೆ ಅವುಗಳನ್ನು ತ್ಯಾಗಮಾಡಲಿಕ್ಕೋಸ್ಕರ ಅನೇಕ ಶ್ರುತಿಯುಕ್ತಿ ಅನು ಭವಗಳನ್ನು ಉಪದೇಶಿಸುವಂಥಾ ಮತ್ತು ಒಂದೊಂದು ನದಿಯಲ್ಲಿ ಸ್ನಾನ ಮಾಡಿದರೆ, ಆ ಒಂದೊಂದು ನದಿಗಳ ಫಲವೇ ಪ್ರಾಪ್ತಿಯಾಗುವದಲ್ಲದೆ ಸರ್ವ ನದಿಗಳ ಫಲ ಪ್ರಾಪ್ತಿಯಾಗದು. ಕಿಂತು, ಸಮುದ್ರದಲ್ಲಿ ಸ್ನಾನಮಾಡಿದರೆ ಎಲ್ಲ ನದಿಗಳ ಫಲವು ಹೇಗೆ ಪ್ರಾಪ್ತಿಯಾಗುವದೋ ಹಾಗೆ ಒಂದೊಂದು ಪುಣ್ಯ ಕರ್ಮಗಳನ್ನು ಮಾಡುವದರಿಂದ ಒಂದೊಂದೇ ಫಲಗಳು ಪ್ರಾಪ್ತಿಗಳಾಗುತ್ತವೆ. ಆದರೆ ಸರ್ವಕ್ಕೂ ಅಧಿಷ್ಠಾನವಾದ ನಿರುಪಾಧಿಕ ಬ್ರಹ್ಮಸುಖವನ್ನು ಪ್ರಾಪ್ತಿ ಮಾಡಿಕೊಳ್ಳುವದರಿಂದ ಎಲ್ಲ ವಿಷಯ ಸುಖಗಳೂ ಪ್ರಾಪ್ತಗಳಾದವು ಎಂದು ಉಪ ದೇಶಿಸುವಂಥಾ ಗುರುಗಳನ್ನು ಹೊಂದುವನು. ಪ್ರೀತಿಯುಕ್ತವಾಗಿ ಗುರುಗಳಿಂದ ವೇದಗಳಲ್ಲಿರುವ ಗೌಪ್ಯಾರ್ಥವನ್ನು ಶ್ರವಣಮಾಡುವ ಕಾಲದಲ್ಲಿ ಮಾಯೋಪಾಧಿ ಯಲ್ಲಿ ಅಧಿಷ್ಠಾನವಾದ ಬ್ರಹ್ಮವು ಪ್ರತಿಬಿಂಬಿಸುವದರಿಂದ ಈಶ್ವರನಾಗಿರುವನು. ಮತ್ತು ಸರ್ವಜ್ಞತ್ವ ಸರ್ವಶಕ್ತಿತ್ವಮೊದಲಾದ ಗುಣಗಳಿಂದ ಯುಕ್ತನಾಗಿರುವನು. ಹೀಗೆಂದು ಈಶ್ವರನ ಲಕ್ಷಣವನ್ನು ತಿಳಿಯುತ್ತಾನೆ. ಬಳಿಕ; ಅವಿದ್ಯಾ ಅಥವಾ

CC-0. Jangamwadi Math Collection. Digitized by eGangotri

ಅಂತಃಕರಣೋಪಾಧಿಯಲ್ಲಿ ಪ್ರತ್ಯಗಾತ್ಮನು ಪ್ರತಿಬಿಂಬಿಸಿ, ಕಿಂಚಿಜ್ಞತ್ವ ಕರ್ತೃತ್ವ ಭೋಕ್ತೃತ್ವ ಧರ್ಮಗಳಿಂದ ಜೀವನಾಗಿರುವನು ಎಂಬ ಜೀವ ಲಕ್ಷಣವನ್ನೂ ತಿಳಿಯುವನು. ಈ ಪ್ರಕಾರ ಒಂದು ಅಖಂಡ ಬ್ರಹ್ಮದಲ್ಲಿ ಅವಿದ್ಯಾ ಮಾಯೋಪಾಧಿಗಳಿಂದ ಜೀವೇಶ್ವರರೆಂಬ ಎರಡು ಅಧ್ಯಾಸಗಳಾದವು. ಬಳಿಕ; ಜೀವನು ಅವಿದ್ಯಾಕಲ್ಪಿತಗಳಾದ ಅಹಂಕಾರ, ಅಂತಃಕರಣ, ಇಂದ್ರಿಯ, ದೇಹಾದಿಗಳಲ್ಲಿ ಕ್ರಮವಾಗಿ ಸತ್ಯಾಧ್ಯಾಸ, ಇತರೇತರಾಧ್ಯಾಸ, ಇತರಾಧ್ಯಾಸ, ಮಿಥ್ಯಾಧ್ಯಾಸಗಳೆಂದು ಅನೇಕ ಅಧ್ಯಾಸಗಳಾದವು. ಅಧ್ಯಾಸವೆಂದರೆ ಶುಕ್ತಿ ರಜತದಂತೆ ತಾನಿಲ್ಲದರಲ್ಲಿ ತಾನು ತೋರುವಿಕೆಯೇ ಅಧ್ಯಾಸವೆನಿಸುವದು. ಎಂಬ ಅಧ್ಯಾಸ ವಿಚಾರವನ್ನು ಮಾಡುವನು. ಬಳಿಕ; ಜೀವೇಶ್ವರರ ಸ್ವರೂಪವನ್ನು ವಿಚಾರಿಸುತ್ತಾ ಜೀವೇಶ್ವರರುಗಳಲ್ಲಿರುವ ಮಾಯಾವಿದ್ಯಾಗಳ ಸಂಬಂಧಗಳಾದ ವಿರುದ್ಧಾಂಶಗಳನ್ನು ತ್ಯಾಗಮಾಡಿ, ಅವಿರುದ್ಧವಾದ ಲಕ್ಷ್ಯರೂಪ ಚೈತನ್ಯವು ಒಂದೇ ಇರುವದೆಂದು ಸಹಜಾತ್ಮನ ಸ್ವರೂಪ ಸಾಕ್ಷಾತ್ಕಾರವಾಗುವ ವರೆಗೂ ಅಧ್ಯಾತ್ಮ ವಿಚಾರವನ್ನು ಮಾಡುತ್ತಿರುವನು. ಇದೇ ಎರಡನೇ ಭೂಮಿಕೆಯೆನಿಸುವದು.

ಬಳಿಕ; ಸುವಿಚಾರವನ್ನು ಮಾಡುತ್ತಿರಲು ಎಷ್ಟು ವಿಘ್ನಗಳು ಬಂದರೂ ಅವುಗಳನ್ನು ನಾಶಮಾಡಿ ಗುರುಗಳಿಂದ ಮಹಾವಾಕ್ಯಾರ್ಥವನ್ನು ತಿಳಿಯುತ್ತಾನೆಂದು ಪ್ರತಿಪಾದಿಸುತ್ತಾರೆ.

ಅರಿವಂಶವನೆಲ್ಲವ ನರಿವವನು।
ಅರಿದರ್ಥ ದೊಳಭಿರತಿಯುಳ್ಳವನು॥
ಮುಟ್ಟಿಯು ಮುಟ್ಟದ ಹೆರೆಯೆನದೆಂತು।
ಬಿಟ್ಟು ಭುಜಂಗಂ ಸುಖಮಿಹುದಂತು॥
ವೈರಾಗ್ಯದಿ ಬಲದಿಂ ಬಿಟ್ಟಿರ್ದ
ಆರೆಯ ವಾಸನೆಯುಂ ತೊಟ್ಟಿರ್ದ॥
ಭ್ರಾಂತಿಗಳೆಲ್ಲವನುರೆ ಬಿಟ್ಟವನು।
ಶಾಂತಿ ಸುಖಂ ತನಗೆಳವಟ್ಟವನು॥
ಸುವಿಚಾರಕ್ಕೆಡರಂ ಪುಟ್ಟಿಸುವ।
ತವೆ ಪೂರ್ವಾರ್ಥದ ನಿಯತಿಯೊಳೆಸೆವ॥
ಬಳಕೆಯ ನುಳಿದು ಮಹಾ ವಾಕ್ಯವನು।
ತಿಳಿವಂ ಗುರುವರ ನೊಲವಿಂದವನು ॥೬॥

ಟೀಕಾ:—ಅರಿವಂಶವನು=ತಿಳಿಯುವ ಭಾಗವನ್ನು, ಎಲ್ಲವನು=ಸರ್ವವನ್ನು, ಅರಿವವನು=ತಿಳಿಯುವವನು, ಅರಿದರ್ಥದೊಳು=ತಿಳಿದ ಅರ್ಥದಲ್ಲಿ, ಅಭಿರತಿಯುಳ್ಳವನು=ಪ್ರೀತಿಯುಳ್ಳವನು, ಮುಟ್ಟಿಯು=ಹತ್ತಿಯೂ, ಮುಟ್ಟದ=ಹತ್ತದ,

CC-0. Jangamwadi Math Collection. Digitized by eGangotri

ಹೆರೆಯನ=ಪರೆಯನ್ನು, ಎಂತು=ಹೇಗೆ, ಭುಜಂಗಂ=ಸರ್ಪವು, ಬಿಟ್ಟು=ತ್ಯಜಿಸಿ, ಸುಖಮಿಹುದು=ಸಂತೋಷದಿಂದಿರುವದೊ, ಅಂತು=ಹಾಗೆ, ವೈರಾಗ್ಯದ= ವಿರಕ್ತಿಯ, ಬಲದಿಂ=ಸಾಮರ್ಥ್ಯದಿಂದ, ಬಿಟ್ಟರ್ದ=ತ್ಯಾಗಮಾಡಿದಂಥಾ(ವಿಷಯ ಗಳ), ವಾಸನೆಯಂ=ಸಂಸ್ಕಾರವನ್ನು, ತೊಟ್ಟರ್ದ=ಧರಿಸಿದ, ಭ್ರಾಂತಿಗಳೆಲ್ಲವನು= ಸರ್ವ ಭ್ರಾಂತಿಗಳನ್ನು, ಅರಿಯಲ್=ವಿಚಾರವಮಾಡಿ, ಉರೆ=ಚೆನ್ನಾಗಿ, ಬಿಟ್ಟವನು= ತ್ಯಾಗವಮಾಡಿದವನು, ಶಾಂತಿಸುಖಂ=ಸಮಾಧಾನ ಸುಖಗಳು, ತನಗೆ=ತನಗೆ, ಅಳವಟ್ಟವನು=ಪ್ರಾಪ್ತಿಮಾಡಿಕೊಂಡವನು, ಸುವಿಚಾರಕ್ಕೆ=ಜೀವಬ್ರಹ್ಮೈಕ್ಯ ವಿಚಾರಕ್ಕೆ, ಎಡರಂ=ವಿಘ್ನವನ್ನು, ಪುಟ್ಟಸುವ=ಹುಟ್ಟಿಸುವ, ತವೆ=ಚನ್ನಾಗಿ, ಪೂರ್ವಾರ್ಥದ=ಪೂರ್ವದಲ್ಲಿ ಸಂಪಾದಿಸಿದ, ನಿಯತಿಯೋಳ್=ಅದೃಷ್ಟದಿಂದ, ಎಸೆವ=ತೋರುವ, ಬಯಕೆಯನು=ಇಚ್ಛೆಯನ್ನು, ಉಳಿದು=ಬಿಟ್ಟು, ಅವನು=ಆ ಅಧಿಕಾರಿಯು, ಗುರುವರನೊಲವಿಂದ=ಸದ್ಗುರುವಿನ ದಯದಿಂದ, ಮಹಾ ವಾಕ್ಯವನು=ತತ್ವಮಸಿ ಮಹಾವಾಕ್ಯವನ್ನು, ತಿಳಿವಂ=ವಿಚಾರಮಾಡುವನು.

ತಾತ್ಪರ್ಯ:— ಎಲೋ ಶಿಷ್ಯನೇ ಕೇಳು, ಸುವಿಚಾರಣೆಯೆಂಬ ಎರಡನೇ ಭೂಮಿಕೆಯಲ್ಲಿದ್ದವನು ಗುರುಗಳನ್ನು ಹೊಂದಿ ಜೀವ ಶಿವಾದಿಗಳ ಸ್ವರೂಪವನ್ನು ಅರಿತು, ಆ ಅರಿತಂಥಾ ಅರ್ಥದಲ್ಲಿಯೇ ಅನೇಕ ಯುಕ್ತಿಗಳನ್ನು ಜೋಡಿಸುತ್ತಾ ಮನನಮಾಡುತ್ತಿರುವನು. ಮತ್ತು ಸರ್ಪವು ತನಗೆ ಸಂಬಂಧವಾಗಿಯೂ, ಸಂಬಂಧಾಗದಿರುವ ಪರಿಯನ್ನು ತ್ಯಾಗಮಾಡುತ್ತದೆ. ಯಾಕಂದರೆ, ಆ ಪರಿಯಿಂದ ಮಂದದೃಷ್ಟಿಯುಳ್ಳದ್ದಾಗಿಯೂ ಆಲಸ್ಯವುಳ್ಳದ್ದಾಗಿಯೂ ಬಹಳ ಕಷ್ಟಪಡುತ್ತದೆ. ಪರಿಯನ್ನು ಬಿಟ್ಟಾಕ್ಷಣವೇ ಚಪಲ ಶರೀರವುಳ್ಳದ್ದಾಗಿ, ಸುಖದಿಂದ ಗಮನ ಮಾಡುತ್ತದೆ ಹೇಗೋ ಹಾಗೆ ಅಧಿಕಾರಿಯು ತೀವ್ರ ವೈರಾಗ್ಯದಿಂದ ವಿಷಯ ಗಳನ್ನು ಬಿಟ್ಟಾಗ್ಯಾದರೂ ಕೂಡಾ ಆ ವಿಷಯಗಳ ವಾಸನೆಗಳು ಪುನಃ ಪುನಃ ಮನಸ್ಸಿನಲ್ಲಿ ಉದಯವಾಗಿ ಮೋಹವನ್ನುಂಟುಮಾಡುತ್ತವೆ. ಆದ್ದರಿಂದ, ಅಂಥಾ ಭ್ರಾಂತಿಮಯಗಳಾದ ವಾಸನೆಗಳನ್ನು ಅತ್ಯಂತ ನಾಶಪಡಿಸಿ, ಶಾಂತಿ ಸುಖ ಗಳನ್ನು ಹೊಂದುತ್ತಾನೆ. (ದುಃಖ ಪ್ರಸಂಗದಲ್ಲಿ ಸಹನ ಶಕ್ತಿಯಿಂದ ಶಾಂತಿಯೂ, ನಿರ್ವಿಷಯ ವೃತ್ತಿಯಿಂದ ಸುಖವೂ ಪ್ರಾಪ್ತಗಳಾಗುತ್ತವೆಂಬ ತಾತ್ಪರ್ಯವು) ಮತ್ತು ಆತ್ಮಸ್ವರೂಪ ವಿಚಾರವನ್ನು ಮಾಡುತ್ತಿರಲಿಕ್ಕೆ ಆ ವಿಚಾರವನ್ನು ನಾಶ ಪಡಿಸುವಂಥಾ ವಿಷಯದಿಚ್ಛೆಗಳು ಪ್ರಾರಬ್ಧ ಕರ್ಮಬಲದಿಂದ ತೋರಿದರೂ, ಆ ವಿಷಯದಿಚ್ಛೆಗಳನ್ನು ವಿರತಿ, ಸಜ್ಜನಸಂಗ, ಸಚ್ಛಾಸ್ತ್ರ ಶ್ರವಣರೂಪ ಪ್ರಯತ್ನದಿಂದ ತ್ಯಾಗಮಾಡುತ್ತಾನೆ. ಅನಂತರ ಅವನು ಸದ್ಗುರುಗಳ ಕೃಪೆ ಯಿಂದ ಮಹಾವಾಕ್ಯವನ್ನು ವಿಚಾರಮಾಡುತ್ತಾನೆ ಅರ್ಥಾತ್ ವಿಷಯಾನುಭವ ಸಂಸ್ಕಾರದಿಂದ ಜನ್ಯವಾದ ವಿಷಯ ವಾಸನೆಯಿಂದಲೂ, ಅದೃಷ್ಟದಿಂದ ಹುಟ್ಟುವ ವಿಷಯದಿಚ್ಛೆಯಿಂದಲೂ ಆತ್ಮವಿಚಾರವು ನಷ್ಟವಾಗುವುದರಿಂದ

CC-0. Jangamwadi Math Collection. Digitized by eGangotri

ಅಧಿಕಾರಿಯು ಜಾಗರೂಕನಾಗಿ ವಿರತಿ, ವಿವೇಕಾದಿ ಸಾಧನಗಳಿಂದ ಉಭಯ ವಾಸನೆಗಳನ್ನು ನಾಶಪಡಿಸಿ ಶುದ್ಧ ವಾಸನೆಯಿಂದ ಮಹಾವಾಕ್ಯ ವಿಚಾರವನ್ನು ಮಾಡಬೇಕೆಂಬ ತಾತ್ಪರ್ಯವು.

ಬಳಿಕ; ತತ್ವಮಸಿ ಮಹಾವಾಕ್ಯದೊಳಗಿನ ತತ್, ತ್ವಂ ಪದಗಳಿಗೆ ವಾಚ್ಯ ಲಕ್ಷ್ಯ ಅರ್ಥಗಳನ್ನು ಹೇಳಿ, ಅಸಿಪದಿಂದ ಉಭಯ ಲಕ್ಷ್ಯಾರ್ಥಗಳಿಗೆ ಅಭೇದವನ್ನು ಬೋಧಿಸುತ್ತಾರೆ.

ತತ್ವಮಸೀತಿ ಮಹಾ ವಾಕ್ಯಕ್ಕೆ|
ತತ್ವಮಸೀತಿ ಪದಂಗಳವಕ್ಕೆ||
ಶಿವಜೀವೈಕ್ಯಂ ಕ್ರಮದಿಂದರ್ಥ|
ಅವು ಮತ್ತಂ ವಾಚ್ಯಂ ಲಕ್ಷ್ಯಾರ್ಥ||
ಮಾಯಾದ್ಯುಪಹಿತ ತತ್ಪದವಾಚ್ಯ|
ಕಾಯಾದ್ಯುಪಹಿತ ತ್ವಂಪದ ವಾಚ್ಯ||
ಪರತರ ಬೊಮ್ಮವೆ ತತ್ಪದ ಲಕ್ಷ್ಯ
ತುರ್ಯ ನಿಜಾತ್ಮನೆ ತ್ವಂ ಪದ ಲಕ್ಷ್ಯ||
ಉಭಯ ಪದದ ವಾಚ್ಯಾರ್ಥವ ಬಿಟ್ಟು|
ಶುಭಲಕ್ಷ್ಯಾರ್ಥವ ಲಕ್ಷಿಸಿಕೊಟ್ಟು||
ಚಿದಖಂಡೈಕ ರಸವ ನರುಹಿಪುದು|
ಅದು ತಾನಸಿಪದದರ್ಥವೆನಿಪುದು ||೭||

ಟೀಕಾ:— ತತ್ವಮಸೀತಿ=ತತ್ವಮಸಿಯೆಂಬ, ಮಹಾವಾಕ್ಯಕ್ಕೆ=ಮಹಾ ವಾಕ್ಯಕ್ಕೆ, ತತ್, ತ್ವಂ, ಅಸಿ, ಇತಿ=ಹೀಗೆಂಬ, ಪದಂಗಳು=ಪದಗಳು, ಅವಕ್ಕೆ= ಆ ಪದಗಳಿಗೆ, ಶಿವ=ಪರೋಕ್ಷನಾದೀಶ್ವರನು, ಜೀವ=ಅಪರೋಕ್ಷನಾದ ಜೀವನು, ಐಕ್ಯಂ=ಅಭೇದವು, ಕ್ರಮದಿಂದರ್ಥ=ಕ್ರಮವಾಗಿ ಅರ್ಥಗಳಿರುವವು, ಅವು= ಆ ತತ್ ತ್ವಂ ಪದಗಳು, ಮತ್ತಂ=ಅನಂತರ, ವಾಚ್ಯಂ=ಮುಖ್ಯಾರ್ಥವೆಂದೂ, ಲಕ್ಷ್ಯಾರ್ಥ=ಲಕ್ಷ್ಯಾರ್ಥವೆಂದೂ, (ಎರಡು ಪ್ರಕಾರಗಳಾಗಿರುವುವು) ಮಾಯಾ ದ್ಯುಪಹಿತ=ಮಾಯೋಪಾದಿಯಿಂದೊಡಗೂಡಿದ ಚೈತನ್ಯವು, ತತ್ಪದ ವಾಚ್ಯ= ತತ್ಪದದಶಕ್ಯಾರ್ಥವು, ಕಾಯಾದ್ಯುಪಹಿತ=ಶಾರೀರಾದಿಗಳಿಂದೊಡಗೂಡಿದ ಚೈತ ನ್ಯವು, ತ್ವಂಪದ ವಾಚ್ಯ=ತ್ವಂಪದದಶಕ್ಯಾರ್ಥವು, ಪರತರ ಬೊಮ್ಮವೆ=ಎಲ್ಲಕ್ಕೂ ಶ್ರೇಷ್ಠವಾದ ವಸ್ತುವೆ, ತತ್ಪದ ಲಕ್ಷ್ಯ=ತತ್ಪದಕ್ಕೆ ಲಕ್ಷ್ಯಾರ್ಥವು, ತುರ್ಯನಿಜಾ ತ್ಮನೆ=ನಾಲ್ಕನೇ ಪ್ರತ್ಯಗಾತ್ಮನೆ, ತ್ವಂಪದ ಲಕ್ಷ್ಯ=ತ್ವಂಪದಕ್ಕೆ ಲಕ್ಷ್ಯಾರ್ಥವು, ಉಭಯ ಪದದ=ಎರಡು ಪದಗಳ, ವಾಚ್ಯಾರ್ಥವ=ಶಕ್ಯಾರ್ಥವನ್ನು, ಬಿಟ್ಟು= ತ್ಯಜಿಸಿ, ಶುಭ=ಮನೋಹರವಾದ, ಲಕ್ಷ್ಯಾರ್ಥವ=ಶೋಧಿತಾರ್ಥವನ್ನು, ಲಕ್ಷಿಸಿ.

CC-0. Jangamwadi Math Collection. Digitized by eGangotri

ಕೊಟ್ಟು=ಗುರ್ತಿಸಿ, ಚಿದಖಂಡೈಕರಸವನು=ಸ್ವಗತಾದಿ ಭೇದರಹಿತ ಚಿದ್ವಸ್ತುವನ್ನು, ಅರುಹಿಪುದು=ತಿಳಿಸುವದು, ಅದುತಾನೆ=ಅದುವೇ, ಅಸಿಪದದರ್ಥವೆನಿಪುದು=ಇದ್ದಿ ಎಂಬ ಪದದ ಅರ್ಥವೆನಿಸುವದು.

ತಾತ್ಪರ್ಯ:— ಎಲೈ ಶಿಷ್ಯನೇ! ಕೇಳು. ಸಾಮವೇದದ ಶಾಖೆಯಾದ ಛಾಂದೋಗ್ಯೋಪನಿಷತ್ತಿನಲ್ಲಿ 'ತತ್ವಮಸಿ' ಎಂಬ ಮಹಾವಾಕ್ಯವುಂಟು. ಅವರಲ್ಲಿ ತತ್, ತ್ವಂ, ಅಸಿ ಎಂಬ ಮೂರು ಪದಗಳು ಇರುತ್ತವೆ. ತತ್ ಪದಕ್ಕೆ ಶಿವನೆಂಮೂ, ತ್ವಂ ಪದಕ್ಕೆ ಜೀವನೆಂದೂ, ಅಸಿ ಪದಕ್ಕೆ ಜೀವೇಶ್ವರರಿಗೈಕ್ಯತ್ವವೆಂದೂ ಅರ್ಥವಾಗುತ್ತದೆ. ಆದರೆ ಆ ತತ್, ತ್ವಂ ಪದಗಳಿಗೆ ವಾಚ್ಯಾರ್ಥವೆಂತಲೂ ಲಕ್ಷ್ಯಾರ್ಥವೆಂತಲೂ ಹೀಗೆ ಎರಡು ಅರ್ಥಗಳಾಗುತ್ತವೆ. ವಾಚ್ಯಾರ್ಥವೆಂದರೆ, ಯಾವ ಪದದಲ್ಲಿ ಯಾವ ಅರ್ಥದ ಶಕ್ತಿಯುಂಟೋ ಆ ಪದಕ್ಕೆ ಆ ಅರ್ಥವು ಶಕ್ಯಾರ್ಥವೆನಿಸುವುದು. ಈ ಶಕ್ಯಾರ್ಥಕ್ಕೇ ವಾಚ್ಯಾರ್ಥವೆಂದೂ ಹೆಸರುಂಟು. ಹೇಗಂದರೆ ಘಟಪದಕ್ಕೆ ಕಲಶ, ಅಗ್ನಿ ಪದಕ್ಕೆ ಬೆಂಕಿ ಎಂಬ ವಾಚ್ಯಾರ್ಥಗಳಿರುತ್ತವೆ. ಈ ಶಕ್ಯಾರ್ಥ ಸಮ್ಮಂಧವೇ ಲಕ್ಷಣಾರ್ಥವೆನಿಸುವುದು. ಬಳಿಕಾ ಲಕ್ಷಣವೇ ಜಹತೀ ಅಜಹತೀ ಜಹದಜಹತೀ ಅಂದರೆ ಬಿಟ್ಟ ಲಕ್ಷಣಾ, ಬಿಡದಲಕ್ಷಣಾ, ಬಿಟ್ಟುಬಿಡದ ಲಕ್ಷಣಾ, ಹೀಗೆಂದು ಮೂರು ಪ್ರಕಾರವಾಗಿರುವುದು. ಇವುಗಳಿಗೆ ಕ್ರಮದಿಂದ (ಗಂಗಾಯಾಂ ಘೋಷಃ) (ಶೋಣೋ ಧಾವತಿ) (ಸೋಽಯಂ ದೇವದತ್ತಃ) ಹೊಳೆಯಲ್ಲಿ ಗೊಲ್ಲರ ಹಳ್ಳಿಯುಂಟು, ಕೆಂಪು ಓಡುತ್ತದೆ, ಅವನೇ ಈ ದೇವದತ್ತನು ಎಂಬ ಮೂರು ವಾಕ್ಯಗಳು ದೃಷ್ಟಾಂತಗಳಾಗಿರುತ್ತವೆ. ಇಲ್ಲಿ ಗಂಗಾ ಪದಕ್ಕೆ ಪ್ರವಾಹರೂಪ ಜಲವು ವಾಚ್ಯಾರ್ಥವಾಗುತ್ತದೆ. ಅದರಲ್ಲಿ ಹಳ್ಳಿ ಇರುವುದು ಅಸಂಭವವಾದ್ದರಿಂದ ಆ ವಾಚ್ಯಾರ್ಥಕ್ಕೆ ಸಂಬಂಧವಾದ ತೀರದಲ್ಲಿ ಹಳ್ಳಿ ಇರುವದೆಂದು ಲಕ್ಷಣಾ ಆಗುತ್ತದೆ. ಈ ಅರ್ಥದಲ್ಲಿ ಸಂಪೂರ್ಣ ವಾಚ್ಯಾರ್ಥವನ್ನು ತ್ಯಾಗ ಮಾಡಿದ್ದರಿಂದ ಇದು ಜಹತೀ ಲಕ್ಷಣಯೆನಿಸುವುದು. ಕೆಂಪು ಓಡುತ್ತದೆ ಎಂಬಲ್ಲಿ ಕೆಂಪು ಬಣ್ಣವು ಓಡುವುದು ಅಸಂಭವವಾದ್ದರಿಂದ ಕೆಂಪು ಬಣ್ಣದ ಕುದುರೆಯು ಓಡುತ್ತದೆ ಎಂಬ ಲಕ್ಷಣಾರ್ಥವಾಗುತ್ತದೆ. ಇಲ್ಲಿ ಕೆಂಪು ಬಣ್ಣವನ್ನು ಬಿಡದೆ ಕುದುರೆ ಎಂಬರ್ಥವನ್ನು ಮಾಡಿದ್ದರಿಂದ ಇದು ಅಜಹತ್ ಲಕ್ಷಣವೆನಿಸುತ್ತದೆ. ಈ ಜಹತೀ ಅಜಹತೀ ಎರಡೂ ಲಕ್ಷಣಗಳು ಮಹಾವಾಕ್ಯಾರ್ಥದಲ್ಲಿ ಸಂಭವಿಸುವುದಿಲ್ಲ. ಯಾಕಂದರೆ, ಜಹತೀ ಲಕ್ಷಣದಲ್ಲಿ ವಾಚ್ಯಾರ್ಥ ಸಹಿತ ಲಕ್ಷ್ಯಾರ್ಥವೂ ತ್ಯಾಗವಾದ್ದರಿಂದ ಅಭೇದ ಅರ್ಥವು ಸಿದ್ಧಿಸುವುದಿಲ್ಲ. ಅಜಹತೀ ಲಕ್ಷಣದಲ್ಲಿ ವಾಚ್ಯಾರ್ಥ ಸಹಿತ ಲಕ್ಷ್ಯಾರ್ಥವನ್ನು ಸ್ವೀಕಾರ ಮಾಡುವುದರಿಂದ ವಿರೋದಾರ್ಥವು ಪ್ರಾಪ್ತವಾಗುವುದು. ಆದ್ದರಿಂದ ಐಕ್ಯವು ಘಟಿಸುವುದಿಲ್ಲ. ಈ ಕಾರಣದಿಂದ ಅಜಹತೀ ಲಕ್ಷಣವು ಸಂಭವಿಸುವುದಿಲ್ಲ. ಕಿಂತು; ವಾಚ್ಯಭಾಗವನ್ನು ಬಿಟ್ಟು ಲಕ್ಷ್ಯ ಅರ್ಥವನ್ನು ಸ್ವೀಕರಿಸುವ

CC-0. Jangamwadi Math Collection. Digitized by eGangotri

ಮೂರನೇ ಭಾಗತ್ಯಾಗಲಕ್ಷಣವೇ ಸಂಭವಿಸುತ್ತದೆ. ಇದೇ ಅರ್ಥವನ್ನು ಗ್ರಂಥ ಕರ್ತರು ಮೂಲ ಶ್ಲೋಕಗಳಲ್ಲಿ ಪ್ರತಿಪಾದಿಸುತ್ತಾರೆ. ಈ ಲಕ್ಷಣೆಯಿಂದ ಲಕ್ಷಿಸಿಕೊಳ್ಳುವ ಚೈತನ್ಯವೇ ಲಕ್ಷ್ಯವೆನಿಸುವುದು. ತತ್ವಮಸಿ ಮಹಾವಾಕ್ಯದಲ್ಲಿ ಲಕ್ಷಣೆಯನ್ನು ತೋರಿಸುವುದಕ್ಕೋಸ್ಕರ ಮೊದಲು ತತ್, ತ್ವಂ, ಪದಗಳ ವಾಚ್ಯಾರ್ಥವನ್ನು ಹೇಳುತ್ತಾರೆ. ಮಾಯೋ * ಪಾಧಿಯಿಂದೊಡಗೂಡಿದ ಚೈತನ್ಯವೇ ಶಿವನು. ಅವನು ಸರ್ವ ಶಕ್ತಿ, ಸರ್ವಜ್ಞ, ವಿಭು, ಈಶ, ಸ್ವತಂತ್ರ, ಪರೋಕ್ಷ, ಬಂಧಮೋಕ್ಷರಹಿತ ಈ ಧರ್ಮಗಳಿಂದ ಯುಕ್ತನಾದ್ದರಿಂದ ತತ್ಪದ ವಾಚ್ಯವೆನಿಸುವನು. ಶರೀರ ಅವಿದ್ಯಾದಿ ಉಪಾಧಿಗಳಿಂದೊಡಗೂಡಿದ ಚೈತನ್ಯವೇ ಜೀವನು. ಇವನು ಅಲ್ಪಶಕ್ತಿ, ಅಲ್ಪಜ್ಞ, ಪರಿಚ್ಛಿನ್ನ ಅನೀಶ, ಕರ್ಮಾಧೀನ ಅವಿದ್ಯಾಮೋಹಿತ, ಬಂಧಮೋಕ್ಷ ಸಹಿತ ಪ್ರತ್ಯಕ್ಷ ಈ ಧರ್ಮಗಳಿಂದ ಕೂಡಿದ್ದರಿಂದ ತ್ವಂಪದದ ವಾಚ್ಯವೆನಿಸುವನು. ಅಸಂಗ ಅದ್ವಯ ನಿರುಪಾಧಿಕ ಪರಬ್ರಹ್ಮವೇ ತತ್ಪದಕ್ಕೆ ಲಕ್ಷ್ಯಾರ್ಥವಾಗುತ್ತದೆ. ಮತ್ತು ನಿರ್ವಿಕಾರ ಕೂಟಸ್ಥ ಪ್ರತ್ಯಗಾತ್ಮನೇ ತ್ವಂಪದಕ್ಕೆ ಲಕ್ಷ್ಯಾರ್ಥನಾಗುತ್ತಾನೆ. ಕಾದ ಕಬ್ಬಿಣದೊಂದು ಘಟ್ಟಿಯುಂಟು. ಅದರೊಳಗಿನ ಅಗ್ನಿಯು ಆ ಕಬ್ಬಿಣ ಘಟ್ಟಿಯ ಆಕಾರವುಳ್ಳದ್ದೆಂದು ತಿಳಿದರೆ ವಾಚ್ಯಾರ್ಥವಾಗುತ್ತದೆ. ಆ ಘಟ್ಟಿಯ ಆಕಾರವನ್ನು ಬಿಟ್ಟು ಕೇವಲ ಉಷ್ಣಪ್ರಕಾಶವುಳ್ಳದ್ದು ಅಗ್ನಿ ಎಂದು ತಿಳಿಯೋಣದರಿಂದ ಲಕ್ಷ್ಯಾರ್ಥವಾಗುತ್ತದೆ. ಹೇಗೋ ಹಾಗೇ ಉಪಾಧಿಗಳಾದ ಮಾಯಾ ಅವಿದ್ಯೆ ಇವುಗಳ ಧರ್ಮಗಳುಳ್ಳದ್ದು ಚೇತನವೆಂದು ತಿಳಿದರೆ ವಾಚ್ಯಾರ್ಥವಾಗುತ್ತದೆ. ಉಪಾಧಿ ಧರ್ಮಗಳನ್ನು ಬಿಟ್ಟು ಕೇವಲ ಅಸಂಗ ಅದ್ವಯ ಲಕ್ಷಣಾತ್ಮಕವಾದದ್ದೇ ಚೇತನವೆಂದು ತಿಳಿದರೆ ಲಕ್ಷ್ಯಾರ್ಥವಾಗುತ್ತದೆ. ತತ್,ತ್ವಂ, ಪದಗಳ ವಾಚ್ಯಾರ್ಥದಲ್ಲಿ ಕ್ರಮದಿಂದ ಸರ್ವಶಕ್ತಿತ್ತ್ವ ಸರ್ವಜ್ಞತ್ವಾದಿ ಧರ್ಮಗಳು ಈಶ್ವರನಲ್ಲಿ; ಅಲ್ಪಶಕ್ತಿ ಅಲ್ಪಜ್ಞತ್ವಾದಿ ಧರ್ಮಗಳು ಜೀವನಲ್ಲಿ ಇರುತ್ತವೆ. ಇವು ಪರಸ್ಪರ ವಿರೋಧವಾಗೋಣದರಿಂದ ಜೀವೇಶ್ವರರಿಗೈಕ್ಯವು ಘಟಿಸುವದಿಲ್ಲ. ಆದ್ದರಿಂದ ಈ ಉಭಯ ಪದಗಳ ವಾಚ್ಯಾರ್ಥಗಳನ್ನು ಬಿಟ್ಟು ತತ್‌ಪದ ಲಕ್ಷ್ಯವಾದ ಪರಬ್ರಹ್ಮವೇ ತ್ವಂಪದ ಲಕ್ಷ್ಯವಾದ ಪ್ರತ್ಯಗಾತ್ಮಸ್ವರೂಪವಾಗಿರುವದು. ತ್ವಂಪದ ಲಕ್ಷ್ಯವಾದ ಪ್ರತ್ಯಗಾತ್ಮನೇ ತತ್‌ಪದ ಲಕ್ಷ್ಯವಾದ ಪರಬ್ರಹ್ಮ ಸ್ವರೂಪನಾಗಿರುವನು. ಎಂದು ಹೀಗೆ ಓತಪ್ರೋತ ಭಾವದಿಂದ ಅಭೇದ ನಿಶ್ಚಯವನ್ನು ಮಾಡುತ್ತಿರಲಿಕ್ಕೆ, ಪರೋಕ್ಷ ಪರಿಚ್ಛಿನ್ನತ್ವ ಭ್ರಾಂತಿಗಳು ನಷ್ಟಗಳಾಗುತ್ತವೆ. ಆಗ ದೇಶ,

* "ಮಾಯಾದ್ಯುಪಹಿತ" ಯಾವ ವಸ್ತುವಿನ ಸ್ವರೂಪದಲ್ಲಿ ಪ್ರವೇಶವಾಗದೆ ಮತ್ತು ವ್ಯಾವರ್ತಕವಾಗಿರುವದೋ ಅದು ಉಪಾಧಿಯೆನಿಸುವದು. ದೃಷ್ಟಾಂತ ಘಟಾಕಾಶದಂತೆ ಯಾವದು ಉಪಾಧಿಯುಳ್ಳದ್ದಿರುವದೋ ಅದು ಉಪಹಿತವೆನಿಸುವದು.

CC-0. Jangamwadi Math Collection. Digitized by eGangotri

ಕಾಲ, ವಸ್ತು, ಪರಿಚ್ಛೇದ ತ್ರಯಗಳಿಂದ ರಹಿತವಾದ ಅಖಂಡ ಚಿದ್ರೂಪವೇ ನೀನು ಇದ್ದಿ ಎಂದು ಹೇಳುವವೇ 'ಅಸಿ' ಪದದ ಅರ್ಥವಾಗುತ್ತದೆ.

ಅಯಮಾತ್ಮಾ ಬ್ರಹ್ಮ ಮೊದಲಾದ ಮಹಾವಾಕ್ಯಗಳಲ್ಲಿಯೂ ಇದೇ ಅರ್ಥವನ್ನು ಸಂಬಂಧಮಾಡಿ ತಿಳಿದುಕೊಳ್ಳಬೇಕು.

ಬಳಿಕ; ಆತನೇ ಈ ದೇವದತ್ತನೆಂಬ ದೃಷ್ಟಾಂತವನ್ನು ವಿಶದಪಡಿಸುತ್ತಾ ಭಾಗತ್ಯಾಗ ಲಕ್ಷಣೆಯಿಂದ ಜೀವ ಬ್ರಹ್ಮರಿಗೈಕ್ಯತ್ವವನ್ನು ಪ್ರತಿಪಾದಿಸುತ್ತಾರೆ.

ಆತನೆಯೀತನೆನಿಪ ವಾಕ್ಯಕ್ಕೆ।
ಈ ತೆರನಹುದಿಂತೀ ವಾಕ್ಯಕ್ಕೆ॥
ಆ ಕಾಲಾದಿಕವಾ ರೂಪುಗಳು।
ಈ ಕಾಲಾದಿಕವೀ ರೂಪುಗಳು॥
ಬಿಟ್ಟವನೋರ್ವನೆಯೆಂದೊಡಬಾಧ್ಯ।
ನೆಟ್ಟನೆ ನೋಡಿಂತಿಲ್ಲಿಯೆ ಬೋಧ್ಯ॥
ಅಲ್ಲಿಯ ಸರ್ವಜ್ಞ ತ್ವಾದಿಕವ।
ಇಲ್ಲಿಯ ಕಿಂಚಿಜ್ಞ ತ್ವಾದಿಕವ॥
ನೇತಿಗಳೆದು ಪದವೆರಡರೊಳುಳಿದ।
ಚೈತನ್ಯವ ನೊಂದೆಂಬುದು ತಿಳಿದ॥
ಲಕ್ಷಣದಿಂತೀಪದ ಲಕ್ಷ್ಯಾರ್ಥ।
ಅಕ್ಷಯಪದವೆನಿಪುದು ಪರಮಾರ್ಥ ॥೮॥

ಟೀಕಾ:— ಆತನೇ ಈತನು=ಅವನೇ ಇವನು, ಎನಿಪ=ಅನ್ನುವ, ವಾಕ್ಯಕ್ಕೆ=ನುಡಿಗೆ, ಈ ತೆರನಹುದು=ಈ ಪ್ರಕಾರವಾಗುವದು, ಈ ವಾಕ್ಯಕ್ಕೆ=ಈ ನುಡಿಗೆ, ಇಂತು=ಈ ಪ್ರಕಾರ, ಆ ಕಾಲಾದಿಕವು=ಭೂತಕಾಲದೇಶಾದಿಗಳು, ಆ ರೂಪುಗಳು=ವಿದ್ಯಾರ್ಥಿತ್ವಾದಿ ಬಾಲ್ಯರೂಪುಗಳು, ಈ ಕಾಲಾದಿಕವು=ವರ್ತಮಾನ ಕಾಲದೇಶಾದಿಗಳು, ಈ ರೂಪುಗಳು=ವಿದ್ವತ್ವಾದಿ ವೃದ್ಧಾಪ್ಯ ರೂಪುಗಳು, ಬಿಟ್ಟವನು=ಹಿಂದೆ ಹೇಳಿದವುಗಳನ್ನು ತ್ಯಾಗಮಾಡಿ, ಓರ್ವನೆ=ಒಬ್ಬನೇ, ಎಂದೊಡೆ=ಅಂದರೆ, ಅಬಾಧ್ಯ=ನಿಶ್ಚಯಾರ್ಥವಿರುತ್ತದೆ, ಇಂತು=ಈ ಪ್ರಕಾರ, ಇಲ್ಲಿಯೇ=ದ್ರಾಷ್ಟಾಂತದಲ್ಲಿಯೇ, ಬೋಧ್ಯ=ಶಿಷ್ಯನೇ!; ನೆಟ್ಟನೆ ನೋಡು=ಚನ್ನಾಗಿ ವಿಚಾರ ಮಾಡು, ಅಲ್ಲಿಯ=ಈಶ್ವರನಲ್ಲಿಯ, ಸರ್ವಜ್ಞ ತ್ವಾದಿಕವ=ಸರ್ವಜ್ಞತ್ವ ಸರ್ವ ಶಕ್ತಿತ್ವಾದಿಗಳನ್ನು, ಇಲ್ಲಿಯ=ಜೀವನಲ್ಲಿರುವ, ಕಿಂಚಿಜ್ಞತ್ವಾದಿಕವ=ಅಲ್ಪಜ್ಞತ್ವ ಅಲ್ಪ ಶಕ್ತಿತ್ವಾದಿಗಳನ್ನು, ನೇತಿಗಳೆದು=ಬಿಟ್ಟು, ಪದವೆರಡರೊಳು=ತತ್, ತ್ವಂ, ಎರಡು ಪದಗಳಲ್ಲಿ, ಉಳಿದ=ಅವಶೇಷವಾದ, ಚೈತನ್ಯವನ್ನು=ಜ್ಞಾನಸ್ವರೂಪವನ್ನು, ಒಂದೆಂಬುದು=ಅಖಂಡವೆಂಬುದೊಂದು, ತಿಳಿದ=ನಿಶ್ಚಯಮಾಡಿದ್ದೇ, ಲಕ್ಷಣಂ=

CC-0. Jangamwadi Math Collection. Digitized by eGangotri

ಭಾಗತ್ಯಾಗಲಕ್ಷಣವು, ಇಂತು=ಈ ಪ್ರಕಾರ, ಪದ=ತತ್, ತ್ವಂ, ಪದಗಳ, ಲಕ್ಷ್ಯಾರ್ಥ=ಶೋಧಿತಾರ್ಥವು, ಅಕ್ಷಯಪದವೆನಿಪುದು=ನಾಶವಿಲ್ಲದ ಸ್ವರೂಪ ವೆನಿಸುವದು, ಪರಮಾರ್ಥ=ಯಥಾರ್ಥವಾದದ್ದು

ತಾತ್ಪರ್ಯ:— (ಸೋಽಯಂದೇವದತ್ತಃ) ಆತನೇ ಈತನು ಎಂಬ ವಾಕ್ಯ ದಲ್ಲಿ ವಿರುದ್ಧ ಧರ್ಮಗಳನ್ನು ತ್ಯಾಗಮಾಡಿ, ಅವಿರುದ್ಧವಾದ ದೇವದತ್ತನ ಶರೀ ರವು ಹೇಗೆ ಲಕ್ಷಿಸಲ್ಪಡುತ್ತದೆಯೋ, ಹಾಗೆ ತತ್ ತ್ವಂ ಪದಗಳಲ್ಲಿರುವ ವಿರುದ್ಧ ಧರ್ಮಗಳನ್ನು ತ್ಯಜಿಸಿ, ಅವಿರುದ್ಧವಾದ ಒಂದು ಅಖಂಡ ಚೈತನ್ಯವು ಲಕ್ಷಿಸ ಲ್ಪಡುತ್ತದೆ. ಹೇಗಂದರೆ, ಒಬ್ಬ ಗೃಹಸ್ಥನು ಕಾಶಿ ಯಾತ್ರೆಗೆ ಹೋಗಿದ್ದನ್ನು ಆ ಕಾಶಿಯಲ್ಲಿ ಸಂಚರಿಸುತ್ತಿರುವಾಗ ತಮ್ಮ ಊರೊಳಗಿನ ಒಬ್ಬ ದೇವದತ್ತ ಎಂಬ ಹೆಸರಿನ ಬಾಲಕನು ಭೆಟ್ಟಿಯಾದನು. ಆ ಬಾಲಕನು ಕಾಶಿಯಲ್ಲಿ ವಿದ್ಯಾರ್ಥಿ ಯಾಗಿದ್ದನು. ಈ ವೃತ್ತಾಂತವನ್ನು ಬಾಲಕನ ಮುಖದಿಂದ ಕೇಳಿ ಕಾಶಿ ಯಾತ್ರೆಯನ್ನು ತೀರಿಸಿಕೊಂಡು ಗೃಹಸ್ಥನು ತನ್ನ ಊರಿಗೆ ಬಂದನು. ಕೆಲವು ದಿವಸಗಳ ನಂತರ ದೇವದತ್ತನು ವಿದ್ಯಾಭ್ಯಾಸವನ್ನು ತೀರಿಸಿಕೊಂಡು ತನ ಗ್ರಾಮಕ್ಕೆ ಬಂದನು. ಆಗ ಈ ಗೃಹಸ್ಥನು "ಸೋಽಯಂ ದೇವದತ್ತಃ, ಆ ದೇವ ದತ್ತನೇ ಈತನು" ಎಂದು ನುಡಿದನು. ಇಲ್ಲಿ ಆತನು ಎಂಬ ಪದಕ್ಕೆ ಭೂತಕಾಲ ಕಾಶಿ ದೇಶ, ಬಾಲ್ಯತ್ವ, ವಿದ್ಯಾರ್ಥಿತ್ವ, ಬ್ರಹ್ಮಚರ್ಯತ್ವಾದಿಗಳು ಅರ್ಥವಾಗು ತ್ತವೆ. ಈತನು ಎಂಬ ಪದಕ್ಕೆ ವರ್ತಮಾನಕಾಲ, ಸ್ವದೇಶ, ಯೌವನತ್ವ, ವಿದ್ವಾನತ್ವ, ಸನ್ಯಾಸತ್ವಾದಿಗಳು ಅರ್ಥವಾಗುತ್ತವೆ. ಆತ, ಈತ, ಎಂಬ ಪದ ಗಳ ಅರ್ಥಗಳು ಪರಸ್ಪರ ವಿರುದ್ಧಗಳಾಗುವದರಿಂದ ಒಬ್ಬನೇ ಎಂಬ ಅರ್ಥವು ನಿಶ್ಚಯವಾಗುವದಿಲ್ಲ. ಆದ್ದರಿಂದ ವಿರುದ್ಧ ಅರ್ಥಗಳನ್ನು ಬಿಟ್ಟರೆ ಅವಿರುದ್ಧ ವಾದ ದೇವದತ್ತನ ಪಿಂಡವು ಒಂದೇ ಲಕ್ಷಿಸಲ್ಪಡುತ್ತದೆ. ಹೇಗೋ ಹಾಗೇ ತತ್ ಪದಕ್ಕೆ, ಅರ್ಥನಾದ ಈಶ್ವರನು ಸರ್ವಜ್ಞತ್ವ, ಸರ್ವಶಕ್ತಿತ್ವ, ಪರೋಕ್ಷತ್ವಾದಿ ಧರ್ಮಗಳುಳ್ಳವನಿದ್ದಾನೆ. ತ್ವಂ ಪದಕ್ಕೆ ಅರ್ಥನಾದ ಜೀವನು ಅಲ್ಪಜ್ಞತ್ವ, ಅಲ್ಪ ಶಕ್ತಿತ್ವ, ಅಪರೋಕ್ಷತ್ವಾದಿ ಧರ್ಮಗಳುಳ್ಳವನಿದ್ದಾನೆ. ಆದ್ದರಿಂದ ಜೀವ ಮತ್ತು ಈಶ್ವರ ಇವರಿಬ್ಬರಿಗೂ ಅಭೇದವು ಸಂಭವಿಸುವದಿಲ್ಲ. ಯಾಕಂದರೆ ಪರಸ್ಪರ ವಿರುದ್ಧ ಧರ್ಮಗಳುಳ್ಳವರಾದ್ದರಿಂದ, ಈ ಹೇತುವಿನಿಂದಲೇ ವಿರುದ್ಧ ಧರ್ಮಾದಿಗಳನ್ನು ತ್ಯಾಗಮಾಡಿದರೆ ಅವಿರುದ್ಧವಾದ ಒಂದು ಅಖಂಡ ಚೈತನ್ಯವೇ ಲಕ್ಷಿಸಲ್ಪಡುತ್ತದೆ. ವಿರುದ್ಧ ಧರ್ಮಗಳನ್ನು ಬಿಟ್ಟು ಅವಿರುದ್ಧ ವಸ್ತುವನ್ನು ಗ್ರಹಿಸುವದೇ ಭಾಗತ್ಯಾಗ ಲಕ್ಷಣೆಯು. ಈ ಲಕ್ಷಣೆಯಿಂದ ಯಾವದು ಲಕ್ಷಿಸಲ್ಪ ಡುವದೋ ಅದೇ ಲಕ್ಷ್ಯಾರ್ಥವೆನಿಸುತ್ತದೆ. ಆ ಲಕ್ಷ್ಯಾರ್ಥವು ನಿತ್ಯವಾಗಿಯೂ ಯಥಾರ್ಥವಾಗಿಯೂ ಇರುವದು. ಅಂಥಾ ವಸ್ತುವೇ ನೀನೆಂದು ಮಹಾವಾಕ್ಯವು ಬೋಧಿಸುತ್ತದೆ.

CC-0. Jangamwadi Math Collection. Digitized by eGangotri

ಬಳಿಕ; ಜೀವೇಶ್ವರರ ಉಪಾಧಿ ಮತ್ತು ಉಪಾಧಿ ಧರ್ಮಗಳನ್ನು ಕಳೆಯಲು ಜೀವೇಶ್ವರರ ಸ್ವರೂಪವು ಒಂದೇ ಅಖಂಡವಾಗಿರುತ್ತದೆ ಎಂಬ ವಿಷಯದಲ್ಲಿ ಮನನಾರ್ಥವಾಗಿ ಅನೇಕ ದೃಷ್ಟಾಂತಗಳನ್ನು ಕೊಡುತ್ತಾರೆ.

ಜೀವೇಶ್ವರರೇಕತ್ವ ವಿುದೆಂದು।
ಭಾವಿಸಿ ತಿಳಿ ನಿಜವಿಂತಿಹುದೆಂದು॥
ಘಟಮಠ ವೆರಡಂ ಬಿರ್ಚಿ ದೊಡೆಂತು।
ಧಿಟಮುಳಿದೆಂತಿಹುದಾಗಸವಂತು॥
ಭೃಗುಜ ರಘುಜ ಭಾವನೆಯಳಿದೆಂತು।
ಮಿಗುವುದು ವಿಷ್ಣುತ್ವವೆ ವೊಂದೆಂತು॥
ಬಿಂದುದ್ವಯಮಂ ತೊಡೆಯಲದೆಂತು।
ಒಂದಲ್ಲದೆ ದಶಶತವಿಲ್ಲಂತು॥
ಅಂದುಗೆ ಮಕುಟಾಕೃತಿಯಳಿದೆಂತು।
ಒಂದೇ ಮಿಸುನಿಯ ಘಟ್ಟಿಯದಂತು॥
ಇಂತು ನಿಜೈಕ್ಯಂ ಬೇರೊಂದಿಲ್ಲ।
ಮುಂತೆ ವಿಕಲ್ಪಂ ಮಾಡಲು ಸಲ್ಲ ॥೯॥

ಟೀಕಾ:— ಇದು=ಅಕ್ಷಯಪದವು; ಜಿವೇಶ್ವರರ=ಶಿವಜೀವರುಗಳ, ಏಕತ್ವಮೆಂದು=ಅಭೇದವೆಂದು, ಭಾವಿಸಿ=ವಿಚಾರಮಾಡಿ, ನಿಜವು=ತನ್ನ ಖರೇ ಸ್ವರೂಪು, ಇಂತಿಹುದೆಂದು=ಹೀಗಿರುವದೆಂದು, ತಿಳಿ=ಅರಿ[ಹೇಗಂದರೆ], ಘಟಮಠವೆರಡಂ=ಮಠಘಟಗಳೆರಡನ್ನು, ಬಿರ್ಚಿದೊಡೆ=ತೆಗೆದುಹಾಕಲು, ಎಂತು=ಹೇಗೆ, ಆಗಸವು=ಆಕಾಶವು, ಧಿಟಮುಳಿದು=ಸತ್ಯವಾಗಿ, ಎಂತಿಹುದು=ಹೇಗಿರುವದೋ, ಅಂತು=ಹಾಗೆ, ಭೃಗುಜ=ಪರಶುರಾಮನೆಂಬ, ರಘುಜ=ರಾಮಚಂದ್ರನೆಂಬ, ಭಾವನೆಯ=ಮನಸ್ಸನ್ನು, ಅಳಿದು=ತ್ಯಜಿಸಲು, ಒಂದು=ಏಕರಸವಾದ, ವಿಷ್ಣುತ್ವವೆ=ವ್ಯಾಪಕವಸ್ತುವೇ, ಎಂತು=ಹೇಗೆ, ಮಿಗುವದೋ=ಅತಿಕ್ರಮಿಸುವದೋ, ಅಂತು=ಹಾಗೆ, ಬಿಂದುದ್ವಯಂ=ಎರಡು ಪೂಜೆಗಳನ್ನು, ತೊಡೆಯಲ್=ಅಳಿಕಿಸಲಾಗಿ, ಅದು=ಉಳಿದದ್ದು, ಒಂದಲ್ಲದೇ=ಒಂದೇ ಇರುವದು, ದಶ=ಹತ್ತು, ಶತವು=ನೂರು, ಇಲ್ಲ=ಇರುವದಿಲ್ಲ, ಎಂತು=ಹೇಗೋ, ಅಂತು=ಹಾಗೇ, ಅಂದುಗೆ=ಪೈಜಣವು, ಮಕುಟ=ಕಿರೀಟವು (ಇವುಗಳ), ಆಕೃತಿಯ=ಆಕಾರವನ್ನು, ಅಳಿದು=ಬಿಟ್ಟು, ಅದು=ಉಳಿದದ್ದು, ಎಂತು=ಹೇಗೆ, ಒಂದೇ ಮಿಸುನಿಯ=ಒಂದು ಭಂಗಾರದ, ಗಟ್ಟಿಯು=ಗಟ್ಟಿಯಿರುವದೋ, ಅಂತು=ಹಾಗೆ, ಇಂತು=ಈ ಪ್ರಕಾರ, ನಿಜೈಕ್ಯಂ=ತನ್ನ ಅಭೇದಸ್ವರೂಪು, ಬೇರೊಂದಿಲ್ಲ=ಎರಡನೆಯದು=ಇಲ್ಲ ಮುಂತೆ, ಮುಂದೆ, ವಿಕಲ್ಪಂ=ವಿರುದ್ಧಕಲ್ಪನೆಯನ್ನು, ಮಾಡಲು=ಮಾಡುವದು, ಸಲ್ಲ=ಯೋಗ್ಯವಲ್ಲ.

CC-0. Jangamwadi Math Collection. Digitized by eGangotri

ತಾತ್ಪರ್ಯ:-ಎಲೋ ಶಿಷ್ಯನೇ! ಆ ತತ್ ತ್ವಂ ಪದಗಳ ಲಕ್ಷ್ಯಾರ್ಥವಾದ ಅಖಂಡ ಚೈತನ್ಯವೇ ನಿನ್ನ ನಿಜ ಸ್ವರೂಪವೆಂದು ನಿರ್ಧರಿಸು. ಇಂಥಾ ನಿನ್ನ ಅಖಂಡ ಸ್ವರೂಪವೇ ಜೀವೇಶ್ವರರ ಏಕತ್ವವಾಗಿರುವದೆಂದು ತಿಳಿ. ಹೇಗಂದರೆ, ಘಟ ಮತ್ತು ಮಠ ಇವೆರಡರ ಉಪಾಧಿಯಿಂದ ಆಕಾಶವು ಘಟಾಕಾಶವೆಂದು ಮಠಾಕಾಶವೆಂದೂ ಪ್ರತೀತಿಯಾಗುತ್ತಿತ್ತು. ಮತ್ತು ಘಟಾಕಾಶವು ಅಲ್ಪ ಪರಿಣಾಮವುಳ್ಳದ್ದು, ಮಠಾಕಾಶವು ಮಹತ್ಪರಿಣಾಮವುಳ್ಳದ್ದೂ ಇದೋಣದರಿಂದ ಪರಸ್ಪರ ಭಿನ್ನವುಳ್ಳವುಗಳಾಗಿಯೂ ತೋರುತ್ತಿದ್ದವು. ಆದ್ದರಿಂದ ಉಪಾಧಿಗಳಾದ ಘಟ ಮಠಗಳೆರಡನ್ನೂ ಕೆಡಿಸಲು, ಸತ್ಯವಾಗಿ ಒಂದು ಅಖಂಡಾಕಾಶವೇ ಹೇಗೆ ಉಳಿಯುತ್ತದೆಯೋ ಹಾಗೆ ಜೀವೇಶ್ವರರಿಗಿರುವ ಅವಿದ್ಯಾಮಾಯೋಪಾಧಿಗಳನ್ನು ತೆಗೆಯಲು; ಚೇತನವು ಭೇದವಿಲ್ಲದೆ ಒಂದೇ ಏಕರಸವಾಗಿ ಉಳಿಯುವದು. ಅದೇ ನಿನ್ನ ನಿಜವು. ಮತ್ತು ಅದ್ವೈತಮತದಲ್ಲಿ ಒಂದು ವಸ್ತುವೇ ಎರಡಾಗಿ ತೋರಿ, ಪುನಃ ಒಂದೆನಿಸುವುದಕ್ಕೆ ದೃಷ್ಟಾಂತವು ಯಾವದು? ಅಂದರೆ ಕೇಳು, ಒಂದು ವಿಷ್ಣುತತ್ವವೇ ರಾಮ ಮತ್ತು ಪರಶುರಾಮ ಅವತಾರಗಳನ್ನು ಮಾಡಿತು. ರಾಮನು ಸೀತಾ ಸ್ವಯಂವರ ಕಾಲದಲ್ಲಿ ಮಹಾ ಧನುಸ್ಸನ್ನು ಭಂಗಮಾಡಲು, ಪರಶುರಾಮನು ಆ ಧನುಸ್ಸ ಮುರಿಯುವ ಶಬ್ದವನ್ನು ಕೇಳಿ, ಸಮಾಧಿಯಿಂದ ಎದ್ದು ರಾಮನೊಡನೆ ಯುದ್ಧಮಾಡಲಿಕ್ಕೆ ಹೊರಟನು. ಅನಂತರ ಉಪದೇಶದಿಂದ ಶಾಂತನಾದನು. ಒಂದೇ ವಿಷ್ಣುತತ್ವವು ಅವತಾರ ಭೇದದಿಂದ ಭಿನ್ನವಾಗಿ ಕಂಡರೂ, ಹೇಗೆ ಒಂದೇ ರೂಪವಾಗಿರುವದೋ, ಹಾಗೆ ನಿನ್ನ ಸ್ವರೂಪವು ಅಖಂಡವಾಗಿರುತ್ತದೆ. ಮತ್ತು ಒಂದು ಸಂಖ್ಯೆಯ ಮುಂದೆ ಒಂದು ಪೂಜೆಯನ್ನಿರಿಸಿದರೆ, ಹತ್ತು ಆಗುವದು. ಮತ್ತೊಂದು ಪೂಜೆಯನ್ನಿರಿಸಿದರೆ ನೂರು ಆಗುವದು. ಆ ಎರಡೂ ಪೂಜೆಗಳನ್ನು ತೆಗೆದರೆ ಒಂದೇ ಉಳಿಯುವದೇ ಹೊರ್ತು ಹತ್ತು ನೂರುಗಳೇನೂ ಇಲ್ಲ. ಹೇಗೋ ಹಾಗೇ ಒಂದು ಬ್ರಹ್ಮದ ಮುಂದೆ ಸಮಷ್ಟಿ ರೂಪ ಮಾಯೆಯನ್ನಿರಿಸಲು ಈಶ್ವರನೆಂದೂ, ವ್ಯಷ್ಟ್ಯಾತ್ಮಕ ಅವಿದ್ಯೆಯನ್ನು ಇರಿಸಲು, ಅನೇಕ ಜೀವಾತ್ಮರುಗಳೆಂದೂ ತೋರಿಬಂತು. ಆದರೆ, ಮಾಯಾ ವಿದ್ಯೆಗಳೆಂಬ ಎರಡು ಪೂಜೆಗಳನ್ನು ತೆಗೆಯಲು ಒಂದು ಅಖಂಡ ಬ್ರಹ್ಮವೇ ಅವಶೇಷ ಉಳಿಯುತ್ತದೆ. ಮತ್ತು ಒಂದು ಭಂಗಾರವೇ ಆಕೃತಿಮೂಲಕ ಕಾಲೊಳಿಡುವ ಪೈಜಣವಾಗಿ ಕನಿಷ್ಟವೆನಿಸಿತು. ತಲೆಯ ಮೇಲಿಡುವ ಕಿರೀಟಾಗಿ ಉತ್ಕೃಷ್ಟವೆನಿಸಿತು. ಎರಡೂ ಆಕಾರಗಳನ್ನು ತೆಗೆದು ಹಾಕಲು ಒಂದು ಭಂಗಾರ ಘಟ್ಟಿಯೇ ಹೇಗೆ ಉಳಿಯುತ್ತದೆಯೋ, ಹಾಗೆ ಒಂದು ಚೈತನ್ಯವೇ ಅವಿದ್ಯೆಯಲ್ಲಿ ಪ್ರತಿಬಿಂಬಿಸಿ ಅಲ್ಪಜ್ಞಾತ್ವಾದಿಗಳಿಂದ ಕೂಡಿ ಜೀವವಾಗಿ ಕನಿಷ್ಟವೆನಿಸಿತು. ಮಾಯೆಯಲ್ಲಿ ಪ್ರತಿಬಿಂಬಿಸಿ ಸರ್ವಜ್ಞತ್ವಾದಿಗಳಿಂದ ಕೂಡಿ ಈಶ್ವರವಾಗಿ ಉತ್ಕೃಷ್ಟವೆನಿಸಿತು. ಎರಡೂ

CC-0. Jangamwadi Math Collection. Digitized by eGangotri

ಉಪಾಧಿಗಳನ್ನು ತೆಗೆಯಲು ಒಂದು ಅಖಂಡ ಚೈತನ್ಯವೇ ಉಳಿಯುತ್ತದೆ. ಹೀಗೆ ತಿಳಿಯುವದೇ ತನ್ನ ನಿಜಸ್ವರೂಪದಲ್ಲಿ ಕೂಡುವಿಕೆಯು ಇದೇ ಪುರುಷಾರ್ಥವು. ಎರಡನೇದು ಯಾವುದೂ ಇಲ್ಲ. ಇನ್ನು ಮೇಲೆ ಅರ್ಥವಾದಪರಾ, ಉಪವಾಸನಾಪರ, ಸ್ತುತಿಪರ, ಅಂಶಾಅಂಶಿ, ಕಾರ್ಯಕಾರಣ, ಮೊದಲಾದ ಭೇದರೂಪ ವಿಕಲ್ಪಗಳನ್ನು ಮಾಡಕೂಡದು.

ಬಳಿಕ; ಶಿಷ್ಯನು ವಿವೇಕದಿಂದ ಅನಾತ್ಮಗಳನ್ನು ಬೇರ್ಪಡಿಸಿ ಅರುವೇ ನಾನೆಂದು ನಿಶ್ಚೈಸಿ, ಜ್ಞಾನಾಭ್ಯಾಸದಿಂದ ಅಸಂಗತ್ವದಲ್ಲಿ ಸ್ಥಿರ ಬುದ್ಧಿಯುಳ್ಳವನಾಗುವನು ಎಂದು ಪ್ರತಿಪಾದಿಸುತ್ತಾರೆ.

ಬಳಿಕಿಂತಾತ್ಮ ವಿಚಾರತೆಯಿಂದ।
ತಿಳುಪಿದ ಸದ್ಗುರು ಯುಕ್ತಿಗಳಿಂದ॥
ದೇಹಾದಿಕವಾತ್ಮೇ ತರವೆಂದು।
ದೇಹಾದಿಯ ನರಿವರಿವಾನೆಂದು॥
ದಶವು ಪುರುಷನಳಲುವ ಬಗೆಯೆಂತು।
ಪುಸಿಕಡೆಗೆಲ್ಲವ ನೋಡಿದೊಡಂತು॥
ಎನುತಂ ಜ್ಞಾನಾಭ್ಯಾಸಂ ನೆಲಿಸಿ॥
ತನಗಾಜ್ಞಾ ತೃತ್ವಾದಿಕವೆನಿಸಿ॥
ಇರ್ದಿರವಂ ಸುವಿಚಾರದಿ ನೋಡಿ।
ಪೋರ್ದಿದಬಗೆಗಳನುಳಿದೀಡಾಡಿ॥
ನಿಸ್ಸಂಗತ್ವವೆ ತನಗಳವಟ್ಟು।
ನಿಸ್ಸಂಶಯದೊಳಿಕನು ಮತಿನಟ್ಟು ॥೧೧॥

ಟೀಕಾ:—ಬಳಿಕ=ಅನಂತರ, ಇಂತು=ಈ ಪ್ರಕಾರ, ಆತ್ಮ=ಆತ್ಮನ ಸ್ವರೂಪದ, ವಿಚಾರತೆಯಿಂದ=ಜಡಾಜಡ ವಿಚಾರದಿಂದ, ತಿಳುಹಿದ=ಹೇಳಿದಂಥಾ, ಸದ್ಗುರು=ಗುರುವಿನ, ಯುಕ್ತಿಗಳಿಂದ=ದೃಷ್ಟಾಂತಗಳಿಂದ, ದೇಹಾದಿಕವು=ದೇಹ ಮೊದಲು ಅಹಂಕಾರದವರೆಗಿರುವ ವಸ್ತುಗಳು, ಆತ್ಮೇತರವೆಂದು=ಪ್ರತ್ಯಗಾತ್ಮಕ್ಕಿಂತಲೂ ಭಿನ್ನವೆಂದು, ದೇಹಾದಿಯನು=ದೇಹ ಮೊದಲಾದವುಗಳನ್ನು, ಅರಿವ=ತಿಳಿಯುವ, ಅರಿವಾನೆಂದು=ಜ್ಞಾನಸ್ವರೂಪವೇ ನಾನೆಂದು, ದಶಮಪುರುಷನ-ಹತ್ತನೆಯವನ, ಅಳಲುವ-ದುಃಖಿಸುವ, ಬಗೆಯು-ಭಾವನೆಯು, ಎಂತು=ಹೇಗೋ, ಅಂತು=ಹಾಗೆ, ಎಲ್ಲವ-ಸರ್ವವನ್ನು, ನೋಡಿದೊಡೆ=ವಿಚಾರ ಮಾಡಿದೊಡೆ, ಕಡೆಗೆ=ಅಂತ್ಯಕ್ಕೆ, ಪುಸಿ=ಸುಳ್ಳು, ಏನುತಂ=ಹೀಗೆ ನುಡಿಯುತ್ತಾ, ಜ್ಞಾನಾಭ್ಯಾಸಂ=ಸ್ವರೂಪ ಚಿಂತನೆಯನ್ನು, ನೆಲಿಸಿ=ದೃಢಮಾಡಿ, ತನಗೆ=ಪ್ರತ್ಯಗಾತ್ಮನಾದ ತನಗೆ; ಆ ಜ್ಞಾತೃತ್ವಾದಿಕ ಮೆನಿಸಿ=ಆ ಜೀವತ್ವವೆನಿಸಿ, ಇರ್ದಿರವಂ=ಇದ್ದಂಥಾ ತನ್ನ ಸ್ವರೂಪವನ್ನು, ಸುವಿಚಾರದಿ=ವಿವೇಕದಿಂದ, ನೋಡಿ=ಕಂಡು

CC-0. Jangamwadi Math Collection. Digitized by eGangotri

ಪೊರ್ದಿದ=ಹೊಂದಿಕೊಂಡಿರುವ, ಬಗೆಗಳನು=ಭಾವನೆಗಳನ್ನು, ಉಳಿದು=ಬಿಟ್ಟು, ಈಡಾಡಿ=ತೂರಾಡಿ, ನಿಸ್ಸಂಗತ್ವವೇ=ಅಸಂಗದಿಂದಿರುತನವೇ, ತನಗೆಳವಟ್ಟು= ತಾನು ಪ್ರಾಪ್ತಿ ಮಾಡಿಕೊಂಡು, ಮತಿನಟ್ಟು=ಬುದ್ಧಿಯನ್ನು ನೆಲಿಸಿ, ನಿಸ್ಸಂಶಯ ದೊಳ್-ನಿಶ್ಚಯದಿಂದ, ಇಹನು=ಇರುವನು.

ತಾತ್ಪರ್ಯ:— ಅನಂತರ ಈ ಪ್ರಕಾರವಾದ ಆತ್ಮಾನಾತ್ಮ ವಿವೇಕ ದಿಂದಲೂ, ಸದ್ಗುರುಗಳಿಂದಲೂ ಸದ್ಗುರುಗಳಿಂದ ತಿಳಿಸಲ್ಪಟ್ಟ ಅನ್ವಯ ವ್ಯತಿರೇಕರೂಪ ಯುಕ್ತಿಯಿಂದಲೂ, ಶಿಷ್ಯನು ನಿಶ್ಚಯ ಮಾಡಿದ್ದೇನಂದರೆ— ದೇಹ, ಇಂದ್ರಿಯ, ಮನ, ಬುದ್ಧಿ, ಅಹಂಕಾರ, ಮೊದಲಾದ ಅನಾತ್ಮ ವಸ್ತು ಗಳು ಸ್ವಯಂಪ್ರಕಾಶರೂಪನಾದ ಆತ್ಮನಿಗಿಂತಲೂ ಬೇರೆಯಾಗಿರುವವು. ಯಾಕಂದರೆ, ತನ್ನಿಂದ ತಿಳಿಸಿಕೊಳ್ಳೋದರಿಂದ, ಹೇಗಂದರೆ, ಘಟಾದಿಗಳಂತೆ, ಈ ಅನುಮಾನದಿಂದ ದೇಹಾದಿಗಳು ತಾನಲ್ಲವೆಂಬುದೇ ಸಿದ್ಧವಾಯಿತು. ಹಾಗಾ ದರೆ, ತಾನು ಯಾರು?—ದೇಹ ಮೊದಲು ಅಹಂಕಾರವರೆಗಿರುವ ಅನಾತ್ಮ ಪದಾರ್ಥಗಳನ್ನೂ ಅವುಗಳ ಧರ್ಮಗಳನ್ನೂ ಯಾವಾತನು ಪ್ರಕಾಶ ಮಾಡು ತ್ತಾನೋ, ಅವನೇ ತಾನಿರುವನು. ಅಂದರೆ, ಅರಿಸಿಕೊಳ್ಳುವ ಪದಾರ್ಥಗಳು ತಾನಲ್ಲ. ಅರಿಯುವವನೇ ತಾನೆಂಬ ಅಭಿಪ್ರಾಯವು. ತನ್ನ ಮರತು ತಾನೇ ದುಃಖಿಸಿ ತನ್ನನ್ನು ಅರಿತು ತಾನೇ ಸುಖಿಸುವದು ದಶಮನ ದೃಷ್ಟಾಂತವಾಗಿರು ವದು. ಹೇಗಂದರೆ, ಹತ್ತು ಮಂದಿ ಒಂದು ನದಿಯನ್ನು ದಾಟಿದರು. ಅನಂತರ ಅವರಲ್ಲಿ ಒಬ್ಬನು ನಾವು ಹತ್ತು ಮಂದಿ ಬಂದಿವೋ ಇಲ್ಲೋ ಎಂದು ತನ್ನ ಮರೆತು ಒಬ್ಬೊಬ್ಬರನ್ನೇ ಎಣಿಸಹತ್ತಿದನು. ಆಗ ಒಂಭತ್ತೇ ಜನರು ಆಗ ಹತ್ತಿದರು. ಹತ್ತನೆಯವನಾದ ತನ್ನನ್ನು ಮರತದ್ದರಿಂದ ಅಜ್ಞಾನವೆನಿಸುವದು. ಹತ್ತನೆಯವನು ಇಲ್ಲ, ಅನ್ನುವದೇ ಅಸದಾವರಣವೆನಿಸುವದು ತೋರುವದಿಲ್ಲ ಅನ್ನುವದೇ ಅಭಾನ ಆವರಣವೆನಿಸುವದು. ಹತ್ತನೆಯವನು ಸತ್ತನೆಂದು ತಿಳಿದು ಅಳುವದೇ ವಿಕ್ಷೇಪವೆನಿಸುವದು. ಬೇರೊಬ್ಬ ಹಿತಚಿಂತಕನು ನದೀ ತಟಾಕಕ್ಕೆ ಬಂದು ನೀವು ಯಾಕೆ ಅಳುವಿರಿ? ಎಂದು ಕೇಳಿದನು. ಅದಕ್ಕೆ ಅವರು ಹತ್ತರೊಳಗೊಬ್ಬನು ಸತ್ತಿರುವನೆಂದು ಉತ್ತರಕೊಟ್ಟರು. ಹಿತಚಿಂತ ಕನು ಅಳುವವನನ್ನು ಕುರಿತು "ನೀನು ಅಳಬೇಡ. ಹತ್ತನೆಯವನು ಸತ್ತಿಲ್ಲ, ಬದುಕಿದ್ದಾನೆ" ಎಂದು ಹೇಳಲು ಅವನಿಗೆ ದಶಮನ ಪರೋಕ್ಷ ಜ್ಞಾನವಾಯಿತು. ಇದರಿಂದ ಇಲ್ಲೆಂಬ ಅಸದಾವರಣವು ನಿವೃತ್ತಿಯಾಯಿತು. ಅನಂತರ ಆಪ್ತ ಪುರುಷನು ಹತ್ತು ಜನರನ್ನು ಸಾಲಾಗಿ ನಿಂದರಿಸಿ, ಒಬ್ಬೊಬ್ಬರನ್ನೇ ಎಣಿಸುತ್ತಾ ಹೋಗಿ, ಕಡೆಗೆ ನೀನೇ ಹತ್ತನೆಯವನೆಂದು ಹೇಳಿದನು. ಆಗ ಅವನು ನಾನೇ ಹತ್ತನೆಯವನಿದ್ದೇನೆಂದು ನಿಶ್ಚಯ ಮಾಡಿದನು. ಇದು ಅಪರೋಕ್ಷ ಜ್ಞಾನವೆನಿ ಸುವದು. ಇದರಿಂದ ಅಭಾನಾವರಣ ನಿವೃತ್ತಿಯಾಗುವದು. ಬಳಿಕ ಎದೆ ಹಣೆ

CC-0. Jangamwadi Math Collection. Digitized by eGangotri

ಗಳನ್ನು ಬಡಕೊಂಡು ಅಳುವದನ್ನು ಬಿಡುವದೇ ಶೋಕನಿವೃತ್ತಿಯು. ಆ ಮೇಲೆ ಮೊದಲಿನಂತೆ ಸಹಜ ಸ್ಥಿತಿಯಿಂದ ಇರುವದೇ ನಿರಂಕುಶವೃತ್ತಿಯೆನಿಸುವದು. "ಈ ದೃಷ್ಟಾಂತದಂತೆ, ಜೀವನು ಸಂಸಾರಾವಸ್ಥೆಯಲ್ಲಿ ಇದ್ದಾಗ್ಯೆ ಸ್ವಯಂಪ್ರಕಾಶ ಮಾದ ತನ್ನ ಪ್ರತ್ಯಗಾತ್ಮಸ್ವರೂಪವನ್ನು ಅರಿಯದಿರುವದೇ ಅಜ್ಞಾನವೆನಿಸುವದು, ಬಳಿಕ ಆತ್ಮವಿಚಾರ ಕಾಲದಲ್ಲಿ ಚಿದ್ರೂಪನಾದ ಆತ್ಮನು ಇಲ್ಲ. ತೋರುವದಿಲ್ಲ ಎಂದು ಹೇಳುವದೇ ಉಭಯಾವರಣಗಳೆನಿಸುತ್ತವೆ. ಸ್ಥೂಲ ಸೂಕ್ಷ್ಮ ಶರೀರಗಳಲ್ಲಿ ನಾನೆಂಬ ಅಭಿಮಾನವನ್ನು ಮಾಡಿ ನಾನೇ ಕರ್ತೃ ನಾನೇ ಭೋಕ್ತೃ ಎಂದು ಪುನಃ ಪುನಃ ಜನನ ಮರಣಗಳನ್ನು ಅನುಭವಿಸುವದೇ ವಿಕ್ಷೇಪವು. ಬಳಿಕ ಆವಾಂತರ ಶೃತಿಯಿಂದಲೂ ವಿಶ್ವಾಸದಿಂದಲೂ ಸ್ವಯಂಪ್ರಕಾಶ ಆತ್ಮನು ಇದ್ದಾನೆಂದು ತಿಳಿಯುವದೇ ಪರೋಕ್ಷಜ್ಞಾನವು. ಇದು ಅಸದಾರಣವನ್ನು (ಇಲ್ಲೆಂಬುದನ್ನು) ನಿವೃತ್ತಿ ಮಾಡುತ್ತದೆ. ಅನಂತರ ಗುರುಗಳ ಮಹಾವಾಕ್ಯೋಪದೇಶದಿಂದ ನಾನೇ ಸ್ವಯಂಪ್ರಕಾಶ ಬ್ರಹ್ಮರೂಪನೆಂದು ತಿಳಿಯುವದೇ ಅಪರೋಕ್ಷಜ್ಞಾನವೆನಿಸುವದು. ಇದು ಅಭಾನಾವರಣವನ್ನು (ತೋರುವದಿಲ್ಲವೆಂಬುದನ್ನು) ನಿವೃತ್ತಿಮಾಡುತ್ತದೆ. ಬ್ರಹ್ಮಾಭಿನ್ನ ಪ್ರತ್ಯಗಾತ್ಮಸ್ವರೂಪ ಸಾಕ್ಷಾತ್ಕಾರದಿಂದ ಕರ್ತೃತ್ವ ಭೋಕ್ತೃತ್ವರೂಪ ಸಂಸಾರ ದುಃಖ ತ್ಯಾಗವೇ ವಿಕ್ಷೇಪಾಭಾವರೂಪ ಶೋಕನಿವೃತ್ತಿಯು. ಆಮೇಲೆ ಕೃತಕೃತ್ಯನಾಗಿ ಸಹಜ ಸ್ವರೂಪ ಸ್ಥಿತಿಯಿಂದ ಇರುವದೇ ನಿರಂಕುಶ ವೃತ್ತಿಯೆನಿಸುವದು.

ಜೀವನಿಗೆ ಪ್ರಾಪ್ತಗಳಾದ ಈ ಏಳು ಅವಸ್ಥೆಗಳಲ್ಲಿ ಮೊದಲಿನ ಮೂರು ಅನಿವಸ್ಥೆಗಳು ಭಂಧಕ್ಕೆ ಕಾರಣಗಳಾಗಿರುತ್ತವೆ. ಪರೋಕ್ಷಾಪರೋಕ್ಷಗಳೆಂಬ ಎರಡು ಆವಸ್ಥೆಗಳು ಸಂಸಾರ ನಿವೃತಿಗೆ ಕಾರಣಗಳಾಗಿರುತ್ತವೆ. ಶೋಕ ನಿವೃತ್ತಿ ನಿರಂಕುಶವೃತ್ತಿಗಳೆಂಬೆರೆಡು ಮೋಕ್ಷ ಫಲರೂಪಗಳಾಗಿರುತ್ತವೆ.

ಅರ್ಥಾತ್ ದಶಮ ಪುರುಷನ ಅಳೋಣವು ಕಡೆಗೆ ಎಲ್ಲಾಹೇಗೆ ಮಿಥ್ಯೆ ಆಗಿರುತ್ತದೆಯೋ, ಹಾಗೆಯೇ ಈ ಸಂಸಾರ ದುಃಖವಾದರೂ ಕಡೆಗೆ ಸುಳ್ಳು ಇರುವದು ಎಂದು ನುಡಿಯುತ್ತಾನೆ. ಮತ್ತು ತನ್ನ ಹತ್ತರ ಮುಮುಕ್ಷುಗಳು ಬಂದರೆ ಅವರಿಗೆ ಸ್ವರೂಪಬೋಧ ಮಾಡುತ್ತಾನೆ. ಮತ್ತು ತಾನೊಬ್ಬನೇ ಇದ್ದರೆ, ತನ್ನ ಸ್ವರೂಪವನ್ನು ಚಿಂತನಮಾಡುವನು. ಜ್ಞಾನಿಗಳು ಬಂದರೆ ಅವರೊಡನೆ ಸಂವಾದ ಮಾಡುವನು ಈ ರೀತಿ ಜ್ಞಾನಾಭ್ಯಾಸವನ್ನು ಮಾಡುತ್ತಿರುತ್ತಾನೆ. ಕನ್ನಡಿಯು ಕಪ್ಪಿನಿಂದ ಮುಚ್ಚಿಕೊಂಡಂತೆ, ಬೂದಿಮುಚ್ಚಿದ ಕೆಂಡದಂತೆ, ತನ್ನ ಸಚ್ಚಿದಾನಂದ ಸ್ವರೂಪುಜ್ಞಾತೃತ್ವ (ಜೀವತ್ವ) ಕರ್ತೃತ್ವ ಭೋಕ್ತೃತ್ವ ಮೊದಲಾದವುಗಳಿಂದ ಮುಚ್ಚಲ್ಪಟ್ಟಿರುವದೆಂದು ತಿಳಿದು, ಅಹಂಕಾರ ಸಂಬಂಧವಾದ ಜ್ಞಾತೃತ್ವವನ್ನು, ಬುದ್ಧಿಯ ಸಂಬಂಧವಾದ ಕರ್ತೃತ್ವ ಭೋಕ್ತೃತ್ವಗಳನ್ನೂ, ಮನ

CC-0. Jangamwadi Math Collection. Digitized by eGangotri

ಸ್ಸಿನ ಸಂಬಂಧಗಳಾದ ಶೋಕ ಮೋಹಾದಿಗಳನ್ನೂ, ಪ್ರಾಣ ಸಂಬಂಧಗಳಾದ ಹಸಿವೆ ನೀರಡಿಕೆಗಳನ್ನೂ, ದೇಹಸಂಬಂಧಗಳಾದ ಜನನ ಮರಣಾದಿಗಳನ್ನೂ, ಕಿತ್ತು ತೆಗೆದುಹಾಕಿ; ಅಸಂಗ ಅದ್ವಯ ನಿರುಪಮ ಲಕ್ಷಣಾತ್ಮಕವಾದ ತನ್ನ ಸ್ವರೂಪವನ್ನೇ ಯಾವಾಗಲೂ ನೋಡುತ್ತಿರುತ್ತಾನೆ, ಈ ಪ್ರಕಾರ ಆಸಂಗ ಸ್ಥಿತಿಯನ್ನು ಪ್ರಾಪ್ತಿಮಾಡಿಕೊಂಡು ಅನಂತರ ನಾನು ಸಂಗಿಯೇ ಅಸಂಗಿಯೇ.ಎಂಬ ಸಂಶಯವಿಲ್ಲದೆ ನಿಶ್ಚಯ ಬುದ್ಧಿಯಿಂದ ಇರುವನು.

ಒಳಿಕ; ಬೀಜ ರೂಪಗಳೆಂಬ ಮೂರು ಅಂಗಗಳಿಂದ ಕೂಡಿ ಜ್ಞಾನವಿರುತ್ತದೆ. ಇಂಥಾ ಜ್ಞಾನದಿಂದ ಯುಕ್ತನಾದವನೇ ಮೂರನೇ ಆಸಂಗ ಭೂಮಿಕೆಯುಳ್ಳವನೆಂದು ಪ್ರತಿಪಾದನ ಮಾಡುತ್ತಾರೆ.

ಜ್ಞಾನಕೆ ಬೀಜಂ ರೂಪಂ ಕಾರ್ಯ |
ತಾನುಂಟವನರಿವುದು ಸುವಿಚಾರ್ಯ ||
ಶ್ರವಣಾದಿಕವೇ ಬೀಜಮಿದೀಗ |
ಅವು ಶ್ರುತಿಗೇಳ್ವುದು ಯುಕ್ತ್ಯನುಯೋಗ ||
ಅಹಮಾತ್ಮರನು ಪೃಥಕ್ಕರಿಸುವದು |
ಸಹಜವದಕೆ ರೂಪೆಂದೆನಿಸುವದು ||
ಮತ್ತಾ ಹಮ್ಮಿನೊಳಿಹ ಸಂಸಾರ |
ಮೊತ್ತಂಬರಿಸುವ ದುಃಖವಿಚಾರ ||
ತೋರಿದೊಡವಕಾತ್ಮನು ಸಾಕ್ಷಿಕನು |
ಬೇರದರಿಂದವೆ ಸುಖಿ ಚಿನ್ಮಯನು ||
ಎಂಬುದೆ ಕಾರ್ಯವಿದನು ಬಲ್ಲವನು |
ನಂಬಾ ನಿಸ್ಸಂಗತೆಯುಳ್ಳವನು ||೧೧||

ಟೀಕಾ:— ಜ್ಞಾನಕ್ಕೆ=ಅರುವಿಗೆ, ಬೀಜಂ=ಹೇತು, ರೂಪಂ=ಸ್ವರೂಪು, ಕಾರ್ಯ=ಫಲವು, ತಾನುಂಟು=ಇರುವವು, ಸುವಿಚಾರ್ಯ=ವಿವೇಕವುಳ್ಳ ಶಿಷ್ಯನೇ!, ಅವನು=ಆ ಅಂಗಗಳನ್ನು, ಅರಿವುದು=ತಿಳಿವುದು, ಈಗ=ಸದ್ಯಕ್ಕೆ, ಶ್ರವಣಾದಿಕವೇ=ಶ್ರವಣ ಮನನ ನಿಧಿಧ್ಯಾಸಗಳೇ. ಬೀಜಂ=ಕಾರಣವು, ಅವು=ಶ್ರವಣಾಧಿಕವು, ಶ್ರುತಿಗೇಳ್ವುದು=ಉಪನಿಷತ್ತನ್ನು ಕೇಳುವದು, ಯುಕ್ತಿ=ಮನನ ಅನುಯೋಗ=ನಿಧಿಧ್ಯಾಸನ, ಅಹಮಾತ್ಮರನು=ಅಹಂಕಾರ ಆತ್ಮರನ್ನು, ಪೃಥಕ್ಕರಿಸುವದು=ಬೇರೆ ಮಾಡುವದು, ಅದಕೆ=ಜ್ಞಾನಕ್ಕೆ, ರೂಪೆಂದೆನಿಸುವದು=ಸ್ವರೂಪವೆನಿಸುವದು, ಸಹಜವು=ಸ್ವಭಾವಿಕವು, ಮತ್ತಂ=ಅನಂತರ, ಆಹಮ್ಮಿನೊಳಿಹ=ಆ ಅಹಂಕಾರದೊಳಗಿರುವ, ಸಂಸಾರಮೊತ್ತಂ=ಸಂಸಾರ ಸಮೂಹವು, ಬರಿಸುವ=ಬರುವ, ದುಃಖ ವಿಚಾರ=ಕಷ್ಟಗಳ ವಿಚಾರ, ತೋರಿದೊಡೆ=ಪ್ರತೀತಿಯಾದರೂ,

CC-0. Jangamwadi Math Collection. Digitized by eGangotri

ಅವಕೆ=ಆ ಸಂಸಾರ ದುಃಖಗಳಿಗೆ, ಆತ್ಮನು=ಪ್ರತ್ಯಗಾತ್ಮನು, ಸಾಕ್ಷಿಕನು=ದೃಕ್ ರೂಪನು, ಬೇರೆ=ಪೃಥಕ್ಕಾಗಿದ್ದಾನೆ, ಅದರಿಂದವೇ=ಈ ಕಾರಣದಿಂದ, ಸುಖಿ= ಆನಂದನೂ, ಚಿನ್ಮಯನು=ಜ್ಞಾನ ಸ್ವರೂಪನೂ, ಎಂಬುದೇ=ಹೀಗೆ ಅನ್ನುವದೇ, ಕಾರ್ಯವು=ಫಲವು, ಇದನು=ಇದನ್ನು, ಬಲ್ಲವನು=ತಿಳಿದವನು, ಆ ನಿಸ್ಸಂಗತೆ ಯುಳ್ಳವನು=ಉಕ್ತ ಅಸಂಗ ಭೂಮಿಕೆಯುಳ್ಳವನು, ನಂಬು=ವಿಶ್ವಾಸವಿಡು.

ತಾತ್ಪರ್ಯ:— ಎಲೈ ವಿವೇಕಿಯಾದ ಶಿಷ್ಯನೇ ಕೇಳು! ಜ್ಞಾನಕ್ಕೆ ಬೀಜ, ರೂಪ, ಕಾರ್ಯಗಳೆಂದು ಮೂರಿರುವವು. ಅವುಗಳನ್ನು ಹೇಳುತ್ತೇನೆ ಕೇಳು. ಶ್ರವಣ, ಮನನ, ನಿಧಿಧ್ಯಾಸಗಳೇ ಜ್ಞಾನಕ್ಕೆ ಬೀಜಗಳು ಆ ಶ್ರವಣವು ಅಂಗ! ಅಂಗಿ ಭೇದದಿಂದ ಎರಡು ಪ್ರಕಾರವಾಗಿರುತ್ತದೆ. ಮೊದಲು ಗುರುಗಳಿಂದ ಮಹಾವಾಕ್ಯೋಪದೇಶವೇ ಅಂಗಿ ಶ್ರವಣವೆನಿಸುವದು. ಬಳಿಕ ಸಂಶಯ ನಿವೃತ್ಯರ್ಥವಾಗಿ ಉಪಕ್ರಮೋಪಸಂಹಾರಾದಿಷಡ್ಲಿಂಗ ಪೂರ್ವಕ ವೇದಾಂತ ವಾಕ್ಯಗಳನ್ನು ಶ್ರವಣ ಮಾಡುವದೇ ಎರಡನೆಯದೇ ಲಿಂಗವೆನಿಸುವದು. ಶ್ರವಣ ಮಾಡಿದಂಥಾ ಅರ್ಥವನ್ನು ಯುಕ್ತಿ, ತರ್ಕ, ಅನುಮಾನಗಳಿಂದ ನಿಶ್ಚಯಮಾಡುವದೇ ಮನನವೆನಿಸುವದು. ಆ ನಿಶ್ಚಯಿಸಲ್ಪಟ್ಟ ಅರ್ಥದಲ್ಲಿ ಅಂತಃಕರಣದ ಏಕಾಗ್ರತೆಯೇನಿಧಿಧ್ಯಾಸನವೆನಿಸುವದು. ಇವು ವೃಕ್ಷಕ್ಕೆ ಬೀಜವಿರುವಂತೆ ಜ್ಞಾನಕ್ಕೆ ಬೀಜಗಳಾಗಿರುತ್ತವೆ. ಬಳಿಕ ಅನ್ಯೋನ್ಯಾಧ್ಯಾಸ ರೂಪಮಾದ ಹೃದಯಗ್ರಂಥಿರೂಪ ಅಹಮಾತ್ಮರ ಬೆರಿಕೆಯನ್ನು ಬೇರ್ಪಡಿಸುವದೇ ಜ್ಞಾನದ ರೂಪೆನಿಸುವದು. ಹೇಗಂದರೆ, ಜಡವಾದ ಅಹಂಕಾರವು ತನ್ನ ಕರ್ತೃತ್ವ ಭೋಕ್ತೃತ್ವ ಧರ್ಮಗಳನ್ನು ಅಸಂಗಾತ್ಮನಲ್ಲಿ ತೋರಿಸುವದು. ಅಸಂಗಾತ್ಮನ ಚೈತನ್ಯಧರ್ಮವು ಜಡವಾದ ಅಹಂಕಾರದಲ್ಲಿ ತೋರುವದು. ಅರ್ಥಾತ್ ತಪ್ತಲೋಹದಂತೆ ಅಹಂಕಾರಕ್ಕೂ ಆತ್ಮನಿಗೂ ಪರಸ್ಪರ ಅಧ್ಯಾಸವಾಗಿರುವದು. ಈ ಅಧ್ಯಾಸವನ್ನು ಅನ್ವಯ ವ್ಯತಿರೇಕ ವಿಚಾರದಿಂದ ಬೇರ್ಪಡಿಸುವದೇ ಜ್ಞಾನದ ರೂಪವೆನಿಸುವದು. ಬಳಿಕ ಉಕ್ತರೀತಿಯಿಂದ ಅಹಂಕಾರ ತನಗೆ ಬೇರೆಂದು ತಿಳಿದರೂ, ಅಹಂಕಾರ ಸಂಬಂಧಗಳಾದ ಕರ್ತೃತ್ವ ಭೋಕ್ತೃತ್ವ ಸುಖದುಃಖಾದಿಗಳು ಅಹಂಸುಖೀ ಅಹಂದುಃಖೀ ಹೀಗೆಂದು ಪ್ರತೀತಿಯಾದಾಗ್ಯಾದರೂ, ಅಹಂಕಾರ ಮತ್ತು ಅದರ ಧರ್ಮಾದಿಗಳಿಗೆ ಪ್ರತ್ಯಗಾತ್ಮನಾದ ನಾನು ಆಕಾಶದಂತೆ, ಚಿದಾನಂದ ಅಸಂಗ ಸಾಕ್ಷಿಯಾಗಿರುವನೆಂದು ನಿಶ್ಚಯ ಮಾಡುವದೇ ಕಾರ್ಯವೆನಿಸುವದು. ಈ ಪ್ರಕಾರ ಯಾವನು ಯಥಾರ್ಥ ತಿಳಿಯುವನೋ ಅವನು ಅಸಂಗ ಭೂಮಿಕೆಯುಳ್ಳವನು.

ಬಳಿಕ; ಅಸಂಗ ನಾಮಕ ಭೂಮಿಕೆಯು ಹೇಗೆ ತೋರುತ್ತದೆ? ಎಂದು ಶಿಷ್ಯನು ಪ್ರಶ್ನೆಮಾಡಲು ಗುರುಗಳು ಹೇಳುತ್ತಾರೆ.

CC-0. Jangamwadi Math Collection. Digitized by eGangotri

ಮೂರನೆಯೆಸೆವೀ ಭೂಮಿಕೆ ತಾನು ‖
ತೋರುತ್ತಿಹುದೆಂತೆನೆ ನಿಜಸೂನು‖
ಅಲ್ಲಿ ಮೊದಲು ಸಾಮಾನ್ಯಾಸಂಗ
ಬಲ್ಲನೆ ಬಳಿಕ ವಿಶೇಷಾಸಂಗ‖

ಟೀಕಾ:— ಎಸೆವ=ಶೋಭಿಸುವ, ಈ ಮೂರನೇ=ಈ ಮೂರನೇಸಂಖ್ಯಾಕವಾದ, ಭೂಮಿಕೆ=ಅಸಂಗಭೂಮಿಕೆಯು, ತಾನು=ಅದು, ಎಂತು=ಹೇಗೆ, ತೋರುತ್ತಿಹುದು=ಪ್ರತೀತಿಯಾಗುತ್ತಿರುವದೆಂದು, ನಿಜಸೂನು=ಸುಪುತ್ರನು, ಎನೆ=ಅನ್ನಲಾಗಿ, ಬಲ್ಲನೆ=ಬುದ್ಧಿವಂತನಾದ ಶಿಷ್ಯನೇ ಅಲ್ಲಿ=ಆ ಭೂಮಿಕೆಯಲ್ಲಿ, ಮೊದಲು=ಪ್ರಥಮದಲ್ಲಿ ಸಾಮಾನ್ಯಾಸಂಗ=ಸಾಧಾರಣವಾದ ಅಸಂಗವು, ಬಳಿಕ=ಅನಂತರ ವಿಶೇಷಾಸಂಗ=ಶ್ರೇಷ್ಠವಾದ, ಅಸಂಗವು (ಇರುವವು)

ತಾತ್ಪರ್ಯ:—ಉಕ್ತ ಅರ್ಥವನ್ನು ಶಿಷ್ಯನು ಶ್ರವಣಮಾಡಿ ಬಹಳೇ ಆನಂದವುಳ್ಳವನಾಗಿ, ಮತ್ತೂ ಆ ಭೂಮಿಕೆಯು ಹೇಗೆ ಅನುಭವಕ್ಕೆ ಬರುತ್ತದೇ. ಎಷ್ಟು ಪ್ರಕಾರವಾಗಿರುವದು? ಎಂದು ಪ್ರಶ್ನೆಮಾಡಲು, ಅದಕ್ಕೆ ಗುರುಗಳು ಉತ್ತರವನ್ನು ಹೇಳುತ್ತಾರೆ. ಎಲೈ ಅಂತಃಕರಣ ಪರಿಶುದ್ಧನಾದ ಶಿಷ್ಯನೇ! ಕೇಳು. ಆ ಅಸಂಗ ಭೂಮಿಕೆಯು ಎರಡು ಪ್ರಕಾರವಾಗಿರುವದು. ಹೇಗೆಂದರೆ, ದೇಹಾದಿ ಅಹಂಕಾರಗಳಿಗೆ ತಾನು ಸಾಕ್ಷಿಯೆಂದು ತಿಳಿಯುವದೇ ಸಾಮಾನ್ಯಸಂಗವು. ಏನೊಂದು ದೃಶ್ಯ ವಸ್ತುಗಳ ಅಪೇಕ್ಷೆ ಯಿಲ್ಲದೆ ನಿತ್ಯ ಅಸಂಗ ಸ್ವರೂಪನೇ ನಾನೆಂದು ತಿಳಿಯುವದೇ ವಿಶೇಷಾಸಂಗವೆನಿಸುವದು. ಹೀಗೆ ಆ ಭೂಮಿಕೆಯು ಎರಡು ಪ್ರಕಾರವಾಗಿರುವದು.

ಬಳಿಕ:—ಈ ಅಷ್ಟಮಗತಿಯ ಮುಖ್ಯ ತಾತ್ಪರ್ಯವನ್ನು ವರ್ಣಿಸುತ್ತಾರೆ.

ಕಂದ‖ ಗತಿಯೆಂಟನೆಯು ದಿದಕ್ಕತಿ।
ಹಿತಮೆನಿಪ ನಿರೂಪಣಂಗಳೇಕಾದಶಮಂ‖
ತತಿಶಯಮಾಗಿರೆ ತಿಳಿಯ।
ಲ್ಪ್ರತಿಪಾದಿತವಿಲ್ಲಿ ನಿಜಕೆ ನಿಸ್ಸಂಗತ್ವಂ‖

ಟೀಕಾ:—ಗತಿಯೆಂಟನೆಯದು=ಅಷ್ಟಮಗತಿಯು, ಇದಕ್ಕೆ=ಇದಕೆ, ಅತಿಹಿತಮೆನಿಪ=ಬಹಳ ಯೋಗ್ಯಗಳಾದ, ನಿರೂಪಣಂಗಳ್=ಪದ್ಯಗಳು, ಅತಿಶಯವಾಗಿರೆ=ಅಧಿಕ್ಯಮಾಗಿದ್ದರೂ, ಅಂತು=ಒಟ್ಟಿಗೆ, ಏಕಾದಶಮಂ=ಹನ್ನೊಂದು, ತಿಳಿಯಲ್=ವಿಚಾರಮಾಡಲಾಗಿ, ಇಲ್ಲಿ= ಈ ಗತಿಯಲ್ಲಿ, ನಿಜಕೆ=ಸ್ವರೂಪಕ್ಕೆ, ನಿಸ್ಸಂಗತ್ವಂ=ಅಸಂಗತ್ವವು, ಪ್ರತಿಪಾದಿತವು=ಹೇಳಲ್ಪಟ್ಟಿರುವದು,

CC-0. Jangamwadi Math Collection. Digitized by eGangotri

ತಾತ್ಪರ್ಯ:— ಈ ಎಂಟನೇ ಗತಿಗೆ ಬಹಳ ಮನೋಹರಗಳಾದ ಪದ್ಯಗಳು ಹೆಚ್ಚಿಗಿದ್ದರೂ ಒಟ್ಟಗೆ ಹನ್ನೊಂದೇ ಇರುವವು. ಮುಖ್ಯವಾಗಿ ಈ ಗತಿಯಲ್ಲಿ ತನ ಸ್ವರೂಪವು ಅಸಂಗವಾಗಿರುವದೆಂದೇ ಪ್ರತಿಪಾದಿಸಲ್ಪಟ್ಟರುತ್ತದೆ ಅರ್ಥಾತ್ ಮುಂದಿನ ಗತಿಯಲ್ಲಿ ಈ ಅಸಂಗ ಭೂಮಿಕೆಯನ್ನು ವಿಸ್ತಾರಪೂರ್ವಕ ಹೇಳುವದಕ್ಕಾಗಿ ಇಲ್ಲಿ ಉಪೋದ್ಘಾತ ಮಾಡಿದರೆಂಬ ಭಾವವು.

ಅಂತು ಗತಿವಾಕ್ಯಂ ನಿರೂಪಣ ೮೮ ಕ್ಕೆ ಚರಣ ೧೦೮೮ ಕ್ಕೆ ಮಂಗಳಮಸ್ತು

ನವಮ ಗತಿ

(೯)

ಒಂಭತ್ತನೇ ಗತಿಯಲ್ಲಿ ಹಿಂದಿನ ಗತಿಯಲ್ಲಿ ಹೇಳಿದ ವಿಷಯವನ್ನು ಸಂಕ್ಷೇಪ ಪ್ರತಿಪಾದನ ಮಾಡಿ ಈಗ ಅಸಂಗ ಭೂಮಿಕೆಯನ್ನೇ ಯುಕ್ತಿಯುಕ್ತವಾಗಿ ಹೇಳುತ್ತೇವೆಂದು ಪ್ರತಿಜ್ಞಾ ಮಾಡುತ್ತಾರೆ.

ಸೂತ್ರ॥ ಇಂತೀ ಪರಿ ಭೂಮಿತ್ರಯ|

ಮಂ ತಿಳುಪಿದೆನಲ್ಲಿ ಮೂರನೆಯ ನಿಸ್ಸಂಗ॥
ಕ್ಕಂತುಭಯ ಭೇದವನೀ।
ಗಂತೋರ್ಪೆನನೂನ ಯುಕ್ತಿ ಸಂಗತ ಮಾಗಲ್॥

ಟೀಕಾ:— ಇಂತು=ಈ ಪ್ರಕಾರ, ಈಪರಿ=ಉಕ್ತ ರೀತಿಯಿಂದ, ಭೂಮಿತ್ರಯಮಂ=ಮೂರು ಭೂಮಿಕೆಗಳನ್ನು, ತಿಳುಪಿದೆನು=ಹೇಳಿದೆನು; ಅಲ್ಲಿ=ಆಗತಿಯಲ್ಲಿರುವ, ಮೂರನೆಯ=ಮೂರನೆಯದಾದ, ನಿಸ್ಸಂಗಕ್ಕೆ=ಅಸಂಗ ಭೂಮಿಕೆಗೆ, ಅಂತು=ಒಟ್ಟಗೆ, ಉಭಯ=ಎರಡು ಪ್ರಕಾರಗಳಾದ, ಭೇದವನು=ಭೇದಗಳನ್ನು. ಅನೂನ=ಸಂಪೂರ್ಣ, ಯುಕ್ತಿ=ಯುಕ್ತಿಗಳಿಂದ, ಸಂಗತಮಾಗಲ್=ಕೂಡಿಕೊಳ್ಳುವಹಾಗೆ, ಈಗ=ಸದ್ಯಕ್ಕೆ, ತೋರ್ಪೆನು=ತೋರಿಸುವೆನು.

ತಾತ್ಪರ್ಯ:— ಹಿಂದಿನ ಗತಿಗಳಲ್ಲಿ ಸುಖೇಚ್ಛೆ, ಸದಾತ್ಮ ವಿಚಾರ, ಅಸಂಗಗಳೆಂಬ ಮೂರು ಭೂಮಿಕೆಗಳನ್ನು ಪ್ರತಿಪಾದನ ಮಾಡಿದೆನು. ಆದರೆ, ಆ ಅಸಂಗ ಭೂಮಿಕೆಯು ಸಾಮಾನ್ಯಾಸಂಗ ವಿಶೇಷಾಸಂಗವೆಂಬ ಎರಡು ಪ್ರಕಾರ ಭೇದವಾಗಿರುವದು. ಆ ಎರಡು ಪ್ರಕಾರಗಳಾದ ಭೇದವನ್ನು ಅನೇಕ ಯುಕ್ತಿಗಳಿಂದ ಈಗ ಪ್ರತಿಪಾದನ ಮಾಡುತ್ತೇನೆ. ಅಂದರೆ, ವಿಚಾರ ಮಾಡಲು ಕಾರ್ಯಕ್ಕೆ ಕಾರಣವು ಇಲ್ಲದ್ದರಿಂದ ಎಲ್ಲವೂ ಮಿಥ್ಯೆ ತಾನೇ ಸತ್ಯನು ಆದರಿಂದಲೇ ಅಸಂಗನು ಈ ಮೊದಲಾದ ಯುಕ್ತಿಗಳಿಂದ ವಿಶೇಷಾಸಂಗವನ್ನು ಹೇಳುತ್ತೇವೆ ಎಂಬ ತಾತ್ಪರ್ಯವು.

CC-0. Jangamwadi Math Collection. Digitized by eGangotri

ಬಳಿಕ; ಅಧಿಕಾರಿಯು ಸತ್ಸಂಗ ಮೂಲಕ ಉಪದೇಶ ವಾಕ್ಯವನ್ನು ಕೇಳಿ, ಶುದ್ಧ ಬುದ್ಧಿಯಿಂದ ತನ್ನನ್ನು ತಾನೇ ಕಾಣುತ್ತಾನೆ ಎಂದು ಪ್ರತಿಪಾದನೆಯನ್ನು ಮಾಡುತ್ತಾರೆ.

ಪೊರಗಣ ವಿಷಯದ ಚಿಂತೆಯನುಳಿದು|
ಬಗತ ಗೋಷ್ಠಿಗಳಂ ನೆರೆಗಳೆದು||
ನಿಜ ವೈರಾಗ್ಯದ ಬಲವೆಡೆಗೆಡದೆ|
ಸುಜನರ ಗೋಷ್ಠಿಗಳಂ ಸಲೆ ಬಿಡದೆ||
ತಡೆಯದೆ ಸುವಿಚಾರದ ಭಸಿತವನು|
ಪಿಡಿದಾ ಬುದ್ಧಿಯೆನಿಪ ಮುಕುರವನು||
ಬೆಳಗಿ ವಿಷಯ ಮಲಿನಂ ಗಳೆದಂಗೆ|
ಬಳಿಕಧರೊಳು ತನ್ನಂ ನೋಳ್ಪಂಗೆ||
ಮುಚ್ಚಿದ ಬಗೆಯಂ ಕಳೆದುಳಿದಿರ್ದ|
ಬಚ್ಚ ಬರಿಯ ಸಮಸುಖವೆನಿಸಿರ್ದ||
ನಿಜವೇ ತೋರುವುದಿದಿರಿಟ್ಟಂತೆ|
ಸುಜನನೆ ಕರಗತ ಮಾಣಿಕದಂತೆ|| ||೧||

ಟೀಕಾ:— ಪೊರಗಣ=ಹೊರಗಿನ, ವಿಷಯದ=ಶಬ್ದಾದಿ ವಿಷಯಗಳ, ಚಿಂತೆಯನು=ವ್ಯಸನವನ್ನು, ಉಳಿದು=ಬಿಟ್ಟು, ಬರಿಗತ=ವ್ಯರ್ಥವಾದ, ಗೋಷ್ಠಿಗಳಂ=ಮಾತುಗಳನ್ನು, ನೆರೆ=ಚನ್ನಾಗಿ, ಕಳೆದು=ತ್ಯಜಿಸಿ, ನಿಜವೈರಾಗ್ಯದ=ವಾಸನಾಸಹಿತ ವಿಷಯ ತ್ಯಾಗರೂಪ ವೈರಾಗ್ಯದ, ಬಲವು=ಸಾಮರ್ಥ್ಯವು, ಎಡೆಗೆಡದೆ=ನಷ್ಟವಾಗದೆ. ಸುಜನರ=ಸತ್ಪುರುಷರ, ಗೋಷ್ಠಿಗಳಂ=ಮಾತುಗಳನ್ನು, ಸಲೆ=ಚನ್ನಾಗಿ, ಬಿಡದೆ=ತ್ಯಜಿಸದೆ, ತಡೆಯದೆ=ನಿರಾಕರಿಸದೆ, ಸುವಿಚಾರದ=ಆತ್ಮವಿಚಾರವೆಂಬ, ಭಸಿತವನು=ಭಸ್ಮವನ್ನು ಪಿಡಿದು=ಧರಿಸಿ, ಆ ಬುದ್ಧಿಯೆನಿಪ=ಮತಿಯೆಂಬ, ಮುಕುರವನು=ಕನ್ನಡಿಯನ್ನು, ಬೆಳಗಿ=ಸ್ವಚ್ಛಮಾಡಿ, ವಿಷಯ=ವಿಷಯ ವಾಸನೆಯೆಂಬ, ಮಲಿನಂ=ದೋಷವನ್ನು, ಕಳೆದಂಗೆ=ತೆಗೆದುಹಾಕಿದವನಿಗೆ, ಬಳಿಕ=ಅನಂತರ, ಅದರೊಳು=ಆ ಬುದ್ಧಿಯಲ್ಲಿ, ತನ್ನಂ=ಪ್ರತ್ಯಗಾತ್ಮನಾದ ತನ್ನನ್ನು, ನೋಳ್ಪಂಗೆ=ನೋಡುವವನಿಗೆ, ಮುಚ್ಚಿದ=ಕವಿದ, ಬಗೆಯಂ=ವಾಸನೆಯನ್ನು, ಕಳೆದುಳಿದಿರ್ದ=ತೆಗೆದುಹಾಕಲು ಅವಶೇಷವಾಗಿರುವಂಥಾ, ಬಚ್ಚಬರಿಯ = ಏನೊಂದಿಲ್ಲದ, ಸಮಸುಖವೆನಿಸಿರ್ದ = ಸಮಾನಾನಂದವೆನಿಸಿದ, ನಿಜವೇ=ತನ್ನ ರೂಪವೇ, ಇದಿರಿಟ್ಟಂತೆ=ಪ್ರತ್ಯಕ್ಷದಂತೆ, ಸುಜನನೆ=ಎಲೈ ಉತ್ತಮನಾದ ಶಿಷ್ಯನೇ, ಕರಗತ=ಕೈಯಲ್ಲಿರುವ, ಮಾಣಿಕದಂತೆ=ಮಾಣಿಕದಹಾಗೆ, ತೋರುತಿಹುದು=ಅಪರೋಕ್ಷವಾಗುವದು.

CC-0. Jangamwadi Math Collection. Digitized by eGangotri

ತಾತ್ಪರ್ಯ:—ಎಲೈ ಶಿಷ್ಯನೇ ಕೇಳು. ಅಸಂಗ ಬೂಮಿಕೆಯನ್ನು ಸಾಧಿಸುವಂಥಾ ಪುರುಷನ ಮನ, ವಾಣಿ, ಬುದ್ಧಿಗಳು ಹೇಗಿರುತ್ತವೆಂಬುದನ್ನು ಹೇಳುತ್ತೇನೆ. ಆ ಪುರುಷನು ಶರೀರಕ್ಕಿಂತಲೂ ಹೊರಗಿರುವ ಶಬ್ದಸ್ಪರ್ಶಾದಿ ಅಸದ್ವಿಷಯಗಳನ್ನು ಮನಸ್ಸಿನಿಂದ ಚಿಂತನೆ ಮಾಡುವುದಿಲ್ಲ. ಮತ್ತು ಪರಮಾರ್ಥ ವಿಮುಖರಾದ ಜನರೊಡನೆ ಸಹವಾಸ ಮಾಡಿ, ಅವರೊಡನೆ ಪ್ರಯೋಜನ ಹೀನವಾದ ವ್ಯರ್ಥ ಮಾತುಗಳನ್ನಾಡುವದಿಲ್ಲ. ಒಂದು ವೇಳೆ ಮನ ಇಂದ್ರಿಯಾದಿಗಳು ವಿಷಯಗಳ ಕಡೆಗೆ ಎಳೆದರೂ, ವೈರಾಗ್ಯ ಸಂಸ್ಕಾರದ ಬಲದಿಂದ ಪುನಃ ತನ್ನ ಸ್ವಾಧೀನವನ್ನು ಮಾಡಿಕೊಳ್ಳುತ್ತಾನೆ. ಅನಂತರ ಸತ್ಪುರುಷನನ್ನು ಹುಡಿಕಿ ಅವರ ಸಹವಾಸಮಾಡಿ ಅವರ ಸದ್ವಾಕ್ಯಗಳನ್ನು ಶ್ರವಣ ಮಾಡುತ್ತಾನೆ. ಈ ಸತ್ಸಂಗಾದಿಗಳಿಂದ ಅವನಲ್ಲಿ ವಿಚಾರವು ಉತ್ಪನ್ನವಾಗುತ್ತದೆ. ವಿಷಯ ಚಿಂತನೆಯೆಂಬ ಮಲಿನದಿಂದ ಕೂಡಿದ ಬುದ್ಧಿಯೆಂಬ ಕನ್ನಡಿಯನ್ನು, ವಿಚಾರವೆಂಬ ಭಸ್ಮದಿಂದ ಚನ್ನಾಗಿಸ್ವಚ್ಛಮಾಡಿ, ಆ ಸ್ವಚ್ಛವಾದ ಬುದ್ಧಿಯಿಂದಲೇ ತನ್ನನ್ನು ತಾನು ಕಾಣುತ್ತಾನೆ. ಮೇಘಗಳಿಂದ ಮುಚ್ಚಿದ ಸೂರ್ಯನಂತೆ ಅನಾತ್ಮಭಾವನೆಗಳಿಂದ ಆತ್ಮನು ಮುಚ್ಚಲ್ಪಟ್ಟಿರುತ್ತಾನೆ. ವಾಯುವು ಮೇಘವನ್ನು ತೊಲಗಿಸುತ್ತಿರಲಿಕ್ಕೆ ಇದ್ದ ಸೂರ್ಯನೇ ಹೇಗೆ ಹೊಳೆಯುವನೋ, ಹಾಗೇ ಆತ್ಮ ವಿಚಾರದಿಂದ ಅನಾತ್ಮ ಭಾವನೆಗಳು ಹೋಗಲು ಇದ್ದ ಸ್ವಯಂಪ್ರಕಾಶ ಆತ್ಮನೇ ಹೊಳೆಯುತ್ತಾನೆ • ಈ ಸ್ವಯಂಪ್ರಕಾಶ ಕೇವಲ ಸುಖರೂಪನಾದ ಪ್ರತ್ಯಗಾತ್ಮನು ಕೈಯಲ್ಲಿರುವ ರತ್ನದಂತೆ ಅಪರೋಕ್ಷನಾಗಿರುವನು. ಅರ್ಥಾತ್ ಸುಖೇಚ್ಛು, ಸದಾತ್ಮ ವಿಚಾರ ಅಸಂಗ ಭೂಮಿಕೆಗಳನ್ನು ಅಭ್ಯಾಸ ಮಾಡಿರುವನೆಂದು ಹೇಳಲ್ಪಟ್ಟಿತು.

ಬಳಿಕ:— ಅಪರೋಕ್ಷನಾದ ತಾನು ಸಚ್ಚಿದಮಲ ಪೂರ್ಣನಾಗಿರುವದರಿಂದ ನಾಲ್ಕು ಕರ್ಮದ ಫಲವು ನಾನಲ್ಲವೆಂದು ತಿಳಿಯುತ್ತಾನೆ.

ಅನೆಯನಾದಿಯು ಸದ್ರೂಪಾಗಿ।
ಆನೇನಿಷ್ಕಳ ಚಿದ್ರೂಪಾಗಿ॥
ಏಂದುಂನಿರ್ಮಳವಕ ಸುಖವಾಗಿ।
ಒಂದೆನಗನ್ಯಂ ಬೇರಿಲ್ಲಾಗಿ॥
ಕೊಡದಂತಿರೆ ಯುತ್ಪಾದ್ಯನು ಮಲ್ಲ।
ಜಡದಧಿಯಂತೆ ವಿಕಾರ್ಯನು ಮಲ್ಲ॥
ದ್ವಿಜನಂತಿರೆ ಸಂಸ್ಕಾರ್ಯನು ಮಲ್ಲ।
ನಿಜನಾಕದ ವೋಲ್ ಪ್ರಾಪ್ಯನು ಮಲ್ಲ॥
ನೆರೆಯುದರಿಂ ನಾಲ್ಕೀ ಕರ್ಮಕ್ಕೆ।
ಗುರಿಯಾನಲ್ಲದರಿಂ ಮೋಕ್ಷಕ್ಕೆ॥
ತಾನಲ್ಲಂ ಸಾಧಕನೆಂಬವನು।
ನಾನಾ ಕರ್ಮದ ಸೋಂಕಿಲ್ಲದನು ॥೨॥

CC-0. Jangamwadi Math Collection. Digitized by eGangotri

ಟೀಕಾ:—ಆನೆಯು=ನಾನೇ, ಅನಾದಿಯು=ಉತ್ಪತ್ತಿಯಿಲ್ಲದ, ಸದ್ರೂಪಾಗಿ=ಯಾವಾಗಲೂ ಇರುವವನಾದ್ದರಿಂದ, ಆನೇ=ನಾನೇ, ನಿಷ್ಕಳ=ನಿರವಯವನು, ಚಿದ್ರೂಪಾಗಿ=ನಾಶವಿಲ್ಲದ ಜ್ಞಾನಸ್ವರೂಪನಾಗಿ, ಎಂದುಂ=ಯಾವಾಗಲೂ, ನಿರ್ಮಳವಹ=ಪರಿಶುದ್ಧವಾದಂಥಾ, ಸುಖವಾಗಿ=ಸುಖರೂಪವಾದಂಥಾ, ಒಂದು=ಒಂದು ಪದಾರ್ಥವು, ಎನಗೆ=ನನಗೆ, ಅನ್ಯಂ=ಭಿನ್ನವಾಗಿ, ಬೇರಿಲ್ಲ=ಬೇರೆಯಾಗಿರುವದಿಲ್ಲ, ಕೊಡದಂತೆ=ಘಟದಂತೆ, ಇರೆ=ಇರಲಾಗಿ, ಉತ್ಪಾದ್ಯನು=ಹುಟ್ಟಲಿಕ್ಕೆ ಯೋಗ್ಯನಾದವನು, ಅಲ್ಲ=ಆಗುವದಿಲ್ಲ, ಜಡದಧಿಯಂತೆ=ಜಡವಾದ ಮೊಸರಿನಂತೆ, ವಿಕಾರ್ಯನುಮಲ್ಲ=ರೂಪಾಂತರವಾಗುವನಲ್ಲ, ದ್ವಿಜನಂತಿರೆ=ಬ್ರಾಹ್ಮಣನಂತಿದ್ದರೆ, ಸಂಸ್ಕಾರ್ಯನುಮಲ್ಲ=ದೋಷನಿವೃತ್ತಿ ಗುಣ ಪ್ರಾಪ್ತಿಯಾಗುವವನಲ್ಲ, ನಿಜ=ಸತ್ಯವಾದ, ನಾಕದವೋಲ್=ಸ್ವರ್ಗದಹಾಗೆ, ಪ್ರಾಪ್ಯನುಮಲ್ಲ=ಹೊಂದಲಿಕ್ಕೆ ಯೋಗ್ಯನಾದವನು ಅಲ್ಲ, ಅದರಿಂ=ಈ ಕಾರಣದಿಂದ, ನೆರೆ=ಚನ್ನಾಗಿ, ನಾಲ್ಕೀ ಕರ್ಮಕ್ಕೆ=ನಾಲ್ಕು ಕರ್ಮದ ಫಲಗಳಿಗೆ, ಗುರಿಯಾನಲ್ಲ=ಹೊಂದತಕ್ಕವನಲ್ಲ, ಅದರಿಂ=ಆದ್ದರಿಂದ, ಮೋಕ್ಷಕ್ಕೆ=ಮುಕ್ತಿಗೆ, ಸಾಧಕನು=ಸಾಧಿಸುವವನು, ತಾನಲ್ಲ=ತಾನಲ್ಲ, ಎಂಬುವನು=ಅನ್ನುವನು, ನಾನಾ ಕರ್ಮದ=ಅನೇಕ ಕರ್ಮಗಳ, ಸೋಂಕಿಲ್ಲದನು=ಸ್ಪರ್ಶಮಾಡದವನು.

ತಾತ್ಪರ್ಯ:-ಅಪರೋಕ್ಷ ಸ್ವರೂಪನಾದ ತಾನು,ಸದ್ರೂಪನಾಗಿರೋಣದರಿಂದ ಕೊಡದಂತೆ ಉತ್ಪಾದ್ಯನು ಅಲ್ಲ. ಅಂದರೆ ಕೊಡುವು ಕುಂಬಾರನಿಂದ ಉತ್ಪನ್ನವಾಗಲಿಕ್ಕೆ ಯೋಗ್ಯವಾಗಿರುತ್ತದೆ. ಆದರಂತೆ, ತಾನಲ್ಲ. ಯಾಕಂದರೆ, ತಾನು ಮೊದಲೇ (ಸದ್ರೂಪ) ಇದ್ದವನಾದ್ದರಿಂದ; ತನಗೆ ಉತ್ಪತ್ತಿಯು ಇಲ್ಲ ಎಂದೂ ಉತ್ಪನ್ನನಾಗುವವನಲ್ಲ. ಮತ್ತು ಮೊಸರಿನಂತೆ ವಿಕಾರವುಳ್ಳವನೂ ಅಲ್ಲ. ವಿಕಾರ ವೆಂದರೆ, ತನ್ನ ಪೂರ್ವ ಸ್ಥಿತಿಯನ್ನು ಬಿಟ್ಟು ರೂಪಾಂತರ ಹೊಂದುವದು. ಇಂಥಾ ವಿಕಾರ ಹೊಂದುವದಕ್ಕೆ ಯೋಗ್ಯನಾದವನು ತಾನಲ್ಲ. ಯಾಕಂದರೆ, (ನಿಷ್ಕಳ) ನಿರುವ ಯವನಾಡ್ದರಿಂದಲೂ ಚಿದ್ರೂಪನಾದ್ದರಿಂದಲೂ ತಾನು ವಿಕಾರಿಯಾಗುವದಿಲ್ಲ. ದ್ವಿಜನಂತೆ ತಾನು ಸಂಸ್ಕಾರ್ಯವುಳ್ಳವನೂ ಅಲ್ಲ. ಅಂದರೆ, ಬ್ರಾಹ್ಮಣನಿಗೆ ಮೊದಲು ಶೂದ್ರತ್ವವಿರುತ್ತದೆ. ಮುಂಜಿಯನ್ನು ಮಾಡೋಣದರಿಂದ ಶೂದ್ರತ್ವರೂಪ ದೋಷ ನಿವೃತ್ತಿಯಾಗಿ ಬ್ರಾಹ್ಮಣತ್ವರೂಪ ಗುಣ ಪ್ರಾಪ್ತಿಯಾಗುವದು, ಇದಕ್ಕೆ ಸಂಸ್ಕಾರವೆನ್ನುತ್ತಾರೆ. ಆ ಸಂಸ್ಕಾರವು ದೋಷ ನಿವೃತ್ತಿಯೆಂತಲೂ ಗುಣಪ್ರಾಪ್ತಿಯೆಂತಲೂ ಎರಡು ಪ್ರಕಾರವಾಗಿರುತ್ತದೆ. ಈ ಎರಡೂ ರೀತಿಯನ್ನು ಮೇಲಿನ ದೃಷ್ಟಾಂತದಲ್ಲಿ ಕೊಟ್ಟಿರುತ್ತದೆ. ಇದರಂತೆ ಅಪರೋಕ್ಷ ಸ್ವರೂಪನಾದ ತಾನು ದೋಷ ನಿವೃತ್ತ್ಯರ್ಥವಾಗಿಯೂ ಗುಣಪ್ರಾಪ್ತ್ಯರ್ಥವಾಗಿಯೂ ಪ್ರವೃತ್ತಿಯುಳ್ಳವನಾಗುವದಿಲ್ಲ. ಯಾಕಂದರೆ, ತಾನು ಮೊದಲೇ ಯಾವಾಗಲೂ

CC-0. Jangamwadi Math Collection. Digitized by eGangotri

ನಿರ್ಮಳ ಸ್ವರೂಪ ವಿರೋಣದರಿಂದಲೂ ನಿರ್ಗುಣನಾದ್ದರಿಂದಲೂ ತನಗೆ ಸಂಸ್ಕಾರವೂ ಇಲ್ಲ. ಸ್ವರ್ಗದಂತೆ ತಾನು ಪ್ರಾಪ್ಯನೂ ಅಲ್ಲ. ಅಂದರೆ, ಸ್ವರ್ಗ ಲೋಕವು ಕರ್ಮ ಮಾಡಿದ ಪುರುಷನಿಂದ ಹೊಂದಲಿಕ್ಕೆ ಯೋಗ್ಯವಾಗಿರುತ್ತದೆ. ಅದರಂತೆ. ತಾನಲ್ಲ. ಯಾಕಂದರೆ, ತನಗಿಂತಲೂ ಬೇರೆಯಾವದೂ ಇಲ್ಲದ್ದರಿಂದ ಅರ್ಥಾತ್. ಪೂರ್ಣನಾಗಿರೋಣದರಿಂದ ಪ್ರಾಪ್ಯನೂ ಅಲ್ಲ. ಉತ್ಪಾದ್ಯ,ಪ್ರಾಪ್ಯ,ಸಂಸ್ಕಾರ್ಯ, ವೈಕಾರ್ಯ್ಯಗಳೆಂಬ ನಾಲ್ಕೂ ಕರ್ಮದ ಫಲಗಳಿರುತ್ತವೆ ಹೊರ್ತು ಮೋಕ್ಷರೂಪವಲ್ಲ. ಹೇಗಂದರೆ, ಕರ್ಮಗಳನ್ನು ಮಾಡುತ್ತಿರಲಿಕ್ಕೆ ಅದರ ಸಂಸ್ಕಾರವು ಅಂತಃ ಕರಣದಲ್ಲಿ ಉತ್ಪನ್ನವಾಗಲಿಕ್ಕೆ ಯೋಗ್ಯವಾಗಿರುತ್ತದೆ. ಆದ್ದರಿಂದ ಘಟದಂತೆ ಉತ್ಪಾದ್ಯವೆನಿಸುವದು. ಅನಂತರ ಆ ಸಂಸ್ಕಾರವು ಕರ್ಮ ಪುರುಷನನ್ನು ಕುರಿತು ಸ್ವರ್ಗ ಲೋಕವನ್ನು ಹೊಂದಿಸೋಣದರಿಂದ ಗ್ರಾಮದಂತೆ ಪ್ರಾಪ್ಯ ರೂಪವಾಗಿರುವದು. ಬಳಿಕ ಸ್ವರ್ಗದಲ್ಲಿ ಮನುಜತ್ವಹೋಗಿ ದೇವತ್ವ ಪ್ರಾಪ್ತಿಯಾಗೋಣದರಿಂದ ದ್ವಿಜನಂತೆ ಸಂಸ್ಕಾರ್ಯವೆನಿಸುವದು. ಅನಂತರ ಕೆಲವು ದಿವಸಗಳವರೆಗೆ ಸ್ವರ್ಗಸುಖವನ್ನು ಅನುಭವಿಸುತ್ತಿರಲು ಆ ಸುಖವು ಕ್ರಮೇಣ ಕಡಿಮೆ ಯಾಗುತ ಹೋಗುತ್ತದೆ. ಮತ್ತು ದುಃಖವು ಕ್ರಮಶಃ ವೃದ್ಧಿಹೊಂದುತ್ತದೆ. ಆದ್ದರಿಂದ ವೈಕಾರ್ಯವೆನಿಸುವದು. ಈ ರೀತಿ ಕರ್ಮ ಫಲವು ನಾಲ್ಕು ಪ್ರಕಾರವಾಗಿರುವದು. ಇದಕ್ಕೆ ವಿಲಕ್ಷಣವಾಗಿ ಸದ್ರೂಪ, ವಿಭು, ನಿಷ್ಕಳ ಅಮಲ ಮೋಕ್ಷ ರೂಪನು ತಾನಾಗಿರುತ್ತಾನೆ. ಅಂದರೆ, ಸದಸುಲ ಪೂರ್ಣಸ್ವರೂಪನಾದ ತಾನೇ ಮೋಕ್ಷ ರೂಪನಿರುತ್ತಾನೆ. ಅಂದ ಮೇಲೆ, ಇಂಥವನು ಬೇರೊಂದು ಮೋಕ್ಷಕ್ಕೆ ಹೇಗೆ ಸಾಧಕನಾಗುವನು ? ಎಂದೂ ಆಗಲಾರನು. ಯಾಕಂದರೆ, ಮೃಷ್ಟಾನ್ನ ಭೋಜನದಿಂದ ತೃಪ್ತನಾದವನು ತಂಗುಳನ್ನವನ್ನು ಭಿಕ್ಷೆಬೇಡುವನೇ? ಹೇಳು. ಆದ್ದರಿಂದ ಯಾವ ಮೋಕ್ಷಕ್ಕೋಸುಗ ಯಾವ ಕರ್ಮಗಳನ್ನು ಮಾಡಲಿಕ್ಕೆ ಹೋದಾನು? ಅರ್ಥಾತ್ ಯಾವ ಕರ್ಮಗಳನ್ನೂ ಮಾಡುವದಿಲ್ಲೆಂಬ ತಾತ್ಪರ್ಯವು. ಈಗ ಎರಡು ಮೂರು ಶ್ಲೋಕಗಳಿಂದ ನಡೆವ ವಿಷಯವು ಅಸಂಗ ಭೂಮಿಕೆಯನ್ನು ಹೇಳುವದಕ್ಕೋಸ್ಕರ ಉಪೋದ್ಘಾತವಾಗಿರುವದು.

ಬಳಿಕ; ಅಹಂಕಾರವೇ ಕರ್ಮಗಳನ್ನು ಮಾಡಿ ಅವುಗಳ ಫಲಗಳಾದ ಸುಖದುಃಖಗಳನ್ನು ಅನುಭವಿಸುತ್ತದೆ ಹೊರತು ನಾನಲ್ಲ. ನಾನು ಆ ಅಹಂಕಾರಕ್ಕೆ ಸಾಕ್ಷಿ ಅಸಂಗನಾಗಿದ್ದೇನೆಂದು ಪ್ರತಿಪಾದನ ಮಾಡುತ್ತಾರೆ.

ಜ್ಞಾನಾಭಾಸವೆನಿಪಹಂಕಾರ।
ತಾನೆಸಗಿದ ಕರ್ಮದೊಳು ಶರೀರ॥
ಘಟಿಪುದು ಭೋಗಿಪ ಕರ್ಮ ಪದದೊಳು।
ನಟಿಪುದು ಸುಖದುಃಖಾಕಾರದೊಳು॥

CC-0. Jangamwadi Math Collection. Digitized by eGangotri

ಆ ಸುಖದುಃಖವನನುಭವಿಸುತ್ತ।
ಈ ಸಂಸೃತಿಯೊಳು ಸಂಚರಿಸುತ್ತ॥
ಇಹ ಕಥದಿಂದದು ಕರ್ತನು ತಾನೆ।
ಸಹಜಂಮಾಡಿದ ನುಣುವುದು ತಾನೆ॥
ಅದಕಧಿಕರಣವೆನಿಪ ತನ್ಮಾತ್ರ।
ಪದವಾನದರೊಳ್ಕಿಂಚಿನ್ಮಾತ್ರ॥
ಪುದಿದಿಂತಿಲ್ಲಿರಲಾನು ನಿರಂಗ।
ಅದರಿಂದೆನಗಾದದು ನಿಸ್ಸಂಗ ॥೩॥

ಟೀಕಾ:—ಜ್ಞಾನಾಭಾಸವೆನಿಪ=ಆಭಾಸಚೇತನವೆಂದು ಹೇಳಿಸಿಕೊಳ್ಳುವ, ಅಹಂಕಾರ=ಅಹಮು, ತಾನೆಸಗಿದ=ತಾನುಮಾಡಿದ, ಕರ್ಮದೊಳು=ಕರ್ಮದಿಂದ, ಶರೀರ=ದೇಹವು, ಘಟಿಪುದು=ಪ್ರಾಪ್ತಿಯಾಗುವದು, ಭೋಗಿಪ=ಭೋಗಿಸುವಂಥಾ, ಕರ್ಮಪದದೊಳು=ಕರ್ಮಫಲಗಳಲ್ಲಿ, ನಟಿಪುದು=ತಿರುಗುವದು, ಸುಖದುಃಖಾಕಾರದೊಳು=ಇಷ್ಟಾನಿಷ್ಟಾಕಾರದಿಂದ, ಆ ಸುಖದುಃಖವನು=ಸುಖದುಃಖಗಳನ್ನು, ಅನುಭವಿಸುತ್ತ=ಉಣ್ಣುತ್ತ, ಈ ಸಂಸೃತಿಯೊಳು=ಈ ಸಂಸಾರದಲ್ಲಿ, ಸಂಚರಿಸುತ್ತ=ತಿರುಗುತ್ತ, ಇಹಕಥದಿಂ=ಇರುವಕಾರಣದಿಂದ, ಅದು=ಆ ಅಹಂಕಾರವು, ತಾನೇ=ಸ್ವಯಂ, ಕರ್ತನು=ಕರ್ತೃತ್ವವುಳ್ಳದ್ದಾಗಿರುವದು ಸಹಜಂ=ಸ್ವಭಾವಿಕವಾಗಿ, ಮಾಡಿದನು=ಮಾಡಿದ್ದನ್ನು, ಉಣ್ಣುವದು=ಭೋಗಿಸುವದು, ತಾನೆ=ಅಹಂಕಾರವೇ ಆಗಿರುವದು, ಅದಕೆ=ಆ ಅಹಂಕಾರಕ್ಕೆ, ಅಧಿಕರಣವೆನಿಪ=ಅಧಿಷ್ಠಾನವೆನ್ನಿಸುವಂಥಾ, ತನ್ಮಾತ್ರಪದವಾನು=ಕೇವಲ ಸದ್ರೂಪನಾದವನೇ ನಾನು, ನನಗೆ=ಇಂಥಾ ನನಗೆ, ಅದರೊಳ್=ಆ ಅಹಂಕಾರದಲ್ಲಿ, ಕಿಂಚಿನ್ಮಾತ್ರ=ಸ್ವಲ್ಪು, ಪುದಿದು=ಸಂಬಂಧವಾಗಿ, ಇಂತು=ಈ ಪ್ರಕಾರ, ಇಲ್ಲಿ=ಈ ಶರೀರದಲ್ಲಿ, ಇರಲ್=ಇದ್ದರೂ, ಆನು=ಪ್ರತ್ಯಗಾತ್ಮನಾದ ನಾನು, ನಿರಂಗ=ಶರೀರ ರಹಿತನಾದವನು, ಅದರಿಂದ=ಈ ಕಾರಣದಿಂದ, ಎನಗೆ=ನನಗೆ, ನಿಸ್ಸಂಗ=ಅಸಂಗವು, ಆದುದು=ಪ್ರಾಪ್ತವಾಗಿರುವದು.

ತಾತ್ಪರ್ಯ:— (ಶಂಕಾ) ಪೂರ್ವದಲ್ಲಿ ನಾನು ಕರ್ತನು ಅಲ್ಲ. ಅದ್ದರಿಂದ ಕರ್ಮಗಳನ್ನು ಮಾಡುವುದಕ್ಕೆ ನಾನು ಅಧಿಕಾರಿಯು ಅಲ್ಲ. ಮತ್ತು ನಾನು ಕರ್ಮ, ಕರ್ಮಫಲಗಳನ್ನು ಮುಟ್ಟುವದಿಲ್ಲ ಎಂದು ಹೇಳಿದ್ದಾಯಿತು. ಹಾಗಾದರೆ, ತಾವು ಕರ್ಮಗಳನ್ನು ಮಾಡುವದು ನಮಗೆ ಪ್ರತ್ಯಕ್ಷವಾಗಿ ಕಾಣಿಸುತ್ತದೆ. ಅದ್ದರಿಂದ ಕರ್ಮದ ಸ್ಪರ್ಶವೂ ಕೂಡಾ ಇಲ್ಲೆಂದು ಹೇಗೆ ಹೇಳುವಿರಿ?

ಸಮಾಧಾನ:— ಈ ಶರೀರದಲ್ಲಿರುವ ಆಭಾಸಚೇತನದಿಂದೊಡಗೂಡಿದ ಅಹಂಕಾರವೇ ಪುಣ್ಯ ಪಾಪ ಕರ್ಮಗಳನ್ನು ಮಾಡುತ್ತದೆ. ಮಾಡಿದ ಕರ್ಮಕ್ಕೆ

CC-0. Jangamwadi Math Collection. Digitized by eGangotri

ನುಗುಣವಾಗಿ ಊಚ ನೀಚ ಶರೀರವನ್ನು ಪಡೆಯುತ್ತದೆ ಆ ಕರ್ಮಫಲಗಳನ್ನು ಉಪಭೋಗ ಮಾಡುತ್ತದೆ, ಹೇಗಂದರೆ, ಆ ಅಹಂಕಾರವು ನಾನೇ ದೇಹವೆಂದು ಅಭಿಮಾನಿಸಿಕೊಂಡು ಜ್ಞಾನೇಂದ್ರಿಯಗಳಿಂದಃಶಬ್ದಾದಿ ವಿಷಯಗಳನ್ನು ಕಂಡು, ಇಷ್ಟವಿಷಯದಲ್ಲಿ ಸುಖ ಬುದ್ಧಿಯನ್ನು ಅನಿಷ್ಟ ವಿಷಯದಲ್ಲಿ ದುಃಖ ಬುದ್ಧಿಯನ್ನು ಮಾಡುತ್ತದೆ. ಮತ್ತು ಆ ಸುಖದುಃಖಗಳನ್ನು ಕುರಿತು ನಾನು ಸುಖೀ ನಾನು ದುಃಖೀ ಎಂದು ಈ ರೀತಿ ಸುಖದುಃಖಗಳನ್ನು ಅನುಭವಿಸುತ್ತದೆ. ಈ ಪ್ರಕಾರ ಜನನ ಮರಣಾತ್ಮಕ ಸಂಸಾರದಲ್ಲಿ ತಿರುಗುತ್ತಿರುತ್ತದೆ. ಹೀಗಿರುವದರಿಂದಲೇ ಆ ಅಹಂಕಾರವು ಕರ್ತಾಯೆನಿಸುತ್ತದೆ. ಆದ್ದರಿಂದ ಎಂಥಾ ಕರ್ಮವನ್ನು ಮಾಡುವದೋ ಅಂಥಾ ಫಲವನ್ನು ಅವಶ್ಯಮಾಗಿ ಉಪಭೋಗ ಮಾಡುತ್ತದೆ. ಆದ್ದರಿಂದ ಭೋಕ್ತಾವಿನಿಸುತ್ತದೆ. ಇಂಥಾ ಕರ್ತಾ ಭೋಕ್ತಾ ರೂಪವಾದ ಅಹಂಕಾರಕ್ಕೆ ಅಧಿಷ್ಠಾನಭೂತನಾದ ನಾನು ಕೇವಲ ಸದ್ರೂಪನಾಗಿರುವೆನು. ಆರೋಪಿತವಾದ ಅಹಂಕಾರಕ್ಕೂ ಅಧಿಷ್ಠಾನಭೂತನಾದ ನನಗೂ ಉಪಾಧಿವಶಾತ್ ಕಿಂಚಿತ್ ಸಂಬಂಧವೇ ಇಲ್ಲ. ಯಾಕಂದರೆ, ನಾನು ನಿರವಯವನು ಇದ್ದೇನೆ. ಆ ಅಹಂಕಾರವು ಅವಿದ್ಯಾಕಾರ್ಯವಾಗಿರೋಣದರಿಂದ ಕರ್ತೃತ್ವ ಭೋಕ್ತೃತ್ವಾದಿಗಳಿಂದ ಯುಕ್ತವಾಗಿರುತ್ತದೆ. ಈ ಕಾರಣದಿಂದ ನಾನು ಅಸಂಗ ಸ್ವರೂಪನಾಗಿದ್ದೇನೆ. ನನಗೆ ಕರ್ಮಗಳ ಸ್ಪರ್ಶವೂ ಕೂಡಾ ಇಲ್ಲವೆಂಬುವದು ಸತ್ಯವಾಗಿರುತ್ತದೆ.

ಮತ್ತು ತನಗೆ ಪ್ರಾಪ್ತವಾದ ಸಾಮಾನ್ಯಾಸಂಗತ್ವವನ್ನೇ ದೃಷ್ಟಾಂತ ಮೂಲಕ ವಿಶೇಷವಾಗಿ ಪ್ರತಿಪಾದನೆ ಮಾಡುತ್ತಾರೆ.

ನಿರವಯವೆನಿಸಿರ್ದಾಕಾಶಕ್ಕೆ।
ಚರಿಸುತ್ತಲ್ಲಿಹ ವಿಹಗ ಚಯಕ್ಕೆ॥
ಅವಕಾಶತೆಯಲ್ಲದೆ ತತ್ಸಂಗ।
ಸವನಿಸದವರ ವಿಕಾರ ತರಂಗ॥
ಈ ವಿಧದಿಂ ನಿಷ್ಕಳ ನಿಜದಲ್ಲಿ।
ಜೀವನೆನಿಸಿ ತೊಳಲುತ್ತಿಹನಲ್ಲಿ॥
ಉಂಟಾಹಮ್ಮಿನ ಸಂಸೃತಿ ಭಂಗ।
ಅಂಟದನಾನದರಿಂ ನಿಸ್ಸಂಗ॥
ಎಂಬ ಸಕಲ ನಿಷ್ಕಳದ ವಿಭೇದ।
ಇಂಬಿಂ ತೋರಲು ನಿಜಸುಖಿಯಾದ॥
ಸ್ಥಿತಿತನಗಿದು ಸಾಮಾನ್ಯಾಸಂಗ।
ಸುತ ಮುಂದಣದು ವಿಶೇಷಾಸಂಗ ॥೪॥

CC-0. Jangamwadi Math Collection. Digitized by eGangotri

ಟೀಕಾ:—ನಿರವಯವೆನಿಸಿರ್ದ=ನಿರಾಕಾರವೆನಿಸಿದ, ಆಕಾಶಕ್ಕೆ=ಗಗನಕ್ಕೆ, ಚರಿಸುತ = ತಿರುಗುತ್ತ, ಅಲ್ಲಿಹ = ಆಕಾಶದಲ್ಲಿರುವ, ವಿಗಹಚಯಕ್ಕೆ = ಪಕ್ಷಿ ಸಮೂಹಕ್ಕೆ, ಅವಕಾಶತೆಯಲ್ಲದೆ = ಅವಕಾಶದ ಹೊರತು, ತತ್ಸಂಗ=ಆ ಪಕ್ಷಿ ಸಮೂಹದ ಸಂಬಂಧವು, ಅವರ=ಆ ಪಕ್ಷಿಗಳ, ವಿಕಾರತರಂಗ = ವಿಕಾರತೆಯು, ಸವನಿಸದು=ಬರಲಾರದು, ಈ ವಿಧದಿಂ=ಈ ರೀತಿಯಿಂದ, ನಿಷ್ಕಳ=ನಿರವಯವಾತ್ಮಕ, ನಿಜದಲ್ಲಿ=ಸ್ವರೂಪದಲ್ಲಿ, ಜೀವನೆನಿಸಿ=ಜೀವಾತ್ಮನೆಂದು ಹೇಳಿಸಿಕೊಂಡು, ತೊಳಲುತ್ತಿಹನು = ಪೇಚಾಡುತ್ತಿರುವನು, ಅಲ್ಲಿ = ನಿಜದಲ್ಲಿ, ಆ ಹಮ್ಮಿನ=ಆ ಅಹಂಕಾರದ, ಸಂಸೃತಿ=ಸಂಸಾರಕ್ಕೆ, ಭಂಗ=ನಾಶವು, ಉಂಟು=ಇರುತ್ತದೆ, ಅದರಿಂ=ಈ ಕಾರಣದಿಂದ, ಆನು=ವ್ಯಾಪಕನಾದ ನಾನು, ಅಂಟದನು = ಯಾವ ಸಂಬಂಧದಿಂದ ರಹಿತನು, ನಿಸ್ಸಂಗ = ಅಸಂಗನಾಗಿರುವೆನು, ಎಂಬ=ಹೀಗೆಂಬ, ಸಕಲ=ಸಾವಯವದ, ನಿಷ್ಕಳದ=ನಿರವಯವದ, ವಿಭೇದ=ಭಿನ್ನತ್ವವು,ಇಂಬಿ=ವಿಸ್ತಾರವಾಗಿ, ತೋರಲು=ಹೊಳೆಯಲು, ನಿಜಸುಖಿಯಾದ=ಸ್ವರೂಪಸುಖಮಯವಾದ, ಸ್ಥಿತಿ=ಅವಸ್ಥೆಯು, ಇದು=ಇದು, ತನಗೆ=ತನಗೆ, ಸಾಮಾನ್ಯಾಸಂಗ=ಸಾಧಾರಣವಾದ ಅಸಂಗವು, ಸುತ=ಪುತ್ರನೇ !, ಮುಂದಣದು=ಇನ್ನು ಮೇಲೆ ಹೇಳುವದು, ವಿಶೇಷಾಸಂಗ=ಅಸಾಧಾರಣವಾದ ಅಸಂಗವು.

ತಾತ್ಪರ್ಯ:— ಎಲೈ ಮಗನೇ ಕೇಳು, ನಿರವಯವಾತ್ಮಕವಾದ ಪೂರ್ಣ ಆಕಾಶದಲ್ಲಿ ಪಕ್ಷಿಗಳ ಗುಂಪುಗಳು ಸಂಚಾರಮಾಡುತ್ತಿರುತ್ತವೆ. ಆದರೂ ಆ ಪಕ್ಷಿ ಸಮೂಹಗಳ ಸಂಗವು ಆ ಆಕಾಶಕ್ಕೆ ಇಲ್ಲವೇ ಇಲ್ಲ. ಇಷ್ಟೇ ಅಲ್ಲ. ಆ ಪಕ್ಷಿಗಳ ಹಿಂಡು ಗಿಡಗ ಮೊದಲಾದವುಗಳ ಭಯದಿಂದ ಚದರಿ ಅತ್ತಿತ್ತ ಹೋಗುವಂಥಾ ವಿಕಾರವಾದರೂ ಸಂಭವಿಸಲಾರದು. ಪರಂತು, ಆಕಾಶವು ಪಕ್ಷಿ ಸಮೂಹಕ್ಕೆ ಅವಕಾಶತೆಯನ್ನು ಮಾತ್ರ ಕೊಟ್ಟಿರುತ್ತದೆ. ಇದೇ ದೃಷ್ಟಾಂತದಂತೆ, ನಿರವಯವಾತ್ಮಕ ಪರಿಪೂರ್ಣವಾದ ನನ್ನ ನಿಜಸ್ವರೂಪದಲ್ಲಿ, ಅಹಂಕಾರವು ಆಭಾಸ ಚೇತನದಿಂದೊಡಗೂಡಿ ಜೀವಾತ್ಮನೆಂದು ಹೇಳಿಸಿಕೊಂಡು, ಜನ್ಮ ಜನ್ಮಾಂತರಕ್ಕೆ ತಿರುಗುತ್ತಿರುವದು. ಮತ್ತು ಕರ್ತೃತ್ವ ಭೋಕ್ತೃತ್ವ ಮೊದಲಾದ ವಿಕಾರಗಳಿಂದ ಯುಕ್ತವಾಗಿ ಅನೇಕ ಪ್ರಕಾರ ಕಷ್ಟವನ್ನು ಪಡುತ್ತಿರುವದು. ಹೀಗಿದ್ದಾಗ್ಯಾದರೂ ಪರಿಪೂರ್ಣವಾದ ನನ್ನ ಸ್ವರೂಪು ಸಾಭಾಸ ಅಹಂಕಾರಕ್ಕೆ ಅವಕಾಶತೆಯನ್ನು ಮಾತ್ರ ಕೊಟ್ಟಿರುತ್ತದೆ ಹೊರತು, ಆ ಅಹಂಕಾರ ಸಂಬಂಧ ಸಂವಾದಸಾರ ದುಃಖವನ್ನು ಕಿಂಚಿತ್ತಾದರೂ ಹೊಂದುವದಿಲ್ಲ. ಮತ್ತು ನನ್ನ ನಿಜಸ್ವರೂಪದಲ್ಲಿ ಆ ಅಹಂಕಾರ ಸಂಬಂಧವಾದ ಸಂಸಾರಕ್ಕೆ ನಾಶವುಂಟು. ಆದ್ದರಿಂದ ನಾನು ಅಹಂಕಾರ, ದೇಹ, ಇಂದ್ರಿಯ, ವಿಷಯ ಮೊದಲಾದವುಗಳ ಸ್ಪರ್ಶ ಮಾಡದಿಪೋಣದರಿಂದ ಅಸಂಗನಾಗಿರುತ್ತೇನೆ. ಈ ಪ್ರಕಾರ ಕರ್ತೃತ್ವ ಭೋಕ್ತೃತ್ವಾದಿಗಳಿಂದ ಯುಕ್ತವಾದ ಅಹಂಕಾರಕ್ಕಿಂತಲೂ ಪೂರ್ಣನಾದ ತಾನು; ಭಿನ್ನ

CC-0. Jangamwadi Math Collection. Digitized by eGangotri

ನಾಗಿರುವೆನೆಂದು ಯಾವಾಗ್ಯೆ ನಿಶ್ಚಯವನ್ನು ಮಾಡಿದನೋ; ಆಗ್ಯೆ ನಿರುಪಾಧಿಕವಾದ ತನ್ನ ನಿಜಾನಂದದಲ್ಲಿಯೇ ಸ್ಥಿತಿಯುಳ್ಳವನಾದನು, ಇದು ಸಾಧಾರಣವಾದ ಅಸಂಗವೆಂದು ಹೇಳಲ್ಪಡುತ್ತದೆ. ಮುಂದೆಹೇಳುವದು ವಿಶೇಷಾಸಂಗವಾರುಗಿತ್ತದೆ.

ಬಳಿಕ; ಪ್ರತೀತಿಯಾಗುತ್ತಿರುವ ಈ ಜಗತ್ತಿಗೆ ಬ್ರಹ್ಮ ಮತ್ತು ಮಾಯೆ ಇವುಗಳು ಕಾರಣಗಳಾಗಲಾರವೆಂದು ಪ್ರತಿಪಾದಿಸುತ್ತಾ ವಿಶೇಷಾಸಂಗವನ್ನು ಬೋಧಿಸುತ್ತಾರೆ.

ತೋರಿಕೆ ತೋರ್ಕೆಗೆ ಕಾರಣವಲ್ಲ।
ಕಾರಿಯಕೆ ಕಾರಣವದರೊಳಗಿಲ್ಲ॥
ಬ್ರಹ್ಮವು ಕಾರಣವಾಗಲರಿಯದು।
ಬ್ರಹ್ಮವು ಚಿತ್ತದರಿಂ ವಿಕರಿಸದು॥
ಮಾಯೆಯು ಕಾರಣವಾಗಲರಿಯದು।
ಮಾಯೆ ವಿಚಾರಿಸೆ ಪುಸಿರೂಪಿನದು॥
ಕಾರಣತೆಯುಮಿಂತಿವಕಿಲ್ಲಾಗಿ।
ಕಾರ್ಯಕೆ ಕಾರಣವಿಲ್ಲವದಾಗಿ॥
ಗುಣ ಫಣಿಯಂದದಿ ತೋರಿಕೆಯೆಲ್ಲ।
ಗಣಿಸಲುಬಗೆಯಲ್ಲದೆ ಧಿಟಕಿಲ್ಲ॥
ಶ್ರುತಿಮತವಿಂತೀಯುಕ್ತಿಗಳೆಲ್ಲ।
ಪ್ರತಿಮತವಿದರೊಳುಸುರಲಿಂಬಿಲ್ಲ॥ ॥೫॥

ಟೀಕಾ:— ತೋರಿಕೆ=ಪ್ರತೀತಿಯು, ತೋರ್ಕೆಗೆ=ಜಗತ್ತಿಗೆ, ಕಾರಣವಲ್ಲ=ಹೇತುವಾಗಲಾರದು, ಕಾರಿಯಕೆ=ಕಾರ್ಯಕ್ಕೆ, ಕಾರಣವು=ಹೇತುವು, ಅದರೊಳಗೆ=ಕಾರ್ಯವಾದ ಜಗತ್ತಿನಲ್ಲಿ, ಇಲ್ಲ=ಇರುವದಿಲ್ಲ, ಬ್ರಹ್ಮವು=ಬೊಮ್ಮವು, ಕಾರಣವಾಗಲರಿಯದು=ಹೇತುವಾಗಲಾರದು, ಬ್ರಹ್ಮವು=ಬೊಮ್ಮವು, ಚಿತ್ತು=ಅರುವು, ಅದರಿಂ = ಈ ಕಾರಣದಿಂದ, ವಿಕರಿಸದು = ಅವಸ್ಥಾಂತರವನ್ನು ಹೊಂದದು, ಮಾಯೆಯು=ವಿಸ್ಮಯಕಾರಿಯಾದ ಮಾಯೆಯು, ಕಾರಣವಾಗಲರಿಯದು=(ಜಗತ್ತಿಗೆ) ಹೇತುವಾಗಲರಿಯದು, ವಿಚಾರಿಸೆ=ವಿಚಾರ ಮಾಡುತ್ತಿರಲಾಗಿ, ಮಾಯೆ=ಮಾಯೆಯು, ಪುಸಿರೂಪಿನದು=ಮಿಥ್ಯಾಸ್ವರೂಪವುಳ್ಳದ್ದಿರುವದು, ಇಂತು=ಈ ಪ್ರಕಾರ, ಇವಕೆ=ಇವುಗಳಿಗೆ, ಕಾರಣತೆಯು=ಹೇತುವು, ಇಲ್ಲಾಗಿ=ಇರದ್ದರಿಂದ, ಕಾರ್ಯಕ್ಕೆ=ಜಗತ್ತಿಗೆ, ಕಾರಣವು=ಹೇತುವು, ಇಲ್ಲವದಾಗಿ=ಇಲ್ಲದ್ದರಿಂದ, ತೋರಿಕೆಯೆಲ್ಲ=ಪ್ರತೀತಿಯಾಗುತ್ತಿರುವ ಜಗತ್ತೆಲ್ಲ, ಗುಣಫಣಿಯಂದದಿ=ಹಗ್ಗದ ಮೇಲೆ ತೋರುವ ಹಾವಿನಂತೆ, ಗಣಿಸಲು=ವಿಚಾರ ಮಾಡಲು, ಬಗೆಯಲ್ಲದೆ=ಭಾವನೆಯಲ್ಲದೆ, ದಿಟಕಿಲ್ಲ=ಸತ್ಯವಾಗಿಲ್ಲ, ಇಂತೀಯುಕ್ತಿಗಳೆಲ್ಲ=ಈಗ ಹೇಳಿದ ಯುಕ್ತಿಗಳೆಲ್ಲ, ಶ್ರುತಿಮತವು=ಶ್ರುತಿಗೆ ಸಮ್ಮತವಾದವು

CC-0. Jangamwadi Math Collection. Digitized by eGangotri

ಗಳು, ಇದರೊಳು=ಇದರಲ್ಲಿ, ಪ್ರತಿಮತವ=ವಿರುದ್ಧ ಮತವನ್ನು, ಉಸುರಲು= ನುಡಿಯುವದಕ್ಕೆ, ಇಂಬಿಲ್ಲ=ಸ್ಥಾನವಿಲ್ಲ.

ತಾತ್ಪರ್ಯ:— ಜಗತ್ತಿನ ಪ್ರತೀತಿಯೇ ಜಗತ್ತಿಗೆ ಕಾರಣವಾಗಲಾರದು ಯಾಕಂದರೆ, ಕಾರ್ಯರೂಪವಾದ ಜಗತ್ತಿನಲ್ಲಿ ಕಾರಣವು ಇಲ್ಲವೇ ಇಲ್ಲ. ಒಂದು ವೇಳೆ ಜಗತ್ತೂ ತನಗೆ ತಾನೇ ಕಾರಣವಾಗಿರುವದೆಂದು ಹೇಳಿದರೆ, ಆತ್ಮಾಶ್ರಯ ದೋಷಬರುವದು. ಯಾಕಂದರೆ, ತಾನೇ ಕರ್ತೃ ತಾತೇ ಕರ್ಮವಾಗಿರೋಣದ ರಿಂದ; ಹಾಗಾದರೆ ಬೇರೊಂದು ಜಗತ್ತು ಈ ಜಗತ್ತಿಗೆ ಕಾರಣವಾಗಿರುವುದೆಂದು ಹೇಳಿದರೆ, ಆ ಎರಡನೇ ಜಗತ್ತಾದರೂ ತನ್ನ ಉತ್ಪತ್ತಿಗೆ ತಾನೇ ಕಾರಣವಾಗಿ ರುವದೆಂದು ಹೇಳಿದರೆ, ಉಕ್ತ ಆತ್ಮಾಶ್ರಯದೋಷವು ಬರುತ್ತದೆ. ಆದ್ದರಿಂದ ಮೊದಲನೆಯ ಜಗತ್ತಿಗೆ ಎರಡನೆಯ ಜಗತ್ತು ಕಾರಣವಾಗಿರುವದು; ಎರಡನೆಯ ಜಗತ್ತಿಗೆ ಮೊದಲನೆಯ ಜಗತ್ತು ಕಾರಣವಾಗಿರುವದೆಂದು ಹೇಳಿದರೆ, ಅನ್ಯೋ ನ್ಯಾಶ್ರಯ ದೋಷವು ಬರುತ್ತದೆ. ಈ ದೋಷವನ್ನು ಕಳೆದುಕೊಳ್ಳುವದಕ್ಕಾಗಿ ಮೂರನೇಯದೊಂದು ಜಗತ್ತನ್ನು ಅಂಗೀಕರಿಸಿದರೆ, ಚಕ್ರಿಕಾಪತ್ತಿ ದೋಷ ಬರುವದು. ನಾಲ್ಕನೆಯದನ್ನು ಅಂಗೀಕರಿಸಿದರೆ, ಅನವಸ್ಥಾದೋಷ ಬರುತ್ತದೆ. ಈ ರೀತಿ ಪ್ರಾಗ್ಲೋಪ ವಿನಿಗಮನವಿರಹ ಮುಂತಾದ ದೋಷಗಳು ಬರುವದ ರಿಂದ ಪ್ರತೀತಿಯಾಗುತ್ತಿರುವ ಜಗತ್ತಿಗೆ ಜಗತ್ತೇ ಕಾರಣವಾಗಲಾರದು ಹಾಗಾ ದರೆ, ಪರಬ್ರಹ್ಮವು ಕಾರಣವಾಗುವದೆಂದು ಹೇಳಿದರೆ, ಅದು ಕೂಡಾ ಸಂಭವಿಸ ಲಾರದು. ಯಾಕಂದರೆ, ಪರಬ್ರಹ್ಮವು ಚಿದ್ರೂಪವಾಗಿರುತ್ತದೆ. ಅದು ಕ್ಷೀರ ದಧಿಯಂತೆ ವಿಕಾರವುಳ್ಳದ್ದಾಗದು. ಕಿಂತು ಪರಬ್ರಹ್ಮವು ಸಚ್ಚಿದಾನಂದಸ್ವರೂಪ ನಿರ್ವಿಕಾರವಾಗಿರುತ್ತದೆ. ಕಾರ್ಯರೂಪವಾದ ಜಗತ್ತು ಅಸಜ್ಜಡ ದುಃಖಾತ್ಮಕ ವಾಗಿರುತ್ತದೆ. ಈ ಕಾರಣದಿಂದ ಬ್ರಹ್ಮವು ಜಗತ್ತಿಗೆ ಕಾರಣವಾಗಲರಿಯದು.

ಶಂಕಾ:— ಹಾಗಾದರೆ ಅನೇಕ ಶ್ರುತಿಗಳಲ್ಲಿ ಜಗತ್ತಿಗೆ ಬ್ರಹ್ಮವೇ ಕಾರಣವೆಂದು ಪ್ರತಿಪಾದನೆ ಮಾಡಲ್ಪಟ್ಟಿದೆ. ಅವುಗಳ ಗತಿಯೇನು?

ಸಮಾಧಾನ:–ನೈಯಾಯಿಕ ಮೊದಲಾದ ವಾದಿಗಳು ಜಗತ್ತಿಗೆ ಜಡವಾದ ಪರಮಾಣುಕಾಲ, ಕರ್ಮ ಮೊದಲಾದವುಗಳೇ ಕಾರಣಗಳೆಂದು ವಾದಿಸುತ್ತಿರಲು ಅವರುಗಳ ಜಡವಾದವನ್ನು ಖಂಡನಮಾಡಿ, ಮುಮುಕ್ಷುಗಳನ್ನು ಚೇತನದಕಡೆಗೆ ಅಭಿಮುಖೀಕರಣವನ್ನುಂಟುಮಾಡುವದಕ್ಕೋಸ್ಕರ ಸದ್ರೂಪವಾದ ಬ್ರಹ್ಮವೇ ಜಗತ್ತಿಗೆ ಕಾರಣವಾಗಿರುವದೆಂದು ಹೇಳಿರುತ್ತದೆ. ಪರಂತು ಬ್ರಹ್ಮವೇ ಜಗತ್ತಿಗೆ ಕಾರಣವಾಗಿರುವದೆಂದು ಹೇಳುವದರಲ್ಲಿ ಶ್ರುತಿಯ ತಾತ್ಪರ್ಯವಿಲ್ಲ. ಕಿಂತು ಭ್ರಮಾತ್ಮಕವೆಂದು ಹೇಳುವದರಲ್ಲಿಯೇ ತಾತ್ಪರ್ಯವಿರುತ್ತದೆ. ಮತ್ತು ಮಾಯೆ ಯಾದರೂ ಜಗತ್ತಿಗೆ ಕಾರಣವಾಗಲಾರದು. ಯಾಕಂದರೆ, ಮಾಯೆಯೆಂಬುವ

CC-0. Jangamwadi Math Collection. Digitized by eGangotri

ಪದಾರ್ಥವು ಏನಾಗಿರುವದೆಂದು ವಿಚಾರಮಾಡುತ್ತಿರಲಿಕ್ಕೆ "ಯಾ, ಮಾ, ಸಾ, ಮಾಯಾ" ಯಾವದು ಇಲ್ಲವೋ ಅದು ಮಾಯೆಯೆಂದು ಹೇಳಲ್ಪಡುತ್ತದೆ. ಅರ್ಥಾತ್ ಮಿಥ್ಯಾರೂಪವಾಗಿರುತ್ತದೆ. ಯಾವದಾದರೂ ವಸ್ತು ಇದ್ದರೆ ಅದು ಮತ್ತೊಂದು ಕಾರ್ಯಕ್ಕೆ ಕಾರಣವಾಗಬಹುದು. ಮಾಯಾಯೆಂಬುದು ತಾನೇ ಇಲ್ಲದ ಮೇಲೆ ಜಗತ್ತಿಗೆ ಹೇಗೆ ಕಾರಣವಾದೀತು; ಸರ್ವಥಾ ಆಗಲಾರದು.

ಶಂಕಾ:— "ಮಾಯಾಂತು ಪ್ರಕೃತಿಂ ವಿದ್ಯಾತ್" ಎಂಬ ಶ್ರುತಿಯು ಮಾಯೆಯೇ ಜಗತ್ತಿಗೆ ಉಪಾದಾನಕಾರಣವೆಂದು ಪ್ರತಿಪಾದಿಸುತ್ತದೆ. ಹೀಗಿರಲು ತಾವು ಮಾಯಾ ಜಗತ್ತಿಗೆ ಕಾರಣವಲ್ಲೆಂದು ಹೇಗೆ ಪ್ರತಿಪಾದಿಸುವಿರಿ?

ಸಮಾಧಾನ:—ಆ ಶ್ರುತಿಯು ಕನಿಷ್ಠಾಧಿಕಾರಿಯನ್ನು ಕುರಿತು ಮಾಯಾ ಜಗತ್ತಿಗೆ ಉಪಾದಾನ ಕಾರಣವಾಗಿರುವದು. ಪರಮಾತ್ಮನು ನಿಮಿತ್ತ ಕಾರಣ ನಾಗಿದ್ದಾನೆ. ಪುಣ್ಯ ಪಾಪಗಳು ಸಹಕಾರಿ ಕಾರಣಗಳಾಗಿರುತ್ತವೆಂದು ಲೋಕ ದೃಷ್ಟಾಂತಾನುಸಾರವಾಗಿ ಪ್ರತಿಪಾದಿಸಿ, ಮಾಯಾ ಮತ್ತು ಮಾಯಾ ಕಾರ್ಯ ವಾದ ಜಗತ್ತು ಮಿಥ್ಯೆಯೆಂದು ಬೋಧಿಸುತ್ತದೆ. ಆದರೆ ಈಗ ಸದ್ಯಕ್ಕೆ ಉತ್ತ ಮಾಧಿಕಾರಿಯನ್ನು ಕುರಿತು ಅಜಾತ ವಾದವನ್ನು ಬೋಧ ಮಾಡುವದರಿಂದ ಮಾಯೆಯು ಜಗತ್ತಿಗೆ ಕಾರಣವಾಗಲಾರದು.

ಈ ಪ್ರಕಾರ ಜಗತ್ತು, ಬ್ರಹ್ಮ, ಮಾಯೆ ಇವುಗಳಿಗೆ ಕಾರಣತ್ವವು ಯಾವಾಗ್ಯೆ ಸಿದ್ಧಿಸಲಿಲ್ಲೋ, ಆಗ್ಯೆ ಕಾರ್ಯರೂಪ ಜಗತ್ತಿಗೆ ಕಾರಣವೇ ಇಲ್ಲ ದಂತಾಯಿತು. ಹಾಗಾದರೆ ಈ ಜಗತ್ತು ಯಾವ ಕಾರಣದಿಂದ ತೋರಿತು? ಎಂದು ಪ್ರಶ್ನೆಯನ್ನು ಮಾಡಿದರೆ, ಈ ದೃಶ್ಯಮಾನ ಜಗತ್ತೆಲ್ಲವು ಮಂಧಾಂಧಃಕಾರ ದಲ್ಲಿದ್ದ ಹಗ್ಗದ ಮೇಲೆ ಭ್ರಾಂತಿಯಿಂದ ತೋರುವ ಹಾವಿನಂತೆ, ಕೇವಲ ಭಾವ ನಾತ್ಮಕವಾಗಿರುವದೇ ಹೊರತು ಇದಕ್ಕೆ ಯಾವದೂ ಕಾರಣವಿಲ್ಲ. ವಿಚಾರ ಮಾಡಲು ಹಾವು ತೋರದೇ ಹಗ್ಗವೇ ಹೇಗೆ ಇರುತ್ತದೆಯೋ, ಹಾಗೆ ಶೋಧ ಮಾಡಲು ಜಗತ್ತೆಂಬುದು ಇಲ್ಲವೇ ಇಲ್ಲ.' ಕಿಂತು ಪೂರ್ಣ ಬ್ರಹ್ಮವು ಒಂದೇ ಇರುವದು. ಈಗ ಹೇಳಲ್ಪಟ್ಟ ಯುಕ್ತಿಗಳು ಸ್ವಕಪೋಲ ಕಲ್ಪಿತಗಳಲ್ಲ. ಕಿಂತು ಶ್ರುತಿ ಮತಕ್ಕೆ ಅನುಸಾರಿಗಳಾಗಿರುವವು. 'ನ ನಿರೋಧೋ ನ ಚೋತ್ಪತ್ತಿ' ಜಗತ್ತು ಹುಟ್ಟಿಲ್ಲ ನಾಶವಾಗಿಲ್ಲ ಎಂಬ ಶ್ರುತಿಯುಂಟು. ಆದ್ದರಿಂದ ಈ ವಿಷಯಕ್ಕೆ ವಿರುದ್ಧವಾಗಿ ಯಾವ ಪ್ರಶ್ನೆಯನ್ನು ಮಾಡುವದಕ್ಕೂ ಸ್ಥಳವೇ ದೊರೆಯಲಾರದು. ಹೀಗೆ ಅಖಂಡಸ್ವರೂಪನಾದ ನನ್ನಲ್ಲಿ ಜಗತ್ತೇ ಇಲ್ಲೆಂದು ಕೇವಲ ತನ್ನನ್ನೇ ಅನುಸಂಧಾನ ಮಾಡುವದು ವಿಶೇಷಾಸಂಗವಾಗಿರುತ್ತದೆ.

ಬಳಿಕ; ಜಗತ್ತಿಗೆ ಬ್ರಹ್ಮ ಮಾಯೆಗಳು ಕಾರಣವಾಗದಿದ್ದರೂ ಆಗಲಿ. ಜಗನ್ನಿಯಂತನಾದ ಈಶ್ವರನು ಜಗತ್ತಿಗೆ ಕಾರಣನಾಗಿರುವನೆಂದು ಶಂಕಾ ಮಾಡಿ ದರೆ, ಈಶ್ವರನೇ ಇಲ್ಲದಾಗಬೇಕಾಗುತ್ತದೆಂದು ಪ್ರತಿಪಾದಿಸುತ್ತಾರೆ.

CC-0. Jangamwadi Math Collection. Digitized by eGangotri

ಜಗವಪ್ಪುದು ಮೇಣೀಶ್ವರನಿಂದ।
ಬಗೆ ಕಾರಣನೀಶ್ವರ ನದರಿಂದ॥
ಎನಲು ಮರನ ಮಾಳಿಗೆಯಾದಂತೆ।
ಪುನರಪಿ ಮರನಿಲ್ಲದೆ ಪೋದಂತೆ॥
ಪರಶಿವನೇ ಜಗದಾಕೃತಿಯಾಗಿ।
ಪರಿಣಮಿಸಿದೊಡಂತವನಿಲ್ಲಾಗಿ॥
ಲೋಕನಿಯಾಮಕ ನಿಲ್ಲವೆನಿಕ್ಕು।
ಈ ಕಲ್ಪನೆ ವಿಧಿಯಿಲ್ಲದುದಕ್ಕು॥
ಇದನೊಪ್ಪಲೆಬಾರದು ದೃಗ್ದೃಶ್ಯ।
ಪುದಿದಿಹ ಲೋಕದ ನಿಯತಿಯವಶ್ಯ॥
ತೋರಿಹುದಾಗೀಶ್ವರನು ಜಗಕ್ಕೆ।
ಕಾರಣನಲ್ಲಿದು ಪುಸಿಯುಃ ಧಿಟಕ್ಕೆ ॥೬॥

ಟೀಕಾ:— ಮೇಣ್=ಮತ್ತು, ಈಶ್ವರನಿಂದ=ಪರಮಾತ್ಮನಿಂದ, ಜಗಪ್ಪ= ಜಗತ್ತು, ಅಪ್ಪುದ=ಆಗುವದು, ಅದರಿಂದ=ಈ ಕಾರಣದಿಂದ, ಬಗೆ=ವಿಚಾರ ಮಾಡಲು, ಈಶ್ವರನು=ಪರಮಾತ್ಮನು, ಕಾರಣನು=ಹೇತುವಾಗಿರುವನು, ಎನಲು=ಎನ್ನಲು, ಮರನ=ಗಿಡವೇ, ಮಾಳಿಗೆಯಾದಂತೆ=ಮನೆಯಾದ ಮೇಲೆ, ಪುನರಪಿ=ಅನಂತರ, ಮರನಿಲ್ಲದೆ=ವೃಕ್ಷವಿಲ್ಲದೆ, ಪೋದಂತೆ=ಹೋದಹಾಗೆ, ಪರಶಿವನೇ=ಪರಮಾತ್ಮನೇ, ಜಗದಾಕೃತಿಯಾಗಿ=ನಾಮರೂಪಾತ್ಮಕ ಜಗತ್ತಿನ ಆಕಾರವುಳ್ಳವನಾಗಿ, ಪರಿಣಮಿಸಿದೊಡೆ=ವಿಕಾರವುಳ್ಳವನಾದರೆ, ಅಂತವ ನಿಲ್ಲಾಗಿ=ಪರಮಾತ್ಮನಿಲ್ಲಾಗಿ, ಲೋಕ=ಜಗತ್ತನ್ನು, ನಿಯಾಮಕನು=ಪ್ರೇರಿಸು ವನು, ಇಲ್ಲವೆನಿಕ್ಕು=ಅಭಾವನಾಗುವನು, ಈ ಕಲ್ಪನೆ=ಈ ಅರ್ಥವು, ವಿಧಿ ಯಿಲ್ಲದುದು=ಗತಿಯಿಲ್ಲದ್ದು, ಅಕ್ಕು=ಆಗುವದು, ಇದನು=ಇದನ್ನು, ಒಪ್ಪಲೆ ಬಾರದು=ಅಂಗೀಕರಿಸಬಾರದು, ದೃಕ್=ನೋಡುವಂಥಾದ್ದು, ದೃಶ್ಯ=ನೋಡಿಸಿ ಕೊಳ್ಳುವಂಥಾದ್ದು, ಪುದಿದು=ಸಂಬಂಧವಾಗಿ, ಇಹ=ಇರುವದು, ಲೋಕದ= ಜಗದ, ನಿಯತಿಯ=ಅದೃಷ್ಟದ, ವಶ್ಯ=ಅಧೀನವಾಗಿರುವದು, ತೋರಿಹುದಾಗಿ= ಪ್ರತೀತಿಯಾಗುವದರಿಂದ, ಈಶ್ವರನು=ಪರಮಾತ್ಮನು, ಜಗಕ್ಕೆ=ಜಗತ್ತಿಗೆ, ಕಾರಣನಲ್ಲ= ಹೇತುವಾಗಲಾರನು, ಧಿಟಕ್ಕೆ= ಸತ್ಯವಾಗಿ, ಇದು ಪುಸಿಯು= ಈ ಜಗತ್ತು ಸುಳ್ಳು.

ತಾತ್ಪರ್ಯ:— ಜಗತ್ತಿಗೆ ಬ್ರಹ್ಮ ಮಾಯೆಗಳು ಕಾರಣವಾಗದಿದ್ದರೂ ಆಗಲಿ. ಈಶ್ವರನಿಂದ ಜಗತ್ತು ಆಗುತ್ತದೆ. ಆದ್ದರಿಂದ ವಿಚಾರಮಾಡಿ ನೋಡು ತ್ತಿರಲಿಕ್ಕೆ ಜಗತ್ತಿಗೆ ಈಶ್ವರನು ಕಾರಣನೆಂದು ಕಂಡುಬರುತ್ತದೆ. ಎಂದು ಶಂಕಾ

CC-0. Jangamwadi Math Collection. Digitized by eGangotri

ಮಾಡಿದರೆ; ಅದಕ್ಕೆ ಸಮಾಧಾನವನ್ನು ಹೇಳುತ್ತಾರೆ. ಏನೆಂದರೆ, ಒಂದು ಮರವೇ ಮನೆಯಾದಮೇಲೆ ಬಳಿಕ ಮರವು ಇಲ್ಲದಂತೆ ಹೇಗೆ ಆಗುವದೋ; ಹಾಗೇ ಪರಮಾತ್ಮನೇ ಈ ನಾಮರೂಪಾತ್ಮಕ ಜಗದಾಕೃತಿಯಾಗಿ ಪರಿಣಾಮ ವನ್ನು ಹೊಂದಿದ್ದಾದರೆ, (ಹಾಲು ಕೆಟ್ಟು ಮೊಸರು ಆಗಿ ಹಾಲು ಇಲ್ಲದಂತೆ) ಪರಮಾತ್ಮನು ಇಲ್ಲದಾಗುವನು. ಹೀಗಾದಮೇಲೆ ಜಗತ್ತನ್ನು ಪ್ರೇರಿಸುವಂಥವನು ಇಲ್ಲದ ಹಾಗಾಯಿತು. ಪ್ರೇರಕನಿಲ್ಲದಲೆ ಜಗತ್ತು ಹೇಗೆ ನಡೆಯುವದೆಂಬ ಕಲ್ಪ ನೆಗೆ ಗತಿಯಿನ್ನೇನು ಹೇಳು? ಆದ್ದರಿಂದ ಪರಮಾತ್ಮನೇ ಜಗದಾಕಾರನಾಗಿರುವ ನೆಂಬುದನ್ನು ಅಂಗೀಕರಿಸಬಾರದು. ಜಡಾಜಡ ಲಕ್ಷಣಾತ್ಮಕವಾದ ಈ ಜಗತ್ತು ಅದೃಷ್ಟಕ್ಕೆ ವಶಗತವಾಗಿಯೂ ತೋರುವದು. ಆದ್ದರಿಂದ ಕೇವಲ ಈಶ್ವರನೇ ಜಗತ್ತಿಗೆ ಕಾರಣನಾಗಿರುವನೆಂಬುದು ಸಿದ್ಧಿಸುವದಿಲ್ಲ. ಅರ್ಥಾತ್ ಈ ಜಗತ್ತು ಸತ್ಯವಾಗಿ ಸುಳ್ಳಾಗಿರುವದು.

ಬಳಿಕ; ಜಗತ್ತು ತ್ರಿಗುಣಾತ್ಮಕವಾಗಿರೋಣದರಿಂದ ಈ ಜಗತ್ತಿಗೆ ಕಾರಣವಾದ ಪ್ರಕೃತಿಯೂ ತ್ರಿಗುಣಾತ್ಮಕವಾಗಿರುತ್ತದೆ. ಆದ್ದರಿಂದ ಜಗತ್ತಿಗೆ ಪ್ರಕೃತಿಯೇ ಕಾರಣವೆಂದು ಶಂಕಾ ಮಾಡಿದರೆ; ಜಗತ್ತು ಪ್ರಳಯವಾಗಬಾರ ದಾಯಿತು ಎಂದು ಉತ್ತರವನ್ನು ಹೇಳುತ್ತಾರೆ.

ತರುರೂಪಿಂ ಬೀಜವೆ ಬಳಿಕೆಂತು।
ಪರಿಣಮಿಸುವದಾ ಪ್ರಕೃತಿಯುಮಂತು॥
ತೋರುವದೀ ಜಗದಾಕೃತಿಯಿಂದ।
ಕಾರ್ಯಕೆ ಕಾರಣಮುಂಟೆದರಿಂದ॥
ಎನೆಕಾರಣವಳಿದಾ ಕಾರಿಯುವು।
ಅನುದಿನಮಿಹುದುಳಿದಾ ಕಾರಿಯುವು॥
ಬಳಿಕಾಗದು ಮುನ್ನಿನ ಕಾರಣವು।
ತಿಳಿಯುದರಿಂ ಜಗಕಿಲ್ಲಂ ಲಯವು॥
ಮಾಣಲಿಯಂದರೆ ತೋರುವ ಸುಪ್ತಿ।
ಜಾಣನೆ ಲಯವೇಳ್ವಾಗಮ ಕ್ಲುಪ್ತಿ॥
ಇರಲಿಂತಿದ ನೋಡಬಡೆ ಲೇಸಲ್ಲ।
ಪರಿಕಿಸೆ ಕಾರ್ಯಕೆ ಕಾರಣಮಿಲ್ಲ ॥೭॥

ಟೀಕಾ:— ಬೀಜವೇ=ಬೀಜವೇ, ಎಂತು=ಹೇಗೆ, ತರು ರೂಪಿಂ=ವೃಕ್ಷ ರೂಪದಿಂದ, ಪರಿಣಮಿಸುವದು=ವಿಕಾರವಾಗುವದು, ಅಂತು=ಹಾಗೆ, ಆ ಪ್ರಕೃತಿಯು=ಆ ತ್ರಿಗುಣಾತ್ಮಕ ಪ್ರಕೃತಿಯು, ಈ=ಪ್ರತ್ಯಕ್ಷವಾದ, ಜಗದಾಕೃತಿ ಯಿಂದ=ನಾಮರೂಪಾತ್ಮಕ ಸ್ಥಿತಿಯಿಂದ, ತೋರುವದು=ಪ್ರತೀತಿಯಾಗುತ್ತಿರಲು.

CC-0. Jangamwadi Math Collection. Digitized by eGangotri

ವದು, ಆದರಿಂದ=ಈ ಕಾರಣದಿಂದ, ಕಾರ್ಯಕೆ=ಜಗತ್ತಿಗೆ, ಕಾರಣಮುಂಟು= ಕಾರಣವಿರುವದು, ಎನೆ=ಅನ್ನಲಾಗಿ, ಕಾರಣವಳಿದು=ಕಾರಣ ನಷ್ಟವಾಗಿ, ಆ ಕಾರಿಯವು=ಆ ಕಾರ್ಯವು, ಅನುದಿನ=ಯಾವಾಗಲೂ, ಇಹುದು=ಇರುವದು, ಉಳಿದ=ಅವಶೇಷವಾದ, ಆ ಕಾರಿಯವು=ಆ ಕಾರ್ಯವು, ಬಳಿಕ=ಅನಂತರ, ಮುನ್ನಿನ=ಮೊದಲಿನ, ಕಾರಣವು=ಹೇತುವು, ಆಗದು=ಆಗಲಾರದು, ಅದರಿಂ=ಈ ಕಾರಣದಿಂದ, ಜಗಕೆ=ಜಗತ್ತಿಗೆ, ಲಯವು=ನಾಶವು, ಇಲ್ಲ=ಇಲ್ಲ, ತಿಳಿ=ಅರಿ, ಮಾಣಲಿಯಂದರೆ=ಬೇಡವೆಂದರೆ, ತೋರುವ=ಪ್ರತೀತಿಯಾಗುವ, ಸುಪ್ತಿ= ನಿದ್ರೆಯು, ಜಾಣನೆ=ಕುಶಲನೆ, ಲಯ=ಪ್ರಳಯವನ್ನು, ವೇಳ್ವ=ಹೇಳುವಂಥಾ, ಆಗಮಕ್ಲುಪ್ತಿ=ಶೃತಿಗಳ ನಿರ್ಣಯವು, ಇರಲ್=ಇರಲಾಗಿ, ಇಂತಿದನು=ಹೀಗಿ ರುವದನ್ನು, ಒಡಬಡೆ=ಅಂಗೀಕರಿಸುವದು, ಲೇಸಲ್ಲ=ಒಳ್ಳೆಯದಲ್ಲ, ಪರಿಕಿಸೆ= ವಿಚಾರ ಮಾಡಲು, ಕಾರ್ಯಕ್ಕೆ=ಜಗತ್ತಿಗೆ, ಕಾರಣವಿಲ್ಲ=ಕಾರಣವಿರುವದಿಲ್ಲ.

ತಾತ್ಪರ್ಯ:— ಚೇತನರೂಪನಾದ ಪರಮಾತ್ಮನು ಜಗತ್ತಿಗೆ ಕಾರಣ ನಾಗದಿದ್ದರೂ ತ್ರಿಗುಣಾತ್ಮಕವಾದಂಥಾ ಜಡವಾದ ಪ್ರಕೃತಿಯು ಈ ಜಗದ್ರೂಪ ವಾಗಿ ಪರಿಣಮಿಸುತ್ತದೆ. ಹೇಗಂದರೆ, ಬೀಜವೇ ಗಿಡದ ರೂಪದಿಂದ ಹೇಗೆ ಪರಿಣಮಿಸುವದೋ, ಹಾಗೆ (ಪರಿಣಾಮ ಅಂದರೆ ತನ್ನ ಪೂರ್ವ ರೂಪವನ್ನು ಬಿಟ್ಟು ಉತ್ತರ ರೂಪವನ್ನು ಧಾರಣ ಮಾಡುತ್ತಾ ಹೋಗುವದು.) ಪ್ರಕೃತಿಯು ಜಗದ್ರೂಪದಿಂದ ಪರಿಣಮಿಸುವದು. ಈ ಕಾರಣದಿಂದ ಕಾರ್ಯವಾದ ಜಗತ್ತಿಗೆ ಕಾರಣವಾದ ಪ್ರಕೃತಿಯು ಇರುತ್ತದೆ. ಎಂದು ಪ್ರಶ್ನೆಯನ್ನು ಮಾಡಿದರೆ; ಅದಕ್ಕೆ ಉತ್ತರವನ್ನು ಹೇಳುತ್ತಾರೆ.

ಉತ್ತರ:— ಕಾರಣವು ನಾಶವಾದ ಬಳಿಕ ಉಳಿದಂಥಾ ಕಾರ್ಯವು ಯಾವಾಗಲೂ ಇರಬೇಕಾಗುವದು. ಮತ್ತು ಆ ಉಳಿದಂಥಾ ಕಾರ್ಯವು ಮೊದ ಲಿನ ಕಾರಣವು ಎಂದೂ ಆಗಲಾರದು. ಈ ಕಾರಣದಿಂದ ಕಾರ್ಯವಾದ ಜಗತ್ತಿಗೆ ನಾಶವೇ ಆಗಬಾರದಾಯಿತು. ಅಂದರೆ, ಪ್ರಳಯವೇ ಆಗಬಾರದಾ ಯಿತು. ಹೀಗೆ ಅಂಗೀಕರಿಸಿದರೆ ಅನುಭವಕ್ಕೂ ಪ್ರಮಾಣಕ್ಕೂ ವಿರೋಧವೇ ಪ್ರಾಪ್ತವಾಗುವದು. ಹೇಗಂದರೆ, ಹೇ ಕುಶಲ ಬುದ್ಧಿಯುಳ್ಳ ಶಿಷ್ಯನೇ ಕೇಳು! ನಿದ್ರೆಯು ಬೇಡವೆಂದು ಹೇಳಿದರೂ ಕೂಡಾ ಹೇಗೆ ಬಲಾತ್ಕಾರವಾಗಿ ಬರುವದು ನೋಡು. ಮತ್ತು ಜಗತ್ತು ಪ್ರಳಯವಾಗುವದೆಂದು ವೇದವಾಕ್ಯಗಳು ಪ್ರತಿ ಪಾದನೆಯನ್ನು ಮಾಡುತ್ತವೆ. ಹೀಗೆ ಅನುಭವ ಮತ್ತು ಪ್ರಮಾಣ ಇವುಗಳಿಂದ ಸಿದ್ಧವಾಗಿರುವಂಥಾ ಅರ್ಥವನ್ನು ತ್ಯಜಿಸಿ, ಕಾರ್ಯವು ಕಾರಣವಿಲ್ಲದೆ ಯಾವಾ ಗಲೂ ಇರುವದೆಂಬುವದು ಒಳ್ಳೆಯದಲ್ಲ. ಅರ್ಥಾತ್ ವಿಚಾರವನ್ನು ಮಾಡಿ ನೋಡಲು ಕಾರ್ಯವಾದ ಜಗತ್ತಿಗೆ ಕಾರಣವಿಲ್ಲೆಂಬುವದೇ ಸಿದ್ಧಿಸುವದು.

CC-0. Jangamwadi Math Collection. Digitized by eGangotri

ಬಳಿಕ; ಭಂಗಾರವೇ ಆಭರಣವೆಂದು ಹೇಳಿಸಿಕೊಂಡಂತೆ ತಾನೇ ಜಗದ್ರೂಪನಾಗಿ ತೋರುವನು. ಭಂಗಾರವನ್ನೇ ಆಕಾರ ದೃಷ್ಟಿಯಿಂದ ಬೇರೆ ಹೆಸರುಗೊಂಡು ಕರೆಯುವದು ಹೇಗೆ ಅವಿಚಾರ ಸಿದ್ಧವಾಗಿರುವದೋ; ಹಾಗೇ ತನ್ನನ್ನು ಕಂಡು ಜಗತ್ತೆನ್ನುವದು ಮಾಯಾಮಯವಾಗಿರುತ್ತದೆಂದು ಪ್ರತಿಪಾದಿಸುತ್ತಾರೆ.

ಭೂಮಿಯೊಳುದಿಸಿದ ಮರಮಟ್ಟೆಂತು।
ನೇಮದೊಳೆಲ್ಲಲ್ಲಡಗುವದಂತು॥
ಇದು ವಿಶ್ವ ಪ್ರಕೃತಿಯೊಳಳವಟ್ಟು।
ಅದು ತಾನಲ್ಲಿಯದಲ್ಲಿಯೆ ಕೆಟ್ಟು।
ಪೋಪುದುತತ್ಪ್ರಕೃತಿಗೆ ನಿಜವಾದ॥
ರೂಪಂ ತಾನಿರ್ಲಕ್ಷ್ಯವಭೇದ॥
ಹೇಮದ ವಿನ್ಯಾಸ ವಿಶೇಷವನು।
ಆ ಮಕುಟಾದಿಕವೆನುತಿಹರದನು॥
ಆದರಿಂ ವಿಪರೀತಾಕೃತಿಯಲ್ಲ।
ವಿದಿತಂ ಬಗೆಯಲುಧಿಟವದಕಿಲ್ಲ॥
ಬಗೆಯುದು ಮಾಯಾಮಯ ಸಂಬಂಧ।
ಮಿಗೆ ಮಾಯೆಯ ವಿಚಾರಿತ ಬಂಧ ॥೮॥

ಟೀಕಾ:— ಭೂಮಿಯೊಳು=ಪೃಥ್ವಿಯಲ್ಲಿ, ಉದಿಸಿದ=ಉತ್ಪನ್ನವಾದ, ಮರಮಟ್ಟು=ಗಿಡ ಚಿಕ್ಕ ಕಂಟಿಗಳು, ಎಂತು=ಹೇಗೆ, ನೇಮದೊಳ್=ನಿಯಮದಿಂದ, ಎಲ್ಲ=ಸರ್ವವು, ಅಲ್ಲಿ—ಭೂಮಿಯಲ್ಲಿ, ಅಡಗುವದು=ಅದೃಶ್ಯವಾಗುವದು, ಅಂತು=ಹಾಗೆ, ಇದು=ಈ, ವಿಶ್ವ=ಜಗತ್ತು, ಪ್ರಕೃತಿಯೊಳ್=ತ್ರಿಗುಣಾತ್ಮಕ ಪ್ರಕೃತಿಯಲ್ಲಿ, ಅಳವಟ್ಟು=ಉದಯವಾಗಿ, ಅದು ತಾನು=ಆ ಜಗತ್ತು, ಅಲ್ಲಿಯದಲ್ಲಿಯೆ=ಅಲ್ಲಲ್ಲಿಯೇ, ಕೆಟ್ಟು=ನಾಶವಾಗಿ, ಪೋಪುದು=ಹೋಗುವದು, ತತ್ಪ್ರಕೃತಿಗೆ=ಆ ಪ್ರಕೃತಿಗೆ, ನಿಜವಾದ=ಸತ್ಯವಾದ, ರೂಪಂ=ಸ್ವರೂಪು, ತಾ=ತಾನಾಗಿರುವನು, ನಿರ್ಲಕ್ಷ್ಯದ=ಗುರ್ತಿಸಲಿಕ್ಕೆ ಬಾರದವನು, ಅಭೇದ=ಅಭೇದವುಳ್ಳ, ಹೇಮದ=ಭಂಗಾರದ, ವಿನ್ಯಾಸವಿಶೇಷವನು=ಇರಿಸುವಿಕೆಯ ಹೆಚ್ಚಿಕೆಯನ್ನು ಕುರಿತು, ಅದನು=ಅದನ್ನು, ಆ ಮಕುಟಾದಿಕವೆನುತಿಹರು=ಆ ಕಿರೀಟ ಕುಂಡಲಗಳೆಂದು ಕರೆಯುತ್ತಿರುವವರು, ಆದರಿಂ=ಈ ಕಾರಣದಿಂದ, ವಿಪರೀತಾಕೃತಿಯಲ್ಲ=ವಿರುದ್ಧವಾದ ರೂಪು ಅಲ್ಲ, ಬಗೆಯಲು=ವಿಚಾರಮಾಡಲು, ವಿದಿತಂ=ಪ್ರಸಿದ್ಧಮಾಗಿ, ಅದಕೆ=ಆ ಆಕೃತಿಗೆ, ಧಿಟವು=ಸತ್ಯವು, ಇಲ್ಲ=ಇರುವದಿಲ್ಲ, ಬಗೆಯುದು=ಆ ಆಕಾರ ಭಾವನೆಯು, ಮಾಯಾಮಯಸಂಬಂಧ=ಕೇವಲ ಮಾಯೆಯ ಸ್ವರೂಪ

CC-0. Jangamwadi Math Collection. Digitized by eGangotri

ವಾದದ್ದು, ಮಾಯೆಯೆ=ಮಾಯೆ ಅಂದರೆ, ಅವಿಚಾರಿತಬಂಧ=ಅವಿಚಾರದಿಂದ ಕೂಡಿದ್ದು, ಮಿಗೆ=ಆಶ್ಚರ್ಯಕರವಾಗಿರುವದು.

ತಾತ್ಪರ್ಯ:— ವಿವೇಕಶಾಲಿಯಾದ ಶಿಷ್ಯನೇ ಕೇಳು! ವಿವರ್ತವಾದ ಮೂಲಕ ತಾನೇ ಜಗದ್ರೂಪನಾಗಿರುವೆನೆಂದು ತಿಳಿಯುವದು ಕೂಡಾ ಅವಿಚಾರವೇ ಆಗಿರುತ್ತದೆ, ಯಾಕಂದರೆ, ಭಂಗಾರಕ್ಕೆ ಭಿನ್ನವಾಗಿ ಕಿರೀಟವು ಇಲ್ಲದಂತೆ ನಿನಗಿಂತ ಭಿನ್ನವಾಗಿ ಜಗತ್ತೆಂಬುವದು ಇಲ್ಲವೇ ಇಲ್ಲ. ಕೇವಲ ನಾಮ ಮಾತ್ರವಾಗಿರುತ್ತದೆ ಎಂಬ ಅಭಿಪ್ರಾಯವನ್ನು ಇಲ್ಲಿ ವರ್ಣಿಸುವರು. ಹೇಗಂದರೆ, ಭೂಮಿಯಲ್ಲಿ ಉತ್ಪನ್ನಗಳಾದ ಗಿಡ ಚಿಕ್ಕ ಕಂಟೆಗಳು ಪುನಃ ಅಲ್ಲಿಯೇ ಹೇಗೆ ನಾಶವಾಗಿ ಹೋಗುವವೋ; ಹಾಗೆ ಈ ನಾಮ ರೂಪಾತ್ಮಕ ಜಗತ್ತು ಪ್ರಕೃತಿಯಲ್ಲಿ ಹುಟ್ಟಿ ಪುನಃ ಪ್ರಕೃತಿಯಲ್ಲಿಯೇ ನಾಶವಾಗಿ ಹೋಗುತ್ತದೆ. ಹೀಗಾದರೂ ಆ ಪ್ರಕೃತಿಗೆ ನಿಜವಾದ ಸ್ವರೂಪವು ತಾನೇ ಆಗಿರುವನು. ಅಂದರೆ, ತನಗಿಂತ ಬೇರೆ ಕಾರಣಯಿಲ್ಲೆಂಬ ಅಭಿಪ್ರಾಯವು. ಭೇದರಹಿತವಾಗಿರುವ ಭಂಗಾರವನ್ನು ಸುವರ್ಣಕಾರನು ಹೆಚ್ಚು ಕಡಿಮೆಯಾಗಿರುಸುವದರಿಂದಲೇ; ಆ ಭಂಗಾರವನ್ನು ಕುರಿತು ಜನರುಕಿರೀಟ, ಕುಂಡಲ,ಉಂಗುರುಗಳೆಂದು ಮೊದಲಾದ ನಾಮಗಳಿಂದ ಕರೆಯುತ್ತಾರೆ. ಆದರೆ ಆಯಾಯ ಆಭರಣಗಳ ಆಕಾರವುಸತ್ಯವಾದದ್ದಲ್ಲ. ಹಾಗೆ ತೋರಿದಾಗ್ಯಾದರೂ ಭಂಗಾರಕ್ಕೆ ಹಾನಿಯೂ ಇಲ್ಲ. ಅರ್ಥಾತ್ ಭಂಗಾರವು ಇದ್ದಕ್ಕಿದ್ದಂತೆ ಇದ್ದರೂ ಅದರಲ್ಲಿ ನಾಮರೂಪುಗಳು ಅವಿಚಾರಿತ ರಮಣೀಯಗಳಾಗಿ ಹೇಗೆತೋರುತ್ತವೆಯೋ; ಹಾಗೇ ಸಚ್ಚಿದಾನಂದ ಸ್ವರೂಪನಾದ ನೀನು ನಿರ್ವಿಕಾರವಾಗಿದ್ದರೂ,ನಿನ್ನಲ್ಲಿ ಮಾಯೆಯ ಮೂಲಕ ಈ ಜಗತ್ತು ತೋರುತ್ತಿರುವದು. ಯಥಾರ್ಥವಾಗಿ ವಿಚಾರಮಾಡಿ ನೋಡಿದರೆ ಜಗತ್ತೇ ಇಲ್ಲೆಂಬ ಭಾವವು.

ಬಳಿಕ; ಸ್ವಪ್ನದಲ್ಲಿ ಜ್ಞಾನಜ್ಞೇಯಗಳು ಏಕ ಕಾಲದಲ್ಲಿ ತೋರಿದಂತೆ, ನಿನ್ನಲ್ಲಿ ಅವಿದ್ಯಾವೃತ್ತಿ ಜ್ಞಾನರೂಪ ದೃಷ್ಟಿಯಸಮಕಾಲದಲ್ಲಿಯೇ ಈ ಸೃಷ್ಟಿಯು ಕಂಡುಬರುವದು. ಆದ್ದರಿಂದ ಸ್ವಪ್ನದಂತೆ ಈ ಜಗತ್ತು ಮಿಥ್ಯೆಯಾಗಿರುತ್ತದೆಂದು ದೃಷ್ಟಿಸೃಷ್ಟಿವಾದದ [ದ್ವಿಸತ್ತಾಕವಾದ] ಸಿದ್ಧಾಂತವನ್ನು ಹೇಳುತ್ತಾರೆ.

ಪುಸಿಯಾರೋಪಿತ ಜೀವಾಭಾಸ |
ಎಸೆವುದು ಬಗೆಯುಂದದರ ವಿಲಾಸ ||
ಇನಿತು ಪದಾರ್ಥಂಗಳ ರೂಪಾಗಿ |
ಕನಸಿನವೋಲು ಜಗತ್ರಯವಾಗಿ ||
ತೋರುವುದಾಯಾರೂಪಿಂ ದೃಷ್ಟಿ |
ಬೇರೆನಿಸುತ್ತಿಂತಾಯ್ತೀ ಸೃಷ್ಟಿ ||

CC-0. Jangamwadi Math Collection. Digitized by eGangotri

ಸ್ಥಿರವಲ್ಲಿದು ಧಿಟವೆಂಬೀ ಬುದ್ಧಿ।
ನಿರುತಂ ಪುಸಿಯೆಂದೆಂಬುದೆ ಸಿದ್ಧಿ॥
ಅದರಿಂ ನಿತ್ಯಾಸಂಗಂ ತಾನು।
ಸದಮಲ ಸುಖಪೂರ್ಣವೆ ಯಾಗಿಹನು॥
ಅಂತು ವಿಶೇಷಾಸಂಗದ ಭೂಮಿ।
ಇಂತೆಂದರಿದಾತನೆ ಸುಕ್ಷೇಮಿ॥

ಟೀಕಾ:–ಪುಸಿಯ=ಮಿಥ್ಯವಾದ, ಆರೋಪಿತ=ಕಲ್ಪಿತವಾದ, ಜೀವಾಭಾಸ=ಆಭಾಸ ಜೀವವು, ಎಸೆವುದು=ತೋರುವುದು, ಅಂದು=ಆ ಹೊತ್ತಿನಲ್ಲಿ, ಅದರ=ಆ ಜೀವದ, ಬಗೆಯ=ಭಾವನೆಯ, ವಿಲಾಸ=ಕ್ರೀಡೆಯೆ, ಇನಿತು=ಇಷ್ಟು, ಪದಾರ್ಥಂಗಳ ರೂಪಾಗಿ=ವಸ್ತುಗಳ ಆಕಾರವಾಗಿ, ಕನಸಿನವೋಲು=ಸ್ವಪ್ನದಂತೆ, ಜಗತ್ರಯವಾಗಿ=ಮೂರು ಲೋಕಗಳಾಗಿ, ತೋರುವದು=ಕಾಣಿಸುವದು, ಆಯಾ ರೂಪಿಂ=ಬೇರೆ ರೂಪಿನಿಂದ, ದೃಷ್ಟಿ=ಅವಿದ್ಯಾವೃತ್ಯಾತ್ಮಕ ಜ್ಞಾನವು, ಬೇರೆನಿಸುತ್ತ=ಭಿನ್ನವೆನಿಸುತ್ತ, ಈ ಸೃಷ್ಟಿ=ಪ್ರತ್ಯಕ್ಷವಾದ ಜಗತ್ತು, ಇಂತು=ಈ ಪ್ರಕಾರ, ಆಯ್ತು=ಆಯಿತು, ಸ್ಥಿರವಲ್ಲ=ಸತ್ಯವಲ್ಲ, ಇದು=ಜಗತ್ತು, ಧಿಟವೆಂಬೀಬುದ್ಧಿ=ಸತ್ಯವೆಂಬುವ ಬುದ್ಧಿಯು, ನಿರುತಂ=ಯಾವಾಗಲೂ, ಪುಸಿಯೆಂದೆಂಬುದೆ=ಸುಳ್ಳು ಯೆಂಬುದೇ, ಸಿದ್ಧಿ=ನಿಶ್ಚಯವು, ಅದರಿಂ=ಈ ಕಾರಣದಿಂದ, ನಿತ್ಯಾಸಂಗಂ ತಾನು=ತಾನು ಯಾವಾಗಲೂ ಅಸಂಗನಾದವನು, ಸತ್=ತ್ರಿಕಾಲ ಅಬಾಧ್ಯನು, ಅಮಲ=ಪರಿಶುದ್ಧನು, ಸುಖ=ಆನಂದ ಸ್ವರೂಪನು, ಪೂರ್ಣವೇ=ತ್ರಿವಿಧ ಪರಿಚ್ಛೇದ ಶೂನ್ಯನು, ಆಗಿಹನು=ಆಗಿರುವನು, ಅಂತು=ಹಾಗೂ, ವಿಶೇಷಾಸಂಗದ ಭೂಮಿ=ವಿಶೇಷಾಸಂಗವೆಂಬ ಭೂಮಿಕೆಯು, ಇಂತೆಂದು=ಹೀಗೆಂದು, ಅರಿದಾತನೇ=ತಿಳಿದವನೇ, ಸುಕ್ಷೇಮಿ=ಸುಖವುಳ್ಳವನು.

ತಾತ್ಪರ್ಯ:— ಎಲೈ ಶಿಷ್ಯನೇ ಕೇಳು, ಜಗತ್ತು ನಿನ್ನಲ್ಲಿ ಕೇವಲ ಇಲ್ಲವೇ ಇಲ್ಲ; ಕಿಂತು ಸ್ವಪ್ನದಂತೆ ಭ್ರಮಾತ್ಮಕವಾಗಿರುತ್ತದೆ. ಅಂದರೆ, ಅಧಿಷ್ಠಾನನಾದ ನಿನ್ನಲ್ಲಿ ಸ್ವಪ್ನತೋರುವದು, ಆ ಸ್ವಪ್ನದಲ್ಲಿ ಆಭಾಸರೂಪ ಒಬ್ಬ ಮಿಥ್ಯಾಜೀವನು ತೋರುವನು. ಅವನಿಂದ ಸಕಲ ಸ್ವಪ್ನ ಪ್ರಪಂಚವೇ ತೋರಿದಂತೆ ಜ್ಞಾತೃ ಜ್ಞಾನಜ್ಞೇಯಾತ್ಮಕವಾದ ಪ್ರಪಂಚವು ತೋರುವದು. ಸ್ವಪ್ನಾಧಿಷ್ಠಾನನಾದ ನಿನ್ನ ಚೈತನ್ಯದ ಆಶ್ರಯವನ್ನು ಮಾಡಿಕೊಂಡಿರುವಂಥಾ ಅವಿದ್ಯೆಯು ನಿದ್ರಾದೋಷದಿಂದ ಕ್ಷೋಭವಾಗುತ್ತದೆ. ಆ ಅವಿದ್ಯೆಯಲ್ಲಿರುವ ಸತ್ವ ಗುಣಾಂಶದಿಂದ ಅವಿದ್ಯಾ ವೃತ್ತಿರೂಪ ಜ್ಞಾನವು (ದೃಷ್ಟಿಯು) ಉತ್ಪನ್ನವಾಗಲು, ಅದರಲ್ಲಿರುವ ತಮೋ ಗುಣಾಂಶದಿಂದ ಜ್ಞೇಯವು(ಸೃಷ್ಟಿಯು) ಉತ್ಪನ್ನವಾಗುವದು. ಅಂದರೆ, ಸ್ವಪ್ನದಲ್ಲಿ ಗಜಜ್ಞಾನ ಸಮಕಾಲದಲ್ಲಿಯೇ ಗಜವು; ಪಟಘಟಜ್ಞಾನ ಸಮಕಾಲ

CC-0. Jangamwadi Math Collection. Digitized by eGangotri

ದಲ್ಲಿಯೇ ಘಟಪಟಾದಿ ಪದಾರ್ಥಗಳು ತೋರುತ್ತವೆ. ಈ ದೃಷ್ಟಾಂತದಂತೆ ಅಖಂಡ ಸಚ್ಚಿದಾನಂದ ಸ್ವರೂಪನಾದ ನಿನ್ನನ್ನು ಆಶ್ರಯಿಸಿಕೊಂಡಿರುವ ಮಾಯೆಯೇ ಸತ್ವ ಗುಣಾಂಶದಿಂದ ಜ್ಞಾನರೂಪ ದೃಷ್ಟಿಯುಳ್ಳದ್ದಾಗಿಯೂ ತಮೋ ಗುಣಾಂಶದಿಂದ ಜ್ಞೇಯರೂಪ ಸೃಷ್ಟಿಯುಳ್ಳದ್ದಾಗಿಯೂ ಕಂಡು ಬರುವದು. ಇದೇ ದೃಷ್ಟಿ ಸೃಷ್ಟಿವಾದವು; ಇದು ವಿಚಾರ ಸಾಗರದಲ್ಲಿ ವಿಸ್ತಾರ ವಾಗಿರುವದು ಅರ್ಥಾತ್ ಸ್ವಪ್ನಾವಸ್ಥೆಯಲ್ಲಿ ಸೃಷ್ಟಿ, ಈಶ್ವರ, ಗುರು ಬಂಧ, ಮೋಕ್ಷ ಬೋಧ್ಯ ಬೋಧಕತ್ವಾದಿ ವ್ಯವಹಾರವು ತೋರಿದಂತೆ, ಅಖಂಡ ಬ್ರಹ್ಮ ಸ್ವರೂಪದಲ್ಲಿ ಅವಿದ್ಯಾಮೂಲಕ ಜೀವ, ಈಶ್ವರ, ಜಗತ್ತು ಮೊದಲಾದ ವ್ಯವಹಾರವು ಸಂಭವವಾಗಿರುತ್ತದೆ. ಆದ್ದರಿಂದ ಸ್ವಪ್ನದಂತೆ ಮಿಥ್ಯೆಯಾಗಿರುತ್ತದೆ; ಸತ್ಯವಲ್ಲ. ಕರ್ಣನು ತಾನು ಕುಂತೀ ಪುತ್ರನೆಂಬುವದನ್ನು ಮರೆತು ರಾಧಾ ಪುತ್ರನೆಂದು ತಿಳಕೊಂಡನು. ಅನಂತರ ಶ್ರೀಕೃಷ್ಣ ಪರಮಾತ್ಮನ ಉಪದೇಶದಿಂದ ನಾನೇ ಕುಂತೀ ಪುತ್ರನೆಂದು ಹೇಗೆ ನಿಶ್ಚಯಿಸಿದನೋ, ಹಾಗೆ ಬ್ರಹ್ಮವೇ ಅವಿದ್ಯಾಮೂಲಕ ನಾನು ಜೀವನೆಂಬ ಭ್ರಾಂತಿಯು ಉತ್ಪನ್ನವಾಗಿರುವದು. ಗುರೂಪದೇಶದಿಂದ ತನ್ನನ್ನು ತಾನು ಅರಿಯಲು ಸಚ್ಚಿದಾನಂದ ನಿತ್ಯಪೂರ್ಣ ಅಸಂಗವಾದ ಬ್ರಹ್ಮವೇ ತಾನಾಗಿರುವನು. ಹೀಗೆ ತಿಳಿಯುವದೇ ವಿಶೇಷಾಂಗ ಭೂಮಿಕೆಯು. ಈ ಭೂಮಿಕೆಯುಳ್ಳವನೇ ಉತ್ತಮ ಅಧಿಕಾರಿಯು. ಇವನೇ ಸುಖಿವುಳ್ಳವನು ಅರ್ಥಾತ್ ಬ್ರಹ್ಮಸತ್ಯ ಜಗನ್ಮಿಥ್ಯವೆಂಬ ಜ್ಞಾನವೇ ಪರಮ ಪುರುಷಾರ್ಥಕ್ಕೆ ಸಾಧನವಾಗಿರುವದೆಂಬ ಭಾವವು.

ಬಳಿಕ; ಆ ಅಸಂಗ ಭೂಮಿಕೆಯನ್ನು ಪ್ರಾಪ್ತಮಾಡಿಕೊಂಡಿರುವಂಥಾ ಅಧಿಕಾರಿಯ ಸ್ವರೂಪವನ್ನು ಅನೇಕ ದೃಷ್ಟಾಂತಗಳಿಂದ ವರ್ಣನಮಾಡುತ್ತಾರೆ.

ಆ ನಿಸ್ಸಂಗತೆ ಪಡೆದವನಿರವು ।
ಸೂನು ತಿಳಿಯೆ ಕಲ್ಪನೆಗದು ಪರವು ॥
ಅದು ತೆರೆಯಡಗಿದ ಸಾಗರದಂತೆ ।
ಅದು ಮೇಘಂ ತೊಲಗಿದ ನಭದಂತೆ ॥
ಪೊರೆಗಳೆದೆಲೆ ವಾಳೆಯ ಸುಳಿಯಂತೆ ।
ಮರುತ ನಡಗಿದೆಡೆಯಣ ಸೊಡರಂತೆ ॥
ಎಲೆಯುದರಿದ ತರುವಿನ ಪರಿಯಂತೆ ।
ನೆಲಸಿದ ಸುಖ ನಿದ್ರಿತ ನರನಂತೆ ॥
ಮಂಜುದೊಲಗಿ ಮಿರುಗುವ ರವಿಯಂತೆ ।
ಮಂಜೀರಾದಿಯುಳಿದ ಪೊನ್ನಂತೆ ॥
ಎಸೆವುದು ಸಚ್ಚಿನ್ಮಾತ್ರವೆಯಾಗಿ ।
ಮುಸಗಿಹುದೊಂದರ ಸೋಂಕಿಲ್ಲಾಗಿ ॥೧೦॥

CC-0. Jangamwadi Math Collection. Digitized by eGangotri

ಟೀಕಾ:— ಆ ನಿಸ್ಸಂಗತೆ ಪಡೆದವನ=ಆ ಅಸಂಗಭೂವಿಕೆಯನ್ನು ಪ್ರಾಪ್ತಿ ಮಾಡಿಕೊಂಡವನ, ಇರುವು=ಸ್ವರೂಪವು, ತಿಳಿಯೆ=ವಿಚಾರಮಾಡಲಾಗಿ, ಕಲ್ಪನೆಗೆ=ಮನಸ್ಸಿನ ಊಹೆಗೆ, ಅದು ಪರವು=ಆ ಸ್ವರೂಪವು ಭಿನ್ನವಾಗಿರುವದು, ಸೂನು=ಎಲೈ ಮಗನೇ !, ಅದು=(ಅವನ) ಸ್ವರೂಪು, ತೆರೆಯಡಗಿದ=ತರಂಗ ಗಳಿಲ್ಲದ, ಸಾಗರದಂತೆ=ಸಮುದ್ರದಂತೆ, ಅದು=ಸ್ವರೂಪು. ಮೇಘಂ=ಮೋಡ ವನ್ನು, ತೊಲಗಿದ=ಬಿಟ್ಟ, ನಭದಂತೆ=ಆಕಾಶದಂತೆ, ಪೊರೆಗಳೆದ=ಪೊರೆಗಳನ್ನು ಕಿತ್ತ, ಎಲೆವಾಳೆಯ=ಚಿಕ್ಕ ಬಾಳಿಯ, ಸುಳಿಯಂತೆ=ಸುಳಿಯಹಾಗೆ, ಮರುತನು= ವಾಯುವು, ಅಡಗಿದ=ಇಲ್ಲದ, ಎಡೆಯಣ=ಸ್ಥಾನದಲ್ಲಿದ್ದ, ಸೊಡರಂತೆ=ದೀವಿಗೆಯು ಹಾಗೆ, ಎಲೆಯುದರಿದ=ಎಲೆಗಳು ಬಿದ್ದ, ತರುವಿನ=ವೃಕ್ಷದ, ಪರಿಯಂತೆ=ಸ್ಥಿತಿ ಯಂತೆ, ಸುಖನಿದ್ರಿತ=ಸುಖವಾಗಿ ನಿದ್ರೆಯನ್ನು ಮಾಡುತ್ತಾ, ನೆಲಸಿದ=ಇದ್ದ, ನರನಂತೆ=ಮನುಷ್ಯನಂತೆ, ಮಂಜುದೊಲಗಿ=ಹಿಮಹೋಗಿ, ಮಿರಗುವ=ಪ್ರಕಾಶ ಮಾನನಾದ, ರವಿಯಂತೆ=ಸೂರ್ಯನಂತೆ, ಮಂಜೀರಾದಿ=ಕೂಡಿದ ದೋಷವನ್ನು, ಅಳಿದ=ತ್ಯಾಗಮಾಡಿದ, ಪೊನ್ನಂತೆ=ಭಂಗಾರದಂತೆ, ಸಚ್ಚಿನ್ಮಾತ್ರವೆಯಾಗಿ= ಉಪಾಧಿರಹಿತ ಕೇವಲ ಸದ್ರೂಪ ಚಿದ್ರೂಪವಾಗಿ, ಎಸೆವುದು=ಶೋಭಿಸುವದು, ಒಂದರ=ಯಾವ ಪದಾರ್ಥದ, ಸೋಂಕಿಲ್ಲಾಗಿ=ಸ್ಪರ್ಶವಿಲ್ಲದ್ದರಿಂದ, ಮುಸ ಗಿಹುದು=ಪ್ರಕಾಶಮಾನವಾಗಿರುವದು.

ತಾತ್ಪರ್ಯ:— ಎಲೋ ಶಿಷ್ಯನೇ ! ಕೇಳು. ಆ ಅಸಂಗ ಭೂಮಿಕೆಯನ್ನು ಪ್ರಾಪ್ತನಾಡಿಕೊಂಡಂಥಾ ಪುರುಷನಸ್ವರೂಪಯಾವದೊಂದು ಕಲ್ಪನೆಗೆ ನಿಲಕದೆ ಬೇರೆಯಾಗಿರುವದು. ಹೇಗಂದರೆ, ತೆರೆಗಳಿಂದ ರಹಿತವಾದ ಸಮುದ್ರವು ಹೇಗೆ ಶಾಂತವಾಗಿರುವದೋ, ಹಾಗೇ ಅಸಂಗ ಭೂಮಿಕೆಯವನ ಸ್ವರೂಪು ಸಂಕಲ್ಪ ವಿಕಲ್ಪ ಭಾವನೆಗಳಿಲ್ಲದ್ದರಿಂದ ಶಾಂತವಾಗಿರುವದು. ಮೇಘವಿಲ್ಲದ ಆಕಾಶವು ಸ್ವಚ್ಛವಾಗಿರುವಂತೆ, ಆವರಣರೂಪವಾದ ಅಜ್ಞಾನವಿಲ್ಲದ್ದರಿಂದ ಅವನ ಇರವು ಸ್ವಚ್ಛವಾಗಿರುತ್ತದೆ. ಬಾಳೆಯ ಎಲೆಗಳನ್ನು ಸುಲಿಯುತ್ತಿರಲಿಕ್ಕೆ, ಕಡೆಗೆ ಸುಲಿಯ ಲಿಕ್ಕೆ ಬಾರದ ದಿಂಡು ಹೇಗೆ ಉಳಿಯುತ್ತದೆಯೋ; ಹಾಗೇ ಪಂಚಕೋಶಾದಿ ಅನಾತ್ಮವರ್ಗವನ್ನು ನೇತಿಗಳೆಯಲು, ಮುಂದೆ ನೇತಿಗಳೆಯಲಿಕ್ಕೆ ಬಾರದಂಥಾ ಸತ್ಯಸ್ವರೂಪವೇ ಉಳಿಯುವದು. ಗಾಳಿಯಿಲ್ಲದ ಸ್ಥಾನದಲ್ಲಿಟ್ಟ ದೀಪವು ಹೇಗೆ ಅಚಲವಾಗಿರುವದೋ, ಹಾಗೇ ಸಂಶಯ ವಿಪರೀತ ಭಾವನೆಗಳಿಂದ ರಹಿತವಾದ ಅವನ ಸ್ವರೂಪು ನಿಶ್ಚಲ ಭೂತವಾಗಿರುತ್ತದೆ. ಎಲೆಗಳಿಲ್ಲದ ವೃಕ್ಷವು ನಿಃಶಬ್ದ ಮಾಗಿರುವಂತೆ, ಯಾವದೊಂದು ಉಪಾಧಿಗಳಿಲ್ಲದ್ದರಿಂದ ಅವನ ಸ್ವರೂಪು ನಿಃಶಬ್ದ ರೂಪವಾಗಿರುತ್ತದೆ. ನಿದ್ರೆಯಿಂದ ಸುಖವಾಗಿ ಪುರುಷನು ಮಲಗಿಕೊಂಡಿರುವಂತೆ, ಅವನ ಸ್ವರೂಪು ಆನಂದಮಯವಾಗಿರುವದು. ಮಂಜನ್ನು ಹೋಗಲಾಡಿಸಿ ಪ್ರಕಾಶ ಮಾನವಾಗಿ ಬೆಳಗುವ ಸೂರ್ಯನಂತೆ, ಅಜ್ಞಾನ ಕಾರ್ಯಗಳಾದ ಶರೀರಾದಿ

CC-0. Jangamwadi Math Collection. Digitized by eGangotri

ಗಳನ್ನು ವಿವೇಕದಿಂದ ಬೇರಿಟ್ಟು ತಾನು ಸ್ವಯಂಪ್ರಕಾಶನಾಗಿಹನು. ಭಂಗಾರವನ್ನು ಅಗ್ನಿಯಲ್ಲಿ ಪುಟಕ್ಕೆ ಹಾಕಲು ಆ ಭಂಗಾರವು ತನ್ನ ಮಲಿನತ್ವಾದಿ ದೋಷಗಳನ್ನು ಬಿಟ್ಟು ಹೊಳೆಯುವಂತೆ, ಬ್ರಹ್ಮಜ್ಞಾನವೆಂಬ ಅಗ್ನಿಯಿಂದ ಸಂಚಿತಾದಿ ಕರ್ಮಗಳು ಸುಟ್ಟದ್ದರಿಂದ ಅವನ ಸ್ವರೂಪು ನಿರ್ಮಳರೂಪವಾಗಿರುವವದು. ಅಂದರೆ, ಅವಿದ್ಯಾ ತತ್ ಕಾರ್ಯಗಳ ಸ್ಪರ್ಶವು ಕೂಡಾ ಇಲ್ಲದಲೆ ಸ್ವಯಂ ಪ್ರಕಾಶಮಾನವಾಗಿರುವಡು ಎಂಬ ತಾತ್ಪರ್ಯವು.

ಬಳಿಕ, ಸುಖೇಚ್ಛೆ, ಸದಾತ್ಮವಿಚಾರ, ಅಸಂಗಗಳೆಂಬ ಮೂರು ಭೂಮಿಕೆಗಳು ವಿವೇಕದಿಂದ ಪ್ರಾಪ್ತಗಳಾಗುತ್ತವೆ. ಆದ್ದರಿಂದ ಇವುಗಳೆಲ್ಲಾ ಕೂಡಿ ಒಂದು ಜಾಗ್ರದವಸ್ಥೆಯಾಗುವದೆಂದು ಹೇಳುತ್ತಾರೆ.

ವಿಕೃತಿಯು ನುಳಿದೀ ಸಂಸೃತಿಯಲ್ಲಿ ।
ಸುಕೃತದಿ ವೈರಾಗ್ಯಂ ದೊರೆದಲ್ಲಿ ॥
ವರಮೋಕ್ಷಾಪೇಕ್ಷೆಯು ಬಲದಿಂದ ।
ಗುರುವರನೊರೆದ ಸುಯುಕ್ತಿಗಳಿಂದ ॥
ವಿರಚಿಪ ಶಾಸ್ತ್ರದ ಸುವಿವೇಕದೊಳು ।
ದೊರಕೊಂಡ ಜಡಾಜಡ ಭೇದದೊಳು ॥
ಆ ಜಡಸಂಗಂ ತನಗಿಲ್ಲೆಂಬ ।
ಆ ಜಡತನು ಮುಖ್ಯವೆ ಪುಸಿಯೆಂಬ ॥
ಮನದಾಲೋಚನೆಯಿಂದ ಸಮಂತು ।
ಅನುವಾಯಿತು ಭೂಮಿತ್ರಯಮಿಂತು॥
ಇದು ಬುದ್ಧಿಯ ಸುವಿವೇಕ ದೊಳಹುದು।
ಅದರಿಂ ಜಾಗ್ರಮಿದೆಂದೆನಿಸಿಹುದು॥
ಯೋಗವನಭ್ಯಾಸಿಪ ಮಾನವನು।
ಯೋಗಂ ಸಿದ್ಧಿಸದೊಡಲಳಿದವನು॥
ಏನಹನೆಂದುರೆ ಕೇಳ್ದನು ಸುತನು।
ಆನಂದದಿ ಪೇಳ್ದಂ ಗುರುವರನು॥೧೧॥

ಟೀಕಾ:— ಈ ಸಂಸೃತಿಯಲ್ಲಿ=ತೋರುವ ಸಂಸಾರದಲ್ಲಿ, ವಿಕೃತಿಯನು=ಕಾಮಾದಿವಿಕಾರವನ್ನು, ಉಳಿದು=ಬಿಟ್ಟು, ಸುಕೃತದಿ=ಪುಣ್ಯದಿಂದ, ವೈರಾಗ್ಯಂ=ವಿರಾಗವು, ದೊರೆದಲ್ಲಿ=ಪ್ರಾಪ್ತವಾದಲ್ಲಿ, ವರ-ಶ್ರೇಷ್ಠವಾದ, ಮೋಕ್ಷಾಪೇಕ್ಷೆಯ=ಮುಮುಕ್ಷುತ್ವದ, ಬಲದಿಂದ=ಸಾಮರ್ಥ್ಯದಿಂದ,ಗುರುವರನು=ಸದ್ಗುರುನಾಥನು, ಒರೆದ=ತಿಳಿಸಿದ, ಸುಯುಕ್ತಿಗಳಿಂದ=ಒಳ್ಳೆ ದೃಷ್ಟಾಂತಗಳಿಂದ, ವಿರಚಿಪ=ರಚಿಸುತ್ತಿರುವ, ಶಾಸ್ತ್ರದ=ಗ್ರಂಥದ, ಸುವಿವೇಕದೊಳು=ಆತ್ಮಾನಾತ್ಮ ವಿವೇಕದಿಂದ,

CC-0. Jangamwadi Math Collection. Digitized by eGangotri

ದೊರಕೊಂಡ=ಪ್ರಾಪ್ತವಾದ, ಜಡಾಜಡ ಭೇದದೊಳ್=ಜಡಚೇತನ ಭೇದಗಳಲ್ಲಿ, ಆ ಜಡಸಂಗಂ=ಆ ಜಡವಸ್ತುವಿನ ಸಂಬಂಧವು, ತನಗಿಲ್ಲೆಂಬ=ಚೈತನ್ಯ ಸ್ವರೂಪನಾದ ತನಗೆ ಇಲ್ಲವೆಂಬ, ಆ ಜಡತನು ಮುಖ್ಯವೇ=ಸ್ವಜ್ಞಪ್ತಿ ಶೂನ್ಯವಾದ ಶರೀರವೇ ಮೊದಲಾಗಿ, ಪುಸಿಯೆಂಬ=ಸುಳ್ಳೆಂಬ, ಮನದಾಲೋಚನೆಯಿಂದ=ಮನನದಿಂದ, ಸಮಂತು=ಚನ್ನಾಗಿ, ಇಂತು=ಈ ಪ್ರಕಾರ, ಭೂಮಿತ್ರಯಂ=ಮೂರು ಭೂಮಿಕೆಗಳು, ಅನುವಾಯಿತು=ಪ್ರಾಪ್ತಗಳಾದವು, ಇದು=ಭೂಮಿತ್ರಯವು, ಬುದ್ಧಿಯ=ಮತಿಯ, ಸುವಿವೇಕದೊಳ್=ವಿವೇಕದಿಂದ, ಅಹುದು=ಆಗುವದು, ಅದರಿಂ=ಆದ್ದರಿಂದ, ಜಾಗ್ರಮಿದೆಂದು=ಜಾಗ್ರಾವಸ್ಥೆಯೆಂದು, ಎನಿಸುವದು=ಹೇಳಿಸಿಕೊಳ್ಳುವದು, ಯೋಗವನು=ಯೋಗವನ್ನು, ಅಭ್ಯಾಸಿಪ=ಅಭ್ಯಾಸವನ್ನು ಮಾಡುವ, ಮಾನವನು=ಮನುಷ್ಯನು, ಯೋಗಂ ಸಿದ್ಧಿಸದೆ=ಯೋಗವು ಪ್ರಾಪ್ತವಾಗದೆ, ಒಡಲಳಿದವನು=ಶರೀರ ಪಾತವಾದವನು, ಏನಹನೆಂದು=ಏನಾಗುವನೆಂದು, ಉರೆ=ಚನ್ನಾಗಿ, ಸುತನು=ಶಿಷ್ಯನು, ಕೇಳ್ದನು=ವಿಚಾರಿಸಿದನು, ಆ ಗುರುವನು=ಆ ಸದ್ಗುರುನಾಥನು, ಆನಂದದಿ=ಸಂತೋಷದಿಂದ, ಪೇಳ್ದಂ=ಹೇಳಿದನು.

ತಾತ್ಪರ್ಯ:— ಈ ಸಂಸಾರದಲ್ಲಿ ದೇಹಧಾರಿಯಾದ ಪ್ರಾಣಿಯು ಅನೇಕ ಜನ್ಮಂಗಳಲ್ಲಿ ನಿಷ್ಕಾಮ ಪುಣ್ಯಕರ್ಮಗಳನ್ನು ಮಾಡಲು, ಅದರಿಂದ ಅಂತಃಕರಣ ಶುದ್ಧವಾಗುವದು. ಆದ್ದರಿಂದಲೇ ಇಹಪರ ವಿಷಯಂಗಳಲ್ಲಿ ಅನಿತ್ಯಾದಿ ದೋಷಗಳನ್ನು ಕಂಡು ವೈರಾಗ್ಯವುತ್ಪನ್ನವಾಗುವದು. ಆದ್ದರಿಂದ ಕಾಮ ಕ್ರೋಧಾದಿ ವಿಕಾರಗಳನ್ನು ತ್ಯಾಗ ಮಾಡುವನು. ಆ ವಿಷಯಗಳಲ್ಲಿ ವೈರಾಗ್ಯವುಳ್ಳವನಾದ್ದರಿಂದಲೇ ಅತ್ಯಂತ ದುಃಖನಿವೃತ್ತಿ ಪರಮಾನಂದ ಪ್ರಾಪ್ತಿರೂಪ ಮೋಕ್ಷದ ಇಚ್ಛೆಯನ್ನು ಮಾಡುವನು. ಇಂಥಾ ಮುಮುಕ್ಷುತ್ವವಿದ್ದದರಿಂದಲೇ ಗುರುಗಳನ್ನು ಹೊಂದುವನು. ಗುರುವಿನನ್ನು ಹೊಂದಿ ಗುರುಸೇವಾ ತತ್ಪರನಾಗಿ ಅವರ ಕೃಪೆಯನ್ನು ಪಡೆದು ಶ್ರವಣ ಮಾಡಲಿಕ್ಕೆ ಉದ್ಯುಕ್ತನಾಗುವನು, ಆಗ ಗುರುಗಳು ಆ ಶಾಸ್ತ್ರದರ್ಥವನ್ನು ಅನೇಕ ದೃಷ್ಟಾಂತಗಳಿಂದ ತಿಳಿಸುವದರಿಂದಲೂ, ತಾನೂ ವಿವೇಕದಿಂದ ನೋಡುವದರಿಂದಲೂ, ಜಡ ಮತ್ತು ಚೇತನ ಪದಾರ್ಥಗಳು ಭಿನ್ನಭಿನ್ನಗಳಾಗಿ ಕಾಣುವವು, ಆಗ ಅಹಂಕಾರ ಮೊದಲುಗೊಂಡು ದೇಹ ಪರಿಯಂತರವಾದ ಅನಾತ್ಮ ವರ್ಗವು ಮಿಥ್ಯೆಯೆಂದು, ಮತ್ತು ಅವುಗಳ ಸಂಗವು ತನಗೆ ಇಲ್ಲೆಂದೂ, ಅರ್ಥಾತ್ ತಾನು ಚೇತನ ಅಸಂಗ ಸತ್ಯರೂಪವಾದವನೆಂದು ಹೀಗೆ: ಮನನ ಮಾಡುವದರಿಂದ ಮೂರು ಭೂಮಿಕೆಗಳು ಸಂಭವಿಸುವವು. ಈ ಮೂರು ಭೂಮಿಕೆಗಳು ವಿವೇಕದಿಂದ ಪ್ರಾಪ್ತಗಳಾದ್ದರಿಂದ ಇವುಗಳಿಗೆಲ್ಲಾ ಕೂಡಿ ಜಾಗ್ರಾವಸ್ಥೆಯೆಂದು ಹೇಳುವರು.

CC-0. Jangamwadi Math Collection. Digitized by eGangotri

ಬಳಿಕ ಶಿಷ್ಯನು ಗುರುಗಳನ್ನು ಕುರಿತು "ಹೇ ಸದ್ಗುರುನಾಥನೇ! ನಿಮ್ಮಿಂದುಕ್ತ ಪ್ರಕಾರ ಯೋಗಾಭ್ಯಾಸವನ್ನು ಮಾಡುತ್ತಿರುವಂಥಾ ಯೋಗಿಯು ಯೋಗವನ್ನು ಪೂರ್ತಿಯಾಗಿ ಮಾಡದೆ ಮಧ್ಯದಲ್ಲಿ ಸತ್ತುಹೋದರೆ, ಏನಾಗುವನು ಹೇಳಿರಿ" ಎಂದು ಕೇಳಿದನು. ಅಂದರೆ, ಯೋಗಿಯು ಯೋಗಾಭ್ಯಾಸವನ್ನು ಮಾಡುತ್ತಿರಲು ಆವನ ಪ್ರಾರಬ್ಧಕರ್ಮವು ಅಷ್ಟರಲ್ಲಿಯೇ ತೀರಲು, ಅವನ ದೇಹಪಾತವಾಗುವದು. ಆಗ ಅವನು ಮುಕ್ತಿಯನ್ನು ಹೊಂದುವನೋ? ಅಥವಾ ಜನ್ಮಾಂತರಕ್ಕೆ ಹೋಗುವನೋ? ಜನ್ಮಾಂತರಕ್ಕೆ ಹೋದರೂ ಮನುಷ್ಯ ಜನ್ಮಕ್ಕೆ ಬರುವನೋ? ಅಥವಾ ಹೀನ ಯೋನಿಗಳಿಗೆ ಹೋಗುವನೋ? ಇವೇ ಮೊದಲಾದ ಅನೇಕ ಸಂಶಯಗಳಿಂದ ಯುಕ್ತನಾಗಿ ಪ್ರಶ್ನೆಯನ್ನುಮಾಡಿದನು. ಆದಕ್ಕೆ ಗುರುಗಳು ಬಹಳ ಸಂತೋಷದಿಂದ ಉತ್ತರವನ್ನು ಪೇಳಲಾರಂಭಿಸಿದರು.

ಬಳಿಕ; ಈ ಗತಿಯಲ್ಲಿ ಯಾವ ಸಾಮಾನ್ಯಾಸಂಗವೆಂತಲೂ ವಿಶೇಷಾಸಂಗ ವೆಂತಲೂ ಹೀಗೆ ಎರಡು ಅಸಂಗಗಳು ಭೋದಿಸಲ್ಪಡುತ್ತವೆಂದು ಪ್ರತಿಪಾದಿಸುತ್ತಾರೆ.

ಗತಿಯೊಂಭತ್ತನೆಯದಿದಕೆ|
ಹಿತಮೆನಿಪ ನಿರೂಪಣಂಗಳೇಕಾದಶವಂ||
ತತಿಶಯವಾಗಿರೆ ತಿಳಿಯಲ್|
ಪ್ರತಿಪಾದಿತವಿಲ್ಲಿ ತನಗೆ ನಿಸ್ಸಂಗಯುಗಂ ||೧೨||

ಟೀಕಾ:—ಗತಿಯೊಂಭತ್ತನೆಯದು=ಒಂಭತ್ತನೇ ಅಧ್ಯಾಯದಲ್ಲಿ, ಇದಕೆ= ಈ ಗತಿಗೆ, ಹಿತಮೆನಿಪ=ಯೋಗ್ಯಗಳಾದ, ನಿರೂಪಣಂಗಳ್=ಪದ್ಯಗಳು, ಅತಿ ಶಯವಾಗಿರೆ=ಆಧಿಕ್ಯವಾಗಿದ್ದರೂ, ಅಂತು=ಒಟ್ಟಿಗೆ, ಏಕಾದಶವಂ=ಹನ್ನೊಂದು, ತಿಳಿಯಲ್=ವಿಚಾರ ಮಾಡಲಾಗಿ, ಇಲ್ಲಿ=ಈ ಗತಿಯಲ್ಲಿ, ತನಗೆ=ತನಗೆ, ನಿಸ್ಸಂಗ ಯುಗಂ=ಅಸಂಗದ್ವಯವು, ಪ್ರತಿಪಾದಿತವು=ಪ್ರತಿಪಾದಿಸಲ್ಪಟ್ಟಿತು.

ಮಂಗಳಮಸ್ತು

ದಶಮ ಗತಿ

ಬಳಿಕ ಹಿಂದಿನ ಗತಿಯಲ್ಲಿ ಹೇಳಲ್ಪಟ್ಟ ವಿಷಯವನ್ನು ಸಂಕ್ಷೇಪವಾಗಿ ತಿಳಿಸಿ, ಈ ಗತಿಯಲ್ಲಿ ವಾಸನಾಕ್ಷಯಾದಿ ನಾಲ್ಕು ಭೂಮಿಕೆಗಳನ್ನು ಹೇಳುತ್ತೇ ವೆಂದು ಪ್ರತಿಜ್ಞಾ ಮಾಡುತ್ತಾರೆ.

ಕಂ||ಸೂ|| ಕುಂದಿಲ್ಲದೆ ಭೂಮಿತ್ರಯ|
ದಂದಂ ಜಾಗರಣಮೆಂದು ಪೇಳ್ದಿಂತೊಲವಿಂ||

CC-0. Jangamwadi Math Collection. Digitized by eGangotri

ಮುಂದೆ ಚತುರ್ಭೂಮಿಕೆಗಳ।
ನಂದೊದಗುವವಸ್ಥೆ ಯಮ್ಮನಂಬುಗೆ ಪೇಳ್ವೆ॥

ಟೀಕಾ:— ಕುಂದಿಲ್ಲದೆ=ಕೊರತೆ ಇಲ್ಲದೆ, ಭೂಮಿತ್ರಯದ=ಮೂರು ಭೂಮಿಗಳ, ಅಂದಂ=ಸ್ವರೂಪವನ್ನು, ಜಾಗರಣಮೆಂದು=ಜಾಗ್ರದವಸ್ಥೆಯೆಂದು, ಇಂತು=ಈ ಪ್ರಕಾರ, ಒಲವಿಂ=ಪ್ರೀತಿಯಿಂದ, ಪೇಳ್ದು=ಹೇಳಿ, ಮುಂದೆ=ಆನಂತರ, ಚತುರ್ಭೂಮಿಕೆಗಳನು=ನಾಲ್ಕು ಭೂಮಿಕೆಗಳನ್ನು, ಅಂದು=ಆ ಹೊತ್ತಿನಲ್ಲಿ, ಒದುಗುವ=ಪ್ರಾಪ್ತಗಳಾಗುವ, ಅವಸ್ಥೆಯಂ=ಅವಸ್ಥೆಯನ್ನು, ಮನಂಬುಗೆ=ಮನಸ್ಸಿಗೆ ನಂಬಿಗೆಯಾಗುವ ಹಾಗೆ, ಪೇಳ್ವೆಂ=ಹೇಳುವೆನು.

ತಾತ್ಪರ್ಯ:— ಹಿಂದಿನಗತಿಯಲ್ಲಿ ಸುಖೇಚ್ಛಾದಿ ಮೂರು ಭೂಮಿಕೆಗಳನ್ನು ಚನ್ನಾಗಿ ಪ್ರತಿಪಾದನ ಮಾಡಿದೆನು. ಆ ಮೂರು ಭೂಮಿಕೆಗಳಿಂದ ಕೂಡಿದರೆ, ಒಂದು ಜಾಗ್ರದವಸ್ಥೆಯಾಗುವದು, ಮುಂದೆ ವಾಸನಾಕ್ಷಯಾದಿನಾಲ್ಕು ಭೂಮಿಕೆಗಳನ್ನು ಮತ್ತು ಆಯಾ ಭೂಮಿಕೆಗಳನ್ನು ಹೊಂದಲು; ಆಗುವ ಸ್ವಪ್ನಾದಿ ಅವಸ್ಥೆಗಳನ್ನು ಈ ಗತಿಯಲ್ಲಿ ವಿಸ್ತಾರವಾಗಿ ಪ್ರತಿಪಾದನ ಮಾಡುತ್ತಾರೆ.

ಬಳಿಕ; ಯೋಗಿಯು ಯೋಗಸಿದ್ಧಿಸದೆ ಮೃತನಾದರೆ; ಅವನು ಏನಾಗುವನೆಂದು ಮಾಡಿದ ಪ್ರಶ್ನೆಗೆ ಉತ್ತರವನ್ನು ಹೇಳುವದಕ್ಕಾಗಿ, ಉಪೋದ್ಘಾತ ರೂಪದಿಂದ ಅವನು ಪಾಪವನ್ನೆಲ್ಲಾ ಕಳೆದುಕೊಂಡು ಪುಣ್ಯವಂತನಾಗಿರುವನೆಂದು ಪ್ರತಿಪಾದಿಸುತ್ತಾರೆ.

ಕೇಳೆಲೆ ಸನ್ಮತಿಕೈರವಚಂದ್ರ।
ಪೇಳುವೆನಧಿಗತ ನಿಜಸುಖಸಾಂದ್ರ॥
ಹುಟ್ಟಲು ಹೊಂದಲು ಬೇಸತ್ತಂಗೆ।
ನೆಟ್ಟನೆ ಯೋಗಾಭ್ಯಾಸದವಂಗೆ॥
ಹಿಂದಣ ದುರಿತಕ್ಷಯವಾಯಿತ್ತು।
ಅಂದಾ ಭವದ ಸುಕೃತವೊದಗಿತ್ತು॥
ಎಂಬುದಕಿದು ಕುರುವಾಯ್ತು ವಿರಕ್ತಿ।
ಬೆಂಬಳಿವಿಡಿವುದು ಮೋಕ್ಷಾಸಕ್ತಿ॥
ಇಂದಾರಬ್ಧವಶದಲಹಪಾಪ।
ಬಂದೊಡದನು ಮೇಣ್ಸುಡುಗನುತಾಪ॥
ಸಾಧು ಸಮಾಗಮನಾದಿಗಳಿಂದ।
ಶೋಧಿತಮಾದುದು ಪುಣ್ಯದವೃಂದ ॥೧॥

ಟೀಕಾ:— ಎಲೆ=ಎಲೋ!, ಸನ್ಮತಿ=ಸದ್ಬುದ್ಧಿರೂಪ, ಕೈರವ=ನೈದಿಲೆಗೆ, ಚಂದ್ರ=ಇಂದು ಸದೃಶನಾದಂಥಾ; ಅಧಿಗತ=ಪ್ರಾಪ್ತಮಾಡಿಕೊಂಡ, ನಿಜಸುಖ

CC-0. Jangamwadi Math Collection. Digitized by eGangotri

ಬಳಿಕ ಶಿಷ್ಯನು ಗುರುಗಳನ್ನು ಕುರಿತು "ಹೇ ಸದ್ಗುರುನಾಥನೇ! ನಿಮ್ಮಿಂದುಕ್ತ ಪ್ರಕಾರ ಯೋಗಾಭ್ಯಾಸವನ್ನು ಮಾಡುತ್ತಿರುವಂಥಾ ಯೋಗಿಯು ಯೋಗವನ್ನು ಪೂರ್ತಿಯಾಗಿ ಮಾಡದೆ ಮಧ್ಯದಲ್ಲಿ ಸತ್ತುಹೋದರೆ, ಏನಾಗುವನು ಹೇಳಿರಿ" ಎಂದು ಕೇಳಿದನು. ಅಂದರೆ, ಯೋಗಿಯು ಯೋಗಾಭ್ಯಾಸವನ್ನು ಮಾಡುತ್ತಿರಲು ಆವನ ಪ್ರಾರಬ್ಧಕರ್ಮವು ಅಷ್ಟರಲ್ಲಿಯೇ ತೀರಲು, ಅವನ ದೇಹಪಾತವಾಗುವದು. ಆಗ ಅವನು ಮುಕ್ತಿಯನ್ನು ಹೊಂದುವನೋ? ಅಥವಾ ಜನ್ಮಾಂತರಕ್ಕೆ ಹೋಗುವನೋ? ಜನ್ಮಾಂತರಕ್ಕೆ ಹೋದರೂ ಮನುಷ್ಯ ಜನ್ಮಕ್ಕೆ ಬರುವನೋ? ಅಥವಾ ಹೀನ ಯೋನಿಗಳಿಗೆ ಹೋಗುವನೋ? ಇವೇ ಮೊದಲಾದ ಅನೇಕ ಸಂಶಯಗಳಿಂದ ಯುಕ್ತನಾಗಿ ಪ್ರಶ್ನೆಯನ್ನುಮಾಡಿದನು. ಆದಕ್ಕೆ ಗುರುಗಳು ಬಹಳ ಸಂತೋಷದಿಂದ ಉತ್ತರವನ್ನು ಪೇಳಲಾರಂಭಿಸಿದರು.

ಬಳಿಕ; ಈ ಗತಿಯಲ್ಲಿ ಯಾವ ಸಾಮಾನ್ಯಾಸಂಗವೆಂತಲೂ ವಿಶೇಷಾಸಂಗ ವೆಂತಲೂ ಹೀಗೆ ಎರಡು ಆಸಂಗಗಳು ಭೋದಿಸಲ್ಪಡುತ್ತವೆಂದು ಪ್ರತಿಪಾದಿಸುತ್ತಾರೆ.

ಗತಿಯೊಂಭತ್ತನೆಯದಿದಕೆ|
ಹಿತಮೆನಿಪ ನಿರೂಪಣಂಗಳೇಕಾದಶವಂ||
ತತಿಶಯಮಾಗಿರೆ ತಿಳಿಯಲ್|
ಪ್ರತಿಪಾದಿತವಿಲ್ಲಿ ತನಗೆ ನಿಸ್ಸಂಗಯುಗಂ ||೧೨||

ಟೀಕಾ:—ಗತಿಯೊಂಭತ್ತನೆಯದು=ಒಂಭತ್ತನೇ ಅಧ್ಯಾಯದಲ್ಲಿ, ಇದಕೆ= ಈ ಗತಿಗೆ, ಹಿತಮೆನಿಪ=ಯೋಗ್ಯಗಳಾದ, ನಿರೂಪಣಂಗಳ್=ಪದ್ಯಗಳು, ಅತಿ ಶಯವಾಗಿರೆ=ಆಧಿಕ್ಯವಾಗಿದ್ದರೂ, ಅಂತು=ಒಟ್ಟಿಗೆ, ಏಕಾದಶವಂ=ಹನ್ನೊಂದು, ತಿಳಿಯಲ್=ವಿಚಾರ ಮಾಡಲಾಗಿ, ಇಲ್ಲಿ=ಈ ಗತಿಯಲ್ಲಿ, ತನಗೆ=ತನಗೆ, ನಿಸ್ಸಂಗ ಯುಗಂ=ಅಸಂಗದ್ವಯವು, ಪ್ರತಿಪಾದಿತವು=ಪ್ರತಿಪಾದಿಸಲ್ಪಟ್ಟಿತು.

ಮಂಗಳಮಸ್ತು

ದಶಮ ಗತಿ

ಬಳಿಕ ಹಿಂದಿನ ಗತಿಯಲ್ಲಿ ಹೇಳಲ್ಪಟ್ಟ ವಿಷಯವನ್ನು ಸಂಕ್ಷೇಪವಾಗಿ ತಿಳಿಸಿ, ಈ ಗತಿಯಲ್ಲಿ ವಾಸನಾಕ್ಷಯಾದಿ ನಾಲ್ಕು ಭೂಮಿಕೆಗಳನ್ನು ಹೇಳುತ್ತೇ ವೆಂದು ಪ್ರತಿಜ್ಞಾ ಮಾಡುತ್ತಾರೆ.

ಕಂ||ಸೂ|| ಕುಂದಿಲ್ಲದೆ ಭೂಮಿತ್ರಯ|
ದಂದಂ ಜಾಗರಣಮೆಂದು ಪೇಳ್ದಿಂತೊಲವಿಂ||

CC-0. Jangamwadi Math Collection. Digitized by eGangotri

ಮುಂದೆ ಚತುರ್ಭೂಮಿಕೆಗಳ।
ನಂದೊದಗುವವಸ್ಥೆ ಯುಮ್ಮನಂಬುಗೆ ಪೇಳ್ವೆ॥

ಟೀಕಾ:— ಕುಂದಿಲ್ಲದೆ=ಕೊರತೆ ಇಲ್ಲದೆ, ಭೂಮಿತ್ರಯದ=ಮೂರು ಭೂಮಿಗಳ, ಅಂದಂ=ಸ್ವರೂಪವನ್ನು, ಜಾಗರಣಮೆಂದು=ಜಾಗ್ರದವಸ್ಥೆಯೆಂದು, ಇಂತು=ಈ ಪ್ರಕಾರ, ಒಲವಿಂ=ಪ್ರೀತಿಯಿಂದ, ಪೇಳ್ದು=ಹೇಳಿ, ಮುಂದೆ=ಆನಂತರ, ಚತುರ್ಭೂಮಿಕೆಗಳನು=ನಾಲ್ಕು ಭೂಮಿಕೆಗಳನ್ನು, ಅಂದು=ಆ ಹೊತ್ತಿನಲ್ಲಿ, ಒದುಗುವ=ಪ್ರಾಪ್ತಗಳಾಗುವ, ಅವಸ್ಥೆಯಂ=ಅವಸ್ಥೆಯನ್ನು, ಮನನಂಬುಗೆ=ಮನಸ್ಸಿಗೆ ನಂಬಿಗೆಯಾಗುವ ಹಾಗೆ, ಪೇಳ್ವೆಂ=ಹೇಳುವೆನು.

ತಾತ್ಪರ್ಯ:— ಹಿಂದಿನಗತಿಯಲ್ಲಿ ಸುಖೇಚ್ಛಾದಿ ಮೂರು ಭೂಮಿಕೆಗಳನ್ನು ಚನ್ನಾಗಿ ಪ್ರತಿಪಾದನ ಮಾಡಿದೆನು. ಆ ಮೂರು ಭೂಮಿಕೆಗಳಿಂದ ಕೂಡಿದರೆ, ಒಂದು ಜಾಗ್ರದವಸ್ಥೆಯಾಗುವದು, ಮುಂದೆ ವಾಸನಾಕ್ಷಯಾದಿನಾಲ್ಕು ಭೂಮಿಕೆಗಳನ್ನು ಮತ್ತು ಆಯಾ ಭೂಮಿಕೆಗಳನ್ನು ಹೊಂದಲು; ಆಗುವ ಸ್ವಪ್ನಾದಿ ಅವಸ್ಥೆಗಳನ್ನು ಈ ಗತಿಯಲ್ಲಿ ವಿಸ್ತಾರವಾಗಿ ಪ್ರತಿಪಾದನ ಮಾಡುತ್ತಾರೆ.

ಬಳಿಕ; ಯೋಗಿಯು ಯೋಗಸಿದ್ಧಿಸದೆ ಮೃತನಾದರೆ; ಅವನು ಏನಾಗುವನೆಂದು ಮಾಡಿದ ಪ್ರಶ್ನೆಗೆ ಉತ್ತರವನ್ನು ಹೇಳುವದಕ್ಕಾಗಿ, ಉಪೋದ್ಘಾತ ರೂಪದಿಂದ ಅವನು ಪಾಪವನ್ನೆಲ್ಲಾ ಕಳೆದುಕೊಂಡು ಪುಣ್ಯವಂತನಾಗಿರುವನೆಂದು ಪ್ರತಿಪಾದಿಸುತ್ತಾರೆ.

ಕೇಳೆಲೆ ಸನ್ಮತಿಕೈರವಚಂದ್ರ।
ಪೇಳುವೆನಧಿಗತ ನಿಜಸುಖಸಾಂದ್ರ॥
ಹುಟ್ಟಲು ಹೊಂದಲು ಬೇಸತ್ತಂಗೆ ।
ನೆಟ್ಟನೆ ಯೋಗಾಭ್ಯಾಸದವಂಗೆ ॥
ಹಿಂದಣ ದುರಿತಕ್ಷಯವಾಯಿತ್ತು।
ಅಂದಾ ಭವದ ಸುಕೃತವೊದಗಿತ್ತು ॥
ಎಂಬುದಕಿದು ಕುರುವಾಯ್ತು ವಿರಕ್ತಿ ।
ಬೆಂಬಳಿವಿಡಿವುದು ಮೋಕ್ಷಾಸಕ್ತಿ ॥
ಇಂದಾರಬ್ಧವಶದಲಹಪಾಪ ।
ಬಂದೊಡದನು ಮೇಣ್ಸುಡುಗನುತಾಪ ॥
ಸಾಧು ಸಮಾಗಮನಾದಿಗಳಿಂದ।
ಸಾಧಿತಮಾದುದು ಪುಣ್ಯದವೃಂದ ॥೧॥

ಟೀಕಾ:— ಎಲೆ=ಎಲೋ!, ಸನ್ಮತಿ=ಸದ್ಬುದ್ಧಿರೂಪ, ಕೈರವ=ನೈದಿಲೆಗೆ, ಚಂದ್ರ=ಇಂದು ಸದೃಶನಾದಂಥಾ; ಅಧಿಗತ=ಪ್ರಾಪ್ತಮಾಡಿಕೊಂಡ, ನಿಜಸುಖ

CC-0. Jangamwadi Math Collection. Digitized by eGangotri

ಸಾಂದ್ರದಟ್ಟೆತ-ನಿಜಸುಖವುಳ್ಳಂಥಾಶಿಷ್ಯನೇ, ಪೇಳುವೆನು=ಹೇಳುವೆನು, ಕೇಳು= ಏಕಾಗ್ರಬುದ್ಧಿಯಿಂದ ಆಲಿಸು, ಹುಟ್ಟಲು=ಇಹದಲ್ಲಿ ಬರುವದಕ್ಕೂ, ಹೊಂದಲು= ಪರದಲ್ಲಿ ಹೋಗುವದಕ್ಕೂ, ಬೇಸತ್ತಂಗೆ=ಬೇಸರಿಕೆಯಾದವನಿಗೆ, ನೆಟ್ಟನೆ= ಚನ್ನಾಗಿ, ಯೋಗಾಭ್ಯಾಸದವಂಗೆ=ಯೋಗಾಭ್ಯಾಸವನ್ನು ಮಾಡುವಂಥವನಿಗೆ, ಹಿಂದಣ=ಜನ್ಮಾಂತರದ, ದುರಿತ=ಪಾಪವು, ಕ್ಷಯವಾಯಿತು=ನಾಶವಾಯಿತು, ಅಂದು=ಆ ಹೊತ್ತು, ಆ ಭವದ=ಆ ಜನ್ಮಂಗಳ, ಸುಕೃತಂ=ಪುಣ್ಯವು, ಒದಗಿತ್ತು= ಪ್ರಾಪ್ತವಾಗಿರುವದು, ಎಂಬುದಕೆ=ಹೀಗನ್ನುವದಕ್ಕೆ, ಇದು=ಈ, ವಿರಕ್ತಿ=ವೈರಾ ಗ್ಯವು, ಕುರುವಾಯ್ತು=ಚಿನ್ಹವಾಗಿರುವದು, ಮೋಕ್ಷಾಸಕ್ತ=ಮೋಕ್ಷದಿಚ್ಛೆಯು, ಬೆಂಬಳಿವಿಡಿವುದು=ಬೆನ್ನಹತ್ತುವದು, ಇಂದು=ಈ ಹೊತ್ತು, ಆರಬ್ಧವಶದಲ್= ಪ್ರಾರಬ್ಧವಶದಿಂದ, ಅಹ=ಆದಂಥಾ, ಪಾಪ=ಪಾಪವು, ಬಂದೊಡೆ=ಬಂದರೆ, ಅದನು=ಅಂಥಾಪಾಪವನ್ನು, ಅನುತಾಪ=ಪಶ್ಚಾತ್ತಾಪವೆಂಬ ಅಗ್ನಿಯಿಂದ, ಸುಡುಗು=ದಹಿಸುವನು, ಮೇಣ್=ಮತ್ತು, ಸಾಧುಸಮಾಗಮನಾದಿಗಳಿಂದ= ಸತ್ಸಂಗ ಮೊದಲಾದವುಗಳಿಂದ, ಪುಣ್ಯದವೃಂದ = ಪುಣ್ಯಸಮೂಹವು, ಸಾಧಿತಮಾದುದು=ಪ್ರಾಪ್ತವಾಗುವದು.

ತಾತ್ಪರ್ಯ:— ಎಲೈ ಒಳ್ಳೇ ಬುದ್ಧಿಯೆಂಬ ನೈದಿಲೆಗೆ ಚಂದ್ರ ಸದೃಶ ನಾದಂಥಾ ನಿಜಸುಖವನ್ನು ಪ್ರಾಪ್ತಮಾಡಿಕೊಂಡಿರುವಂಥಾ ಶಿಷ್ಯನೇ! ನೀನು ಮಾಡಿದ ಪ್ರಶ್ನೆಗೆ ಉತ್ತರವನ್ನು ಹೇಳುತ್ತೇನೆ ಏಕಾಗ್ರಬುದ್ಧಿಯಿಂದ ಆಲಿಸು, ಪುನಃ ಪುನಃ ಜನನ, ಮರಣ, ಸ್ವರ್ಗ, ನರಕ, ಗಮನಾಗಮನಾದಿಗಳಿಂದ ಬೇಸತ್ತು, ಈ ಸಂಸಾರವು ಹೇಗೆ ನಾಶವಾದೀತೆಂದು ಭಾವಿಸಿ ಇಹಪರ ವಿಷಯಂ ಗಳಲ್ಲಿ ವೈರಾಗ್ಯಶಾಲಿ ಯಾಗುವನು. ವಿರಕ್ತಿ ಪ್ರಾಪ್ತವಾಗುವದರಿಂದಲೇ ಇವನಿಗೆ ಹಿಂದಿನ ಜನ್ಮಾಂತರಗಳ ಪಾಪವು ನಿವೃತ್ತವಾಯಿತೆಂದೂ; ಆ ಜನ್ಮಾಂತರ ಗಳ ಪುಣ್ಯವು ಲಭ್ಯವಾಯಿತೆಂದೂ ತಿಳಿಯಬೇಕು, ಮನುಷ್ಯನಿಗೆ ಪಾಪನಿವೃತ್ತಿ ಪುಣ್ಯವೃದ್ಧಿಯಾಗದ ವಿನಾ ವೈರಾಗ್ಯವು ಪ್ರಾಪ್ತವಾಗುವುದೇ ಇಲ್ಲ. ಆದ್ದರಿಂದ ವಿರಕ್ತಿಯು ಪಾಪನಿವೃತ್ತಿ ಪುಣ್ಯವೃದ್ಧಿಗೆ ಒಂದು ಗುರ್ತಾಗಿರುತ್ತದೆ. ಈ ವಿರಕ್ತಿ ಪ್ರಾಪ್ತಿಯಾದಕೂಡಲೇ ಇದರ ಬೆನ್ನಹಿಂದಿಂದೆ ಮೋಕ್ಷಾಪೇಕ್ಷೆ ರೂಪ ಮುಮು ಕ್ಷುತ್ವವು ಬರುವದು. ಇಂಥಾ ಮುಮುಕ್ಷ ಅವಸ್ಥೆಯಲ್ಲ್ಯಾದರೂ ಅಕಸ್ಮಾತ್ ಪ್ರಾರಬ್ಧ ವಶದಿಂದ ತನ್ನಿಂದ ಏನಾದರೂ ಪಾಪ ಸಂಭವಿಸಿದರೆ, ಅಂಥಾ ಪಾಪ ವನ್ನು ಪಶ್ಚಾತ್ತಾರೂಪ ಅಗ್ನಿಯಿಂದ ಸುಟ್ಟು ಬಿಡುವನು. ಅಂದರೆ, ಈ ಪಾಪವು ನನ್ನಿಂದ ಘಟಿಸಬಾರದಾಗಿತ್ತು. ಪರಂತು ಘಟಿಸಿತು. ಹೇ ಪರಮಾತ್ಮ! ಇನ್ನು ಮುಂಪೆ ನಾನು ಇಂಥಪಾಪವನ್ನು ಮಾಡುವದಿಲ್ಲ ನನ್ನ ತಪ್ಪನ್ನು ಕ್ಷಮಿಸೆಂದು ಬೇಡಿಕೊಳ್ಳುತ್ತಾ; ಮನದಲ್ಲಿ ಅನುತಾಪವಾಗುವದೇಪ್ರಾಯಶ್ಚಿತ್ತವು. ಮುಂದೆ ಅವನಿಂದ ಪಾಪವು ಸಂಭವಿಸಲಾರದು. ಯಾಕಂದರೆ, ಅನುತಾಪರೂಪ

CC-0. Jangamwadi Math Collection. Digitized by eGangotri

ಪ್ರಾಯಶ್ಚಿತ್ತದಿಂದ ಶುದ್ಧನಾಗಿರುತ್ತಾನೆ. ಮತ್ತು ಸಾಧು ಸತ್ಪುರುಷರ ಸಹವಾಸವನ್ನುಮಾಡಿ, ಶ್ರವಣ ಮನನಾದಿ ಅಭ್ಯಾಸವನ್ನು ಮಾಡುತ್ತಾ ಪುಣ್ಯದ ವೃಂದವನ್ನು ಸಂಪಾದನೆ ಮಾಡುತ್ತಿರುವನು. ಇಂಥಾ ಪುಣ್ಯಶಾಲಿಯಾದ ಪುರುಷನೇ ಯೋಗಾಭ್ಯಾಸವನ್ನು ಮಾಡುತ್ತಾನೆ.

ಬಳಿಕ; ಇಂಥಾ ಯೋಗಿಯು ಯೋಗಾಭ್ಯಾಸವನ್ನು ಮಾಡುತ್ತಿರಲು ಅದರೊಳಗಾಗಿಯೇ ಶರೀರವು ನಷ್ಟವಾದರೆ, ಆತನು ದುಃಖವನ್ನು ಹೊಂದದೆ ಊರ್ಧ್ವಲೋಕಗಳಲ್ಲಿ ಸುಖವನ್ನು ಹೊಂದುತ್ತಾನೆಂದು ಪ್ರತಿಪಾದನೆ ಮಾಡುತ್ತಾರೆ.

ತಿಳಿಯಾತಂಗಭ್ಯಾಸಿಪಯೋಗ |
ಫಲಿಸದ ಮುನ್ನವೆ ದೇಹವಿಯೋಗ ||
ಆದೊಡೆ ಪಾಪದ ಹೊಲಬಿಲ್ಲಾಗಿ |
ಭೇದಿಸೆ ದುಃಖಂ ತೋರದೆ ಪೋಗಿ ||
ಬಚ್ಚ ಬರಿಯ ಪುಣ್ಯದಲನುಬಂಧ |
ಅಚ್ಚ ಸುಖವನುಣಬೇಕದರಿಂದ ||
ಆಯಾ ಭೂಮಿಕೆಗನುಗುಣವಾಗಿ |
ಆಯಾ ಮೇಲಣ ಲೋಕಕೆ ಪೋಗಿ ||
ಆಯಾ ವಿಭವಂಗಳ ನೆಡೆಗೊಂಡು |
ಆಯಾ ಸುಖ ಭೋಗಂಗಳನುಂಡು ||
ಆ ಪುಣ್ಯದ ಫಲ ಕೆಲಕಾಲಕ್ಕೆ |
ಪೋಪುದರಿಂದ ಬಹನೀಲೋಕಕ್ಕೆ ||೨||

ಟೀಕಾ:— ತಿಳಿಯು=ಅರಿಯು, ಆತಂಗೆ=ಯೋಗಿಗೆ, ಅಭ್ಯಾಸಿಪ=ಅಭ್ಯಾಸವನ್ನು ಮಾಡುತ್ತಿರುವ, ಯೋಗ=ಯೋಗವು, ಫಲಿಸದ=ಪ್ರಾಪ್ತಿಯಾಗದ, ಮುನ್ನವೇ=ಮೊದಲೇ, ದೇಹವಿಯೋಗ=ಶರೀರಪಾತವು, ಆದೊಡೆ=ಆದರೆ, ಪಾಪದ=ನಿಷೇಧಕಾರ್ಯದ, ಹೊಲಬಿಲ್ಲಾಗಿ=ಗೊತ್ತಿಲ್ಲಾಗಿ, ಭೇದಿಸೆ=ವಿಚಾರ ಮಾಡಲು, ದುಃಖಂ=ಕಷ್ಟವು, ತೋರದೆ=ಪ್ರತೀತಿಯಾಗದೆ, ಪೋಗಿ=ಹೋಗಿ, ಬಚ್ಚಬರಿಯ=ಕೇವಲ, ಪುಣ್ಯದಲನುಬಂಧ=ಪುಣ್ಯದಿಂದೊಡಗೂಡಿದ, ಅಚ್ಚ ಸುಖವನು= ದುಃಖಮಿಶ್ರಿತವಿಲ್ಲದ ಸುಖವನ್ನು, ಅದರಿಂದ = ಆ ಪುಣ್ಯದಿಂದ, ಉಣಬೇಕು=ಉಪಭೋಗಿಸಬೇಕು, ಆಯಾಭೂಮಿಕೆಗೆ=ಬೇರೆ ಭೂಮಿಕೆಗಳಿಗೆ, ಅನುಗುಣವಾಗಿ=ಸರಿಯಾಗಿ, ಆಯಾಮೇಲಣ ಲೋಕಕೆ=ಆಯಾಯ ಊರ್ಧ್ವ ಲೋಕಗಳಿಗೆ, ಪೋಗಿ=ಹೋಗಿ, ಆಯಾ ವಿಭವಗಳನು= ಆ ಲೋಕಕ್ಕುಚಿತವಾದ ಐಶ್ವರ್ಯಗಳನ್ನು, ಎಡೆಗೊಂಡು=ಹೊಂದಿ, ಆಯಾ ಸುಖಭೋಗಂಗಳನು=

CC-0. Jangamwadi Math Collection. Digitized by eGangotri

ಬೇರೆಬೇರೆ ಸುಖೋಪಭೋಗಗಳನ್ನು, ಉಂಡು=ಉಪಭೋಗಮಾಡಿ, ಆ ಪುಣ್ಯದ ಫಲ=ಆ ಪುಣ್ಯದ ಫಲವು, ಕೆಲಕಾಲಕ್ಕೆ=ಕೆಲವು ದಿವಸಗಳಮೇಲೆ, ಪೋಪುದರಿಂದ =ಹೋಗುವದರಿಂದ, ಈ ಲೋಕಕ್ಕೆ=ಮೃತ್ಯುಲೋಕಕ್ಕೆ, ಬಹನು=ಬರುವನು.

ತಾತ್ಪರ್ಯ:— ಎಲೋ ಶಿಷ್ಯನೇ! ಕೇಳು. ಒಂದು ಅಥವಾ ಎರಡು ಇಲ್ಲವೆ ಮೂರನೇ ಭೂಮಿಕೆಯನ್ನು ಅಭ್ಯಾಸಮಾಡುವಂಥಾ ಯೋಗಿಯು ತನ್ನ ಭೂಮಿಕಾರೂಪ ಯೋಗವು ಸಿದ್ಧಿಸದೆ ಮಧ್ಯದಲ್ಲಿಯೇ ತನ್ನ ದೇಹ ಪಾತವಾದರೆ, ಅವನು ನರಕಾದಿ ದುರ್ಗತಿಯನ್ನು ಹೊಂದುವದಿಲ್ಲ. ಯಾಕಂದರೆ, ಅವನಲ್ಲಿ ಪಾಪವಿರುವದಿಲ್ಲ. ಅವನು ಹೇಗೆ ಉತ್ತರೋತ್ತರ ಭೂಮಿಕೆಗಳನ್ನು ಅಭ್ಯಾಸ ಮಾಡುತ್ತಾ ಹೋಗುವನೋ; ಹಾಗೆ ಅವನ ಪಾಪವು ನಾಶವಾಗುತ್ತದೆ. ಆದ್ದರಿಂದ ಅವನಿಗೆ ದುಃಖವು ತೋರುವದಿಲ್ಲ. ಈ ಕಾರಣದಿಂದಲೇ ಅವನು ಪುಣ್ಯಮಯಗಳಾದ ಕೇವಲ ಸುಖಗಳನ್ನು ಭೋಗಿಸುತ್ತಾನೆ. ಅಂದರೆ, ಭೂಮಿಕಾ ಅಭ್ಯಾಸಕ್ಕೆ ಅನುಗುಣವಾದ ಸುರವಿಮಾನದಲ್ಲಿಯಾಗಲಿ ಅಥವಾ ಲೋಕಪಾಲಕರ ಪುರಗಳಲ್ಲಾಗಲಿ ಇಲ್ಲವೆ ಮೇರುಪರ್ವತದ ಉಪವನಗಳಲ್ಲ್ಯಾಗಲಿ ಉತ್ತಮೋತ್ತಮರಾದ ಸ್ತ್ರೀಯರಿಂದೊಡಗೂಡಿ ಅನೇಕ ಐಶ್ವರ್ಯ ಸುಖವನ್ನು ಅನುಭೋಗಿಸುತ್ತಾ ಇದ್ದು; ಕೆಲವು ದಿವಸಗಳ ಮೇಲೆ ಆ ಪುಣ್ಯವು ತೀರಲು ಪುನಃ ಈ ಭೂಲೋಕಕ್ಕೆ ಹೊರಟು ಬರುವನು.

ಬಳಿಕ; ಯೋಗಿಯು ಭೂಲೋಕದಲ್ಲಿ ಯಾವ ಕುಲದಲ್ಲಿ ಉದಯಿಸುವನು? ಅವನು ಉತ್ಪನ್ನವಾದನಂತರ ಮತ್ತೆ ಯೋಗದಲ್ಲಿ ಪ್ರವೃತ್ತನಾಗುವನೋ? ಅಥವಾ ಇಲ್ಲೋ? ಎಂದು ಪ್ರಶ್ನೆಮಾಡಿದರೆ, ಅವನು ತನ್ನ ಪೂರ್ವಾಭ್ಯಾಸ ವಾಸನೆಯಿಂದ ಯೋಗದಲ್ಲಿ ಉದ್ಯುಕ್ತನಾಗುತ್ತಾನೆಂದು ಹೇಳುತ್ತಾರೆ.

ನೆಲಸಿದ ಸಿರಿವಂತರ ಯೋಗಿಗಳ।
ಕುಲದೊಳುದಿಸಿ ಮುನ್ನಿನ ಭೂಮಿಗಳ॥
ಒಳಗೆ ನಿತಳವಟ್ಟಿತು ಮತ್ತನಿತ।
ಘಳಿಲನೆ ಪಡೆವನು ಮೇಲತಿಗುಣಿತ॥
ಕೂಡುತ್ತಂ ಸಜ್ಜನ ಗೋಷ್ಠಿಗಳ।
ಮಾಡುತ್ತಲ್ಲಿ ವಿಚಾರ ದೆಸೆಗಳ॥
ಪೊಕ್ಕು ಮಗುಳೆ ಪೇಳ್ವರ್ಥಂಗಳನು।
ಥಿಕ್ಕನೆ ತಿಳಿದು ರಹಸ್ಯಂಗಳನು॥
ನುಡಿವಾಚಾರ್ಯನ ಪದಸಂಗತಿಯು।
ಬಿಡದಾಲೋಚಿಸಿ ನಿಸ್ಸಂಗತೆಯು॥
ತಿಳಿದಾ ಸಾಮಾನ್ಯ ಸಂಗವನು।
ಬಳಿಕ ವಿಶೇಷಾಸಂಗ ವಡೆವನು ॥೩॥

CC-0. Jangamwadi Math Collection. Digitized by eGangotri

ಟೀಕಾ:— ನೆಲಸಿದ=ಮೊದಲಿಗೆ ಇದ್ದ, ಸಿರಿವಂತರ=ಐಶ್ವರ್ಯವಂತರ, ಯೋಗಿಗಳ = ಯೋಗವುಳ್ಳವರ, ಕುಲದೊಳು=ಕುಲದಲ್ಲಿ, ಉದಿಸಿ = ಹುಟ್ಟಿ, ಮುನ್ನಿನ=ಮೊದಲಿನ, ಭೂಮಿಗಳ=ಭೂಮಿಕೆಗಳನ್ನು, ಒಳಗೆ=ಜನ್ಮಾಂತರ ದಲ್ಲಿ, ಎನಿತು=ಎಷ್ಟು, ಅಳವಟ್ಟಿತು=ಪ್ರಾಪ್ತಿಯಾಗಿತ್ತು, ಮತ್ತೆ=ಅನಂತರ, ಅನಿತ=ಅಷ್ಟನ್ನು, ಘಳಿಲನೆ=ಬೇಗನೆ, ಪಡೆವನು=ಹೊಂದುವನು, ಮೇಲೆ=ಬಳಿಕ, ಅತಿಗುಣಿತ=ಹೆಚ್ಚಾಗಿ, ಕೂಡುತ್ತಂ=ಹೊಂದುತ್ತ, ಸಜ್ಜನ=ಸತ್ಪುರುಷರ, ಗೋಷ್ಟಿಗಳ=ಮಾತುಗಳನ್ನು, ಮಾಡುತ್ತಾ=ಆಡುತ್ತ, ಅಲ್ಲಿ=ಆ ಪ್ರಸಂಗದಲ್ಲಿ, ವಿಚಾರದೆಶೆಗಳ=ವಿವೇಕಾವಸ್ಥೆಗಳನ್ನು, ಪೊಕ್ಕು=ಸೇರಿ (ಹೊಂದಿ), ಮಗುಳೆ= ಆಮೇಲೆ, ಪೇಳ್ವ=ಹೇಳುವ, ಅರ್ಥಂಗಳನ್ನು, ರಹಸ್ಯಗಳನ್ನು=ತಾತ್ಪರ್ಯ ಗಳನ್ನು, ಧಿಕ್ಕನೆ=ಒಮ್ಮೆಲೆ, ತಿಳಿದು=ಅರಿತು, ನುಡಿವಾಚಾರ್ಯನ=ಉಪದೇಶ ಗುರುವಿನ, ಪದಸಂಗತಿಯ=ಪಾದಸೇವೆಯನ್ನು, ಬಿಡದೆ=ತ್ಯಜಿಸದೆ, ನಿಸ್ಸಂಗ ತೆಯ=ಅಸಂಗತ್ವವನ್ನು, ಆಲೋಚಿಸಿ=ಜೋಡಿಸಿ, ಸಾಮಾನ್ಯಾಸಂಗವನು= ಸಾಧಾರಣವಾದ ಅಸಂಗವನ್ನು, ತಿಳಿದು=ಅರಿತು, ಬಳಿಕ=ಅನಂತರ, ವಿಶೇಷಾ ಸಂಗ=ವಿಶೇಷಾಸಂಗವನ್ನು, ವಡೆವನು=ಹೊಂದುವನು.

ತಾತ್ಪರ್ಯ:— ಈ ಭೂಲೋಕದಲ್ಲಿ ಗರ್ಭಶ್ರೀಮಂತರಾದ ರಾಜರ ಲ್ಲಾಗಲಿ ಅಥವಾ ಬಡವರಾದಂಥಾ ಸದ್ಗುಣಿಗಳಾದ ಯೋಗಿಗಳಲ್ಲಾಗಲಿ ಜನ್ಮವನ್ನು ತಾಳುತ್ತಾನೆ. ಅಂದರೆ, ಜನ್ಮಾಂತರದಲ್ಲಿ ಸಕಾಮವುಳ್ಳವನಾಗಿದ್ದರೆ, ಶ್ರೀಮಂತ ಗರ್ಭದಲ್ಲಿಯೂ ನಿಷ್ಕಾಮಿಯಾಗಿದ್ದರೆ, ಯೋಗಿಗಳ ಗರ್ಭದಲ್ಲಿಯೂ ಹುಟ್ಟುವನೆಂಬ ಅಭಿಪ್ರಾಯವು. ಉಕ್ತಕುಲದಲ್ಲ ಜನಿಸಿದ ತರುವಾಯ ಜನ್ಮಾಂತರದ ಯೋಗವಾಸನೆಯಿಂದ ಕೂಡಿದ ಸಂಸ್ಕಾರವುಳ್ಳವನಾದ್ದರಿಂದ, ಮೊದಲು ಪೂರ್ವ ಜನ್ಮದಲ್ಲಿ ಎಷ್ಟು ಯೋಗವನ್ನು ಸಂಪಾದನೆ ಮಾಡಿದ್ದನೋ, ಅಷ್ಟು ಯೋಗವನ್ನು ಬೇಗನೆ ಹೊಂದುವನು. ಮತ್ತು ಮುಂದಿನ ಭೂಮಿಕೆ ಗಳನ್ನು ಅಭ್ಯಾಸಮಾಡಲಿಕ್ಕೆ ಹತ್ತುವನು. ಮತ್ತು ಸಾಧುಸತ್ಪುರುಷರ ಸಹ ವಾಸವನ್ನು ಮಾಡಿ ಅವರಿಂದ ಸಚ್ಛಾಸ್ತ್ರಗಳ ವಿಚಾರವನ್ನು ಮಾಡುತ್ತಾ, ತಾತ್ಪರ್ಯಾರ್ಥವನ್ನು ತಿಳಿದುಕೊಳ್ಳುತ್ತಾನೆ. ಮತ್ತು ಸದ್ಗುರುವನ್ನು ಆಶ್ರಯಿಸಿಕೊಂಡು ಉಕ್ತ ಸಾಮಾನ್ಯಸಂಗವನ್ನು ಮತ್ತು ವಿಶೇಷಾಸಂಗವನ್ನೂ ಹೊಂದುವನು.

ಬಳಿಕ; ಅಸಂಗಭೂಮಿಕೆಯಲ್ಲಿದ್ದರೂ ತನಗೆ ಮೊದಲಿಗಿರುವ ಸದಾಚಾರ, ಸದ್ಗೋಷ್ಠಿ, ಸದ್ಗುಣಗಳನ್ನು ಬಿಡದೆ ಇರುವನು ಎಂದು ಪ್ರತಿಪಾದಿಸುತ್ತಾರೆ.

ಅಗಳಿಯೂ ನಿಸ್ಸಂಗತೆಯುವನು।
ಯೋಗಿಯೆನಿಸಿ ಕೊಂಬನು ಬಳಿಕವನು॥

CC-0. Jangamwadi Math Collection. Digitized by eGangotri

ಮೊದಲೆಂತು ಸದಾಚಾರದೊಳಿರ್ಪ।
ಅದನುರೆ ಯುಡುಗದೆ ಕಡೆಮುಟ್ಟಿರ್ಪ॥
ಅಂಥಾ ಮುನ್ನಿನ ಸುಗುಣಂಗೆಡದೆ।
ಮುಂತಾ ಸದ್ಗೋಷ್ಟಿಗಳಂ ಬಿಡದೆ॥
ಇಹನವನಜ್ಞಾನ ತಮಸ್ಸೂರ್ಯ
ಅಹನಂತಾಯೋಗಿಯೆ ನೋಡಾರ್ಯ
ಮೊಳೆವುದು ಮೊದಲು ಧರೆಯೊಳಾಪುಣ್ಯ।
ದಳವೇರುವದೆರಡನೆ ಯೊಳುಗಣ್ಯ॥
ಮೂರನೆಯಲ್ಲಿ ಫಲಿತವಾಗಿಹುದು।
ನೀರನೆ ಯೋಗಿಗದನುಭವವಹುದು ॥೪॥

ಟೀಕಾ:-ಆ ನಿಸ್ಸಂಗತೆಯವನು=ಆ ಅಸಂಗಭೂಮಿಕೆಯುಳ್ಳವನು, ಆಗಳೆ=ತಕ್ಷಣವೇ, ಯೋಗಿಯೆನಿಸಿಕೊಂಬನು=ಯೋಗಿಯೆಂದು ಹೇಳಿಸಿ ಕೊಳುವನು ಬಳಿಕ=ಅನಂತರ,ಅವನು=(ಆ ಅಸಂಗಭೂಮಿಕೆಯುಳ್ಳ)ಯೋಗಿಯು,ಮೊದಲು=ಪೂರ್ವದಲ್ಲಿ, ಎಂತು=ಹೇಗೆ, ಸದಾಚಾರದೊಳಿರ್ಪ=ಸದ್ವರ್ತನೆಯ ಲ್ಲಿದ್ದನೋ, ಅದನ್ನು=ಆ ಸದ್ವರ್ತನೆಯನ್ನು, ಉರೆ=ಚನ್ನಾಗಿ, ಉಡುಗದೆ=ಕೊರತೆಮಾಡದೆ ಕಡೆಮುಟ್ಟಿರ್ಪ=ಕಡೆವರೆಗೂ ಹಾಗೇ ಇರುವನು, ಅಂತಾ=ಹಾಗಿದ್ದ, ಮುನ್ನಿನ=ಮೊದಲಿನ, ಸುಗುಣಂ=ಸದ್ಗುಣವನ್ನು, ಗೆಡದೆ=ತ್ಯಜಿಸದೆ, ಮುಂತಾ=ಮೊದಲಿನ, ಸದ್ಗೋಷ್ಟಿಗಳಂ=ಸದ್ವಾಕ್ಯಗಳನ್ನು, ಬಿಡದೆ=ತ್ಯಾಗಮಾಡದೆ, ಇಹನು=ಇರುವನು, ಅವನು=ಆತನು, ಅಜ್ಞತಮಸೂರ್ಯ=ಅಜ್ಞಾನವೆಂಬ ಕತ್ತಲೆಗೆ, ಸೂರ್ಯನು, ಅಹನು=ಆಗಿರುವನು, ಅಂತಾಯೋಗಿಯೇ=ಹಾಗಿದ್ದ ಯೋಗಿಯೇ, ಆರ್ಯ=ಸತ್ಪುರುಷನು, ನೋಡು=ತಿಳಿ, ಆ ಪುಣ್ಯ=ಆ ಸುಕೃತವು, ಮೊದಲು ಧರೆಯೊಳು=ಮೊದಲನೇ ಭೂಮಿಕೆಯಲ್ಲಿ, ಮೊಳೆವುದು=ಅಂಕುರೋತ್ಪತ್ತಿಯಾಗುವದು, ಎರಡನೆಯೊಳು=ಎರಡನೇ ಭೂಮಿಕೆಯಲ್ಲಿ, ದಳವೇರುವದು=ಎಲೆಗಳನ್ನು ಬಿಡುವುದು, ಅಗಣ್ಯ=ಯೋಗ್ಯ ಸ್ವರೂಪನಾದ ಶಿಷ್ಯನೇ! ಮೂರನೆಯಲ್ಲಿ=ಮೂರನೆ ಭೂಮಿಕೆಯಲ್ಲಿ, ಫಲಿತವಾಗಿಹುದು=ಫಲದ್ರೂಪವಾಗಿರುವದು, ನೀರನೆ=ಸುಖಪುರುಷನೇ! ಯೋಗಿಗೆ=ಯೋಗೀಶ್ವರನಿಗೆ, ಅದು=ಆ ವಿಷಯವು, ಅನುಭವವಹುದು=ಅನುಭವವಾಗಿರುವದು.

ತಾತ್ಪರ್ಯ:— ಎಲೈ ಶಿಷ್ಯನೇ! ಕೇಳು ಆ ಮೂರನೇ ಅಸಂಗಭೂಮಿಕೆಯುಳ್ಳಂಥವನು ಯೋಗಿಯೆಂದು ಹೇಳಿಸಿಕೊಳ್ಳುವನು. ಮೊದಲು ಹೇಗೆ ಸದಾಚಾರದಿಂದಿರ್ದನೋ ಹಾಗೇ ಈ ಕಾಲದಲ್ಲಾದ್ಯರೂ ಸದಾಚಾರದಿಂದಿರುವನು. ಅಂದರೆ, ವೃದ್ಧರು ಯಾವ ಆಚರಣದಿಂದಿರುವರೋ ಹಾಗೇ ತಾನೂ ಆ ಆಚರಣ

CC-0. Jangamwadi Math Collection. Digitized by eGangotri

ದಲ್ಲಿರುವನು. ಮತ್ತು ಅದಕ್ಕೆ ಶಾಸ್ತ್ರವೂ ಕೂಡಾ ಸಮ್ಮತವಾಗಿರಬೇಕು. ಮತ್ತು ಅದರಲ್ಲಿಯಾದರೂ ಕೂಡಾ ಯಾವ ಕಾರ್ಯವನ್ನು ಮಾಡುವದರಿಂದ ತನ್ನ ಮನಸ್ಸು ಪ್ರಸನ್ನವಾಗಿರಬೇಕೇ ಹೊರತು ಪಶ್ಚಾತ್ತಾಪಕ್ಕೆ ಒಳಗಾಗಿರಬಾರದು. ಇಂಥಾ ಲೌಕಿಕ ವ್ಯವಹಾರವನ್ನು ಮಾಡುವದೇ ಸದಾಚಾರವೆನಿಸುವದು, ಇಂಥಾ ಸದಾಚಾರವನ್ನು ಇವನು ಜ್ಞಾನಪ್ರಾಪ್ತಿ ಮಾಡಿಕೊಂಡಾಗ್ಯಾದರೂ ತ್ಯಾಗ ಮಾಡುವದಿಲ್ಲ. ಮತ್ತು ಪೂರ್ವಜನ್ಮ ಸಂಸ್ಕಾರಾನುಗುಣವಾಗಿ ಸದ್ಗುಣಗಳು ಕೂಡಾ ಇರುತ್ತವೆ. ಸದ್ಗುಣಗಳನ್ನು ಕೂಡಾ ತ್ಯಾಗ ಮಾಡುವದಿಲ್ಲ. ಆ ಸದ್ಗುಣಗಳು ಯಾವವು ? ಅಂದರೆ, ವಿಷಯಗಳಲ್ಲಿ ವಿರಾಗವು, ಉದಾರ ಬುದ್ಧಿ, ಆತ್ಮಾನಾತ್ಮವಿವೇಕ, ಭಯದಿಂದ ಪಾಪಕರ್ಮವನ್ನು ಮಾಡದಿರುವದು, ಪುಣ್ಯಕರ್ಮವನ್ನು ಮಾಡುವದು, ಪ್ರೇಮರಸದಿಂದ ಗರ್ಭಿತಗಳಾಗಿಯೂ ಕೋಮಲವಾಗಿಯೂ ದೇಶಕಾಲಗಳಿಗೆ ಉಚಿತಗಳಾಗಿಯೂ ಇರುವಂಥಾ ಮಾತುಗಳನ್ನಾಡುವದು. ತ್ರಿಕರಣಗಳಿಂದ ಸಜ್ಜನರನ್ನು ಉಪಸೇವಿಸುವದು. ಇವೇ ಮೊದಲಾದ ಸದ್ಗುಣಗಳಿಂದ ಕೂಡಿರುವನು. ಇಂಥಾ ಸದ್ಗುಣ ಸದಾಚಾರಗಳಿಂದ ಯುಕ್ತನಾದ ಯೋಗಿಯೇ ಆರ್ಯನೆನಿಸುವನು, ನೋಡು, ಮೊದಲನೇ ಭೂಮಿಕೆಯಲ್ಲ ಆ ಆರ್ಯತ್ವರೂಪ ಪುಣ್ಯವು ಅಂಕುರ ಸ್ವರೂಪವಾಗಿರುವದು, ಎರಡನೇ ಭೂಮಿಕೆಯಲ್ಲಿ ವಿಚಾರ ಶ್ರವಣಾದಿಗಳಿಂದ ವಿಕಸನವನ್ನು ಹೊಂದುತ್ತದೆ, ಅಂದರೆ, ಪತ್ರಶಾಖಾದಿಗಳಿಂದ ಯುಕ್ತವಾಗಿರುತ್ತದೆಂಬ ಭಾವವು. ಮೂರನೇ ಭೂಮಿಕೆಯಲ್ಲಿ ಚಿತ್ತೈಕಾಗ್ರರೂಪ ಫಲದಿಂದ ಕೂಡಿರುವದು. ಈಗ ಹೇಳಲ್ಪಟ್ಟ ವಿಷಯವು ಕೇವಲ ವಾಣಿಮಾತ್ರವಾದದ್ದಲ್ಲ. ಯೋಗೀಶ್ವರನಿಗೆ ಅನುಭವಸಿದ್ಧವಾದ ವಿಷಯವು.

ಬಳಿಕ; ಮೂರನೇ ಭೂಮಿಕೆಯಲ್ಲಿರುವಂಥಾ ಯೋಗಿಯು ಮುಂದಿನ ಭೂಮಿಕೆಗಳನ್ನು ಸಾಧಿಸದೆ ಮೃತವಾದರೆ, ವಾಸನಾನುಸಾರ ಊರ್ಧ್ವಲೋಕಗಳಿಗೆ ಹೋಗಿ ಅಲ್ಲಿ ಸುಖಭೋಗಗಳನ್ನುಂಡು ಅಲ್ಲಿಯೇ ಮುಕ್ತನಾಗುತ್ತಾನೆಂದು ಪ್ರತಿಪಾದನ ಮಾಡುತ್ತಾರೆ.

ಆತನು ಮೇಲಣ ಭೂಮಿಗೆಮುನ್ನ।
ಆತನುವಳಿಯಲವಂ ತಿಳಿ ತನ್ನ॥
ನಿಜವಹ ಬಗೆಗನುಗುಣವಾಗಿರ್ದ।
ಅಜ ಹರಿ ಶಿವಪದ ಮೊದಲಾಗಿರ್ದ॥
ಒಂದರೊಳಿಚ್ಛಾ ಭುವನಂಗಳನು।
ಮುಂದೆ ಪಡೆದು ತದ್ಭೋಗಂಗಳನು॥
ಅನುಭವಿಸುತ ಸುರಸಿದ್ಧಾದಿಗಳ।
ಮನು ಮುನಿ ಗಂಧರ್ವಾದಿ ತತಿಗಳ॥

CC-0. Jangamwadi Math Collection. Digitized by eGangotri

ಓಲಗಗೊಳುತಖಿಳೋತ್ತಮನಾಗಿ।
ಲೀಲೆಯೊಳಿಹ ನಾತ್ಮಜ್ಞ ಸುಯೋಗಿ॥
ಅಲ್ಲಿಯೆ ತಾನೊಲವನ್ನೆಗಮಿಹನು।
ಅಲ್ಲಿಯೆ ನಿರ್ವಾಣವನೈದುವನು ॥೫॥

ಟೀಕಾ:—ಆತನು=ಮೂರನೇ ಭೂಮಿಕೆಯವನು, ಮೇಲಣ=ಮುಂದಿರುವ ಭೂಮಿಗೆ=ಭೂಮಿಕೆಗೆ, ಮುನ್ನ=ಮೊದಲೇ, ಆತನು=ಅವನ ಶರೀರವು, ಅಳಿಯಲ್=ನಾಶವಾದರೆ, ಅವಂ=ಅವನು, ತಿಳಿ=ಅರಿ, ತನ್ನ=ಸ್ವಕೀಯ ನಿಜವಹ=ಯಥಾರ್ಥವಾದ, ಬಗೆಗೆ=ಭಾವನೆಗೆ, ಅನುಗುಣವಾಗಿರ್ದ=ಯೋಗ್ಯವಾಗಿದ್ದ, ಅಜ=ಬ್ರಹ್ಮ, ಹರಿ=ವಿಷ್ಣು, ಶಿವಪದ=ಮಹೇಶ್ವರನಪದ, ಮೊದಲಾಗಿರ್ದ=ಅನೇಕವಾದ, ಒಂದರೊಳು=ಒಂದರಲ್ಲಿ, ಇಚ್ಛಾಭುವನಂಗಳನು=ಇಚ್ಛಾಲೋಕಗಳನ್ನು, ಮುಂದೆ=ಅನಂತರ, ಪಡೆದು=ಹೊಂದಿ, ತದ್ಭೋಗಂಗಳನು=ಆಯಾ ಲೋಕ ಭೋಗಂಗಳನ್ನು, ಅನುಭವಿಸುತ=ಉಣ್ಣುತ್ತ, ಸುರ=ಇಂದ್ರಾದಿ ದೇವತೆಗಳ, ಸಿದ್ಧಾದಿಗಳ=ಕಪಿಲಾದಿಸಿದ್ಧರ, ಮನು=ಸ್ವಾಯಂಭುವಾದಿ, ಮುನಿ=ಮರೀಚಾದಿ, ಗಂಧರ್ವಾದಿ=ಹಾಹಾ ಹೂಹೂ ಆದಿ, ತತಿಗಳ=ಸಮೂಹಗಳ, ಓಲಗಗೊಳುತ=ಸಭೆಯನ್ನು ಮಾಡುತ್ತ, ಅಖಿಳೋತ್ತಮನಾಗಿ=ಸರ್ವೋತ್ಕೃಷ್ಟನಾಗಿ, ಲೀಲೆಯೊಳಿಹನು=ಆನಂದದಿಂದಿರುವನು, ಆತ್ಮಜ್ಞ=ಆತನನ್ನು ಅರಿತಿರುವ ಸುಯೋಗಿ=ಉತ್ತಮಯೋಗಿಯು, ಅಲ್ಲಿಯೇ=ಆ ಲೋಕದಲ್ಲಿಯೇ, ತಾನೊಲವನ್ನೆಗಂ=ತನ್ನ ಪ್ರೀತಿಯಿರುವವರೆಗೂ, ಇಹನು=ಇರುವನು, ಅಲ್ಲಿಯೇ=ಆ ಲೋಕದಲ್ಲಿಯೇ, ನಿರ್ವಾಣವನು,=ಮೋಕ್ಷವನ್ನು, ಐದುವನು=ಹೊಂದುವನು.

ತಾತ್ಪರ್ಯ:—ಉಕ್ತ ಮೂರನೇ ಭೂಮಿಕೆಯಲ್ಲಿರುವಂಥಾ ಯೋಗಿಯು ಮುಂದಿನ ನಾಲ್ಕನೇ ಐದನೇ ಮೊದಲಾದ ಭೂಮಿಕೆಗಳು ಸಿದ್ಧಿಸದೆ, ಮಧ್ಯದಲ್ಲಿ ದೇಹ ಪಾತವಾದರೆ, ಅವನು ತನ್ನ ವಾಸನಾನುಸಾರವಾಗಿ ಹರಿ, ಹರ, ಬ್ರಹ್ಮಾದಿ ದೇವತೆಗಳ ಲೋಕಗಳ ಪೈಕಿ ತನ್ನ ಮನಸ್ಸಿಗೆ ಬಂದ ಯಾವದಾದರೊಂದು ಲೋಕದಲ್ಲಿದ್ದುಕೊಂಡು, ಅನೇಕ ಪ್ರಕಾರದ ಸುಖೋಪಭೋಗಗಳನ್ನು ಉಪಭೋಗಮಾಡುತ್ತ, ಇಂದ್ರಾದಿ ದೇವತೆಗಳ ಕಪಿಲಾದಿಸಿದ್ಧರ, ಸ್ವಾಯಂಭುವಾದಿ ಮನುಗಳ, ಮರೀಚಾದಿ ಮುನಿಗಳ, ಹಾಹಾದಿ ಗಂಧರ್ವರ, ಸಮೂಹಗಳನ್ನು ಸಭೆಮಾಡಿ ಅಂದರೆ ಇವರೆಲ್ಲರಿಂದ ಕರೆಯಿಸಿಕೊಂಡು ಸಭೆಮಾಡಿ ಆ ಸಭೆಯ ಮಧ್ಯಸ್ಥಾನದಲ್ಲಿ ತಾನು ಕೂತುಕೊಂಡು ಸರ್ವೋತ್ಕೃಷ್ಟನಾಗಿ, ಸರ್ವರಿಂದಲೂ ಸನ್ಮಾನಾದಿಗಳನ್ನು ಸ್ವೀಕರಿಸುತ್ತ, ವಿನೋದದಿಂದಿರುವನು. ಆ ಆತ್ಮಜ್ಞಾನಿಯಾದ ಯೋಗಿಯು ಆ ಲೋಕದಲ್ಲಿ ತನ್ನ ಪ್ರೀತಿ ಇರುವವರೆಗೂ ಇರುವನು. ಅಂದರೆ, ಯೋಗಿಯು ಆ ಬ್ರಹ್ಮಾದಿ ಲೋಕಗಳಲ್ಲಿರುತ್ತಿರಲು; ಅಲ್ಲಿ ಅವನಿಗೆ ಬ್ರಹ್ಮಜಿಜ್ಞಾ

CC-0. Jangamwadi Math Collection. Digitized by eGangotri

ಸದ್ವಾರಾ ಬ್ರಹ್ಮಜ್ಞಾನವಾಗುತ್ತದೆ. ಆದ್ದರಿಂದ ಆವನು ಸ್ವತಂತ್ರನಾಗಿರುವನು. ಇವನ ಮೇಲೆ ಆಜ್ಞೆಯನ್ನು ಮಾಡುವದು ಯಾರಿಂದಲೂ ಸಾಧ್ಯವಾಗುವದಿಲ್ಲ. ಈ ಕಾರಣದಿಂದ ಈತನು ತನ್ನ ಇಚ್ಛಾನುಸಾರ ಆ ಲೋಕದಲ್ಲಿರಬಹುದು. ಮತ್ತೂ ಆ ಲೋಕದಲ್ಲಿಯೇ ಮೋಕ್ಷವನ್ನು ಹೊಂದುವನು,

ಬಳಿಕ:ಮುಕ್ತನಾದಂಥಾ ಯೋಗೀಶ್ವರನಿಗೆ ಸರಿಯಾದವರು ಯಾರೂ ಇಲ್ಲವೆಂದು ಪ್ರತಿಪಾದಿಸುತ್ತಾರೆ.

ಈಶ್ವರ ನಾಮವು ರಸನೆಗೆ ಬರಲು।
ಶಾಶ್ವತ ಸುಕೃತಂಗಳಿಗಿದು ಮಿಗಿಲು॥
ನುತಮೂರ್ತಿ ಧ್ಯಾನ್ಯಂ ಮನಗೊಳಲು।
ಶತಕೋಟಿ ಜಪಂಗಳಿಗಿದು ಮಿಗಿಲು॥
ಪರಿಕಿಸೆ ಮೂರ್ತಿ ಧ್ಯಾನದ ಬಳಕೆ।
ದೊರಕೊಳುತಿರಲಾ ಧ್ಯಾನದ ಕುಳಕೆ॥
ಏಸಾನೋ ನೆರೆ ಮಿಗಿಲದರಿಂದ।
ಲೇಸೆನೆ ತಿಳಿದ ಗುರೂಕ್ತಿ ಗಳಿಂದ॥
ಪರಮೇಶ್ವರ ಜೀವೈಕ್ಯತೆ ವಡೆದ।
ಪರಿಭವವಿದು ಪುಸಿಯೆಂಬುದನರಿದ॥
ಗುಣನಿಧಿ ಮುಕ್ತ ಗೋರ್ವರು ಸರಿಯೆ।
ಅಣಿಮಾದಿಕ ನಾತಂಗಚ್ಚರಿಯೆ ॥೬॥

ಟೀಕಾ:—ಈಶ್ವರನಾಮವು=ಪರಮಾತ್ಮನ ನಾಮವು, ರಸನೆಗೆ=ನಾಲಿಗೆಗೆ, ಬರಲು=ಒದಗಲು, ಶಾಶ್ವತ=ನಿತ್ಯಗಳಾದ, ಸುಕೃತಂಗಳಿಗೆ=ಪುಣ್ಯಗಳಿಗೆ ಇದು=ಈ ನಾಮವು,ಮಿಗಿಲು=ಶ್ರೇಷ್ಠವಾದದ್ದು, ನುತ=ಸ್ತುತ್ಯವಾದ, ಮೂರ್ತಿಧ್ಯಾನಂ=ಧ್ಯೇಯದ ಧ್ಯಾನವು, ಮನಗೊಳಲು=ಮನದಲ್ಲಿ ಸ್ಥಿರವಾಗಲು, ಶತ ಕೋಟಿ=ನೂರು ಕೋಟಿ, ಜಪಂಗಳಿಗೆ=ಜಪಗಳಿಗೆ, ಇದು=ಈ ಧ್ಯಾನವು, ಮಿಗಿಲು=ಶ್ರೇಷ್ಠವಾದದ್ದು, ಪರಿಕಿಸೆ=ವಿಚಾರಮಾಡಲು, ಮೂರ್ತಿಧ್ಯಾನದ=ಧ್ಯೇಯ ಸಂಬಂಧವಾದ ಧ್ಯಾನದ, ಬಳಕೆ=ಪರಿಚಯವು (ಮನೋಲಯವು), ದೊರಕೊಳುತಿರಲು=ಪ್ರಾಪ್ತಿಯಾಗಲು, ಆ ಧ್ಯಾನದ=ಆ ನೆನೆಯುವ, ಕುಳಕೆ=ಸಮೂಹಕ್ಕೆ, ಏಸಾನೋ=ಎಷ್ಟೋಪಾಲು, ನೆರೆಮಿಗಿಲು=ಬಹಳ ಶ್ರೇಷ್ಠವಾದದ್ದು, ಅದರಿಂದ=ಈ ಕಾರಣದಿಂದ, ಲೇಸೆನೆ=ಶುಭಗಳಾದ, ಗುರೂಕ್ತಿಗಳಿಂದ=ಗುರೂಪದೇಶಗಳಿಂದ, ತಿಳಿದ=ಅರಿದಂಥಾ, ಪರಮೇಶ್ವರ=ಪರಮಾತ್ಮನ, ಜೀವ=ಜೀವನ, ಐಕ್ಯತೆ=ಅಭೇದವನ್ನು, ವಡೆದ=ಹೊಂದಿದ, ಪರಿಭವವಿದು=ಈ ಸಂಸಾರವು, ಪುಸಿಯೆಂಬುದನು=ಮಿಥ್ಯಾಯೆಂಬುವದನ್ನು, ಅರಿದ=ತಿಳಿದಂಥಾ, ಗುಣನಿಧಿ=

CC-0. Jangamwadi Math Collection. Digitized by eGangotri

ಸದ್ಗುಣಗಳಿಗೆ ಸ್ಥಾನೀಭೂತನಾದಂಥಾ, ಮುಕ್ತಂಗೆ=ಮುಕ್ತನಿಗೆ, ಓರ್ವರು= ಒಬ್ಬರಾದವರು, ಸರಿಯೆ=ಸಮಾನರೇ, ಆತಂಗೆ=ಅವನಿಗೆ, ಅಣಿಮಾದಿಕವು= ಅಣಿಮಾದ್ಯೈಶ್ವರ್ಯಗಳು, ಅಚ್ಚರಿಯೆ=ಆಶ್ಚರ್ಯವೆ.

ತಾತ್ಪರ್ಯ:— ಎಲೋ ಶಿಷ್ಯನೇ! ಉಕ್ತಯೋಗೀಶ್ವರನಿಗೆ ಸಮಾನರಾದಂಥವರು ಯಾರೂ ಇಲ್ಲ. ಅಂದಮೇಲೆ, ಅವನಿಗೆ ಅಣಿಮಾದ್ಯೈಶ್ವರ್ಯಗಳು ಪ್ರಾಪ್ತಿಯಾಗುವದು ಆಶ್ಚರ್ಯವೇ! ಏನೂ ಆಶ್ಚರ್ಯವಲ್ಲ ಎಂಬ ಅಭಿಪ್ರಾಯವು. ಹೇಗಂದರೆ, ಸಾವಿರಾರು ಪುಣ್ಯಗಳಿಗಿಂತಲೂ ಈಶ್ವರನಾಮೋಚ್ಚಾರವು ಎಷ್ಟೋ ಪಾಲು ಮಿಗಿಲಾದದ್ದು. ನಾಮೋಚ್ಚಾರಕ್ಕಿಂತಲೂ ನಾಮಜಪವು ನೂರು ಪಾಲು ಮಿಗಿಲಾದದ್ದು. ಈ ಶತಕೋಟಿ ಜಪಕ್ಕಿಂತಲೂ ಮೂರ್ತಿಧ್ಯಾನವು ನೂರು ಪಾಲು ಶ್ರೇಷ್ಠವಾದದ್ದು. ಮೂರ್ತಿಧ್ಯಾನಕ್ಕಿಂತಲೂ ಮನೋಲಯವು ಎಷ್ಟೋ ಪಾಲು ಶ್ರೇಷ್ಠವಾದದ್ದು. ಹೀಗೆಂದು ಶಾಸ್ತ್ರದಲ್ಲಿ ಹೇಳಿರುತ್ತದೆ. ಆದ್ದರಿಂದ ಉತ್ತಮ ಗುರುವಿನ ಉಪದೇಶಗಳಿಂದ ಜೀವಬ್ರಹ್ಮರ ಐಕ್ಯತೆಯನ್ನು ಪಡೆದಂಥಾ, ಈ ಜನನ ಮರಣಾತ್ಮಕ ಸಂಸಾರವು ಮಿಥ್ಯೆಯೆಂದು ತಿಳಿಯುವಂಥಾ, ಅನೇಕ ಸದ್ಗುಣಗಳೆಂಬ ರತ್ನಗಳಿಗೆ ಸಮುದ್ರ ಸ್ಥಾನೀಭೂತನಾದಂಥಾ ಮುಕ್ತನಾದ ಪುರುಷನಿಗೆ ಅಣಿಮಾದಿಗಳು ಪ್ರಾಪ್ತಿಯಾಗುವದು ಆಶ್ಚರ್ಯವೇ ಅಲ್ಲ ಎಂಬುವ ಅಭಿಪ್ರಾಯವು.

ಬಳಿಕ; ಮುಕ್ತನಾದ ಪುರುಷನಿಗೆ ಅಣಿಮಾದ್ಯಷ್ಟೈಶ್ವರ್ಯಗಳು ಪ್ರಾಪ್ತಿಯಾಗುತ್ತವೆಂಬುದನ್ನು ತೋರಿಸುತ್ತಾರೆ.

ಮುಕ್ತಂಗಪ್ಪಣಿ ಮಾದಿಗಳಿರವ|
ವ್ಯಕ್ತಂ ಮಾಡುವೆನರಿಸುತ ಪರವ||
ಅತಿ ಸೂಕ್ಷ್ಮಕೆ ಸೂಕ್ಷ್ಮತೆಯುಹುದಣಿಮೆ|
ಅತಿ ಮೇಲಿಗೆ ಮೇಲಪ್ಪುದೆ ಮಹಿಮೆ||
ನೆಗಹಲಶಕ್ಯವೆನಿಪ್ಪುದೆ ಗರಿಮೆ|
ನೆಗಹುವೆಡೆಯೊಳಣುವಪ್ಪುದೆ ಲಘಿಮೆ||
ಲೋಕದರಿಕೆ ತಿಳಿ ಪ್ರಾಪ್ತಿ ಯೆನಿಕ್ಕು|
ಪ್ರಾಕಾಮ್ಯಂ ಬಯಸಿದು ತನಗಕ್ಕು||
ಜಗಮಂ ಪ್ರೇರಿಸುತಿಹುದೀಶತ್ವ|
ಜಗದೊಡೆತನವದು ತಾನೆ ವಶಿತ್ವ||
ಇವು ಮೊದಲಾಗಿರ್ದೆಲ್ಲಾ ಸಿದ್ಧಿ|
ತವೆ ಯೋಗೀಶಂಗಹುದು ನಿಬದ್ಧಿ ||೭||

CC-0. Jangamwadi Math Collection. Digitized by eGangotri

ಟೀಕಾ:—ಮುಕ್ತಂಗೆ=ಮುಕ್ತನಿಗೆ, ಅಪ್ಪ=ಆಗುವ, ಅಣಿಮಾದಿಗಳ=ಅಣಿಮಾದಿ ಸಿದ್ಧಿಗಳ, ಇರವ=ಸ್ವರೂಪವನ್ನು, ವ್ಯಕ್ತಂ=ಪ್ರಕಟತೆಯನ್ನು, ಮಾಡುವೆನು=ಮಾಡುವೆನು, ಸುತ=ಎಲೈ ಶಿಷ್ಯನೇ!, ಪರವ=ಪರವಸ್ತುವನ್ನು, ಅರಿ=ತಿಳಿ, ಅತಿಸೂಕ್ಷ್ಮಕೆ=ಬಹಳ ಸೂಕ್ಷ್ಮಕೆ, ಸೂಕ್ಷ್ಮತೆಯಹುದು=ಸೂಕ್ಷ್ಮವಾಗಿರುವದು, ಅಣಿಮೆ=ಅಣಿಮಾಸಿದ್ಧಿಯು, .ಆಹುದು=ಎನಿಸುವದು, ಅತಿ ಮೇಲಿಗೆ=ಎಲ್ಲಕ್ಕೂ ಹೆಚ್ಚಿಗೆ, ಮೇಲಪ್ಪುದೆ=ಹೆಚ್ಚೆನಿಸುವಷೆ, ಮಹಿಮೆ=ಮಹಿಮೆಯೆನಿಸುವದು, ನೆಗಹಲು=ಎತ್ತುವದಕ್ಕೆ, ಅಶಕ್ಯವೆನಿಪ್ಪುದೆ=ಬಾರದ್ದೇ, ಗರಿಮೆ=ಗರಿಮೆಯೆನಿಸುವದು, ನೆಗಹುವೆಡೆಯೊಳು=ಎತ್ತುವಕಾಲಕ್ಕೆ, ಅಣುವಪ್ಪುದೆ=ಕಿಂಚಿತ್ತಾಗಿ ತೋರುವದೇ, ಲಘಿಮೆ=ಲಘಿಮೆಯೆನಿಸುವದು, ಲೋಕದ=ಜಗತ್ತಿನ, ಅರಿಕೆ=ತಿಳಿಯುವದೇ, ಪ್ರಾಪ್ತಿಯೆನಿಕ್ಕು=ಪ್ರಾಪ್ತಿಯೆನಿಸುವದು, ತಿಳಿ=ಅರಿ, ಬಯಸಿದು=ಇಚ್ಛೈಸಿದ್ದು, ತನಗಕ್ಕು=ತನಗಾಗುವದು,ಪ್ರಾಕಾಮ್ಯಂ=ಪ್ರಾಕಾಮ್ಯವೆನಿಸುವದು, ಜಗಮಂ=ಜಗತ್ತನ್ನು, ಪ್ರೇರಿಸುತಿಹುದು=ನಡೆಸುತ್ತಿಹುದು, ಈಶತ್ವ=ಈಶತ್ವವೆನಿಸುವದು, ಜಗದೊಡೆತನವದು=ಜಗತ್ತಿನ ಕರ್ತೃತ್ವವು, ತಾನೆವಶಿತ್ವ=ವಶಿತ್ವವೆನಿಸುವದು,ಇವು=ಇವುಗಳೇ,ಮೊದಲಾಗಿರ್ದ=ಮೊದಲಾದ, ಎಲ್ಲಾ ಸಿದ್ಧಿ=ಸರ್ವಸಿದ್ಧಿಗಳು, ತವೆ=ಚನ್ನಾಗಿ, ಯೋಗೀಶಂಗೆ=ಯೋಗೀಶ್ವರನಿಗೆ, ಅಹುದು=ಆಗುವದು, ನಿಬದ್ಧಿ=ನಿಶ್ಚಯವು,

ತಾತ್ಪರ್ಯ:—(ಪ್ರಶ್ನೆ) ಮಣಿಮಂತ್ರಾದಿ ಸಿದ್ಧಪುರುಷರು ಆಕಾಶ ಗಮನಾದಿ ಸಿದ್ಧಿಗಳನ್ನು ಪ್ರಾಪ್ತಮಾಡಿಕೊಂಡಿರುವಂತೆ, ಮುಕ್ತನು ಏನಾದರೂ ವಿಚಿತ್ರ ಸಿದ್ಧಿಗಳನ್ನು ಪ್ರಾಪ್ತಮಾಡಿಕೊಂಡಿರುವನೋ ಹೇಗೆ?

(ಉತ್ತರ) ಮಣಿಮಂತ್ರಾದಿ ಸಿದ್ಧರಿಗೆ ಅಗೋಚರವಾದಂಥಾ ನಿರತಿಶಯಾನಂದಾನುಭವವೇ ಜ್ಞಾನಿಗೆಗೋಚರವಾಗಿರುವುದು. ಆದರಿಂದ ಇದೇ ವಿಶೇಷವೆನಿಸುವದು. ಇದಕ್ಕಿಂತಲೂ ಹೆಚ್ಚಿನ ವಿಚಿತ್ರವಾದ ಪದಾರ್ಥವಿಲ್ಲ. ಯಾಕಂದರೆ, ಮಂತ್ರಸಿದ್ಧಾದಿ ರೂಪದಿಂದ ನಾನೇ ಇದ್ದೇನೆಂಬ ಸರ್ವಾತ್ಮಕ ಬುದ್ಧಿಯಿಂದ ಆ ಸಿದ್ಧಿಗಳೆಲ್ಲವೂ ಅವರಿಗೆ ಪ್ರಾಪ್ತಗಳೇ ಆಗಿರುತ್ತವೆ. ಅಂದರೆ ತತ್ವಜ್ಞಾನಿಗೆ ಪ್ರಾಪ್ತವಾದ ನಿತ್ಯನಿರತಿಶಯಾನಂದವೇ ಮುಖ್ಯವಾದದ್ದು. ಆಕಾಶಗಮನಾದಿ ಸಿದ್ಧಿಗಳು ಯತ್ನಸಾಧ್ಯಗಳಾಗಿರುವದರಿಂದ ಮಾಯಿಕ ಮಿಥ್ಯಗಳಾಗಿರುತ್ತವೆಂಬ ಭಾವವು ಆದ್ದರಿಂದಲೇ ಇಂಥಾ ವಿಷಯಗಳಲ್ಲಿ ಜ್ಞಾನಿಯು ತತ್ಪರನಾಗುವದಿಲ್ಲ. ಯಾಕಂದರೆ ಸರ್ವ ಆಶೆಯನ್ನು ತ್ಯಜಿಸಿ ನಿರ್ಮಲವಾದ ಮನಸ್ಸುಳ್ಳವನಾಗಿರುತ್ತಾನೆ. ಆದ್ದರಿಂದ ಮಣಿ ಮಂತ್ರಾದಿ ಸಿದ್ಧಿಯುಳ್ಳ ಮೂಢ ಪುರುಷರಂತೆ ಇವನಲ್ಲ: ಕಿಂತು ವಿಲಕ್ಷಣನಾಗಿರುತ್ತಾನೆ. ಆದರೆ, ಆ ಸಿದ್ಧಿಗಳು ಯಾವವು ಅಂದರೆ— ಅತ್ಯಂತ ಸೂಕ್ಷ್ಮವಾದ ಪ್ರಾಣಿಗಳ ಶರೀರಗಳಲ್ಲಿಯೂ ಕೂಡಾ ಅವುಗಳ ಆತ್ಮ

CC-0. Jangamwadi Math Collection. Digitized by eGangotri

ಸ್ವರೂಪದಿಂದ ಪ್ರವೇಶವಾಗುವದೇ ಅಣಿಮೆಯೆನಿಸುವದು. ಮೂವತ್ತಾರು ತತ್ವಗಳಿಗಿಂತಲೂ ಹೆಚ್ಚಾಗಿರುವತನವೇ ಮಹಿಮೆಯೆನಿಸುವದು, ಮಹಾಮೇರು ಪರ್ವತ ಸಮಾನವಾದ ವಸ್ತುವನ್ನು ಎತ್ತುವಲ್ಲಿ ಅಣುಸದೃಶ ಹಗುರಾಗಿ ತೋರುವದೇ ಲಘಿಮೆಯೆನಿಸುವದು. ಪರಮಾಣು ಸದೃಶ ವಸ್ತುವನ್ನು ಎತ್ತುವ ಕಾಲಕ್ಕೆ ಮೇರು ಸದೃಶಭಾರವಾಗಿ ತೋರುವದೇ ಗರಿಮೆಯೆನಿಸುವದು. ಇದ್ದಲ್ಲಿಯೇ ಇದ್ದು ಎಲ್ಲ ಲೋಕಗಳನ್ನು ತಿಳಿಯುವದೇ ಪ್ರಾಪ್ತಿಯೆನಿಸುವದು. ಇಚ್ಛಾನುಸಾರ ಆಕಾಶ ಗಮನಾದಿ ಸಿದ್ಧಿಯೇ ಪ್ರಾಕಾಮ್ಯವೆನಿಸುವದು. ಜಗದುತ್ಪತ್ತ್ಯಾದಿಗಳನ್ನು ಮಾಡುವದೇ ಈಶ್ವರತ್ವವೆನಿಸುವದು. ಜಗತ್ತನ್ನು ತನ್ನಾಧೀನವಾಗಿಟ್ಟುಕೊಳ್ಳುವುದೇ ವಶಿತ್ವವೆನಿಸುವದು. ಇಂಥಾ ಯಾವತ್ತೂ ಸಿದ್ಧಿಗಳು ಸರ್ವಾತ್ಮಕ ದೃಷ್ಟಿಯಿಂದ ಜ್ಞಾನಿಗೆ ಪ್ರಾಪ್ತಗಳಾಗಿರುವವೆಂಬ ತಾತ್ಪರ್ಯವು.

ಬಳಿಕ; ಭೂಮಿತ್ರಯದಿಂದ ಯುಕ್ತನಾದ ಪುರುಷನಿಗೆ ಇಂದ್ರಿಯ ಮನೋಸಂಬಂಧವಾದ ಜಗತ್ತೆಲ್ಲವೂ ಮಿಥ್ಯೆಯಾಗಿ ಕಾಣೋಣದರಿಂದಲೂ, ಇದ್ದೆಲ್ಲ ವಾಸನೆಗಳು ನಾಶವಾಗುವದರಿಂದಲೂ ಅದಕ್ಕೆ ವಾಸನಾಕ್ಷಯವೆಂದು ಹೇಳುತ್ತಾರೆ.

ಬಳಿಕಾ ಭೂಮಿತ್ರಯವಮಂ ಬಲಿದು।
ತಿಳುವಿನ ಸುಖದನುಭವದೊಳು ನಲಿದು॥
ಎಲ್ಲಾ ಯಿಂದ್ರಿಯ ದೊಲವಂ ಜರಿದು।
ಎಲ್ಲಾ ವಿಷಯದ ಮತಿಯುಂ ಮರೆದು॥
ಜಗದಾಭಾಸಂ ತೋರುತ್ತಿಹುದು।
ನೆಗಳಿದ ವಾಸನೆ ಲಯಿಸುತ್ತಿಹುದು॥
ಅದರಿಂದದನು :ವಿಲಾಯಿನಿಯೆಂದು।
ಚದುರರ್ಪೇಳುವ ರಾದಶ ಬಂದು॥
ನೆಲಿಸಲು ಯೋಗಿಯಮತಿ ದೃಢವಾಗಿ।
ಚಲಿಸದೆ ತೋರ್ಪುದು ಸುಖಮಯವಾಗಿ॥
ಅದು ತದ್ಧ್ಯಾನಿಗೆ ತಿಳಿ ಕನಸಕ್ಕು।
ಅದು ನಾಲ್ಕನೆಯ ಸುಭೂಮಿಕೆಯೆಕ್ಕು ॥೮॥

ಟೀಕಾ:—ಬಳಿಕ=ಅನಂತರ, ಭೂಮಿತ್ರಯವಮಂ=ಮೂರುಭೂಮಿಕೆಗಳು, ಬಲಿದು=ದೃಢವಾಗಿ, ತಿಳುವಿನ=ಜ್ಞಾನದ, ಸುಖದನುಭವದೊಳು=ಅನುಭವ ರೂಪವಾದ ಸುಖದಲ್ಲಿ, ನಲಿದು=ಸಂತೋಷವನ್ನು ಹೊಂದಿ, ಎಲ್ಲಾ ಇಂದ್ರಿಯ=ಸರ್ವೇಂದ್ರಿಯಗಳ, ಒಲವಂ=ಪ್ರೀತಿಯನ್ನು, ಜರಿದು=ತಿರಸ್ಕರಿಸಿ, ಎಲ್ಲಾ ವಿಷಯದ=ಸರ್ವವಿಷಯಗಳ, ಮತಿಯಂ=ಬುದ್ಧಿಯನ್ನು, ಮರೆದು=ಮರೆತು,

CC-0. Jangamwadi Math Collection. Digitized by eGangotri

ಜಗತ್ತು=ಪ್ರಪಂಚವು, ಆಭಾಸಂ=ಮಿಥ್ಯೆಯಾಗಿ, ತೋರುತ್ತಿಹುದು=ಪ್ರತೀತಿಯಾಗುತ್ತಿರುವದು, ನೆಗಳಿದ=ಉಂಟಾದ, ವಾಸನೆ=ವಾಸನೆಯು, ಲಯಸುತ್ತಿಹುದು=ನಾಶವಾಗುತ್ತಿರುವದು, ಚದುರರ್=ಪಂಡಿತರು, ಅದರಿಂದ=ಆದ್ದರಿಂದ, ಅದನು=ಅದನ್ನು, ವಿಲಾಯಿನಿಯೆಂದು=ವಾಸನಾಕ್ಷಯವೆಂದು, ಪೇಳುವರು=ಹೇಳುವರು, ಆದಶಬಂದು=ಆ ಅವಸ್ಥೆಯು ಪ್ರಾಪ್ತವಾಗಿ, ನೆಲಿಸಲು=ತೋರಲು, ಯೋಗಿಯ=ಯೋಗೀಶ್ವರನ, ಮತಿ=ಬುದ್ಧಿಯು, ದೃಢಮಾಗಿ=ಗಟ್ಟಿಯಾಗಿ, ಚಲಿಸದೆ=ಹೋದಾಡದೆ, ಸುಖಮಯಮಾಗಿ=ಸುಖಸ್ವರೂಪವಾಗಿ, ತೋರ್ಪುದು=ತೋರುವದು ಅದು=ಆ ಅವಸ್ಥೆಯು, ತದ್ಧ್ಯಾನಿಗೆ=ಆ ಯೋಗಿಗೆ, ಕನಸಕ್ಕು=ಸ್ವಪ್ನವಾಗುವದು, ತಿಳಿ=ಅರಿ, ಅದು=ಆ ಅವಸ್ಥೆಯು, ನಾಲ್ಕನೆಯ=ನಾಲ್ಕನೆಯ, ಸುಭೂಮಿಕೆಯಕ್ಕು=ಒಳ್ಳೇ ಭೂಮಿಕೆಯೆನಿಸುವದು,

ತಾತ್ಪರ್ಯ:— ಬಳಿಕ ಮೂರು ಭೂಮಿಕೆಗಳ ಅಭ್ಯಾಸವು ಧೃಢಮಾಗಿ ನಾಲ್ಕನೇ ಭೂಮಿಕೆಗೆ ಬರಲು; ಬ್ರಹ್ಮಾಪರೋಕ್ಷಜ್ಞಾನದಿಂದ ಅಜ್ಞಾನಾದಿ ದುಃಖವು ನಿವೃತ್ತಿಯಾಗಲು, ಆಗ್ಯೆ ಸ್ವರೂಪಸುಖವು ಆವಿರ್ಭಾವವಾಗುವದು. ಹೇಗಂದರೆ, ಮೂಲದುಃಖಕ್ಕೆ ಕಾರಣವಾದಂಥಾದ್ದು ಸಂಕಲ್ಪವು. ಇಂಥಾ ಸಂಕಲ್ಪವನ್ನು ತ್ಯಾಗಮಾಡಿ ನಿಃಸಂಕಲ್ಪರೂಪ ಮೋಕ್ಷವನ್ನು ಮೆಲ್ಲ ಮೆಲ್ಲನೆ ಅಭ್ಯಾಸ ಮಾಡತಕ್ಕದ್ದು. ಅಂದರೆ, ವಿಷಯಾದಿಗಳು ಗ್ರಹಣಮಾಡಲಿಕ್ಕೆ ಯೋಗ್ಯವಾದವುಗಳು. ನಾನು ಗ್ರಹಣ ಮಾಡತಕ್ಕವನು, ಎಂಬ ಈ ಭೇದ ಬುದ್ಧಿಯು ಎಲ್ಲಿಯವರೆಗೆ ಇರುವದೋ; ಅಲ್ಲಿಯತನಕ ಇಷ್ಟಾನಿಷ್ಟ ವೃತ್ತಿ ದ್ವಾರಾ ರಾಗದ್ವೇಷಾದಿಗಳು ಸಂಭವಿಸುತ್ತವೆ. ಆದ್ದರಿಂದ ಭೇದಭ್ರಾಂತಿಯೇ ದುಃಖಕ್ಕೆ ಕಾರಣವಾಗಿರುತ್ತದೆ, ಗ್ರಾಹ್ಯಗ್ರಾಹಕ ಭೇದವನ್ನು ಬಿಟ್ಟು ಕೇವಲ ಸಾಕ್ಷಿ ಚೈತನ್ಯಾವಸ್ಥೆಯಿಂದ ಸ್ಥಿತಿಯುಳ್ಳವನಾದರೆ, ಆ ಸಂಕಲ್ಪವೇ ನಾಶವಾಗುತ್ತದೆಂಬ ತಾತ್ಪರ್ಯವು. ಆದ್ದರಿಂದ ಎಲೈ ಶಿಷ್ಯನೇ ! ನೇತ್ರಾದಿ ಇಂದ್ರಿಯಗಳು ಯಾವ ಪದಾರ್ಥಗಳನ್ನು ಕಂಡು ರಾಗದಿಂದ ಅದರಲ್ಲಿ ಆಸಕ್ತ ಚಿತ್ತವುಳ್ಳವುಗಳಾಗುವವೋ, ಅದೇ ದುಃಖಕ್ಕೆ ಕಾರಣವಾಗುವದು. ಮತ್ತು ರಾಗ ರಹಿತಗಳಾದರೆ ಸುಖಕ್ಕೆ ಸಾಧನವಾಗುವದು. ಆದ್ದರಿಂದ ಸ್ಥಾವರ ಜಂಗಮಾತ್ಮಕವಾದ ಈ ಸೃಷ್ಟಿಯಲ್ಲಿ ತೃಣ ಮೊದಲುಮಾಡಿಕೊಂಡು ದೇವ ಶರೀರದ ಪರ್ಯಂತರವಿರುವ ಯಾವ ಪದಾರ್ಥಗಳನ್ನು ಕುರಿತು ಪ್ರೀತಿಸಬೇಡ. ಸ್ನಾನ, ಭೋಜನಾದಿ ವ್ಯವಹಾರ ವಿಷಯದಲ್ಲಿಯೂ ಕೂಡಾ ಕೇವಲ ಅಕರ್ತಾ ಅಭೋಕ್ತಾ ರೂಪವಾದ ಅಸಂಗ ಬ್ರಹ್ಮರೂಪದಿಂದಿರು. ಮತ್ತು ಮನಸ್ಸಿನಿಂದಲಾದರೂ ಕೂಡಾ ಹಿಂದೆ ಆಗಿ ಹೋದ ಸಂಗತಿಗಳನ್ನು ಕುರಿತು ದುಃಖಿಸಬೇಡ. ಮುಂದೆ ಹೇಗಾದೀತೆಂದು ಚಿಂತಿಸಬೇಡ. ವರ್ತಮಾನದಲ್ಲಿ ಪ್ರಾಪ್ತವಾದ ಕಾರ್ಯವನ್ನು ಮಾಡುತ್ತಾ ಹೋಗುವಂಥವನಾಗು. ಒಂದು ವೇಳೆ ಮನಸ್ಸಿನಲ್ಲಿ ಮೋಹ,

CC-0. Jangamwadi Math Collection. Digitized by eGangotri

ಮದ, ಆಶೆ ಮೊದಲಾದವುಗಳು ತೋರಿದರೆ, ಅವುಗಳನ್ನು ವಿವೇಕರೂಪ ಮನ, ದಿಂದಲೇ ನಿವಾರಣೆ ಮಾಡತಕ್ಕದ್ದು. ಹೇಗೆ ಕಬ್ಬಿಣವನ್ನು ಕಬ್ಬಿಣದ ಉಳಿ ಯಿಂದಲೇ ಕಡಿಯುತ್ತಾರೋ, ವಿಷದಿಂದ ವಿಷವನ್ನು, ಸೌಳು ಮೊದಲಾದ ಮಲದಿಂದ ಮಲವನ್ನು ಹೇಗೆ ಕಳೆಯುತ್ತಾರೋ; ಆದರಂತೆ ಮೋಹಾದಿಗಳಿಂದ ಯುಕ್ತವಾದ ಅವಿವೇಕ ಮನಸ್ಸನ್ನು ವಿವೇಕದಿಂದ ನಾಶಮಾಡು. ಈ ಪ್ರಕಾರ ಸರ್ವ ಭ್ರಾಂತಿಯನ್ನು ಹೋಗಲಾಡಿಸಿಕೊಂಡು ನಿಜದಲ್ಲಿ ತತ್ಪರನಾಗುವಂತವ ನಾಗು ಅಂದರೆ, ಸ್ಥೂಲ ಸೂಕ್ಷ್ಮ ಶರೀರದ್ವಯಗಳಿಗೆ ಅಧಿಷ್ಠಾನ ಭೂತವಾದ ಕೂಟಸ್ಥನೇ ನಾನೆಂಬ ದೃಢವಾದ ಬುದ್ಧಿಯನ್ನು ಮಾಡು. ಇಂಥಾ ಬುದ್ಧಿಯು ನೆಲಿಸುತ್ತಿರಲಿಕ್ಕೆ ಜಗತ್ತು ಕೇವಲ ಸ್ವಪ್ನಪ್ರಾಯ ಆಭಾಸ ಅಂದರೆ, ಮಿಥ್ಯೆಯಾಗಿ ತೋರುತ್ತದೆ. ಆದರಿಂದ ಇದ್ದ ವಾಸನೆಗಳಾದರೂ ತಮ್ಮಷ್ಟಕ್ಕೆ ತಾವೇ ನಾಶಗಳಾಗುತ್ತವೆ. ಈ ಅವಸ್ಥೆಗೆ ಪಂಡಿತರು ವಾಸನಾಕ್ಷಯವೆಂದು ಕರೆಯುತ್ತಾರೆ, ಯೋಗೀಶ್ವರನ ಬುದ್ಧಿಯು ನಿಜದಲ್ಲಿ ಚಲಿಸದೆ ದೃಢವಾಗಿ ನಿಲ್ಲಲು; ಆ ದೃಢವಾದ ವೃತ್ತಿಯಲ್ಲಿ ಸ್ವರೂಪಾನಂದಾವಿರ್ಭಾವವಾಗುವದು. ಆದರಿಂದ ಆವನ ವೃತ್ತಿಯೆಲ್ಲವೂ ಸುಖಮಯವಾಗಿ ತೋರುವದು. ಆದರಿಂದಲೇ ಆ ಅವಸ್ಥೆಯು ಯೋಗಿಗೆ ಸ್ವಪ್ನಾವಸ್ಥೆಯೆನಿಸುವದು. ಅಂದರೆ, ಈ ಅವಸ್ಥೆಯಲ್ಲಿ ಜಗತ್ತು ಸ್ವಪ್ನದಂತೆ ತೋರುವದರಿಂದ ಸ್ವಪ್ನಾವಸ್ಥೆಯೆಂಬ ಭಾವವು. ಇದು ನಾಲ್ಕನೆಯ ಭೂಮಿಕೆಯೆನಿಸುತ್ತದೆ.

ಬಳಿಕ; ಆ ನಾಲ್ಕನೇ ಭೂಮಿಕೆಯುಳ್ಳ ಯೋಗಿಯು ತನ್ನ ನಿಜದಲ್ಲಿಯೇ ಚಿತ್ತವು ಸ್ಥಿರವನ್ನು ಹೊಂದಿ, ಬಹಿರ್ಮುಖವಾದಾಗ್ಯಾದರೂ, ಪರವಶನಂತೆ ಕಂಡುಬರುವನು, ಆದ್ದರಿಂದ ಇದು ಆನಂದಿನಿಯೆಂಬ ಐದನೇ ಭೂಮಿಕೆಯೆಂದು ಹೇಳುತ್ತಾರೆ.

ಸರ್ವದ್ವೈತವನಳಿದುಳಿದಿರ್ದ ।
ನಿರ್ವ್ಯಾಪಾರವೆ ಮೈಯಾಗಿರ್ದ ॥
ಯೋಗಿ ವಿಷಯದ ವಿಕಲ್ಪನೆಯಳಿದು ।
ಆಗಳೆ ಪೂರ್ಣಾಹಂಕೃತಿ ದಳೆದು ॥
ಆ ಸಂಸೃತಿವಾಸನೆಯದು ಪೋಗಿ ।
ಓಸರಿಸದ ನಿಜಸುಖ ತಾನಾಗಿ ॥
ಸಂತತವಂತರ್ಮುಖನಾಗಿಹನು ।
ಚಿಂತಿಸದಾ ಸುಖಮೂರ್ಛೆಯೊಳಿಹನು ॥
ಒಮ್ಮೊಮ್ಮೆ ಬಹಿರ್ಮುಖನಾದುಂದು।
ನೆಮ್ಮಿದ ನಿಜಸುಖವದು ಬಳಿಸಂದು॥
ಸಂಚರಿಪಂ ಪರವಶನೆಂತಂತೆ।
ಪಂಚಮ ಪದವಿದು ಸುಪ್ತಿಯುನುಂತೆ ॥೯॥

CC-0. Jangamwadi Math Collection. Digitized by eGangotri

ಟೀಕಾ:—ಸರ್ವ=ಎಲ್ಲ, ದ್ವೈತವನು=ದ್ವೈತ ಪ್ರಪಂಚವನ್ನು, ಅಳಿದು= ನಾಶಮಾಡಿ,ಉಳಿದಿರ್ದ=ಅವಶೇಷವಾಗಿರುವಂಥಾ, ನಿರ್ವ್ಯಾಪಾರವೆ=ಏನೊಂದು ವ್ಯಾಪಾರ ವಿಲ್ಲದಂಥಾವಸ್ತುವೇ, ಮೈಯಾಗಿರ್ದ=ಸ್ವರೂಪವಾಗಿರ್ದ, ಯೋಗಿ= ಯೋಗಿಯು, ವಿಷಯದ=ಇಹಪರ ವಿಷಯಗಳ, ವಿಕಲ್ಪನೆಯನು=ಸಂಕಲ್ಪವನ್ನು ಅಳಿದು=ನಾಶಮಾಡಿ, ಆಗಳೆ=ತಕ್ಷಣವೇ, ಪೂರ್ಣಾಹಂಕೃತಿ=ಪೂರ್ಣ ಬ್ರಹ್ಮವೇ ನಾನೆಂಬ ಅಹಂಕಾರವನ್ನು, ದಳೆದು=ಹೊಂದಿ, ಅಸಂಸೃತಿವಾಸನೆಯು=ಆ ಸಂಸಾರದ ಇಚ್ಛೆಯು, ಅದು ಪೋಗಿ=ನಷ್ಟವಾಗಿ, ಓಸರಿಸದ=ಉಪಮಾವಿಲ್ಲದ, ನಿಜಸುಖ=ಸ್ವರೂಪ ಸುಖವೇ, ತಾನಾಗಿ=ತಾನೇಯಾಗಿ, ಸಂತತ=ಯಾವಾಗಲೂ, ಅಂತರ್ಮುಖನಾಗಿಹನು=ಅಂತರ್ಮುಖವೃತ್ತಿಯುಳ್ಳವನಾಗಿ ರುವನು, ಚಿಂತಿಸದೆ= ಬೇರೊಂದು ಇಚ್ಛಿಸದೆ, ಸುಖಮೂರ್ಛೆಯೊಳಿಹನು=ಸುಖದಲ್ಲಿಯೇ ತಲ್ಲೀನನಾಗಿ ರುವನು, ಒಮ್ಮೊಮ್ಮೆ=ಒಂದೊಂದುಕಾಲಕ್ಕೆ, ಬಹಿರ್ಮುಖವಾದಂದು=ಹೊರಗೆ ವೃತ್ತಿಬಂದ ಕಾಲಕ್ಕೆ, ನೆಮ್ಮಿದ=ಸ್ವರೂಪಭೂತವಾದ, ನಿಜಸುಖವದು=ಯಥಾ ರ್ಥವಾದ ಸುಖವು, ಬಳಿಸಂದು=ಕ್ರಮವಿಡಿದು, ಪರವಶನಂತೆ=ಸುರಾಪಾನ ಪುರುಷನಂತೆ, ಸಂಚರಿಪಂ=ಸಂಚರಿಸುವನು, ಇದು=ಈ ಅವಸ್ಥೆಯು, ಸುಪ್ತಿಯು ಮಂತೆ=ಸುಪ್ತಿಯೆನಿಸುವದು:ಪಂಚಮಪದವು=ಐದನೇ ಅವಸ್ಥೆಯು.

ತಾತ್ಪರ್ಯ:—ಅನಂತರ ಆನಂದಿನಿಯೆಂಬ ಐದನೇ ಭೂಮಿಕೆಯಲ್ಲಿದ್ದ ಯೋಗಿಯ ಸ್ಥಿತಿಯನ್ನು ವರ್ಣಿಸುತ್ತಾರೆ. ಹೇಗಂದರೆ:—ಮೂರನೇ ಭೂಮಿಕೆ ಯುಳ್ಳ ಯೋಗಿಗೆ ಈ ಜಗತ್ತು ವ್ಯಾವಹಾರಿಕ ಸತ್ತಾವುಳ್ಳದ್ದಾಗಿ ತೋರುವದರಿಂದ ಜಾಗ್ರದವಸ್ಥಾಯೆಂದು ಹೇಳಲ್ಪಟ್ಟಿತು. ನಾಲ್ಕನೇ ಭೂಮಿಕೆಯುಳ್ಳ ಯೋಗಿಗೆ ಈ ಜಗತ್ತು ಪ್ರಾತಿಭಾಸಿಕಸತ್ತೆಯಾಗಿ ತೋರುವದರಿಂದ ಸ್ವಪ್ನಾವಸ್ಥೆಯೆಂದು ಹೇಳಲ್ಪಟ್ಟಿತು. ಶರತ್ ಕಾಲದಲ್ಲಿ ಮೇಘಗಳು ಅಡಗುತ್ತಿರಲಿಕ್ಕೆ ಕೇವಲ ಆಕಾಶವೇ ಹೇಗಿರುತ್ತದೆಯೋ ಹಾಗೆ ಐದನೇ ಭೂಮಿಕೆಯಲ್ಲಿ ಯೋಗೀಶ್ವರನಿಗೆ ಪ್ರಾತಿಭಾಸಿಕ ತ್ರಿಪುಟಿಯು ಕೂಡಾ ತೋರದ್ದರಿಂದಲೂ, ಶುದ್ಧಚಿನ್ಮಾತ್ರರೂಪ ಲಕ್ಷಣದಿಂದ ಅವಶೇಷನಾದ್ದರಿಂದಲೂ, ಸುಷುಪ್ತಿ ಅವಸ್ಥೆಯುಳ್ಳವನೆಂದು ಹೇಳಿಸಿಕೊಳ್ಳಲ್ಪಡುತ್ತಾನೆ; ಅಂದರೆ ತಮೋರೂಪ ಸುಪ್ತಿಯುಳ್ಳವನಲ್ಲ. ಕಿಂತು, ಗೌಣೀರೂಪ ಸುಪ್ತಿಯವಸ್ಥೆಯುಳ್ಳವನೆಂಬ ತಾತ್ಪರ್ಯವು. ಆದ್ದರಿಂದಲೇ ಯೋಗಿಯು ಪಂಚಮ ಭೂಮಿಕೆಯನ್ನು ಹೊಂದುತ್ತಿರಲಿಕ್ಕೆ ಅವನಿಗೆ ಈ ದೃಶ್ಯ ವಾದ ಪ್ರಪಂಚವು ಕಿಂಚಿತ್ತಾದರೂ ತೋರುವದಿಲ್ಲ. ಆದರಿಂದ ಏನೊಂದು ವ್ಯಾಪಾರ ಅಂದರೆ, ತ್ರಿಪುಟ ವ್ಯವಹಾರ ಇಲ್ಲದ್ದರಿಂದಲೇ ನಿರ್ವ್ಯಾಪಾರವಾದ ಸ್ವರೂಪವುಳ್ಳವನಾಗಿರುವನು. ಮತ್ತು ಶಾಂತರೂಪನಾದ್ದರಿಂದ ಯಾವದೊಂದು ವಿಷಯವನ್ನು ಅಪೇಕ್ಷಿಸದೆ ಕೇವಲ ಅಖಂಡವಾದ ಪರವಸ್ತುವೇ ನಾನೆಂದು

CC-0. Jangamwadi Math Collection. Digitized by eGangotri

ಸ್ವಸ್ವರೂಪಾನು ಸಂಧಾನ ಮಾಡುವಂಥವನಾಗಿರುವನು. ಅಂದರೆ, ಹೊರಗೆ ವ್ಯಾಪಾರವನ್ನು ಮಾಡತಕ್ಕವನಂತೆ ತೋರಿಬಂದರೂ, ಯಾವಾಗಲೂ ಅಂತ ರ್ಮುಖವಾದ ವೃತ್ತಿಯುಳ್ಳವನೆಂಬ ಭಾವವು, ಅದರಿಂದ ಸಂತತ ಶಾಂತನಾಗಿ ರುವದರಿಂದ ನಿದ್ರಿತ ಪುರುಷನಂತೆ ತೋರುವನು. ಒಂದುವೇಳೆ ವೃತ್ತಿಯು ಬಹಿರ್ಮುಖವಾದಾಗ್ಯಾದರೂ ಆ ವೃತ್ತಿಯು ಸ್ವರೂಪ ಸುಖವನ್ನು ಗೃಹಿಸಿ ಕೊಂಡೇ ಹೊರಗೆ ಬರುತ್ತದೆ. ಹೇಗಂದರೆ, ಸುಪ್ತಿರೂಪ ಬ್ರಹ್ಮಾನಂದದಲ್ಲಿ ಮಗ್ನನಾದ ಪುರುಷನು ಎಚ್ಚತ್ತ ನಂತರ ಕೆಲವು ಹೊತ್ತು ಅವನ ವೃತ್ತಿಯು ವಾಸನಾನಂದವನ್ನು ಹೇಗೆ ಸ್ವಿಕಾರಮಾಡಿಕೊಂಡಿರುತ್ತದೆಯೋ, ಹಾಗೆ ಈತನ ವೃತ್ತಿಯಾದರೂ ಇರುತ್ತದೆ. ಆದ್ದರಿಂದ ಸ್ವರೂಪಾನಂದವನ್ನು ಗೃಹಿಸಿಕೊಂಡು ಬಂದ ವೃತ್ತಿಯನ್ನು ಅನುಸರಿಸಿ ಸಂಚಾರಮಾಡುತ್ತಿರುವ ಕಾಲಕ್ಕೆ ಪರವಶನಂತೆ ಅಂದರೆ, ಮದಿರ ಮದಾಂಧನಂತೆ ಅಥವಾ ತೂಕಡಿಕೆಯುಳ್ಳ ಪುರುಷನಂತೆ ತೋರುವನು. ಈ ಭೂಮಿಕೆಯಲ್ಲಿ ಯೋಗಿಯು ಅತ್ಯಂತ ನಿರ್ವಾಸನಾ ಚಿತ್ತವುಳ್ಳವನಾಗಿರುವನೆಂಬ ತಾತ್ಪರ್ಯವು.

ಬಳಿಕ; ಯೋಗಿಯ ಮನಸ್ಸು ಸ್ವರೂಪಾನಂದದಲ್ಲಿಯೇ ತಲ್ಲೀನ ವಾಗಲು, ಅಂದರೆ ಅತಿ ದೃಢವುಳ್ಳದ್ದಾಗಲು ಆನಂದಮೂರ್ತಿಯೇ ತಾನಾಗಿ ತೋರುವನೆಂದು ತುರ್ಯಾವಸ್ಥೆಯನ್ನು ನಿರೂಪಿಸುತ್ತಾರೆ.

ಆನಂದಿನಿಯೆಂಬೀ ಭೂಮಿಯೊಳು।
ತಾನಭ್ಯಾಸಿಗೆ ಮೇಲ್ಭೂಮಿಯೊಳು॥
ಆನಂದಾವಿರ್ಭಾವದ ಮನವ।
ಆನಂದದೊಳಡಗಿಸು ತನ್ಮನವ।
ಮಾಡಲು ನಿರ್ವಾಸನೆ ಚಿತ್ತಾಗಿ।
ಕೂಡದ್ವೈತಂ ದ್ವೈತಂಪೋಗಿ॥
ಏನುಂ ತೋರದೆ ಬರಿಬಯಲಾಗಿ।
ಆನಂದದ ಪೂರ್ಣವೆ ತಾನಾಗಿ॥
ವರಚಿತ್ರದ ದೀಪದ ತೆರನಕ್ಕು।
ತುರಿಯವಿದಾರನೆಯುವನಿಯುಕ್ಕು॥
ಆತಂ ಪರಪದವಾಗಿರುತಿಹನು।
ಆತನಖಂಡೈಕರಸಂ ತಾನು ॥೧೦॥

ಟೀಕಾ:— ಆನಂದಿನಿಯೆಂಬ = ಆನಂದವೆಂಬ ಹೆಸರುಳ್ಳ, ಈ ಭೂಮಿ ಯೊಳು = ಈ ಭೂಮಿಕೆಯಲ್ಲಿ, ತಾನಭ್ಯಾಸಿಗೆ = ಅಭ್ಯಾಸಿಯಾದ ಯೋಗಿಗೆ, ಮೇಲ್ಭೂಮಿಯೊಳು = ಆರನೆ ಭೂಮಿಕೆಯಲ್ಲಿ, ಆನಂದಾವಿರ್ಭಾವದ = ಆನಂದ

CC-0. Jangamwadi Math Collection. Digitized by eGangotri

ದಿಂದ ಪ್ರಕಟವಾದ, ಮನವ=ಮನಸ್ಸನ್ನು, ಆನಂದದೊಳು=ಆನಂದದಲ್ಲಿ, ಅಡಗಿಸುತ=ಲೀನವಮಾಡುತ್ತ, ತನ್ಮನವ=ಆ ಮನಸ್ಸನ್ನು, ನಿರ್ವಾಸನೆ ಚಿತ್ತಾಗಿ=ವಾಸನಾರಹಿತ ವೃತ್ತಿಯುಳ್ಳದ್ದನ್ನಾಗಿ, ಮಾಡಲು=ಆಗಲು, ಕೂಡೆ=ಸಂಗಡವೇ, ಅದ್ವೈತಂ=ಒಂದೆಂಬುಸು, ದ್ವೈತಂ=ಎರಡೆಂಬುದು, ಪೋಗಿ=ಹೋಗಿ, ಏನುಂ=ಯಾವುದೊಂದು, ತೋರದೆ= ಪ್ರತೀತಿಯಾಗದೆ, ಬರಿಬಯಲಾಗಿ= ಕೇವಲ ಬಯಲಾಗಿ, ಆನಂದದ=ಸುಖದ, ಪೂರ್ಣವೇ=ವ್ಯಾಪಕವೇ, ತಾನಾಗಿ=ತಾನಾಗಿ, ವರಚಿತ್ರದ=ಶ್ರೇಷ್ಠವಾದ ಚಿತ್ರದಲ್ಲಿರುವ, ದೀಪದತೆರನಕ್ಕು=ದೀವಿಗೆಯಂತಿರುವನು, ತುರಿಯುವಿದು = ತುರ್ಯಾವಸ್ಥೆಯು, ಆರನೆಯವನಿಯಕ್ಕು = ಆರನೇ ಭೂಮಿಕೆಯೆಂದು ಹೇಳಿಸಿಕೊಳ್ಳುವದು, ಆತಂ=ಉಕ್ತಯೋಗಿಯು, ಪರಪದವಾಗಿರುತಿಹನು = ಪರಬ್ರಹ್ಮ ಸ್ವರೂಪವೇ ಆಗಿರುವವನು, ಆತನು = ಅವನು, ಅಖಂಡೈಕರಸಂ ತಾನು=ಸ್ವಗತಾದಿ ಭೇದರಹಿತನಾಗಿರುವವನು.

ತಾತ್ಪರ್ಯ:— ಅನಂತರ ಅಂಥಾ ಶುದ್ಧ ಚಿತ್ತವುಳ್ಳಂಥಾ ಯೋಗಿಯು ತನ್ನ ಸ್ವರೂಪಾನು ಸಂಧಾನ ಮಾಡುತ್ತಿರುವನು. ಅದರಿಂದ ಅವನ ವೃತ್ತಿಯಲ್ಲಿ ಆನಂದವು ಆವಿರ್ಭಾವವಾಗುವದು. ಇಂಥಾ ಸ್ವರೂಪಸುಖವನ್ನು ಅನುಭವಿಸುತ್ತಾ ಇರುವಷ್ಟರಲ್ಲಿ ಅವನಿಗೆ ಒಂದೊಂದು ಕಾಲಕ್ಕೆ ಅವನ ವೃತ್ತಿಯು ಬಹಿರ್ಮುಖವಾಗುವದು. ಹೀಗಾದಾಗ್ಯಾದರೂ ಆ ವೃತ್ತಿಯನ್ನು ಪುನಃ ಅಡಗಿಸುತ್ತಾ ಅಭ್ಯಾಸ ಮಾಡುವನು. ಹೀಗೆ ಕೆಲವು ದಿವಸಗಳ ವರೆಗೆ ಅಭ್ಯಾಸವನ್ನು ಮಾಡಲು ಅವನ ಚಿತ್ತವು ನಿರ್ವಾಸನೆಯುಳ್ಳದ್ದಾಗುವದು. ಆದ್ದರಿಂದಲೇ ಅವನಲ್ಲಿ ದ್ವೈತಾದ್ವೈತಗಳೆರಡು ಇರುವುದಿಲ್ಲ. ಯಾಕಂದರೆ, ದ್ವೈತದಂತೆ ಅದ್ವೈತವಾದರೂ ಬೇರೆ ಸಂಖ್ಯೆಗಳನ್ನು ವ್ಯಾವರ್ತಕ ಮಾಡುವಂಥಾ ಸಂಖ್ಯಾವಾಚಕವಾದ್ದರಿಂದ ದ್ವೈತಾದ್ವೈತಗಳೆರಡನ್ನು ತ್ಯಾಗಮಾಡುವನು. ಆದ್ದರಿಂದಲೇ ಅಹಮಾತ್ಮರ ಅನ್ಯೋನ್ಯ ಅಧ್ಯಾಸಾತ್ಮಕ ಅಹಂಕಾರ ಗ್ರಂಥಿಯಿಂದಲೂ ಮತ್ತು ತತ್‌ಪದ, ತ್ವಂಪದ, ಅಸಿಪದ ಸಂಬಂಧಗಳಾದ ಸಂಶಯಗಳಿಂದಲೂ ರಹಿತನಾದವನು. ಆದ್ದರಿಂದಲೇ ಜೀವನ್ಮುಕ್ತನೆಂದು ಹೇಳಿಸಿಕೊಳ್ಳುವನು. ಇಂಥಾ ಜೀವನ್ಮುಕ್ತ ಪುರುಷನು ಪ್ರಾರಬ್ಧ ಕರ್ಮದಿಂದ ಗ್ರಹಿಸಲ್ಪಟ್ಟ ಶರೀರವುಳ್ಳವನಂತೆ ಕಂಡು ಬಂದರೂ, ಅವನು ಮುಕ್ತನೇ ಆಗಿರುವನು. ಹೇಗಂದರೆ, ಚಿತ್ರಪಟದಲ್ಲಿ ಬರೆದಿದ್ದ ದೀಪವು ಉರಿಯುತ್ತಿದ್ದಂತೆ ಕಂಡು ಬಂದರೂ ಅದು ಉರಿಯುವದಿಲ್ಲ ಎಂಬುದೇ ಹೇಗೆ ಸಿದ್ಧವೋ; ಹಾಗೆಂದು ತಿಳಿಯತಕ್ಕದ್ದು. ಆದ್ದರಿಂದ ಇಂಥಾ ಜೀವನ್ಮುಕ್ತನಿಗೆ ಜಗತ್ತೂ ಸ್ವಭಾವತಃ ಒಳಹೊರಗೂ ತೋರದ್ದರಿಂದ ಆಕಾಶದಲ್ಲಿರಿಸಿದ ಘಟದಂತೆ ಒಳಹೊರಗೆ ಶೂನ್ಯವೇ ಪ್ರತೀತಿಯಾಗುವದು. ಮತ್ತೂ ಅನಾವೃತವಾದ ಆನಂದ ಸ್ವಭಾವನಾಗಿರುವದರಿಂದ ಸಮುದ್ರದಲ್ಲಿ ಮುಳುಗಿಸಿದ ಘಟದಂತೆ ಒಳಹೊರಗೆ ಪೂರ್ಣ

CC-0. Jangamwadi Math Collection. Digitized by eGangotri

ನಾಗಿರುವನು. ಕೇವಲ ಅಖಂಡ ಸಚ್ಚಿದಾನಂದ ಪರಬ್ರಹ್ಮ ಸ್ವರೂಪವೇ ಆಗಿರುವ ನೆಂಬ ತಾತ್ಪರ್ಯವು. ಆದ್ದರಿಂದ ಇದು ತುರ್ಯಾವಸ್ಥೆ ಆರನೇ ಭೂಮಿಕೆ ಯೆಂದು ಹೇಳಿಸಿಕೊಳ್ಳಲ್ಪಡುತ್ತದೆ.

ಬಳಿಕ; ಯೋಗಿಯ ತುರ್ಯಾತೀತ ಅವಸ್ಥೆಯು ವಾಕ್ ಮನಾದಿಗಳಿಗೆ ಅತೀತವಾದದ್ದೆಂದು ವರ್ಣಿಸುತ್ತಾರೆ.

ಆಗಳೆ ಪರಮಾತ್ಮನು ತಾನಾಗಿ।
ಯೋಗಿ ಮಗುಳೆ ವರ್ತಿಪನಂತಾಗಿ॥
ತಾನೇ ತನ್ನೊಳು ವ್ಯವಹರಿಪಂತೆ।
ಜಾನಿಸೆ ತೆರೆ ಜಲದೊಳು ಸುಳಿವಂತೆ॥
ಶರೀರ ಸಂಪಿಗೆಯುಂಡಳಿಯಂತೆ।
ಉರುಳುವುದಾರಬ್ಧಂ ಸವೆದಂತೆ॥
ಸಪ್ತಮ ಪದವಿದು ತುರ್ಯಾತೀತ।
ಕ್ಲುಪ್ತಿ ರಹಿತ ವಾಙ್ಮನಸಾತೀತ॥
ಸತ್ತೆನಲಿಲ್ಲ ವಸತ್ತೆನಲಿಲ್ಲ।
ಚಿತ್ತೆನಲಿಲ್ಲ ವಚಿತ್ತೆನಲಿಲ್ಲ॥
ಅದು ಕೇಳ್ಭಾವಕೆ ಗೋಚರಮಲ್ಲ।
ಅದರಿಂ ನಿಜವಂತಿಂತೆನಲಿಲ್ಲ ॥೧೭॥

ಟೀಕಾ:—ಆಗಳೆ=ಅರಿದಾಗಲೇ, ಪರಮಾತ್ಮನು=ಪರಬ್ರಹ್ಮಸ್ವರೂಪನು, ತಾನಾಗಿ=ತಾನೇ ಇರುವವನಾಗಿ, ಯೋಗಿ=ಯೋಗಿಯು, ಮಗುಳೆ=ತಿರಿಗಿ, ವರ್ತಿಪನು=ವ್ಯವಹರಿಸುವನು, ಅಂತಾಗಿ=ಆದ್ದರಿಂದ, ತಾನೇ=ತಾನೇ, ತನ್ನೊಳು=ತನ್ನಲ್ಲಿ, ವ್ಯವಹರಿಪಂತೆ=ವ್ಯವಹಾರವನ್ನು ಮಾಡುವ ಹಾಗೆ, ಜಾನಿಸೆ=ವಿಚಾರ ಮಾಡಲು, ತೆರೆ=ತೆರೆಯು, ಜಲದೊಳು=ನೀರಿನಲ್ಲಿ, ಸುಳಿವಂತೆ=ತಿರುಗಾಡುವ ಹಾಗೆ, ಶರೀರ=ದೇಹವು, ಸಂಪಿಗೆಯ=ಸಂಪಿಗೆಯ ಹೂವನ್ನು, ಉಂಡ=ಅನುಭವಿಸಿದ, ಅಲಿಯಂತೆ=ಭ್ರಮರದಹಾಗೆ, ಆರಬ್ಧಂ=ಪ್ರಾರಬ್ಧವು, ಸವೆದಂತೆ=ತೀರಿದ ಹಾಗೆ, ಉರುಳುವುದು=ಬೀಳುವುದು, ಸಪ್ತಮಪದವಿದು=ಇದು ಏಳನೇ ಭೂಮಿಕೆಯು, ತುರ್ಯಾತೀತ=ತುರ್ಯಾತೀತಾವಸ್ಥೆಯು, ಕ್ಲುಪ್ತಿರಹಿತ=ಇಷ್ಟೆಂದು ಹೇಳಲಿಕ್ಕೆ ಬರುವಂಥಾದ್ದಲ್ಲ, ವಾಙ್ಮನಸಾತೀತ=ವಾಕ್ಕೂ ಮನಸ್ಸುಗಳಿಗೆ ಮೀರಿದ್ದು, ಸತ್ತೆನಲಿಲ್ಲ=ಸತ್ತೆಂದು ನುಡಿಯಲಿಲ್ಲ, ಅಸತ್ತೆನಲಿಲ್ಲ=ಅತ್ಯಂತಾಭಾವವೆಂದು ಹೇಳಲಿಲ್ಲ, ಚಿತ್ತೆನಲಿಲ್ಲ=ಚಿದ್ರೂಪವೆಂದು ಹೇಳಲಿಲ್ಲ, ಅಚಿತ್ತೆನಲಿಲ್ಲ=ಜಡವೆಂದು ಹೇಳಲಿಲ್ಲ, ಕೇಳ್=ಆಲಿಸು, ಅದು=ಸ್ವರೂಪು, ಭಾವಕೆ=ಮನಸ್ಸಿಗೆ, ಗೋಚರಮಲ್ಲ=ವಿಷಯವಲ್ಲ, ಅದರಿಂ=ಈ ಕಾರಣದಿಂದ, ನಿಜವು=ಸ್ವರೂಪು, ಅಂತಿಂತು=ಹಾಗೆ ಹೀಗೆಂದು, ಎನಲಿಲ್ಲ=ನುಡಿಯಲಿಲ್ಲ.

CC-0. Jangamwadi Math Collection. Digitized by eGangotri

ತಾತ್ಪರ್ಯ:— ಆ ತುರ್ಯಾತೀತ ಪದದಲ್ಲಿರುವಂಥಾ ಯೋಗಿಯು ಸ್ವಯಂಪ್ರಕಾಶರೂಪ ಪರಮಾತ್ಮನೇ ತಾನಾಗಿರುವನು. ಅಂದರೆ, ಶರೀರ ರಹಿತ ನಾದವನಾದರೂ ಜನರ ಕಣ್ಣಿಗೆ ಶರೀರವುಳ್ಳವನಂತೆ ಕಾಣುತ್ತಾನೆಂಬ ತಾತ್ಪರ್ಯವು, ಹೇಗೆ ಜಲದಲ್ಲಿ ತೆರೆಯು ತನ್ನಲ್ಲಿ ತಾನೆ ಸಂಚರಿಸುವದೋ ಹಾಗೇ ಈ ಯೋಗಿಯು ತನ್ನ ಅಖಂಡ ಸ್ವರೂಪದಲ್ಲಿ ವರ್ತಿಸುವನು. ಅಂದರೆ ಜ್ಞಾನಿಯು ವ್ಯವಹಾರ ಕಾಲದಲ್ಲಿಯಾದರೂ ತನ್ನ ಪೂರ್ಣ ಸ್ವರೂಪದಿಂದಿರುತ್ತಾನೆಂಬ ಭಾವವು, ಭೃಂಗವು ಅನೇಕ ಪುಷ್ಪಗಳಲ್ಲಿರುವ ಮಧುರರಸವನ್ನು ಸವೆಯುತ್ತಾ ಬಂದು, ಕಡೆಗೆ ಸಂಪಿಗೆ ಹೂವಿನೊಳಗಿರುವ ರಸವನ್ನು ಸವಿದಾಕ್ಷಣಕ್ಕೆ ತನ್ನ ದೇಹತ್ಯಾಗವನ್ನು ಹೇಗೆ ಮಾಡುವದೋ,ಹಾಗೆ ಪ್ರಾರಬ್ಧ ಕರ್ಮವು ಉಪಭೋಗದಿಂದ ತೀರುತ್ತಾ ಬಂದು ಅಂತ್ಯಭೋಗವನ್ನು ಊಟಮಾಡಿ ಶರೀರವು ತನ್ನಷ್ಟಕ್ಕೆ ತಾನೇ ನಾಶವಾಗುವದು. ಮತ್ತು ಯೋಗಿಯು ವ್ಯವಹಾರವೇನೊಂದು ಇಲ್ಲದಲೆ ನಿವೃತ್ತಿಕ ಚೈತನ್ಯ ಸ್ವರೂಪದಿಂದಿರುತ್ತಾನೆ. ಇದೇ ತುರ್ಯಾತೀತಾವಸ್ಥೆಯು ಇದು ವಾಕ್ಕು ಮನಸ್ಸುಗಳಿಗೆ ಗೋಚರಿಸುವಂಥಾದ್ದಲ್ಲ. ಆದ್ದರಿಂದಲೇ ಇಷ್ಟೇಯೆಂದು ಪ್ರಮಾಣಿಸಲಿಕ್ಕೂ ಬರುವದಿಲ್ಲ. ಸಕಲ ದ್ವೈತ ಪ್ರಪಂಚವೆಲ್ಲವನ್ನೂ ಪ್ರತ್ಯಗಾತ್ಮ ಸ್ವರೂಪದಲ್ಲಿ ಅಡಗಿಸಿಕೊಂಡು ಪೂರ್ಣವಾದ ಸಮತಾರೂಪ ಸ್ವರೂಪದಿಂದಿರೋಣದರಿಂದ ಆ ಯೋಗಿಯು ಮುಕ್ತನೇ ಇರುವನು. ಇದರಲ್ಲಿ ಯಾವ ಸಂದೇಹವೂ ಇಲ್ಲ. ಪ್ರಾರಬ್ಧಕರ್ಮಸಂಬಂಧವಾಗಿ ಸುಖದುಃಖಾದಿ ಭೋಗಗಳೇನಾದರೂ ಬಂದರೆ, ಅವುಗಳಿಗೂ ಕೂಡಾ ಸಾಕ್ಷಿಯಾಗಿ ನಿರ್ಲೇಪಕತ್ವದಿಂದ ಪದ್ಮಪತ್ರದಂತೆ ವರ್ತಿಸುವನು. ಈತನು ನಾನು ಜೀವಿಸುತ್ತೇನೆ ನಾನು ಸಾಯುತ್ತೇನೆಂಬ ಕಲ್ಪನೆಯನ್ನೇ ಮಾಡುವದಿಲ್ಲ. ಆದ್ದರಿಂದಲೇ ನಾನು ಸದ್ರೂಪ, ಅಸದ್ರೂಪ, ಚಿದ್ರೂಪ, ಅಚಿದ್ರೂಪನೆಂಬ ಕಲ್ಪನೆಗಳೇ ಆತನಲ್ಲಿ ಸಂಭವಿಸುವದಿಲ್ಲ. ಕೇವಲ ಆತ್ಮಾರಾಮರೂಪನಾಗಿಯೇ ಇರುವನು, ಇಂಥಾ ಅವಸ್ಥೆಯುಳ್ಳಯೋಗಿಯು ವ್ಯವಹಾರಿಕ ಗೃಹಸ್ಥನೇ ಆಗಿರಲಿ ಅಥವಾ ವ್ಯವಹಾರವಿಲ್ಲದ ಯತಿಯೇ ಆಗಲಿ ಅವನು ನಿತ್ಯಶುದ್ಧ ಬುದ್ಧ ಅಜರಾಮರ ಸ್ವರೂಪವಾದ ಚಿದಾಕಾಶವೇ ನಾನಿದ್ದೇನೆಂದು ತಿಳಿದಿರುವನು. ಆದ್ದರಿಂದ ಕಿಂಚಿತ್ತಾದರೂ ದುಃಖವನ್ನು ಪಡುವದಿಲ್ಲ ಅರ್ಥಾತ್ ತೃಣಾಗ್ರದಲ್ಲಿಯೂ ಆಕಾಶದಲ್ಲಿಯೂ, ಮೂರು ಲೋಕವಾಸಿಗಳಾದ ನರನಾಗಾಮರಗಳಲ್ಲಿಯೂ ಯಾವ ವಸ್ತು ಇರುವದೋ ಅದೇನಾನೆಂದು ದೃಢವಾದ ಜ್ಞಾನವುಳ್ಳವನಾದ್ದರಿಂದ ಮೋಹವನ್ನು ಹೊಂದುವದಿಲ್ಲ. ಆದ್ದರಿಂದಲೇ ಅವನ ಸ್ವರೂಪವನ್ನು ಕುರಿತು ಯಾವದೊಂದು ಕಲ್ಪನೆಯನ್ನು ಕೂಡಾ ಮಾಡಲಿಕ್ಕೆ ಬರುವದಿಲ್ಲೆಂಬ ತಾತ್ಪರ್ಯವು. ಮೂರು ಭೂಮಿಕೆಗಳು ಮುಮುಕ್ಷುಪರವಾದವುಗಳೆಂದೂ ನಾಲ್ಕನೆಯದು ಜ್ಞಾನಿಪರವೆಂದೂ ಐದು ಆರು ಏಳು ಜೀವನ್ಮುಕ್ತನ ಪರವಾದವುಗಳೆಂದೂ ತಿಳಿಯತಕ್ಕದ್ದು.

CC-0. Jangamwadi Math Collection. Digitized by eGangotri

ಸಪ್ತ ಭೂಮಿಕೆಗಳ ಅನುವಾದ

ನಿತ್ಯಾನಿತ್ಯವಸ್ತು ವಿವೇಕದಿಂದೊಡಗೂಡಿ ಫಲಪ್ರಾಪ್ತಿಯಾಗಿರುವವರೆಗೂ ಇರುವಂಥಾ ಮೋಕ್ಷೇಚ್ಛೆಯೇ ಮೊದಲನೆಯದು. ಆನಂತರ ಗುರುಗಳನ್ನು ಹೊಂದಿ ವೇದಾಂತವಾಕ್ಯವಿಚಾರ ಶ್ರವಣ ಮನನಾತ್ಮಕವಾದದ್ದೇ ವಿಚಾರಣೆ ಯೆಂಬ ಎರಡನೆ ಭೂಮಿಕೆಯು. ಆನಂತರ ನಿಧಿಧ್ಯಾಸನದ ಅಭ್ಯಾಸದಿಂದ ಮನಸ್ಸು ಏಕಾಗ್ರವಾಗುವದು ಆದರಿಂದ ಸೂಕ್ಷ್ಮವಸ್ತುವನ್ನು ಗ್ರಹಣ ಮಾಡು ವಂಥಾ ಯೋಗ್ಯತೆಯುಳ್ಳದ್ದಾಗುವದು. ಇದೇ ತನುಮಾನಸವೆಂಬ ಮೂರನೇ ಭೂಮಿಕೆಯು. ಈ ಮೂರು ಭೂಮಿಗಳು ಸಾಧನರೂಪಗಳಾಗಿರುವದರಿಂದಲೂ ಯೋಗಿಗಳಿಂದ ಜಗತ್ತು ಅಭೇದವಾಗಿ ತೋರುವದರಿಂದಲೂ ಜಾಗ್ರದವಸ್ಥೆ ಯೆಂದು ಹೇಳಲ್ಪಡುತ್ತದೆ. ಆನಂತರ ವೇದಾಂತ ವಾಕ್ಯೋಪದೇಶದಿಂದ ನಿರ್ವಿಕಲ್ಪಕ ಬ್ರಹ್ಮಾತ್ಮೈಕ್ಯ ಸಾಕ್ಷಾತ್ಕಾರ ಫಲವುಳ್ಳದ್ದೇ ಸತ್ವಾಪತ್ತಿಯೆಂಬ ನಾಲ್ಕನೆ ಭೂಮಿಕೆಯು. ಈ ಭೂಮಿಕೆಯಲ್ಲಿ ಸರ್ವ ಜಗತ್ತು ಮಿಥ್ಯತ್ವವಾಗಿ ಕಾಣೋಣದರಿಂದ ಈ ನಾಲ್ಕನೇ ಭೂಮಿಕೆಯು ಸ್ವಪ್ನಾವಸ್ಥೆಯೆಂದು ಹೇಳಲ್ಪ ಡುತ್ತದೆ. ಅಂಥಾ ನಾಲ್ಕನೇ ಭೂಮಿಕೆಯನ್ನು ಹೊಂದಿದ ಯೋಗಿಯೇ ಬ್ರಹ್ಮ ವಿ ೦ದು ಹೇಳಿಸಿಕೊಳ್ಳಲ್ಪಡುತ್ತಾನೆ. ಐದು, ಆರು, ಏಳು ಭೂಮಿಕೆಗಳು ಜೀವನ್ಮುಕ್ತಿಯ ಅವಾಂತರ ಭೇದಗಳು. ಅದರಲ್ಲಿ ಸವಿಕಲ್ಪಕ ಸಮಾಧಿ ಅಭ್ಯಾಸ ದಿಂದ ಮನಸ್ಸು ನಿರುದ್ಧಮಾಗಲು, ನಿರ್ವಿಕಲ್ಪಕ ಸಮಾಧಿ ಅವಸ್ಥೆಯೇ ಅಸಂ ಸಕ್ತಿಯೆಂಬ ಐದನೇ ಭೂಮಿಕೆಯು. ಈ ಭೂಮಿಕೆಯಲ್ಲಿ ಯೋಗಿಯು ತನ್ನಿಂದ ತಾನೇ ವ್ಯುತ್ಥಾನನಾಗುವದರಿಂದ ಈ ಭೂಮಿಕೆಯು ಸುಷುಪ್ತಿಯವಸ್ಥೆ ಯೆಂದು ಹೇಳಿಸಿಕೊಳ್ಳಲ್ಪಡುತ್ತದೆ. ಆ ಯೋಗಿಯೇ ಬ್ರಹ್ಮವಿದ್ವರನೆಂದು ತಿಳಿಯಬೇಕು. ಅನಂತರ ನಿರ್ವಿಕಲ್ಪಸಮಾಧಿ ಅಭ್ಯಾಸಪರಿಪಾಕದಿಂದ ಬಹಳ ಹೊತ್ತಿನವರೆಗೂ ಇರುವಂಥಾದ್ದಾದರೆ; ಅದಕ್ಕೆ ಪದಾರ್ಥಾಭಾವನೆಯೆಂಬ ಆರನೆ ಭೂಮಿಕೆಯೆನಿಸುವುದು, ಇದು ಗಾಢಸುಷುಪ್ತಿಯೆಂದು ಹೇಳಿಸಿಕೊಳ್ಳಲ್ಪ ಡುತ್ತದೆ. ಈ ಅವಸ್ಥೆಯಲ್ಲಿದ್ದ ಯೋಗಿಯು ಸ್ವತಃ ತಾನು ವ್ಯುತ್ಥಾನನಾಗದಿ ದ್ದರೂ ಪರಪ್ರಯತ್ನದಿಂದ ಉತ್ಥಾನನಾಗುತ್ತಾನೆ. ಆದ್ದರಿಂದಲೇ ಇವನು ಬ್ರಹ್ಮವಿದ್ವರೀಯಾನ್‌ನೆಂದು ಹೇಳಿಸಿಕೊಳ್ಳುವನು. ಯಾವ ಸಮಾಧಿ ಅವಸ್ಥೆ ಯಲ್ಲಿ ತನ್ನಿಂದಾಗಲಿ ಪರರಿಂದಾಗಲಿ ವ್ಯುತ್ಥಾನನಾಗುವದಿಲ್ಲ. ಯಾಕಂದರೆ ಯಾವರೀತಿಯಿಂದಲೂ ಭೇದದರ್ಶನವು ತೋರದ್ದರಿಂದ; ಕಿಂತು, ಸರ್ವದಾ ತನ್ಮಯನಾಗಿರುತ್ತಾನೆಂಬ ಭಾವವು. ತನ್ನ ಪ್ರಯತ್ನವೇನುಯಿಲ್ಲದಲೆ ಪರಮೇ ಶ್ವರನಿಂದ ಪ್ರೇರಿಸಲ್ಪಟ್ಟ ಪ್ರಾಣವಾಯುವಶದಿಂದ ಅನ್ಯಜನರಿಂದಲೇ ದೇಹ ವ್ಯವಹಾರವುಳ್ಳವನಾಗಿರುತ್ತಾನೆ. ತಾನು ಮಾತ್ರ ಯಾವಾಗಲೂ ಪರಿಪೂರ್ಣ ಪರಮಾನಂದ ಘನರೂಪನೇ ಆಗಿರುತ್ತಾನೆ. ಇದೇ ತುರ್ಯಾತೀತಾವಸ್ಥೆಯು..

CC-0. Jangamwadi Math Collection. Digitized by eGangotri

ಇದನ್ನು ಪ್ರಾಪ್ತ ಮಾಡಿಕೊಂಡ ಯೋಗಿಯೇ ಬ್ರಹ್ಮವಿದ್ವರಿಷ್ಟನೆಂದು ಹೇಳಿಸಿಕೊಳ್ಳಲ್ಪಡುತ್ತಾನೆ. ಅರ್ಥಾತ್ ಸರ್ವಾಧಿಷ್ಠಾನ ಭೂತವಾದ ಶುದ್ಧ ಪರಮಾತ್ಮನಲ್ಲಿ ಅಭೇದದಿಂದಿರೋಣದರಿಂದಲೇ ಬ್ರಹ್ಮವಿದನೆಂದು ಹೇಳಿಸಿಕೊಳ್ಳುವನು. ಐದನೇ ಭೂಮಿಕೆಯಲ್ಲಿ ದ್ವೈತಸಂಸ್ಕಾರಗಳು ನಾಶವಾಗುವದರಿಂದ ಸ್ವರೂಪ ಸಾಕ್ಷಾತ್ಕಾರವು ಅತ್ಯಂತ ದೃಢವಾಗುತ್ತದೆ. ಆದ್ದರಿಂದ ಬ್ರಹ್ಮವಿದ್ವರನೆಂದು ಹೇಳಿಸಿಕೊಳ್ಳುವನು. ಆರನೇ ಭೂಮಿಕೆಯಲ್ಲಿ ಎರಡನೆಯವರಿಂದ ಬಹಳ ಹೊತ್ತು ಪ್ರಯತ್ನಮಾಡಲು ಯೋಗಿಯ ಮನಸ್ಸು ಕಿಂಚಿತ್ ಬಹಿರ್ಮುಖವಾಗುತ್ತದೆ. ಆದ್ದರಿಂದ ಆ ಯೋಗಿಯು ಬ್ರಹ್ಮವಿದ್ವರೀಯಾನ್‌ನೆಂದು ಹೇಳಿಸಿಕೊಳ್ಳುವನು. ಯಾವ ಅವಸ್ಥೆಯಲ್ಲಿ ಅಖಂಡಾತ್ಮ ಸ್ವರೂಪವೇ ತಾನಾಗಿರುವನು; ಅದೇ ತುರ್ಯಾತೀತ ಅವಸ್ಥೆಯು. ಈ ಅವಸ್ಥೆಯುಳ್ಳ ಯೋಗಿಯು ,ಬ್ರಹ್ಮವಿದ್ವಶಿಷ್ಠನೆಂದು ಹೇಳಿಸಿಕೊಳ್ಳುವನು. ಪ್ರಸಂಗಪ್ರಾಪ್ತ ಸ್ನಾನಾದಿ ಕಾರ್ಯಗಳನ್ನು ಆರನೇ ಭೂಮಿಕೆಯಲ್ಲಿದ್ದವನು ಮಾಡುತ್ತಾನೆ; ಏಳನೇ ಭೂಮಿಕೆಯಲ್ಲಿದ್ದವನು ಮಾಡುವದಿಲ್ಲೆಂಬ ಭಾವವು.

ಶಂಕಾ;—ಏಳನೇ ಭೂಮಿಕೆಯಲ್ಲಿದ್ದವನು ಪ್ರಕೃತಪ್ರಾಪ್ತವಾದ ಕಾರ್ಯಗಳನ್ನು ಬೇಕಾದರೆ ಮಾಡುವನು. ಬೇಡಾದರೆ ಮಾಡುವದಿಲ್ಲ. ಹೀಗಿದ್ದುದರಿಂದ ಅವನು ಯಥೇಷ್ಟಾಚರಣವುಳ್ಳವನಾದರೂ ಆಗಬಹುದು.

ಸಮಾಧಾನ:— ಏಳನೇ ಭೂಮಿಕೆಯಲ್ಲಿದ್ದ ಯೋಗಿಯು ಸಮಾಧಿಯಿಂದ ಉತ್ಥಾನನಾದೊಡೆ ಹತ್ತಿರಿರುವಂಥಾ ಜನರು ಈ ಕಾಲಕ್ಕೆ ಹೀಗಿರಬೇಕು. ಹೀಗೆ ನಡೆಯಬೇಕೆಂದು ತಿಳಿಸುವರು. ಯೋಗಿಯಾದರೂ ಗುರು ಶಿಷ್ಯ ಪರಂಪರೆಯಿಂದ ಪ್ರಾಪ್ತವಾದ ಆಶ್ರಮೋಚಿತ ಆಚಾರವನ್ನು ಯಥಾಪ್ರಕಾರ ಮಾಡುತ್ತಾನೆ. ಫಲಾಪೇಕ್ಷೆಯಿಲ್ಲದೆ ಮಾಡುವದರಿಂದ ಏನು ಹಾನಿಯೂ ಆಗುವದಿಲ್ಲ. ಆದ್ದರಿಂದ ಯಥೇಷ್ಟಾಚರಣವು ಸಂಭವಿಸುವದಿಲ್ಲ. ಈ ಕಾರಣದಿಂದ ಏಳನೇ ಭೂಮಿಕೆಯಲ್ಲಿದ್ದವನಿಗೆ ದೇಹವಿಸ್ಮೃತಿಯು ಆಗುತ್ತದೆ. ಇಂಥವನಿಗೆ ಯಥೇಷ್ಟಾಚರಣವು ಸಂಭವಿಸುವದಿಲ್ಲ. ಅಂದಮೇಲೆ; ದೇಹಸ್ಮೃತಿಯುಳ್ಳ ಯೋಗಿಯು ಹೇಗೆ ಯಥೇಷ್ಟಾಚರಣವುಳ್ಳವನಾದನು? ಎಂದಿಗೂ ಆಗುವದಿಲ್ಲ. ಇಂಥಾ ಯೋಗೀಶ್ವರನಿಗೆ ಜಗದ್ವಿಷಯಗಳು ಎಂದೂ ಮೋಹವನ್ನುಂಟುಮಾಡಲಾರವು. ಆದ್ದರಿಂದ ಐದು, ಆರು, ಏಳು ಭೂಮಿಕೆಯಲ್ಲಿದ್ದವರೇ ಜೀವನ್ಮುಕ್ತರು. ಯದ್ಯಪಿ ಎರಡು ಮೂರು ನಾಲ್ಕು ಭೂಮಿಕೆಗಳಲ್ಲಿ ಜ್ಞಾನೋದಯದಿಂದ ಅಜ್ಞಾನಾವರಣವು ಭಂಗವಾಗುತ್ತದೆ. ಆದರೂ ಪ್ರಬಲಪ್ರಾರಬ್ಧ ಕರ್ಮಪ್ರಯುಕ್ತ ಚಿತ್ತವಿಕ್ಷೇಪಾವಸ್ಥೆಯುಳ್ಳದ್ದಾಗುವದರಿಂದ ಅತ್ಯಂತ ವಾಸನಾಕ್ಷಯ ಮನೋನಾಶ ಉಪಲಕ್ಷಿತ ನಿರತಿಶಯಾನಂದ ಲಕ್ಷಣಾತ್ಮಕ ಜೀವನ್ಮುಕ್ತಿಯು ಪ್ರಾಪ್ತವಾಗುವ

CC-0. Jangamwadi Math Collection. Digitized by eGangotri

ದಿಲ್ಲೆಂಬ ಭಾವವು. ಈ ವಿಷಯ ವಿಚಾರವು ಯೋಗವಾಸಿಷ್ಠ, ತತ್ವಾನುಸಂಧಾನ, ಚಿದ್ಘನಾನಂದ ಸ್ವಾಮಿಗಳಿಂದ ವಿರಚಿತವಾದ ಹಿಂದುಸ್ತಾನೀ ಭಗವದ್ಗೀತೆಯಲ್ಲಿಯೂ ವಿಸ್ತಾರವಾಗಿರುವದು. ಅಪೇಕ್ಷೆಯುಳ್ಳವರು ಅಲ್ಲಿ ನೋಡಿಕೊಳ್ಳಬಹುದು.

ಬಳಿಕ; ಮುಂದಿನ ಗತಿಗೆ ಬೀಜಭೂತವಾದ ಪ್ರಶ್ನೆಯನ್ನು ಉತ್ಥಾಪನ ಮಾಡುತ್ತಾರೆ.

ಆವುದು ಪರಮಾತ್ಮನ ಸದ್ಭಾವ।
ಭಾವಿಸಲದರೊಡವೆರಸಿದ ಜೀವ॥
ಎಂತು ಮಗುಳೆ ವರ್ತಿಪನೆನೆ ಸೂನು।
ಇಂತು ಗುರೂತ್ತ ಮನೊರೆದಂ ತಾನು॥

ಟೀಕಾ:-ಪರಮಾತ್ಮನ=ಪರಬ್ರಹ್ಮನ, ಸದ್ಭಾವ=ಇರುವಿಕೆಯು, ಆವುದು= ಯಾವದುಂಟೋ, ಅದರೊಡ=ಅದರಕೂಡ, ವೆರಸಿದ=ಕೂಡಿದ, ಜೀವ=ಜೀವನು ಭಾವಿಸಲ್=ವಿಚಾರ ಮಾಡಲಾಗಿ, ಎಂತು=ಹೇಗೆ, ಮಗುಳೆ=ಮತ್ತು, ವರ್ತಿಪನು=ವ್ಯವಹಾರ ಮಾಡುವನು, ಸೂನು=ಶಿಷ್ಯನು, ಎನೆ=ಅನ್ನಲಾಗಿ, ಇಂತು= ಈ ವಕ್ಷ್ಯಮಾಣಪ್ರಕಾರ, ಗುರೂತ್ತಮನು=ಗುರುಶ್ರೇಷ್ಠನು, ತಾನು=ಅವನು, ಒರೆದಂ=ತಿಳಿಸಿದನು.

ತಾತ್ಪರ್ಯ:—ಬಳಿಕ ಶಿಷ್ಯನು ಗುರುಗಳನ್ನು ಕುರಿತು "ಹೇ ಸದ್ಗುರುನಾಥನೇ! ಆ ಪರಮಾತ್ಮನೊಡನೆ ಐಕ್ಯವಾಗಿ ಶರೀರಧಾರಿಯಾದಂಥಾಯೋಗಿಯು ಹೇಗೆ ವ್ಯವಹರಿಸುವನು? ಅಂದರೆ, ಅಜ್ಞಾನಿಗಳಂತೆ ವ್ಯವಹಾರ ಮಾಡುವನೋ? ಅಥವಾ ವಿಲಕ್ಷಣವಾದ ವ್ಯವಹಾರವುಳ್ಳವನೋ? ಅವನ ಲಕ್ಷಣವೇನು? ಅದನ್ನು ಹೇಳಬೇಕು ಎಂದು ಪ್ರಶ್ನೆಮಾಡಲು, ಗುರುಗಳು ಶಿಷ್ಯನನ್ನು ಕುರಿತು ಮುಂದಿನ ಗತಿಯಲ್ಲಿ ಹೇಳಿದ ಪ್ರಕಾರ ಉತ್ತರವನ್ನು ಕೊಡುವಂಥವರಾದರು.

ಬಳಿಕ; ಈ ಗತಿಯಲ್ಲಿ ಹೇಳಿದ ವಿಷಯವನ್ನು ಉಪಸಂಹರಿಸುತ್ತಾರೆ.

ಗತಿ ಹತ್ತನೆಯದಿದಕ್ಕತಿ
ಹಿತವೆನಿಪ ನಿರೂಪಣಂಗಳೇಕಾದಶವಂ।
ತಶ-ಯವಾಗಿರೆ ತಿಳಿಯು।
ಲ್ರತಿಪಾದಿತವಿಲ್ಲಿ ನಾಲ್ಕು ಭೂಮಿಕೆನಲವಿಂ॥

(ಅರ್ಥಸ್ಪಷ್ಟವು) ಅಂತು ಗತಿ ೧೦ಕ್ಕಂ ನಿರೂಪಣ ೧೧೦ಕ್ಕೆ ಚರಣ ೧೩೬೭ಕ್ಕಂ ಮಂಗಳಮಸ್ತು.

CC-0. Jangamwadi Math Collection. Digitized by eGangotri

ಏಕಾದಶ ಗತಿ

ಬಳಿಕ; ಜೀವನ್ಮುಕ್ತ ಪುರುಷನಿಗೆ ಯಾವ ಲಕ್ಷಣಗಳುಂಟೋ, ಅವುಗಳನ್ನು ಶಿಷ್ಯನಗೋಸುಗ ಗುರುಗಳು ಈ ಗತಿಯಲ್ಲಿ ವಿಸ್ತಾರಪೂರ್ವಕ ಪ್ರತಿಪಾದನ ಮಾಡುತ್ತಾರೆ.

ಸೂತ್ರ॥ ಇಂತೊಲಿದು ಪೇಳ್ದ ಸಾಧನ।
ಸಂತತಿಯಿಂ ಸಾಧ್ಯದೊಡನೆ ಸಮರಸವೈದಿಸ॥
ಮಂತಿಪ್ಪ ಯೋಗಿಯಾತನೆ।
ಯಿಂ ತನುವಿರೆ ಜೀವಿಪನುವನರಪುವೆನೀಗಳ್॥

ಟೀಕಾ:—ಇಂತು=ಈ ಪ್ರಕಾರ, ಒಲಿದು=ಪ್ರೀತಿಸಿ, ಪೇಳ್ದ=ಹೇಳಿದ, ಸಾಧನ=ಸಾಧನಗಳ, ಸಂತತಿಯಿಂ=ಸಮೂಹದಿಂದ, ಸಾಧ್ಯದೊಡನೆ=ಬ್ರಹ್ಮ ದೊಡನೆ, ಸಮರಸವ=ಐಕ್ಯವನ್ನು, ಐದಿ=ಹೊಂದಿ, ಸಮಂತಿಪ್ಪ=ಸರ್ವತ್ರ ವ್ಯಾಪಕವಾಗಿದ್ದ, ಯೋಗಿಯು=ಯೋಗೀಶ್ವರನು, ಆತನೆಯಿಂ=ಅವನಿಂದ, ತನು ವಿರೆ=ಶರೀರವಿರಲಿಕ್ಕಾಗಿ, ಜೀವಿಪ=ಜೀವಿಸುವಂಥಾ, ಅನುವನು=ರೀತಿಯನ್ನು, ಈಗಳ್=ವರ್ತಮಾನಕಾಲಕ್ಕೆ, ಅರಪುವೆನು=ತಿಳಿಸುವೆನು.

ತಾತ್ಪರ್ಯ:—ಎಲೈ ಶಿಷ್ಯನೇ! ಈ ಗತಿಯಲ್ಲಿ ನಿನಗೆ ಆ ಯೋಗೀಶ್ವರನ ಚರಿತ್ರವನ್ನು ಹೇಳುತ್ತೇನೆ. ಯಾಕಂದರೆ, ಪೂರ್ವದಲ್ಲಿ ಹೇಳಲ್ಪಟ್ಟ ಜ್ಞಾನ ಸಾಧನಗಳಾದ ವಿವೇಕ ವೈರಾಗ್ಯಾದಿ ಸದ್ಗುಣಗಳೇನುಂಟೋ, ಅವುಗಳಿಂದ ಯುಕ್ತನಾಗಿ ಬ್ರಹ್ಮವನ್ನು ಅಪರೋಕ್ಷೀಕರಿಸಿಕೊಂಡು ಬ್ರಾಹ್ಮೀಸ್ಥಿತಿಯಿಂದಿರು ತ್ತಾನೆ. ಅವನಲ್ಲಿ ಯಾವ ಲಕ್ಷಣಗಳು ಸಾಧ್ಯಗಳಾಗಿರುವವೋ ಅವೇ ಲಕ್ಷಣಗಳು ಮುಮುಕ್ಷು ಜನರಿಂದ ಸಾಧಿಸಲಿಕ್ಕೆ ಯೋಗ್ಯಗಳಾಗಿರುತ್ತವೆ. ಆದ್ದರಿಂದ ಆ ಯೋಗೀಶ್ವರನು ಶರೀರವಿರುವಪರ್ಯಂತರ ಯಾವ ನಡತೆ ಯಾವ ಗುಣಗಳಿಂದ ಯುಕ್ತನಾಗಿರುತ್ತಾನೆಂಬುವದನ್ನು ಈ ಗತಿಯಲ್ಲಿ ವಿಸ್ತಾರಪೂರ್ವಕ ಪ್ರತಿಪಾದನ ಮಾಡುತ್ತೇನೆಂದು ಹೇಳುತ್ತಾರೆ.

ಬಳಿಕ; ಯೋಗೀಶ್ವರನು ಸಚ್ಚಿದಾನಂದ ಸ್ವರೂಪದಿಂದಿರುತ್ತಾನೆ; ಎಂಬು ದನ್ನು ಎರಡು ಶ್ಲೋಕಗಳಿಂದ ವರ್ಣಿಸುತ್ತಾರೆ.

ಬಳಿಕೇನುಂ ತೋರದೆ ಬಯಲಾಗಿ।
ತಿಳಿವಿನಹಂ ಭಾವವೆ ಬರಿದಾಗಿ॥
ಏನಾನೊಂದು ಳಿದಿಹ ಸದ್ರೂಪು।
ತಾನದು ತಿಳಿ ಪರಮಾತ್ಮನರೂಪು॥

CC-0. Jangamwadi Math Collection. Digitized by eGangotri

ಮತ್ತೆಯುಂ ಜೀವನೆನಿಪ ಸಂವಿತ್ತು।
ಮೊತ್ತದ ವಿಷಯವನುಳಿದಾ ಪೊತ್ತು॥
ಸದಮಳ ನೆನಿಸುತ್ತಿಹ ಚಿದ್ರೂಪು।
ಅದುತಾನೇ ಪರಮಾತ್ಮನ ರೂಪು॥
ಭ್ರಮಿಸದೆ ಭೋಗವನುಣಿತಂ ತಾನು।
ಸ್ತಿಮಿತಾಂಬುಧಿಯಂ ತೆರಲೆತ್ತಾನು॥
ಪದುಳಂ ಮಿಕ್ಕಿ ಹನಿಜಸುಖರೂಪು।
ಅದು ತಾನೇ ಪರಮಾತ್ಮನರೂಪು ॥೧॥

ಟೀಕಾ:— ಬಳಿಕ=ಅನಂತರ, ಏನುಂ=ಯಾವದು, ತೋರದೆ=ಪ್ರತೀತಿಯಾಗದೆ, ಬಯಲಾಗಿ=ಅಭಾವವಾಗಿ, ತಿಳುವಿನ=ಜ್ಞಾನದ, ಅಹಂಭಾವವೆ=ನಾನೆಂಬ ಭಾವವೆ, ಬರಿದಾಗಿ=ಇಲ್ಲದುದಾಗಿ, ಏನಾನೊಂದುಂ=ಯಾವದೋ ಒಂದು-ಉಳದಿಹ – ಇದ್ದಂಥಾದ್ದು, ಸದ್ರೂಪು = ತ್ರಿಕಾಲದಲ್ಲಿರುವಂಥಾದ್ದು? ತಾನದು=ಅದುತಾನೇ, ಪರಮಾತ್ಮನರೂಪು=ಪರಬ್ರಹ್ಮದರೂಪು, ತಿಳಿ=ಅರಿ, ಮತ್ತೆಯುಂ=ಅನಂತರ, ಜೀವನೆನಿಸಿದ=ಜೀವನೆಂದು ಹೇಳಿಸಿಕೊಳ್ಳುವ,ಸಂವಿತ್ತು=ಚೈತನ್ಯವು, ಮೊತ್ತದ = ಸಮೂಹದ, ವಿಷಯವನು = ವಿಷಯವನ್ನು, ಉಳಿದಾಪೊತ್ತು=ಬಿಟ್ಟಹೊತ್ತಿನಲ್ಲಿ, ಸದಮಳನೆನಿಸುತ್ತ=ನಿರ್ಮಲವೆನಿಸುತ್ತ, ಇಹ=ಇರುವ, ಚಿದ್ರೂಪು=ಜ್ಞಾನವು, ಅದು ತಾನೇ=ಅದೇ ಪರಮಾತ್ಮನ ರೂಪು-ಪರಬ್ರಹ್ಮದ ಸ್ವರೂಪು, ಭ್ರಮಿಸದೆ=ಮೋಹವನ್ನು ಹೊಂದದೆ, ಭೋಗವನು=ಭೋಗಗಳನ್ನು, ಉಣಿತಂ=ಉಪಭೋಗಿಸುತ್ತ, ತಾನು=ತಾನು, ಸ್ತಿಮಿತಾಂಬುಧಿಯಂತೆ=ತೆರೆಗಳಿಲ್ಲದ ಸಮುದ್ರದಂತೆ, ಇರಲ್=ಇರಲಾಗಿ, ಎತ್ತಾನು=ಎಲ್ಲ ಕಡೆಗೂ, ಪದುಳಂ=ಆನಂದವು, ಮಿಕ್ಕಿಹ=ಶ್ರೇಷ್ಠವಾದಂಥಾ, ನಿಜಸುಖರೂಪು=ಆನಂದಸ್ವರೂಪು, ಅದುತಾನೇ=ಅದೇ, ಪರಮಾತ್ಮನರೂಪು=ಪರಬ್ರಹ್ಮದ ಸ್ವರೂಪು.

ತಾತ್ಪರ್ಯ:— ಎಲೈ ಶಿಷ್ಯನೇ ಕೇಳು. ಆ ಯೋಗಿಯು ಸಚ್ಚಿದಾನಂದ ಸ್ವರೂಪನಾಗಿರುವನು. ಹೇಗಂದರೆ, ಅಹಂಕಾರವು ತೋರಿದರೆ ಈ ಪರಿದೃಶ್ಯಮಾನ ಜಗತ್ತು ತೋರುತ್ತದೆ. ಅನಾತ್ಮ ಅಹಂಕಾರವು ತೋರದಿದ್ದರೆ ಜಗತ್ತು ತೋರುವದಿಲ್ಲ. ಅಹಂಬ್ರಹ್ಮಾಸ್ಮಿಯೆಂಬ ಜ್ಞಾನಕಾಲದಲ್ಲಿರುವ ಅಹಂಕಾರವೇ ತೋರುವದಿಲ್ಲ. ಅಂದಮೇಲೆ, ಇದಂ ರೂಪವಾದ ಜಗತ್ತು ಹೇಗೆ ತೋರೀತು? ಎಂದಿಗೂ ತೋರಲಾರದು. ಆದ್ದರಿಂದ ಅಹಂ ಇದಂ ಲಕ್ಷಣಾತ್ಮಕ ಜಗತ್ತು ಅಸತ್ತಾಗಲು, ಇವೆರಡಕ್ಕೂ ಅಧಿಷ್ಠಾನ ಭೂತವಾದ ವಸ್ತು ಯಾವದುಂಟೋ, ಅದು ಸದ್ರೂಪವೆಂದು ಹೇಳಲ್ಪಡುತ್ತದೆ. ಅದು ಪರಮಾತ್ಮನ ಸ್ವರೂಪ ಭೂತವೇ

CC-0. Jangamwadi Math Collection. Digitized by eGangotri

ಆಗಿರುತ್ತದೆ. ಮತ್ತು ಈ ಜೀವಾತ್ಮನು ಜ್ಞಾನಸ್ವರೂಪವೇ ಇರುವನು. ಹೀಗಿದ್ದಾಗ್ಯಾದರೂ ಅವಿವೇಕದಿಂದ ತನಗೆ ವಿಷಯಗಳಾದ ಅನಾತ್ಮ ಜಡಗಳಾದ ದೇಹಾದಿಗಳೇ ನಾನೆಂದು ಅಭಿಮಾನಿಸುವದರಿಂದ ಜಡದಂತೆ ತೋರುವನು. ಆದರೆ, ವಿಚಾರಮಾಡಿ ನೋಡಿದರೆ, ಜೀವನು ಅವಿದ್ಯಾ ತತ್ಕಾರ್ಯರೂಪಮಲದಿಂದ ರಹಿತನಾಗಿ ಕೇವಲ ಪರಿಶುದ್ಧ ಚಿದ್ರೂಪನಾಗಿರುತ್ತಾನೆ. ಅದೇ ಪರಮಾತ್ಮನ ಸ್ವರೂಪವಾಗಿರುತ್ತದೆ. ಅಂದರೆ ಈ ರೀತಿ ತನ್ನ ಸ್ವರೂಪ ವಿಚಾರಿಸಿ ಸದ್ರೂಪ ಚಿದ್ರೂಪನಾಗಿರುವೆನೆಂದು ತಿಳಿಯುತ್ತಾನೆಂಬ ತಾತ್ಪರ್ಯವು. ಮತ್ತು ಯೋಗಿಯು ತನ್ನ ಇಂದ್ರಿಯಂಗಳಿಗೆ ವಿಷಯಾದಿಗಳು ಸಂಬಂಧವಾಗಲು ಅವುಗಳು ನಿತ್ಯ, ಶುಚಿ, ಸುಖರೂಪಗಳಾಗಿರುವವೆಂದು ಭ್ರಾಂತಿಯನ್ನು ಹೊಂದದೆ, ಮತ್ತು ಇಷ್ಟವಾದ ವಸ್ತು ಪ್ರಾಪ್ತಿಯಾಗಲೆಂದೂ ಅನಿಷ್ಟ ವಸ್ತು ಪರಿಹಾರವಾಗಲೆಂದೂ ಯತ್ನಮಾಡದೆ, ಬಂದದ್ದರಲ್ಲಿಯೇ ಶಾಂತನಾಗಿರುವನು, ಹೇಗಂದರೆ, ತೆರೆಗಳಿಲ್ಲದ ಸಮುದ್ರವು ಹೇಗೆ ಇರುವದೋ ಹಾಗೆ, ಅಂದರೆ, ಸಮುದ್ರವು ಬೇಸಿಗೆ ಕಾಲದಲ್ಲಿ ತನ್ನ ನೀರುಗಳು ಸೂರ್ಯನ ಕಿರಣಗಳಿಂದ ಕಡಿಮೆಯಾದವೆಂದು ದುಃಖಪಡುವದಿಲ್ಲ, ಮಳೆಗಾಲದಲ್ಲಿ ಗಂಗಾತುಂಗಾದಿ ನದಿಗಳು ಬಂದು ಕೂಡೋಣದರಿಂದ ಹರ್ಷವನ್ನು ಪಡುವದಿಲ್ಲ, ಕಿಂತು, ಜಲಗಳು ಹೋದಾಗ್ಯೂ ಬಂದಾಗ್ಯೂ ಎರಡೂ ಅವಸ್ಥೆಯಲ್ಲಿ ಏಕ ರೂಪವಾಗಿರುತ್ತದೆ. ಅದರಂತೆ ಯೋಗಿಯು ವಿಷಯಗಳ ಪ್ರಾಪ್ತವಾದಾಗ್ಯೂ ಅಪ್ರಾಪ್ತವಾದಾಗ್ಯೂ ಎರಡೂ ಕಾಲದಲ್ಲಿ ಸಂತೋಷ ಚಿತ್ತದಿಂದಿರುವನು. ಯಾಕಂದರೆ, ಅವನ ಚಿತ್ತದಲ್ಲಿ ರಾಗದ್ವೇಷಾದಿಗಳು ಇಲ್ಲದ್ದರಿಂದಲೂ ಮತ್ತು ಮನುಷ್ಯನಿಂದ ಮೊದಲುಗೊಂಡು ಹಿರಣ್ಯ ಗರ್ಭ ಲೋಕದವರಿಗಿರುವ ಉಪಾಧಿಯಾಗಿರುವ ಆನಂದಗಳಿಗೆಲ್ಲಕ್ಕೂ ಮಿಕ್ಕಿ, ನೂರು ಪಾಲು ಶ್ರೇಷ್ಠವಾಗಿರುವ ನಿಜಾನಂದರೂಪನೇ ತಾನಾಗಿರುವದರಿಂದಲೂ ಸುಖರೂಪನಾಗಿರುವನು; ಇದೇ ಪರಮಾತ್ಮನ ರೂಪವಾಗಿರುತ್ತದೆ.

ಬಳಿಕ; ಯೋಗಿಯ ಸ್ವರೂಪು ನಿತ್ಯಪೂರ್ಣವಾಗಿರುವದೆಂದು ವರ್ಣಿಸುತ್ತಾರೆ

ಜಡತೋರಿಕೆಗಳ್ತನ್ನೊಳಡಗಿ।
ಅಡಗಿತ್ತೆಂಬೀ ಭಾವನೆಯುಡಗಿ॥
ಉದಿಸಿಹ ಸಲೆ ನಿತ್ಯಾದ್ವಯರೂಪು।
ಅದು ತಾನೇ ಪರಮಾತ್ಮನ ರೂಪು॥
ಬಗೆಯಿಂದಖಿಳಾಕಾರದಿ ತೋರ್ಪ।
ಬಗೆಯದುಕೆಡೆ ತಾನೋರ್ವನೆ ತೋರ್ಪ॥
ಪದವಿದಖಂಡಿತವಹ ನಿಜರೂಪು।
ಅದು ತಾನೇ ಪರಮಾತ್ಮನ ರೂಪು॥
ಕಪಟದುಪಾಧಿಗಳಿಂ ಬೇರಪ್ಪ।
ತ್ರಿಪುಟಿಯುಳಿದು ಚಿನ್ಮಾತ್ರನೆಯಪ್ಪ॥

CC-0. Jangamwadi Math Collection. Digitized by eGangotri

ಉಳಿಮೆಯೆ ಪರಮಾತ್ಮನ ರೂಪೆಂದು।
ತಿಳಿ ತನುಜನೆ ನಿಜ ತೂರ್ಯವಿದೆಂದು ॥೨॥

ಟೀಕಾ:—ಜಡತೋರಿಕೆಗಳು=ಜ್ಞಾನಶೂನ್ಯದೃಶ್ಯಪದಾರ್ಥಗಳು, ತನ್ನೊಳಡಗಿ=ಚೇತನನಾದ ತನ್ನಲ್ಲಿ ಲಯವಾಗಿ, ಅಡಗಿತ್ತು=ಲಯವಾಗಿತ್ತೆಂಬ, ಈ ಭಾವನೆಯು=ಈ ವೃತ್ತಿಯು, ಉಡಗಿ=ನಾಶವಾಗಿ, ಉದಿಸಿಹ=ಪ್ರಕಟವಾದ, ಸಲೆ=ಚನ್ನಾಗಿ, ನಿತ್ಯಾದ್ವಯರೂಪು=ನಿತ್ಯಾದ್ವಯರೂಪು, ಅದುತಾನೆ=ಆ ನಿತ್ಯಾದ್ವಯರೂಪೇ, ಪರಮಾತ್ಮನರೂಪು=ಪರಮಾತ್ಮನ ಸ್ವರೂಪು, ಬಗೆಯಿಂದ=ಭಾವನೆಯಿಂದ, ಅಖಿಳಾಕಾರದಿ=ಹಲವುರೂಪದಿಂದ, ತೋರ್ಪ=ತೋರುವಂಥಾ, ಬಗೆಯದು=ಭಾವನೆಯದು, ಕೆಡೆ=ನಾಶವಾಗಲು, ತಾನೋರ್ವನೆ=ತಾನೊಬ್ಬನೆ, ತೋರ್ಪ=ತೋರುವ, ಪದವಿದು=ಈ ಸ್ವರೂಪು, ಅಖಂಡಿತವಹನಿಜರೂಪು=ದೇಶಕಾಲವಸ್ತು ಪರಿಚ್ಛೇದ ರಹಿತ ಸ್ವರೂಪು, ಅದುತಾನೇ=ಪೂರ್ಣತ್ವವೇ, ಪರಮಾತ್ಮನ ರೂಪು=ಪರ ಬ್ರಹ್ಮದ ಸ್ವರೂಪು, ಕಪಟ=ಮಾಯಾಮಯಗಳಾದ, ಉಪಾಧಿಗಳಿಂ=ಉಪಾಧಿಗಳಿಂದ, ಬೇರಪ್ಪ=ಪೃಥಕ್ಕಿರುವ, ತ್ರಿಪುಟಿಯಳಿದು=ತ್ರಿಪುಟಿಯುನಾಶವಾಗಿ, ಚಿನ್ಮಾತ್ರವೆಯಪ್ಪ=ಜ್ಞಾನಸ್ವರೂಪವಾದ,ಉಳುಮೆಯು=ಅವಶಿಷ್ಟವೇ ಪರಮಾತ್ಮನ ರೂಪೆಂದು=ಪರಬ್ರಹ್ಮದ ಸ್ವರೂಪುವೆಂದು, ತನುಜನೆ=ಎಲೈಮಗನೇ, ತುರ್ಯವಿದೆಂದು=ತುರ್ಯಾವಸ್ಥೆಯೊಂದು ತಿಳಿ=ಅರಿ.

ತಾತ್ಪರ್ಯ:—ಎಲೈ ಶಿಷ್ಯನೇ! ಕೇಳು ಸ್ವೇತರಜ್ಞಪ್ತಿ ಶೂನ್ಯಗಳಾದ ಯಾವತ್ತು ದೃಶ್ಯಪದಾರ್ಥಗಳು ಅಧಿಷ್ಠಾನವಾದ ತನ್ನಲ್ಲಿ ಕಲ್ಪಿತಗಳಾಗಿರೋಣದರಿಂದ ಅವು ತನ್ನಲ್ಲಿಯೇ ನಾಶವನ್ನು ಹೊಂದುತ್ತವೆ. ತನ್ನಲ್ಲಿ ನಾಶಹೊಂದಿದವೆಂಬ ಭಾವನೆಯು ಕೂಡಾ ಹೋಗಲು, ಯಾವ ನಿತ್ಯಾದ್ವಯರೂಪು ಉಳಿಯುವದೋ ಅದೇ ತ್ರಿಕಾಲಾಬಾಧ್ಯವಾದಂಥಾ ನಿನ್ನ ಸ್ವರೂಪವಾಗಿರುತ್ತದೆ. ಹೇಗೆ ಸ್ವಪ್ನದಲ್ಲಿ ತಾನೊಬ್ಬನಿದ್ದರೂ ಭಾವನೆಯಿಂದ ಅನೇಕ ರೂಪನಾಗಿ ತೋರುವನೋ, ಹಾಗೆ ಅದ್ವಯರೂಪವಾಗಿ ತಾನೊಬ್ಬನಿದ್ದರೂ ಅವಿದ್ಯಾರೂಪ ಭಾವನೆ ಮೂಲಕ ಅನೇಕಾತ್ಮರಾಗಿರುವಂತೆ ತೋರುವನು. ಆದರೆ, ಉಕ್ತಭಾವನೆಯನ್ನು ಕೆಡಿಸಲು ತಾನೊಬ್ಬನೇ ಅಖಂಡರೂಪನಾಗಿ ತೋರುವನು. ಅದೇ ನಿನ್ನ ಪರಬ್ರಹ್ಮ ಸ್ವರೂಪವೆಂದು ತಿಳಿ. ಅಂತಃಕರಣ ಅಥವಾ ಅವಿದ್ಯಾಮಾಯೋಪಾಧಿಗಳಿಂದ ಬೇರೆಯಾಗಿರುವಂಥಾ ಚತುರ್ದಶ ತ್ರಿಪುಟಗಳು ಅಥವಾ ಜ್ಞಾತೃ, ಜ್ಞಾನ, ಜ್ಞೇಯಗಳೆಂಬ ತ್ರಿಪುಟಿಯು ನಾಶವಾಗಲು ಯಾವ ಜ್ಞಾನಸ್ವರೂಪು ಉಳಿಯುವುದೋ; ಅದೇ ಪರಮಾತ್ಮನ ಸ್ವರೂಪು. ಇಂಥಾ ಸ್ವರೂಪನೇ ನಾನಾಗಿರುವೆನೆಂದು ತಿಳಿದು ಅನುಸಂಧಾನವನ್ನುಮಾಡುತ್ತಾನೆ. ಅದಕ್ಕೆ ತುರ್ಯಾವಸ್ಥೆಯೆಂದು ಹೇಳುತ್ತಾರೆ.

CC-0. Jangamwadi Math Collection. Digitized by eGangotri

ಬಳಿಕ; ಯೋಗಿಯು ತುರ್ಯಾವಸ್ಥೆಯಲ್ಲಿದ್ದುಕೊಂಡು ಸ್ವರೂಪಾನು ಸಂಧಾನಮಾಡುತ್ತಿರಲಿಕ್ಕೆ, ಸುಪ್ತನಂತೆ ಕಂಡುಬರುವನು. ಮತ್ತು ಸ್ವತಃ ಆಗಲಿ ಅನ್ಯರಿಂದಾಗಲಿ ಉತ್ಥಾನನಾಗುತ್ತಾನೆಂದು ಹೇಳುತ್ತಾರೆ.

ಆತ್ಮನು ಸುಖ ಚಿದ್ರೂಪಾಗಿರ್ಪ।
ಆತ್ಮನ ಸತ್ತೆಯೆ ತಾನಾಗಿರ್ಪ॥
ಸಕಲವು ತನ್ನಯ ನಿಜವಹುದೆಂದು।
ಅಕಲಂಕಾನಂದದಿ ಬೆರೆದಂದು॥
ವಾಸನೆಯಹುದನ ಪಾಯಿನಿಯಾಗಿ।
ಆ ಸುಪ್ತನ ಬುದ್ಧಿಗೆ ಪಡಿಯಾಗಿ॥
ಅನ್ನೆಗ ಸಂಸ್ಕಾರದ ಹದನಿಂತು।
ಇನ್ನಾ ಸುಪ್ತನ ಪರಿತಾನೆಂತು॥
ಆಗಳೆಯಾಗಲಿ ತಳುವಿಂದಾಗಿ।
ಮೇಗೆನಿಸುವ ಬಹುದಿನ ಗತಿಯಾಗಿ॥
ತನ್ನಿಂಪರರಿಂದೆಚ್ಚತ್ತವನು।
ಮುನ್ನಿನ ಪರಿಯೊಳು ವ್ಯವಹರಿಸುವನು ॥೩॥

ಟೀಕಾ:— ಆತ್ಮನು=ತಾನು, ಸುಖಚಿದ್ರೂಪಾಗಿರ್ಪ=ಜ್ಞಾನಸುಖರೂಪ ನಾಗಿರುವನು, ಆತ್ಮನ=ಪರಬ್ರಹ್ಮದ, ಸತ್ತೆಯೆ=ಅಸ್ತಿತ್ವವೇ, ತಾನಾಗಿರ್ಪ= ತಾನಾಗಿರುವನು, ಸಕಲವು=ಸರ್ವವು, ತನ್ನಯ=ತನ್ನ, ನಿಜವಹುದೆಂದು=ನಿಜ ಸ್ವರೂಪವೆಂದು, ಅಕಲಂಕ=ನಿರ್ದೋಷವಾದ, ಆನಂದದಿ=ಆನಂದದಲ್ಲಿ, ಬೆರೆ ದಂದು=ಕೂಡಿದ ದಿನವೇ, ವಾಸನೆಯು=ಅನಾತ್ಮ ಭಾವನೆಯು, ಅನಪಾಯಿನಿ ಯಾಗಿ=ನಾಶವಾಗಿ, ಆಸುಪ್ತನ=ನಿದ್ರಿತನ, ಬುದ್ಧಿಗೆ=ಮಾತಿಗೆ, ಪಡಿಯಾಗಿ=ಸರಿ ಯಾಗಿ, ಅನ್ನೆಗಸಂಸ್ಕಾರದಹದನು=ಸಂಸ್ಕಾರ ಪರಿಪಕ್ವವಾಗುವತನಕ, ಇನ್ನು= ಅನಂತರ, ಸುಪ್ತನಪರಿತಾನೆಂತು=ನಿದ್ರಿತನಹಾಗಿರುವನುತಾನು, ಆಗಳೆ ಯಾಗಲಿ=ತಕ್ಷಣವೇ ಆಗಲಿ, ತಳುವಿಂದಾಗಿ=ತಡವಾಗಿ, ಮೇಗೆನಿಸುವ=ಮೇಲೆನಿ ಸುವ, ಬಹುದಿನಗತಿಯಾಗಿ=ಬಹಳ ದಿವಸಗಳು ಹೋದ ನಂತರ, ತನ್ನಿಂ= ತಾನಾಗಿಯೇ, ಪರರಿಂ=ಅನ್ಯರಿಂದ, ಎಚ್ಚತ್ತವನು=ಉತ್ಥಾನನಾದವನು, ಮುನ್ನಿನ ಪರಿಯೊಳು=ಮೊದಲಿನರೀತಿಯಂತೆ, ವ್ಯವಹರಿಸುವನು=ವ್ಯವಹಾರಮಾಡುವನು.

ತಾತ್ಪರ್ಯ:— ಪರಮಾತ್ಮನು ಸದ್ರೂಪ, ಚಿದ್ರೂಪ, ಆನಂದರೂಪನಾಗಿ ರುವನು. ತಾನಾದರೂ ಸದ್ರೂಪ ಚಿದ್ರೂಪ ಆನಂದನಾಗಿರುವನು. ಹೇಗೆಂದರೆ ಜಾಗ್ರದವಸ್ಥೆಯಲ್ಲಿ ನಾನು ಇದ್ದೇನೆಂಬುವದರಿಂದ ಆತ್ಮನು ಸದ್ರೂಪನಾಗಿರುವನು. ಸ್ವಪ್ನಾವಸ್ಥೆಯಲ್ಲಿ ಸ್ವಪ್ನ ಪ್ರಪಂಚವನ್ನು ಅನ್ಯ ಸಹಾಯ ವಿಲ್ಲದೆ ಬೆಳಗುವದರಿಂದ ಚಿದ್ರೂಪನಾಗಿರುವನು. ಸುಪ್ತಿಯಲ್ಲಿ ಯಾವ ವಿಷಯ

CC-0. Jangamwadi Math Collection. Digitized by eGangotri

ಗಳಿಲ್ಲದಿದ್ದರೂ ಆನಂದರೂಪನಾಗಿರುವನು. ಇದು ಸರ್ವಾನುಭವ ಸಿದ್ಧವಾಗಿರುತ್ತದೆ. ಆದ್ದರಿಂದ ಆತ್ಮನ ಲಕ್ಷಣವೂ ಪರಮಾತ್ಮನ ಲಕ್ಷಣವೂ ಒಂದೇ ಆಗಿರೋಣದರಿಂದ ಲಕ್ಷ್ಯ ವಸ್ತುವಾದರೂ ಒಂದೇ ಆಗಿರುವದು. ಇಂಥಾ ಸಚ್ಚಿದಾನಂದ ಸ್ವರೂಪವಾದ ತನ್ನಲ್ಲಿಯೇ ಈ ಸಕಲ ನಾಮರೂಪಾತ್ಮಕ ಜಗತ್ತು ಕಲ್ಪಿತವಾಗಿರುತ್ತದೆ. ಕಲ್ಪಿತ ವಸ್ತು ಅಧಿಷ್ಠಾನಕ್ಕಿಂತಲೂ ಭಿನ್ನವಾಗಿರಲಾರದು. ಆದ್ದರಿಂದ ಸಕಲವು ತಾನೆಂದು ಸರ್ವಾತ್ಮಕ ಭಾವನೆಯುಳ್ಳವನಾಗಿರುವನು. ಆದ್ದರಿಂದ ರಾಗದ್ವೇಷಾದಿಗಳು ನಿವೃತ್ತಿಯಾಗುತ್ತವೆ. ಆದ್ದರಿಂದ ಯಾವದೊಂದು ದೋಷವಿಲ್ಲದಂಥಾ ಅಖಂಡಾನಂದದಲ್ಲಿ ಬೆರತುಹೋಗುವನು. ಆ ಕಾಲಕ್ಕೆಎತ್ತ ನೋಡಿದರೂ ತನ್ನ ನಿಜವೇ ತೋರುವದರಿಂದ ಅನಾತ್ಮಸಂಬಂಧಿ ವಾಸನೆಗಳೆಲ್ಲವು ನಿವೃತ್ತಿಯಾಗುವವು. ಆಗ ವಾಸನಾಕ್ಷಯವಾದಂಥಾ ಯೋಗಿಯು ಸುಪ್ತನ ಸದೃಶನಾಗಿರುತ್ತಾನೆ. ಇದಕ್ಕೆ ದೃಷ್ಟಾಂತವೇನಂದರೆ, ಒಂದಾನೊಂದು ಕಾಲದಲ್ಲಿ ಒಬ್ಬ ಮಹಾ ಮೌನಿಯು ಕುಳಿತುಕೊಂಡಿದ್ದನು. ಅವನನ್ನು ಕುರಿತು ಒಬ್ಬ ಬೇಡನು "ಹೇ ಮುನಿಯೇ ಒಂದು ಮೃಗವು ನನ್ನ ಬಾಣದಿಂದ ಭೇದಿಸಲ್ಪಟ್ಟದ್ದಾಗಿ ಇತ್ತ ಕಡೆಗೆ ಏನಾದರೂ ಬಂದಿರುವುದೋ?" ಎಂದು ಕೇಳಿದನು. ಅದಕ್ಕೆ ಮುನಿಯು "ವನವಾಸಿಗಳಾದಂಥಾ ಮುನಿಗಳಾದ ನಾವು ನಮ್ರ ಸ್ವಭಾವಿಗಳು ನಮಗೆ ಅಹಂಕಾರವೇ ಇಲ್ಲ. ಅಂದಮೇಲೆ, ವ್ಯವಹಾರವು ನಮಗೆ ಗೊತ್ತೇಇಲ್ಲ. ಮನವೇ ಸರ್ವೇಂದ್ರಿಯಂಗಳ ವ್ಯಾಪಾರವನ್ನು ಮಾಡುತ್ತದೆ. ಅಂಥಾ ಮನಸ್ಸೇ ಲಯವಾಗಿರುತ್ತದೆ. ಆದ್ದರಿಂದ ಜಾಗೃತ್, ಸ್ವಪ್ನ, ಸುಪ್ತಿಗಳನ್ನು ನಾವು ತಿಳಿಯುವದೇ ಇಲ್ಲ. ತುರ್ಯಾವಸ್ಥೆಯಲ್ಲಿದ್ದೇನೆ" ಎಂದು ಹೇಳಿದನು. ಬೇಡನು ಈ ಮುನಿಯ ಮಾತನ್ನು ತಿಳಿಯದೆ ಸುಮ್ಮನೆ ಹೊರಟು ಹೋದನು. ಆದ್ದರಿಂದ ಯೋಗಿಯು ತುರ್ಯಾವಸ್ಥೆಯಲ್ಲಿ ನಿದ್ರಿತನ ಸಮಾನನಾಗಿರುವನು. ಅಂದರೆ, ನಿದ್ರಿತನು ಸಂಸ್ಕಾರ ಪರಿಪಕ್ವವಾಗುವ ತನಕ ಹೇಗೆ ಎಚ್ಚರಿಕೆಯುಳ್ಳವನಾಗುವದಿಲ್ಲವೋ, ಹಾಗೇ ಈತನಾದರೂ ಸಂಸ್ಕಾರ ಉದ್ಬುದ್ಧವಾಗುವವರೆಗೆ ಉತ್ಥಾನನಾಗುವದಿಲ್ಲ. ಅಂಥಾ ಸಮಾಧಿಯಲ್ಲಿದ್ದವನು ಅಭ್ಯಾಸಾನುಸಾರವಾಗಿ ಸ್ವತಃ ಆಗಲಿ ಪರರಿಂದಾಗಲಿ ಉತ್ಥಾನನಾಗುವನು. ಉತ್ಥಾನವಾದ ತರುವಾಯದಲ್ಲಿಯಾದರೂ ಮನಬಂದಂತೆ ನಡೆಯದೆ ಕೇವಲ ಸಾಂಪ್ರದಾಯಾನುಸರಿಯಾಗಿಯೇ ವರ್ತನಮಾಡುವನು.

ಬಳಿಕ; ಉತ್ಥಾನನಾದ ಯೋಗಿಯು ವ್ಯವಹಾರವನ್ನು ಮಾಡುವವನಂತೆ ಕಂಡುಬಂದರೂ, ಅವನು ಕರ್ತೃತ್ವ ಭೋಕ್ತೃತ್ವವುಳ್ಳವನಾಗುವದಿಲ್ಲೆಂದು ಹೇಳುತ್ತಾರೆ.

ಬಲ್ಲನೆ ತುರ್ಯವದುತ್ತಮ ಯೋಗಿ।
ಅಲ್ಲಿಯೆ ವಾಸನೆ ತನಗಿರಲಾಗ॥

CC-0. Jangamwadi Math Collection. Digitized by eGangotri

ಲೀಲಾ ವ್ಯವಹಾರಂಗಳಮರ್ಚಿ|
ಮೇಲಣ ಕರಣಂ ಪೊರಗೆ ಬದಿರ್ಚಿ||
ಏಗೈದೊಡೆಯಾತ್ಮನ ನಿಜ ಪದದ|
ಯೋಗ ಸುಖಂ ಬಿಡದಾಗಿಯೆ ಭವದ||
ಹೊಲಬಿಲ್ಲಾಗಿಂಷಿ ಮಾಡಿದನಲ್ಲ|
ಒಲಿದುದನುಂಡೊಡೆ ನುಂಡವನಲ್ಲ||
ಕರ್ತವ್ಯಂ ತನಗೆಳ್ಳಿನಿತಿಲ್ಲ|
ವರ್ತಿಸನದರಿಂ ಮತ ತನಗಿಲ್ಲ||
ಈ ವಿಧದಿಂ ಬದುಕುತ್ತಿಹನಾಗಿ|
ಜೀವನ್ಮುಕ್ತನೆನಿಪನಾ ಯೋಗಿ ||೪||

ಟೀಕಾ:—ಬಲ್ಲನೆ=ಶಿಷ್ಯನೇ! ತುರ್ಯವದು=ತು ರ್ಯಾ ವ ಸ್ಥೆ ಯ ದು, ಉತ್ತಮಯೋಗ=ಒಳ್ಳೇಯೋಗವು, ಅಲ್ಲಿಯ=ಸ್ವರೂಪದಲ್ಲಿಯ, ವಾಸನೆ=ಅನು ಭವಾಕಾರವೃತ್ತಿಯು, ತನಗಿರಲಾಗ=ತನಗಿದ್ದ ವೇಳೆಯೊಳು, ಲೀಲಾವ್ಯವ ಹಾರಂಗಳ್=ವಿನೋದವ್ಯವಹಾರಗಳನ್ನು, ಅಮರ್ಚಿ=ಸ್ವೀಕಾರ ಮಾಡಿಕೊಂಡೇ, ಮೇಲಣಕರಣಂ=ಒಳಗಿರುವ ಕರಣಗಳು, ಪೊರಗೆ=ಹೊರಗೆ, ಬದಿರ್ಚಿ= ಬಂದು, ಏಗೈದೊಡೆ=ಏನುಮಾಡಿದರೂ, ಆತ್ಮನ=ತನ್ನ, ನಿಜಪದದ=ಸ್ವರೂಪದ, ಯೋಗಸುಖಂ=ಅನುಸಂಧಾನ ಸುಖವನ್ನು, ಬಿಡದಾಗಿಯೇ=ಬಿಡದಲೇ, ಭವದ= ಸಂಸಾರದ, ಹೊಲಬಿಲ್ಲಾಗಿಯೇ=ಸಮಾಚಾರವಿಲ್ಲದ್ದರಿಂದಲೆ, ಮಾಡಿದನಲ್ಲ= ಮಾಡಿದವನಲ್ಲ, ಒಲಿದುದನು=ಪ್ರೀತಿಗೆ ಬಂದದ್ದನ್ನು, ಉಂಡೊಡಂ=ಉಪ ಭೋಗಿಸಿದಾಗ್ಯಾದರೂ, ಉಂಡವನಲ್ಲ=ಊಟಮಾಡಿದವನುಅಲ್ಲ, ಕರ್ತವ್ಯಂ= ಮಾಡತಕ್ಕದ್ದು, ತನಗೆ=ತನಗೆ, ಎಳ್ಳಿನಿತಿಲ್ಲ=ಎಳ್ಳಷ್ಟೂಇಲ್ಲ, ಅದರಿಂ=ಅದ ರಿಂದ, ವರ್ತಿಸನು=ನಡೆಯನು, ಮತತನಗಿಲ್ಲ=ತನಗೆ ಸಮ್ಮತವಿಲ್ಲ, ಈ ವಿಧದಿಂ= ಈ ರೀತಿಯಿಂದ, ಬದುಕುತ್ತಿಹನಾಗಿ=ಜೀವಿಸುವಂಥವನಾಗಿ, ಆ ಯೋಗಿ=ಆ ಯೋಗಿಯು, ಜೀವನ್ಮುಕ್ತನೆನಿಪನು=ಜೀವನ್ಮುಕ್ತನೆನಿಸುವನು.

ತಾತ್ಪರ್ಯ:— ಈ ಪದ್ಯದಲ್ಲಿ ಮುಖ್ಯವಾಗಿ ಜ್ಞಾನಿಗೆ ಕರ್ತೃತ್ವ ಭೋಕ್ತೃತ್ವಗಳು ಇಲ್ಲೆಂಬುದನ್ನು ಪ್ರತಿಪಾದಿಸುತ್ತಾರೆ. ಅರ್ಥಾತ್, ಜ್ಞಾನಿ ಗಳು ಕರ್ತವ್ಯರಹಿತರಾದ್ದರಿಂದಲೂ, ಅವರ ವ್ಯವಹಾರವು ವಾಸನಾಯುಕ್ತ ವಾದದ್ದಲ್ಲದ್ದರಿಂದಲೂ, ಕರ್ತೃತ್ವ ಭೋಕ್ತೃತ್ವಗಳು ಸಂಭವಿಸುವದಿಲ್ಲ. ಒಂದು ವೇಳೆ ಸಂಭವಿಸಿದಂತೆ ಕಂಡು ಬಂದರೂ ಅಕರ್ತ ಅಭೋಕ್ತರೂಪ ಆತ್ಮಾನು ಸಂಧಾನವನ್ನು ಮಾಡುತ್ತಿರುವದರಿಂದ, ಅವರಿಗೆ ಕರ್ತೃತ್ವ ಭೋಕ್ತೃತ್ವಾದಿಗಳು ಸಂಭವಿಸಿಲ್ಲವೆಂದೇ ತಿಳಿಯತಕ್ಕದ್ದು. ಎಲೈ ಶಿಷ್ಯನೇ! ಕೇಳು ಆ ತುರ್ಯಾ

CC-0. Jangamwadi Math Collection. Digitized by eGangotri

ವಸ್ಥೆಯು ಒಳ್ಳೆ ಉತ್ತಮವಾದ ಯೋಗವೆನಿಸುತ್ತದೆ. ಆ ಅವಸ್ಥೆಯಲ್ಲಿ ಅಸಂಗಾತ್ಮಾನುಸಂಧಾನರೂಪ ವಾಸನೆಯಿರುತ್ತದೆ. ಆ ವಾಸನೆಯು ಲೀಲಾವ್ಯವಹಾರಗಳಿಂದ ಯುಕ್ತವಾಗಿ ಇಂದ್ರಿಯಗಳು ಸಹಿತ ಹೊರಗೆ ಬರುತ್ತದೆ. (ಶಂಕಾ) ಲೌಕಿಕ ವೈದಿಕ ವ್ಯವಹಾರಗಳಲ್ಲಿ ತತ್ವಜ್ಞಾನಿಗಾದರೂ ಕರ್ತೃತ್ವವು ಕಂಡು ಬರುತ್ತದೆ. ಅದರಿಂದ ಇಷ್ಟಾನಿಷ್ಟ ಭೋಗವನ್ನಾದರೂ ಅವಶ್ಯ ಅನುಭೋಗಿಸುತ್ತಾನೆ. ಅಂದ ಮೇಲೆ, ಅಜ್ಞಾನಿಗಳಿಗಿಂತಲೂ ಜ್ಞಾನಿಗಳಲ್ಲಿ ಏನೂ ವಿಶೇಷವು ಕಂಡು ಬರುವದಿಲ್ಲ. (ಸಮಾಧಾನ) ಶರೀರದಿಂದಾಗುವ ವ್ಯವಹಾರಮಾತ್ರಕ್ಕೆ ಕರ್ತೃತ್ವವನ್ನು ಹೇಳಲಿಕ್ಕೆ ಬರುವದಿಲ್ಲ. ಕಿಂತು, ಒಳಗಿದ್ದ ವಾಸನಾತ್ಮಕ ಮನೋವೃತ್ತಿಯು ಇಂಥಾ ಕಾರ್ಯವನ್ನು ಮಾಡೇ ಬಿಡಬೇಕೆಂದು ನಿಶ್ಚಯವುಳ್ಳದ್ದಾದರೆ, ಅದು ಕರ್ತೃತ್ವವೆನಿಸುವದು. ಭೋಕ್ತೃತ್ವವಾದರೂ ಆ ಕರ್ತೃತ್ವದ ಅಧೀನವಾದ ಚೇಷ್ಟಾವಶದಿಂದ ವಾಸನಾನುಸಾರ ಫಲವನ್ನು ಅನುಭವಿಸುವದಾಗಿರುತ್ತದೆ. (ಶಂಕಾ) ಕರ್ತೃತ್ವ ಭೋಕ್ತೃತ್ವಗಳು ವಾಸನಾಮೂಲಕವಿದ್ದಾಗ್ಯಾದರೂ ಜ್ಞಾನಿ ಅಜ್ಞಾನಿಗಳಲ್ಲಿ ವಿಶೇಷವೇನುಂಟು? (ಸಮಾಧಾನ) ತತ್ವಜ್ಞಾನಿಯು ಶಿಥಿಲೀಭೂತವಾದ ವಾಸನೆಯುಳ್ಳವನಾದ್ದರಿಂದ ಲೌಕಿಕ ವ್ಯವಹಾರವನ್ನಾಗಲಿ, ಸಮಾಧಿ ಅಭ್ಯಾಸವನ್ನಾಗಲಿ, ಮಾಡಿದಾಗ್ಯಾದರೂ ಆ ಕ್ರಿಯೆಯ ಫಲವನ್ನು ಅನುಭವಿಸುವದಿಲ್ಲ. ಜ್ಞಾನಿಯು ಆ ಕ್ರಿಯೆಯಲ್ಲಿ ಅಸಕ್ತ ಬುದ್ಧಿಯಿಂದ ಇರುತ್ತಾನೆ. ಮತ್ತು ಫಲಪ್ರಾಪ್ತಿಯಾದಾಗ್ಯಾದರೂ ಇದೆಲ್ಲವು ಆತ್ಮಸ್ವರೂಪವೆಂಬ ಬುದ್ಧಿಯಿಂದಲೇ ಕರ್ಮಫಲವನ್ನು ಅನುಭವಿಸುತ್ತಾನೆ. ಆದ್ದರಿಂದ ಜ್ಞಾನಿಯು ಕರ್ತೃತ್ವ ಭೋಕ್ತೃತ್ವವುಳ್ಳವನಾಗುವದಿಲ್ಲ. ಅಜ್ಞಾನಿ ಪುರುಷನು ವಾಸನಾಬದ್ಧಿತನಾಗಿರೋಣದರಿಂದ ಶರೀರದಿಂದ ಕ್ರಿಯೆಯನ್ನು ಮಾಡದಿದ್ದರೂ, ಅವನು ಮಾಡಿದಂತೆಯೇ ಆಗುತ್ತದೆ. ಮನಸ್ಸು ಯಾವದನ್ನು ಮಾಡುತ್ತದೆಯೋ ಅದು ಮಾಡಿದಂತಾಯಿತು. ಮನಸ್ಸು ಯಾವದನ್ನು ಮಾಡುವದಿಲ್ಲವೋ ಅದು ಮಾಡಿದಂತಾಗುವದಿಲ್ಲ. ಆದ್ದರಿಂದ ಮನಸ್ಸೇ ಕರ್ತೃವಲ್ಲದೆ ಶರೀರವಲ್ಲ. ಕಿಂತು ಸಂಸಾರವು ಮನೋಮಯಾತ್ಮಕವಾಗಿರುತ್ತದೆ. ಇನ್ನು ಆತ್ಮಜ್ಞಾನಿಗಳ ಮನಸ್ಸು; ಮಳೆಯಾಗಲು ಮೃಗತೃಷ್ಣೆಯು ಅಡಗಿದಂತೆ, ಚಂಡಸೂರ್ಯನ ಪ್ರಕಾಶದಲ್ಲಿ ಹಿಮಕಣಗಳು ಅಡಗಿದಂತೆ, ತುರ್ಯಾವಸ್ಥೆಯಲ್ಲಿ ಉಪಶಮನವನ್ನು ಹೊಂದಿರುತ್ತದೆ. ಆದ್ದರಿಂದ ಜ್ಞಾನಿಗಳ ಮನಸ್ಸು ವಿಷಯಾನಂದದಿಂದ ವಿಶ್ರಾಂತಿಯನ್ನು ಹೊಂದುವದಿಲ್ಲ. ಮತ್ತು ಸ್ವರೂಪಾನಂದದಿಂದ ಶೂನ್ಯವಾದುದು ಅಲ್ಲ. ಶಿಲಾದಿಗಳಂತೆ ಅಚಲವಾದದ್ದೂ ಅಲ್ಲ, ವಾಯುವಿನಂತೆ ಚಲನವುಳ್ಳದ್ದೂ ಅಲ್ಲ. ಸತ್ತೂ ಅಲ್ಲ, ಅಸತ್ತೂ ಅಲ್ಲ, ಇವುಗಳ ಮಧ್ಯಾವಸ್ಥೆಯುಳ್ಳದ್ದೂ ಅಲ್ಲ. ಕಿಂತು, ಭೂಮಾತ್ಮಕ ಸುಖ ರೂಪವಾಗಿಯೇ ಇರುತ್ತದೆ, ಅಜ್ಞಾನಿಯ ಮನಸ್ಸು ಕೆಸರಿ

CC-0. Jangamwadi Math Collection. Digitized by eGangotri

ನಲ್ಲಿ ಗಜವು ಸಿಕ್ಕು ಬಿದ್ದಂತೆ ವಾಸನಾರೂಪ ಕೆಸರಿನಲ್ಲಿ ಬಿದ್ದಿರುತ್ತದೆ. ವಾಸನಾ ಮೂಲಕ ಸುಖದುಃಖಗಳಾಗುತ್ತವೆ. ಹೊರತು ಶರೀರದಿಂದಲ್ಲವೆಂಬು ದಕ್ಕೆ ಒಂದು ದೃಷ್ಟಾಂತವನ್ನು ಹೇಳುತ್ತೇನೆ. ಹೆಗಂದರೆ? ಸುಖವಾಗಿ ಶರೀರ ದಿಂದ ಹಾಸಿಗೆಯ ಮೇಲೆ ಮಲಗಿಕೊಂಡ ಪುರುಷನು, ತಗ್ಗಿನಲ್ಲಿ ಬೀಳದಿದ್ದರೂ, ತಗ್ಗಿನಲ್ಲಿ ಬೀಳುವ ವಾಸನೆಯಿಂದ ಕೂಡಿದ ಮನಸ್ಸುಳ್ಳವ ನಾದ್ದರಿಂದ ಸ್ವಪ್ನಾ ವಸ್ಥೆಯಲ್ಲಿ ಅವಶ್ಯಗರ್ತದಲ್ಲಿ ಬಿದ್ದು ದುಃಖವನ್ನು ಅನುಭವಿಸುತ್ತಾನೆ. ಮತ್ತೊಬ್ಬನು ಜಾಗ್ರದವಸ್ಥೆಯಲ್ಲಿ ಶರೀರದಿಂದ ತಗ್ಗಿನಲ್ಲಿ ಬಿದ್ದಾಗ್ಯಾದರೂ, ಉಪಶಮಿತ ಚಿತ್ತವುಳ್ಳವನಾದ್ದರಿಂದ ಸುಖಾಸನ ಶಯ್ಯಾದಿ ಸುಖವನ್ನು ಅನುಭವಿಸುತ್ತಾನೆ. ಪ್ರಥಮ ಪುರುಷನು ತಗ್ಗಿನಲ್ಲಿ ಬೀಳದಿದ್ದರೂ (ಅಕರ್ತ ನಾದರೂ) ಬಿದ್ದ ದುಃಖವನ್ನು ಅನುಭವಿಸೋಣದರಿಂದ ಕರ್ತಾಯೆನಿಸುತ್ತಾನೆ. ದ್ವಿತೀಯ ಪುರುಷನು ತಗ್ಗಿನಲ್ಲಿ ಬಿದ್ದು ಕರ್ತನಾದರೂ ದುಃಖವಿಲ್ಲದ್ದರಿಂದ ಮನದಿಂದ ಅಕರ್ತನಾದನು. ಆದ್ದರಿಂದ ಜ್ಞಾನಿಯ ಮನಸ್ಸು ಆತ್ಮಾನುಸಂಧಾನ ವಾಗಿರಲು, ಜಗತ್ತೆಲ್ಲವು ತಾನಾಗಿ ತೋರುತ್ತದೆ. ಆದ್ದರಿಂದ ಜ್ಞಾನಿಯ ಮನಸ್ಸು ವ್ಯವಹಾರದಲ್ಲಿ ಲೀಲೆಯಿಂದ ಕೂಡಿಕೊಂಡಿರುತ್ತದೆ. ಹೇಗಂದರೆ, ಬಾಲಕರ ಮನಸ್ಸು ಆಟಗಳಲ್ಲಿ ಲೀಲೆಯಿಂದ ಕೂಡಿಕೊಂಡಿರುತ್ತದೆ ಮೊರತು ರಾಗದಿಂದಲ್ಲ. ಹೇಗೋ ಹಾಗೆ ಜ್ಞಾನಿಯ ಮನಸ್ಸು ವ್ಯವಹಾರಗಳನ್ನು ಲೀಲಾ ಮೂಲಕ ಮಾಡುವದರಿಂದ ಕರ್ತೃತ್ವ ಭೋಕ್ತೃತ್ವಗಳು ಸಂಭವಿಸುವದಿಲ್ಲಿ. ಆದ್ದರಿಂದ ಜ್ಞಾನಿಯ ಮನಸ್ಸು ಹೊರಗೆ ಬಂದು ಲೌಕಿಕ ವೈದಿಕ ವ್ಯವಹಾರವನ್ನು ಮಾಡಿ ದಾಗ್ಯಾದರೂ, ಆತ್ಮ ಸ್ವರೂಪ ಭೂತ ಸುಖವನ್ನು ತ್ಯಾಗಮಾಡುವದಿಲ್ಲ. ಕಿಂತು, ಮಳೆಹನಿಯು ಆಕಾಶ ಪ್ರತಿಬಿಂಬದಿಂದ ಕೂಡಿರುವಂತೆ, ಮನಸ್ಸು ಸ್ವರೂಪ ಸುಖದಿಂದ ಕೂಡಿಕೊಂಡೇ ಇರುತ್ತದೆಂಬ ಭಾವವು. ಆದ್ದರಿಂದಲೇ ಸಂಸಾರ ಸಂಬಂಧದ ಸಮಾಚಾರವೇ ಇಲ್ಲ ಯಾಕಂದರೆ, ಬಾಲಕನು ಲೀಲಾಮೂಲಕ ಆಟವನ್ನು ಆಡುತ್ತಿರಲಿಕ್ಕೆ ದುಃಖವಾದರೂ ಸುಖವೆಂದು ಹೇಗೆ ಭಾವಿಸು ತ್ತಾನೋ, ಹಾಗೆ ಜ್ಞಾನಿಯು ದುಃಖವನ್ನು ಲೀಲಾ ಮೂಲಕ ಅನುಭವಿಸುವದ ರಿಂದ ಸುಖವಾಗಿಯೇ ತೋರುತ್ತದೆ. ಆದ್ದರಿಂದ ಮಾಡಿದರೂ ಮಾಡಿದವನಲ್ಲ. ಉಂಡವನಾದರೂ ಉಂಡವನಲ್ಲ ಎಂದು ಹೇಳಲ್ಪಟ್ಟಿರುತ್ತದೆ. ಅರ್ಥಾತ್ ವಾಸನೆಯಿಲ್ಲದೆ ಇರುವದರಿಂದ ಜ್ಞಾನಿಯು ಜೀವನ್ಮುಕ್ತ ನೆನಿಸುತ್ತ ಇರುವನು ಅಂದರೆ, ವಾಸನಾಕ್ಷಯ ಮನೋನಾಶವನ್ನು ಮಾಡಿಕೊಂಡು ಜೀವನ್ಮುಕ್ತ ನಾಗಿರುವನೆಂಬ ಭಾವವು. ಮತ್ತು ಇಲ್ಲಿ "ಏಗೈದೊಡೆ" ಎಂಬ ಪದಕ್ಕೆ ಲೌಕಿಕ ವೈದಿಕ ವ್ಯವಹಾರಗಳನ್ನು ಮಾಡಿದಾಗ್ಯಾದರೂ ಎಂಬರ್ಥವನ್ನು ಮಾಡಬೇಕೆ ಹೊರತು ಯಥೇಷ್ಟಾಚರಣ ಅರ್ಥವನ್ನು ಮಾಡಕೂಡದು. ಇದರಂತೆಯೇ "ಮಾಡಿದವನಲ್ಲ ಉಂಡವನಲ್ಲ" ಎಂಬ ಪದಗಳಿಗಾದರೂ ಕರ್ತೃತ್ವ ಭೋಕ್ತೃತ್ವ

CC-0. Jangamwadi Math Collection. Digitized by eGangotri

ಗಳು ಜ್ಞಾನಿಯಲ್ಲಿ ನಿಷೇಧಿಸಲ್ಪಡುತ್ತಾವೆಂದು ತಿಳಿಯಬೇಕೇ ಹೊರತು ಅನ್ಯಥಾ ಅರ್ಥವನ್ನು ಮಾಡಕೂಡದು. ಈ ವಿಷಯದರ್ಥವು ಯೋಗವಾಸಿಷ್ಠದ ಸ್ಥಿತಿ ಪ್ರಕರಣದಲ್ಲಿ ಹೇಳಲ್ಪಟ್ಟದೆ. ಅದಕ್ಕನುಸಾರವಾಗಿಯೇ ನಾವು ಇಲ್ಲಿ ಹೇಳಿರುತ್ತೇವೆ.

ಬಳಿಕ; ಮನೋನಾಶ ವಾಸನಾಕ್ಷಯವುಳ್ಳಂಥಾ ಜೀವನ್ಮುಕ್ತರು ಮನ ದಿಂದಲೂ ಶರೀರದಿಂದಲೂ ಹೇಗೆ ವ್ಯವಹರಿಸುತ್ತಾರೆಂಬುದನ್ನು ಪ್ರತಿಪಾದನ ಮಾಡುತ್ತಾರೆ.

ಬಂದುದನಹುದಲ್ಲೆಂಬುವನಲ್ಲ।
ಮುಂದಹನೊಂದಂ ಬಯುಸುವನಲ್ಲ॥
ಕಳೆದುದನೊಂದಂ ನೆನೆವವನಲ್ಲ।
ತಿಳಿಯದರಿಂ ಮನಮುಂತನಗಿಲ್ಲ॥
ಮೋಹಿತರೊಳು ಮೋಹಿತನಂತಿರ್ಪ।
ಮೋಹರಹಿತನೊಡನವರಂತಿರ್ಪ॥
ಕರ್ಮಿಗಳೊಳು ಕರ್ಮಿಗಳಂತಿರ್ಪ।
ಕರ್ಮರಹಿತರೊಳಗವರಂತಿರ್ಪ॥
ಭೋಗಿಗಳೊಳು ಭೋಗಿಗಳಂತಿರ್ಪ।
ಯೋಗಿಗಳೊಳು ಯೋಗಿಗಳಂತಿರ್ಪ॥
ಜೀವನ್ಮುಕ್ತರವರಿಗವರಂತೆ।
ಭಾವಿಸುತಿಹರುಪಹಿತ ಮಣಿಯಂತೆ॥ ॥೫॥

ಟೀಕಾ:— ಬಂದುದನು=ಪ್ರಾಪ್ತವಾದದ್ದನ್ನು, ಅಹುದು=ಇಷ್ಟವೆಂದು, ಅಲ್ಲ=ಅನಿಷ್ಟವೆಂದು, ಎಂಬವನಲ್ಲ=ನುಡಿಯುವವನಲ್ಲ, ಮುಂದಹನು=ಮುಂದಾಗುವದನ್ನು, ಒಂದಂ=ಒಂದನ್ನಾದರೂ, ಬಯಸುವನಲ್ಲ=ಇಚ್ಛಾಮಾಡುವವನಲ್ಲ, ಕಳೆದುದನು=ಹೋದದ್ದನ್ನು, ಒಂದಂ=ಒಂದನ್ನಾದರೂ, ನೆನೆವವನಲ್ಲ=ಚಿಂತಿಸುವನಲ್ಲ, ಅದರಿಂದ=ಈ ಕಾರಣದಿಂದ, ಮನಮುಂತನಗಿಲ್ಲ=ಮನಸ್ಸು ಮೊದಲಿಗೇ ಇಲ್ಲ, ತಿಳಿ=ಅರಿ, ಮೋಹಿತರೊಳು=ವಿಷಯಾಸಕ್ತರಲ್ಲಿ, ಮೋಹಿತನಂತಿರ್ಪ=ಮೋಹಿಯಂತೆ ಇರುವನು, ಮೋಹರಹಿತರೊಡನೆ=ಮೋಹವಿಲ್ಲದವರಲ್ಲಿ, ಅವರಂತಿರ್ಪ=ಅವರ ಹಾಗೆ ಇರುವನು, ಕರ್ಮಿಗಳೊಳು=ಕರ್ಮ ಮಾಡುವವರಲ್ಲಿ, ಕರ್ಮಿಗಳಂತಿರ್ಪ=ಕರ್ಮಿಯ. ಹಾಗೆ ಇರುವನು, ಕರ್ಮರಹಿತರೊಳಗೆ=ಕರ್ಮವಿಲ್ಲದವರಲ್ಲಿ, ಅವರಂತಿರ್ಪ=ಅವರ ಹಾಗೆ ಇರುವನು, ಭೋಗಿಗಳೊಳು=ಭೋಗಿಗಳಲ್ಲಿ, ಭೋಗಿಗಳಂತಿರ್ಪ=ಭೋಗಿಗಳ ಹಾಗೆಯೇ ಇರುವನು, ಯೋಗಿಗಳೊಳು=ಚಿತ್ತೈಕಾಗ್ರತೆಯುಳ್ಳವರಲ್ಲಿ, ಯೋಗಿಗಳಂತಿರ್ಪ=ಯೋಗಿಗಳ ಹಾಗೆ

CC-0. Jangamwadi Math Collection. Digitized by eGangotri

ಇರುವನು, ಜೀವನ್ಮುಕ್ತರು=ಜೀವತ್ವವಿಲ್ಲದವರು, ಅವರಿಗವರಂತೆ=ಅವರ ಹಾಗೇ ಅವರಾಗುವರು, ಉಪಹಿತಮಣಿಯಂತೆ=ಸ್ಫಟಿಕ ಮಣಿಯಂತೆ, ಭಾವಿಸುತಿಹರು= ತಿಳಿಯುತ್ತಿರುವರು.

ತಾತ್ಪರ್ಯ:— ಎಲೈ ಶಿಷ್ಯನೇ ! ಕೇಳು. ಜೀವನ್ಮುಕ್ತನಾದ ಯೋಗಿಯು ಪ್ರಾಪ್ತವಾದ ವಿಷಯವನ್ನು ಕುರಿತು ಇದು ಇಷ್ಟವಾದದ್ದೆಂದು ತಿಳಿದು ರಾಗವನ್ನು ಮಾಡುವವನೂ ಅಲ್ಲ. ಇದು ಅನಿಷ್ಟವೆಂದು ತಿಳಿದು ಅದನ್ನು ಕುರಿತು ದ್ವೇಷ ವನ್ನು ಮಾಡುವದಿಲ್ಲ. ಕಿಂತು ಪ್ರಾಪ್ತವಾದ ವಿಷಯಗಳಲ್ಲಿ ರಾಗದ್ವೇಷವಿನಾ ಉದಾಸೀನ ಬುದ್ಧಿಯಿಂದ ಇರುವನು. ಮತ್ತು ಮುಂದೆ ಭಾವಿಕಾಲದಲ್ಲಿ ನಾನು ಹೀಗಿರಬೇಕು. ಹೀಗೆ ಮಾಡಬೇಕು. ಇಂಥಾ ವಸ್ತುಗಳು ಪ್ರಾಪ್ತವಾಗ ಬೇಕೆಂಬ ಮುಂದಿನ ಚಿಂತೆಯೂ ಇಲ್ಲ. ಭೂತಕಾಲವಲ್ಲಿ ಕಳೆದುಹೋದ ಪದಾರ್ಥಗಳನ್ನು ಕುರಿತು ಚಿಂತೆಯನ್ನೂ ಮಾಡುವದಿಲ್ಲ. ಇಂಥಾ ಸ್ಥಿತಿಯುಳ್ಳ ಜ್ಞಾನಿಗಳು ಜಗತ್ತಿನ ಜನರು ಹೇಗಿರುವರೋ ಅವರಿಗೆ ಅವರಂತೆಯೇ ತೋರು ತ್ತಾರೆ. ಅಂದರೆ, ಅವರಲ್ಲಿ ಏನು ಇಲ್ಲ ಎಂಬ ತಾತ್ಪರ್ಯವು. ಹೇಗಂದರೆ, ಸ್ತ್ರೀ ಪುತ್ರಾದಿ ವಿಷಯಗಳಲ್ಲಿ ಮೋಹವುಳ್ಳ ಜನರ ಮಧ್ಯದಲ್ಲಿ ಜೀವನ್ಮುಕ್ತ ನಾದರೂ ಮೋಹವುಳ್ಳವನಂತೆ ತೋರುವನು ಅಂದರೆ, ಮೋಹಿಗಳು ವಿಷಯ ತ್ಯಾಗವಾದ ಕೂಡಲೇ ಹೇಗೆ ರೋದನಾದಿಗಳನ್ನು ಮಾಡುವರೋ, ಹಾಗೇ ಜ್ಞಾನಿಯಾದವನು ಅವರ ದುಃಖವನ್ನು ಹೋಗಲಾಡಿಸುವುದಕ್ಕಾಗಿ ಅವರಂ ತೆಯೇ ರೋದನಾದಿಗಳನ್ನು ಮಾಡಿ ತೋರಿಸುವನು ಪರಂತು, ಅದು ವಾಸ್ತ ವಿಕವಲ್ಲ. ಹೇಗಂದರೆ, ನಾಟಕ ಶಾಲೆಯಲ್ಲಿ ನಟನು ಸ್ತ್ರೀವೇಷಧಾರಿಯಾಗಿ ಪತಿವಿಯೋಗ ಸಂಬಂಧಿ ದುಃಖವನ್ನು ಮಾಡುವವನಂತೆ ಹೊರಗೆ ಕಂಡು ಬಂದರೂ, ಒಳಗೆ ನಾನು ಸ್ತ್ರೀಯಳಲ್ಲ. ಕಿಂತು, ಪುರುಷ ಸುಖವುಳ್ಳವ ನಾಗಿರುವೆನೆಂದು ತಿಳಿದುಕೊಂಡಿರುವಂತೆ; ತಾನು ಅಂತರದಲ್ಲಿ ನಿರ್ಮೋಹ ದಿಂದಿರುವನು. ಅರ್ಥಾತ್ ಮೋಹಿಗಳೊಡನೆ ಕೂಡಿ ದುಃಖಿಯೂ ಅಲ್ಲ. ಮೋಹ ರಹಿತರಲ್ಲಿ ಕೂಡಿ ಸುಖಿಯೂ ಅಲ್ಲ. ಕಿಂತು, ಸುಖದುಃಖಗಳಿಂದ ನಿರ್ಲೇಪ ನಾಗಿರುತ್ತಾನೆ. ಮತ್ತು ಚಿನ್ಮಾತ್ರ ಆತ್ಮಸ್ವರೂಪದಲ್ಲಿ ಯಾವಾತನ ಮನಸು ವಿಶ್ರಾಂತಿಯನ್ನು ಹೊಂದಿರುವದೋ, ಅಂಥಾ ಜೀವನ್ಮುಕ್ತನು ಮೋಹಿ, ಕರ್ಮಿ, ಭೋಗಿ, ಯೋಗಿ ಮೊದಲಾದವರು ತಮ್ಮ ತಮ್ಮ ಯಾವ ಯಾವ ದೃಷ್ಟಿಯಿಂದ ನೋಡುತ್ತಾರೋ, ಅವರಿಗೆ ಅವರ ಹಾಗೆಯೇ ಕಂಡುಬರುತ್ತಾನೆ. ಹೇಗಂದರೆ, ಸ್ಫಟಿಕ ಮಣಿಯು ತನ್ನ ಶುಭ್ರ ಸ್ಥಿತಿಯಿಂದ ತಾನಿದ್ದರೂ ತನ್ನೆದುರಿಗೆ ಯಾವ ಯಾವ ಬಣ್ಣದ ಮಣಿಗಳು ಬಂದರೂ ಕೂಡಾ, ಆ ಸ್ಫಟಿಕವು ಆಯಾಯ ಮಣಿಗಳ ರೂಪವನ್ನೇ ಹೊಂದಿದಂತೆ ತೋರುತ್ತದೆ; ಪರಂತು ತಾನೇನು ಹಾಗೆ ಇಲ್ಲ. ಕಿಂತು; ಸ್ವರೂಪತಃ ತಾನು ಶುಭ್ರವಾಗಿಯೇ ಇರುತ್ತದೆ.

CC-0. Jangamwadi Math Collection. Digitized by eGangotri

ಬಳಿಕ; ಜೀವನ್ಮುಕ್ತನಾದ ಪುರುಷನು ಜನರ ದೃಷ್ಟಿಗೆ ರಾಗಾದಿಗಳು ಳ್ಳವನಂತೆ ಕಂಡು ಬಂದರೂ, ಕೇವಲ ಆನಂದದಿಂದ ತುಂಬಿಕೊಂಡಿರುವನು ಎಂದು ಪ್ರತಿಪಾದಿಸುತ್ತಾರೆ.

ಕಂಡರಿಗೆಲ್ಲರವೋಲೆಸೆಯುತ್ತ।
ಉಂಡುಪವಾಸಿಯೆನಿಸಿ ಚರಿಸುತ್ತ॥
ಇಹನವನನುಸಂಧಾನವ ನರಿಯ।
ಮಹಿಯನುಸರಣೆಯ ನೀತಿಯನರಿಯ॥
ಆಗುಂ ಜಾಗೆಯ ಬಳಿಕೆಗಳಲ್ಲಿ।
ಯೋಗಕ್ಷೇಮದ ಹೊಲಬುಗಳಲ್ಲಿ॥
ತನುವಿಡಿದಾರಾಗಾದಿಕಮುಳ್ಳ।
ಜನರಂತಿರ್ಪನು ಮನದೊಲವಿಲ್ಲ॥
ಭವಮಾಲೆಯ ತೊಡಕೇನುಂಟದನು।
ವಿವರಿಸೆ ಮುನ್ನವೆ ನೆರೆ ಬಿಟ್ಟವನು॥
ಜೀವನ್ಮುಕ್ತನೆನಿಸಿಕೊಳುತಿಹನು।
ತೀವಿ ನಿಜಾನಂದ ವೆಯೂಗಿಹನು ॥೬॥

ಟೀಕಾ:—ಕಂಡರಿಗೆ=ನೋಡಿದವರಿಗೆ, ಎಲ್ಲರವೋಲ್=ಎಲ್ಲರ ಹಾಗೆ,=ಎಸೆಯುತ್ತ=ಶೋಭಿಸುತ್ತ, ಉಂಡು=ಊಟಮಾಡಿ, ಉಪವಾಸಿಯೆನಿಸಿ=ಊಟಮಾಡದವನೆನಿಸಿ, ಚರಿಸುತ್ತ=ಸಂಚಾರಮಾಡುತ್ತ, ಇಹನು=ಇರುವನು, ಅವನು=ಆತನು, ಅನುಸಂಧಾನವನು=ಧ್ಯಾನವನ್ನು, ಅರಿಯ=ತಿಳಿಯನು, ಮಹಿಯ=ಲೋಕದ, ಅನುಸರಣೆಯ= ನಡಾವಳಿಕೆಯನ್ನು, ನೀತಿಯನು=ನೀತಿಯನ್ನು, ಅರಿಯ=ತಿಳಿಯನು, ಆಗುಂ=ಆಗುವಂಥಾ, ಜಾಗೆಯ=ಲೇಸಾದ, ಬಳಿಕೆಗಳಲ್ಲಿ=ವ್ಯವಹಾರಗಳಲ್ಲಿ, ಯೋಗ=ಅಪ್ರಾಪ್ತವಸ್ತು ಪ್ರಾಪ್ತಿಯಾಗುವಿಕೆ, ಕ್ಷೇಮ=ಪ್ರಾಪ್ತವಸ್ತುವಿನರಕ್ಷಣೆ ಇವುಗಳ, ಹೊಲಬುಗಳಲ್ಲಿ=ಸ್ಥಿತಿಗಳಲ್ಲಿ, ತನುವಿಡಿದ=ಶರೀರಾಭಿಮಾನವುಳ್ಳಂಥಾ, ರಾಗಾದಿಕಮುಳ್ಳ =ರಾಗದ್ವೇಷಾದಿಕಮುಳ್ಳ, ಜನರಂತಿರ್ಪನು=ಜನರಹಾಗೆ ಇರುವನು, ಮನದ=ಮನಸ್ಸಿನ, ಒಲವಿಲ್ಲ=ಪ್ರೀತಿಯಿಲ್ಲ, ಭವಮಾಲೆಯ=ಸಂಸಾರದ, ತೊಡಕು=ಗಂಟು, ಏನುಂಟು=ಏನಿರುವದೋ, ಅದನು=ಅದನ್ನು, ವಿವರಿಸೆ=ವಿಚಾರಮಾಡಲು, ಮುನ್ನವೇ=ಮೊದಲೇ, ನೆರೆ=ಚನ್ನಾಗಿ, ಬಿಟ್ಟವನು=ತ್ಯಾಗಮಾಡಿದವನು, ಜೀವನ್ಮುಕ್ತನು=ಜೀವತ್ವವನ್ನು ತ್ಯಾಗಮಾಡಿದವನೆಂದು, ಎನಿಸಿಕೊಳುತಿಹನು=ಹೇಳಿಸಿಕೊಳ್ಳುತ್ತಿರುವನು, ತೀವಿ=ತುಂಬಿ, ನಿಜಾನಂದವೆ=ಸ್ವರೂಪಾನಂದವೇ, ಆಗಿಹನು=ಆಗಿರುವನು.

ತಾತ್ಪರ್ಯ:—ಉಕ್ತಪ್ರಕಾರ ಜೀವನ್ಮುಕ್ತನು ಹಲವರಿಗೆ ಹಲವು ತೆರವಾಗಿ ತೋರಿಬರುತ್ತಾನೆ. ಅಂದರೆ, ಲೋಕದಜನರು ತಂತಮ್ಮ ಭಾವನಾನು

CC-0. Jangamwadi Math Collection. Digitized by eGangotri

ಸಾರವಾಗಿ ಆತನನ್ನು ಭಾವಿಸುತ್ತಾರೆ. ಅವರಿಗೆ ಅವರಂತೆಯೇ ತೋರುತ್ತಾನೆ. ಮತ್ತು ಅದೃಷ್ಟವಶಾತ್ ಪ್ರಾಪ್ತವಾದ ಅನ್ನ ವಸ್ತ್ರಾದಿಗಳನ್ನು ಸ್ವೀಕರಿಸುತ್ತಾ ಜಗತ್ತಿನಲ್ಲಿ ಸಂಚಾರಮಾಡುವನು. ಅಂದರೆ, ಅನ್ನ ವಸ್ತ್ರಾದಿಗಳನ್ನು ಸ್ವೀಕಾರ ಮಾಡಲು ಭೋಕ್ತೃತ್ವವು ಬರಲಾರದು. ಕಿಂತು ಅಭೋಕ್ತೃವಾಗಿಯೇ ಇರುತ್ತಾನೆ. ಇಲ್ಲಿ "ಉಂಡುಪವಾಸಿ" ಅಂದರೆ ಭೋಕ್ತಾಪುರುಷನಂತೆ ಕಂಡು ಬಂದರೂ ಅಭೋಕ್ತೃವಾಗಿರುತ್ತಾನೆಂಬ ತಾತ್ಪರ್ಯವು. ಮತ್ತು ತನಗಿಂತಲೂ ಬೇರೆ ಯಾವ ದೈವವು ಇಲ್ಲೆಂಬ ನಿಶ್ಚಯವಿದ್ದದರಿಂದ ಯಾವ ದೇವತೆಯನ್ನು ಕುರಿತು ಯಾವ ಅನುಸಂಧಾನವನ್ನು ಮಾಡುವದಕ್ಕೆ ಹೋಗುವದಿಲ್ಲ. ಮತ್ತು ಜಗತ್ತಿನ ಜನರಂತೆ ನಡೆಯುವ ನೀತಿಯನ್ನು ತಿಳಿಯುವದಿಲ್ಲ. ಯಾಕಂದರೆ, ತನಗಿಂತಲೂ ಭಿನ್ನವಾಗಿ ಜಗತ್ತು ಉಂಟೆಂಬ ಭಾವನೆಯಿದ್ದರೆ ಉಕ್ತ ವಿಚಾರ ವಿರುತ್ತಿತ್ತು; ಆ ಭಾವನೆಯೇ ಇಲ್ಲದ್ದರಿಂದ ನೀತಿ ಮೊದಲಾದವುಗಳನ್ನು ತಿಳಿಯುವದಿಲ್ಲ. ಒಂದು ವೇಳೆ ಮುಂದಾಗುವ ಉತ್ತಮ ಕಾರ್ಯಗಳಲ್ಲಿಯೂ ಯೋಗ ಕ್ಷೇಮಾದಿಗಳಲ್ಲಿಯೂ ದೇಹವೇ ನಾನೆಂಬ ಅಜ್ಞಾನಿ ಪುರುಷರು ಹೇಗೆ ರಾಗ ದ್ವೇಷಾದಿಗಳುಳ್ಳವರಾಗಿರುವರೋ; ಹಾಗೆಯೇ ತೋರುವನು. ಹಾಗೆ ತೋರಿದಾಗ್ಯಾದರೂ ಉಕ್ತ ವ್ಯವಹಾರ ವಿಷಯಾದಿಗಳಲ್ಲಿ ಅಜ್ಞರು ಹೇಗೆ ಆಸಕ್ತ ಬುದ್ಧಿಯುಳ್ಳವರಾಗಿರುವರೋ ಹಾಗಿರುವದಿಲ್ಲ. ಕಿಂತು, ಅವುಗಳಲ್ಲಿ ಉದಾಸೀನ ಬುದ್ಧಿಯಿಂದ ಇರುತ್ತಾನೆ. ಪುನಃ ಪುನಃ ಜನನ ಮರಣವೆಂಬ ಸಂಸಾರದಲ್ಲಿ ತಿರುಗುವದಕ್ಕೆ ಕಾರಣವಾದುದು ಮುಖ್ಯವಾಗಿ ಅಜ್ಞಾನವಿರುತ್ತದೆ. ಅದನ್ನು ಈ ಮೊದಲೇ ಜ್ಞಾನಖಡ್ಗದಿಂದ ಸಂಹಾರಮಾಡಿರುತ್ತಾನೆ. ಅಂದರೆ ವಿಪರೀತಾದಿ ಭಾವನಸಹಿತ ಅಜ್ಞಾನವನ್ನು ತ್ಯಾಗಮಾಡಿರುತ್ತಾನೆಂಬ ತಾತ್ಪರ್ಯವು. ಅನಂತರ ವಾಸನಾಕ್ಷಯ ಮನೋನಾಶವನ್ನು ಮಾಡಿಕೊಂಡದ್ದರಿಂದ ಅಖಂಡೈಕರಸ ಸ್ವರೂಪನೇ ಆಗಿರುವನು. ಆದ್ದರಿಂದ ಜೀವನ್ಮುಕ್ತನೆನಿಸುವನು.

ಬಳಿಕ; ಅಂಥಾ ಜೀವನ್ಮುಕ್ತ ಪುರುಷನು ಈಶ್ವರನೇ ಆಗಿರೋಣದರಿಂದ ಅವನನ್ನು ಯಾರು ವಂದಿಸಿ ಪೂಜಿಸುತ್ತಾರೋ, ಅವರು ನಿತ್ಯ ಸುಖವನ್ನು ಹೊಂದುತ್ತಾರೆಂದು ಪ್ರತಿಪಾದಿಸುತ್ತಾರೆ.

ಮೋಹೋಪಾಧಿಕ ಜೀವತೆಯಳಿದು ।
ಊಹಿಸೆ ನಿಜ ಶಾಂತಿಯು ನೆರೆತಳೆದು ।
ಇರುತಿರೆ ದಿವ್ಯಮಹಾಯೋಗಿಯನು ।
ಶರಣು ಪೋಗುವುದೊಲವಂ ಬಯಸುವನು ॥
ವಂದಿಸಿ ಪೂಜಿಸಿ ಕೀರ್ತಿಸಿ ನೋಡಿ ।
ಕುಂದದೆ ಪರಿತುಷ್ಟಿಗಳಂ ಮಾಡಿ ।

CC-0. Jangamwadi Math Collection. Digitized by eGangotri

ಪಡೆವುದು ಬಿಡದಖಿಳೋತ್ತಮ ಗುಣವ ।
ಕೊಡುವವನವನು ಸವಿಯದ ಸುಖಪದವ ॥
ಅಹಮಿಲ್ಲದ ಚಿತ್ತೀಶ್ವರನಾಗಿ ।
ಅಹುದೀಶ್ವರನಿಂದಖಿಳವುದಾಗಿ ॥
ಯೋಗಿಯ ನೋಲಿಸಿದೊಡಿಹ ಪರಸಿದ್ಧಿ ।
ಆಗಳೆ ಕೈಸಾರುವುದು ನಿಬದ್ಧಿ ॥೭॥

ಟೀಕಾ:—ಮೋಹೋಪಾಧಿಕ=ಅವಿದ್ಯೋಪಾಧಿ ಸಂಬಂಧವಾದ, ಜೀವತೆಯ=ಜೀವತ್ವವನು, ಅಳಿದು=ಬಿಟ್ಟು, ಊಹಿಸೆ=ವಿಚಾರಿಸಲು, ನಿಜಶಾಂತಿಯ=ಸ್ವರೂಪ ಸುಖವನ್ನು, ನೆರೆ=ಚನ್ನಾಗಿ, ತಳೆದು=ಹೊಂದಿ, ಇರುತಿರೆ=ಇರಲಾಗಿ, ದಿವ್ಯಮಹಾಯೋಗಿಯನು=ಮಹಾಯೋಗಿ ಪುರುಷನನ್ನು ಕುರಿತು, ಒಲವಂ=ಪ್ರೀತಿಯನ್ನು, ಬಯಸುವವನು=ಇಚ್ಛಿಸುವಂಥವನು, ವಂದಿಸಿ=ನಮಸ್ಕರಿಸಿ, ಪೂಜಿಸಿ=ಪೂಜೆಯನ್ನುಮಾಡಿ, ಕೀರ್ತಿಸಿ=ಕೊಂಡಾಡಿ, ನೋಡಿ=ದರ್ಶನಮಾಡಿ, ಕುಂದದೆ=ಕೊರತೆಯಿಲ್ಲದೆ, ಪರಿತುಷ್ಟಿಗಳಂ=ಸಂತೋಷಗಳನ್ನು, ಮಾಡಿ=ಮಾಡಿ, ಬಿಡದೆ=ತ್ಯಜಿಸದೆ, ಅಖಿಳೋತ್ತಮ=ಸರ್ವೋತ್ತಮ, ಗುಣವ=ಗುಣವನ್ನು, ಪಡೆವುದು=ಹೊಂದುವದು, ಅವನು=ಆತನು, ಸವಿಯದ=ತೀರದ, ಸುಖಪದವ=ಸುಖಸ್ವರೂಪವನ್ನು, ಕೊಡುವನು=ಪ್ರಾಪ್ತಿಮಾಡಿಕೊಡುವನು, ಅಹಮಿಲ್ಲದ=ಅಹಂಕಾರವಿಲ್ಲದ, ಚಿತ್ತೀಶ್ವರೂಪನಾಗಿ=ಜ್ಞಾನರೂಪ ಈಶ್ವರನಾಗಿ, ಈಶ್ವರನಿಂದ=ಪರಮಾತ್ಮನಿಂದ, ಅಖಿಳವುದಾಗಿ=ಸರ್ವವು ಆಗಿರುವದು, ಅಹುದು=ಖರೆಯಾಗಿರುವದು, ಯೋಗಿಯನು=ಯೋಗೀಶ್ವರನನ್ನು, ಒಲಿಸಿದೊಡೆ=ಸಂತೋಷವನ್ನುಂಟುಮಾಡಿದರೆ, ಇಹಪರಸಿದ್ಧಿ=ಇಹಪರ ಲೋಕಗಳ ಸುಖವು, ಆಗಳೆ=ತತ್ಕಾಲಕ್ಕೆ, ಕೈಸಾರುವದು=ಪ್ರಾಪ್ತಿಯಾಗುವದು, ನಿಬದ್ಧಿ=ನಿಶ್ಚಯವು.

ತಾತ್ಪರ್ಯ:—ಅವಿದ್ಯಾಯಾಗಲಿ ಅಥವಾ ಅವಿದ್ಯೆಯ ಕಾರ್ಯವಾದ ಅಂತಃಕರಣವಾಗಲಿ ಉಪಾಧಿಯುಳ್ಳಂಥಾ ಜೀವನು ಸದ್ಗುರುಗಳಿಗೆ ಶರಣಾಗತನಾಗಿ ಜ್ಞಾನವನ್ನು ಪಡೆದು ಅವಿದ್ಯಾ ನಿವೃತ್ತಿಮಾಡಿಕೊಂಡು, ರಾಗದ್ವೇಷಾದಿ ದುಃಖರೂಪ ಜೀವತ್ವವನ್ನು ಕೆಡಿಸಿ, ಕೇವಲ ಸಚ್ಚಿದಾನಂದ ಸ್ವರೂಪ ನಿಜ ಶಾಂತಿಯಿಂದ ಇರುವನು. ಅಂಥಾ ಮಹಾ ಯೋಗೀಶ್ವರನನ್ನು ಕುರಿತು ಯಾವಾತನು ಅವರ ಕೃಪೆಯನ್ನು ಇಚ್ಛೆಮಾಡುತ್ತಾನೋ, ಅವನು ಮೊದಲು ಅವರನ್ನು ಕುರಿತು ಶರಣಹೋಗತಕ್ಕದ್ದು. ಮತ್ತು ಅವರನ್ನು ಕುರಿತು ಸಾಷ್ಟಾಂಗ ನಮಸ್ಕಾರಮಾಡಿ ಪೂಜಿಸಿ ಸ್ತುತಿಮಾಡಿ, ಏನೊಂದು ಕೊರತೆಯಾಗದಂತೆ ಸಂತೋಷಗಳನ್ನುಂಟುಮಾಡತಕ್ಕದ್ದು. ಮತ್ತು ಅವರಿಂದ ಸರ್ವೋತ್ತಮವಾದ ಗುಣವ ಅಂದರೆ, ಜ್ಞಾನವನ್ನು ಪ್ರಾಪ್ತಿಮಾಡಿಕೊಳ್ಳತಕ್ಕದ್ದು. ಆದ್ದರಿಂದ

CC-0. Jangamwadi Math Collection. Digitized by eGangotri

ಅವನು ಎಂದೂ ತೀರದಂಥಾ ಸುಖವನ್ನು ಪ್ರಾಪ್ತಮಾಡಿಕೊಡುವನು. ಅಂದರೆ ಮೊದಲಿಪ್ಪ ಸುಖವನ್ನೇ ಪ್ರಕಟಮಾಡಿದನೆಂಬ ಭಾವವು. ಅಂಥಾ ಯೋಗೀಶ್ವರನು ಅಹಂಕಾರ ಉಪಾಧಿರಹಿತವಾದ ಕೇವಲ ಚಿದ್ರೂಪ ಈಶ್ವರನಾಗಿರುತ್ತಾನೆ. ಮತ್ತು ಈಶ್ವರನಿಂದಲೇ ಈ ಸಕಲ ಪ್ರಪಂಚವು ಆಗಿರುತ್ತದೆ. ಆದ್ದರಿಂದ ಅಂಥಾ ಯೋಗಿಯನ್ನು ಒಲಿಸಿಕೊಂಡರೆ, ಇಹಲೋಕ ಪರಲೋಕ ಸುಖಗಳು ನಿಶ್ಚಯವಾಗಿ ಪ್ರಾಪ್ತಿಯಾಗುತ್ತದೆ. ಆದ್ದರಿಂದ ಮುಮುಕ್ಷುಗಳು ಅವಶ್ಯ ಅಂಥಾ ಯೋಗೀಶ್ವರನನ್ನು ಕುರಿತು ಶರಣುಹೋಗಿ ತಮ್ಮ ಜನ್ಮ ಸಾರ್ಥಕವನ್ನು ಮಾಡಿಕೊಳ್ಳಬೇಕೆಂಬ ತಾತ್ಪರ್ಯವು.

ಬಳಿಕ; ಅಂಥಾ ದಿವ್ಯ ಮಹಾ ಯೋಗೀಶ್ವರ ಮಹಾತ್ಮೆಯನ್ನು ವಿಶೇಷವಾಗಿ ವರ್ಣಿಸುತ್ತಾರೆ.

ನೆರೆತಿಳಿ ಸುತ ದೀನದ್ವಯಯೋಗಿ ।
ಅರಿದಾಗಳೆ ಮುಕ್ತನು ತಾನಾಗಿ ॥
ಈಕ್ಷಿಸಲೆಲ್ಲಾ ನಿರ್ಮಳವಾದ ।
ಸಾಕ್ಷಾನ್ನಿರ್ವಾಣಕ್ಕೆಣೆಯಾದ ॥
ತುರ್ಯಪದದ ನಿಬಿಡಭ್ಯಾಸದೊಳು ।
ವರ್ಯನರಿವ ನೆಲ್ಲವನಳ್ತಿಯೊಳು ॥
ಪೂರ್ವದ ಜಾತಿ ಸ್ಮರಣಾದಿಕವ ।
ಸಾರ್ವಭುವನ ಚೇಷ್ಟಾಸಾಂಗಿಕವ ॥
ಕಲ್ಪನೆಯಿಂ ಪರಿಕಲ್ಪಿಸಲಕ್ಕು ।
ಕಲ್ಪ ಶತಂಗಳನುಳಿದಿರಲಕ್ಕು ॥
ಒಲಿದೊಡೆ ಯೊಲಿದೊಲಿದಂತುಟೆಯಕ್ಕು ।
ಬಳಿಕೊಲ್ಲ ದೊಡಿದ್ದಂತಿರಬಕ್ಕು ॥೮॥

ಟೀಕಾ:—ಹೇ ಸುತ=ಎಲೈ ಮಗನೇ, ನೀನೂ=ನೀನು, ನೆರೆ=ಚನ್ನಾಗಿ, ತಿಳಿ=ಅರಿ, ಅದ್ವಯಯೋಗಿ=ಐಕವಸ್ತುವಿನಲ್ಲಿ ಸ್ಥಿತಿಯುಳ್ಳವನು, ಅರಿದಾಗಲೆ=ತಿಳಿದಕೂಡಲೇ, ಮುಕ್ತನು=ಮುಕ್ತನು, ತಾನಾಗಿ=ತಾನಾಗಿ, ಈಕ್ಷಿಸಲು=ವಿಚಾರಮಾಡಲು, ಎಲ್ಲಾ, ಸರ್ವ, ನಿರ್ಮಳವಾದ=ಸ್ಪಷ್ಟವಾದ, ಸಾಕ್ಷಾತ್=ಪ್ರತ್ಯಕ್ಷ ನಿರ್ವಾಣಕ್ಕೆ=ಮೋಕ್ಷಕ್ಕೆ, ಎಣೆಯಾದ=ಸಮಾನವಾದ, ತುರ್ಯಪದದ=ತುರ್ಯಾವಸ್ಥೆಯ, ನಿಬಿಡ=ದಟ್ಟವಾದ, ಅಭ್ಯಾಸದೊಳು=ಅಭ್ಯಾಸದಲ್ಲಿ, ವರ್ಯನು=ಶ್ರೇಷ್ಠನು, ಎಲ್ಲವನ್ನು=ಸರ್ವವನ್ನು, ಪೂರ್ವದ=ಮೊದಲಿನ, ಜಾತಿ=ಜನ್ಮಾಂತರಗಳ, ಸ್ಮರಣಾದಿಕವ=ನೆನಪುಗಳನ್ನು, ಅಳ್ತಿಯೊಳು=ಸರಿಯಾಗಿ, ಅರಿವನು=ತಿಳಿಯುವನು, ಸಾರ್ವ=ಸಮಸ್ತ, ಭುವನ=ಲೋಕಗಳ, ಚೇಷ್ಟಾಸಾಂಗಿಕವ=ಕ್ರಮ

CC-0. Jangamwadi Math Collection. Digitized by eGangotri

ವಾದ ವ್ಯಾಪಾರವನ್ನು, ಕಲ್ಪನೆಯಿಂ=ಸಂಕಲ್ಪದಿಂದ, ಪರಿಕಲ್ಪಿಸಲಕ್ಕು=ಉಂಟು ಮಾಡಬಹುದು, ಕಲ್ಪಶತಂಗಳನು=ನೂರುಕಲ್ಪಗಳನ್ನು, ಉಳಿದು=ಬಿಟ್ಟು ಇರಲಕ್ಕು=ಇರಬಹುದು, ಒಲಿದೊಡೆ=ತನಗೆಪ್ರೀತಿಇದ್ದರೆ, ಒಲಿದೊಲಿದಂತುಟಿಯಕ್ಕು=ಸಂತೋಷವಾದ ಹಾಗೆಲ್ಲಾ ಇರಬಹುದು, ಬಳಿಕ=ಅನಂತರ, ಒಲ್ಲದೊಡೆ=ಇಚ್ಛೆಯಿರದಿದ್ದರೆ, ಇದ್ದಂತಿರಬಕ್ಕು=ಇದ್ದಹಾಗೆ ಇರಬಹುದು.

ತಾತ್ಪರ್ಯ:—ಎಲೈ ಶಿಷ್ಯನೇ! ಕೇಳು. ಅಖಂಡ ಸಚ್ಚಿದಾನಂದ ಸ್ವರೂಪವೇ ನಾನೆಂಬ ನಿಶ್ಚಯ ಜ್ಞಾನವುಳ್ಳ ಯೋಗಿಯು ತನ್ನ ಸ್ವರೂಪವನ್ನು ಯಾವಾಗ್ಯೆ ತಿಳಕೊಂಡನೋ, ಆಗ್ಯೆ ಮುಕ್ತನಾಗಿರುತ್ತಾನೆ. ವಿಚಾರವನ್ನು ಮಾಡಿ ನೋಡಲು ವರ್ತಮಾನಕಾಲದಲ್ಲಿ ಯಾರಾದರೂ ಆ ಮೋಕ್ಷಕ್ಕೆ ಸಮಾನವಾದ ಅತಿಪರಿಶುದ್ಧವಾದಂಥಾ ತುರ್ಯಾವಸ್ಥೆಯ ಅಭ್ಯಾಸವನ್ನು ಮಾಡುತ್ತಿರುತ್ತಾನೆ. ಅಂದರೆ, ಯಾವಾಗಲೂ ಅಹಂ ಬ್ರಹ್ಮಾಸ್ಮಿಯೆಂಬದಾಗಿ ಬ್ರಹ್ಮಾಭಿನ್ನ ಪ್ರತ್ಯಾಗಾತ್ಮ ಸ್ವರೂಪಾನಸಂಧಾನ ಮಾಡುತ್ತಿರುತ್ತಾನೆ. ಇಂಥ ಯೋಗವನ್ನು ಮಾಡುವದರಿಂದ ಅನೇಕ ಜನ್ಮಾಂತರ ಸ್ಮೃತಿಯು ಆಗುತ್ತದೆ.ಮತ್ತುಎಲ್ಲ ಲೋಕಗಳನ್ನು ಕೂತಲ್ಲೇ ಕೂತು ನಡಿಸುವಂಥಾ ಸಾರ್ವಭೌಮತ್ವವೂ ಬರುವುದು. ಅಂದರೆ ಎಲ್ಲ ಲೋಕಗಳ ವ್ಯವಸ್ಥೆಯನ್ನು ತನ್ನ ಕಲ್ಪನೆಯಿಂದಲೇ ಆಳಬಹುದು. ಮತ್ತು ತಾನಿರಬೇಕೆಂಬ ಇಷ್ಟವಿದ್ದರೆ, ತನಗೆ ಸಂತೋಷವಾಗುವವರೆಗೂ ಇರಬಹುದು. ಇಷ್ಟವಿರದಿದ್ದರೆ ಇದ್ದ ಹಾಗೇ ಇರಬಹುದು. ಅಂದರೆ, ಸಾರ್ವಭೌಮನು ರಾಜನು ಪರಾಧೀನನಾಗದೆ ಹೇಗೆ ಸ್ವತಂತ್ರವಾಗಿರುವನೋ ಹಾಗೆ ಇವನಾದರೂ ಸರ್ವಾತ್ಮತತ್ವದಿಂದ ಸರ್ವಲೋಕಗಳ ಸಾರ್ವಭೌಮನಾದ್ದರಿಂದ ಇವನ ಮೇಲೆ ಆಜ್ಞೆಯನ್ನು ಮಾಡುವವರು ಯಾರೂ ಇಲ್ಲ. ತನ್ನ ಇಚ್ಛಾನುಸಾರ ಇರಬಹುದು.

ಬಳಿಕ; ಯೋಗೀಶ್ವರನ ಮಹಾತ್ಮೆಯನ್ನು ಪ್ರತಿಪಾದಿಸುವಂಥಾ ಇತಿಹಾಸಗಳು ಅನೇಕವುಂಟೆಂದೂ ಬೇಕಾದ ಸಿದ್ಧಿಯನ್ನು ಪಡೆಯಬಹುದೆಂದೂ ಈ ಪದ್ಯದಲ್ಲಿ ಹೇಳುತ್ತಾರೆ.

ವರತನುಜನೆ ಕೇಳೀಯರ್ಥಕ್ಕೆ ।
ಪರಿಕಿಸಲರಿದನ ಸಾಮರ್ಥ್ಯಕ್ಕೆ ॥
ಮನುಮುನಿ ಸಿದ್ಧ ಮಹಾಯೋಗಿಗಳ ।
ದನುಜ ದಿವಿಜ ಗಂಧರ್ವಾದಿಗಳ ॥
ಮತ್ತೆಯು ನಾನಾವಿಧ ಶಕ್ತಿಗಳ ।
ಮೊತ್ತದ ನರಕುಲ ನಾಗಾದಿಗಳ ॥
ಪೇಳುವ ಇತಿಹಾಸಂ ಫಲವುಂಟು ।
ಕಾಳುವ ಸಿದ್ಧಿಗೆ ವಾಸನೆಯುಂಟು ॥

CC-0. Jangamwadi Math Collection. Digitized by eGangotri

ತವೆ ತಿಳಿ ತದ್ಯೋಗದ ಬಲದಿಂದ |
ಅವರ ಸಿದ್ಧಿ ಪಡೆದ ರದದಿಂದ ||
ಇಚ್ಛೈಸಿದೊಡಂ ತಪ್ಪದು ತಾನು |
ಸ್ವಚ್ಛಂ ಯೋಗದ ಬಲನಿದು ತಾನು ||೯||

ಟೀಕಾ:—ವರತನುಜನೆ=ಶ್ರೇಷ್ಠ ಶಿಷ್ಯನೇ! ಕೇಳ್=ಏಕಾಗ್ರದಿಂದಾಲಿಸು, ಈ ಯರ್ಥಕ್ಕೆ=ಈಗ ಪೇಳಿದ ಅರ್ಥಕ್ಕೆ, ಪರಿಕಿಸಲರಿದನ=ತಿಳಿಯಲಿಕ್ಕೆ ಬಾರದನ ಸಾಮರ್ಥ್ಯಕ್ಕೆ=ಮಹಿಮೆಗೆ, ಮನು=ಮನು, ಮುನಿ=ಮುನಿ, ಸಿದ್ಧಮಹಾಯೋಗಿಗಳ=ಸಿದ್ಧ ಪುರುಷರ, ದನುಜ=ದೈತ್ಯರ, ದಿವಿಜ=ದೇವತೆಗಳ, ಗಂಧರ್ವಾದಿಗಳ=ಗಂಧರ್ವಮೊದಲಾದವರ, ಮತ್ತೆಯು=ಅನಂತರ, ನಾನಾವಿಧ=ಅನೇಕ ಪ್ರಕಾರದ ಶಕ್ತಿಗಳ=ಶಕ್ತಿಗಳ, ಮೊತ್ತದ=ಸಮೂಹದ, ನರಕುಲ=ಮನುಷ್ಯಕುಲದ, ನಾಗಾದಿಗಳ=ಪಾತಾಳಲೋಕವಾಸಿಗಳ, ಪೇಳುವ=ಹೇಳುವಂಥಾ, ಇತಿಹಾಸಂ=ಕಥೆಯು, ಪಲವುಂಟು=ಅನೇಕವಾಗಿರುವವು, ತಾಳುವ=ಹೊಂದುವ, ಸಿದ್ಧಿಗೆ=ಸಿದ್ಧಿಗೆ, ವಾಸನೆಯುಂಟು=ವಾಸನೆಯಿರುವದು, ತವೆ=ಚನ್ನಾಗಿ, ತಿಳಿ=ಅರಿ, ತದ್ಯೋಗದ=ಆಯೋಗ, ಬಲದಿಂದ=ಸಾಮರ್ಥ್ಯದಿಂದ, ಅವರು=ಮನ್ವಾದಿಗಳು, ಆ ಸಿದ್ಧಿವಡೆದರು=ಮತ್ತು ಆ ಸಿದ್ಧಿಗಳನ್ನು ಹೊಂದಿದರು, ಅದರಿಂದ ಈ ಕಾರಣದಿಂದ, ಇಚ್ಛೈಸಿದೊಡಂ=ಇಚ್ಛೆಯನ್ನು ಮಾಡಿದರೆ, ತಪ್ಪದು=ತಾನು ತಪ್ಪಲಾರದು, ಇದುತಾನು=ಈಗ ಹೇಳಿರುವದು, ಸ್ವಚ್ಛಂ=ಪರಿಶುದ್ಧವಾದ, ಯೋಗದ ಬಲನು=ಯೋಗಸಾಮರ್ಥ್ಯವು.

ತಾತ್ಪರ್ಯ:— ಎಲೈ ಮಗನೇ ಕೇಳು. ತಿಳಿಯಲಿಕ್ಕೆ ಅಶಕ್ಯವಾದಂಥಾ ಅಂಥಾ ಮಹಾ ಪುರುಷನ ಸಾಮರ್ಥ್ಯವನ್ನು ಪ್ರತಿಪಾದಿಸುವ ಇತಿಹಾಸಗಳು ಅನೇಕವುಂಟು. ಅವು ಯಾವವು ಅಂದರೆ, ಮನು ಇಕ್ಷ್ವಾಕು ರಾಜನನ್ನು ಕುರಿತು ಉಪದೇಶ ಮಾಡಿರುತ್ತಾನೆ. ಆ ಮನು, ಭೃಗು, ವಸಿಷ್ಠ, ಬೃಶುಂಡು, ಉದ್ದಾಲಕಾದಿ ಮುನಿಗಳು, ಕಪಿಲಾದಿ ಸಿದ್ಧರಾದ ಮಹಾ ಪುರುಷರು, ಬಲಿ, ಪ್ರಲ್ಹಾದ, ಭಾಸವಿಲಾಸ ಮೊದಲಾದ ದೈತ್ಯರು, ಕಚ, ಬೃಹಸ್ಪತಿ, ಇಂದ್ರ ಮೊದಲಾದ ದೇವತೆಗಳು, ಹಾಹಾ ಹೂಹೂ ಮೊದಲಾದ ಗಂಧರ್ವರು, ಸರಸ್ವತಿ, ರಾಕ್ಷಸಿ ಮಹೇಶ್ವರ್ಯಾದಿ ಶಕ್ತಿಗಳು, ಪದ್ಮಭೂಪಾಲ, ಜನಕ, ಶುಕ, ಲವಣ, ಶಿಖಿಧ್ವಜ ಮೊದಲಾದ ಮನುಷ್ಯರು, ಪಾತಾಳಲೋಕ ವಾಸಿಗಳಾದ ವಾಸುಕಿ ಮೊದಲಾದವರು, ಇವರುಗಳ ಇತಿಹಾಸಗಳು ಅನೇಕವುಂಟು. ಅವುಗಳಲ್ಲಿ ಅವರು ಯಾವ ಯೋಗದಿಂದ ಯಾವ ಸಿದ್ಧಿಯನ್ನು ಪಡೆದರೆಂಬ ವಿಷಯವನ್ನು ಯೋಗವಾಸಿಷ್ಠವೆಂಬ ಗ್ರಂಥದಲ್ಲಿ ಚನ್ನಾಗಿ ಪ್ರತಿಪಾದನ ಮಾಡಿರುತ್ತದೆ. ಅಲ್ಲಿ ನೋಡಿಕೊಳ್ಳಬಹುದು, ಮತ್ತು ತಾನು ಸಿದ್ಧಿಯನ್ನು ಅಪೇಕ್ಷಿಸಿದರೆ ಮಂತ್ರಾದಿಗಳನ್ನು ಅಭ್ಯಾಸ

CC-0. Jangamwadi Math Collection. Digitized by eGangotri

ಮಾಡಿ ಅದರ ದ್ವಾರಾ ಅವುಗಳನ್ನಾದರೂ ಪಡೆಯುಬಹುದು. ಮತ್ತು ಸರ್ವರೂ ಯೋಗಬಲದಿಂದಲೇ ಸಕಲಸಿದ್ಧಿಗಳನ್ನು ಹೊಂದಿರುವರು, ಆದ್ದರಿಂದ ಸಿದ್ಧಿಯಿಚ್ಛೆಯನ್ನು ಮಾಡಿ ಯೋಗವನ್ನು ಮಾಡಿದರೆ, ಆ ಸಿದ್ಧಿಯು ಪ್ರಾಪ್ತಿಯಾಗದೆ ಹೋಗಲಾರದು, ಕಿಂತು, ಅವಶ್ಯವಾಗಿಯೇಪ್ರಾಪ್ತಿಯಾಗುತ್ತದೆಂಬ ಭಾವವು.

ಬಳಿಕ; ಗ್ರಂಥದಲ್ಲಿ ಪ್ರತಿಪಾದಿಸಲ್ಪಟ್ಟ ವಿಷಯವನ್ನು ಸಂಕ್ಷೇಪವಾಗಿ ತಿಳಿಸಿ, ಗ್ರಂಥೋಪಸಂಹಾರವನ್ನು ಮಾಡುತ್ತಾರೆ.

ಬಗೆದೋರಿಕೆ ಜಗದುದ್ಭವವೆಂದು ।
ಬಗೆ ವಿಸ್ತರಿಸಿದುದೇ ಸ್ಥಿತಿಯೆಂದು ॥
ಭಾವಿಸೆ ಬಗೆಗೆಡಲದು ಲಯವೆಂದು ।
ಜೀವೇಶ್ವರಿಗೇಕತ್ವ ಮಿದೆಂದು ॥
ನಿರ್ವಾಣದ ನಿಜಮಂ ತಿಳುಪಿದೆವು ।
ಸರ್ವ ಸುಭೂಮಿಕೆಗಳಂ ಪೇಳಿವೆವು ॥
ಯೋಗದ ಸಿದ್ಧಿಗಳಂ ತೋರಿದೆವು ।
ಯೋಗಿಯ ಸುಸ್ಥಿತಿಯಂ ತೋರಿದೆವು ॥
ನಿನಗದರೊಳ್ ನಿಜಮತಿ ಸಲೆಸಂದು ।
ತನುಜನೆ ನೀನೊಲಿದಂತಿಹುದೆಂದು ॥
ಪರಿಕಲ್ಪನೆಗಳ ನುಳಿದಿಹುದೆಂದು ।
ಒರೆದಂ ಶ್ರೀಮದ್ಗುರುವರನಂದು ॥೧೦॥

ಟೀಕಾ:— ಬಗೆದೋರಿಕೆ=ಮನಸ್ಸಿನ ಪ್ರತೀತಿಯೇ, ಜಗದುದ್ಭವವೆಂದು=ಜಗತ್ತಿನ ಉತ್ಪತ್ತಿಯೆಂದು, ಬಗೆ=ಭಾವನೆಯು, ವಿಸ್ತರಿಸಿದುದೇ=ಪಸರಿಸಿದ್ದೇ, ಸ್ಥಿತಿಯೆಂದು=ಜಗತ್ತಿನ ಇರುವಿಕೆಯೆಂದು, ಭಾವಿಸೆ=ವಿಚಾರ ಮಾಡಲು, ಬಗೆಗೆಡಲ್=ಮನಸ್ಸು ಕೆಡಲು, ಅದು=ಜಗತ್ತು, ಲಯವೆಂದು=ನಾಶವೆಂದು, ಜೀವೇಶರಿಗೆ=ಜೀವಾತ್ಮ ಪರಮಾತ್ಮರಿಗೆ, ಏಕತ್ವಮಿದೆಂದು=ಅಭೇದವೆಂದು, ನಿರ್ವಾಣದ=ಮೋಕ್ಷದ, ನಿಜಮಂ=ಸ್ವರೂಪವನ್ನು, ತಿಳುಪಿದೆವು=ಹೇಳಿದೆವು, ಸರ್ವ=ಎಲ್ಲ, ಸುಭೂಮಿಕೆಗಳಂ=ಜ್ಞಾನ ಭೂಮಿಕೆಗಳನ್ನು, ಪೇಳಿದೆವು=ಹೇಳಿದೆವು, ಯೋಗದ=ಚಿತ್ತೈಕಾಗ್ರ್ಯದ, ಸಿದ್ಧಿಗಳಂ=ಸಿದ್ಧಿಗಳನ್ನು, ತೋರಿದೆವು=ತೋರಿಸಿದೆವು, ಯೋಗಿಯ=ಯೋಗೀಶ್ವರನ, ಸುಸ್ಥಿತಿಯಂ=ಉತ್ತಮ ಸ್ಥಿತಿಯನ್ನು, ತೋರಿದೆವು=ತೋರಿಸಿದೆವು, ನಿನಗೆ=ನಿನಗೆ, ಅದರೊಳ್=ಅದರಲ್ಲಿ, ನಿಜಮತಿ=ಖರೆಬುದ್ಧಿಯು, ಸಲೆ=ಚನ್ನಾಗಿ, ಸಂದು=ಸೇರಲೆಂದು, ತನುಜನೆ=ಎಲೈ ಮಗನೇ ! ನೀನು=ನೀನು, ಒಲಿದಂತೆ=ಪ್ರೀತಿಯಿದ್ದಂತೆ, ಇಹುದೆಂದು=ಇರುವದೆಂದು, ಪರಿಕಲ್ಪನೆಗಳನು=ಅನೇಕ ಚಿಂತನವನ್ನು, ಉಳಿದು=ಬಿಟ್ಟು,

CC-0. Jangamwadi Math Collection. Digitized by eGangotri

ಇಹುದೆಂದು=ಇರುವದೆಂದು, ಅಂದು=ಆ ಹೊತ್ತಿನಲ್ಲಿ, ಶ್ರೀಮದ್ಗುರುವರನು=ಗುರುಶ್ರೇಷ್ಠನು, ಒರೆದಂ=ಉಪದೇಶಿಶಿಸಿದನು.

ತಾತ್ಪರ್ಯ:— ಎಲೈ ಶಿಷ್ಯನೇ! ಕೇಳು. ಹೇಳಲ್ಪಟ್ಟ ಸರ್ವ ಗ್ರಂಥದ ಸಾರವನ್ನು ನಿನಗೋಸುಗ ಸಂಕ್ಷೇಪವಾಗಿ ಹೇಳುತ್ತೇನೆ. ಏನಂದರೆ, ಅಹಂ ಇದಂ ಲಕ್ಷಣಾತ್ಮಕವಾದ ಮನಸ್ಸಿನ ಉತ್ಪತ್ತಿಯೇ ಜಗತ್ತಿನ ಉತ್ಪತ್ತಿಯು. ಮನಸ್ಸಿನ ಸ್ಥಿತಿಯೇ ಜಗತ್ತಿನ ಇರುವಿಕೆಯು. ಮನಸ್ಸಿನ ನಾಶವೇ ಜಗತ್ತಿನ ನಾಶವು. ಮತ್ತು ಜೀವೇಶ್ವರರು ಉಪಾಧಿವಶಾತ್ ಭೇದವಾಗಿದ್ದಂತೆ ಕಂಡು ಬಂದರೂ ಸ್ವರೂಪತಃ ಅಭೇದ ರೂಪರಾಗಿರುವರು. ಅಂಥಾ ಅಖಂಡ ಸ್ವರೂಪವೇ ನಾನೆಂದು ನಿಶ್ಚಯಿಸುವದೇ ಮೋಕ್ಷಸ್ವರೂಪವು. ಈ ಯಾವತ್ತು ವಿಷಯಗಳನ್ನು ತಿಳಿಸಿದೆವು ಮತ್ತು ಸುಖೇಚ್ಛೆ ಮೊದಲಾದ ಭೂಮಿಕೆಗಳನ್ನು ಪ್ರತಿಪಾದನ ಮಾಡಿದೆವು. ಮತ್ತು ಯೋಗವನ್ನು ಮಾಡುತ್ತಿರಲಿಕ್ಕೆ ಅದರಿಂದ ಪ್ರಾಪ್ತಗಳಾಗುವ ಸಿದ್ಧಿಗಳನ್ನು ಹೇಳಿದೆವು. ತದನಂತರ ಯೋಗಸಿದ್ಧಿ ಪುರುಷನ ಚರಿತ್ರವನ್ನು ಹೇಳಿದೆವು. ಯಾಕೆಂದರೆ, ನಿನ್ನ ಬುದ್ಧಿಯು ನಿಜಸ್ವರೂಪದಲ್ಲಿ ನಿಲ್ಲಲಿಯೆಂದು ಹೇಳಿದೆವು. ಆದ್ದರಿಂದ ನೀನು ಇನ್ನು ಮೇಲೆ ಸಂಕಲ್ಪ ವಿಕಲ್ಪಗಳನ್ನು ಬಿಟ್ಟು, ಅಖಂಡ ಸ್ವರೂಪದಲ್ಲಿ ಪ್ರೇಮವಿದ್ದಂತೆ ಇರಬಹುದು. ಆ ಹೊತ್ತಿನಲ್ಲಿ ಸದ್ಗುರುಗಳು ಶಿಷ್ಯನಿಗೆ ಉಕ್ತಪ್ರಕಾರ ಉಪದೇಶವನ್ನು ಮಾಡಿದರು.

ಬಳಿಕ; ಶಿಷ್ಯನು ಸದ್ಗುರುಗಳ ಉಪದೇಶದಿಂದ ತನಗುಂಟಾದ ಆನಂದವನ್ನೂ, ಗುರುಗಳ ಉಪಕಾರವನ್ನೂ ಕೊಂಡಾಡುತ್ತ ಉಪಚಾರವಿಲ್ಲೆಂಬ ಗುರುದಕ್ಷಿಣೆಯನ್ನು ಒಪ್ಪಿಸುತ್ತಾನೆ,

ಈ ಪರಿಯೊಳ್ತಿಳುಪಿದ ಗುರುವರನ ।
ಶ್ರೀ ಪಾದಕ್ಕೆ ನಮಿಸಿ ಪರತರನ ॥
ಬಿನ್ನೈಸಿದ ನೊಸಗೆಯೊಳಾ ಸುತನು ।
ತನ್ನ ನಿಜ ಸ್ಥಿತಿಯೊಳು ಸಂಗತನು ॥
ಗುರುವರ ನೀನಿಂತೆನ ಗೊಲವಿಂದ ।
ಪರಮಾರ್ಥವ ನರುಪಿದ ಕಥದಿಂದ ॥
ಭವಸಾಗರಮಂ ದಾಂಟಿದೆನಿಂತು ।
ಶಿವ ಸಂಪದ ಸಮನಿಸಿತೆನಗಿಂತು ॥
ಅದು ವಾಂಙ್ಮನಸಾತೀತವೆಯಾಗಿ ।
ಅದು ನಿನ್ನೀ ಶ್ರೀ ಪಾದುಕೆಯಾಗಿ ॥
ಬೇರುಪಚಾರಂ ನಿನಗೊಂದಿಲ್ಲ ।
ಬೇರಿನ್ನೇಸನುಸುರಲಿಂಬಿಲ್ಲ ॥೧೧॥

CC-0. Jangamwadi Math Collection. Digitized by eGangotri

ಟೀಕಾ:— ಈ ಪರಿಯೊಳು=ಈ ರೀತಿಯಲ್ಲಿ, ತಿಳುಪಿದ=ತಿಳಿಸಿದ, ಗುರುವರನ=ವಿಹಿತಗುರುವಿನ, ಶ್ರೀಪಾದಕ್ಕೆ=ಪಾದಕಮಲಗಳಿಗೆ, ನಮಿಸಿ=ನಮಸ್ಕಾರ ಮಾಡಿ, ಪರತರನ=ಸರ್ವೋತ್ಕೃಷ್ಟನನ್ನು ಕುರಿತು, ತನ್ನ=ಸ್ವಕೀಯ, ನಿಜಸ್ಥಿತಿಯೊಳು=ನಿಜಸ್ವರೂಪದಲ್ಲಿ, ಸಂಗತನು=ಕೂಡಿದವನಾದ, ಆಸುತನು=ಶಿಷ್ಯನು, ಒಸಗೆಯೊಳು=ಪ್ರೀತಿಯಿಂದ, ಬಿನ್ನೈಸಿದನು=ಪ್ರಾರ್ಥನೆಮಾಡಿದನು. ಗುರುವರ=ಗುರುಶ್ರೇಷ್ಠನೇ, ನೀನು=ನೀನು, ಇಂತು=ಈ ಪ್ರಕಾರ, ಎನಗೆ=ನನಗೆ, ಒಲವಿಂದ=ಪ್ರೀತಿಯಿಂದ, ಪರಮಾರ್ಥವನು=ಪರಬ್ರಹ್ಮತತ್ವವನ್ನು, ಅರುಪಿದ=ತಿಳಿಸಿದ, ಕಥದಿಂದ=ಕಾರಣದಿಂದ, ಭವಸಾಗರಮು=ಸಂಸಾರ ಸಮುದ್ರವನ್ನು, ದಾಂಟಿದೆನು=ಪಾರಾದೆನು, ಇಂತು=ಈ ರೀತಿ ಎನಗೆ=ನನಗೆ ಶಿವಸಂಪದ=ಶಿವನೈಶ್ವರ್ಯವು, ಸವನಿಸಿತು=ಪ್ರಾಪ್ತವಾಯಿತು, ಇಂತು=ಈ ಪ್ರಕಾರ, ಅದು=ಆ ಸಂಪದವು, ವಾಙ್ಮನಸ್=ವಾಕ್ಕುಮನಸ್ಸುಗಳಿಗೆ, ಅತೀತವೆಯಾಗಿ=ಮೀರಿದ್ದಾಗಿ, ಅದು=ಆ ಸಂಪದವು, ನಿನ್ನೀ=ನಿನ್ನ ಸಂಬಂಧವಾದ, ಈ ಶ್ರೀ ಪಾದುಕೆಯಾಗಿ=ಜ್ಞಾನಪಾದುಕೆಯಾಗಿರುವದರಿಂದ, ನಿನಗೆ=ನಿನಗೆ, ಬೇರುಪಚಾರಂ=ಬೇರೆ ಸನ್ಮಾನವು, ಒಂದಿಲ್ಲ=ಒಂದಾದರೂ ಇಲ್ಲ. ಬೇರೆ=ಭಿನ್ನವಾಗಿ, ಇನ್ನೇನನು=ಮತ್ತೊಂದನ್ನು, ಉಸುರಲು=ಆಡಲು, ಇಂಬಿಲ್ಲ=ಸ್ಥಾನವಿಲ್ಲ.

ತಾತ್ಪರ್ಯ:— ಉಕ್ತ ಪ್ರಕಾರ ಶಿಷ್ಯನನ್ನು ಕುರಿತು ಗುರುಗಳು ಬ್ರಹ್ಮೋಪದೇಶವನ್ನು ಮಾಡಲು; ಆಗ ಶಿಷ್ಯನು ತನ್ನ ಅಖಂಡಾನಂದ ಬ್ರಹ್ಮಾಭಿನ್ನಮಾದ ಪ್ರತ್ಯಗಾತ್ಮಸ್ವರೂಪದಲ್ಲಿ ತತ್ಪರನಾಗಿ ಅತಿಪ್ರೇಮಭರದಿಂದ ಕೂಡಿದವನಾಗಿ ಗುರುಗಳನ್ನು ಕುರಿತು ನಮಸ್ಕರಿಸಿ ಸ್ತುತಿಸುತ್ತಾನೆ. ಏನಂದರೆ, ಎಲೈ ಸದ್ಗುರುನಾಥನೇ ! ನೀನು ಕೃಪೆಯಿಂದ ಆ ಪರಬ್ರಹ್ಮ ತತ್ವವನ್ನು ತಿಳಿಸೋಣದರಿಂದಲೇ ನಾನು ಈ ಜನನ ಮರಣರೂಪ ಭವಸಾಗರನ್ನು ದಾಂಟಿದೆನು. ಇಲ್ಲದಿದ್ದರೆ, ಈ ಸಾಗರದಲ್ಲಿಯೇ ಸುತ್ತುತ್ತಾ ಇದ್ದೆನು. ಮತ್ತು ಅಖಂಡಾನಂದರೂಪ ಶಿವನ ಸಂಪದವೂ ಪ್ರಾಪ್ತಿಯಾಯಿತು. ಅರ್ಥಾತ್ ಅತ್ಯಂತ ದುಃಖನಿವೃತ್ತಿ ಪರಮಾನಂದ ಪ್ರಾಪ್ತಿರೂಪ ಮೋಕ್ಷವು ಪ್ರಾಪ್ತಿಯಾಯಿತೆಂಬ ಭಾವವು. ಪ್ರಾಪ್ತವಸ್ತುವೇ ಪ್ರಾಪ್ತಿಯಾಯಿತಲ್ಲದೆ ಅಪ್ರಾಪ್ಯವಾದದ್ದು ಪ್ರಾಪ್ತಿಯಾಗಲಿಲ್ಲ. ಆ ಸ್ವರೂಪುವಾಕ್ಕು ಮನಸ್ಸುಗಳಿಗೆ ಕೂಡಾ ಅತೀತವಾಗಿರುವದು. ಅದೇ ನಿನ್ನ ಜ್ಞಾನ ಪಾದುಕೆಯಾಗಿರುತ್ತದೆ. ಅಂದರೆ, ತನ್ನ ಸ್ವರೂಪವನ್ನೇ ಗುರುಗಳ ಪಾದಕ್ಕೆ ಪಾದುಕೆಯನ್ನಾಗಿ ಮಾಡೋಣವೇ ಕಾಣಿಕೆಯನ್ನು ಕೊಡೋಣವು. ಅಂದರೆ, ಆ ರೀತಿ ಭಾವನೆಯನ್ನು ಮಾಡಿದರೂ ಉಪಕಾರವು ತೀರಲಿಲ್ಲೆಂಬ ಭಾವವು. ಆದ್ದರಿಂದ್ಕ ಬೇರೆ ಉಪಚಾರಗಳು ಯಾವವೂ ಇಲ್ಲ. ಆ ವಿಷಯದಲ್ಲಿ ವಾಕ್ಕು ಮನಸ್ಸುಗಳ ಪ್ರವೃತ್ತಿಯಾಗದ್ದರಿಂದ ಏನೊಂದು ನುಡಿಯಲಿಕ್ಕೂ ಬರುವದಿಲ್ಲ.

CC-0. Jangamwadi Math Collection. Digitized by eGangotri

ಬಳಿಕ; ಶಿಷ್ಯಪ್ರಶಿಷ್ಯ, ಸಾಂಪ್ರದಾಯವನ್ನು ತೋರಿಸುವದಕ್ಕಾಗಿ ಶಿಷ್ಯನಲ್ಲಿದ್ದ ಜ್ಞಾನದಲ್ಲಾದರೂ ಮೋಕ್ಷೋಪಾಯಗಳುಂಟೆಂದು ಹೇಳುತ್ತಾರೆ.

ಶ್ರೀಗುರುಪೇಳ್ದ ಮಹಾವಿದ್ಯೆಯೊಳು |
ರಾಗಿಪ ಶಿಷ್ಯನ ಬೋಧಾಬ್ಧಿಯೊಳು ||
ಕೈವಲ್ಯೋಪಾಯಾದಿಕ ವಿರ್ಕು |
ಸೇವಿತ ಸುಜನರ್ಗಮರತೆ ಬರ್ಕು ||

ಟೀಕಾ:—ಶ್ರೀಗುರುಪೇಳ್ದ=ಸದ್ಗುರುಗಳು ಹೇಳಿದ, ಮಹಾವಿದ್ಯೆಯೊಳು=ಬ್ರಹ್ಮವಿದ್ಯೆಯಲ್ಲಿ, ರಾಗಿಪ=ಭಕ್ತಿಯುಕ್ತನಾದ, ಶಿಷ್ಯನ=ಶಿಷ್ಯನ, ಬೋಧಾಬ್ಧಿಯೊಳು=ಜ್ಞಾನಸಮುದ್ರದಲ್ಲಿ, ಕೈವಲ್ಯ=ಮೋಕ್ಷದ, ಉಪಾಯಾದಿಕಂ=ಸಾಧನ ಮೊದಲಾದವುಗಳು, ಇರ್ಕು=ಇರುವವು, ಸೇವಿತ=ಆರಾಧಿಸುವಂಥಾ, ಸುಜನರಿಗೆ=ಸಜ್ಜನರಿಗೆ, ಅಮರತೆ=ಮೋಕ್ಷವು, ಬರ್ಕು=ಬರುವದು.

ತಾತ್ಪರ್ಯ:-ಸದ್ಗುರುಗಳು ಉಪದೇಶಿಸಲ್ಪಟ್ಟ ಬ್ರಹ್ಮವಿದ್ಯೆಯಲ್ಲಿ ಶ್ರದ್ಧಾಭಕ್ತಿಯಿಂದೊಡಗೂಡಿ ಅದನ್ನು ಸ್ವೀಕಾರಮಾಡಲು; ಆ ಶಿಷ್ಯನಲ್ಲಿ ಪ್ರಾಪ್ತವಾದ ಜ್ಞಾನಸಮುದ್ರದಲ್ಲಿಯಾದರೂ ಮೋಕ್ಷೋಪಾಯಗಳು ಇರುತ್ತವೆ. ಆದ್ದರಿಂದ ಮುಮುಕ್ಷುಗಳು ಅಂಥಾ ಶಿಷ್ಯರನ್ನು ಹೊಂದಿ ಅವರಿಂದ ತಾವೂ ಜ್ಞಾನಸಂಪಾದನೆಯನ್ನು ಮಾಡಿಕೊಂಡರೆ, ಅವರಾದರೂ ಮೋಕ್ಷವನ್ನು ಹೊಂದುತ್ತಾರೆ. ಆದ್ದರಿಂದ ಸರ್ವರು ತಚ್ಛಿಷ್ಯರನ್ನು ಹೊಂದಿ ಜ್ಞಾನ ಪಡಕೊಂಡು ಕೃತಾರ್ಥರಾಗಬೇಕೆಂದು ಹೇಳಲ್ಪಟ್ಟಿತು.

ಬಳಿಕ; ಈ ಗತಿಯಲ್ಲಿ ಮುಖ್ಯವಾಗಿ ಯಾವ ವಿಷಯವು ಪ್ರತಿಪಾದಿಸಲ್ಪಟ್ಟಿತೆಂಬುದನ್ನು ಹೇಳುತ್ತಾರೆ.

ಕಂದ|| ಗತಿ ಹನ್ನೊಂದನೆಯುದಕಾ|
ಯತಮೆನಿಪ ನಿರೂಪಣಂಗಳೇಕಾದಶವಂ||
ತತಿಶಯಮಾಗಿರೆ ತಿಳಿಯು|
ಪ್ರತಿಪಾದಿತವಿಲ್ಲಿ ಯೋಗಿವರನ ಚರಿತ್ರಂ ||೧||

ತಾತ್ಪರ್ಯ:—ಈ ಹನ್ನೊಂದನೇ ಗತಿಯಲ್ಲಿ ಬಹಳ ಯೋಗ್ಯಗಳಾದ ನಿರೂಪಣಂಗಳು ಅಧಿಕವಾಗಿದ್ದಾಗ್ಯಾದರೂ ಹನ್ನೊಂದೇ ಆಗಿರುವವು. ಇಲ್ಲಿ ವಿಚಾರಮಾಡಿ ನೋಡುತ್ತಿರಲಿಕ್ಕೆ ಮುಖ್ಯವಾಗಿ ಈ ಗತಿಯಲ್ಲಿ ಯೋಗೀಶ್ವರನ ಚರಿತ್ರೆಯು ಪ್ರತಿಪಾದಿಸಲ್ಪಟ್ಟಿತು.

ಬಳಿಕ; ಈ ಗ್ರಂಥವು ಸಪ್ರಮಾಣವಾಗಿ ಶಂಭುಲಿಂಗನ ಕೃಪೆಯಿಂದ ನಿಜಗುಣಯತಿಯಿಂದ ರಚಿಸಲ್ಪಟ್ಟಿರುತ್ತದೆಂಬುದನ್ನು ವರ್ಣಿಸುತ್ತಾರೆ.

CC-0. Jangamwadi Math Collection. Digitized by eGangotri

ಇತಿಹಾಸ ಪುರಾಣಸ್ಮೃತಿ।
ಶ್ರುತಿಯರ್ಥವನಿಂತು ಕನ್ನಡಿಸಿದಂ ನಿಜಗುಣ॥
ಯತಿಶಂಭು ಲಿಂಗದೊಲವಿಂ।
ಕ್ಷತಿಯ ಮುಮುಕ್ಷುಗಳಿದಂ ಪರೀಕ್ಷಿಪುದನಿಶಂ ॥೨॥

ಟೀಕಾ:— ನಿಜಗುಣಯತಿ-ನಿಜಗುಣನಾಮಕಯೋಗಿಯು, ಇಂತು=ಈ ಪ್ರಕಾರ, ಇತಿಹಾಸ-ರಾಮಾಯಣಾದಿ, ಪುರಾಣ=ವಾಯ್ವಾದಿ, ಸ್ಮೃತಿ-ಭಗವದ್ಗೀತ, ಶೃತಿಯ=ಉಪನಿಷತ್ತುಗಳ, ಅರ್ಥವನು=ಅರ್ಥವನ್ನು, ಶಂಭುಲಿಂಗದ=ಇಷ್ಟದೇವತೆಯ, ಒಲವಿಂ=ಪ್ರೀತಿಯಿಂದ, ಕನ್ನಡಿಸಿದಂ=ಕರ್ನಾಟಕ ಭಾಷಾ ರೂಪವಮಾಗಿಮಾಡಿದನು, ಕ್ಷಿತಿಯ=ಲೋಕದ, ಮುಮುಕ್ಷುಗಳ್=ಮೋಕ್ಷಾಪೇಕ್ಷಿಗಳು, ಇದಂ=ಈ ಗ್ರಂಥವನ್ನು, ಅನಿಶಂ=ಯಾವಾಗಲೂ, ಪರೀಕ್ಷಿಪುದು=ವಿಚಾರ ಮಾಡತಕ್ಕದ್ದು.

ತಾತ್ಪರ್ಯ:— ಶ್ರೀಮನ್ನಿಜಗುಣನಾಮಕ ಯೋಗೀಶ್ವರನು ಶ್ರೀಶಂಭು ಲಿಂಗದ ಕೃಪೆಯನ್ನು ಪಡೆದು, ಅವನ ಪ್ರೇರಣೆಯಿಂದ ರಾಮಾಯಣ ಇತಿಹಾಸಾಂತರ್ಗತವಾದ ಯೋಗ ವಾಸಿಷ್ಠವನ್ನು ಮತ್ತು "ಅರಂಗಂ ಈಶನಪದವಕ್ಕು" ಎಂಬಲ್ಲಿ ವಾಯು ಪುರಾಣದೊಳಗಿನ ಶ್ಲೋಕವನ್ನು ಮತ್ತು "ನೆಲಸಿದ ಸಿರಿವಂತರ ಯೋಗಿಗಳ ಕುಲದೊಳುದಿಸಿ" ಎಂಬುವಲ್ಲಿ ಭಗವದ್ಗೀತೆಯನ್ನು "ಅದು ವಚನಕೆ ಮಾನಸಕೆ ಗೋಚರವಲ್ಲೆಂಬ" ಎನ್ನುವಲ್ಲಿ "ಯತೋವಾಚೋ ನಿವರ್ತಂತೆ" ಎಂಬ ಉಪನಿಷತ್ ಶೃತಿಯನ್ನು ಇದೇ ಪ್ರಕಾರ ಸಪ್ರಮಾಣವಾಗಿ ಹೇಳಿರುವನು. ನಾವು ಸೂಚನಾಭಿಪ್ರಾಯದಿಂದ ಹೇಳಿದ್ದೇವೆ. ಆದರೆ, ಬಲ್ಲವರು ಇದರಂತೆಯೇ ಪ್ರಮಾಣಕ್ಕೆಹಚ್ಚಿ ತಿಳಿದುಕೊಳ್ಳಬೇಕು. ಆದರೆ ನಿಜಗುಣ ಯತೀಶ್ವರರು ಶಂಭು ಲಿಂಗದ ಕೃಪೆಯಿಂದ ಈ ಗ್ರಂಥವನ್ನು ಕರ್ನಾಟಕ ಭಾಷಾರೂಪವಮಾಗಿ ರಚನಾ ಮಾಡಿರುತ್ತೇವೆಂದು ಹೇಳಿದ್ದರಿಂದ, ತಮಗೆ ಗ್ರಂಥಕರ್ತೃತ್ವದ ಅಭಿಮಾನವೂ ಕೂಡಾ ಇಲ್ಲೆಂದು ಹೇಳಲ್ಪಟ್ಟಿತು. ಆದ್ದರಿಂದಲೇ ಮೋಕ್ಷಾಪೇಕ್ಷಿಗಳು ಯಾವಾಗಲೂ ಈ ಗ್ರಂಥವನ್ನೇ ಶ್ರವಣ, ಮನನ, ನಿಧಿಧ್ಯಾಸನಮಾಡಿ ಕೈವಲ್ಯವನ್ನು ಹೊಂದಬೇಕೆಂಬ ಅಭಿಪ್ರಾಯವು.

ಬಳಿಕ; ಗ್ರಂಥದ ಪ್ರಯೋಜನವನ್ನು ಗ್ರಂಥಾಂತ್ಯದಲ್ಲಿ ಇಷ್ಟ ದೇವತೆಯ ಆಶೀರ್ವಾದ ಮಂಗಲವನ್ನು ಮಾಡಿ ಗ್ರಂಥವನ್ನು ಸಮಾಪ್ತಿ ಮಾಡುತ್ತಾರೆ.

ಕಂದ॥ ಇದನೋದಿ ಕೇಳಿ ತಿಳಿದ।
ಗೋದವಿದ ಭವಬಂಧವಳಿದು ನಿತ್ಯನಿಜಾನಂ॥
ದದ ಘನಪದವಪ್ಪುದು ತ।
ಪ್ಪದು ಸಲೆಗುರು ಶಂಭುಲಿಂಗ ದೊಲವಿಂದಿಳೆಯೊಳ್ ॥೩॥

CC-0. Jangamwadi Math Collection. Digitized by eGangotri

ಟೀಕಾ:— ಇಳೆಯೊಳ್=ಲೋಕದಲ್ಲಿ, ಇದನು=ಈ ಗ್ರಂಥವನ್ನು, ಓದಿ=ಪಠಿಸಿ, ಕೇಳಿ=ಶ್ರವಣಮಾಡಿ, ತಿಳಿದರ್ಗೆ=ಅರಿದವರಿಗೆ, ಒದವಿದ=ಪ್ರಾಪ್ತವಾದ, ಭವಬಂಧವು = ಸಂಸಾರವು, ಅಳಿದು=ನಾಶವಾಗಿ, ನಿತ್ಯ = ಶಾಶ್ವತವಾದ, ನಿಜಾನಂದದ=ಸ್ವರೂಪಾನಂದದ, ಘನಪದವು=ಅಖಂಡ ಸ್ವರೂಪು, ಗುರುಶಂಭುಲಿಂಗದ=ಗುರು ಶಂಭುಲಿಂಗೇಶ್ವರನ, ಒಲವಿಂ=ಕೃಪೆಯಿಂದ, ಸಲೆ=ಚನ್ನಾಗಿ, ಅಪ್ಪುದು=ಆಗುವದು, ತಪ್ಪದು=ಸುಳ್ಳಾಗದು.

ತಾತ್ಪರ್ಯ:— ಇಹ ಲೋಕದಲ್ಲಿ ಯಾವಾತನು ಈ ಪರಮಾರ್ಥ ಗೀತೆ ನಾಮಕ ಗ್ರಂಥವನ್ನು ಪಠಣ ಶ್ರವಣಾದಿಗಳನ್ನುಮಾಡಿ, ಯಥಾರ್ಥವಾಗಿ ತಮ್ಮ ಸ್ವರೂಪವನ್ನು ತಿಳಿಯುತ್ತಾರೋ ಅವರು ಗುರುಶಂಭುಲಿಂಗೇಶ್ವರನ ಕೃಪೆಯಿಂದ ಅತ್ಯಂತ ದುಃಖನಿವೃತ್ತಿ ಪರಮಾನಂದ ಪ್ರಾಪ್ತಿರೂಪ ಮೋಕ್ಷವನ್ನು ಪಡೆಯುವರು. ಅರ್ಥಾತ್ ಗ್ರಂಥದ ಪ್ರಯೋಜನವನ್ನು ಮಂಗಲವನ್ನು ಮಾಡಿದಂತಾಯಿತು.

ಅಂತು ಗತಿ ೧೧ಕ್ಕಂ ನಿರೂಪಣೆ ೧೨೧ಕ್ಕೆ ಚರಣ ೧೪೬೯ಕ್ಕಂ ಮಂಗಳಮಸ್ತು.

ಬಳಿಕ; ಅತ್ಯಂತ ದುಃಖನಿವೃತ್ತಿ ಪರಮಾನಂದ ಪ್ರಾಪ್ತಿಪ್ರಯೋಜನವುಳ್ಳಂಥಾ ಬ್ರಹ್ಮನಿಷ್ಠರಿಂದಲೇ ಈ ಗ್ರಂಥವು ಸಮಾಪ್ತಿಯಾಗಿರುವುದೆಂದು ಹೇಳುತ್ತಾರೆ.

ಗದ್ಯ॥ ಸ್ವಸ್ತಿ, ಸಮಸ್ತ, ಸುರವಿಸರ ಮಕುಟ ಮಣಿಗಣ ಕಿರಣ ಪ್ರಚುರ ಪ್ರವಾಹ ತರಂಗಿಣೀತಟ ವಿರಾಜಿತ ಚರಣಕಮಲಯುಗಳ ಶ್ರೀಶಂಭುಲಿಂಗ ಕೃಪಾಕಟಾಕ್ಷ ಸಾಂದ್ರ ಚಂದ್ರಿಕಾ ಸಂಕ್ರಾಂತ ನಿರಸ್ತ ನಿಖಿಳ ಸಂಸಾರ ಶ್ರಮ ವಿಸ್ಫುರಿತ ನಿಜಾನಂದಾಸ್ವಾದನಾ ಸಕ್ತ ಚಿತ್ತೋಪೇತ ನಿಜಗುಣ ಶಿವಯೋಗಿ ವಿರಚಿತಮಪ್ಪ ಪರಮಾರ್ಥ ಗೀತೆಯೆಂಬ ಪ್ರಕರಣವು ಸಂಪೂರ್ಣಮಾದುದು.

ಟೀಕಾ:— ಸ್ವಸ್ತಿ=ಕಲ್ಯಾಣವಾಗಲಿ, ಸಮಸ್ತ=ಎಲ್ಲ, ಸುರ=ದೇವತೆಗಳ, ವಿಸರ=ಸಮೂಹದ, ಮಕುಟ=ಕಿರೀಟಗಳಲ್ಲಿ ಕೆಚ್ಚಲ್ಪಟ್ಟ, ಮಣಿ=ರತ್ನಗಳ, ಗಣ=ಸಮೂಹಗಳ, ಕಿರಣ=ರಶ್ಮಿಗಳ, ಪ್ರಚುರ=ಬಾಹುಲ್ಯವೇ, ಪ್ರವಾಹ=ಹರಿಯುತ್ತಿರುವ, ತರಂಗಿಣೀ=ನದಿಯ, ತಟ=ದಡದಲ್ಲಿ, ವಿರಾಜಿತ=ಶೋಭಾಯಮಾನಗಳಾದ, ಚರಣ ಕಮಲಯುಗಳ=ಎರಡು ಪಾದ ಪದ್ಮಗಳುಳ್ಳಂಥಾ, ಶ್ರೀ=ಷಡ್ಗುಣೈಶ್ವರ್ಯ ಸಂಪನ್ನನಾದ, ಶಂಭುಲಿಂಗ=ಸುಖವನ್ನುಂಟುಮಾಡುವ ಶಂಭುಲಿಂಗೇಶ್ವರನ, ಕೃಪಾ=ದಯೆಯೆಂಬ, ಕಟಾಕ್ಷ=ಕಡೆಗಣ್ಣಿನ ದೃಷ್ಟಿಯು, ಸಾಂದ್ರ=ದಟ್ಟತವಾದ, ಚಂದ್ರಿಕಾ=ಬೆಳದಿಂಗಳಿನ, ಸಂಕ್ರಾಂತ=ವ್ಯಾಪಿಸೋಣದರಿಂದ, ನಿರಸ್ತ=ಹೋಗಲಾಡಿಸಲ್ಪಟ್ಟ, ನಿಖಿಳ=ಸರ್ವ, ಸಂಸಾರಶ್ರಮ=ಸಂಸಾರ ದುಃಖ

CC-0. Jangamwadi Math Collection. Digitized by eGangotri

ವುಳ್ಳಂಥಾ, ವಿಸ್ಫುರಿತ=ಪ್ರಕಟವಾದಂಥಾ, ನಿಜಾನಂದ=ಸ್ವರೂಪಾನಂದದ, ಆಸ್ವಾದನ=ಸ್ವೀಕಾರಮಾಡೋಣದರಲ್ಲಿ, ಆಸಕ್ತ=ತತ್ಪರವಾದ, ಚಿತ್ತ=ಮನಸ್ಸಿನಿಂದ, ಉಪೇತ=ಕೂಡಿದಂಥಾ, ನಿಜಗುಣ=ನಿಜಗುಣನಾಮಕ, ಶಿವಯೋಗಿ=ಯತಿಯಿಂದ, ವಿರಚಿತಮಪ್ಪ=ರಚಿಸಲ್ಪಟ್ಟ, ಪರಮಾರ್ಥ ಗೀತೆಯೆಂಬ=ಪರಮಾರ್ಥ ಗೀತಾನಾಮಕ, ಪ್ರಕರಣವು=ಗ್ರಂಥವು, ಸಂಪೂರ್ಣಮಾದುದು=ಸಮಾಪ್ತವಾಗಿರುವದು.

ತಾತ್ಪರ್ಯ:—ಜಗತ್ತಿಗೆ ಕಲ್ಯಾಣವಾಗಲಿ; ಸಕಲ ಇಂದ್ರಾದಿ ದೇವತೆಗಳ ಸಮೂಹವು ಪ್ರಾತಃ ಸಂಧ್ಯಾ ಸಮಯದಲ್ಲಿ ಕೈಲಾಸವಾಸಿಯಾಗಿರುವ ಶಂಭುಲಿಂಗೇಶ್ವರನ ದರ್ಶನಕ್ಕಾಗಿ ಹೊರಡುವದು. ಆಗ ಅವರು ತಂತಮ್ಮ ಕಿರೀಟ ಕೇಯೂರಗಳಿಂದ ಭೂಷಿತರಾಗಿಯೇ ಹೊರಡುವರು. ಆ ಕಿರೀಟಗಳಲ್ಲಿ ಅನೇಕ ಬಣ್ಣಗಳುಳ್ಳ ರತ್ನಗಳು ಕೆತ್ತಲ್ಪಟ್ಟಿರುತ್ತವೆ. ಆ ರತ್ನಗಳ ಪ್ರಕಾಶವೆಲ್ಲಾ ಒಟ್ಟುಗೂಡಿ ನದಿಯ ಪ್ರವಾಹದಂತೆ ಹರಿದು ಬರುತ್ತದೆಂಬದಾಗಿ ತೋರುವದು. ಅಂಥಾ ಪ್ರಕಾಶವೆಂಬ ನದಿಯ ತಟ ಪ್ರದೇಶದಲ್ಲಿ ಶೋಭಾಯಮಾನಗಳಾದ ಪಾದಪದ್ಮವುಳ್ಳಂಥವನು ಶಂಭುಲಿಂಗನು. ಅಂದರೆ, ಪಾದಗಳಿಗೆ ಕಮಲಗಳೆಂದು ಉಪಮಾನವನ್ನೀಯಲು ಆ ಕಮಲಗಳೇ ಜಲವಿಲ್ಲದೆ ಇರಲಾರವು. ಆದ್ದರಿಂದ ದೇವತೆಗಳು ಧಾರಣಮಾಡಿದ ರತ್ನಾದಿಗಳ ಪ್ರಕಾಶಕ್ಕೆ ನದಿಯ ಉಪಮಾನವನ್ನು ಕೊಟ್ಟಿರುವರು. ಮತ್ತು ಅಂಥಾ ಶಂಭುಲಿಂಗನ ಕೃಪಾಕಟಾಕ್ಷವೆಂಬ ದಟ್ಟಿತವಾದ ಬೆಳದಿಂಗಳು ವ್ಯಾಪಿಸುತ್ತಿರಲಿಕ್ಕೆ, ಸಕಲ ಸಂಸಾರವೆಂಬ ಶ್ರಮವು ಪರಿಹಾರವಾಗಿ ನಿಜಾನಂದವು ಆವಿರ್ಭಾವವಾಯಿತು. ಅಂದರೆ ಉದ್ಯೋಗದಿಂದ ಶ್ರಮಿಷ್ಠ ಪುರುಷನು ಚಂದ್ರನ ಬೆಳದಿಂಗಳಲ್ಲಿ ಕೂತುಕೊಂಡರೆ, ಅವನ ಶ್ರಮವೆಲ್ಲಾ ಪರಿಹಾರವಾಗಿ ಹೇಗೆ ಆನಂದವಾಗುವದೋ, ಹಾಗೆ ಶಂಭುಲಿಂಗ ದಯೆಯಿಂದೊಡಗೂಡಿದ ಕಡೆಗಣ್ಣಿನ ದೃಷ್ಟಿಯೇ ಬೆಳದಿಂಗಳು. ಆದರಿಂದ ಸಂಸಾರ ದುಃಖವು ಹೊರಟು ಹೋಗಿ ಸ್ವರೂಪಾನಂದವು ಪ್ರಕಟವಾಯಿತೆಂಬ ಭಾವವು. ಅಂಥಾ ಸ್ವರೂಪಾನಂದದ ರುಚಿಯಲ್ಲಿಯೇ ಮಗ್ನಚಿತ್ತದಿಂದೊಡಗೂಡಿದ ಶ್ರೀಮನ್ನಿಜಗುಣ ಶಿವಯೋಗಿಗಳಿಂದ ವಿರಚಿತಮಾದ ಈ ಪರಮಾರ್ಥ ಗೀತೆಯು ಸಮಾಪ್ತಮಾಗಿರುವದು. ಅಂದರೆ ಶಂಭುಲಿಂಗನ ಕೃಪೆಗೆ ಪಾತ್ರರಾಗಿ ಜೀವನ್ಮುಕ್ತಿ ಸುಖವನ್ನು ಅನುಭವಿಸುವಂಥಾ, ಶ್ರೀಮನ್ನಿಜಗುಣ ಯತೀಶ್ವರರಿಂದ ರಚಿಸಲ್ಪಟ್ಟಿತು. ಅಂದರೆ, ಸಾಂಪ್ರದಾಯಸಿದ್ಧರಿಂದ ಗ್ರಂಥವು ರಚಿತವಾದ್ದರಿಂದ ಸರ್ವರು ಗ್ರಹಿಸಲಿಕ್ಕೆ ಯೋಗ್ಯವಾದದ್ದೆಂಬ ಭಾವವು.

ಓಂ

JAGADGURU VISHWARADHYA
ANA SIMHASAN JNANAMANDIR
LIBRARY
Jangamawadi Math, Varanasi

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

CC-0. Jangamwadi Math Collection. Digitized by eGangotri

ಆದರ್ಶ
ಮುದ್ರಣ
ಕಿಲ್ಲೆ, ಹುಬ್ಬಳ್ಳಿ
ಇಲ್ಲಿ
ಮುದ್ರಿತವಾಯಿತು.

CC-0. Jangamwadi Math Collection. Digitized by eGangotri